ಮಕ್ಕಳ ಸಾಹಿತ್ಯ ಮತ್ತು ಭಾಷೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಸಾದರಪಡಿಸಿದ
ಪರಿಷ್ಕೃತ ಮಹಾಪ್ರಬಂಧ)

ಸಂಶೋಧಕರು

ಶೋಭಾ ಜಿ.

ಮಾರ್ಗದರ್ಶಕರು

ಡಾ. ಅಶೋಕ ಕುಮಾರ ರಂಜೇರೆ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಮಕ್ಕಳ ಸಾಹಿತ್ಯ ಮತ್ತು ಭಾಷೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.)
ಪದವಿಗಾಗಿ ಸಾದರಪಡಿಸಿದ ಪರಿಷ್ಕೃತ ಮಹಾಪ್ರಬಂಧ)

ಸಂಶೋಧಕರು
ಶೋಭಾ ಜೆ.

ಮಾರ್ಗದರ್ಶಕರು
ಡಾ. ಅಶೋಕ ಕುಮಾರ ರಂಜೇರೆ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಶೋಭಾ ಜೆ. ಅವರು ನನ್ನ ಮಾರ್ಗದರ್ಶನದಲ್ಲಿ **"ಮಕ್ಕಳ ಸಾಹಿತ್ಯ ಮತ್ತು ಭಾಷೆ"** ಎಂಬ ಸಂಶೋಧನಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಅಶೋಕ ಕುಮಾರ ರಂಜೇರೆ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ : 28/05/12
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

ಡಾ. ಅಶೋಕ ಕುಮಾರ ರಂಜೇರೆ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ **"ಮಕ್ಕಳ ಸಾಹಿತ್ಯ ಮತ್ತು ಭಾಷೆ"** ಎಂಬ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಣೆಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ಶೋಭಾ ಜೆ.

ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ : 14.8.17

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವೈಧಾನಿಕತೆ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ ತೋರುತ್ತ ಬಂದ ಹೊಸ ಹೊಸ ಅನ್ವೇಷಣೆ, ಆವಿಷ್ಕಾರಗಳಲ್ಲಿ ಆಧುನಿಕ ಯುಗದ ಕೊಡುಗೆ ಗಮನಾರ್ಹ. ಪಾಶ್ಚಾತ್ಯ ಸಾಹಿತ್ಯ ಪ್ರಭಾವ ದೇಶಿ ಮೂಲದ ಜೀವದ್ರವ್ಯದ ಜೊತೆಗೆ ಬೆರೆತು ನೂತನ ಸತ್ವಪೂರ್ಣ ಸಾಹಿತ್ಯ ಸೃಷ್ಟಿ ಈ ಯುಗದಲ್ಲಿ ಸಾಧ್ಯವಾಗಿದೆ. ಅದರ ವಸ್ತು, ವೈವಿಧ್ಯ, ಶೈಲಿ ವೈವಿಧ್ಯ ಬೆರಗುಗೊಳಿಸುವಂತಿದೆ. ಪ್ರಾಚೀನ ಸಾಹಿತ್ಯ ಕೇವಲ ಕಾವ್ಯ ರೂಪಕ್ಕೆ ಮಾತ್ರ ಸೀಮಿತವಾಗಿದ್ದರೆ, ಈ ಯುಗದ ಸಾಹಿತ್ಯ ಭಾವಗೀತೆ, ನವ್ಯ ಕಾವ್ಯ, ಕಥೆ, ಕಾದಂಬರಿ, ಪ್ರಬಂಧ, ನಾಟಕ, ವಿಮರ್ಶೆ, ಚುಟುಕು, ಪತ್ರಿಕೆ, ಅಂಕಣ, ಮಕ್ಕಳ ಸಾಹಿತ್ಯ, ಅಭಿನಂದನಾ ಸಾಹಿತ್ಯ, ಪತ್ರ ಸಾಹಿತ್ಯ ಹೀಗೆ ಅನಂತ ಮುಖವಾಗಿ ಬೆಳೆದಿದೆ.

ಈ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ಮಕ್ಕಳ ಸಾಹಿತ್ಯ ರಚನೆಯಾಗಿರುವ ಸಾಹಿತ್ಯವೆಲ್ಲವೂ ಹಿರಿಯರಿಗಾಗಿ ರಚನೆಯಾಗಿರುವಂತ ಸಾಹಿತ್ಯವಾಗಿದೆ. ಈ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ ಮಕ್ಕಳಿಗಾಗಿ ಎನ್ನುವುದಕ್ಕಿಂತ ಶಾಲಾ ಶಿಕ್ಷಣಕ್ಕಾಗಿ ಪಠ್ಯದಲ್ಲಿ ಮಕ್ಕಳ ಸಾಹಿತ್ಯ ರಚನೆಯಾದುದನ್ನು ಆರಂಭದಲ್ಲಿ ಕಾಣುತ್ತೇವೆ. ಆದರೂ ಭಾರತೀಯ ಮಕ್ಕಳ ಸಾಹಿತ್ಯದ ಮೂಲವನ್ನು ವೇದಕಾಲದ ಸಂಸ್ಕೃತಿ ಸಾಹಿತ್ಯದಲ್ಲಿ ಗುರುತಿಸಲಾಗಿದೆ. ಹಾಗೂ ಜಾನಪದ ಸಾಹಿತ್ಯದಲ್ಲಿಯೂ ಮಕ್ಕಳ ಸಾಹಿತ್ಯದ ಇರುವಿಕೆಯನ್ನು ಕಾಣುತ್ತೇವೆ. ಆದರೆ ಕನ್ನಡದಲ್ಲಿ ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಮಕ್ಕಳ ಸಾಹಿತ್ಯ ಉಗಮವಾಗಿರುವುದನ್ನು ಕಾಣುತ್ತೇವೆ.

ಆರಂಭದಲ್ಲಿ ಜನಪದ ಸಾಹಿತ್ಯದೊಂದಿಗೆ ಮಕ್ಕಳ ಸಾಹಿತ್ಯ ಬೆಳೆದು ಬಂದಿತಾದರೂ ಮುದ್ರಣ ಕಲೆಯ ಆವಿಷ್ಕಾರದ ನಂತರವೇ ಮಕ್ಕಳ ಸಾಹಿತ್ಯವು ವ್ಯವಸ್ಥಿತ ರೀತಿಯಲ್ಲಿ ಬರತೊಡಗಿತು. ಈ ಮಕ್ಕಳ ಸಾಹಿತ್ಯವು ತನ್ನದೇ ಆದ ವೈಶಿಷ್ಟ್ಯತೆಗಳಿಂದ ಇತರೆ ಸಾಹಿತ್ಯ ಪ್ರಕಾರಗಳಿಗಿಂತಲೂ ಭಿನ್ನವಾದುದು. ಆದರೂ ಕೆಲವರಲ್ಲಿ ಮಕ್ಕಳಿಗಾಗಿ ಒಂದು ಸಾಹಿತ್ಯ

ಪ್ರಕಾರವಿದೆಯೇ, ಇರುವುದೇ ಆದರೆ ಅದು ಗಂಭೀರವಾದ ಸಾಹಿತ್ಯ ಪ್ರಕಾರವಾಗುವುದೇ ಎಂಬ ಪ್ರಶ್ನೆಯು ಇದೆ.

ಹೌದು ಮಕ್ಕಳ ಸಾಹಿತ್ಯವೆನ್ನುವುದು ಇದೆ. ಇದು ಇತರೆ ಎಲ್ಲಾ ಸಾಹಿತ್ಯ ಪ್ರಕಾರಗಳಂತೆಯೇ ಗಂಭೀರವಾದ ಸಾಹಿತ್ಯ ಪ್ರಕಾರವು ಆಗಿದೆ. ಜೊತೆಗೆ ಪ್ರೌಢ ಸಾಹಿತ್ಯದಲ್ಲಿರುವಂತೆಯೇ ಇಲ್ಲಿಯು ಮಕ್ಕಳಿಗಾಗಿ ಕಥೆ, ಕವನ, ನಾಟಕ, ಕಾದಂಬರಿ, ಜೀವನ ಚರಿತ್ರೆ, ನಗೆ ಬರಹ ಮತ್ತು ಚುಟುಕುಗಳು ಮೊದಲಾದ ಪ್ರಕಾರಗಳಿಂದಲೂ ಕೂಡಿದೆ. ಹಾಗಾಗಿ ಇದು ಅತ್ಯಂತ ಸೂಕ್ಷ್ಮವಾದ ಬರವಣಿಗೆಯಾಗಿದೆ. ಹೀಗಾಗಿ ಈ ಸಾಹಿತ್ಯವು ಪ್ರೌಢ ಸಾಹಿತ್ಯದಷ್ಟೆ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಈ ಮಕ್ಕಳ ಸಾಹಿತ್ಯವನ್ನು ಕುರಿತು 'ವಿಶ್ವದಲ್ಲಿಯೇ ಮಕ್ಕಳ ಸಾಹಿತ್ಯ ಅತ್ಯಂತ ಶ್ರೇಷ್ಠವಾದ ಸಾಹಿತ್ಯ'ವೆಂದು ಯುನಿಸೇಫ್ ಒಂದು ಕಡೆ ಹೇಳಿದೆ.

ಮಕ್ಕಳ ಬಾಲ್ಯದ ಅವಧಿಯು ಅತ್ಯಂತ ಮಹತ್ವದ್ದೂ, ಮುಖ್ಯವಾದದ್ದು ಆಗಿ, ಮುಂದಿನ ಇಡೀ ವ್ಯಕ್ತಿತ್ವವನ್ನೇ ರೂಪಿಸಬಲ್ಲ ಕಾಲವಾಗಿದೆ. ಮಕ್ಕಳು ತಮ್ಮದೇ ಆದ ವೈಶಿಷ್ಟ್ಯ, ವಿಭಿನ್ನ ಮಾನಸಿಕ ಸ್ಥಿತಿ, ಅವರ ಗ್ರಹಿಕೆ, ಅನುಭವಗಳು, ಭಾವಪ್ರಪಂಚವೇ ಬೇರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ನಾಲ್ಕು ಹೆಜ್ಜೆಗೆ ಮಕ್ಕಳು ಒಂದು ಹೆಜ್ಜೆಯನ್ನು ಮಾತ್ರ ಇಡಬಲ್ಲರು. ಆದರೂ ಅವರ ಜಗತ್ತು ಬೇರೆ ಬೇರೆ ಅಭಿರುಚಿಗಳಿಂದ ಕೂಡಿದ್ದರೂ ಅವರಲ್ಲಿರುವ ಕೆಲವು ಗುಣ-ಸ್ವಭಾವಗಳು, ವರ್ತನೆಗಳು ಎಲ್ಲ ಮಕ್ಕಳಲ್ಲಿಯೂ ಸಾಮಾನ್ಯವಾಗಿರುತ್ತವೆ. ಈ ಅವಧಿಯಲ್ಲಿಯೇ ಹಿರಿಯರು, ಅನೇಕ ರೀತಿಯಲ್ಲಿ ಅವರಿಗೆ ಮಾರ್ಗದರ್ಶನ ಮಾಡಲು ಅವಕಾಶವಿರುತ್ತದೆ. ಈ ನಿಟ್ಟಿನಲ್ಲಿ ಸಾಹಿತ್ಯದ ಪಾತ್ರ ಬಹಳ ಮುಖ್ಯವಾದುದು. ಕಮ್ಮಾರನು ಕಬ್ಬಿಣವನ್ನು ಕಾಯಿಸಿ ತನಗೆ ಬೇಕಾದ ರೂಪಕ್ಕೆ ಹೇಗೆ ತರುತ್ತಾನೋ, ಹಾಗೆಯೇ ಮಕ್ಕಳಲ್ಲಿ ಉತ್ತಮ ಗುಣಗಳನ್ನು ಬೆಳೆಸುವ, ಸಂಸ್ಕಾರವನ್ನು ಹೆಚ್ಚಿಸಿ ಭವಿಷ್ಯದಲ್ಲಿ ಉತ್ತಮ ವ್ಯಕ್ತಿಯಾಗಿ ಮಾಡುವ ಸಾಹಿತ್ಯ ಮಕ್ಕಳ ಮೇಲೆ ಅಪಾರವಾದ ಪ್ರಭಾವ ಬೀರುತ್ತದೆ.

ಇನ್ನು ಮಕ್ಕಳೆಂದರೆ ಯಾರು? ಯಾರನ್ನು ನಾವು ಮಕ್ಕಳೆಂದು ಕರೆಯುತ್ತೇವೆ? ಮಕ್ಕಳೆಂದು ಗುರುತಿಸಲು ಏನಾದರೂ ಮಾನದಂಡಗಳಿವೆಯೇ? ಯಾವ ವಯಸ್ಸಿನವರನ್ನು ನಾವು ಮಕ್ಕಳೆಂದು ಕರೆಯುತ್ತೇವೆ? ಎನ್ನುವ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಸಾಮಾನ್ಯವಾಗಿ ಮಕ್ಕಳೆಂದರೆ ಏನು ತಿಳಿಯದ ಮುಗ್ಧರು, ಆಟವಾಡಿ ನಲಿಯುವವರು, ಸೂಕ್ಷ್ಮ ಮನಸ್ಸುಳ್ಳವರು, ದೇವರ ಸಮಾನರು, ದೊಡ್ಡವರ ರಕ್ಷಣೆಯಲ್ಲಿ ಬೆಳೆಯಬೇಕಾದವರು, ಎಳೆವಯಸ್ಸಿನವರು, ತಂದೆ-ತಾಯಿ ಮತ್ತು ಪೋಷಕರಿಂದ ರಕ್ಷಿಸಲ್ಪಡುವರು, ಹೊಸದನ್ನು ಕಲಿತು ಅರಿಯಬೇಕಾದವರು, ಮತ್ತು ಹದಿನಾಲ್ಕು ವರ್ಷದೊಳಗಿನವರು ಹೀಗೆ ಪಟ್ಟಿ ಮಾಡುತ್ತಾ ಹೋಗಬಹುದು.

ಆದರೆ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ-೧ರ ಪ್ರಕಾರ "ಮಗು ಹದಿನೆಂಟು ವರ್ಷ ತುಂಬಿದ ಮೇಲೆಯೇ ವಯಸ್ಕ ಎಂದಾಗುತ್ತದೆ ಎಂದರೆ ಹದಿನೆಂಟು ವರ್ಷದೊಳಗಿನವರನ್ನು ಮಕ್ಕಳು ಎಂದು ಒಡಂಬಡಿಕೆಯು ನಿರ್ಧರಿಸುತ್ತದೆ"[೧] ಎನ್ನುತ್ತಾರೆ.

ನಂತರ ಮಕ್ಕಳ ನ್ಯಾಯ ಅಧಿನಿಯಮದಂತೆ "ಹದಿನೆಂಟು ವರ್ಷದೊಳಗಿನ ಮಕ್ಕಳನ್ನು ಮಗು ಎಂದು ಹೇಳುತ್ತದೆ."[೨] ಅಲ್ಲದೆ ಭಾರತ ಸಂವಿಧಾನದ ಪ್ರಕಾರವಾಗಿ "ಹದಿನಾಲ್ಕು ವರ್ಷದೊಳಗಿನವರೆಲ್ಲರೂ ಮಕ್ಕಳು"[೩] ಎಂದು ಪರಿಭಾವಿಸಿದೆ.

ಇನ್ನು ಮಕ್ಕಳ ಸಾಹಿತ್ಯವೆಂದರೆ ಸಿಸು ಸಂಗಮೇಶ ಅವರ ಹೇಳಿಕೆಯಂತೆ ಮಕ್ಕಳ ಮನಸ್ಸನ್ನು ಮುಟ್ಟಿ, ತಟ್ಟಿ, ತಣಿಸುವ ಸಾಹಿತ್ಯವನ್ನೇ ಮಕ್ಕಳ ಸಾಹಿತ್ಯ ಎಂದು ಕರೆಯಬಹುದು ಎನ್ನುತ್ತಾರೆ.

ಮಕ್ಕಳ ಸಾಹಿತ್ಯವನ್ನು 'ಶಿಶು ಸಾಹಿತ್ಯ' ಮತ್ತು 'ಬಾಲಸಾಹಿತ್ಯ'ವೆಂತಲೂ ಕರೆಯುತ್ತಾರೆ. ಒಟ್ಟಾರೆಯಾಗಿ ಈ ಎರಡೂ ಬಗೆಗಳನ್ನು ಮಕ್ಕಳ ಸಾಹಿತ್ಯವೆಂದು ಪರಿಗಣಿಸುತ್ತಾರೆ. ಇನ್ನು ಮನೋವಿಜ್ಞಾನಿಗಳು, ವಿದ್ವಾಂಸರು, ಶಿಕ್ಷಣತಜ್ಞರು ಮತ್ತು ಭಾಷಾತಜ್ಞರ ಅಭಿಮತದಂತೆ ವಿಷಯ, ವಸ್ತು, ತಂತ್ರ, ಶೈಲಿಗಳ ದೃಷ್ಟಿಕೋನದಿಂದ 'ಶಿಶುಸಾಹಿತ್ಯ' (೫ ವರ್ಷದೊಳಗಿನ ವಯಸ್ಸು), 'ಬಾಲಸಾಹಿತ್ಯ' (೬ ರಿಂದ ೧೨ ವರ್ಷದೊಳಗಿನ ವಯಸ್ಸು) ಎಂದು ವಿಭಾಗ ಮಾಡಿದರೂ ಸಹ ಒಟ್ಟಾರೆ ೩ ವರ್ಷದಿಂದ ೧೪ ವರ್ಷದ ವಯೋಮಾನದ ಮಕ್ಕಳಿಗಾಗಿ ರಚಿಸಿರುವ ಸಾಹಿತ್ಯವನ್ನೆಲ್ಲಾ ಮಕ್ಕಳ ಸಾಹಿತ್ಯವೆಂದು ಕರೆಯಬಹುದು ಎನ್ನಲಾಗಿದೆ.

ಮಕ್ಕಳ ಸಾಹಿತ್ಯವನ್ನು ಯಾರು ರಚನೆ ಮಾಡುತ್ತಾರೆ? ಇಲ್ಲಿ ಮಕ್ಕಳೆ ತಮಗೆ ತಾವೇ ರಚಿಸಿಕೊಂಡ ಸಾಹಿತ್ಯ ಮಕ್ಕಳ ಸಾಹಿತ್ಯವೇ? ಅಥವಾ ಹಿರಿಯರು ಮಕ್ಕಳಿಗಾಗಿ ರಚನೆ ಮಾಡಿದ ಸಾಹಿತ್ಯ ಮಕ್ಕಳ ಸಾಹಿತ್ಯವೇ? ಇಲ್ಲಿ, ಯಾರ ರಚನೆಯ ಸಾಹಿತ್ಯವನ್ನು ಮಕ್ಕಳ ಸಾಹಿತ್ಯವೆಂದು ಕರೆಯಬೇಕು? ಎಂದು ಮೊದಲಾದ ಪ್ರಶ್ನೆಗಳು ಉದ್ಭವವಾಗುತ್ತವೆ.

ಹಿಂದೆ ಮಕ್ಕಳ ಸಾಹಿತ್ಯ ಎಂದರೆ ದೊಡ್ಡವರು ಹೇಳಬೇಕು. ಮಕ್ಕಳು ಅದನ್ನು ಕೇಳಬೇಕು ಎಂದು ತಿಳಿಯುವ ಕಾಲವೊಂದಿತ್ತು. ಆದರೆ ಇಂದು ಮಕ್ಕಳು ಮಕ್ಕಳಿಗಾಗಿಯೇ ಬರೆದುಕೊಂಡ ಸಾಹಿತ್ಯವು ಇದೆ. ಜೊತೆಗೆ ದೊಡ್ಡವರು ಮಕ್ಕಳಿಗಾಗಿ ಬರೆದ ಸಾಹಿತ್ಯವು ಇದೆ. ಒಟ್ಟಾರೆಯಾಗಿ ಈ ಇಬ್ಬರೂ ರಚಿಸಿದ ಸಾಹಿತ್ಯವನ್ನು ಮಕ್ಕಳ ಸಾಹಿತ್ಯವೆಂದು ಕರೆಯಬಹುದು. ಆದರೆ ಕನ್ನಡ ಸಾಹಿತ್ಯದ ಮಟ್ಟಿಗೆ, ಮಕ್ಕಳು ಮಕ್ಕಳಿಗಾಗಿ ಬರೆದ ಸಾಹಿತ್ಯಕ್ಕಿಂತ, ಮಕ್ಕಳಿಗಾಗಿ ಹಿರಿಯರು ರಚನೆ ಮಾಡಿದ ಸಾಹಿತ್ಯವೇ ಹೆಚ್ಚಾಗಿದೆ. ಅಂದರೆ ನಮ್ಮಲ್ಲಿ ಮಕ್ಕಳಿಗಾಗಿ ಮಕ್ಕಳ ಭಾಷೆಯಲ್ಲಿ ಹಿರಿಯರು ತಮ್ಮ ದೃಷ್ಟಿಕೋನದಿಂದ ಬರೆದ ಸಾಹಿತ್ಯವೇ ಹೆಚ್ಚು. ಮಕ್ಕಳ ದೃಷ್ಟಿಯಿಂದ ಮಕ್ಕಳೇ ಬರೆದ ಸಾಹಿತ್ಯ ತೀರಾ ಕಡಿಮೆ ಎನ್ನಬಹುದು.

ಆದರೆ ನನ್ನ 'ಮಕ್ಕಳ ಸಾಹಿತ್ಯ ಮತ್ತು ಭಾಷೆ' ಎನ್ನುವ ಅಧ್ಯಯನಕ್ಕಾಗಿ ಮಕ್ಕಳಿಗಾಗಿ ಹಿರಿಯರು ರಚಿಸಿದಂತ ಸಾಹಿತ್ಯವನ್ನು ಮಾತ್ರ ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಕೈಗೊಂಡಿರುತ್ತೇನೆ.

೧.೧. ಅಧ್ಯಯನದ ಉದ್ದೇಶ

* ಮಕ್ಕಳ ಸಾಹಿತ್ಯವೆಂದರೇನು? ಮಕ್ಕಳಿಗಾಗಿ ಬರೆದ ಸಾಹಿತ್ಯವೇ ಅಥವಾ ಮಕ್ಕಳಂತ ಮನಸ್ಸಿರುವ ಲೇಖಕರು ಬರೆದ ಸಾಹಿತ್ಯವೋ? ಅದರ ರೂಪು ರೇಷೆಗಳೇನು? ಎಂದು ಚರ್ಚಿಸಲಾಗುವುದು.

* ಮಕ್ಕಳೇ ರಚಿಸಿರುವ ಸಾಹಿತ್ಯ ಒಂದು ಬಗೆಯಾದರೆ, ಮಕ್ಕಳನ್ನು ಕುರಿತು ರಚನೆಯಾದ ಸಾಹಿತ್ಯ ಇನ್ನೊಂದು ಬಗೆಯಾಗಿದೆ. ಈ ದ್ವಿಮುಖ ನೆಲೆಯ ಸಾಹಿತ್ಯದಲ್ಲಿ ಮಕ್ಕಳನ್ನು ಕುರಿತು ರಚನೆಯಾಗಿರುವ ಸಾಹಿತ್ಯವನ್ನು ಮಾತ್ರ ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಮಾಡಲಾಗುವುದು.

* ಮಕ್ಕಳ ಭಾಷೆಯಲ್ಲಿ ಇತರೆ ಸಾಹಿತ್ಯ ಪ್ರಕಾರಗಳ ಭಾಷೆಗಿಂತ ಯಾವ ರೀತಿಯಲ್ಲಿ ಭಿನ್ನತೆಯನ್ನು ಹೊಂದಿದೆ? ಹಾಗೂ ಭಾಷೆಯ ರಚನೆ ಮತ್ತು ಬಳಕೆಯಲ್ಲಿರುವ ಭಿನ್ನಾಂಶಗಳನ್ನು ಪ್ರಧಾನವಾಗಿ ಮಕ್ಕಳ ಸಾಹಿತ್ಯದ ಹಿನ್ನೆಲೆಯಲ್ಲಿಯೇ ಚರ್ಚಿಸುತ್ತಾ, ಭಾಷೆಯನ್ನು ಪೂರಕವಾಗಿ ಗಮನಿಸಲಾಗುವುದು.

* ಕನ್ನಡದಲ್ಲಿ 'ಮಕ್ಕಳ ಸಾಹಿತ್ಯ' ಪ್ರಕಾರವನ್ನು ಕುರಿತು ಸಂಶೋಧನೆಗಳು ನಡೆದಿರುವುದು ತೀರಾ ಕಡಿಮೆ ಎನ್ನಬಹುದು. ಒಂದು ವೇಳೆ ನಡೆದಿದ್ದರೆ ಅದು ಮಕ್ಕಳ ಸಾಹಿತ್ಯದ ನಾಟಕ ಪ್ರಕಾರವನ್ನು ಕುರಿತು ಮಾತ್ರ ಅಧ್ಯಯನಗಳನ್ನು ನಡೆದಿರುವುದನ್ನು ಗಮನಿಸಲಾಗಿದೆ. ಹೀಗಾಗಿ ನನ್ನ ಅಧ್ಯಯನವು ಮಕ್ಕಳ ನಾಟಕಗಳ ಜೊತೆಗೆ ಮಕ್ಕಳ ಕಥೆ ಮತ್ತು ಕಾವ್ಯಗಳನ್ನು ಸೇರಿಸಿ ಅಧ್ಯಯನ ನಡೆಸಲಾಗುವುದು.

* ಮಕ್ಕಳಿಗೆ ಸಾಹಿತ್ಯದ ಅವಶ್ಯಕತೆ ಇದೆಯೇ? ಮತ್ತು ಭವಿಷ್ಯಕ್ಕೆ ಉತ್ತಮ ಪ್ರಜೆಗಳು ಏಕೆ ಬೇಕು? ಎಂಬುದನ್ನು ಅಧ್ಯಯನದಲ್ಲಿ ಚರ್ಚಿಸಲಾಗುವುದು.

* ಭಾಷೆ ಮಕ್ಕಳ ಸಾಹಿತ್ಯದ ಇನ್ನೊಂದು ಪ್ರಮುಖ ಅಂಶ. ಮಕ್ಕಳ ಸಾಹಿತ್ಯದಲ್ಲಿ ಸಾಹಿತ್ಯದಷ್ಟೇ ಪ್ರಧಾನವಾಗಿ ಅವರ ಮನಸ್ಸನ್ನು ಸೆರೆಹಿಡಿಯುವ, ಮಕ್ಕಳ ವಯೋಮಿತಿಗೆ ತಕ್ಕದಾದ ಭಾಷೆಯ ಬಳಕೆಯನ್ನು ಕುರಿತು ವಿಶ್ಲೇಷಿಸಲಾಗುವುದು.

* ಮಕ್ಕಳ ಸಾಹಿತ್ಯದ ಭಾಷೆ ಸರಳವಿದ್ದರೂ ಎಂಥಲ್ಲಿ ವಿಶಿಷ್ಟವಾಗಿರುತ್ತದೆ ಎನ್ನುವುದೂ ಒಂದು ಪ್ರಮುಖ ಅಂಶವಾಗಿರುತ್ತದೆ. ಹೀಗಾಗಿ ಇಲ್ಲಿ ಪದಗಳ ಆಯ್ಕೆ ಅವುಗಳ ಲಾಲಿತ್ಯ, ಪ್ರಾಸಬದ್ಧತೆ, ಗೇಯತೆಯಿಂದ ಕೂಡಿರುವುದನ್ನು ಗಮನಿಸಲಾಗುವುದು.

* ಮಕ್ಕಳ ಭಾಷೆಯ ಪ್ರಾದೇಶಿಕ ಹಾಗೂ ಸಾಮಾಜಿಕ ಪ್ರಭೇದಗಳಲ್ಲಿ ರಚನೆಯಾಗಿದೆಯೇ ಎಂದು ಗುರುತಿಸುವುದು.

* ಮಕ್ಕಳ ಭಾಷೆಯ ಇತರೇ ಸಾಹಿತ್ಯ ಪ್ರಕಾರಗಳ ಭಾಷೆಗಿಂತ ಯಾವ ರೀತಿಯಲ್ಲಿ ಭಿನ್ನತೆಯನ್ನು ಹೊಂದಿದೆ? ಅದರ ಭಾಷೆಯ ರಚನೆ ಮತ್ತು ಬಳಕೆಯಲ್ಲಿರುವ ಭಿನ್ನಾಂಶಗಳೇನು? ಅದಕ್ಕಿರುವ ಮಾನದಂಡಗಳೇನು? ಎಂಬುದನ್ನು ಗುರುತಿಸಲಾಗುವುದು.

* ಮಕ್ಕಳ ಸಾಹಿತ್ಯದಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಅಡಿಯಲ್ಲಿ ಮಕ್ಕಳ ಕಥೆ, ಕವನ ಮತ್ತು ನಾಟಕಗಳನ್ನು ವಿಶ್ಲೇಷಣೆ ಮಾಡಲಾಗುವುದು.

೧.೨. ಅಧ್ಯಯನದ ವ್ಯಾಪ್ತಿ

'ಮಕ್ಕಳ ಸಾಹಿತ್ಯ ಮತ್ತು ಭಾಷೆ' ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಈ ಅಧ್ಯಯನದ ಉದ್ದೇಶಗಳ ಈಡೇರಿಕೆಗಾಗಿ ಮಕ್ಕಳನ್ನು ಕುರಿತು ಹಿರಿಯರು ರಚನೆ ಮಾಡಿರುವ ಸೃಜನಶೀಲ ಸಾಹಿತ್ಯವನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಯಾಕೆಂದರೆ ಮಕ್ಕಳೇ ರಚಿಸಿರುವ ಸಾಹಿತ್ಯದಲ್ಲಿ ಭಾಷೆ, ಪದ, ವಾಕ್ಯ ಮೊದಲಾದ ಪ್ರಯೋಗದಲ್ಲಿ ಅಷ್ಟೊಂದು ಪ್ರೌಢಿಮೆಯನ್ನು ಕಾಣಲಾಗುವುದಿಲ್ಲ. ಆದರೆ ಮಕ್ಕಳನ್ನು ಕುರಿತು ರಚನೆಯಾಗಿರುವ ಸಾಹಿತ್ಯದಲ್ಲಿ ಎಲ್ಲಾ ಪ್ರಯೋಗಗಳ ಪ್ರೌಢಿಮೆಯನ್ನು ಕಾಣಬಹುದಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನಕ್ಕೆ ಮಕ್ಕಳೇ ಬರೆದಿರುವ ಸಾಹಿತ್ಯವನ್ನು ಪರಿಗಣಿಸದೆ, ಮಕ್ಕಳನ್ನು ಕುರಿತು ರಚನೆಯಾದ ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಹಾಗೂ ಈ ನಿಬಂಧಕ್ಕೆ ಮಕ್ಕಳ ಸಾಹಿತ್ಯದ ವಸ್ತು, ತಂತ್ರ ಮತ್ತು ಶೈಲಿಯಡಿಯಲ್ಲಿ, ಪ್ರಾತಿನಿಧಿಕ ಮಕ್ಕಳ ಸಾಹಿತಿಗಳ ಸಾಹಿತ್ಯದೊಂದಿಗೆ, ಪ್ರಾದೇಶಿಕ ಶೈಲಿಯಲ್ಲಿ ರಚನೆಯಾಗಿರುವಂತ ಮಕ್ಕಳ ಕಥೆಗಳು, ಕವನಗಳು ಮತ್ತು ನಾಟಕಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವಲೋಕಿಸುವುದು. ಜೊತೆಗೆ ಅಧ್ಯಯನದ ಶೀರ್ಷಿಕೆ 'ಮಕ್ಕಳ ಸಾಹಿತ್ಯ ಮತ್ತು ಭಾಷೆ' ಎಂದಿದ್ದರೂ ಸಹ ಮಕ್ಕಳ ಸಾಹಿತ್ಯದ ಪ್ರಕಾರಗಳನ್ನು ಪ್ರಧಾನವಾಗಿ ಸಾಹಿತ್ಯದ ಹಿನ್ನೆಲೆಯಲ್ಲಿಯೇ ವಿಶ್ಲೇಷಿಸಲಾಗುವುದು. ಅದರ ಭಾಷೆಯನ್ನು ಸಾಹಿತ್ಯದ ಜೊತೆಗೆ ಸಂದರ್ಭಾನುಸಾರ ಪೂರಕವಾಗಿ ಅವಲೋಕಿಸುವುದಾಗಿದೆ. ಇದು ಅಧ್ಯಯನದ ಮಿತಿಯು ಆಗಿರುತ್ತದೆ.

೧.೩. ಅಧ್ಯಯನದ ವೈಧಾನಿಕತೆ

'ಮಕ್ಕಳ ಸಾಹಿತ್ಯ ಮತ್ತು ಭಾಷೆ' ಎಂಬ ಶೀರ್ಷಿಕೆ ಹೊಂದಿರುವ ಪ್ರಸ್ತುತ ಪ್ರಬಂಧವು ಪ್ರಮುಖವಾಗಿ ಮಕ್ಕಳ ಸಾಹಿತ್ಯ ಮತ್ತು ಭಾಷೆಗೆ ಸಂಬಂಧಿಸಿದಂತೆ ಈ ಹಿಂದೆ ಬಂದಂತ ಕೃತಿಗಳನ್ನು ಪೂರಕವಾದ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಅಲ್ಲದೆ ಸಾಮಾಜಿಕವಾಗಿ, ಭಾಷಿಕವಾಗಿ, ಮತ್ತು ಪ್ರಾದೇಶಿಕವಾಗಿ ಬಂದ ಮುಖ್ಯವಾದ ಕೃತಿಗಳು, ಸಂಪಾದನಾ ಕೃತಿಗಳು, ಬಿಡಿ ಲೇಖನಗಳು, ಅಂತರ್‌ಜಾಲ ಮಾಹಿತಿ ಮೊದಲಾದವುಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಈ ಅಧ್ಯಯನವು 'ವಿವರಣಾತ್ಮಕ' ವಿಧಾನ ಹಾಗೂ 'ವಿಶ್ಲೇಷಣಾತ್ಮಕ' ವಿಧಾನಗಳನ್ನು ಅಳವಡಿಸಿಕೊಂಡು ಅಧ್ಯಯನದ ಶಿಸ್ತಿಗೆ ಚೌಕಟ್ಟನ್ನು ರೂಪಿಸಿಕೊಳ್ಳಲಾಗಿದೆ. ಅಲ್ಲದೆ ಪ್ರಮುಖ ಕೃತಿಗಳಲ್ಲಿ ದೊರೆತಂತಹ ಮಕ್ಕಳ ಸಾಹಿತ್ಯ ಪ್ರಕಾರಗಳನ್ನು ಆಕರಗಳನ್ನಾಗಿ ಬಳಸಿಕೊಂಡು ವಿಶ್ಲೇಷಿಸಲಾಗಿದೆ.

೧.೪. ಅಧ್ಯಯನದ ಸ್ವರೂಪ

ಅಧ್ಯಯನದ ಉದ್ದೇಶಗಳಿಗನುಗುಣವಾಗಿ ಅಧ್ಯಾಯಗಳನ್ನು ಈ ರೀತಿಯಲ್ಲಿ ಯೋಜಿಸಿ ಕೊಳ್ಳಲಾಗಿದೆ.

ಅಧ್ಯಾಯ–೧ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅಧ್ಯಯನದ ಸ್ವರೂಪದ ಭಾಗದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಯೋಚಿಸಿಕೊಂಡ ಅಧ್ಯಾಯಗಳನ್ನು ಸಂಕ್ಷಿಪ್ತವಾಗಿ ಅರ್ಥೈಸಿಕೊಳ್ಳಲಾಗಿದೆ.

ಅಧ್ಯಾಯ–೨ ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಈ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯ ಮತ್ತು ಭಾಷೆಗೆ ಸಂಬಂಧಿಸಿದಂತೆ ಬಂದಿರುವ ಪಿಎಚ್.ಡಿ. ಮಹಾಪ್ರಬಂಧಗಳು, ಎಂ.ಫಿಲ್ ಸಂಪ್ರಬಂಧಗಳು, ಕೃತಿಗಳು, ಸಂಪಾದನಾ ಕೃತಿಗಳು, ನಿಯತಕಾಲಿಕೆಗಳಲ್ಲಿ ಬಂದಂತ ಬಿಡಿ ಲೇಖನಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಪೂರಕ ಎನ್ನುವುದರ ಜೊತೆಗೆ ಈ ಅಧ್ಯಯನಕ್ಕೆ ಭಿನ್ನ ಎಂಬುದನ್ನು ಅವಲೋಕಿಸಲಾಗಿದೆ.

ಅಧ್ಯಾಯ–೩ ಮಕ್ಕಳ ಸಾಹಿತ್ಯದ ರಚನೆಯ ಹಿನ್ನೆಲೆ, ಸ್ವರೂಪ ಮತ್ತು ತಾತ್ವಿಕತೆ

ಈ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯದ ಪ್ರಾಚೀನತೆಯನ್ನು, ಈ ಸಾಹಿತ್ಯಕ್ಕೆ ಸಂಬಂಧಿಸಿದ ಮೂಲವನ್ನು ಕುರಿತು ಹಾಗೂ ಸಾಹಿತ್ಯದ ಪ್ರಾಮುಖ್ಯತೆ ಅದರ ಸ್ವರೂಪ ಹಾಗೂ ವಸ್ತು, ಮತ್ತು ಲಕ್ಷಣಗಳನ್ನು ಕುರಿತು ವಿವರಿಸಿ, ಜೊತೆಗೆ ಅಗತ್ಯವಿರುವಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ-೪ ಮಕ್ಕಳ ಸಾಹಿತ್ಯದ ವಸ್ತು, ತಂತ್ರ ಮತ್ತು ಶೈಲಿ

ಈ ಅಧ್ಯಾಯದಲ್ಲಿ ನಾನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಮಕ್ಕಳ ಸಾಹಿತ್ಯದ ಪ್ರಕಾರಗಳಾದ ಮಕ್ಕಳ ಕಥೆಗಳನ್ನು, ಕವನಗಳನ್ನು ಮತ್ತು ನಾಟಕಗಳನ್ನು ಪ್ರಾದೇಶಿಕವಾಗಿ ಬಂದ ಸಾಹಿತಿಗಳ ಪ್ರಾತಿನಿಧಿಕವಾದ ಕಥೆಗಳನ್ನು, ಕಾವ್ಯಗಳನ್ನು ಮತ್ತು ನಾಟಕಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಲ್ಲದೆ ಈ ಸಾಹಿತ್ಯ ಪ್ರಕಾರಗಳ ಹುಟ್ಟು, ಬೆಳವಣಿಗೆ, ಪ್ರಾಚೀನತೆ, ಸ್ವರೂಪ, ಪ್ರಾಮುಖ್ಯತೆ, ವರ್ಗೀಕರಣ ಮತ್ತು ಲಕ್ಷಣಗಳನ್ನು ಗುರುತಿಸಿಕೊಂಡು ಅವಲೋಕಿಸಿಕೊಳ್ಳಲಾಗಿದೆ.

ಅಧ್ಯಾಯ-೫ ಮಕ್ಕಳ ಸಾಹಿತ್ಯದ ಭಾಷಿಕ ಅಧ್ಯಯನ

ಈ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯದ ಜೊತೆಗೆ ಭಾಷೆಯು ಉತ್ತಮವಾಗಿರುವುದು ಅನಿವಾರ್ಯವಾಗಿರುವುದರಿಂದ ಮಕ್ಕಳ ಸಾಹಿತ್ಯಕ್ಕೆ ಭಾಷೆಯೇ ಸರ್ವಸ್ವ. ಈ ಮಕ್ಕಳ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಮಕ್ಕಳ ಭಾಷೆಯು ಹೇಗಿರುತ್ತದೆ, ಮನೆಯಲ್ಲಿ ಮಕ್ಕಳ ಜೊತೆಯಲ್ಲಿ ಮಾತನಾಡುವ ಭಾಷೆಗೂ ಹಾಗೂ ಶಿಷ್ಟ ಸಾಹಿತ್ಯದಲ್ಲಿ ಬಳಸುವ ಭಾಷಾ ರಚನೆಗೂ ಇರುವ ಭಿನ್ನತೆಯೇನು? ಹಾಗೂ ಆ ಭಾಷೆಯಲ್ಲಿ ಬಳಕೆ ಮಾಡಿರುವ ಛಂದಸ್ಸು, ವ್ಯಾಕರಣ, ಲಾಲಿತ್ಯ, ಗೇಯತೆ ಹೇಗಿರುತ್ತದೆ ಎಂಬುದನ್ನು ಕೆಲವು ಮಕ್ಕಳ ಕವನಗಳ ಮೂಲಕ ವಿಶ್ಲೇಷಿಸಲಾಗಿದೆ. ಅಲ್ಲದೆ, ಪ್ರಾದೇಶಿಕ ಶೈಲಿಯಲ್ಲಿ ಮಕ್ಕಳ ಸಾಹಿತ್ಯ ಮತ್ತು ಅದರಲ್ಲಿನ ಭಾಷೆಯ ಬಳಕೆಯು ಹೇಗಿದೆ ಎಂಬುದನ್ನು ಕೆಲವು ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ. ಜೊತೆಗೆ ಮಕ್ಕಳ ಪಠ್ಯಪುಸ್ತಕಗಳಲ್ಲಿ ಬಳಕೆಯಾಗಿರುವ ಮಕ್ಕಳ ಸಾಹಿತ್ಯವನ್ನು ಕುರಿತು ಚರ್ಚಿಸಲಾಗಿದೆ. ಕೊನೆಯಲ್ಲಿ ಮಕ್ಕಳ ಭಾಷಾ ಪದಕೋಶವನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಅಧ್ಯಾಯ-೬ ಸಮಾರೋಪ

ಈ ಅಧ್ಯಾಯದಲ್ಲಿ ಅಧ್ಯಯನದ ಪ್ರಾರಂಭದಲ್ಲಿ ಗುರುತಿಸಿಕೊಂಡಿರುವ ಉದ್ದೇಶಕ್ಕೆ ಅನುಗುಣವಾಗಿ ಮತ್ತು ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ವಿವರಿಸಲಾಗಿದೆ. ಹಾಗೂ ಪರಾಮರ್ಶನ ಗ್ರಂಥಗಳ ಸೂಚಿಯನ್ನು ನೀಡಲಾಗಿದೆ.

ಅಡಿಟಿಪ್ಪಣಿ

೧. ಜಾನ್‌ವಿಲ್ಸನ್, (ಮೂಲ) ಹಿಮಕರ ಎ.ಕೆ. (ಅನು), 'ಏಳಿ ಎದ್ದೇಳಿ ನಿಮ್ಮ ಹಕ್ಕುಗಳಿಗಾಗಿ ಏಳಿ!', ಪು-೧೦೦.

೨. ವಾಸುದೇವ ಶರ್ಮಾ, 'ಮಕ್ಕಳ ಹಕ್ಕುಗಳು', ಪು-೨೬

೩. ಅದೇ ಪು-೨೭

❖❖❖

ಅಧ್ಯಾಯ: ಎರಡು

ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ: ಎರಡು

ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ಮಕ್ಕಳ ಸಾಹಿತ್ಯ ಅಂದರೆ ಅದೇನೋ ಅಪಾರ ಕಾಳಜಿ ವಹಿಸಿ, ಮಕ್ಕಳ ಮನಸ್ಸಿನ ಮಟ್ಟಕ್ಕಿಳಿದು ಗಂಭೀರವಾಗಿ ರಚಿಸುವ ಸಾಹಿತ್ಯವೆನ್ನುವರು. ಆದರೆ ಅದು ಸಹಜವಾಗಿಯೇ ಸಂಭವಿಸಬೇಕಾದುದು. ಹಾಗಿದ್ದಾಗಲೇ ಅದಕ್ಕೆ ತನ್ನದೇ ಆದ ಲವಲವಿಕೆ, ಗಟ್ಟಿತನ, ಅಸ್ತಿತ್ವವಿರುತ್ತದೆ. ಮಕ್ಕಳ ಸಾಹಿತ್ಯವೆನ್ನುವುದು ಸಹಜವಾಗಿಯೇ ಹರಿದುಬರಬೇಕು. ಆಗ ಮಾತ್ರ ಅದು ತನ್ನ ಅರಿವನ್ನು ತಾನೇ ಕಂಡುಕೊಳ್ಳುತ್ತದೆ. ಪುಟಾಣಿ ಮಕ್ಕಳಿಗೆ ಬರೆದಿರುವುದೇ ಆಗಲಿ, ತುಸು ಬೆಳೆದ ಮಕ್ಕಳಿಗೆ ಬರೆದ ಸಾಹಿತ್ಯವೇ ಆಗಲಿ ಅದೆಲ್ಲ ಸಹಜದ ತುಡಿತವಾಗಿ ಹರಿಯುವ ಸಾಹಿತ್ಯವಾಗಬೇಕು. ಆಗ ಅದು ತನ್ನ ಓದುಗರನ್ನು ತಾನೇ ಗುರುತಿಸಿಕೊಳ್ಳುತ್ತದೆ.

ಆದರೆ ಇಂದು ಕನ್ನಡದಲ್ಲಿ ಹೇರಳವಾಗಿಯೇ ಮಕ್ಕಳ ಸಾಹಿತ್ಯ ರಚನೆಯಾಗುತ್ತಿದೆ. ಆದರೆ ಅದರ ಗುಣಮಟ್ಟವನ್ನು ಗಮನಿಸಿದಾಗ ನಿರಾಶೆಯನ್ನು ಉಂಟುಮಾಡುತ್ತದೆ. ಮಕ್ಕಳ ನೀತಿಬೋಧನೆ ಹೊರತಾದ ಸಾಹಿತ್ಯ ಬಂದಿರುವುದು ಕಡಿಮೆ. ಮಕ್ಕಳ ಮನಸ್ಸನ್ನು ಮನರಂಜನೆಗೆ ಒಳಪಡಿಸಿ ಅವರ ಮನೋವಿಕಾಸಕ್ಕೆ ಪ್ರೇರಣೆಯನ್ನು ಒದಗಿಸುವಂತ ಸಾಹಿತ್ಯ ಬಂದಿರುವುದು ಕಡಿಮೆ ಎನ್ನಬಹುದು. ಅಂದರೆ, ಚಿಣ್ಣರ ಹೆಸರಿನಲ್ಲಿ ಬಂದದ್ದೆಲ್ಲ ಮಕ್ಕಳ ಸಾಹಿತ್ಯವಲ್ಲ. ಮಕ್ಕಳಿಗಾಗಿಯೇ ಸೃಜನಶೀಲವಾಗಿ ಬಂದ ಅರ್ಥಪೂರ್ಣ ಸಾಹಿತ್ಯ ರಚನೆಯ ಅಗತ್ಯವಿದೆ.

ಪ್ರಸ್ತುತ ಮಕ್ಕಳ ಸಾಹಿತ್ಯ ಮತ್ತು ಭಾಷೆ ಎಂಬ ವಿಷಯದ ಮೇಲೆ ಅಧ್ಯಯನವನ್ನು ಕೈಗೊಂಡಿದ್ದು ಇದಕ್ಕೆ ಪೂರಕವಾಗಿರುವ ಕೆಲವೊಂದು ಪುಸ್ತಕಗಳು, ಸಂಪಾದನಾ ಕೃತಿಗಳನ್ನು, ಪಿಎಚ್.ಡಿ. ಮಹಾಪ್ರಬಂಧಗಳನ್ನು ಹಾಗೂ ಎಂ.ಫಿಲ್. ಸಂಪ್ರಬಂಧಗಳನ್ನು ಮತ್ತು ಪತ್ರಿಕೆಗಳನ್ನು ಸಮೀಕ್ಷೆಗೊಳಪಡಿಸಲಾಗಿದೆ. ಕಾರಣ ಪ್ರಸ್ತುತ ಅಧ್ಯಯನವು ಇತರೆ ಅಧ್ಯಯನಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಗಮನಕ್ಕೆ ತರುವಂತಿದೆ. ಈ ಹಿನ್ನೆಲೆಯಲ್ಲಿ ಇದುವರೆಗಿನ ಅಧ್ಯಯನ ಸಮೀಕ್ಷೆ ಇಂತಿದೆ.

೨.೧. ಪಿಎಚ್.ಡಿ. ಪ್ರಬಂಧಗಳು

* ಶಶಿಧರ ನರೇಂದ್ರ ಅವರ 'ಕನ್ನಡ ನಾಟಕಗಳ ಭಾಷೆ' (ಪ್ರಾತಿನಿಧಿಕ ನಾಟಕಗಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ. ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಭಾಷೆಯು ನಾಟಕದ ಅತ್ಯಂತ ಪ್ರಮುಖ ಅಂಗ, ನಾಟಕದಲ್ಲಿ ಬದುಕನ್ನು ಭಾಷೆಯ ಮೂಲಕ ಕಟ್ಟಿಕೊಡಲಾಗುತ್ತದೆ. ನಾಟಕದಲ್ಲಿ ಒಂದು ಪಾತ್ರ ಆಡುವ ಮಾತು, ಆ ಮಾತನಾಡುವ ಪಾತ್ರದ ಮೇಲೆ ಮಾತನ್ನು ಕೇಳಿಸಿಕೊಳ್ಳುವ ನಾಟಕದ ಸುತ್ತಲಿನ ಪಾತ್ರಗಳ ಮೇಲೆ ಹಾಗೂ ಅದನ್ನು ನೋಡುವವರ, ಕೇಳುವವರ ಮೇಲೆ ಪರಿಣಾಮ ಬೀರುತ್ತದೆ. ಅಲ್ಲದೇ ಭಾಷೆಯು ನಾಟಕದ ಬಂಧ, ವಸ್ತು, ಪಾತ್ರಗಳ ಹಿನ್ನೆಲೆಯ ವಾತಾವರಣವನ್ನು ಸೂಚಿಸುತ್ತದೆ. ಇಂಥ ಮಾತುಗಳು ಸಂಭಾಷಣೆಗೆ ಸಂಬಂಧಿಸಿದ ಕನ್ನಡ ನಾಟಕಗಳ ಭಾಷೆ ಕುರಿತಾದ ಈ ಅಧ್ಯಯನದಲ್ಲಿ ಕನ್ನಡ ನಾಟಕಗಳ ಭಾಷೆಯ ಬಗ್ಗೆ ಅದರ ಸ್ವರೂಪದ ಬಗ್ಗೆ ತಿಳಿಯುವ ಪ್ರಯತ್ನ ಇದಾಗಿದೆ. ಭಾರತದ ಅಭಿಜಾತ ರಂಗಭೂಮಿಗೆ ಸುಮಾರು ಮೂರು ಸಾವಿರ ವರ್ಷಗಳ ಇತಿಹಾಸವಿದ್ದರೂ ಕನ್ನಡ ರಂಗಭೂಮಿ ತೀರಾ ಈಚಿನದು. ಹದಿನೇಳನೇ ಶತಮಾನದ ಕೊನೆಗೆ ರಚನೆಯಾದ ಸಿಂಗರಾರ್ಯನ 'ಮಿತ್ರಾವಿಂದ ಗೋವಿಂದ' ಕನ್ನಡದ ಮೊದಲ ನಾಟಕವಾದರೂ ಅದು ಅನುವಾದಿತ ನಾಟಕವಾಗಿದೆ. ಮತ್ತೆ ಸುಮಾರು ನೂರು ವರ್ಷಗಳ ನಂತರ ಕನ್ನಡ ನಾಟಕಗಳ ಬೆಳೆ ಶುರುವಾಯಿತು. 'ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ', 'ಉಷಾಹರಣ' ಮುಂತಾದ ನಾಟಕಗಳಿಂದ ಹಿಡಿದು ಇಲ್ಲಿಯತನಕ ಸಾವಿರಾರು ನಾಟಕಗಳು ಪ್ರಕಟವಾಗಿವೆ. ಅವೆಲ್ಲವುಗಳ ಭಾಷಾ ಸ್ವರೂಪವನ್ನು ಅಭ್ಯಸಿಸುವುದು ಸಾಧ್ಯವಿಲ್ಲವಾದರೂ ಭಾಷಾ ಬಳಕೆಯ ಸ್ವರೂಪವನ್ನು ಅವುಗಳಲ್ಲಿನ ವಸ್ತು, ತಂತ್ರ, ಶೈಲಿಯನ್ನು ಗಮನಿಸಿ ವಿವಿಧ ಪ್ರಕಾರಗಳ ಅಡಿಯಲ್ಲಿ ಬರುವ ಪ್ರಾತಿನಿಧಿಕ ನಾಟಕಗಳನ್ನು ಇಲ್ಲಿನ ಅಧ್ಯಯನ ಒಳಗೊಂಡಿದೆ.

ಅಲ್ಲದೆ ಇಲ್ಲಿ ಭಾಷೆಗೆ ಸಂಬಂಧಿಸಿದಂತೆ ನಮ್ಮ ಮೊದಲ ನಾಟಕ 'ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ' ಹಳಗನ್ನಡದ 'ಅಶ್ವತ್ಥಾಮನ್', 'ಬೆರಳ್‌ಗೆ ಕೊರಳ್'ದಂತಹ ಭಾಷಾ ವೈಶಿಷ್ಟ್ಯದ ನಾಟಕಗಳ ಭಾಷೆ ಕುರಿತು ಚರ್ಚಿಸಲಾಗಿದೆ. ಇನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ನಾಟಕಗಳ ಭಾಷೆಯಿಂದಲೇ ಗಮನ ಸೆಳೆದಿರುವ ಪ್ರಮುಖ ನಾಟಕಕಾರರ ನಾಟಕಗಳು, ಅವುಗಳ ಭಾಷಾ ವಿಶೇಷತೆಯನ್ನು ಕುರಿತು ವಿವರಿಸಲಾಗಿದೆ. ಒಟ್ಟಾರೆ ಇಲ್ಲಿ ಕನ್ನಡ ನಾಟಕಗಳ ಭಾಷೆಯ ಸ್ವರೂಪವನ್ನು ವಿವಿಧ ಅಧ್ಯಾಯಗಳ ಮೂಲಕ ಪರಿಚಯಿಸಲಾಗಿದೆ. ಜೊತೆಗೆ ನಾಟಕ ಭಾಷೆಗೆ ಸಂಬಂಧಿಸಿದಂತೆ ನಾಟಕದ ವಸ್ತು, ತಂತ್ರ, ಶೈಲಿಯನ್ನು ಕುರಿತು ವಿಶ್ಲೇಷಣೆಯನ್ನು ಮಾಡಲಾಗಿದೆ.

* ರಾಜೇಂದ್ರ ಗಡಾದ ಅವರ 'ಮಕ್ಕಳ ಸಾಹಿತ್ಯ ಹಾಗೂ ಸಿಸು ಸಂಗಮೇಶ' ಎಂಬ ಪ್ರಕಟಿತ ಪಿಎಚ್.ಡಿ. ಪ್ರಬಂಧವು ಸಿಸು ಸಂಗಮೇಶರನ್ನು ಕುರಿತು ಬರೆದ ಕೃತಿಯಾಗಿದೆ.

ಇದರಲ್ಲಿ ಸಿಸು ಸಂಗಮೇಶ ಅವರ ಸಮಗ್ರ ಸಾಹಿತ್ಯವನ್ನು ಅವಲೋಕನಕ್ಕೆ ಒಳಪಡಿಸುವುದರ ಮೂಲಕ ಹಾಗೂ ಮಕ್ಕಳ ಸಾಹಿತ್ಯದ ಪರಂಪರೆಯಲ್ಲಿ ಅವರ ಮಹತ್ವದ ಸ್ಥಾನವನ್ನು ವಿಶ್ಲೇಷಿಸುವ ಹಾಗೂ ನಿರ್ದೇಶಿಸುವ ಮೂಲಕ ಈ ಕೃತಿಯನ್ನು ರಚಿಸಿದ್ದಾರೆ. ಅಲ್ಲದೆ ಇದರಲ್ಲಿ ಭಾರತೀಯ ಮತ್ತು ಕನ್ನಡ ಮಕ್ಕಳ ಸಾಹಿತ್ಯ ಪರಂಪರೆ ಸಿಸು ಸಂಗಮೇಶರ ವ್ಯಕ್ತಿಗತ ಜೀವನ, ಅವರ ಸಾಹಿತ್ಯ ಕೃತಿಗಳ ವಿಶ್ಲೇಷಣೆ, ಅವುಗಳ ಭಾಷೆ, ಶೈಲಿ, ತಂತ್ರ ಹಾಗೂ ಮಕ್ಕಳ ಸಾಹಿತ್ಯಕ್ಕೆ ಅವರ ಕೊಡುಗೆ, ಹಾಗೂ ಮಕ್ಕಳ ಸಾಹಿತ್ಯಕ್ಕೆ ನಿರಂತರವಾಗಿ ಶ್ರಮಿಸಿದ ವ್ಯಕ್ತಿ ಬದುಕು ಹಾಗೂ ಸಾಹಿತ್ಯ ಪಥಗಳನ್ನು ಪರೀಕ್ಷೆಗೆ ಒಳಪಡಿಸಿ ಅವರ ಕೃತಿಗಳನ್ನು ಮೌಲಿಕವಾಗಿ ಅವಲೋಕಿಸಲಾಗಿದೆ. ಸಿಸು ಸಂಗಮೇಶರ ಪ್ರತಿಯೊಂದು ಕೃತಿ–ಬರಹಗಳ ವಸ್ತು ವಿನ್ಯಾಸಗಳಿಂದ ವಿಶ್ಲೇಷಿಸಿ ಅಧ್ಯಯನವನ್ನು ಮಾಡಲಾಗಿದೆ. ಅಲ್ಲದೆ ಈ ಅಧ್ಯಯನದಲ್ಲಿ ಸಾಹಿತ್ಯ ರಚನೆ, ಪ್ರಕಾಶನ, ಮಕ್ಕಳ ಸಂಘಸಂಸ್ಥೆಗಳ ಸ್ಥಾಪನೆ, ಸಹಕಾರದೊಂದಿಗೆ ಹೋರಾಟ ಸಂಘಟನೆ ಹೀಗೆ ಹತ್ತು ಹಲವು ರೀತಿಯಲ್ಲಿ ಅಪರೂಪವೆನ್ನುವಂತೆ ಕನ್ನಡ ನಾಡಿನಲ್ಲಿ ಮಕ್ಕಳ ಸಾಹಿತ್ಯವನ್ನು ಕುರಿತು ಚಳುವಳಿಯನ್ನೇ ನಡೆಸಿದ ಸಂಗಮೇಶರ ಬರಹ ಹಾಗೂ ಹೋರಾಟಗಳನ್ನು ಇಲ್ಲಿ ವಸ್ತುನಿಷ್ಠೆಯಾಗಿ ವಿವರಿಸಲಾಗಿದೆ.

* 'ಮಕ್ಕಳ ರಂಗಭೂಮಿ: ಒಂದು ಅಧ್ಯಯನ' ಎಂಬ ಪಿಎಚ್.ಡಿ. ಮಹಾಪ್ರಬಂಧವನ್ನು ನಿಂಬಪ್ಪ ಗು. ಸೊಲಗಿ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಮಕ್ಕಳ ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿರುವ ನಿಂಬಪ್ಪ ಅವರ ಈ ನಿಬಂಧವು ಕನ್ನಡ ಮಕ್ಕಳ ರಂಗಭೂಮಿಯನ್ನು ಆಮೂಲಾಗ್ರವಾಗಿ ಅವಲೋಕಿಸುತ್ತದೆ. ಜೊತೆಗೆ ಮಕ್ಕಳ ರಂಗಭೂಮಿ ಅರಿಯದವರಿಗೆ ಮಾಡುತ್ತಿರುವ ಅಜ್ಞಾತ ಕೆಲಸವಲ್ಲ. ಅರಿತವರು ಅರಿತವರಿಗೆ ಅರಿವಿನ ಪರಿಧಿಯಲ್ಲಿ ಕಟ್ಟುತ್ತಿರುವ ಸೃಜನಕ್ರಿಯೆ ಎನ್ನುತ್ತಾ ಮಕ್ಕಳ ಮನೋವಿಕಾಸದ ನೆಲೆಯಲ್ಲಿ ಅವರ ವಯೋಸಹಜ ಸೃಜನಶೀಲ ಗುಣ, ಪರಿಸರದ ಪ್ರಭಾವ ಹಾಗೂ ಶಾಲಾ ಶಿಕ್ಷಣದ ಕಲಿಕಾ ನೆಲೆ ಇವೆಲ್ಲವನ್ನು ಗಮನದಲ್ಲಿರಿಸಿಕೊಂಡು ವಿಭಿನ್ನ ವಯೋಮಾನದ ಮಕ್ಕಳಿಗೆ ವಿಭಿನ್ನ ರಂಗ ಚಟುವಟಿಕೆಗಳನ್ನು ಗುರುತಿಸಲಾಗಿದೆ.

ಮಕ್ಕಳ ನಾಟಕ ಕೃತಿ ಹಾಗೂ ರಂಗ ಕೃತಿ ನಿರ್ಮಾಣದ ಸೂಕ್ಷ್ಮತೆಗಳನ್ನು ತಿಳಿಸುತ್ತ, ಮಕ್ಕಳ ರಂಗ ಕೃತಿ ನಿರ್ಮಾಣದಲ್ಲಿ ರಂಗಪಠ್ಯ, ರಂಗತಂತ್ರ, ಸಂಗೀತ, ಬೆಳಕಿನ ವಿನ್ಯಾಸಗಳೆಲ್ಲವೂ ಪ್ರಭಾವೀ ಪ್ರದರ್ಶನಕ್ಕೆ ಹೇಗೆ ಪೂರಕವಾಗಬಲ್ಲವು. ಇವುಗಳಲ್ಲದೆಯೇ ನಾಟಕವನ್ನು ಕಟ್ಟುವುದು ಹೇಗೆ? ಮಕ್ಕಳ ಧ್ವನಿಗಳನ್ನೇ ಬಳಸಿ, ನಿಸರ್ಗದಲ್ಲಿ ಸಿಗುವ ಸಾಧನ ಸಲಕರಣೆಗಳನ್ನೇ ಬಳಸಿಕೊಂಡು ರಂಗಸಂಗೀತ ಸೃಷ್ಟಿಸಿಕೊಳ್ಳುವ ವಿಧಾನ ಆಶ್ಚರ್ಯಕಾರಿಯಾಗಿದೆ. ಪ್ರದರ್ಶನದ ಹಿನ್ನೆಲೆಯಲ್ಲಿ ಅದನ್ನೊಂದು ಪ್ರಕ್ರಿಯೆಯಾಗಿ ಸೃಜನಶೀಲ ಕಲಿಕಾ ಸಾಧನವಾಗಿ, ತಾಲೀಮಿನ ಸಮಯವನ್ನು ನಿರ್ದೇಶಕ ಹೇಗೆ ಬಳಸಿಕೊಂಡು ಕಾರ್ಯ ನಿರ್ವಹಿಸುವ ಬಗೆಯನ್ನು ಕುರಿತು ಪರಿಚಯಿಸಲಾಗಿದೆ.

ಮಕ್ಕಳ ರಂಗಭೂಮಿಯ ಪ್ರದರ್ಶನದ ಹಿನ್ನೆಲೆಯಲ್ಲಿ ಪರಿಣಾಮ ಮತ್ತು ಪ್ರಭಾವ ಪರಿಶೀಲಿಸುವಾಗ ಮಕ್ಕಳಲ್ಲಿ ಸದಭಿರುಚಿ ಬೆಳೆಸುತ್ತಲೇ ಶಿಕ್ಷಣ ನೀಡಲು ನಾಟಕ ತುಂಬಾ ಪರಿಣಾಮಕಾರಿ ಮಾಧ್ಯಮವೆಂದು, ರಂಗನಾಟಕಗಳನ್ನು ವಿಭಿನ್ನ ಪರಿಸರದ ನಾಟಕಗಳಾಗಿ ಹೊಸ ರೀತಿಯ ವಿಭಾಗಿಸುವ ಕ್ರಮ ಅನುಸರಿಸಿ ವಿವರಿಸಿದೆ. ಬೀದಿನಾಟಕದ ಯಕ್ಷಗಾನ-ಬಯಲಾಟಗಳ ಕುರಿತು ಅವಲೋಕಿಸಿ ಮಕ್ಕಳ ಪ್ರಯೋಗಗಳ ಸ್ವರೂಪದ ಬಗ್ಗೆ ವಿವರಿಸಿದೆ.

ಮಕ್ಕಳ ರಂಗಭೂಮಿಯು ಶೈಕ್ಷಣಿಕ ಬಳಕೆಯೊಂದಿಗೆ, ಸಾಮರ್ಥ್ಯ ದಕ್ಕಿಸಿಕೊಂಡು ಗಟ್ಟಿಯಾಗಿ ನೆಲೆ ನಿಲ್ಲಬೇಕಾದರೆ, ಅದು ಶಾಲಾ ಅಂಗಳದಲ್ಲಿ ವಿಭಿನ್ನ ವಿಶಿಷ್ಟ ಚಟುವಟಿಕೆಗಳ ಮೂಲಕ ಅನುಷ್ಠಾನಗೊಳ್ಳಬೇಕು. ಶಾಲಾ ಅಂಗಳದಲ್ಲಿ ರಂಗಭೂಮಿ ಚಟುವಟಿಕೆಯೆಂದರೆ ರಂಗ ಭಾಷೆಯನ್ನು ಕಲಿಸುವುದು ಹಾಗೂ ರಂಗ ಭೂಮಿಯನ್ನು ಒಂದು ಮಾಧ್ಯಮವಾಗಿಸಿ ಶಾಲಾ ಶಿಕ್ಷಣ ನೀಡುವುದು ಎಂಬ ಪರಿಕಲ್ಪನೆಯಲ್ಲಿ ರಂಗಭೂಮಿಯ ಶೈಕ್ಷಣಿಕ ಸಾಧ್ಯತೆಗಳನ್ನು ಕಂಡುಕೊಳ್ಳಲಾಗಿದೆ.

ಹೀಗೆ ಮನೆಯಂಗಳದಲ್ಲಿಯ ಮಕ್ಕಳಾಟ, ಸೃಜನಾತ್ಮಕ ಆಟ ಪ್ರಯೋಗಶೀಲ ನಾಟಕ, ಸ್ವಪ್ನ ಹಾಗೂ ವಾಸ್ತವ ನಾಟಕ, ರಂಗಭೂಮಿಯ ವಸ್ತು ವೈವಿಧ್ಯತೆ, ರಂಗತಾಲೀಮು, ರೂಪಕ, ಪ್ರಹಸನ, ಛದ್ಮವೇಷ, ಬೀದಿನಾಟಕ, ತುಂಡು ನಾಟಕ, ಅಣಕೋತ್ಸವ, ರಂಗಭೂಮಿಯ ಅಪಾರ ಸಾಧ್ಯತೆಗಳನ್ನು ಕಟ್ಟಿಕೊಟ್ಟಿದ್ದಾರೆ. ನಾಟಕಕ್ಕೆ ಎಷ್ಟೆಲ್ಲಾ ರೂಪಗಳಿವೆ, ಎಷ್ಟೆಲ್ಲ ಪರಿಶ್ರಮಬೇಕು, ಎಷ್ಟೆಲ್ಲ ಪ್ರತಿಭೆ ಹೊರಹೊಮ್ಮಬಹುದು ಹಾಗೂ ಬಹುಮುಖಿ ಪರಿಣಾಮಗಳಿಂದ ಮಕ್ಕಳ ಮನಸ್ಸು ಹೇಗೆಲ್ಲಾ ವಿಕಸಿಸಬಹುದು ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ.

* ಮಕ್ಕಳ ರಂಗಭೂಮಿ ಕುರಿತು ಬಂದ ಗಜಾನನ ಶರ್ಮ ಅವರ 'ಕನ್ನಡ ಮಕ್ಕಳ ನಾಟಕಗಳು ಮತ್ತು ರಂಗಭೂಮಿ' ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದೆ. ಇದರಲ್ಲಿ ಬೌದ್ಧಿಕ, ಭೌತಿಕ ಪರಿಮಿತಿಗಳಿಗೆ ಒಳಪಟ್ಟು ಮಕ್ಕಳ ರಂಗಭೂಮಿಯ ಆರಂಭ ಮತ್ತು ವಿಕಾಸಗಳನ್ನು ಅದರ ಸೃಷ್ಟಿ ಮತ್ತು ಸ್ವೀಕಾರಗಳ ಎರಡೂ ದೃಷ್ಟಿಯಲ್ಲಿ ಗಮನಿಸುತ್ತಾ ಭಾರತೀಯ ಪರಂಪರೆಯಲ್ಲಿ ಬದುಕಿನ ಕುರಿತಾದ ಸಮಗ್ರತೆಯ ದೃಷ್ಟಿಕೋನ ಹೇಗೆ ನಮ್ಮಲ್ಲಿ ಮಕ್ಕಳಿಗಾಗಿ ವಿಶೇಷ ರಂಗಭೂಮಿಯೊಂದರ ಅವಶ್ಯಕತೆಯೇ ಇಲ್ಲದಂತೆ, ಎಲ್ಲ ಕಲೆಗಳಲ್ಲಿ ಅಬಾಲವೃದ್ಧರಾದಿಯಾಗಿ ಎಲ್ಲರನ್ನು ಒಳಗೊಳ್ಳುವ, ಎಲ್ಲರನ್ನೂ ಮುದಗೊಳಿಸುವ ಸಮಗ್ರತೆಯ ಸಂವಿಧಾನಗಳನ್ನೇ ಒಳಗೊಂಡಿದ್ದವು ಎಂಬುದನ್ನು ಗಮನಿಸಲಾಗಿದೆ. ಜೊತೆಗೆ ಮಕ್ಕಳ ಮನಸ್ಸಿನ ಮೇಲೆ ನಾಟಕಗಳು ಉಂಟುಮಾಡುವ ಪ್ರಭಾವ ಮತ್ತು ಪರಿಣಾಮಗಳನ್ನು ಮಕ್ಕಳ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಅಧ್ಯಯನ ಮಾಡಲಾಗಿದೆ.

ಮುಂದುವರೆದು ಪ್ರಾಯ್ಡನ ನಂತರ ಬಳಕೆಗೆ ಬಂದ, ವಯೋಮಾನವನ್ನನುಸರಿಸಿ ಮನುಷ್ಯನ

ಸಂವೇದನೆಗಳನ್ನು ಮನುಷ್ಯನ ಮನಸ್ಸಿನ ಸ್ಥಿತಿಗತಿಗಳನ್ನು ತಿಳಿಯುವ ವಿಕಾಸ ಮನೋವಿಜ್ಞಾನದ ಆಧಾರದ ಮೇಲೆ ಮಕ್ಕಳ ಮನಸ್ಸನ್ನು ವಿವರಿಸುತ್ತಾ ಹೋಗುವ ಬಗೆಯನ್ನು ಮಕ್ಕಳ ಭಾವ, ಭಾಷೆ, ಆಸೆ, ಆಕಾಂಕ್ಷೆ, ಆಸಕ್ತಿಗಳನ್ನು ಆಧರಿಸಿ ಅರಿಯುವ ಪ್ರಯತ್ನವನ್ನು ಮಾಡಿ, ಹುಟ್ಟಿನಿಂದ ಕೇವಲ ಸ್ವ-ಕೇಂದ್ರೀಕೃತ ಮನಸ್ಥಿತಿಯ ಅನಾಗರೀಕ, ನೀತಿ-ನಿಯಮಗಳ ಪರಿಭಾಷೆಯನ್ನೇ ಅರಿಯುವಂತೆ ಮಾಡಿ ಮಕ್ಕಳನ್ನು ಸಮಾಜಸಮ್ಮತವಾಗಿ ಬದುಕಬಲ್ಲ ಸುಸಂಸ್ಕೃತ ವ್ಯಕ್ತಿಯಾಗಿ ನಿರ್ಮಿಸುವಲ್ಲಿ ನಾಟಕದಂತಹ ಮಾಧ್ಯಮ ಬೇರೊಂದಿಲ್ಲ ಎನ್ನುತ್ತಾರೆ.

ಮಕ್ಕಳ-ಮಕ್ಕಳ ನಡುವೆ ನಾಟಕವೊಂದು ಸೃಷ್ಟಿಯಾಗಿರುವ, ಮಕ್ಕಳಿಂದ ಅದು ಸ್ವೀಕೃತವಾಗುವ ಈ ಸೃಷ್ಟಿ ಮತ್ತು ಸ್ವೀಕಾರ ಪ್ರಕ್ರಿಯೆಯಲ್ಲಿ ಮಕ್ಕಳ ನಾಟಕಗಳು ದೊಡ್ಡವರ ನಾಟಕಗಳಿಗಿಂತ ಹೇಗೆ ತಮ್ಮ ಪ್ರತ್ಯೇಕತೆಯನ್ನು ಸಾಧಿಸಿಕೊಂಡಿದೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ. ಮತ್ತು ಇಲ್ಲಿ ನಾಟಕ ಕಟ್ಟುವ ಪ್ರಕ್ರಿಯೆಯಲ್ಲಿ ನಾವು ಹೇಗೆ ಮಕ್ಕಳ ವ್ಯಕ್ತಿತ್ವ ನಿರ್ಮಾಣದ ವಿಶಿಷ್ಟ ಕೆಲಸವನ್ನು ನಿರ್ವಹಿಸಬಹುದು. ಮಕ್ಕಳ ನಾಟಕಗಳು ಹೇಗೆ ಮಕ್ಕಳ ಸಾಮಾಜೀಕರಣವನ್ನು ಸಾಧಿಸುವಲ್ಲಿ ಉಪಕರಣವಾಗಬಲ್ಲವು ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ಜೊತೆಗೆ ಕನ್ನಡದಲ್ಲಿ ಸಿಗುವ ಮಕ್ಕಳ ನಾಟಕಗಳನ್ನು ಪ್ರಾತಿನಿಧಿಕವಾಗಿ ಗಮನಿಸಿ, ಅವುಗಳನ್ನು ಪ್ರತ್ಯೇಕವಾಗಿ 'ಸಾಹಿತ್ಯ ಕೃತಿ' ಮತ್ತು 'ರಂಗನಿರ್ಮಿತಿ'ಯಾಗಿ ನೋಡದೇ ಸಾಹಿತ್ಯ ಮತ್ತು ರಂಗದ ಎರಡೂ ದೃಷ್ಟಿಯಿಂದ ಅವು ಉಂಟುಮಾಡುವ ಪ್ರಭಾವ ಮತ್ತು ಪರಿಣಾಮಗಳನ್ನು ಆಧರಿಸಿ ಗಮನಿಸಲಾಗಿದೆ. ಹೀಗೆ ಗಮನಿಸುವ ಸಂದರ್ಭದಲ್ಲಿ ನಾಟಕಗಳನ್ನು ವಸ್ತು ಅಥವಾ ತಂತ್ರಗಳ ಆಧಾರದ ಮೇಲೆ ವಿಂಗಡಿಸದೆ ಅವು ರಚನೆಯಾಗುತ್ತಾ ಬಂದ ಕಾಲಾನುಕ್ರಮದಲ್ಲಿ ಪ್ರಮುಖ ಲೇಖಕರ ನಾಟಕಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಕರ್ನಾಟಕದಲ್ಲಿನ ರಂಗಚಟುವಟಿಕೆಗಳನ್ನು ಪ್ರಾದೇಶಿಕವಾಗಿ ಗಮನಿಸುತ್ತಾ, ಜಾನಪದ ಕಲೆಗಳಿಂದ ಹಿಡಿದು ನೃತ್ಯ ನಾಟಕಗಳವರೆಗೂ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಅದರ ಸ್ಥಿತಿಗತಿಗಳನ್ನು ಗಮನಿಸಲಾಗಿದೆ. ಜೊತೆಗೆ ಶಿಕ್ಷಣದಲ್ಲಿ ರಂಗಭೂಮಿಯು ಸಮರ್ಥವಾಗಿ ಬಳಕೆಯಾಗಬಹುದಾದ ದಾರಿಯನ್ನು ವಿದೇಶಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಕೆಲವು ಮಾದರಿಗಳನ್ನು ಗಮನಿಸಲಾಗಿದೆ. ಮಕ್ಕಳ ಸಮಗ್ರ ವ್ಯಕ್ತಿತ್ವ ನಿರ್ಮಾಣದಲ್ಲಿ ಮತ್ತು ಸಮಾಜೀಕರಣದಲ್ಲಿ ರಂಗಭೂಮಿಯ ಮಹತ್ವದ ಪಾತ್ರವನ್ನು ಸಮರ್ಥವಾಗಿ ಬಳಸಲಾಗುವುದಿಲ್ಲ ಎನ್ನುತ್ತಾರೆ.

ಒಟ್ಟಾರೆಯಾಗಿ ಈ ಪ್ರಬಂಧದಲ್ಲಿ ಮಕ್ಕಳ ರಂಗಭೂಮಿಯ ಒಟ್ಟು ಚಟುವಟಿಕೆಗಳನ್ನು ಗಮನಿಸಿದಾಗ ಕಂಡುಬರುವುದೇನೆಂದರೆ ನಮ್ಮಲ್ಲಿ ನಾಟಕ ಚಟುವಟಿಕೆಗಳು ನಡೆಯುತ್ತಿರುವ ಪ್ರಮಾಣ ತುಂಬಾ ಕಡಿಮೆ ಎನ್ನಬಹುದು. ಇಂದಿನ ಮಕ್ಕಳ ನಂಜಿಕೆಗಳು, ಮಕ್ಕಳ ಭಾವ, ಭಾಷೆ, ಆಸೆ, ಆಸಕ್ತಿಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದರೂ ಹಲವು ನಾಟಕಗಳು

ಮಕ್ಕಳ ಮನಸ್ಥಿತಿಗೆ ಇಳಿದು ಲೇಖಕರು ಮಕ್ಕಳ ಭಾಷೆ, ಭಾವನೆಗಳನ್ನು ಪೂರ್ಣವಾಗಿ ಅರ್ಥಮಾಡಿಕೊಂಡು ಬರೆಸುವಲ್ಲಿ ಮಕ್ಕಳ ಮನಸ್ಸಿನ ಸೂಕ್ಷ್ಮಗಳನ್ನು ಅರಿಯುವ, ವಯೋಮಾನವನ್ನನುಸರಿಸಿ ಅವರ ಸಂವೇದನೆಗಳನ್ನು ಅರ್ಥಮಾಡಿಕೊಳ್ಳುವ ವೈಜ್ಞಾನಿಕ ಪ್ರಕ್ರಿಯೆ ನಮ್ಮಲ್ಲಿ ಹೆಚ್ಚಾಗಬೇಕಿದೆ ಎಂದು ಹೇಳುತ್ತಾರೆ.

* 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ' ಎಂಬ ಪ್ರಕಟಿತ ಕೃತಿಯಲ್ಲಿ ವಿಠಲರಾವ್ ಗಾಯಕ್ವಾಡ್ ಅವರು ಈ ಕೃತಿಯಲ್ಲಿ ಕುವೆಂಪು ಅವರ ಒಟ್ಟು ಸಾಹಿತ್ಯದಲ್ಲಿನ ವೈಚಾರಿಕತೆಯ ಪರಿಶೀಲನೆ ಎಂಬ ಅಧ್ಯಯನದಲ್ಲಿ 'ಶಿಶುಸಾಹಿತ್ಯ'ವನ್ನು ಕುರಿತು ಬರೆದಿದ್ದಾರೆ. ಇದರಲ್ಲಿ ಮಕ್ಕಳು ಬಾಲ್ಯದಿಂದಲೇ ವಿಚಾರವಂತಿಕೆಯನ್ನು ಬೆಳಸಿಕೊಳ್ಳಬೇಕು. ಇಲ್ಲದಿದ್ದರೆ ಅನಂತರ ಎದುರಾಗುವ ವೈಚಾರಿಕತೆ ಅವರ ಮೊದಲಿನ ಭಾವನಾಲೋಕವನ್ನು ಗೊಂದಲ ಗೊಳಿಸುತ್ತದೆ. ಅದು ಬದುಕಿನ ಅನುಭವಕ್ಕನುಗುಣವಾಗಿ ಮೂಡುತ್ತಾ ಹೋಗಬೇಕು. ಹಾಗಾಗಬೇಕಾದರೆ ವಿಚಾರ ಪ್ರಧಾನತೆಯನ್ನು ಬಾಲ್ಯದಿಂದಲೇ ಮಕ್ಕಳ ಮನಸ್ಸಿನಲ್ಲಿ ಮೂಡುವಂತೆ ಮಾಡಬೇಕು. 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂಬ ನಾಣ್ಣುಡಿ ಆಗ ಸಾಧ್ಯವಾಗಬಹುದು. ಜೊತೆಗೆ ಇಂದಿನ ಭಾರತೀಯ ಮನಸ್ಥಿತಿಯನ್ನು ವೈಚಾರಿಕ ಚಿಂತನೆಗಳಿಂದಲೇ ಜಾಗೃತಗೊಳಿಸಬೇಕಾಗಿದೆ. ಕುವೆಂಪು ಈ ಕಾರಣಕ್ಕಾಗಿಯೇ ಬಾಲ್ಯದ ಬಗ್ಗೆ ಬಹಳ ಸೂಕ್ಷ್ಮ ವಿಚಾರಗಳನ್ನು ಹೇಳಿದ್ದಾರೆ. ೧೯೨೪ರಲ್ಲಿ 'ಅಮಲನ ಕಥೆ'ಯನ್ನು ಮಕ್ಕಳಿಗಾಗಿ ಬರೆದರು. ಮುಂದೆ ಅನೇಕ ಮಕ್ಕಳ ಕೃತಿಗಳನ್ನು ರಚಿಸಿದ್ದಾರೆ. ಆ ಕೃತಿಗಳೆಲ್ಲದರ ಮೂಲತತ್ವವೆಂದರೆ ಮಕ್ಕಳಿಗೆ ಅಗತ್ಯವಾದ ಶ್ರದ್ಧೆ ಮತ್ತು ಪರಿಶುದ್ಧತೆಯಾಗಿದೆ.

ಕುವೆಂಪು ಅವರು ಮಕ್ಕಳ ಚಟುವಟಿಕೆ, ಜ್ಞಾನ, ಅನುಭವ, ಕಲ್ಪನಾ ಸಾಮರ್ಥ್ಯ ಅವರ ಗುಣಸ್ವಭಾವಗಳನ್ನು ಸೂಕ್ಷ್ಮವಾಗಿ ಗುರುತಿಸಿ ಒಂಬತ್ತು ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯದ ವಸ್ತುಗಳು ಸಾಮಾನ್ಯವಾಗಿ ನೀತಿ ಪ್ರಧಾನವಾದವುಗಳು. ಆದರೆ ಆ ನೀತಿಯ ಸ್ವರೂಪ ಭಿನ್ನವಾದುದು. ಮಕ್ಕಳಲ್ಲಿ ದೇವರ ಬಗ್ಗೆ ಭಯ ಹೊಂದಿದ ಭಕ್ತಿಯನ್ನು ಹುಟ್ಟು ಹಾಕುವುದು. ದೆವ್ವದ ಬಗ್ಗೆ ಭಯ ಹುಟ್ಟಿಸುವುದು, ಆ ಮೂಲಕ ದೇವರು ಬಂದು ಶಿಕ್ಷಿಸುತ್ತಾನೆ. ಆದ್ದರಿಂದ ತಪ್ಪು ಮಾಡಬಾರದೆಂದು ಭೋದಿಸುವುದು ಹೆಚ್ಚು. ಆದರೆ ಕುವೆಂಪು ಅವರು ಅಂಥ ತಪ್ಪು ನಂಬಿಕೆಗಳಿಗೆ ಬದಲಾಗಿ ಶ್ರದ್ಧೆ, ಆಸಕ್ತಿ, ಕುತೂಹಲ ಮತ್ತು ಜ್ಞಾನಯುಕ್ತವಾದ ತಿಳುವಳಿಕೆಯನ್ನು ಕೊಡುವಂತಹ ನೀತಿಯುತ ವಸ್ತುಗಳನ್ನು ತಮ್ಮ ಮಕ್ಕಳ ಸಾಹಿತ್ಯಕ್ಕೆ ಬಳಸಿಕೊಂಡಿದ್ದಾರೆ. ಅಲ್ಲದೆ ದೇಶ, ಭಾಷೆ ಮತ್ತು ಪ್ರಕೃತಿಯೊಡನೆ ಸರಳ ಸಂಬಂಧವನ್ನು ಮಕ್ಕಳಿಗೆ ಬೋಧಿಸಬೇಕಾಗಿರುವುದು ಅಗತ್ಯವಾಗಿದೆ. ಬದುಕಿನ ಎಲ್ಲ ಬಂಧನಗಳೂ ನಾವು ರೂಪಿಸಿಕೊಳ್ಳುವ ಅನೇಕ ಅಂಶಗಳ ಎಳೆಗಳಾಗಿವೆ. ಏಕೆಂದರೆ ಬದುಕು ಬಂಧನವಲ್ಲ ಮುಕ್ತವಾದುದು ಎಂಬುದನ್ನು ಭಾರತೀಯ ತತ್ವ ಚಿಂತನೆಗಳು ಸಾರುತ್ತವೆ. ಬುದ್ಧ, ಬಸವ, ಅರವಿಂದ,

ಪರಮಹಂಸ, ವಿವೇಕಾನಂದ ಎಲ್ಲರೂ ಇದನ್ನು ಪ್ರತಿಪಾದಿಸಿದ್ದಾರೆ. ಆ ಬಗೆಯ ಮುಕ್ತ ಚಿಂತನೆಯ ಬದುಕನ್ನು ಕುವೆಂಪು ಅವರು ಮಕ್ಕಳಾಗಿರುವಂತ ಎಳೆಯ ವಯಸ್ಸಿನಲ್ಲಿಯೇ ರೂಢಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದಿದ್ದಾರೆ.

* 'ಪಂಜೆ ಮಂಗೇಶರಾಯರ ಕೃತಿಗಳು: ಒಂದು ಅಧ್ಯಯನ' ಎಂಬ ಪ್ರಕಟಿತ ಕೃತಿಯಲ್ಲಿ ಪಂಜೆ ಮಂಗೇಶರಾಯರ ಸಿದ್ಧಿ ಸಾಧನೆಗಳನ್ನು ಪರಿಚಯಿಸುತ್ತದೆ. ಇದು ಪಂಜೆಯವರ ವ್ಯಕ್ತಿತ್ವ ಮತ್ತು ಕರ್ತೃತ್ವದ ಗುಣಾತ್ಮಕ ಆಯಾಮಗಳನ್ನು ವಸ್ತುನಿಷ್ಠ ಗ್ರಹಿಕೆಯಿಂದ ವಾಸ್ತವದ ಬೆಳಕಿನಲ್ಲಿ ಪುನಸ್ಸಂಘಟಿಸಿರುವ ಕೃತಿಯಾಗಿದೆ.

ಇದು ಮಂಗೇಶರಾಯರ ಕೃತಿಗಳ ಅವಲೋಕನಕ್ಕೆ ಮೀಸಲಾಗಿದ್ದು, ಮತ್ತು ಶಿಶುಗೀತೆಗಳ ರಚನೆಯಲ್ಲಿ ಪಂಜೆಯವರು ಆದ್ಯಪುರುಷರು. ಮಕ್ಕಳ ನಡುವೆ ಹೆಚ್ಚು ಒಡನಾಡಿದ ಶಾಲಾ ಅಧ್ಯಾಪಕರಾಗಿದ್ದ ಪಂಜೆಯವರು ಮಕ್ಕಳಿಗಾಗಿ ಕಥೆಗಳನ್ನು, ಗೀತೆಗಳನ್ನು ಬರೆದಿರುವುದು ಸಹಜವೆನಿಸುವುದು. ಜೊತೆಗೆ ಶಿಶುಗೀತೆಗಳಲ್ಲಿ ಅವರು ಕೇವಲ ಪ್ರಾಸಗಳ ಚಮತ್ಕಾರ ತೋರದೆ ಮಕ್ಕಳ ಗೀತೆಗಳನ್ನು ಯಶಸ್ವಿಯಾಗಿ ರಚಿಸಿದ್ದಾರೆ.

ಇದರಲ್ಲಿ ಮಕ್ಕಳ ಸಾಹಿತ್ಯಕ್ಕೆ ಪಂಜೆಯವರ ಕೊಡುಗೆ ಎಂಬ ಅಧ್ಯಯನದಲ್ಲಿ ಮಕ್ಕಳ ಸಾಹಿತ್ಯ ಎಂದರೇನು? ಸುಮಾರು ೫ ವರ್ಷದಿಂದ ೧೦ ವರ್ಷಗಳವರೆಗಿನ ಮಕ್ಕಳು, ಮನನ ಮಾಡುವಂತಹ ಸಾಹಿತ್ಯವನ್ನು ಶಿಶುಸಾಹಿತ್ಯವೆಂದೂ, ೧೦ ವರ್ಷದಿಂದ ೧೫ ವರ್ಷದವರೆಗಿನ ಹದಿಹರೆಯದ ಮಕ್ಕಳ ಸಾಹಿತ್ಯವನ್ನು ಬಾಲಸಾಹಿತ್ಯವೆಂದು ವಿಂಗಡಿಸಿಕೊಂಡಿದ್ದಾರೆ. ಶಿಶು ಸಾಹಿತ್ಯದಲ್ಲಿ ೧೯೩೩ರಲ್ಲಿ ಬಾಸೆಲ್ ಮಿಶನ್ ಮೂಲಕ ಪ್ರಕಟವಾದ ಅವರ 'ಸಚಿತ್ರ ಬಾಲಕಥಾವಳಿ' ಆಗಿನ ಕಾಲದ ಒಂದನೇ ತರಗತಿಯ ಮಕ್ಕಳಿಗಾಗಿ ರಚಿತವಾದ ಕಥಾಸಂಕಲನ. ಈ ಸಂಕಲನದಲ್ಲಿ ಬರುವ ಮೊದಲ ಕಥೆ 'ಕಾಗೆ ಮತ್ತು ಗುಬ್ಬಚ್ಚಿ' ಕಥೆಯಾಗಿದೆ. ನಂತರದಲ್ಲಿ 'ಬಾಪುರಲೆ ಬಾ', 'ಬೆಲ್ಲದ ಬೈಲು ಬೆರ್ಚಪ್ಪ', 'ನಾನು ಏನು ಮಾಡಲಿ?' 'ಅಮ್ಮನನ್ನು ಹೇಗೆ ಕೂಗಬೇಕು', 'ಬ್ರಾಹ್ಮಣ ಬೈರಾಗಿ', 'ಜಾರ್ಜ್‌ಮಹಾರಾಜ' ಮೊದಲಾದ ಕಥೆಗಳನ್ನು ಸೇರಿಸಲಾಗಿದೆ. ಈ ಎಲ್ಲ ಕಥೆಗಳ ಕೊನೆಯಲ್ಲಿ ನೀತಿಯನ್ನು ಸಾರುತ್ತದೆ. ಮತ್ತು ಅಪಾಯ ಬಂದಾಗ ಉಪಾಯ ಮಾಡಬೇಕು. ಉಪಾಯದಿಂದ ಚಿಕ್ಕವರು ದೊಡ್ಡವರನ್ನು ಎದುರಿಸಬಹುದು ಎಂದು ಹೇಳುತ್ತವೆ. ಇನ್ನು ಇವರ ಬಾಲಸಾಹಿತ್ಯ ಹತ್ತರಿಂದ ಮೇಲ್ಪಟ್ಟು ಹದಿನೈದರ ಒಳಗಿನ ಹರೆಯದ ಮಕ್ಕಳಿಗೆ ಸಂಬಂಧಪಡುವ ಸಾಹಿತ್ಯ ಬಾಲಸಾಹಿತ್ಯವೆನ್ನುತ್ತಾರೆ. ಇಂಥ ಮಕ್ಕಳಿಗಾಗಿ ಹಲವಾರು ಕಥೆಗಳನ್ನು ರಚಿಸಿದ್ದಾರೆ. ಇಲ್ಲಿ ಬರುವ ಕಥೆಗಳಲ್ಲಿ ರಮ್ಯತೆಗೆ ಆದ್ಯತೆ ಕಡಿಮೆ. ಹಲವಾರು ವಿಷಯ-ವಸ್ತುಗಳ ಕಥೆಗಳು ಇಲ್ಲಿವೆ. ದೇಹಶ್ರಮದ ಕೆಲಸ ಮಾಡುವ ಹದಿಹರೆಯದ ಮಕ್ಕಳು ಇಲ್ಲಿ ಪಾತ್ರಧಾರಿಗಳಾಗಿರುತ್ತಾರೆ. ಯಾವ ಕೆಲಸ ಮಾಡದ ಸೋಮಾರಿಗಳಿಗೂ ಇಲ್ಲಿ ಒಂದು

ಪ್ರಮುಖ ಪಾತ್ರವಿರುತ್ತದೆ. 'ಪ್ರಾಣಿಗಳ ಜೀವನ', 'ಆಕಾಶದ ನಕ್ಷತ್ರ', 'ಅಜ್ಜಿ ಸಾಕಿದ ಮಗು' ಎಲ್ಲವೂ ಪಂಜೆಯರ ಮಕ್ಕಳ ಕಥೆಗಳು ವಸ್ತುವಾಗಿರುವುದು. ಎಳೆಯ ಮಕ್ಕಳಿಗಾಗಿ ಬರೆದ ಕಥೆಗಳಿಗಿಂತ ಇವು ದೀರ್ಘವಾಗಿರುತ್ತವೆ. ಈ ಕಥೆಗಳ ಕಥಾವಸ್ತು, ಶೈಲಿ, ಭಾಷೆ, ಭಾವ ಎಲ್ಲವೂ ಹರೆಯಕ್ಕೆ, ತುಸು ಬೆಳೆದ ವಯಸ್ಸಿಗೆ ತಕ್ಕಂತಿರಬೇಕು ಎನ್ನುತ್ತಾರೆ. ಇದರಲ್ಲಿ ಪ್ರಮುಖವಾದವುಗಳು ಪರಿಚಯಿಸಿದ್ದಾರೆ. ಅವು 'ಹೊಟ್ಟೆಯ ಅವಯವಗಳು' 'ಬೆಕ್ಕಿನ ಬಿಡಾರ ಬೇರೆ', 'ಜೋಡು ನಕ್ಷತ್ರ', 'ಮಾತಾಡೋ ರಾಮಯ್ಯ', 'ಗೋಣಿತಟ್ಟಿನ ಪಟ್ಟಿಹುಲಿ' ಮೊದಲಾದವುಗಳ ಪರಿಚಯವನ್ನು ನಾವಿಲ್ಲಿ ಕಾಣಬಹುದು. ಒಟ್ಟಾರೆಯಾಗಿ ಈ ಕೃತಿಯಲ್ಲಿ ಕನ್ನಡ ಸಾಹಿತ್ಯಕ್ಕೆ ಪಂಜೆಯವರ ಕೊಡುಗೆಯನ್ನು ಗಮನಿಸುತ್ತಾ ಮಕ್ಕಳ ಸಾಹಿತ್ಯಕ್ಕೂ ನೀಡಿದ ಅವರ ಕೊಡುಗೆಯನ್ನು ಸೂಕ್ಷ್ಮವಾಗಿ ಪರಿಚಯಿಸಲಾಗಿದೆ.

* 'ನಾ. ಡಿಸೋಜ ಒಂದು ಸಾಹಿತ್ಯ ಅಧ್ಯಯನ' ಎಂಬ ಪ್ರಕಟಿತ ಪ್ರಬಂಧವು ಗಂಗೂ ಆರ್. ಮೂಲಿಮನಿ ಅವರ ಕೃತಿಯಾಗಿದೆ. ಇದರಲ್ಲಿ ನಾ.ಡಿಸೋಜ ಅವರ ಸಣ್ಣ ಕಥೆಗಳು, ಕಾದಂಬರಿಗಳು, ಮಕ್ಕಳ ಸಾಹಿತ್ಯ, ಬಿಡಿಬರಹಗಳು ಹೀಗೆ ಹಲವಾರು ಪ್ರಕಾರಗಳಲ್ಲಿ ಹರಡಿರುವ ರಚನೆಯ ಕ್ರಮಗಳನ್ನು ವರ್ಗೀಕರಿಸಿಕೊಂಡು ಬಿಡಿಬಿಡಿಯಾಗಿ ವಿಶ್ಲೇಷಿಸುತ್ತಾ ವಿವರಿಸುತ್ತಾ ಹೋಗಿದ್ದಾರೆ. ನಾ.ಡಿಸೋಜ ಅವರ ಒಟ್ಟು ಸಾಹಿತ್ಯದ ಗುಣಲಕ್ಷಣಗಳನ್ನು ಯಥಾಸ್ಥಿತಿಯಲ್ಲಿ ಕಟ್ಟುತ್ತಾ ಹೋಗಿದ್ದಾರೆ. ನಾ.ಡಿಸೋಜ ಅವರು ಮಕ್ಕಳಿಗಾಗಿ ತಮ್ಮ ಸಾಹಿತ್ಯದ ಮೂರನೇ ಒಂದು ಭಾಗದಷ್ಟು ಮಕ್ಕಳಿಗಾಗಿ ರಚಿಸಿದ್ದಾರೆ. ನಾ.ಡಿಸೋಜ ಅವರು ಮಕ್ಕಳಿಗಾಗಿ ಮಿನಿ ಕಾದಂಬರಿಗಳನ್ನು, ನಾಟಕಗಳನ್ನು, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಇವರ ಕಾದಂಬರಿಗಳು– 'ಬೆಳಕಿನೊಡನೆ ಬಂತು ನೆನಪು', 'ಗೋಪಿಯ ಗೊಂಬೆ', 'ಆನೆ ಬಂತೊಂದಾನೆ', 'ಬೆಟ್ಟದ ಪುರದ ದಿಟ್ಟರು' ಮತ್ತು 'ಪಾರಿವಾಳಗಳ ದ್ವೀಪ' ಮೊದಲಾದವು.

ಜೀವನ ಚರಿತ್ರೆಗಳು: 'ಕದಂಬ ಮಯೂರ ಶರ್ಮ', 'ಬಾಲಗಂಧರ್ವ', 'ಪುಲಿನ ಬಿಹಾರ ದಾಸ', 'ಸದಾಶಿವ ಬ್ರಹ್ಮೇಂದ್ರ', 'ಮೂಡುಗೋಡು ಹಿರಣ್ಯಪ್ಪ' ಮತ್ತು 'ಏಸುಕ್ರಿಸ್ತ'.

ನಾಟಕಗಳು: 'ಭೂತ', 'ಮುಂದೇನು', 'ಹಕ್ಕಿಗಳಿಗೆ ಹೇಗೆ ಬಂತು ಬಣ್ಣ', 'ಗೆಳೆಯರ ಬಳಗಕ್ಕೆ ಜೈ' ಮೊದಲಾದವು.

* ಸಿ.ಪಿ. ಲಾವಣ್ಯ ಅವರು 'ಕೊಡಗಿನ ಗೌಡಕನ್ನಡದ ಭಾಷೆ' ಎಂಬ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಅವರು ಮಕ್ಕಳ ಬಾಲಭಾಷೆಯನ್ನು ಕುರಿತು ಹೇಳುವಾಗ ಅದರಲ್ಲಿಯೂ ಕೊಡಗಿನ ಪರಿಸರದಲ್ಲಿನ ಬಾಲಭಾಷೆಯನ್ನು ಪರಿಚಯಿಸುವರು. ಸಮಾಜದಲ್ಲಿ ವ್ಯಕ್ತಿ ಹೇಗೆ ವಿಕಾಸಗೊಳ್ಳುತ್ತಾ ಹೋಗುವನೋ ಹಾಗೆಯೇ ಮನುಷ್ಯ ಸಮೂಹ ವಿಕಾಸಗೊಳ್ಳುವುದು, ವ್ಯಕ್ತಿಯ ವಿಕಾಸವನ್ನು ಗಮನಿಸಿದಾಗ

ಅದು ನಮಗೆ ಅರಿವಾಗುತ್ತದೆ. ಅದರಂತೆಯೇ ಅವನ ಭಾಷೆಯೂ ಕೂಡ ಅವನನ್ನೇ ಅನುಸರಿಸಿ ವಿಕಾಸಗೊಳ್ಳಬಹುದು. ಮಗು ತಾಯಿ ಗರ್ಭದಲ್ಲಿರುವಾಗ ಮನುಷ್ಯನ ವಿಕಾಸ ಬೇರೆ ಬೇರೆ ಹಂತಗಳಲ್ಲಿಯೂ ಪುನರಾವರ್ತನೆಯಾಗುತ್ತವೆ. ಹಾಗೆಯೇ ಮಗುವು ಭಾಷೆಯನ್ನು ಕಲಿಯುವಾಗ ಭಾಷೆಯ ವಿಕಾಸದ ಹಂತಗಳನ್ನು ಗುರುತಿಸಬಹುದು. ಹಾಗೆಯೇ ಇವರು ಕೊಡಗಿನ ಗೌಡ ಕನ್ನಡದಲ್ಲಿರುವ ಬಾಲಭಾಷೆಯ ರೂಪಗಳ ಜೊತೆಗೆ ಇಲ್ಲಿ ಬರುವ ಅನುಕರಣವಾಚಿಗಳನ್ನು ಪರಿಚಯಿಸುತ್ತಾರೆ. ಕೊಡಗಿನ ಗೌಡ ಕನ್ನಡದಲ್ಲಿರುವ ಶಿಶು ಗೀತೆಗಳನ್ನು ಕುರಿತು ಹೇಳುತ್ತಾರೆ. ಉದಾಹರಣೆಗೆ ಅಪ್ಪಿ (ರೊಟ್ಟಿ), ಅಂಬಾ (ದನ), ಆಟ (ಆಟದ ಸಾಮಾನು), ಆಬೂ (ನೀರು), ಆಯಿ (ಗಾಯ), ಆರ್ (ಯಾರು), ಉಮ್ಮ (ಮುತ್ತು), ಓನು (ಏನು), ಕಡ್ಡಿ (ಬಳಪ), ಕುಪ್ಪ (ತೊಡುವ ಬಟ್ಟೆ), ಕೋಕುಮಣಿ (ಗಂಡು ಮಗುವಿನ ಜನನೇಂದ್ರಿಯ), ಕೊಕ್ಕ (ಕೋಳಿ) ಚಾಕಿ (ಚಾಕ್ಲೇಟು), ಪಾಚು (ಮಲಗು), ಚಾಮಿ (ದೇವರ/ ನಮಸ್ಕಾರ), ಚುಂಯಿ (ಚುಚ್ಚುಮದ್ದು), ಚೊರ್ರ (ಮೂತ್ರ), ಜೀಜಿ (ತೊಟ್ಟಿಲು), ಜಿಜ್ಜಿಮೀಯಿ(ಸ್ನಾನ), ತಾನಿತಾನಿ (ನಡೆಯುವುದು), ಪೊವ್ವ (ಸುಂದರ), ಬಿಕ್ಕಿ (ಬಿಸ್ಕತ್ತು), ಬಿಬ್ಬಿ (ಜನನಾಂಗ), ಮಮ್ಮಿ (ಮೀನು), ಮೂಕಚಾರ್ (ಸಿಂಬಳ) ಹಗ್ಗೆ (ಅನ್ನು) ಮೊದಲಾದ ಭಾಷೆಯ ರೂಪಗಳನ್ನು ಪರಿಚಯಿಸುವರು. ಅಲ್ಲದೆ ಅನುಕರಣ ಮಿತಿಗಳನ್ನು ಹೆಸರಿಸುವರು. ಈ ಕೊಡಗಿನ ಮಕ್ಕಳಲ್ಲಿ 'ಅಂಬಾ' ಎನ್ನುವ ಅರ್ಥವೇ ಬರುವ 'ಬೊಬ್ಬ' ಎಂಬ ವಿಶಿಷ್ಟ ಪದವಿದೆ. ಹಸು, ಎತ್ತು, ಎಮ್ಮೆ, ಕೋಣ, ಕರು, ಎಲ್ಲವಕ್ಕೂ 'ಬೊಬ್ಬ' ಎಂದು ಮಕ್ಕಳು ಕರೆಯುತ್ತಾರೆ. 'ಅಂಬಾ' ಎನ್ನುವ ಪದಕ್ಕಿಂತಲೂ 'ಬೊಬ್ಬ' ಪದವೆ ಹೆಚ್ಚು ಬಳಕೆಯಲ್ಲಿದೆ. ಅಲ್ಲದೆ ಇಲ್ಲಿ ಕೊಡಗಿನ ಗೌಡ ಕನ್ನಡದಲ್ಲಿರುವ ಕೆಲವು ವಿಶಿಷ್ಟ ಶಿಶು ಗೀತೆಗಳನ್ನು ಪರಿಚಯಿಸಿದ್ದಾರೆ.

ಉದಾ: "ಪಾಲ್ಗಡಲ ಮೇಲ ಪನ್ನಾಗಶಯನ
ಆಲದೆಲೆಯ ಮೇಲೆ ಲೋಲಾಡು ಶಿಶುವೇ ಜೋ ಜೋ॥
ಚಿನ್ನಾರಿ ತಂಗಿ, ಚಿತ್ತಾಲಿ ತಂಗಿ, ಚಿತ್ತಾದರಿಗುಂಡು ಬಾರಿಬಾರಿಗೂ
ತೂಗುವೆನಯ್ಯಾ ॥ ಜೋ ಜೋ॥
ಮೊದಲಾದ ಶಿಶುಗೀತೆಗಳನ್ನು ಹೇಳುತ್ತಾರೆ.

ಒಟ್ಟಾರೆಯಾಗಿ ಮಗುವಿನ ಬಾಯಿಯಿಂದ ಹೊರಡುವ ಶಬ್ದವು ವಯಸ್ಕರಿಗಿಂತ ಭಿನ್ನವಾಗಿರುತ್ತದೆ. ವಯಸ್ಕರು ತಮ್ಮ ಮಕ್ಕಳೊಂದಿಗೆ ಮಾತನಾಡುವಾಗ ಬಳಸುವ ಪದಗಳು, ಆ ಸಮಾಜದಲ್ಲಿ ಎಲ್ಲರೂ ಮಕ್ಕಳೊಂದಿಗೆ ಮಾತನಾಡಲು ಬಳಸುವ ಪದಗಳೇ ಆಗಿರುತ್ತವೆ. ಹಾಗೆಯೇ ಕೊಡಗಿನ ಗೌಡ ಕನ್ನಡದ ಪರಿಸರದಲ್ಲೂ ಮಗುವಿನೊಂದಿಗೆ ಮಾತನಾಡುವ ಬಾಲಭಾಷೆಯಲ್ಲಿರುವ ಕೆಲವು ಪದಗಳು ಶಿಷ್ಟ ಕನ್ನಡದಲ್ಲಿರುವ ಮಗುವಿನ ಭಾಷೆಯಲ್ಲಿರುವ ಪದಗಳೇ ಆಗಿದ್ದು, ಇವು ಹೆಚ್ಚಾಗಿ ಅನುಕರಣ ವಾಚಿಗಳೇ ಆಗಿವೆ.

* 'ಡೆವಲಪ್‌ಮೆಂಟ್ ಆಫ್ ಮಾರ್ಫೊಲಜಿಕಲ್ ರೂಲ್ಸ್ ಇನ್ ಚಿಲ್ಡ್ರನ್' ಎಂಬ ವಿಷಯವನ್ನು ಕುರಿತು ಎಲ್. ದೇವಕಿಯವರು, ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಮಕ್ಕಳ ದತ್ತಾಂಶದ ವಿಶ್ಲೇಷಣೆಗಾಗಿ ಮಕ್ಕಳ ವಯಸ್ಸು, ಲಿಂಗ, ಸಮಾಜೋ ಆರ್ಥಿಕ ವರ್ಗಗಳನ್ನು ಗಣನೆಗೆ ತೆಗೆದುಕೊಂಡು, ಮೂರರಿಂದ ಏಳು ವರ್ಷಗಳ ಮಕ್ಕಳ ವಯೋಮಿತಿಯನ್ನು ಹೊಂದಿರುವ ತಮಿಳು ಮತ್ತು ಕನ್ನಡ ಮಾತೃಭಾಷೆಯುಳ್ಳ ಕನ್ನಡ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದಾರೆ.

* ಗಿರಿಜಮ್ಮ ಎಂ.ವಿ. ಎನ್ನುವವರು 'ಮಕ್ಕಳಲ್ಲಿ ಕನ್ನಡ ಭಾಷಾ ಕಲಿಕೆ' ಎಂಬ ವಿಷಯವನ್ನು ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯದ ಭಾಷಾ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಮಗುವಿನ ಭಾಷೆಯ ಒಂಭತ್ತು ತಿಂಗಳಿನಿಂದ ಹಿಡಿದು ನಾಲ್ಕುವರೆ ವರ್ಷದವರೆಗಿನ ಮಗುವಿನ ಧ್ವನಿ, ಪದ, ಪದಪುಂಜ ಹಾಗೂ ವಾಕ್ಯಗಳ ಕಲಿಕೆ ಮತ್ತು ಬೆಳವಣಿಗೆಯನ್ನು ಕುರಿತು ಹಂತ ಹಂತವಾಗಿ ವಿವರಣಾತ್ಮಕವಾಗಿ ವಿವರಿಸಿದ್ದಾರೆ.

* ಎಸ್.ಕೆ. ಮಂಜುಳ ಅವರು 'ಮಕ್ಕಳಲ್ಲಿ ವಾಕ್ಯ ರಚನಾ ನಿಯಮಗಳ ಬೆಳವಣಿಗೆ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಯಾವುದೇ ಭಾಷೆಯ ದೇಶಿಯ ಮೂಲಿಕರು ಆ ಭಾಷೆಗೆ ಸಂಬಂಧಪಟ್ಟ ವ್ಯಾಕರಣ ಬದ್ಧವಾಗಿ ಮಾತನಾಡುತ್ತಾರೆ. ಆ ಮಾತುಗಳ ರಚನೆ ಮತ್ತು ನಿಯಮಗಳ ಬಗ್ಗೆ ಕೇಳಿದರೆ ವಿವರಿಸಲು ಸಾಧ್ಯವಾಗದಿದ್ದರೂ ಅವರಲ್ಲಿ ಸಹಜವಾದ ಅವರ ಭಾಷೆಯ ಸಾಮರ್ಥ್ಯವಿರುತ್ತದೆ. ಇಲ್ಲಿ ಮಗು ಕೇವಲ ಒಂದು ಅಥವಾ ಎರಡೇ ಪದಗಳನ್ನು ಉಚ್ಚರಿಸಿದರೂ ಅವು ಇಡೀ ವಾಕ್ಯವನ್ನು ಪ್ರತಿನಿಧಿಸುವಂತಿರುತ್ತವೆ. ಅಲ್ಲದೆ ಇದರಲ್ಲಿ ಮಕ್ಕಳಲ್ಲಿ ವಾಕ್ಯದ ರಚನೆಯ ನಿಯಮಗಳು ಯಾವ ಯಾವ ಕ್ರಮದಲ್ಲಿ ಬರುತ್ತವೆ. ನಾಮಪದ, ಕ್ರಿಯಾಪದ, ಸರ್ವನಾಮ, ವಿಶೇಷಣಗಳು ಬರುವ ಕಡೆಗಳಲ್ಲಿ ಬರುತ್ತವೆ ಇಲ್ಲವೆ ಎಂಬುದನ್ನು ಗಮನಿಸುತ್ತಾ, ಇವರ ಅಧ್ಯಯನಕ್ಕೆ ೧೮ ರಿಂದ ೨೭ ತಿಂಗಳ ವಯೋಮಿತಿಯ ಮಕ್ಕಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಮಾಡಿದ್ದಾರೆ. ಇದರಿಂದ ಮಕ್ಕಳಲ್ಲಿರುವಂತಹ ತೊಂದರೆಗಳನ್ನು ತಿಳಿಯಲು ಸಹಾಯಕವಾಗುತ್ತದೆ. ಮತ್ತು ಶಿಕ್ಷಣ, ವೈದ್ಯಕೀಯ ಹಾಗೂ ಭಾಷಾ ಕ್ಷೇತ್ರದ ಅಧ್ಯಯನವನ್ನು ಸಹಾಯಕವಾಗುತ್ತದೆ ಎನ್ನಬಹುದು.

* ಗಿರಿಜಮ್ಮ ಎಚ್. ಇವರು 'ಮಕ್ಕಳ ಮಾನಸ ಲೋಕ: ಒಂದು ಅಧ್ಯಯನ' ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಬಾಲ್ಯವು ಮಾನವ ಜನ್ಮದ ಅತಿ ಮುಖ್ಯವಾದ ಹಂತ. ಇಡೀ ಜೀವನದ ಭವಿಷ್ಯದ ಬಾಲ್ಯದ ಈ ಬುನಾದಿಯ ಮೇಲೆ ನಿಂತಿರುತ್ತದೆ. ಪ್ರಸಿದ್ಧ ಮನೋವಿಜ್ಞಾನಿಗಳಾದ ಸಿಗ್ಮಂಡ್ ಫ್ರಾಯ್ಡ್, ಆಡ್ಲೆರ್ ಮತ್ತು ಜಾರ್ಜ್

ನ್ಯೂಮನ್ ಮೊದಲಾದವರ ಸಿದ್ಧಾಂತಗಳು ಈ ಮಾತನ್ನು ಒತ್ತಿ ಹೇಳಿದ್ದಾರೆ. ಬಾಲ್ಯದ ಬಗ್ಗೆ, ಮಗುವಿನ ಬೆಳವಣಿಗೆಯ ಬಗ್ಗೆ, ತಂದೆ ತಾಯಿಗಳು, ಪೋಷಕರು ಹಾಗೂ ಶಿಕ್ಷಕರು ಹೆಚ್ಚು ತಿಳಿದಿರಬೇಕು. ಬಾಲ್ಯದ ಎಳೆಯ ಚಿಗುರು ಉತ್ತಮವಾಗಿ ಬೆಳೆದು ಮರವಾಗಿ ನಿಲ್ಲಲು ಇವರೆಲ್ಲರ ಪ್ರೋತ್ಸಾಹ, ರಕ್ಷಣೆ ಅತ್ಯಗತ್ಯವೆಂದಿದ್ದಾರೆ.

ಈ ಅಧ್ಯಯನದ ಗುರಿ ಸತ್ಯ ಶೋಧನೆ ಸತ್ಯವು ಸಾರ್ವತ್ರಿಕವಾಗಿದ್ದು ಎಲ್ಲರೂ ಒಪ್ಪಿಕೊಳ್ಳುವಂತಿರಬೇಕು. ವಿಜ್ಞಾನವು ವಸ್ತುನಿಷ್ಠವಾಗಿದ್ದು, ಕೇವಲ ಊಹೆ, ವಾದ, ನಂಬಿಕೆ ಮೊದಲಾದ ಅಂಧಾನುಕರಣೆಗಳಿಂದ ಆಧಾರಿತವಾಗಿರುವ ವಿಷಯಗಳನ್ನು ಒಪ್ಪಿಕೊಳ್ಳುವುದಿಲ್ಲ. ಆದುದರಿಂದ ಮನೋವಿಜ್ಞಾನ ಆದಷ್ಟು ನಿಖರವಾದ ವಾಸ್ತವ ಅಂಶಗಳ ಪರಿಚಯ ಮಾಡಿಕೊಳ್ಳಲು ತನ್ನದೇ ಆದ ಕೆಲವು ವಿಧಾನಗಳನ್ನು ಅಳವಡಿಸಿಕೊಂಡಿದೆ. ಅವು: ಅವಲೋಕನ ಪದ್ಧತಿ (Observation method), ಅಂತರಾವಲೋಕನ ಪದ್ಧತಿ (Introspection method), ಪ್ರಾಯೋಗಿಕ ಪದ್ಧತಿ (Experimental method), ಚಿಕಿತ್ಸಕ ಪದ್ಧತಿ (Clinical method), ವಿಭೇದಾತ್ಮಕ ಪದ್ಧತಿ (Differental method), ಕ್ಷೇತ್ರ ಸಂಶೋಧನಾ ಪದ್ಧತಿ (Field investigation method), ವಿಕಾಸ ಪದ್ಧತಿ (Development method) ಮತ್ತು ವ್ಯಕ್ತಿ ಅಧ್ಯಯನ ಪದ್ಧತಿ (Case study method) ಹೀಗೆ ಈ ಮೇಲಿನ ವಿಧಾನಗಳನ್ನು ಬಳಸಿ ಮಕ್ಕಳ ಮನಸ್ಸಿನ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೨.೨. ಎಂ.ಫಿಲ್. ಪ್ರಬಂಧಗಳು

* ಬಸವರಾಜ ಕೋಡಗುಂಟಿರವರು 'ಮಕ್ಕಳ ಭಾಷೆ ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ಎಂ.ಫಿಲ್. ಪದವಿಗಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ಮಕ್ಕಳ ಭಾಷೆಯ ವಿಕಾಸದ ಹಂತಗಳು ಹೇಗೆ ಪ್ರಾರಂಭವಾಗುತ್ತವೆ ಎಂಬುದನ್ನು ಸ್ಪಷ್ಟ ಉದಾಹರಣೆಗಳನ್ನು ನೀಡುವುದರ ಮೂಲಕ ಚರ್ಚಿಸಿದ್ದಾರೆ. ಇಲ್ಲಿ ಅಲ್ಪಪ್ರಾಣ, ಮಹಾಪ್ರಾಣ, ಹ್ರಸ್ವಸ್ವರ, ದೀರ್ಘಸ್ವರಗಳು, ವ್ಯಂಜನಗಳ ಬಗ್ಗೆ ತಿಳುವಳಿಕೆ ಇದ್ದು ಆ ಮಕ್ಕಳು ಪದಗಳನ್ನು ಬಳಸುವಾಗ ಆಗುವ ವ್ಯತ್ಯಾಸಗಳನ್ನು ವಿವರಿಸುತ್ತಾರೆ. ಮಹಾಪ್ರಾಣವಾಗಿ ಪಠ್ಯಪುಸ್ತಕದಲ್ಲಿ ಬಂದಿರುವ ಪದಗಳನ್ನು ಮಕ್ಕಳು ಹೇಗೆ ಉಚ್ಚಾರ ಮಾಡುತ್ತಾರೆ ಎಂಬುದನ್ನು ಚರ್ಚೆಯ ಮುಖಾಂತರ ವಿವರಿಸಿದ್ದಾರೆ.

* ಸೌಮ್ಯ ಸಿ.ಆರ್. ಅವರು ಭಾಷೆ, 'ಸ್ವರೂಪ–ವ್ಯಾಪ್ತಿ' ಎಂಬ ವಿಷಯವನ್ನು ಕುರಿತು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ್ದಾರೆ. ಇದರಲ್ಲಿ 'ಭಾಷೆಯ ರೂಪಗಳನ್ನು' ಪರಿಚಯಿಸುತ್ತಾ, ಅದರಲ್ಲಿ ವ್ಯಕ್ತಿ ಭಾಷೆ, ಉಪಭಾಷೆ ಮತ್ತು ಪ್ರಮಾಣ ಭಾಷೆ ಈ ಮೂರು ರೂಪಗಳಲ್ಲಿ – ಒಬ್ಬ ವ್ಯಕ್ತಿಯ ಸಮಯದ ಮಾತಿನ ಒಟ್ಟು ಮೊತ್ತವನ್ನು ವ್ಯಕ್ತಿ ಭಾಷೆ ಎಂದು

ಕರೆದು, ಮಾನವನ ವಯಸ್ಸಿಗೆ ಅನುಗುಣವಾಗಿ ವ್ಯಕ್ತಿ ಭಾಷೆಯು ತನ್ನ ಸ್ವರೂಪದಲ್ಲಿ ವ್ಯತ್ಯಾಸವಾಗುವುದು ಸಹಜ. ಈ ನಿಟ್ಟಿನಲ್ಲಿ ಮಾನವಶಾಸ್ತ್ರಜ್ಞರು ಭಾಷಾ ವಿಜ್ಞಾನಿಗಳು ಮನುಷ್ಯನ ಅವಸ್ಥೆಗಳಿಗೆ ಸಂಬಂಧಿಸಿದ ಹಾಗೇ ವ್ಯಕ್ತಿ ಭಾಷೆಯನ್ನು ಮೂರು ರೀತಿಯಲ್ಲಿ ವಿಭಾಗಿಸಿದ್ದಾರೆ. ಇದರಲ್ಲಿ ಮೊದಲು 'ಬಾಲ ಭಾಷೆ'. ಇದರಲ್ಲಿ ವ್ಯಕ್ತಿ ಭಾಷೆಯ ಮೊದಲ ಹಂತವೇ ಬಾಲಭಾಷೆ. ಭಾಷೆಯ ಉಗಮಕ್ಕೆ ತೊದಲ್ನುಡಿಯೂ ಒಂದು ಕಾರಣವಿರಬಹುದು ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಾಲ ಭಾಷೆಯ ಧ್ವನಿ ಮತ್ತು ಶಬ್ದಗಳನ್ನು ಪ್ರೌಢ ಭಾಷೆಯ ಧ್ವನಿ ಮತ್ತು ಶಬ್ದಗಳನ್ನು ಪರಸ್ಪರ ಹೋಲಿಸಿದಾಗ ಅವುಗಳಲ್ಲಿ ಸಾಕಷ್ಟು ವ್ಯತ್ಯಾಸ ಇರುವುದು ಕಂಡುಬರುತ್ತದೆ. ಭಾಷೆಯನ್ನು ಕುರಿತು ಜಗತ್ತಿನಾದ್ಯಂತ ಬೇರೆ ಬೇರೆ ವಿದ್ವಾಂಸರು ಆಳವಾಗಿ ಪರಿಶೀಲಿಸಿ ಹೊಸ ಹೊಸ ವಿಚಾರಗಳನ್ನು ಹೊರಹಾಕಿದ್ದಾರೆ. ವ್ಯಕ್ತಿ ಭಾಷೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ತಿಳಿಯಲು ಪ್ರಯತ್ನಿಸಿದವರಲ್ಲಿ ಬಿ.ಸಿ. ಇರ್ವಿನ್, ಮೆಕಾರ್ಥಿ, ವಾಟ್, ಲಿಯೋಪೋಲ್ಡ್, ಫರ್ಗುಸೆನ್, ಯಾಕೂಬ್‌ಸನ್, ಕೆಲಾಗ್, ಜೇಕಬಾಸನ್, ಸಿ.ಎಫ್. ಹಾಕೆಟ್ ಮುಂತಾದವರು ಮುಖ್ಯರೆನಿಸಿ ಕೊಂಡಿದ್ದಾರೆ. ಇವರುಗಳೆಲ್ಲಾ ಇದನ್ನು ಬಾಲಾ ಭಾಷಾ ವಿಜ್ಞಾನ ಎಂದಿದ್ದಾರೆ.

ಮಗುವಿನ ವಾಕ್‌ಶಕ್ತಿಯು ಅಳುವಿನಿಂದ ಆರಂಭವಾಗಿ ಮಗು ಬೆಳೆದಂತೆಲ್ಲಾ ಅದರ ಅಗತ್ಯತೆಗೆ ತಕ್ಕಂತೆ ಅದರ ಅಳುವಿನಲ್ಲಿ ವೈವಿಧ್ಯತೆ ತೋರಿಬರುತ್ತದೆ. ಅಳುವಿನ ವೈವಿಧ್ಯತೆಯು ಸಂವಹನ ಮಾಧ್ಯಮವಾಗಿರುತ್ತದೆ. ಅನಂತರ ಮಗು ಕೆಲವು ಆಂಗಿಕ ಸಂಕೇತಗಳನ್ನು ಕಲಿಯುತ್ತದೆ. ಮುಂದೆ ಈ ಸಂಕೇತವನ್ನು ಮಗುವಿನ ದಿನನಿತ್ಯದ ಭಾಷೆಯಾಗಿ ಪರಿಣಮಿಸುತ್ತದೆ. ಭಾಷೆಯು ಅನುಕರಣೆಯಿಂದ ಲಭಿಸಿರುವಂತಹದ್ದು. ಮಗುವು ಸ್ವ ಪ್ರಯತ್ನ ಪೂರ್ವಕವಾಗಿ ಭಾಷೆಯನ್ನು ಕಲಿಯುತ್ತದೆ. ಇದರಲ್ಲಿ ಸ್ವರ–ವ್ಯಂಜನ, ಘೋಷ–ಅಘೋಷ, ಹ್ರಸ್ವ–ದೀರ್ಘ ಧ್ವನಿಗಳು ಇದ್ದರೂ ಅದನ್ನ ಗುರುತಿಸಲು ಕಷ್ಟವಾಗುತ್ತದೆ. ಕಾಲಾನಂತರದಲ್ಲಿ ಈ ಧ್ವನಿಗಳನ್ನು ಅವುಗಳಿಂದಾದ ಪದಗಳನ್ನು ಗುರುತಿಸಬಹುದು. ವ್ಯಂಜನಗಳಲ್ಲಿ ಅನುನಾಸಿಕ ವ್ಯಂಜನಗಳು ಸಾಮಾನ್ಯವಾಗಿ ಹೆಚ್ಚಿರುತ್ತವೆ. ಅನುನಾಸಿಕಗಳ ಉಚ್ಚಾರ ಮಕ್ಕಳಲ್ಲಿ ಅಷ್ಟು ಸ್ಪಷ್ಟವಾಗಿರುವುದಿಲ್ಲ. ಹಾಗೆಯೇ ಸಂಘರ್ಷ, ಪಾರ್ಶ್ವಿಕ ಮೊದಲಾದ ಧ್ವನಿಗಳು ಮಗುವಿನ ಧ್ವನ್ಯಾಂಗಗಳು ಬೆಳೆದಂತೆ ಉಚ್ಚಾರದಲ್ಲಿ ಸೇರಿಕೊಳ್ಳುತ್ತವೆ.

ಆರಂಭದಲ್ಲಿ ಧ್ವನಿ, ಶಬ್ದ, ವಾಕ್ಯ ಮತ್ತು ಅರ್ಥ ಇವುಗಳನ್ನು ನಿಯಂತ್ರಿಸುತ್ತಿರುವ ವ್ಯಾಕರಣ ಒಂದಿದೆ ಎಂಬುದು ಮಗುವಿಗೆ ತಿಳಿದಿರುವುದಿಲ್ಲ. ಶಿಕ್ಷಣದ ಮೂಲಕ ಬುದ್ಧಿ ಬೆಳೆದಂತೆ ಮಗುವಿಗೆ ಈ ಅರಿವು ಮೂಡುತ್ತದೆ. ಮಗು ತನ್ನ ಗ್ರಹಣಶಕ್ತಿಗೆ ಅನುಗುಣವಾಗಿ ಭಾಷೆಯನ್ನು ಬಳಸಲಾರಂಭಿಸುತ್ತದೆ. ಉದಾ. ಕಾಗೆ, ಕಾಕಾ, ಕೋಳಿ, ಕೋಕೋ, ನೀರು–ಜಿಜ್ಜಿ ಇತ್ಯಾದಿ ತನ್ನ ಪರಿಸರದ ವಸ್ತುಗಳು ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ಧ್ವನ್ಯಂಗಗಳ ಸಹಕಾರದಿಂದ ಪದಗಳು ಬಳಕೆಯಾಗುತ್ತವೆ. ಬಾಲ್ಯಾವಸ್ಥೆಯಲ್ಲಿ ಮಕ್ಕಳಲ್ಲಿ ಕ್ರಿಯಾಪದಗಳಿಗಿಂತ

ನಾಮಪದಗಳ ಬಳಕೆ ಕಂಡುಬರುತ್ತದೆ ಎನ್ನುತ್ತಾರೆ. ಮಗು ಬಾಲ್ಯಾವಸ್ಥೆಯನ್ನು ತೊರೆದು, ಪ್ರೌಢಾವಸ್ಥೆಗೆ ಕಾಲಿಟ್ಟಾಗ ಮಕ್ಕಳು ಬಳಸುವ ಭಾಷೆಯು ಪ್ರೌಢವಾಗಿರುತ್ತದೆ. ಇಲ್ಲಿ ವ್ಯಕ್ತಿ ಭಾಷೆಯನ್ನು ಪರಿಪಕ್ವವಾಗಿ ಕಲಿತು, ಸಮರ್ಪಕವಾಗಿ ಬೆಳೆಸುವ ಹಂತ ಇದಾಗಿರುತ್ತದೆ ಎನ್ನುತ್ತಾರೆ.

* ಗುರುರಾಜ ಜಿ. ಮೋಡಿದಾರ ಎಂಬುವವರು 'ಕಂಚ್ಯಾಣಿಯವರ ಶಿಶುಕಾವ್ಯ' ಎಂಬ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಕ್ಕೆ ಸಾದರಪಡಿಸಿದ್ದಾರೆ. ಇದರಲ್ಲಿ 'ಅಜ್ಜನ ಹಾಡಿನ ಅಜ್ಜ' ಎಂದು ಹೆಸರಾದ ಕಂಚ್ಯಾಣಿ ಶರಣಪ್ಪ ಎಂಬ ಮುದ್ದು ಭಾಷೆಯ ಮುಗ್ಧ ಮನಸ್ಸಿನ ಮಕ್ಕಳ ಕವಿಯ ಜೀವನ ಚರಿತ್ರೆಯನ್ನೇ ಕಟ್ಟಿಕೊಟ್ಟಿರುವುದನ್ನು ಕಾಣುತ್ತೇವೆ. ಹಾಗೂ ಕಂಚ್ಯಾಣಿ ಶರಣಪ್ಪನವರ ಬದುಕು ಮತ್ತು ಕಾವ್ಯ, ಕಾವ್ಯವಸ್ತು, ಆಶಯ ಹಾಗೂ ಕಾವ್ಯ ವಿಶ್ಲೇಷಣೆ ಇದೆ. ಈ ವಿಶ್ಲೇಷಣೆಯಲ್ಲಿ ಕಾವ್ಯ ಬದುಕಿನ ಭಾವತರಂಗ, ಅದಕ್ಕೆ ಇಂತಹದ್ದೇ ವಸ್ತು ಇರಬೇಕೆಂಬ ಗೆರೆ ಕೊರೆಯಬಾರದು. ಕವಿ ತನ್ನ ಕಣ್ಣಿಗೆ ಮನಸ್ಸಿಗೆ ಮೂಡಿದ್ದು, ಕೇಳಿಕೆಯ ಕಲ್ಪನೆಯಿಂದ ಚಿತ್ರಿತವಾದ ಹತ್ತಾರು ವಿಷಯಗಳನ್ನು ಕಾವ್ಯಕ್ಕೆ ವಸ್ತುವಾಗಿಸುತ್ತಾನೆ. ಶಿಶು ಕವಿತೆಗಳಲ್ಲಿ ವಾತ್ಸಲ್ಯಭಾವದ ಕವಿತೆಗಳು, ನೀತಿಯ ಕವಿತೆಗಳು, ನಿಸರ್ಗದ ಕವಿತೆಗಳು, ದೇಶಭಕ್ತರ ಕವಿತೆಗಳು, ಸಾಂಪ್ರದಾಯಿಕ ಕವಿತೆಗಳು, ಪರಿಸರ ಗೀತೆಗಳು, ಸಾಮಾಜಿಕ ಕವಿತೆಗಳು, ವಿಡಂಬನಾತ್ಮಕ ಕವಿತೆಗಳು, ಪಶು–ಪಕ್ಷಿ–ಪ್ರಾಣಿಗಳಿಗೆ ಸಂಬಂಧಿಸಿದ ಕವಿತೆಗಳೆಂದು ವಿಭಾಗಿಸಿ ವಿಶ್ಲೇಷಿಸಿದ್ದಾರೆ. ಅಲ್ಲದೆ ಕಂಚ್ಯಾಣಿಯವರು ತಮ್ಮ ಶಿಶು ಕವಿತೆಗಳಲ್ಲಿ ಕಾವ್ಯ–ಧೋರಣೆಗಳನ್ನು ಅನುಸರಿಸಿ ಅಭಿವ್ಯಕ್ತಗೊಳಿಸಿ ಮಕ್ಕಳಿಗೆ ನೀಡಿ ನಾಡಿನ ಯುವ ಜನರಲ್ಲಿ ಎಚ್ಚರದ ಗಂಟೆಯನ್ನು ಬಾರಿಸಿ ಜಾಗ್ರತೆಯನ್ನು ಮೂಡಿಸಿದ್ದಾರೆ.

'ಮಕ್ಕಳ ಆಟವೇ ಚಂದ, ಮಕ್ಕಳ ನೋಟವೇ ಅಂದ' ಇದು ಕಂಚ್ಯಾಣಿಯವರ ಶಿಶು ಕಾವ್ಯದ ವಸ್ತು ದೇಶಾಭಿಮಾನ ಕವಿತೆಗಳಲ್ಲಿ ಇವರು ಮಕ್ಕಳಲ್ಲಿ ಕ್ರಾಂತಿಯ ಕಿಚ್ಚು ಹಚ್ಚಿ, ಬಡಿದೆಬ್ಬಿಸಿ, ಶೂರ ಸುಭಾಶ್‌ರ ಜಾಗೃತ ಭಾರತ ಕಟ್ಟುವಲ್ಲಿ ಯುವ ಜನತೆಯಲ್ಲಿ ದೇಶಾಭಿಮಾನಿಗಳ ಬದುಕನ್ನು ಚಿತ್ರಿಸಿ ಅಭಿಮಾನವನ್ನು ಮೂಡಿಸಿದ್ದಾರೆ.

ಇನ್ನು ಕಂಚ್ಯಾಣಿಯವರ ಕಥಾ ಸಾಹಿತ್ಯವು ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಜೀವನ ಚರಿತ್ರೆಯನ್ನು ಗಾದೆಯ ರೂಪದಲ್ಲಿ, ಕಥಾರೂಪದಲ್ಲಿ ಹೇಳುವುದರ ಜೊತೆಗೆ ಇನ್ನೊಂದು ಹೊಸತನವನ್ನು ಬೆಳೆಸಿದ್ದಾರೆ. ಅದುವೇ 'ಕಥೆಗಳಲ್ಲಿ ಕಾವ್ಯ ನಿರೂಪಣಾ' ವಿಧಾನವನ್ನು ಇವರ ಪ್ರಮುಖ ಕಥೆಗಳಾದ 'ಗಿಲಿಗಿಲಿ ಗಿಡ್ಡ', 'ತಿಪ್ಪನ ಕಥೆಗಳು', 'ತಿಪ್ಪನ ಮತ್ತಷ್ಟು ಕಥೆಗಳು', 'ಚತುರ ಚಿಣ್ಣರು', 'ಹಕ್ಕಿಯ ಹಾಡು' ಪ್ರಮುಖವಾಗಿವೆ. ಇವರ ಕಥೆಯ ವಸ್ತು ಗ್ರಾಮೀಣ ಪರಿಸರದ ಪಕ್ಷಿ–ಪ್ರಾಣಿಗಳ ವಿಷಯಗಳೇ ಹೆಚ್ಚು.

ಒಟ್ಟಾರೆಯಾಗಿ ಹೇಳುವುದಾದರೆ ಈ ಸಂಪ್ರಬಂಧದಲ್ಲಿ ಕಂಚ್ಯಾಣಿಯವರ ಶಿಶು ಕಾವ್ಯ ಕೃತಿಗಳನ್ನು ಸಮೀಕ್ಷಿಸಲಾಗಿದೆ. ಅವುಗಳ ಗುಣ ವಿಶೇಷತೆಗಳನ್ನು ವಿಶ್ಲೇಷಣೆ ಮಾಡುವುದರೊಂದಿಗೆ ಅವುಗಳ ಮೌಲ್ಯಗಳನ್ನು ತಿಳಿಸಲಾಗಿದೆ. ಮತ್ತು ಕಂಚ್ಯಾಣಿಯವರ ಸರಳವಾದ ಹಾಗೂ ಮಗು ಮನದ ಅಜ್ಜನ ಆತ್ಮೀಯವಾದ ಶೈಲಿಯನ್ನು ಅಳವಡಿಸಿಕೊಂಡು ಕೆಲವು ಗಹನವಾದ ವಿಚಾರಗಳನ್ನು ತಿಳಿಸಿದರು. ತಾವು ನಂಬಿರುವ ಅನುಸರಿಸಿಕೊಂಡು ಬಂದಿರುವ ಜೀವನ ಮೌಲ್ಯಗಳಿಗೆ ಅನುಗುಣವಾಗಿ ವಿಷಯ ವಸ್ತುಗಳನ್ನು ಆಯ್ದು ಕವಿತೆ ರಚಿಸಿದವರು. ಇಂತಹ ಮಹನೀಯರ ಜೀವನವನ್ನು ಕಟ್ಟಿಕೊಡುವಲ್ಲಿ ಈ ಸಂಪ್ರಬಂಧ ಯಶಸ್ವಿಯಾಗಿದೆ.

* ನಾಗರಾಜ ಅವರು 'ಯಾದಗಿರಿ ಜಿಲ್ಲೆಯ ಶಿಶು ಭಾಷಾರೂಪಗಳು' ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಅಧ್ಯಯನವನ್ನು ಕೇವಲ ಯಾದಗಿರಿ ಜಿಲ್ಲೆಗೆ ಸೀಮಿತಗೊಳಿಸಿಕೊಂಡು ಅಲ್ಲಿಯ ಪರಿಸರದ ಶಿಶು ಭಾಷಾ ರೂಪಗಳನ್ನು ಪರಿಚಯಿಸುವುದಾಗಿದೆ. ಅಲ್ಲಿನ ಪರಿಸರದ ಹಲವು ಭಾಷಾ ಪ್ರಭಾವದಲ್ಲಿರುವ ಶಿಶುಭಾಷಾ ರೂಪಗಳನ್ನು ಅಧ್ಯಯನ ಮಾಡಿರುತ್ತಾರೆ. ಇದಕ್ಕೆ ಮೂಲ ಆಕರ ಸಾಮಗ್ರಿ ಕ್ಷೇತ್ರಕಾರ್ಯವೇ ಆಗಿರುತ್ತದೆ. ಹಾಗೂ ಮಗು ಹುಟ್ಟಿದಾಗಿನಿಂದ ಹಂತಹಂತವಾಗಿ ಭಾಷಿಕ ರೂಪಗಳನ್ನು ಕಲಿತುಕೊಳ್ಳುವ ಮತ್ತು ಬಳಸುವ ಕ್ರಮಗಳನ್ನು ಪರಿಚಯಿಸಲಾಗಿದೆ. ಜೊತೆಗೆ ಶಿಶುಭಾಷಾ ರೂಪಗಳನ್ನು ರಚನೆಗನುಗುಣವಾಗಿ ವರ್ಗೀಕರಿಸಲಾಗಿದೆ. ಮತ್ತು ಅವುಗಳಲ್ಲಾದ ಭಾಷಿಕ ಬದಲಾವಣೆಗಳನ್ನು ವಿವರಿಸಲಾಗಿ, ಶಿಶುಭಾಷಾ ರೂಪಗಳಲ್ಲಿ ಸಂಕ್ಷಿಪ್ತ ಭಾಷಿಕ ಬದಲಾವಣೆ, ರಾಚನಿಕ ವ್ಯತ್ಯಾಸಗಳನ್ನು ಕಂಡುಕೊಳ್ಳಲಾಗಿದೆ. ಜೊತೆಗೆ ಯಾದಗಿರಿ ಪರಿಸರದ ಭಾಷಿಕರ ಸಾಮಾಜಿಕ ಅಂತಸ್ಥಿನ ಮೇಲೆ ಭಾಷಿಕ ರೂಪಗಳಲ್ಲಿಯೂ ಸಾಮಾಜಿಕ ವ್ಯತ್ಯಾಸಗಳನ್ನು ಗುರುತಿಸಲಾಗಿದೆ.

ಜೊತೆಗೆ ಇಲ್ಲಿ ಶಿಶು ಭಾಷಾ ರೂಪಗಳನ್ನು ಗುರುತಿಸುವಾಗ ತಾಯಿಯೇ ಮಗುವಿನ ಮೊದಲ ಗುರು ಮಕ್ಕಳ ಭಾಷಾ ಕಲಿಕೆಯಲ್ಲಿ ತಾಯಿಯ ಪಾತ್ರ ಮಹತ್ವದಾಗಿರುತ್ತದೆ. ಪ್ರತಿಯೊಂದಕ್ಕೂ ಮಗು ತಾಯಿಯನ್ನೇ ಅವಲಂಬಿಸಿರುತ್ತದೆ. ಹೀಗಾಗಿ ಮಗುವಿಗಾಗಿ ರೂಪಗೊಳ್ಳುವ ಹೆಚ್ಚಿನ ಸಂಗತಿಗಳಿಗೆ ತಾಯಿಯೇ ಕಾರಣಳಾಗಿರುತ್ತಾಳೆ. ಹಾಗೆಯೇ ಭಾಷಿಕ ರೂಪಗಳನ್ನು ಮಗುವಿಗಾಗಿ ಕಟ್ಟುವಲ್ಲಿ ತಾಯಿಯ ಪಾತ್ರ ಮಹತ್ವದ್ದಾಗಿರುತ್ತದೆ. ತಾಯಿ ಮಗುವಿಗೆ ಭಾಷೆ ಕಲಿಸುವಾಗ ಭಾಷಿಕ ರೂಪಗಳನ್ನು ಸರಳಗೊಳಿಸಿ ಮಾತನಾಡುತ್ತಾಳೆ. ಒಟ್ಟಿನಲ್ಲಿ ಮಗುವಿನೊಂದಿಗೆ ಒಂದು ನಿರ್ದಿಷ್ಟ ರೂಪಗಳನ್ನು ಮಕ್ಕಳಿಗಾಗಿ ಬೆಳೆಸುವಲ್ಲಿ ತಾಯಿಯೇ ಮೊದಲು ಮತ್ತು ಮಗುವಿಗಾಗಿ ತಾಯಿಯ ಸಂಬಂಧಿಗಳು ಹಾಗೂ ಇತರರು ಶಿಶು ಭಾಷಾರೂಪವನ್ನು ಮುಖ್ಯವಾಗಿ ಕೆಲವು ಸಂದರ್ಭಗಳಲ್ಲಿ ಅಂದರೆ ಮಗು ಊಟ ಮಾಡುವಾಗ, ಮಗುವನ್ನು ಮಲಗಿಸುವಾಗ, ಮಗುವಿನ ಸ್ನಾನ ಮಾಡಿಸುವಾಗ, ಮಗುವನ್ನು ಆಟ ಆಡಿಸುವಾಗ, ಮಕ್ಕಳನ್ನು ಹೆದರಿಸುವಾಗ,

ಮಕ್ಕಳ ಉಡುಗೆ-ತೊಡುಗೆ ಹಾಕುವಾಗ, ಮಗುವಿನ ಸಂಬಂಧಿಸಿದ ಆಚರಣೆಗಳನ್ನು ಮಾಡುವಾಗ, ಮಗುವು ಭಾಷಾರೂಪಗಳನ್ನು ಕಲಿಯಲು ಸಾಧ್ಯವಾಗುತ್ತದೆ.

ಶಿಶು ಭಾಷೆಯ ಭಾಷಾ ರೂಪಗಳ ರಚನೆಯನ್ನಾಧರಿಸಿ ಒಂದಕ್ಷರ, ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ ರೂಪಗಳ ರಾಚನಿಕ ವರ್ಗೀಕರಣ ಮಾಡಲಾಗಿದೆ. ಈ ರೂಪಗಳಲ್ಲಿ ಎರಡಕ್ಷರ ರೂಪಗಳು ಹೆಚ್ಚಾಗಿ ಕಂಡುಬರುತ್ತವೆ. ಒಂದು ಭಾಷೆಯ ನಿಜವಾದ ಅಂತಸತ್ವ ತಿಳಿದುಕೊಳ್ಳಬೇಕೆಂದರೆ ಆ ಭಾಷೆಯ ಆಂತರಿಕ ರಚನೆಯನ್ನು ಅರಿತುಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಆ ಮೂಲಕ ಭಾಷೆಯ ನಿಜರೂಪ ತಿಳಿಯಲು ಸಾಧ್ಯ. ಮತ್ತು ಶಿಶು ಭಾಷಾ ರೂಪಗಳಲ್ಲಿನ ಧ್ವನಿ, ಧ್ವನಿಮಾ, ಆಕೃತಿಮಾತ್ಮಕ ಸ್ವರೂಪವನ್ನು ಪರಿಚಯಿಸುತ್ತದೆ.

* ಸಂಗೀತ ಪಿ. ಇವರು 'ಕುವೆಂಪು ಮಕ್ಕಳ ಕೃತಿಗಳಲ್ಲಿ ಮಾನವೀಯ ಮೌಲ್ಯಗಳ ಶೋಧ' ಎಂಬ ಎಂ.ಫಿಲ್. ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ್ದಾರೆ. ಈ ಸಂಪ್ರಬಂಧದಲ್ಲಿ ಕುವೆಂಪು ಅವರು ಮಕ್ಕಳಿಗಾಗಿ ಬರೆದ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳ ಸ್ವರೂಪವನ್ನು ಗ್ರಹಿಸಿ ಅವರ ವಿವಿಧ ನೀತಿಗಳನ್ನು ವಿಶ್ಲೇಷಿಸುತ್ತಾರೆ. ಮಕ್ಕಳಿಗಾಗಿ ಬರೆದ ಸಾಹಿತ್ಯದ ಹಿಂದಿರುವ ಉದ್ದೇಶವೇನು? ಮಕ್ಕಳ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಮೌಲ್ಯಗಳು ಯಾವುವು? ಎನ್ನುತ್ತಾ ಮಕ್ಕಳ ಸಾಹಿತ್ಯ ಬಾಲ್ಯದಲ್ಲಿ ತಮ್ಮ ಮೇಲೆ ಬೀರಿದ ಪ್ರಭಾವವನ್ನು ಕುರಿತು ಕೆಲವು ಸಾಧಕರ ಅನುಭವವನ್ನು ಪರಿಚಯಿಸಿದ್ದಾರೆ. ಮುಖ್ಯವಾಗಿ ಈ ಸಂಪ್ರಬಂಧದಲ್ಲಿ ಕುವೆಂಪು ಅವರು ರಚಿಸಿದ ಮಕ್ಕಳ ಸಾಹಿತ್ಯವನ್ನು ಅಂದರೆ ಕನ್ನಡ ವಿಮರ್ಶೆ ಗುರುತಿಸಿರುವ ಈ ಕೆಳಗಿನ ಒಂಬತ್ತು ಕೃತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಅವು 'ಅಮಲಿನ ಕಥೆ', 'ಬೊಮ್ಮನಹಳ್ಳಿ ಕಿಂದರಿಜೋಗಿ', 'ಮೇಘಪುರ', 'ನನ್ನ ಮನೆ', 'ಮರಿವಿಜ್ಞಾನಿ', 'ಮೋಡಣ್ಣನ ತಮ್ಮ', 'ನರಿಗಳಿಗೆಕೆ ಕೋಡಿಲ್ಲ', 'ನನ್ನ ಗೋಪಾಲ' ಮತ್ತು 'ಹಾಳೂರು' ಈ ಕೃತಿಗಳನ್ನು ಇಟ್ಟುಕೊಂಡು ಅಧ್ಯಯನವನ್ನು ಮಾಡಲಾಗಿದೆ.

* ಸತೀಶ ಜಿ.ಸಿ. ಅವರು 'ಕುವೆಂಪು ಕಾದಂಬರಿಗಳಲ್ಲಿ ಬಾಲಪ್ರಪಂಚ' ಎಂಬ ಸಂಪ್ರಬಂಧವನ್ನು ಎಂ.ಫಿಲ್.ಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಪ್ರಬಂಧದಲ್ಲಿ ಮಕ್ಕಳಿಗಾಗಿ ಅನೇಕ ಕಥೆಗಳನ್ನು, ಕಥನ ಕವನಗಳನ್ನು ಮತ್ತು ನಾಟಕಗಳನ್ನು ಬರೆದ ಕುವೆಂಪುರವರ ಮೇರು ಕಾದಂಬರಿಗಳಾದ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಬರುವ ಪ್ರಮುಖ ಬಾಲ ಪಾತ್ರಗಳಾದ ವಾಸು, ಲಕ್ಷ್ಮಿ, ಸೀತೆ, ಗಂಗ, ಚಿನ್ನಮ್ಮ, ಚಿನ್ನಯ್ಯ, ಹೂವಯ್ಯ ರಾಮಯ್ಯ, ಪುಟ್ಟ, ಮುಕುಂದಯ್ಯ, ಚೆಲುವಯ್ಯ, ಧರ್ಮ, ಪುಟ್ಟಿ ಮೊದಲಾದ ಮಕ್ಕಳ ಪಾತ್ರಗಳನ್ನು ತಮ್ಮ ಕಾದಂಬರಿಗಳಲ್ಲಿ ಹೇಗೆ ಅಭಿವ್ಯಕ್ತಪಡಿಸಿದ್ದಾರೆ ಎಂಬುದನ್ನು ಗಮನಿಸಲಾಗಿದೆ.

೨.೩. ಕೃತಿಗಳು

೧. ಡಿ. ಪಾಂಡುರಂಗಬಾಬು ಅವರ 'ನುಡಿನೋಟ' (೨೦೦೫) ಎಂಬ ಸಂಶೋಧನಾ ಲೇಖನಗಳ ಕಿರುಹೊತ್ತಿಗೆ ಈ ಪುಸ್ತಕದಲ್ಲಿರುವ ಪ್ರತಿಯೊಂದು ಲೇಖನವು ಅಧ್ಯಯನಕ್ಕೆ ಉಪಯುಕ್ತವಾಗಿದೆ. ಇದೊಂದು ಸಂಶೋಧನಾ ಕೃತಿ. ಇದರಲ್ಲಿ ಭಾಷಾತಂತ್ರಜ್ಞಾನ ಮತ್ತು ಸಮಾಜ, ಅಲೆಮಾರಿಗಳು ಮತ್ತು ಭಾಷೆ, ಒಂದು ಟಿಪ್ಪಣಿ, ಣೇ, ಮೀ, ತಿ, ಅಂದರೆ... ಮಂತ್ರವಿದ್ಯೆ ಮತ್ತು ಭಾಷೆ, ಕನ್ನಡದೊಳಗಣ ಇಂಗ್ಲೀಷ್ ಭಾಷಾಬೋಧನೆ ಮತ್ತು ಕಲಿಕೆ ಸಮಸ್ಯೆಯ ಸ್ವರೂಪ, ಕನ್ನಡ ಪದಕೋಶ, ಬೆಳವಣಿಗೆಯ ಸ್ವರೂಪ, ಒಂದು ಇಣುಕು ಹೀಗೆ ಒಟ್ಟು ಹದಿಮೂರು ಲೇಖನಗಳ ಪಠ್ಯವಾಗಿದೆ. ಈ ಕೃತಿಯು ಸರಳವಾಗಿ ಭಾಷೆಯನ್ನು ವಿಶ್ಲೇಷಣೆ ಮಾಡುವುದು ಹೇಗೆ ಎಂಬುದನ್ನು ತಿಳಿಸಿಕೊಡುವ ಅಪರೂಪದ ಕೃತಿಯಾಗಿದೆ. ಆದ್ದರಿಂದ ಈ ಕೃತಿಯು ಭಾಷೆಯ ಸಾಮಾಜಿಕ ವಿನ್ಯಾಸ ಎಂಬ ಅಧ್ಯಯನಕ್ಕೆ ಮಾದರಿಯಾದ ಕೃತಿಯಾಗಿದೆ.

* ಶಾಂತಿನಾಥ ದೇಸಾಯಿ ಅವರ 'ಸಾಹಿತ್ಯ ಮತ್ತು ಭಾಷೆ' ಎನ್ನುವ ಕೃತಿಯು ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಇದೊಂದು ದತ್ತಿ ಉಪನ್ಯಾಸದಲ್ಲಿ ನಡೆದ ಉಪನ್ಯಾಸವನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಇದರಲ್ಲಿ ಆರು ಪ್ರಮುಖರ ಉಪನ್ಯಾಸಗಳಿವೆ. ಸಾಹಿತ್ಯ ಮತ್ತು ಭಾಷೆ ಎಂಬ ಒಂದು ವಿಶಿಷ್ಟ ಕೃತಿಯು ಸಾಹಿತ್ಯಕ್ಕೂ ಭಾಷೆಗೂ ಇರುವ ನಿಕಟರೂಪದ ಸಂಬಂಧವನ್ನು ಹಾಗೂ ಭಾಷೆಗೂ ಸಾಹಿತ್ಯಕ್ಕೂ ಇರುವ ಅಂತರವನ್ನು ಗುರುತಿಸುತ್ತದೆ. ಅಲ್ಲದೆ ಭಾಷೆ ಹೇಗೆ ಸಾಹಿತ್ಯದಲ್ಲಿ ಪರಿಪೂರ್ಣತೆಯನ್ನು ಕಂಡುಕೊಳ್ಳುತ್ತದೆ ಎನ್ನುವುದನ್ನು ವಿಶ್ಲೇಷಿಸಿದೆ. ಇದು ಭಾಷೆ ಮತ್ತು ಸಾಹಿತ್ಯದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುತ್ತದೆ.

* ಸಿಸು ಸಂಗಮೇಶರವರ 'ಮಕ್ಕಳ ಸಾಹಿತ್ಯ: ನಾನು ಕಂಡಂತೆ' ಎಂಬ ಕೃತಿಯು ಲೇಖನಗಳು ಹಾಗೂ ಪತ್ರಿಕೆಗಳ ಹೇಳಿಕೆಗಳನ್ನೊಳಗೊಂಡ ಸಂಗ್ರಹವಾಗಿದೆ. ಇದು ಕನ್ನಡದಲ್ಲಿ ಮಕ್ಕಳ ಸಾಹಿತ್ಯವನ್ನು ಕಡೆಗಣಿಸುತ್ತಿರುವುದನ್ನು ಟೀಕಿಸುವ ಮತ್ತು ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಇಲ್ಲವೇ? ಹಾಗೂ ಪುಸ್ತಕ ಪ್ರಕಟಣೆಯ ತೊಂದರೆಗಳನ್ನು ಎತ್ತಿಕೊಂಡು 'ಮಕ್ಕಳ ಸಾಹಿತ್ಯ ಪ್ರಕಾಶನದ ಸಮಸ್ಯೆಗಳು', ಪ್ರಾದೇಶಿಕ ಭಾಷೆಗಳ ಸಾಹಿತ್ಯ ಅವಲೋಕನ ಮಾಡುವ ಭಾರತೀಯ ಭಾಷೆಗಳಲ್ಲಿಯ ಬಾಲ ಸಾಹಿತ್ಯದ ಪಕ್ಷಿನೋಟ ಮುಂತಾದ ಲೇಖನಗಳನ್ನು ಒಳಗೊಂಡಿದೆ. ಮತ್ತು ಉತ್ತರ ಭಾರತದ ಅನೇಕ ಲೇಖಕರ ಸಂಪರ್ಕ ಸಿಸು ಸಂಗಮೇಶರ ಜೊತೆಗಿದ್ದುದನ್ನು ಈ ಲೇಖನಗಳಿಂದ ತಿಳಿಯಬಹುದು. ಹರಿದ್ವಾರದ 'ಎನ್.ಕೆ. ಪಾಲಿವಾಲಾ', 'ಸಹರಾನಪುರದ ಇಂದಿರಾಗೌಡ', 'ದಿಲ್ಲಿಯ ಜಯಪ್ರಕಾಶ ಭಾರತಿ', 'ಹರಿಕೃಷ್ಣ ದೇವಸರೆ', 'ಅಲಹಾಬಾದಿನ

ಶಕುಂತಲಾ ಸಿರೋಟಿಯಾ' ಮೊದಲಾದವರ ಪರಿಚಯ ಹಾಗೂ ಹಿಂದಿ ಬಾಲಸಾಹಿತ್ಯದ ಕೆಲವು ಆಯಾಮಗಳು ಇವರಿಗೆ ಸಿಕ್ಕಿದ್ದನ್ನು ನಾವಿಲ್ಲಿ ಕಾಣಬಹುದು.

* ಟಿ.ಎಸ್. ನಾಗರಾಜಶೆಟ್ಟಿ ಅವರ 'ಮಕ್ಕಳ ಸಾಹಿತ್ಯ: ಏಕೆ ಬೇಕು?' ಎಂಬ ಕೃತಿಯು ಕೆಲವು ಅಧ್ಯಾಯಗಳಿರುವ ಲೇಖನಗಳ ಮಾಲೆಯಾಗಿದೆ. ಇದರಲ್ಲಿ ಮಕ್ಕಳ ಸಾಹಿತ್ಯ ಏಕೆ ಬೇಕು? ಮಕ್ಕಳ ಕಾವ್ಯ ಬದಲಾದ ಧೋರಣೆ, ಅನುಪಮಾ ಅವರ ಮಕ್ಕಳ ಸಾಹಿತ್ಯದ ಆಶಯ, ಅಭಿವ್ಯಕ್ತಿ ವಿಧಾನ ಅವರ 'ದಿನಕ್ಕೊಂದು ಕಥೆ' ೩೬೫ ಕಥೆಗಳ ಮಾಲೆಯಾಗಿದ್ದು ಭಾರತದ ಪುರಾಣ-ಇತಿಹಾಸಗಳು, ಪಂಚತಂತ್ರ, ಹಿತೋಪದೇಶ, ಪ್ರಾಚೀನ ಗ್ರೀಕ್‌ನ ಈಸೂಪನ ನೀತಿ ಕಥೆಗಳು, ಪುರಾಣ ಕಥೆಗಳು, ಯುರೋಪಿನ ಗ್ರೀಮ್ ಸಹೋದರರು ಮತ್ತು ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್ಸನ್ ಮತ್ತಿತರ ಕಥೆಗಳಿಂದ ಕೂಡಿವೆ. ಹೀಗೆ ಈ ಎಲ್ಲಾ ಕಥೆಗಳಲ್ಲಿ ಅನುಪಮಾರವರ ಆಶಯ, ಅಭಿವ್ಯಕ್ತಿ ಕ್ರಮಗಳನ್ನು ಗ್ರಹಿಸುವುದಾಗಿದೆ ಮತ್ತು ಇನ್ನೊಂದು ಲೇಖನದಲ್ಲಿ ಮಕ್ಕಳ ಕಾವ್ಯದಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಾದ ಬದಲಾವಣೆಗಳನ್ನು ಗಮನಿಸಲಾಗಿದೆ. ನಂತರದಲ್ಲಿ ಸ್ವಾತಂತ್ರ್ಯೋತ್ತರ ಮಕ್ಕಳ ನಾಟಕಗಳ ಒಂದು ಸಮೀಕ್ಷೆಯನ್ನು ಮಾಡಲಾಗಿದೆ. ಮತ್ತು ಮಕ್ಕಳ ಕಾವ್ಯಗಳಲ್ಲಿನ ಛಂದಸ್ಸು ಹಾಗೂ ಲಯಗಳ ಹೊಸ ಹೊಸ ಸಾಧ್ಯತೆಗಳನ್ನು ಗುರುತಿಸಲಾಗಿದೆ. ಹೀಗೆ ಇವೆಲ್ಲ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಅಧ್ಯಯನಗಳ ಬರವಣಿಗೆಯನ್ನು ನಾವಿಲ್ಲಿ ಕಾಣಬಹುದು.

* ಈಶ್ವರ ಕಮ್ಮಾರ ಅವರು ತಮ್ಮ 'ಮಕ್ಕಳ ಕವನ ಸಾಹಿತ್ಯ' ಎಂಬ ಕೃತಿಯಲ್ಲಿ ಮಕ್ಕಳ ಬರವಣಿಗೆಯಲ್ಲಿ ಆದ ಬದಲಾವಣೆಯ ಒಂದು ಚಿತ್ರಣವನ್ನು ನೀಡುತ್ತಾರೆ. ಹಾಗೂ ಅವರು ಮಕ್ಕಳಿಗೆ ಚೇತೋಹಾರಿಯಾದ, ರುಚಿಕಟ್ಟಾದ ರಚನೆಗಳನ್ನು ಮಾಡುವಲ್ಲಿ ಶಿಕ್ಷಕರು ಮೊದಲಾದ ಬರಹಗಾರರನ್ನು ಕುರಿತು ಚರ್ಚಿಸಿದ್ದಾರೆ.

* ಸಿ.ಪ. ಕಟ್ಟಿಮನಿ ಅವರ 'ಕಂದನ ಕಾವ್ಯ'ದಲ್ಲಿಯ ಕವಿತೆಗಳು ಅತ್ಯಂತ ಸರಳವಾಗಿದ್ದು, ಮಕ್ಕಳ ಸುತ್ತಲೇ ಅರಳಿದ್ದು, ಮಕ್ಕಳೇ ತಮ್ಮ ಸೊಗಸನ್ನು ಹೇಳಿಕೊಳ್ಳುತ್ತಿವೆ ಎಂಬಂತಿವೆ.

* ನಿರುಪಮಾ ಅವರ 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' ಕೃತಿಯು ಕನ್ನಡವೂ ಸೇರಿದಂತೆ ಭಾರತೀಯ ಹಲವು ಭಾಷೆಗಳ ಮಕ್ಕಳ ಸಾಹಿತ್ಯದ ಬೆಳವಣಿಗೆಯನ್ನು ಅವಲೋಕಿಸುತ್ತದೆ. ಇದು ೨೦೦೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರಿಂದ ಪ್ರಕಟವಾಗಿದೆ. ಇದರಲ್ಲಿ ಅಸ್ಸಾಮಿ, ಉರ್ದು, ಒರಿಯಾ, ಕನ್ನಡ, ಕಾಶ್ಮೀರಿ, ಕೊಂಕಣಿ, ತಮಿಳು, ತೆಲುಗು, ಗುಜರಾತಿ, ಪಂಜಾಬಿ, ಮರಾಠಿ, ಮಲಯಾಳಿ, ಸಂಸ್ಕೃತ, ಸಿಂಧಿ, ಹಿಂದಿ, ಇಂಗ್ಲೀಷ್ ಮೊದಲಾದ ಸಂವಿಧಾನದಲ್ಲಿ ಅಂಗೀಕರಿಸಿದ ಭಾಷೆಗಳಲ್ಲಿ ನಡೆದಿರುವ ಬಾಲಸಾಹಿತ್ಯದ ಬೆಳವಣಿಗೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ನಿರುಪಮಾ ಅವರು ಮಾಡಿದ್ದಾರೆ. ಇದರಲ್ಲಿ

ಸುಮಾರು ಐವತ್ತಕ್ಕು ಹೆಚ್ಚು ಪುಟಗಳಲ್ಲಿ ಕನ್ನಡ ಬಾಲಸಾಹಿತ್ಯದ ಬೆಳವಣಿಗೆ, ಪ್ರಾಚೀನತೆಯ ಮೇಲೆ ಕಣ್ಣಾಡಿಸಿ, ಮಕ್ಕಳ ಕಥೆಗಳು, ಮಕ್ಕಳ ಕವನಗಳು, ಮಕ್ಕಳ ನಾಟಕಗಳು ಮೊದಲಾದವುಗಳಾಗಿ ವಿಭಾಗಿಸಿ ವಿವರಿಸಿದ್ದಾರೆ.

* ನಿರುಪಮಾ 'ನಿಮ್ಮ ಮಕ್ಕಳಿಗೆಂತಹ ಸಾಹಿತ್ಯ ಬೇಕು' ಎಂಬ ಕೃತಿಯಲ್ಲಿ ಮಕ್ಕಳಿಗೆ ಎಂತಹ ಸಾಹಿತ್ಯ ನೀಡಬೇಕೆಂಬುದರ ಬಗ್ಗೆ ಸಂಶೋಧನಾತ್ಮಕ ವಿಷಯಗಳನ್ನು ನೀಡಿದ್ದಾರೆ. ಆಧುನಿಕ ನಾಗರಿಕ ಪ್ರಪಂಚದಿಂದ ಮರೆಯಾಗುತ್ತಿರುವ ಅಜ್ಜ ಅಜ್ಜಿಯರ ಕಥೆಗಳ ಉಪಯುಕ್ತತೆಯನ್ನು ಸೊಗಸಾಗಿ ನಿರೂಪಿಸಿರುವುದರ ಜೊತೆಗೆ ಇಂಗ್ಲೀಷ್ ಕಾಮಿಕ್ಸ್‌ಗಳು ಶಿಶು ಸಾಹಿತ್ಯವಾಗಲಾರವು ಎಂಬಂಶವನ್ನು ಅರ್ಥವತ್ತಾಗಿ ವಿವರಿಸುತ್ತಾ, ಮಕ್ಕಳ ಸಾಹಿತ್ಯ ಒಂದೇ ರೀತಿಯಲ್ಲಿರಬಾರದೆಂದು ಅದು ಮಕ್ಕಳ ವಯೋಮಿತಿಗೆ ಅನುಗುಣವಾಗಿರಬೇಕು. ಮತ್ತು ಅದು ಶ್ರವ್ಯ, ದೃಶ್ಯ, ಮೌಖಿಕ ಹಾಗೂ ಪಠ್ಯ ಸಾಹಿತ್ಯಗಳಾಗಿರಬೇಕು ಎನ್ನುತ್ತಾ ಅವುಗಳ ವಿವರಣೆಗಳನ್ನು ಉದಾಹರಣೆಗಳ ಸಮೇತ ವಿವರಿಸಿದ್ದಾರೆ. ಜೊತೆಗೆ ಈ ವಿವಿಧ ವಿಭಾಗಗಳ ಸಾಹಿತ್ಯದ ರಚನೆಯಲ್ಲಿ ಕನ್ನಡದ ಹಿರಿಯ ಸಾಹಿತಿಗಳ ಅಮೂಲ್ಯ ಕೊಡುಗೆಗಳನ್ನು ಪ್ರಶಂಸಿಸುತ್ತ ಮುಂದೆ ಬರಲಿರುವ ಮಕ್ಕಳ ಸಾಹಿತಿಗಳು ಕೈಗೊಳ್ಳಬಹುದಾದ ಕ್ರಮಗಳ ಬಗೆಗೂ ವಿವರಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಮಕ್ಕಳ ಸಾಹಿತ್ಯದ ಬಗ್ಗೆ ಸಂಶೋಧನಾತ್ಮಕವಾದ ಮಾಹಿತಿಯನ್ನು ನೀಡುವ ಒಂದು ಉತ್ತಮ ಕೃತಿ ಇದಾಗಿದೆ.

* ಆನಂದ ಪಾಟೀಲರ ಮಕ್ಕಳ ಸಾಹಿತ್ಯದ ಅಧ್ಯಯನ ಮತ್ತು ವಿಮರ್ಶಾ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ. ಇವರು ಮೊದಲಿನಿಂದಲೂ ಮಕ್ಕಳ ಸಾಹಿತ್ಯದೆಡೆಗೆ ಗಂಭೀರ ಚಿಂತನೆಯನ್ನು ನಡೆಸಿಕೊಂಡು ಬಂದಿರುವರು. ಇವರು ಸುಮಾರು ನಾಲ್ಕು ಕೃತಿಗಳಲ್ಲಿ ತಮ್ಮ ಲೇಖನಗಳನ್ನು ಸಂಕಲಿಸಿದ್ದಾರೆ. ಇವುಗಳಲ್ಲಿ ಕನ್ನಡದ, ಭಾರತೀಯ ಇಂಗ್ಲೀಷ್ ಲೇಖಕರ, ಹಾಗೆಯೇ ಅನೇಕ ವಿದೇಶಿಯ ಲೇಖಕರ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದನ್ನು ಕಾಣುತ್ತೇವೆ. 'ಮಕ್ಕಳ ಸಾಹಿತ್ಯ ಹೀಗೆ ಒಂದಿಷ್ಟು' ವಸಂತ ಪ್ರಕಾಶನ ಬೆಂಗಳೂರು ಇವರಿಂದ ಮುದ್ರಣಗೊಂಡಿದೆ. ಹಾಗೂ 'ಮಕ್ಕಳ ಸಾಹಿತ್ಯ ಖುಷಿ ಕೊಟ್ಟೆವು', 'ಅಲರು', 'ಮುಗುಳು' ಅಭಿನವ ಪ್ರಕಾಶನ ಬೆಂಗಳೂರು ಇವರಿಂದ ಮುದ್ರಣಗೊಂಡಿದೆ. ಇವುಗಳಲ್ಲಿ 'ಅಲರು' ಎಂಬ ಕೃತಿ ಸಂಕಲನದಲ್ಲಿ ಮಕ್ಕಳ ಸಾಹಿತ್ಯದ ಪ್ರತ್ಯೇಕತೆ ಎಂದರೇನು? ಶ್ರೇಷ್ಠತೆ ಹೇಗೆ ಇರುತ್ತದೆ. ಕಥೆಗಳಲ್ಲಿ ವಾಸ್ತವ ಏಕೆ ಬೇಕು, ಸಾಹಿತ್ಯದ ಅಧ್ಯಯನ ಏಕೆ ನಡೆಯಬೇಕು ಎನ್ನುತ್ತಾ, ಸುಮತೀಂದ್ರ ನಾಡಿಗ, ಆರ್.ವಿ. ಭಂಡಾರಿ, ರಾದೇಶ ತೋಳ್ಪಾಡಿ, ಕೆ.ವಿ. ತಿರುಮಲೇಶ ಮುಂತಾದ ಲೇಖಕರನ್ನು ಕುರಿತು ಚರ್ಚಿಸಿ ಅವರ ಬರವಣಿಗೆಯನ್ನು ಪರಿಚಯಿಸಿದ್ದಾರೆ.

ಜಮೈಕಾದ ಕವಿ ಜೇಮ್ಸ್ ಬೆರ್ರಿಯ ವಿಶಿಷ್ಟತೆ ಜೆ.ಕೆ. ಕಾಲಿಂಗ್ ಅವರ ಹ್ಯಾರಿ ಪಾಟರ್

ಮಾಡಿದ ಮೋಡಿ ಏನು? ಸಫ್ದರ್ ಹಸ್ಮಿ ಅವರ ನಾಟಕಗಳು ಯಾಕೆ ಮುಖ್ಯವಾಗುತ್ತವೆ ಎಂದೆಲ್ಲ ಅವಲೋಕಿಸುತ್ತಾರೆ. ಅನ್ಯ ಭಾಷೆಗಳಲ್ಲಿ ನಡೆದಿರುವ ಪ್ರಯೋಗ, ಹಾಗೂ ಅಲ್ಲಿಯ ಗುಣಲಕ್ಷಣಗಳನ್ನು ತಿಳಿಸುವ ಮೂಲಕ ತಮ್ಮ ಕೃತಿಗಳಿಗೆ ಕನ್ನಡಿ ಹಿಡಿದಿದ್ದಾರೆ.

ಆನಂದ ಪಾಟೀಲರ 'ಮುಗುಳು' ಸಂಕಲನವು ಅವರು ಬೇರೆ ಬೇರೆ ಸಂದರ್ಭದಲ್ಲಿ ಬರೆದಿರುವ ಲೇಖನಗಳನ್ನು ಕುರಿತು ವಿಸ್ತರಿಸುತ್ತದೆ. ಇಲ್ಲಿ ಮಕ್ಕಳ ಸಾಹಿತ್ಯ ಕುರಿತು ಹೆಚ್ಚು ಹೆಚ್ಚು ಕೃತಿಗಳು ಬರುತ್ತಿಲ್ಲ ಎನ್ನುವ ಆತಂಕದೊಂದಿಗೆ ತಮ್ಮ ಅನಿಸಿಕೆಗಳನ್ನು ವಿಶ್ಲೇಷಿಸಿದ್ದಾರೆ.

'ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚಿನ ಒಲವುಗಳು' ಈ ಕಿರು ಕೃತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಮಂಟಪ ಮಾಲೆಗೆ ಬರೆದಿದ್ದಾರೆ. ಈ ಸಂಕನಲದಲ್ಲಿ 'ಕನ್ನಡ ಮಕ್ಕಳ ಸಾಹಿತ್ಯ ಇತ್ತೀಚಿನ ಒಲವುಗಳು' ಎಂಬುದು ಈ ಸಂಕಲನದ ಮುಖ್ಯ ಲೇಖನವಾಗಿದೆ. ಇದರಲ್ಲಿ ಹೊಸ ಪ್ರಯೋಗಗಳು ವಸ್ತು ವೈವಿಧ್ಯ ಈ ಕಾಲವನ್ನು ಹೇಗೆ ಭಿನ್ನವಾಗಿಸಿದೆ ನವೋದಯದ ಲೇಖಕರು ಯಾವ ರೀತಿಯಲ್ಲಿ ಮುಖ್ಯರಾಗುತ್ತಾರೆ ಎಂದು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಮಕ್ಕಳ ಪತ್ರಿಕೆಗಳನ್ನು ಕುರಿತು ಲೇಖನ ವಿಸ್ತಾರದ ಚರ್ಚೆಯನ್ನು ಒಳಗೊಂಡಿದೆ. ಅದೇ ರೀತಿ ರಾಜರತ್ನಂ ಅವರನ್ನು ಕುರಿತು ಬರೆದ ಬರಹಗಳು ಆಪ್ತವಾಗಿವೆ.

* ಬಸವರಾಜ ಡೋಣೂರರ 'ಕನ್ನಡ ನಾಟಕ ಮತ್ತು ವಾಸ್ತವತೆ' ಎನ್ನುವ ಕೃತಿಯು ಕನ್ನಡ ನಾಟಕದ ಮೇಲೆ ವಾಸ್ತವತೆ ಹೇಗೆ ಪ್ರಭಾವ ಬೀರಿತು ಎಂಬುದರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಆಧುನಿಕ ಕನ್ನಡ ರಂಗಭೂಮಿ ಕಣ್ತೆರೆದು ಪ್ರೇಕ್ಷಕರನ್ನು ನೋಡಿದ್ದು ವಾಸ್ತವತೆಯ ದೃಷ್ಟಿಕೋನದಿಂದಲೆ, ವಾಸ್ತವಿಕತೆಯ ಕನ್ನಡ ರಂಗಭೂಮಿಗೆ ಪ್ರವೇಶಿಸಿದ್ದು ಕಂಪನಿ ನಾಟಕಗಳ ಮೂಲಕ ಜನರನ್ನು ಗೆಲ್ಲುವ ಉದ್ದೇಶದಿಂದ ನಾಟಕ ಕಂಪನಿಗಳು ವಾಸ್ತವ ಘಟನೆಗಳನ್ನು ಆಧರಿಸಿ ರಚಿಸಿದ ನಾಟಕಗಳನ್ನು ಆಡಿದುದಲ್ಲದೇ ರಂಗ ತಂತ್ರದಲ್ಲೂ, ಅಭಿನಯದಲ್ಲೂ ವಾಸ್ತವತೆಯನ್ನು ತಂದವು. ಆದರೆ ವಾಸ್ತವತೆ ಒಂದು ಸಿದ್ಧಾಂತವಾಗಿ ಸಾಹಿತ್ಯ ಚಳುವಳಿಯಾಗಿ ರೂಪುಗೊಂಡಿದ್ದು ಹವ್ಯಾಸಿ ರಂಗಭೂಮಿಯಿಂದಲೇ ಎನ್ನುತ್ತಾ ವಾಸ್ತವತೆಯ ಇತಿಹಾಸ, ಅನುಕರಣೆ ಮತ್ತು ವಾಸ್ತವತೆ, ವಾಸ್ತವತೆಯ ಸ್ವರೂಪ, ಸಮೂಹ ಮಾಧ್ಯಮಗಳಲ್ಲಿ ವಾಸ್ತವತೆ ಮೊದಲಾದ ವಿಷಯಗಳ ವಿಸ್ತೃತ ವಿವರಣೆಯನ್ನು ಕೊಡಲಾಗಿದೆ. ಕೈಲಾಸಂ ಹಾಗೂ ಶ್ರೀರಂಗ ಇಬ್ಬರೂ ವಾಸ್ತವ ಮಾರ್ಗದ ನಾಟಕಕಾರರು. ಅವರು ಆಯ್ದುಕೊಂಡ ವಸ್ತುಗಳಲ್ಲಿ ವೈವಿಧ್ಯಗಳಿಗೆ ಇವರು ಸಮಕಾಲೀನ ಸಾಮಾಜಿಕ ಬದುಕನ್ನು ಯಥಾವತ್ತಾಗಿ ಚಿತ್ರಿಸುವಲ್ಲಿ ಪಳಗಿದವರು. ಓೀಗೆ ಈ ಕೃತಿಯಲ್ಲಿ ನಮ್ಮ ಕನ್ನಡ ಸಾಹಿತ್ಯ ವಾಸ್ತವತೆಯ ನಾಟಕಗಳು, ನಾಟಕಕಾರರನ್ನು ಕುರಿತು ಚರ್ಚಿಸಲಾಗಿದೆ.

* ಜೆ.ಎ. ಹಡಗಲಿ ಅವರ 'ಕನ್ನಡ ಹವ್ಯಾಸಿ ರಂಗಭೂಮಿ ಒಂದು ಅಧ್ಯಯನ' ಎನ್ನುವ ಕೃತಿಯಲ್ಲಿ "ರಂಗ ಸಂಭಾಷಣೆಯನ್ನು ಅಭ್ಯಾಸ ಮಾಡುವಾಗ ಸಂಭಾಷಣೆಯ ಅಂತರಾರ್ಥ ಗ್ರಹಿಸುವಿಕೆ, ಸಂಭಾಷಣೆಯಲ್ಲಿನ ಶಬ್ದ, ವಾಕ್ಯಗಳ ವಿಂಗಡಣೆ, ಧ್ವನಿಯ ಏರಿಳಿತ, ವಿರಾಮ ಧ್ವನಿಯಲ್ಲಿನ ತಿರುವುಗಳು, ಕೇಳುವುದು ಮತ್ತು ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸೂಕ್ತ" ಎಂಬ ವಿಚಾರಗಳನ್ನು ಎಸ್.ಆರ್. ಮಾಸೂರ ವ್ಯಕ್ತಪಡಿಸಿದ್ದಾರೆ. ಮೇಲಿನ ವಿಷಯ ಪಾತ್ರಧಾರಿಗಳಿಗೂ ಅದರಲ್ಲೂ ನಾಟಕಕಾರನಿಗೆ ಹೆಚ್ಚು ಅನ್ವಯವಾಗುತ್ತದೆ ಎಂಬಂತಹ ವಿಷಯಗಳನ್ನು ಹೇಳುತ್ತಾ, ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ 'ಕನ್ನಡ ಹವ್ಯಾಸಿ ರಂಗಭೂಮಿ' ಒಂದು ಅಧ್ಯಯನ ಕೃತಿ ಬರೆದಿದ್ದಾರೆ. ಅಲ್ಲದೆ ಇದರಲ್ಲಿ ಹವ್ಯಾಸಿ ರಂಗಭೂಮಿ ಬೆಳೆದು ಬಂದ ಹಿನ್ನೆಲೆ, ಹಾಗೂ ವಿವಿಧ ಪ್ರಕಾರವಾಗಿ ಹೇಗೆ ಹೊರಹೊಮ್ಮಿತು. ಇದರ ವ್ಯಾಪ್ತಿ ಏನು ಮತ್ತು ನಾಟಕ, ರಂಗಭೂಮಿಯ ಇತಿಹಾಸ, ಹವ್ಯಾಸಿ ರಂಗಭೂಮಿಯ ಕಲ್ಪನೆ ಮತ್ತು ಸಾಹಿತ್ಯ ಕುರಿತ ವಿವರಗಳಿವೆ. ಅಲ್ಲದೆ ಮುಖ್ಯವಾಗಿ ಹವ್ಯಾಸಿ ರಂಗಭೂಮಿಯ ಸ್ಥಿತಿಗತಿಯಲ್ಲಿ ನಾಟಕದ ಭಾಷೆ ಕುರಿತು ಚರ್ಚಿಸಲಾಗಿದೆ. ನಟನಿಗೆ ಮೊದಲು ಮಾತೃಭಾಷೆಯ ಸಂಪೂರ್ಣ ಅರಿವಿರಬೇಕು. ಜೊತೆಗೆ ಸ್ಪಷ್ಟವಾದ ಉಚ್ಚಾರ ಇರಬೇಕು ಎನ್ನುವುದರ ಬಗ್ಗೆ ಹಾಗೂ ಹವ್ಯಾಸಿ ರಂಗಭೂಮಿಯ ಸ್ಥಿತಿಗತಿಗಳು ಮತ್ತು ಈ ತಂಡದ ಸಮೀಕ್ಷೆ ಇತ್ಯಾದಿಗಳನ್ನು ಕುರಿತು ಮಾತನಾಡಲಾಗಿದೆ.

* ಬಸವರಾಜ ಮಲಶೆಟ್ಟಿ ಅವರ 'ಪ್ರಾಚೀನ ಕರ್ನಾಟಕದಲ್ಲಿ ನಾಟಕ ಪರಂಪರೆ' ಈ ಕೃತಿಯಲ್ಲಿ ಪ್ರಥಮ ಕನ್ನಡ ನಾಟಕ ೧೭೦೦ ರಲ್ಲಿ ರಚಿತವಾದ ಸಿಂಗಾರಾರ್ಯನ 'ಮಿತ್ರವಿಂದ ಗೋವಿಂದ' ಕೃತಿ ಲಭ್ಯವಾದದ್ದು. ಆದರೆ ಇದಕ್ಕೆ ವಿರುದ್ಧ ಎನ್ನುವ ಹಾಗೆ ಮೇವಾಡದ 'ಮಹಾರಾಣಾ ಕುಂಬಿನು' (೧೪೨೩-೧೪೬೮) ಸಂಸ್ಕೃತ, ಕನ್ನಡ, ಮರಾಠಿ ಮತ್ತು ತೆಲುಗು ಭಾಷೆಗಳಲ್ಲಿ ಒಂದೊಂದು ನಾಟಕ ಬರೆದಿದ್ದಾನೆ ಎಂದು ಚಿತ್ತೋಡ ಜಯಸ್ತಂಭದಲ್ಲಿ ಉಲ್ಲೇಖವಿದೆ ಎಂದು ಹೇಳುತ್ತಾ ಕನ್ನಡ ನಾಟಕದ ಇತಿಹಾಸವನ್ನು ಕೊಡುತ್ತಾರೆ. ಮುಂದೆ ಗೋವಿಂದ ಪೈ ಅವರು ಉಲ್ಲೇಖಿಸಿರುವ ಮುಳಿಯ ತಿಮ್ಮಪ್ಪಯ್ಯನವರ ವಿಚಾರಗಳನ್ನು ವಿವರಿಸಿದ್ದಾರೆ.

ಇದರ 'ನಾಟಕ ಒಂದು ನೃತ್ಯ ವಿಶೇಷ' ಎಂಬ ಲೇಖನದಲ್ಲಿ ಹಿಂದಿನ ನಾಟಕವು ಇಂದಿನ ನಾಟಕದಂತಿರದೆ ತೀರ ಭಿನ್ನವಾಗಿತ್ತು. ನೃತ್ಯವನ್ನೇ ಹಿಂದಿನವರು ನಾಟಕವೆಂದು ಕರೆದಿದ್ದಾರೆ ಎಂಬ ವಿಚಾರಗಳನ್ನು ತಿಳಿಸುತ್ತಾ ನೃತ್ಯರೂಪಕ, ನಾಟಕದ ಆಟ, ಲಾಕ್ಷಣಿಕರ ಮತ, ನಾಟಕ ಶಾಲೆ, ನಾಟಕ ಒಂದು ಅಧ್ಯಯನದ ವಿಷಯ, ಕನ್ನಡ ಕವಿಗಳಿಗೆ ಸಂಸ್ಕೃತ ನಾಟಕ ಪರಿಚಯ ನೀಡುವ ನಟ ಪಾತ್ರ ಇವುಗಳನ್ನು ವಿವರಿಸುತ್ತಾ, ಅಲ್ಲಮಪ್ರಭುಗಳ ವಚನ, ಭರತೇಶ ವೈಭವ, 'ಅನಂತನಾಥ ಪುರಾಣ' 'ಕನ್ನಡ ನಾಟಕದ ಹಳಮೆ', ವಡ್ಡಾರಾಧನೆ, ಆದಿಪುರಾಣ, 'ವರ್ಧಮಾನ ಪುರಾಣ', 'ಪಂಪರಾಮಾಯಣ', 'ಬಸವಪುರಾಣ' 'ವಿವೇಕ

ಚಿಂತಾಮಣಿ' ಮತ್ತು ಮೋಹನ ತರಂಗಿಣಿ ಮೊದಲಾದ ಆಕರ ಗ್ರಂಥಗಳನ್ನು ಪರಿಶೀಲಿಸಿ ಪ್ರಾಚೀನ ಕರ್ನಾಟಕದಲ್ಲಿ ನಾಟಕಗಳ ಪರಂಪರೆಯನ್ನು ಬರೆದಿದ್ದಾರೆ.

* ಸಂಗಮೇಶ ಸವದತ್ತಿ ಮಠ ಅವರ 'ಕನ್ನಡ ನಾಟಕಗಳಲ್ಲಿ ಭಾಷೆ' ಈ ಕೃತಿಯಲ್ಲಿ ನಾಟಕ ಸರ್ವಾಂಗ ಸುಂದರವಾಗಲು ಭಾಷೆಯೇ ಮೂಲವಾದುದು. ನಾಟಕದಲ್ಲಿ ಜೀವಂತ ಭಾಷೆಯ ಬಳಕೆಯಾಗಲೇಬೇಕೆಂದು ಹೇಳುವವರಿದ್ದಾರೆ. ಇಂಥ ಭಾಷೆಯ ಕುರಿತು ಹೇಳುವ ಅಪರೂಪವಾದ ಭಾಷೆಯ ಬಗೆಗೆ ಮಹತ್ವದ ಪುಸ್ತಕವಾಗಿದೆ. ಅಲ್ಲದೆ ವಿವಿಧ ಪ್ರಕಾರದ ನಾಟಕಗಳ ಭಾಷೆ ಕುರಿತು ಚರ್ಚಿಸಲಾಗಿದೆ. ಆರಂಭದಲ್ಲಿ ಲಿಂಗದೇವರು ಹಳೆಮನೆಯವರು ಪ್ರಾದೇಶಿಕ ಭಾಷಾ ಪ್ರಯೋಗ ಮತ್ತು ನಾಟಕ ಕುರಿತು ಬರೆಯುತ್ತಾ, ಮುಖ್ಯ ಮೂರು ವಿಷಯಗಳನ್ನು ಹೇಳುತ್ತಾರೆ.

೧. ವಾಸ್ತವವಾಗಿ ನಾಟಕ ರಚನೆಯಲ್ಲಿ ಬಳಕೆಯಾಗುವ ಭಾಷೆ ತುಂಬಾ ಸೊರಗಿದ್ದರೂ ಇನ್ನು ಬಳಕೆಯಾಗುತ್ತಲೇ ಇದೆ.

೨. ಪ್ರತಿಯೊಂದು ನಾಟಕ ಬರೆಯುವಾಗಲೂ ಆಧುನಿಕ ನಾಟಕಕಾರ ಹೊಸ ಭಾಷೆಗೆ ತಡಕಾಡುವುದು.

೩. ತನ್ನ ಪರಿಸರದ ಭಾಷೆಯನ್ನೇ ಹಿಡಿದು ಅದರಲ್ಲೊಂದು ಹೊಸ ಶಕ್ತಿಯನ್ನು ಹೊರಡಿಸಲು ಯತ್ನಿಸುವುದು.

ಎಂದು ಹೀಗೆ ಪ್ರಾದೇಶಿಕ ಭಾಷೆ ಎನ್ನುವುದು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಬಳಕೆಯಾಗುವ ಭಾಷೆ ಮೈಸೂರು, ಮಂಗಳೂರು, ಧಾರವಾಡ, ಗುಲ್ಬರ್ಗಾ ಈ ನಾಲ್ಕು ವಿಭಾಗಗಳ ಉಪಭಾಷೆಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಧ್ವನಿ ವ್ಯವಸ್ಥೆ, ಧ್ವನಿಮಾ ವ್ಯವಸ್ಥೆ, ಆಕೃತಿಮಾ ವ್ಯವಸ್ಥೆ, ವಾಕ್ಯ ವ್ಯವಸ್ಥೆ, ಅರ್ಥ ವ್ಯವಸ್ಥೆಯನ್ನು ವಿಶ್ಲೇಷಿಸಿದ್ದಾರೆ. ಹಾಗೆ ನಾಟಕ ರಚನೆ, ದೃಷ್ಟಿಯಿಂದ ಕರಾವಳಿ ಕನ್ನಡ, ಹಳೆ ಕರ್ನಾಟಕ ಕನ್ನಡ ಮತ್ತು ಹೊಸ ಕರ್ನಾಟಕ ಕನ್ನಡ ಎಂದು ವಿಭಾಗಿಸಿದ್ದಾರೆ. ಈ ಪ್ರಬೇಧಗಳಿಗೆ ನಾಟಕಗಳು, ನಾಟಕಕಾರರು ಅವರು ಬಳಸಿರುವ ಭಾಷೆಯ ಉದಾಹರಣೆಗಳನ್ನು ನೀಡಿದ್ದಾರೆ. ಒಂದು ನಿರ್ದಿಷ್ಟ ಭೂಭಾಗದ ಸಾಂಸ್ಕೃತಿಕ ಹಿನ್ನೆಲೆಯ ವಸ್ತುವನ್ನು ಆರಿಸಿಕೊಂಡಾಗ ಅದಕ್ಕೆ ಅವರದೇ ಆದ ಭಾಷಾ ಬಂಧವೂ ಬೇಕಾಗುತ್ತದೆ ಎಂದಿದ್ದಾರೆ.

ಇದರಲ್ಲಿ ಕನ್ನಡ ನಾಟಕಗಳ ಭಾಷೆ ಮೇಲೆ ಅನ್ಯ ಭಾಷಾ ಪ್ರಭಾವ ಕುರಿತು ಡಾ. ಶ್ಯಾಮಸುಂದರ ಬಿದರಕುಂದಿ ಅವರ ಲೇಖನ ಗೀತನಾಟಕಗಳ ಭಾಷೆ ಕುರಿತು ಡಾ. ಸಾ.ಶಿ. ಮರುಳಯ್ಯರ ಲೇಖನ ರೇಡಿಯೋ ನಾಟಕಗಳ ಭಾಷೆ ಕುರಿತು ಎಂ. ಅಬ್ದುಲ ರೆಹಮಾನ ಪಾಷಾರ ಲೇಖನ, ದೂರದರ್ಶನ ನಾಟಕಗಳ ಭಾಷೆ ಕುರಿತು ಸಂಗಮೇಶ ಸವದತ್ತಿ ಮಠರ

ಲೇಖನ, ಕಂಪನಿ ನಾಟಕಗಳ ಭಾಷೆ ಕುರಿತು ಡಾ.ಎಚ್.ಎಂ. ಮಹೇಶ್ವರಯ್ಯರ ಲೇಖನ ಮತ್ತು ಬೀದಿನಾಟಕಗಳ ಭಾಷೆ ಕುರಿತು ಡಾ. ಶಿ.ಮ. ಹಿರೇಮಠರು ಬರೆದಿರುವ ನಾಟಕಗಳು ತುಂಬ ಉಪಯುಕ್ತವಾಗಿವೆ.

ಅಲ್ಲದೆ ಇದರಲ್ಲಿ 'ಮಕ್ಕಳ ನಾಟಕಗಳ ಭಾಷೆ' ಕುರಿತು ಈಶ್ವರ ಕಮ್ಮಾರರ ಲೇಖನ ಮಕ್ಕಳಲ್ಲಿ ಕುತೂಹಲ ಹುಟ್ಟುವಂತೆಯೂ, ಪ್ರಾಸಂಗಿಕವಾಗಿ ಹಾಸ್ಯ ವಿನೋದ, ವಿಡಂಬನೆ, ಹರುಷ, ವಿಷಾದ, ದುಃಖ ಇತ್ಯಾದಿ ಭಾವನೆಗಳು ಉಂಟಾಗುವಂತೆ ಶುದ್ಧತೆ, ಸ್ಪಷ್ಟತೆ ಇರುವ ಚಿಕ್ಕ ಚಿಕ್ಕ ವಾಕ್ಯಗಳು ಇರಬೇಕು ಎಂದು ಈಶ್ವರ ಕಮ್ಮಾರ ಅವರು ಉದಾಹರಣೆಗಳಿಂದ ತಿಳಿಸುತ್ತಾರೆ.

* ನಿರುಪಮಾರವರು 'ಮಕ್ಕಳಿಗೆ ಕಥೆ ಹೇಳುವ ಕಲೆ' ಎಂಬ ಕೃತಿಯಲ್ಲಿ ಕಥೆ ಕೇಳುವುದು ಮಕ್ಕಳಿಗೆ ಅತ್ಯಂತ ಪ್ರಿಯವಾದುದು. ಕಥೆಗಾಗಿ ಹಂಬಲಿಸದ ಮಕ್ಕಳೇ ಇಲ್ಲ. ಬಹು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಇತ್ತ ಜಾನಪದವೂ ಅಲ್ಲದ ಶಾಸ್ತ್ರ ಸಾಹಿತ್ಯವೂ ಅಲ್ಲದ ಕಥಾ ಸಾಹಿತ್ಯದ ಪರಂಪರೆ ಹುಲುಸಾಗಿ ಬೆಳೆಯುತ್ತ ಬಂದಿದೆ. ನಮ್ಮ ಪೂರ್ವಿಕರನ್ನು ನೆನೆಯಲು ಪೌರಾಣಿಕ ಕಥೆಗಳು, ನೀತಿಯನ್ನು ತಿಳಿದು ವಿವೇಕಿಗಳಾಗಲು 'ಪಂಚತಂತ್ರ'ದ ಕಥೆಗಳು, ಐತಿಹಾಸಿಕ ವ್ಯಕ್ತಿಗಳ ಕುರಿತ ಇತಿಹಾಸದ ಕಥೆಗಳು, ಧಾರ್ಮಿಕ ವಿಷಯಗಳಿಗಾಗಿ, ವಿನೋದಕ್ಕಾಗಿ, ಹೊತ್ತು ಕಳೆಯಲೆಂದು ಅಸಂಖ್ಯಾತ ಕಥೆಗಳ ಭಂಡಾರವೆ ನಮ್ಮಲ್ಲಿದೆ. ಪ್ರಾಚೀನರು ಅದ್ಭುತ ವಿನೋದಗಳಿಗಾಗಿ ಬೇತಾಳ ವಿಕ್ರಮಾದಿತ್ಯನ, ಶುಕಸಪ್ತಶತಿಯ ಕಥಾಸರಿತ್ಸಾಗರದಂತಹ ಅನೇಕ ಕಥೆಗಳನ್ನು ಸೃಷ್ಟಿಸಿದ್ದಾರೆ. ಇವು ಈಗ ವಿದೇಶಿ ಭಾಷೆಗಳಲ್ಲೂ ಅನುವಾದಗೊಂಡಿರುವುದನ್ನು ಕಾಣಬಹುದು.

ಈಚೆಗೆ ಮಕ್ಕಳಿಗೆ ಕಥೆ ಹೇಳುವ ಅಭ್ಯಾಸ ತೀರಾ ಕಡಿಮೆಯಾಗುತ್ತಿದೆ. ಕಾರಣ ಇಂದಿನ ಹೊಸ ಬಗೆಯ ಜೀವನ ವಿಧಾನವು ದೈನಂದಿನ ಒತ್ತಡಗಳು ಹಾಗೂ ವಿದ್ಯಾಭ್ಯಾಸದ ಕ್ರಮಗಳು, ಬಿಡುವಿಲ್ಲದ ವೇಳಾಪಟ್ಟಿಯಲ್ಲಿ ಮಕ್ಕಳಿಗೆ ಹಿರಿಯರು ಹಾಗೂ ತಂದೆ ತಾಯಿಗಳು, ಶಾಲೆಯಲ್ಲಿ ಶಿಕ್ಷಕರು ಸೇರಿದಂತೆ ಮಕ್ಕಳಿಗೆ ಕಥೆಗಳನ್ನು ಹೇಳಿ ಅವರ ಬೌದ್ಧಿಕ ಮಟ್ಟವನ್ನು ಹೆಚ್ಚಿಸಿ ಮನರಂಜಿಸಬಹುದು. ಈ ಹಿನ್ನೆಲೆಯಲ್ಲಿಯೇ ಈ ಕೃತಿಯನ್ನು ರಚಿಸಲಾಗಿರುತ್ತದೆ. ಇದರಲ್ಲಿ ಮಕ್ಕಳಿಗೆ ಎಂತಹ ಕಥೆಗಳ ಅಗತ್ಯವಿದೆ ಎಂದು ಚರ್ಚಿಸಲಾಗಿದೆ, ಹಾಗೂ ಕೆಲವು ಕಥೆಗಳನ್ನು ಉದಾಹರಣೆಯನ್ನಾಗಿಯು ಹೇಳಲಾಗಿದೆ ಇದೊಂದು ಉಪಯುಕ್ತ ಕೃತಿಯಾಗಿದೆ.

* ಟಿ.ಎಸ್. ನಾಗರಾಜ ಶೆಟ್ಟಿ ಅವರ 'ಸಮಗ್ರ ಮಕ್ಕಳ ಕವಿತೆಗಳು' ಎಂಬ ಕೃತಿಯನ್ನು ನಿರ್ಮಲ ಪುಸ್ತಕ ಪ್ರಕಾಶನ ತಿಪಟೂರಿನಿಂದ ೧೯೯೬ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಒಂದು ನೂರ ಮೂವತ್ತಕ್ಕೂ ಮೇಲ್ಪಟ್ಟು ಮಕ್ಕಳ ಕವಿತೆಗಳಿವೆ. ಇದರಲ್ಲಿ 'ನವಿಲುಗರಿ', 'ಸಕ್ಕರೆ

ಬೊಂಬೆ', 'ಅಮ್ಮ ಮತ್ತು ಹಂಸಗಳು', 'ಚಂದ್ರನ ಶಾಲೆ' ಹಾಗೂ 'ಮಕ್ಕಳ ನೆಹರು' ಎಂಬ ಪ್ರಸಿದ್ಧ ಕವನಗಳ ಜೊತೆಗೆ ಕೆಲವು ಅಪ್ರಕಟಿತ ಕವನಗಳನ್ನು ಸೇರಿಸಲಾಗಿದೆ. ಈ ಎಲ್ಲ ಕವಿತೆಗಳ ವಸ್ತು ವಿಷಯಗಳ ವೈವಿಧ್ಯ ಛಂದೋ ಲಯಗಳ ವೈವಿಧ್ಯತೆಗಳಿಂದ ಕೂಡಿವೆ.

* ಸಿಸು ಸಂಗಮೇಶರ 'ಆಯ್ದ ಮಕ್ಕಳ ಸಾಹಿತ್ಯ' ಕೃತಿಯನ್ನು ಪ್ರೊ. ಸಿದ್ಧಣ್ಣ ಬಿ. ಉತ್ನಾಳ ಅವರು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ 'ಚುಟುಕು–ಗುಟುಕು', 'ಚಕ್ಕಾ ಚಾಕಳಿ', 'ಶಾಲೆಗಿಂತ ಚೀಲಬಾರ', 'ನನ್ನ ಕವಿತಾ ಪುಸ್ತಕ', 'ಬಿದ್ದ ಚಂದಿರನ ಒದ್ದು ಓಡಿಸಿದ', 'ಕಾಡಿನ ಕಲಿಗಳು', 'ಗಾಳಿ ಹೋಯ್ತು ನೀರು ಬಂತು', 'ಸವಿ ಸಾಹಿತ್ಯ', 'ಅಂಗಿಯಲ್ಲಿ ತಂಗಿ' ಮತ್ತು 'ಎಸ್ಕಿಮೋ ಇಗ್ಲಿಯಕ್' ಎಂಬ ಮೊದಲಾದ ಪದ್ಯ ಸಂಗ್ರಹಗಳಿವೆ. ಹಾಗೂ 'ಮಂಕುಮರಿ', 'ನರಿಯ ಫಜೀತಿ', 'ಆಶೆಬುರುಕಿ ಆಶಾ', 'ದಾರಿಯ ಬುಟ್ಟಿ', 'ಕಥೆ ಹೇಳುವೆ ಬಾ', 'ಕಳ್ಳ ಸಿಕ್ಕ', 'ಜಪಾನನ ಟಾರೋ', 'ಹೇಗಿದ್ದರು ಹೇಗಾದರು', 'ಸೂರ್ಯಚಂದ್ರರ ನಡುವೆ', 'ನನ್ನ ಮನೆ' ಮೊದಲಾದವು ಗದ್ಯ ಸಂಗ್ರಹಗಳಿವೆ. ಇದರಲ್ಲಿರುವ ಪದ್ಯ–ಗದ್ಯಗಳನ್ನು ಮೂಲತಃ ಶಿಕ್ಷಕರಾದ ಸಿಸು ಸಂಗಮೇಶರು ಮಕ್ಕಳ ಮನಸ್ಸನ್ನು ವಯಸ್ಸನ್ನು ಅಮೂಲಾಗ್ರವಾಗಿ ಅರಿತು ಬರೆದ ಪದ್ಯಗಳಲ್ಲಿ ಪ್ರಾಸ, ಲಯಬದ್ಧತೆ ಕಾಣುತ್ತೇವೆ. ಜೊತೆಗೆ ಪಶು–ಪಕ್ಷಿಗಳಿಗೆ ಆದ್ಯತೆಯನ್ನು ನೀಡಿರುತ್ತಾರೆ. ಇವರ 'ನನ್ನ ಮನೆ' (೧೯೯೯ ಪಕ್ಷಿವಿಜ್ಞಾನ) ಈ ಗದ್ಯ ಪ್ರಕಾರದ ಕೃತಿಗೆ ೧೯೬೪ರಲ್ಲಿ ರಾಷ್ಟ್ರ ಪ್ರಶಸ್ತಿ, 'ನನ್ನ ಗೆಳೆಯ' 'ಜಪಾನದ ಟಾರೋ' ಕೃತಿಗಳಿಗೆ ೧೯೬೮ರಲ್ಲಿ ರಾಷ್ಟ್ರ ಪ್ರಶಸ್ತಿಗಳು ದೊರೆತಿವೆ.

* ಕೆ.ವಿ. ನಾರಾಯಣರವರು 'ಮತ್ತೆ ಭಾಷೆಯ ಸುತ್ತಮುತ್ತ' ಎಂಬ ಪುಸ್ತಕದಲ್ಲಿ ಮಕ್ಕಳ ಭಾಷೆಯ ಕಲಿಕೆಯ ವಿವಿಧ ಹಂತಗಳನ್ನು (ಔಪಚಾರಿಕ ಮತ್ತು ಅನೌಪಚಾರಿಕ) ವಿಶ್ಲೇಷಿಸಿದ್ದಾರೆ. ಅದರ ಜೊತೆಗೆ 'ಶಾಲೆಯಲ್ಲಿ ಭಾಷೆ' ಎಂಬ ಲೇಖನದಲ್ಲಿ ಭಾಷೆಯನ್ನು ಕಲಿಸಲು ಹಾಕಿಕೊಂಡಿರುವ ಯೋಜನೆಗಳು, ನಿಯಮಗಳು, ಅವುಗಳ ಉದ್ದೇಶ, ಪಠ್ಯಕ್ರಮದ ಹಿನ್ನೆಲೆಯಲ್ಲಿ ಇರುವ ಗೊಂದಲಗಳನ್ನು ವಿವರಿಸುತ್ತಾರೆ. ಇದರಿಂದ ಆಗುವ ಪರಿಣಾಮವೇನು? ಎಂಬುದನ್ನು ಪ್ರಶ್ನಿಸಿದ್ದಾರೆ. ಜೊತೆಗೆ ಕಲಿಸುವ ಭಾಷೆ ಪಠ್ಯ ಬದಲಾವಣೆ ಹೊಂದುತ್ತಿದೆ. ಆದರೆ ಇನ್ನೂ ಬದಲಾಗಬೇಕಿದೆ ಎಂದು ಅಭಿಪ್ರಾಯಪಡುತ್ತಾರೆ.

* ಅಶೋಕಕುಮಾರ ರಂಜೇರೆ ಅವರು ಬರೆದಿರುವ 'ಭಾಷೆ ಮತ್ತು ಶಿಕ್ಷಣ' ಎಂಬ ಪುಸ್ತಕವು ಮುಖ್ಯವಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಭಾಷೆ ಮತ್ತು ಶಿಕ್ಷಣಕ್ಕಿರುವ ಸಂಬಂಧವನ್ನು ಗುರುತಿಸಿದ್ದಾರೆ. ಅಲ್ಲದೆ ಪ್ರಾಥಮಿಕ ಮಕ್ಕಳ ಶಿಕ್ಷಣದ ಸಮಸ್ಯೆಗಳು, ಪ್ರಾಥಮಿಕ ಶಿಕ್ಷಣದ ಭಾಷಾ ಬೋಧನೆ ಮತ್ತು ಕಲಿಕೆ ಸಂದರ್ಭದಲ್ಲಿ ಓದು, ಭಾಷಾ ಬೋಧನೆ ಮತ್ತು ತಂತ್ರಜ್ಞಾನ ಇತ್ಯಾದಿ ಲೇಖನಗಳ ಮೂಲಕ ಪ್ರಾಥಮಿಕ ಶಿಕ್ಷಣದ ಸ್ವರೂಪವನ್ನು

ವಿವರಿಸಿದ್ದಾರೆ. ಪ್ರಾಥಮಿಕ ಕನ್ನಡ ಭಾಷಾ ಪಠ್ಯಗಳಲ್ಲಿ ಕೆಲವೊಂದು ತಪ್ಪುಗಳಿವೆ ಎಂಬುದನ್ನು ಉದಾಹರಣೆಗಳ ಮೂಲಕ ಚರ್ಚಿಸಿದ್ದಾರೆ.

* ಪಿ. ಮಹಾದೇವಯ್ಯರವರು 'ಕನ್ನಡ ಭಾಷೆ ಕಲಿಕೆ ಮತ್ತು ಬೋಧನೆ' ಎಂಬ ಪುಸ್ತಕದಲ್ಲಿ ಪಠ್ಯಪುಸ್ತಕ ರಚನೆಯಲ್ಲಿ ಭಾಷಾಶಾಸ್ತ್ರಜ್ಞರ ಪಾತ್ರ ಕನ್ನಡ ಪಠ್ಯಪುಸ್ತಕ ರಚನೆಯಲ್ಲಿನ ಸಮಸ್ಯೆಗಳು ಎಂಬ ಲೇಖನವನ್ನು ಬರೆದಿದ್ದಾರೆ. ಕನ್ನಡ ಪಠ್ಯಪುಸ್ತಕ ರಚನೆಯಲ್ಲಿ ಭಾಷಾ ಶಾಸ್ತ್ರಜ್ಞರು ಸಶಕ್ತರಾಗಿ ಭಾಷಾಶಾಸ್ತ್ರದ ತಪ್ಪುಗಳನ್ನು ಅನ್ವಯಿಸಿ ಪಠ್ಯ ರಚನೆ ಮಾಡಬಲ್ಲರು. ಆದರೆ ಸಾಹಿತಿಗಳಿಗೆ ಇದು ಕಷ್ಟವಾಗಬಲ್ಲದು ಎನ್ನುತ್ತಾರೆ. ಪಠ್ಯದಲ್ಲಿ ಭಾಷಾಶಾಸ್ತ್ರದ ವಿವಿಧ ಹಂತಗಳಾದ ಧ್ವನಿ, ಪದ, ವಾಕ್ಯ ಮತ್ತು ಪದಕೋಶಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

* ಮಕ್ಕಳ ಮನೆ ಧಾರವಾಡ ಪ್ರಕಾಶನದ 'ಮಕ್ಕಳ ಸಾಹಿತ್ಯ ಚಿಂತನೆ' ಎಂಬ ಉಪನ್ಯಾಸಗಳ ಸಂಪುಟ ಕೃತಿಯನ್ನು ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಕಮ್ಮಟದಲ್ಲಿ ಉಪನ್ಯಾಸ ನೀಡಿದ ವಿದ್ವಾಂಸರುಗಳು ಬರೆದ ಲೇಖನಗಳ ಕೃತಿಯಾಗಿದೆ. ಇದು ಕನ್ನಡ ಮಕ್ಕಳ ಸಾಹಿತ್ಯದಲ್ಲಿಯೇ ಮಕ್ಕಳ ಸಾಹಿತಿಗಳಿಗೆ ಮೊಟ್ಟ ಮೊದಲಿನ ಮಾರ್ಗದರ್ಶಕ ಕೈಪಿಡಿಯಂತಿದೆ. ಇದರಲ್ಲಿನ ಲೇಖನಗಳನ್ನು ಬರೆದ ಲೇಖಕರು ಶಿಶುಸಾಹಿತಿಗಳು ಮಕ್ಕಳನ್ನು ಆಲದ ಗಿಡಗಳಂತೆ ಬೆಳೆಸುವ ವಿಧಾನವನ್ನು ಬೆಳೆಸದೆ ತೆಂಗಿನ ಗಿಡಗಳಂತೆ ಬೆಳೆಸುವ ಸಾಧನೆಗಳನ್ನು, ಬೋಧನೆಗಳನ್ನು ಪ್ರತಿಪಾದಿಸುವ ಮೂಲಕ ದಾರಿ ಮಾಡಿಕೊಟ್ಟಿದ್ದಾರೆ. ಸಂಪಾದಕರು ಬಿಡಿ ಬಿಡಿ ಲೇಖನಗಳನ್ನು ವಿಷಯಕ್ಕನುಸರಿಸಿ ಹಿಡಿದಿಟ್ಟಿದ್ದಾರೆ. ಇದರಲ್ಲಿ ನಾಟಕದ ವಸ್ತುವನ್ನು ಆಯ್ಕೆಮಾಡುವಲ್ಲಿ, ತಂತ್ರವನ್ನು ಬಳಸುವಲ್ಲಿ ಬರಹಗಾರರ ಹೃದಯ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ಶಬ್ದಗಳ ಮೂಲಕ ಹಿಡಿದು ತೋರಿಸಿದ್ದಾರೆ. ಮಕ್ಕಳ ಬಾಯಲ್ಲಿ ಹಾಡು ಇರಬೇಕು. ಕಿವಿಗಳು ಕಥೆಗಳನ್ನು ಕೇಳುತ್ತಿರಬೇಕು. ದೊಡ್ಡವರ ಹಾಗೆ ತಮಗೂ ಹಾವಭಾವಗಳ ಮೂಲಕ ತೋರಿಸುವ ನಾಟಕಗಳು ಬೇಕು ಹೀಗೆ ಮೊದಲಾದ ವಿಷಯಗಳ ಮಾಹಿತಿಗಳು ಈ ಕೃತಿಯಲ್ಲಿದೆ.

* 'ಆಲೋಚನೆ' ಎಂಬ ಕೃತಿಯು ಮಕ್ಕಳ ಸಾಹಿತ್ಯ ಸಮಾವೇಶದಲ್ಲಿ ಮಂಡನೆಯಾದ ಪ್ರಬಂಧಗಳ ಮಾಲೆಯಾಗಿದೆ. ಇದನ್ನು ಟಿ.ಸಿ. ಪೂರ್ಣಿಮಾ ಅವರು ಸಂಪಾದನೆ ಮಾಡಿದ್ದಾರೆ. ಈ ಕೃತಿಯಲ್ಲಿ ಮಕ್ಕಳ ಸಾಹಿತ್ಯದ ಅಗತ್ಯ, ಸ್ವರೂಪ, ಪ್ರಯೋಗ, ಅನ್ವಯ ಮೊದಲಾದ ಪ್ರಮುಖ ಅಂಶಗಳ ಕಡೆ ಗಮನ ಹರಿಸಿ ಬರೆದ ಪ್ರಬಂಧಗಳಿವೆ. ಇದು ಮಕ್ಕಳ ಸಾಹಿತ್ಯ ಕುರಿತಂತೆ ಓದುಗರನ್ನು ಹೊಸ ಆಲೋಚನೆಗೆ ತೊಡಗುವಂತೆ ಮಾಡುವ ಕೃತಿಯಾಗಿದೆ. ಇದರಲ್ಲಿ ಮಕ್ಕಳ ಸಾಹಿತ್ಯದ ವಸ್ತು-ಭಾಷೆಗಳಲ್ಲಿನ ಬದಲಾವಣೆಯ ಸಾಧ್ಯತೆಗಳನ್ನು, ತಂತ್ರದ ಬದಲಾವಣೆಯ ಸಾಧ್ಯತೆಗಳು ಮತ್ತು ವೈಜ್ಞಾನಿಕ ಅಂಶಗಳ ಅಳವಡಿಕೆಯ ಸಾಧ್ಯತೆಗಳನ್ನು

ಕುರಿತು ಚಿಂತನೆ ಮಾಡಲಾಗಿದೆ. ಮತ್ತು ಮಕ್ಕಳ ಸಾಹಿತ್ಯ ಅದ್ಭುತ ರಮ್ಯತೆಯ ಪ್ರಯೋಗಗಳನ್ನು ಕುರಿತು ಚರ್ಚೆಯನ್ನು ಮಾಡಿದ್ದಾರೆ. ಹಾಗೂ ಮಕ್ಕಳ ಸಾಹಿತ್ಯ ಕಲ್ಪನೆ ಮತ್ತು ವಾಸ್ತವತೆಯನ್ನು ಕುರಿತು ಚಿಂತನೆಯನ್ನು ನಡೆಸಿರುವುದನ್ನು ಕಾಣಬಹುದು.

* ಎಸ್. ಚನ್ನಪ್ಪರವರ 'ಮಕ್ಕಳ ಸಾಹಿತ್ಯ ನಿರ್ಮಾಪಕರು' ಎಂಬ ಕೃತಿಯು ಕನ್ನಡದ ಮಕ್ಕಳ ಸಾಹಿತ್ಯ ರಚನೆಯ ಸಂವರ್ಧನೆಗಾಗಿ ಶ್ರಮಿಸಿದ ಹಿರಿಯ ಲೇಖಕರ ಪರಿಚಯವಿರುವ ಕೃತಿಯಾಗಿದೆ. ಇದರಲ್ಲಿ ಪ್ರಮುಖವಾಗಿ ಎಂ.ಎಸ್. ಪುಟ್ಟಣ್ಣ, ಪಂಚೆ ಮಂಗೇಶರಾವ್, ಎಂ.ಎನ್. ಕಾಮತ್, ಸುಬೋಧ ರಾಮರಾವ್, ಆರ್. ಕಲ್ಯಾಣಮ್ಮ, ಅರಗೆ ಲಕ್ಷ್ಮಣರಾವ್ (ಹೊಯಿಸಳ), ಶಿವರಾಮ ಕಾರಂತ, ಕುವೆಂಪು ಮತ್ತು ಜಿ.ಪಿ. ರಾಜರತ್ನಂ ಮೊದಲಾದ ಸಾಹಿತಿಗಳ ಮತ್ತು ಅವರ ಕೃತಿಗಳ ಪರಿಚಯವಿದೆ.

* ಡಬ್ಲ್ಯು ಬಸವರಾಜ್ ಅವರ 'ಶಿಶುಸಾಹಿತ್ಯ ಪರಂಪರೆ ಮತ್ತು ಕುವೆಂಪು' ಎಂಬ ವಿಮರ್ಶಾ ಕೃತಿಯು ಕುವೆಂಪು ಅವರ ಕಾದಂಬರಿ, ಕಾವ್ಯ, ವಿಮರ್ಶೆ ಈ ಎಲ್ಲಾ ಪ್ರಕಾರಗಳನ್ನು ಕುರಿತು ವಿಮರ್ಶೆಗಳು ಬಂದಿವೆಯಾದರೂ, ಕುವೆಂಪು ಅವರ ಶಿಶುಸಾಹಿತ್ಯವನ್ನು ಕುರಿತು ವಿಮರ್ಶೆಗೆ ಬಂದಿರಲಿಲ್ಲ. ಹೀಗಾಗಿ ಬಸವರಾಜ ಅವರು ಆಧುನಿಕ ಮಕ್ಕಳ ಸಾಹಿತ್ಯ ಚರಿತ್ರೆಯ ಹಿನ್ನೆಲೆಯಲ್ಲಿ ಕುವೆಂಪು ಅವರ ಬರಹಗಳ ವೈಶಿಷ್ಟ್ಯವನ್ನು ಕುರಿತು ಮತ್ತು ಕುವೆಂಪುರವರ ಮಕ್ಕಳ ಸಾಹಿತ್ಯವು ಇತರೆ ಮಕ್ಕಳ ಸಾಹಿತಿಗಳಿಗಿಂತ ಹೇಗೆ ಭಿನ್ನವಾಗಿದೆ ಎನ್ನುವ ವಿಚಾರವನ್ನು ಈ ವಿಮರ್ಶಾ ಕೃತಿಯಲ್ಲಿ ಹೇಳಿದ್ದಾರೆ.

* 'ಮಕ್ಕಳ ಭಾಷೆ' ಎಂಬ ಕೃತಿಯು ಡಾ. ಸಂಗಮೇಶ ಸವದತ್ತಿಮಠ ಅವರು ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲಿಕೆಗೆ ಬರೆದ ಚಿಕ್ಕ ಕೃತಿಯಾಗಿದೆ. ಈ ಕೃತಿಯು ಮಕ್ಕಳ ಭಾಷೆ ಅದರ ವೈಶಿಷ್ಟ್ಯ, ಮಕ್ಕಳ ಭಾಷಾ ಕಲಿಕೆಯ ಅಂಶಗಳು ಮೊದಲಾದ ಹಲವಾರು ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ. ಈ ಕೃತಿಯ ಮೊದಲ ಭಾಗದಲ್ಲಿ ಭಾಷೆಯ ಬಗೆಗೆ ಹೇಳುವಾಗ ಲೇಖಕರು ಅಕ್ಬರನು ಮಗುವೊಂದನ್ನು ನಾಗರಿಕ ಸಂಪರ್ಕದಿಂದ ದೂರವಿಟ್ಟು ಅದರ ಭಾಷಾ ಕಲಿಕೆಯ ಬಗ್ಗೆ ನಡೆಸಿದ ಪ್ರಯೋಗವನ್ನು ಉಲ್ಲೇಖಿಸಿದೆ. ನಾಗರಿಕ ಸಮಾಜ ಮತ್ತು ಪರಿಸರ ಮಗುವಿನ ಭಾಷಾ ಕಲಿಕೆಯಲ್ಲಿ ಮುಖ್ಯವೆಂಬುದನ್ನು ಹೇಳುತ್ತಾರೆ. ನಂತರದಲ್ಲಿ ಲೇಖಕರು ಮಕ್ಕಳು ಭಾಷೆಯನ್ನು ಕಲಿಯಬೇಕಾದರೆ ಅವಶ್ಯಕವಾದ ಬೇರೆ ಬೇರೆ ಅಂಶಗಳನ್ನು ವಿವರಿಸುತ್ತಾರೆ. ಜೊತೆಗೆ ಮಕ್ಕಳ ಭಾಷೆಯ ವೈಶಿಷ್ಟ್ಯಗಳು ಎಂಬ ಕೆಲವು ಅಂಶಗಳನ್ನು ಲೇಖಕರು ಪಟ್ಟಿಮಾಡಿ ಹೇಳಿದ್ದಾರೆ.

ಮಕ್ಕಳ ಭಾಷಾ ಪರಿಸರದಲ್ಲಿ ಒದಗಬಹುದಾದ ದ್ವಿಭಾಷಿಕ ಪರಿಸರಗಳನ್ನು ವಿವರಿಸುತ್ತಾರೆ. ಇಲ್ಲಿ ಪರಿಸರದ ಭಾಷೆಯಲ್ಲಿ ಒದಗಬಹುದಾದ ದ್ವಿಭಾಷಿಕತೆ ಅಂದರೆ ಮಾತೃಭಾಷೆ ಒಂದು.

ಸುತ್ತಲಿನ ಪರಿಸರದ ಭಾಷೆ ಇನ್ನೊಂದು, ಮತ್ತೊಂದು ಮಗುವಿನ ವಯೋಗುಣ ಮತ್ತು ಶಾಲಾ ಪರಿಸರದ ದ್ವಿಭಾಷಿಕತೆಯನ್ನು ವಿವರಿಸುತ್ತಾರೆ. ಅಲ್ಲದೆ ಈ ಕೃತಿಯಲ್ಲಿ ಮಕ್ಕಳ ಭಾಷೆಯ ಒಂದು ಮಾದರಿಯನ್ನು ಕೊಟ್ಟಿರುವುದು ವಿಶೇಷವಾಗಿರುತ್ತದೆ.

* ಕೆ. ಕೆಂಪೇಗೌಡರ 'ಸಾಮಾನ್ಯ ಭಾಷಾ ವಿಜ್ಞಾನ' ಎನ್ನುವ ಕೃತಿಯಲ್ಲಿ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಧ್ವನಿ, ಧ್ವನಿಮಾ, ವಿಜ್ಞಾನ, ವರ್ಣನಾತ್ಮಕ ಭಾಷಾವಿಜ್ಞಾನ ಮತ್ತು ಚಾರಿತ್ರಿಕ ಭಾಷಾ ವಿಜ್ಞಾನ ಈ ಮೂರು ಮುಖ್ಯ ವಿಭಾಗಗಳಲ್ಲಿ ಈ ಮೂರು ವಿಷಯಗಳನ್ನು ಕುರಿತು ವಿಸ್ತಾರವಾಗಿ ಹೇಳಲಾಗಿದೆ. ಇದರಲ್ಲಿ ವ್ಯಕ್ತಿ ಭಾಷಾ ವಿಜ್ಞಾನವನ್ನು ಕುರಿತು ಹೇಳುವಾಗ ಮಾನವನ ಜೀವಮಾನದಲ್ಲಿ ಬಾಲ್ಯ, ಯೌವ್ವನ, ಮತ್ತು ಮುಪ್ಪು ಇವು ಬಹುಮುಖ್ಯವಾದ ಘಟ್ಟಗಳು. ವ್ಯಕ್ತಿಯ ಈ ಜೀವನದ ಆವಸ್ಥೆಗಳನ್ನು ಆಧರಿಸಿ ಅವನು ಬಳಸುವ ಭಾಷೆಯನ್ನು ಬಾಲಭಾಷೆ (Baby language), ಪ್ರೌಢಭಾಷೆ (Adult language) ಮತ್ತು ವೃದ್ಧ ಭಾಷೆ (Senite language) ಎಂದು ಮೂರು ಹಂತಗಳಲ್ಲಿ ಗುರುತಿಸಿಕೊಂಡು ಅವುಗಳ ಸ್ವರೂಪವನ್ನು ಹೆಚ್ಚು ವೈಜ್ಞಾನಿಕವಾಗಿ ವಿವೇಚಿಸಬಹುದು. ಇದರ ಮೊದಲನೇ ಹಂತದ ಬಾಲಭಾಷೆ ವ್ಯಕ್ತಿ ಭಾಷೆಯ ಒಂದು ವಿಶಿಷ್ಟ ರೂಪ. ಇದು ಮಕ್ಕಳ ಭಾಷೆಯಲ್ಲಿ ಕಂಡುಬರುತ್ತದೆ. ಈ ಬಾಲಭಾಷೆ ಅಥವಾ ಮಕ್ಕಳ ಭಾಷೆಯನ್ನು ಕುರಿತು ಜಗತ್ತಿನಾದ್ಯಂತ ಬೇರೆ ಬೇರೆ ವಿದ್ವಾಂಸರು ಆಳವಾಗಿ ಪರಿಶೀಲಿಸಿ ಹೊಸ ವಿಚಾರಗಳನ್ನು ಹೊರತಂದಿದ್ದಾರೆ. ಈ ಮಗು ಭಾಷೆಯನ್ನು ಕಲಿಯುವಾಗ ಅನುಕರಣೆ ಮತ್ತು ನಿರಂತರ ಪ್ರಯತ್ನದಿಂದ ಭಾಷೆಯನ್ನು ಕಲಿಯುತ್ತದೆ. ಈ ಶಬ್ದ ಮತ್ತು ವಾಕ್ಯಗಳನ್ನು ಕಲಿಯುವುದನ್ನು ಮುಂದುವರಿಸಿದಂತೆಲ್ಲಾ ಅದು ತನ್ನದೇ ಆದ ಶಬ್ದ ಸಮೂಹವನ್ನು, ತನ್ನದೇ ಆದ ವಾಕ್ಯ ಸಮುದಾಯವನ್ನು ಸಂಪಾದಿಸಿಕೊಂಡು ಅನಂತರ ವ್ಯಾಕರಣಬದ್ಧವಾದ ಪದಗಳನ್ನು ಕಲಿಯಲು ಆರಂಭಿಸುತ್ತಿದೆ ಹೀಗೆ ವ್ಯಾಕರಣ ಪ್ರಜ್ಞೆ ಬೆಳೆದು ಬಂದ ಮೇಲೆ ಭಾಷಾ ಕಲಿಕೆ ಪೂರ್ಣವೆನಿಸಿಕೊಂಡಾಗ ಮಗುವಿನ ಭಾಷೆಯ ಬೆಳವಣಿಗೆಯಾಗಿ ಬಾಲಭಾಷೆ ವಿಕಾಸವಾಗುತ್ತದೆ. ಈ ಮಕ್ಕಳ ಭಾಷೆಯ ಅಧ್ಯಯನವನ್ನು ಬಾಲಭಾಷಾ ವಿಜ್ಞಾನ ಎಂದು ಕರೆಸಿಕೊಳ್ಳುತ್ತದೆ. ಹೀಗೆ ವ್ಯಕ್ತಿ ಭಾಷೆಯಲ್ಲಿ ಮಕ್ಕಳ ಬಾಲಭಾಷೆ ಹೇಗೆ ಪ್ರಾಮುಖ್ಯತೆಯನ್ನು ವಹಿಸುತ್ತದೆ ಎಂದು ಕೆಂಪೇಗೌಡರು ಪರಿಚಯಿಸುತ್ತಾರೆ.

* ಬೆಳವಾಡಿ ಮಂಜುನಾಥ ಅವರ 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ' ಎಂಬ ಕೃತಿಯು ಇತ್ತೀಚಿನ ದಿನಗಳಲ್ಲಿ ಮಕ್ಕಳ ಸಾಹಿತ್ಯದ ಕನ್ನಡ ಪದ್ಯಗಳ ಬಗೆಗೆ ದಿವ್ಯನಿರ್ಲಕ್ಷ್ಯ ಇಂಗ್ಲೀಷ್ ಕವಿತೆಗಳಂತೆ ಈ ಪದ್ಯಗಳು ಮಕ್ಕಳಿಗಾಗಲಿ, ಪೋಷಕರಿಗಾಗಲಿ, ಹಿತವೆನಿಸಲಾರವು. ಪಠಾಸು ಪೆಟ್ಲು ಒಳಜೇಬಲ್ಲಿ, ಕಾಸಿನ ಸಾಲು ಕಳ್ಳ ಜೇಬಲ್ಲಿ, ಚಿನ್ನಿದಾಂಡು ಎಡಬಲದಲ್ಲಿ, ಬಂದ ಬಂದ ಸಂತಮ್ಮಣ್ಣ ಈ ಮಕ್ಕಳ ಪದ್ಯದಲ್ಲಿ ಪಠಾಸು ಪೆಟ್ಲನ್ನು ಇಂದಿನ ಮಕ್ಕಳು ನೋಡಿಯೇ

ಇಲ್ಲ. ಕಾಸಿನ ಪರಿಚಯವಿದ್ದರು ಚಿನ್ನಿದಾಂಡುಗಳ ಪರಿಚಯವಿರುವುದಿಲ್ಲ. ಈಗೇನಿದ್ದರೂ ವೀಡಿಯೋ ಗೇಮ್ಸ್, ಕಂಪ್ಯೂಟರ್ ಗೇಮ್ಸ್, ಕ್ರಿಕೆಟ್ ಮೊದಲಾದ ಆಟಗಳ ಭರಾಟೆಯಾಗಿದೆ. ಇನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ ಪದ್ಯಗಳು ಕೂಡ ಪರೀಕ್ಷೆಯ ದೃಷ್ಟಿಯನ್ನು ಮೀರಿ ಇರಲಾರವು ಎನ್ನುವ ಆತಂಕವನ್ನು ವ್ಯಕ್ತಪಡಿಸುವುದರ ಜೊತೆಗೆ ಈ ಕೃತಿಯಲ್ಲಿ ಆರಂಭದಲ್ಲಿ ಬಂದಂತ ಮಕ್ಕಳ ಸಾಹಿತ್ಯಗಳಾದ ಬಾದಾಮಿ ಕೃಷ್ಣರಾಯರು, ಎಂ.ಎಸ್. ಪುಟ್ಟಣ್ಣ, ಎಸ್.ಜಿ. ನರಸಿಂಹಚಾರ್ಯ, ಎಂ.ಎಲ್. ಶ್ರೀಕಂಠೇಗೌಡ, ಡೆಪ್ಯೂಟಿ ಚೆನ್ನಬಸಪ್ಪ, ಪಂಜೆ ಮಂಗೇಶರಾಯ, ಕೊರೆಡ್ಕಲ್ ಶ್ರೀನಿವಾಸರಾವ್, ಹೊಯ್ಸಳ (ಅರಗಂ ಲಕ್ಷ್ಮಣರಾಯರು), ಜಿ.ಪಿ. ರಾಜರತ್ನಂ ಮೊದಲಾದರವರ ಕಿರು ಪರಿಚಯ ಮತ್ತು ಅವರ ಸಾಹಿತ್ಯ ಸೇವೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

* ಲೋಕೇಶ ಎನ್ನುವವರು 'ಮಕ್ಕಳ ನೀತಿ ಕಥೆಗಳು' ಎನ್ನುವ ಪುಸ್ತಕದಲ್ಲಿ ಮಕ್ಕಳಿಗೆ ಭಕ್ತಿ, ನೀತಿ, ಬುದ್ಧಿವಂತಿಕೆ, ಆದರ್ಶ ಮೊದಲಾದ ವಿಚಾರಗಳ ಜೊತೆಗೆ ಕನ್ನಡ ಭಾಷೆ, ಶುದ್ಧ ಉಚ್ಚಾರಣೆ, ಭಾಷೆಯಲ್ಲಿ ನುಡಿಗಟ್ಟುಗಳು ಹಾಗೂ ಗಾದೆಗಳು ಮೊದಲಾದವುಗಳನ್ನು ಈ ಕಥಾ ಸಂಕಲನವು ಒಳಗೊಂಡಿದೆ. ಮಕ್ಕಳ ಮನಸ್ಸಿಗೆ ಮುದ ನೀಡುವ ಸ್ವರ ಸಂಪೂರ್ಣ ಕಥೆಗಳನ್ನು ಹೊಂದಿರುವುದು ಈ ಕೃತಿಯ ಮತ್ತೊಂದು ವಿಶೇಷ. ಒಟ್ಟಾರೆಯಾಗಿ ಮಕ್ಕಳು ತಮ್ಮ ನಡೆ-ನುಡಿ, ಆಚಾರ-ವಿಚಾರ ಇತ್ಯಾದಿಗಳನ್ನು ತಿದ್ದಿಕೊಂಡು ಜಾಣರಾಗಲು ಈ ಕಥಾಸಂಕಲನವು ಸಹಕಾರಿಯಾಗಿದೆ. ಜೊತೆಗೆ ಈ ಸಂಕಲನದಲ್ಲಿರುವ ಕಥೆಗಳಲ್ಲಿ ಮನುಷ್ಯರು, ಪ್ರಾಣಿಗಳು, ಪಕ್ಷಿಗಳು, ಪಾತ್ರಗಳಾಗಿ ಮಕ್ಕಳನ್ನು ರಂಜಿಸುತ್ತವೆ. ಈ ಕೃತಿಗಳಲ್ಲಿರುವ ಮಕ್ಕಳ ಕಥೆಗಳು ಮಕ್ಕಳ ಮೇಲೆ ಉತ್ತಮ ಪ್ರಭಾವವನ್ನು ಬೀರುವಲ್ಲಿ ಯಶಸ್ವಿಯಾಗುವವು ಎಂದು ಹೇಳಿದ್ದಾರೆ.

* 'ಮಕ್ಕಳ ಸಾಹಿತ್ಯ' ಎಂಬ ಕೃತಿಯನ್ನು ಎ.ಕೆ. ರಾಮೇಶ್ವರ ಅವರ ಕೃತಿಯಾಗಿದೆ. ಈ ಕೃತಿಯು ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುವುದರ ಜೊತೆಗೆ ಒಳ್ಳೆಯ ಸಾಹಿತ್ಯವೂ ಅಗತ್ಯವೆಂದು ಭಾವಿಸಿ ಸಾಹಿತಿಗಳು ಮಕ್ಕಳ ಭಾವ, ಭಾಷೆ, ಅವರ ಆಸೆ-ಆಕಾಂಕ್ಷೆಗಳನ್ನು ಮುಂದಿಟ್ಟುಕೊಂಡು ಕಾವ್ಯ, ನಾಟಕ, ಕಥೆ, ಜೀವನ ಚರಿತ್ರೆ ಮತ್ತು ಚಿತ್ರಗಳನ್ನು ಮಕ್ಕಳಿಗೆ ನೀಡಿದ್ದಾರೆ. ಇಂತಹ ಮಕ್ಕಳ ಸಾಹಿತ್ಯದ ರಚನೆ ಇನ್ನು ಹೆಚ್ಚಿನ ಮಟ್ಟದಲ್ಲಿ ಆಗಬೇಕೆನ್ನುವ ಆಶಯವನ್ನು ಈ ಕೃತಿಯು ಒಳಗೊಂಡಿದೆ.

* ಬಸವರಾಜ ಕೋಡಗುಂಟಿ ಅವರ 'ಮಕ್ಕಳ ಭಾಷಾ ವಿಜ್ಞಾನ ಮತ್ತು ಇತರ ಲೇಖನಗಳು' ಎನ್ನುವ ಕೃತಿಯು ಭಾಷಾವಿಜ್ಞಾನವನ್ನು ಕುರಿತ ಲೇಖನಗಳ ಸಂಕಲನವಾಗಿದೆ. ಇದರಲ್ಲಿ 'ಮಕ್ಕಳ 'ಭಾಷಾ ವಿಜ್ಞಾನ', 'ಮಗು ಮತ್ತು ಭಾಷೆ', 'ಮಕ್ಕಳ ಭಾಷೆ' ಒಂದು ಟಿಪ್ಪಣಿ ಮತ್ತು ಕನ್ನಡದಲ್ಲಿ ಒಂದು ಕುತೂಹಲಕಾರಿ ಕೃತಿ. 'ಮಕ್ಕಳ ಭಾಷೆ' ಹಾಗೂ ಕನ್ನಡ

ವ್ಯಾಕರಣಕ್ಕೆ ಸಂಬಂಧಿಸಿದಂತೆ ಇತರೆ ಲೇಖನಗಳಿವೆ. ಮತ್ತು 'ಮಕ್ಕಳ ಭಾಷೆ ಒಂದು ಟಿಪ್ಪಣಿ' ಈ ಲೇಖನವು ೩೦ನೇ ಅಖಿಲ ಭಾರತ ದ್ರಾವಿಡ ಭಾಷಾ ವಿಜ್ಞಾನಿಗಳ ಸಮ್ಮೇಳನ ೨೦೦೨, ಧಾರವಾಡದಲ್ಲಿ ಮಂಡಿಸಿದ ಪ್ರಬಂಧದ ತಿದ್ದುಪಡಿ ರೂಪವಾಗಿದೆ. ಈ ಲೇಖನದ ಮೂಲಕ ಮಕ್ಕಳ ಭಾಷೆಯನ್ನು ಕುರಿತು ಪಾಶ್ಚಾತ್ಯರಲ್ಲಿ ನಡೆದಂತ ಸಂಶೋಧನೆಗಳು ನಮ್ಮಲ್ಲಿ ನಡೆದಿಲ್ಲವೆನ್ನುತ್ತಾರೆ.

ಈ ಲೇಖನಕ್ಕಾಗಿ ರಾಯಚೂರು ಜಿಲ್ಲೆಯ ಮಸ್ಕಿ ಊರಿನಲ್ಲಿ ಕ್ಷೇತ್ರಕಾರ್ಯ ನಡೆಸಿ ಅಧ್ಯಯನಕ್ಕಾಗಿ ಅಲ್ಲಿನ ನಾಲ್ಕರಿಂದ ಆರು ವರ್ಷ ವಯಸ್ಸಿನ ಒಟ್ಟು ೧೭ ಮಕ್ಕಳನ್ನು ಲಿಂಗಬೇಧವಿಲ್ಲದೆ ಆಯ್ಕೆಮಾಡಿಕೊಂಡಿದ್ದಾರೆ. ಈ ಎಲ್ಲ ಮಕ್ಕಳು ಮಧ್ಯಮ ವರ್ಗದ ಕುಟುಂಬದಿಂದ ಬಂದವರಾಗಿದ್ದು, ಮಸ್ಕಿಯವರೆ ಆಗಿರುತ್ತಾರೆ. ಇವರ ಮನೆ ಮಾತು ಕನ್ನಡ ಭಾಷೆಯೇ ಆಗಿರುತ್ತದೆ. ಇಲ್ಲಿ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಹ್ರಸ್ವ–ದೀರ್ಘಗಳನ್ನು ಮಕ್ಕಳು ಸರಿಯಾಗಿಯೇ ಉಚ್ಚರಿಸಿದರು. ಆದರೆ ಕೆಲವು ಮಕ್ಕಳು ದೀರ್ಘಸ್ವರಗಳನ್ನು ವಾಕ್ಯ ಮಾಡಿ ಹೇಳುವಾಗ ಉಚ್ಚಾರಣೆ ಸ್ಪಷ್ಟವೆನಿಸದೆ ಗೊಂದಲದಲ್ಲಿದ್ದಂತೆ ಕಂಡು ಬಂತು. ಇನ್ನು ಅಲ್ಪಪ್ರಾಣ–ಮಹಾಪ್ರಾಣಗಳ ಬಳಕೆಯಲ್ಲಿ ಬಹುತೇಕ ಮಕ್ಕಳಲ್ಲಿ ಅಲ್ಪಪ್ರಾಣ–ಮಹಾಪ್ರಾಣಗಳ ನಡುವಿನ ಬೇಧದ ಅರಿವೆ ಇಲ್ಲ ಎನ್ನುವಂತೆ ಕಂಡುಬಂದಿತು. ಹೀಗೆ ಅಧ್ಯಯನವನ್ನು ನಡೆಸಿದಾಗ ನಾಲ್ಕರಿಂದ ಆರು ವರ್ಷ ವಯಸ್ಸಿನ ಮಕ್ಕಳು ಮೂರರಿಂದ ನಾಲ್ಕು ಶಬ್ದಗಳ ವಾಕ್ಯಗಳನ್ನು ಹೇಳಬಲ್ಲರು, ಆರು ಏಳು ಶಬ್ದಗಳನ್ನು ಬಳಸುವಾಗ ಎರಡು ಇಲ್ಲವೇ ಮೂರು ವಾಕ್ಯಗಳನ್ನು ಜೋಡಿಸಿಯೇ ಹೇಳುತ್ತಾರೆ. ಹೀಗಾಗಿ ಮಕ್ಕಳ ಭಾಷಿಕ ಸಾಮರ್ಥ್ಯದಲ್ಲಿ ಮಕ್ಕಳಿಗಾಗಿ ಸಾಕಷ್ಟು ಅಧ್ಯಯನಗಳು ನಡೆಯುವ ಅಗತ್ಯತೆ ಇದೆ ಎಂದು ಈ ಲೇಖನದ ಮೂಲಕ ಮಕ್ಕಳ ಭಾಷೆಯ ಸ್ಥಿತ್ಯಂತರವನ್ನು ಬಿಚ್ಚಿಟ್ಟಿದ್ದಾರೆ.

* ಟಿ.ಎಸ್. ನಾಗರಾಜ ಶೆಟ್ಟಿ ಅವರ 'ಮಕ್ಕಳ ಸಾಹಿತ್ಯ : ಕೆಲವು ಅಧ್ಯಯನಗಳು' ಎಂಬ ಪುಸ್ತಕವು ಬೇರೆ ಬೇರೆ ಕಡೆಗಳಲ್ಲಿ ನಡೆದ ವಿವಿಧ ವಿಚಾರ ಸಂಕಿರಣಗಳಲ್ಲಿ, ಮಕ್ಕಳ ಸಾಹಿತ್ಯ ಸಮ್ಮೇಳನಗಳಲ್ಲಿ ಮಂಡಿಸಿದ ಹಾಗೂ ಪತ್ರಿಕೆಗಳಿಗಾಗಿ ಸಿದ್ಧಪಡಿಸಿದ್ದ ಮಕ್ಕಳ ಸಾಹಿತ್ಯವನ್ನು ಕುರಿತ ಕೆಲವು ಲೇಖನಗಳ ಸಂಕಲನವಾಗಿದೆ. ಇದರಲ್ಲಿನ ಕೆಲವು ಲೇಖನಗಳ ವಿಶಿಷ್ಟವಾಗಿದ್ದು ಅವು ಮಕ್ಕಳ ಸಾಹಿತ್ಯದ ಬಗೆಗೆ ಹಲವು ಸುಳಿವುಗಳನ್ನು ನೀಡಬಲ್ಲವಾಗಿವೆ. ಈ ಕೃತಿಯು ಮಕ್ಕಳ ಸಾಹಿತ್ಯವನ್ನು ಕುರಿತು ಅಧ್ಯಯನವನ್ನು ಮಾಡುವವರಿಗೆ ಉಪಯುಕ್ತವಾಗಿದೆ.

* 'ಪಂಜೆ ಮಂಗೇಶರಾಯರ ಮಕ್ಕಳ ಸಾಹಿತ್ಯ' ಎನ್ನುವ ಕೃತಿಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಹೊರತಂದಿದ್ದಾರೆ. ೧೯ನೇ ಶತಮಾನದ ಹಿರಿಯ ಸಾಹಿತಿಗಳಲ್ಲಿ ಅಗ್ರಗಣ್ಯರಾದ ಪಂಜೆ ಮಂಗೇಶರಾಯರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಣ್ಣ ಕಥೆಗಳ ಜನಕರೆಂದು

ಪ್ರಸಿದ್ಧರಾಗಿದ್ದಾರೆ. ಅಲ್ಲದೆ ಮಂಗೇಶರಾಯರು ಕನ್ನಡದ ಮಕ್ಕಳ ಸಾಹಿತ್ಯಕ್ಕೂ ಆದ್ಯರಾಗಿದ್ದಾರೆ. ಸರಳವಾದ ವರ್ಣನೆ, ಆಡು ಭಾಷೆಯ ಪದಗಳ ಬಳಕೆ, ರಚನೆ, ವಿಷಯವನ್ನು ವಿಸ್ತಾರಗೊಳಿಸಿ ಹೇಳುವುದರಲ್ಲಿ ಮೊದಲಿಗರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಹಿರಿಯ ಸಾಹಿತಿಗಳ ಪ್ರಸಿದ್ಧ ಹಾಗೂ ಅಲಭ್ಯವಾದ ಕೃತಿಗಳನ್ನು ಪುನರ್ ಮುದ್ರಿಸುವ ಯೋಜನೆಯಲ್ಲಿ ಪಂಜೆ ಮಂಗೇಶರಾಯರ ಸಮಗ್ರ ಮಕ್ಕಳ ಸಾಹಿತ್ಯ ಸಂಗ್ರಹ ಮಾಡಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಮಂಗೇಶರಾಯರ ಮಕ್ಕಳ ಕಥನಗಳು, ಜೋಗುಳಗಳು ಮತ್ತು ನಡತೆಯ ಗೀತೆಗಳು, ಚಿಕ್ಕ ಕಥೆಗಳು ಮತ್ತು ಲಘು ಹಾಸ್ಯ ಕಥನಗಳು, ನಿಸರ್ಗ ಗೀತೆಗಳು ಮತ್ತು ಭಾವಗೀತೆಗಳು ದೇಶಭಕ್ತಿಯ ಮತ್ತು ಸಾಮಾಜಿಕ ಹಾಡುಗಳು ಹಾಗೂ ಹಳ್ಳಿಯ ಶೈಲಿಯಲ್ಲಿ ರಚಿಸಿದ ಪದ್ಯಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ. ಈ ಕೃತಿಯು ಮಕ್ಕಳ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುವವರಿಗೆ ಉಪಯುಕ್ತವಾಗಿದೆ.

* ಎನ್.ಕೆ. ರಾಮಶೇಷನ್ ಅವರು ಮೈಸೂರು ವಿಶ್ವವಿದ್ಯಾಲಯ ಗೃಹಸರಸ್ವತಿ ಗ್ರಂಥಮಾಲೆಗೆ ಬರೆದ 'ಜಿ.ಪಿ. ರಾಜರತ್ನಂ' ಎಂಬ ಕೃತಿಯು ರಾಜರತ್ನಂರವರ ಸಮಗ್ರ ಜೀವನದ ಒಂದು ಪಕ್ಷಿನೋಟವಾಗಿದೆ. ಇದರಲ್ಲಿ ರಾಜರತ್ನಂರವರ ಬದುಕು ಕೃತಿಯನ್ನು ಕುರಿತ ಅವಲೋಕನವಿದೆ. ಇದರ ಎರಡನೇ ಭಾಗದಲ್ಲಿ ರಾಜರತ್ನಂ ಈ ಕೃತಿಯಲ್ಲಿ ವೈವಿಧ್ಯ, ವೈಶಿಷ್ಟ್ಯ ಎನ್ನುವುದರಲ್ಲಿ ರಾಜರತ್ನಂರ ಮಕ್ಕಳ ಸಾಹಿತ್ಯವನ್ನು ಕುರಿತು ಪರಿಚಯಿಸಲಾಗಿದೆ. ಇವರು ಕನ್ನಡದ ಮಕ್ಕಳ ಸಾಹಿತ್ಯದ ಪ್ರಕಾರವನ್ನು ಬೆಳೆಸಿದವರಲ್ಲಿ ಪ್ರಮುಖರು. ಇವರ 'ಬಣ್ಣದ ತಗಡಿನ ತುತ್ತೂರಿ'ಯಿಂದ ಹಿಡಿದು ಅದೆಷ್ಟು ಮಕ್ಕಳ ಪ್ರಸಿದ್ಧ ಕವನಗಳನ್ನು, ಕಥೆಗಳನ್ನು ಬರೆದಿದ್ದಾರೆ. ಇವರ ಕಥೆಗಳಲ್ಲಿ ಬುದ್ಧನ ಕಥೆಗಳು, ಸ್ನೇಹದ ಕಥೆಗಳು, ಜೈನರ ಕಥೆಗಳು, ಮೇಲುಪಂಕ್ತಿಯ ಕಥೆಗಳು, ಒಡೆಯರ ಕಾಲದ ಕಥೆಗಳು, ವತ್ಸರಾಜನ ಕಥೆಗಳು, ತಾವರೆಯ ಕಥೆಗಳು, ಏಕಲವ್ಯನ ಕಥೆಗಳು ಮೊದಲಾದ ಪ್ರಕಾರಗಳ ಕಥೆಗಳನ್ನು ರಚಿಸಿದ್ದಾರೆ. ಅಲ್ಲದೆ ಹಲವಾರು ಪ್ರಸಿದ್ಧ ಮಕ್ಕಳ ಕವನಗಳನ್ನು ರಚಿಸಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ರಾಜರತ್ನಂ ರವರ ಮಕ್ಕಳ ಸಾಹಿತ್ಯವನ್ನು ಪ್ರತ್ಯಕ್ಷವಾಗಿ ಅಧ್ಯಯನ ಮಾಡುವಷ್ಟು ಮಕ್ಕಳಿಗಾಗಿ ಸಾಹಿತ್ಯವನ್ನು ರಚಿಸಿದ್ದಾರೆ.

* ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಎಚ್ಚೆಸ್ವಿ ಸಮಗ್ರ ಮಕ್ಕಳ ಸಾಹಿತ್ಯ' ಎನ್ನುವ ಕೃತಿಯನ್ನು ೨೦೧೩ರಲ್ಲಿ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯವರು ಪ್ರಕಟಿಸಿದ್ದಾರೆ. ಎಚ್ಚೆಸ್ವಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯು ೨೦೧೩ರ ಬಾಲ ಸಾಹಿತ್ಯ ಪುರಸ್ಕಾರವನ್ನು ನೀಡಿದ ಸವಿ ನೆನಪಿಗಾಗಿ ಅವರ ಒಟ್ಟು ಮಕ್ಕಳ ಸಾಹಿತ್ಯವನ್ನೆಲ್ಲಾ ಒಟ್ಟುಗೂಡಿಸಿ ಒಂದು ಬೃಹತ್ ಸಂಪುಟವಾಗಿ ಪ್ರಕಟಿಸಿದ್ದಾರೆ. ಇದರಲ್ಲಿ ಎಚ್.ಎಸ್. ವೆಂಕಟೇಶಮೂರ್ತಿಯವರು ಮಕ್ಕಳಿಗಾಗಿ ೧೯೭೪ರಲ್ಲಿ ಬರೆದ ಕವನ ಸಂಕಲನದಿಂದ ಹಿಡಿದು ಇಂದಿನವರೆಗಿನ ಒಟ್ಟು ಅವರ ಮಕ್ಕಳ ಸಾಹಿತ್ಯದ ಸಂಗ್ರಹಣೆ ಇದೆ. ಇವರು ಮಕ್ಕಳಿಗಾಗಿ ಕವನಗಳನ್ನೇ ಹೆಚ್ಚಾಗಿ

ಬರೆದಿದ್ದಾರೆ. ಅಮಾನುಷರು, ಕದರಿನ ಕೋಟೆ, ಅಗ್ನಿಮುಖಿ ಇವರ ಪ್ರಮುಖ ಕಥೆಗಳಾದರೆ, 'ಅಳಿಲುರಾಮಾಯಣ', 'ಸುಣ್ಣದ ಸುತ್ತೆ', 'ಕಂಸಾಯಣ ಮತ್ತು ಕುಣಿ ಕುಣಿ ನವಿಲೆ' ಮೊದಲಾದವು ಇವರ ಪ್ರಮುಖ ಮಕ್ಕಳ ನಾಟಕಗಳಾಗಿವೆ.

* ನಾ. ಕಸ್ತೂರಿ ಅವರ 'ಪಾತಾಳದಲ್ಲಿ ಪಾಪಚ್ಚಿ' ಕೃತಿಯು ಇಂಗ್ಲೀಷಿನಲ್ಲಿ ಕ್ಲಾಸಿಕ್ ಎನಿಸಿಕೊಂಡಿದೆ. ಇದು ವಿಶ್ವದಾದ್ಯಂತ ಪ್ರಸಿದ್ಧಿಯಾದ ಲೂಯಿ ಕೆರೋಲ್‌ನ 'ಆ್ಯಲೀಸ್ ಇನ್ ವಂಡರ್ ಲ್ಯಾಂಡ್' ಕೃತಿಯನ್ನು ಸಂಗ್ರಹವಾಗಿ ಕನ್ನಡದಲ್ಲಿ ತಂದದ್ದು ತುಂಬಾ ಗಮನಾರ್ಹವಾಗಿದೆ. ಈ ಕೃತಿಯು ಕನ್ನಡದ ಮಕ್ಕಳಿಗೆ ಕನ್ನಡದ್ದೇ ಕೃತಿ ಎನ್ನುವ ಹಾಗೆ ಮೂಡಿಬಂದಿರುವುದನ್ನು ಕಾಣಬಹುದು. ಈ ಕೃತಿಯಲ್ಲಿ ಪ್ರಾರಂಭದಲ್ಲಿ ಅದರ ಮೂಲ ಕೃತಿಯಲ್ಲಿನ ಚಿತ್ರಗಳನ್ನೇ ಬಳಸಿಕೊಳ್ಳಲಾಗಿತ್ತು. ನಂತರ ಅವಧಿಯಲ್ಲಿ ಇದನ್ನು ಭಾಷಾಂತರ ಮಾಡುವಲ್ಲಿ ಕೆಲವು ಸನ್ನಿವೇಶಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಸನ್ನಿವೇಶಗಳನ್ನು ಬಿಟ್ಟು ಕನ್ನಡಕ್ಕೆ ಅನುಗುಣವಾಗುವಂತೆ ಅಲ್ಲಲ್ಲಿ ಹಲವಾರು ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಇಲ್ಲಿನ ಕಥೆಯನ್ನು ಸಹ ಸ್ವಲ್ಪ ಬದಲಾವಣೆಯನ್ನು ಮಾಡಲಾಗಿದೆ ಎನ್ನಬಹುದು. ಈ ಕಥೆಯಲ್ಲಿ ಆಲೀಸಳ ಬದಲಿಗೆ ಪಾಪಚ್ಚಿ ಕಾಣಿಸಿಕೊಂಡಿದ್ದಾಳೆ. ಪ್ರಾಣಿಗಳೆಲ್ಲವು ಕನ್ನಡದಲ್ಲಿಯೇ ಮಾತನಾಡಿರುವುದನ್ನು ಕಾಣುತ್ತೇವೆ. ಇದರಲ್ಲಿ ಕನ್ನಡ ಪರಿಸರವೇ ಇದೆ. ಇಲ್ಲಿ ಪಾಶ್ಚಾತ್ಯ ವಾತಾವರಣದ ಕಥೆಯು ಕನ್ನಡದ್ದಾಗಿ ಅರಳಿರುವುದನ್ನು ಕಾಣಬಹುದು.

* ಶಿವರಾಮ ಕಾರಂತರು ಮಕ್ಕಳ ಕೂಟದ ಮಕ್ಕಳ ಉತ್ಸವ ಮತ್ತು ಮಕ್ಕಳೊಂದಿಗಿನ ನಿಕಟ ಸಂಪರ್ಕ ಹೊಂದಿದ ಇವರು ಇಡೀ ಭಾರತೀಯ ಭಾಷೆಗಳಲ್ಲಿಯೇ ಮೊಟ್ಟ ಮೊದಲಿಗೆ ಕನ್ನಡದಲ್ಲಿ ಮಕ್ಕಳ ಜ್ಞಾನಕೋಶವಾಗಿ 'ಬಾಲಪ್ರಪಂಚ' ಎಂಬ ಮೂರು ಸಂಪುಟಗಳ ಕೃತಿ, ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಸಂಚಲನವನ್ನು ಮೂಡಿಸಿತು. ಸು. ೧೮೦೦ ಪುಟಗಳಷ್ಟು ವಿಸ್ತಾರ ಹೊಂದಿದ್ದು ಪ್ರತಿ ಸಂಪುಟವು ಸು. ೬೦೦ ಪುಟಗಳಷ್ಟಿವೆ. ಇದರ ಪ್ರತಿ ಸಂಪುಟದಲ್ಲಿ ಕಾರಂತರು ಜ್ಞಾನಖಂಡವನ್ನು ೧೩ ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಈ ವಿಭಾಗಗಳೆಂದರೆ ಪ್ರಕೃತಿ ವಿಜ್ಞಾನ, ನಾಡುಗಳು, ನೆಲೆವೀಡುಗಳು, ಸಾಹಿತ್ಯ ಕಲೆ, ಇತಿಹಾಸರಂಗ, ಭೌತವಿಜ್ಞಾನ, ಯಂತ್ರಯುಗ, ವಿಶ್ವಕರ್ಮದ ಸಾಹಸಗಳು, ಜೀವನ ಚರಿತ್ರೆ, ಉದ್ಯೋಗರಾಜ್ಯ, ಏನು? ಎಂಥದು? ಸಮಾಜವಿಜ್ಞಾನ, ಕ್ರೀಡಾವನ, ಎಂಜಿನಿಯರಿಂಗ್ ಸಾಹಸಗಳು ಇತ್ಯಾದಿ ಇದರ ಎಲ್ಲಾ ಲೇಖನಗಳು ಈ ಹದಿಮೂರು ವಿಭಾಗಗಳಲ್ಲಿ ಇದ್ದು ಇದೇ ಕ್ರಮದಲ್ಲಿ ಮೂರು ಸಂಪುಟಗಳಲ್ಲಿ ಬರುತ್ತವೆ.

ಇದರ ಪ್ರತಿ ಸಂಪುಟಕ್ಕೂ ಒಂದು ಇಲ್ಲವೆ ಎರಡು ಚಿತ್ರಗಳಿವೆ. ಇದರ ಪ್ರಥಮ ಸಂಪುಟವು ೧೯೩೪-೩೫ರಲ್ಲಿ ಪ್ರಕಟವಾಗಿದೆ. ಎರಡನೇ ಸಂಪುಟವು ೧೯೩೫-೩೬ರಲ್ಲಿ

ಮತ್ತು ಮೂರನೇ ಸಂಪುಟವು ೧೯೩೬–೩೭ರಲ್ಲಿ ಪ್ರಕಟವಾಗಿದೆ. ಈ ಸಂಪುಟಗಳು ಎಲ್ಲಾರ ಮೆಚ್ಚುಗೆಯನ್ನು ಗಳಿಸಿರುವುದಲ್ಲದೆ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಪ್ರೇರಣೆಯನ್ನು ನೀಡಿದವು. ಇವುಗಳು ಓದುಗರಿಗೆ ಬಹಳ ಬೇಗನೆ ಅರ್ಥವಾಗುವಂತಿವೆ. ಇದರ ನಿರೂಪಣಾ ಶೈಲಿಯು ತುಂಬಾ ವಿಶಿಷ್ಟವಾಗಿದೆ. ಈ ಸಂಪುಟಗಳು ಮಕ್ಕಳ ಸಾಹಿತ್ಯ ಅಧ್ಯಯನಕ್ಕೆ ಮತ್ತು ಮಕ್ಕಳಿಗೆ ತುಂಬಾ ಉಪಯುಕ್ತವಾಗಿವೆ.

* ಶಿವರಾಮ ಕಾರಂತರು ಮಕ್ಕಳಿಗಾಗಿ 'ಬಾಲಪ್ರಪಂಚ' ಎಂಬ ಮೂರು ಸಂಪುಟಗಳಲ್ಲದೆ ಮಕ್ಕಳಿಗಾಗಿ ೧೯೫೯ರ ವೇಳೆಗೆ 'ವಿಜ್ಞಾನ ಪ್ರಪಂಚ' ಎಂಬ ಪ್ರಥಮ ಸಂಪುಟವನ್ನು ಹೊರತಂದರು. ಈ ಕೃತಿಯು ಮಕ್ಕಳಿಗೆ ವಿಜ್ಞಾನದಲ್ಲಿನ ಹೊಸ ಸಾಧನೆಗಳನ್ನು, ಸಂಶೋಧನೆಗಳನ್ನು ಪರಿಚಯ ಮಾಡಿಕೊಡುವುದಕ್ಕಾಗಿ ತಂದರು. ಸು. ೫೦೦ ಪುಟಗಳಷ್ಟು ವಿಸ್ತಾರವಾಗಿರುವ 'ವಿಜ್ಞಾನ ಪ್ರಪಂಚ'ವನ್ನು ೪ ಸಂಪುಟಗಳಲ್ಲಿ ಪ್ರಕಟಿಸಿದರು. ಇದರ ಮೊದಲ ಸಂಪುಟದ ಶೀರ್ಷಿಕೆ 'ಈ ಜಗತ್ತು' ಇದರಲ್ಲಿ ಭೂ ವಿಜ್ಞಾನ, ಸಾಗರ ವಿಜ್ಞಾನ, ಖಗೋಳ ವಿಜ್ಞಾನ ಮತ್ತು ವಾತಾವರಣ ವಿಜ್ಞಾನ ಎಂಬ ವಿಷಯಗಳನ್ನು ಕುರಿತ ೭೦ಕ್ಕೂ ಹೆಚ್ಚು ಲೇಖನಗಳಿದ್ದು, ೩೪೬ಕ್ಕೂ ಹೆಚ್ಚು ಚಿತ್ರಗಳಿವೆ.

'ವಿಜ್ಞಾನ ಪ್ರಪಂಚ'ದ ಎರಡನೇ ಸಂಪುಟದ ಹೆಸರು 'ಜೀವ ಜೀವನ' ಎಂದು. ಈ ಸಂಪುಟದಲ್ಲಿ ಜೀವ ವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಮನಃಶಾಸ್ತ್ರ ಮತ್ತು ಪ್ರಕೃತಿ ವಿಜ್ಞಾನ ಮೊದಲಾದ ವಿಷಯಗಳನ್ನು ಹೊಂದಿದೆ. ಇನ್ನು ಇದರ ಮೂರನೇ ಸಂಪುಟವು 'ವಸ್ತು ಚೈತನ್ಯ'ವಾಗಿದ್ದು ಇದರಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಭೌತವಿಜ್ಞಾನ, ಸಾಪೇಕ್ಷ ಸಿದ್ಧಾಂತ, ಜೀವ ರಸಾಯನ ವಿಜ್ಞಾನ ಮುಂತಾದ ವಿಷಯಗಳನ್ನು ಕುರಿತ ೬೦ಕ್ಕೂ ಹೆಚ್ಚು ಲೇಖನಗಳು ಮತ್ತು ೫೦೦ಕ್ಕೂ ಹೆಚ್ಚು ಚಿತ್ರಗಳನ್ನು ಒಳಗೊಂಡಿದೆ.

ನಾಲ್ಕನೇ ಸಂಪುಟ 'ವಿಜ್ಞಾನ ಸಾಧನ' ಇದರಲ್ಲಿ ವಾಹನಗಳು, ಎಂಜಿನ್‌ಗಳು, ಇಲೆಕ್ಟ್ರಾನಿಕ್ಸ್, ವಿಜ್ಞಾನಿಗಳು ಮೊದಲಾದ ವಿಚಾರಗಳನ್ನು ಕುರಿತ ಲೇಖನಗಳಿವೆ. ಹೀಗೆ ಶಿವರಾಮ ಕಾರಂತರು ಹೊರತಂದ ಈ ಸಂಪುಟಗಳು ಬೃಹತ್ ಮತ್ತು ವಿವಿಧತೆಯಿಂದ ಕೂಡಿದ್ದು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಅಪರೂಪವೆನಿಸಿವೆ.

ಆರ್. ರಾಮಕೃಷ್ಣ ಅವರು ರಚಿಸಿರುವ 'ಭಾಷಾ ವಿಜ್ಞಾನ ವಿಹಾರ' ಎಂಬ ಕೃತಿಯಲ್ಲಿ 'ಬಾಲಭಾಷೆ' ಎಂಬ ಲೇಖನದಲ್ಲಿ ಮಗುವಿನ ಭಾಷೆಯ ಕಲಿಕೆಯ ಹಂತಗಳು ಮತ್ತು ಅದರ ಬೆಳವಣಿಗೆಯನ್ನು ಕುರಿತು ವಿವರಿಸುತ್ತಾ ಬಾಲಭಾಷೆ ಎಂದರೇನು ಎಂದು ಅನೇಕ ವಿದ್ವಾಂಸರು ಹೇಳುವ ಪ್ರಯತ್ನ ಮಾಡಿದ್ದಾರೆ. ಆದರೂ ಭಾಷೆಯ ಪೂರ್ಣಸ್ವರೂಪವನ್ನು ಹೇಳಲು ಸಾಧ್ಯವಾಗಿಲ್ಲ. ಬಾಲಭಾಷೆಯನ್ನು ಒಂದು ರೀತಿಯ ಪಿಡ್ಜಿನ್ (ಮಿಶ್ರಭಾಷೆ) ಎನ್ನಬಹುದು ಎಂದು ಜೇಕಬಾಸನ್

ಅವರು ಹೇಳಿದ್ದಾರೆ. ಈ ಬಾಲಭಾಷೆ ಎನ್ನುವ ಭಾಷೆಯ ಒಂದು ವಿಶಿಷ್ಟರೂಪ ಇದನ್ನು ವಿಶೇಷವಾಗಿ ತಾಯಿ ಮಗುವಿನೊಂದಿಗೆ ವ್ಯವಹರಿಸಲು ಬಳಸುತ್ತಾಳೆ ಎನ್ನುವರು. ಅಲ್ಲದೆ ಈ ಲೇಖನದಲ್ಲಿ ರಾಮಕೃಷ್ಣ ಅವರು ಬಾಲಭಾಷೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಪ್ರಾರಂಭದ ಅಸ್ಪಷ್ಟ ಸದ್ದುಗಳು, ಪದ, ವಾಕ್ಯ ಇದರ ಪ್ರಾರಂಭದ ಮಗುವಿನ ಅಸ್ಪಷ್ಟ ಮಾತುಗಳಲ್ಲಿ ಮಗುವಿನ ಮಾತಿನಶಕ್ತಿಯು ಮೂಲ ಜನನರೋಧನೆಯೊಡನೆ ಪ್ರಾರಂಭವಾಗುತ್ತದೆ. ಅಂದರೆ ಮಗುವಿನ ಹುಟ್ಟಿದ ತತ್‌ಕ್ಷಣದ ಅಳುವಾಗಿರುತ್ತದೆ. ನಂತರ ಮಗು ಕೆಮ್ಮಿದಾಗ, ಸೀನುವಾಗ ಅದರ ಪ್ರತಿಕ್ರಿಯೆಯಾಗಿ ಶಬ್ದೋತ್ಪತ್ತಿಗೆ ಕಾರಣವಾಗುತ್ತದೆ. ಹೀಗೆ ಮುಂದುವರೆದ ಮಗುವಿನ ಭಾಷೆಯ ಪ.ಬ.ಮ.ತ.ಪ. ಮೊದಲಾದ ಧ್ವನಿಗಳನ್ನು ಉಚ್ಚರಿಸಲು ಪ್ರಾರಂಭಿಸುತ್ತದೆ ಎನ್ನುವರು. ಇದು ಮುಂದುವರೆದು ಸು. ೯ನೇ ತಿಂಗಳಿಗೆ ಮಗು ಮತ್ತೊಬ್ಬರ ಮಾತನ್ನು ಆಲಿಸಿ ಅದರಂತೆಯೇ ಅನುಕರಿಸಲು ಪ್ರಾರಂಭಿಸುತ್ತದೆ. ನಂತರ ೩ ವರ್ಷವಾಗುವ ವೇಳೆಗಾಗಲೇ ಮಗು ಸಣ್ಣ ಸಣ್ಣ ವಾಕ್ಯಗಳೊಂದಿಗೆ ಮಾತನ್ನು ಆರಂಭಿಸುತ್ತದೆ. ಹೀಗೆ ಬಾಲಭಾಷೆಯು ಬಹುಮಟ್ಟಿಗೆ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಅವಲಂಬಿಸಿರುವುದನ್ನು ಕಾಣಬಹುದು.

* ಸಾಂಬಮೂರ್ತಿ ಅವರು ರಚಿಸಿರುವ 'ನುಡಿನಡೆ' ಕೃತಿಯಲ್ಲಿನ ಬಾಲಭಾಷೆ ವಿಶಿಷ್ಟ ಪದಕೋಶ ಎಂಬ ಲೇಖನದಲ್ಲಿ ಭಾಷೆಯ ಕಲಿಕೆ ಎಂಬುದು ಮಗುವಿನ ಶೈಶವಸ್ಥೆಯಿಂದ ಆರಂಭವಾಗಿ ಹಂತ ಹಂತವಾಗಿ ಸಾಗುತ್ತಾ ಹೋಗುತ್ತದೆ. ಮಗುವಿನ ಭಾಷಾ ಬೆಳವಣಿಗೆಯನ್ನು ಕುರಿತ ಅಧ್ಯಯನಗಳು ಮಕ್ಕಳ ಭಾಷಾ ಬೆಳವಣಿಗೆ ಮೂರು ರೀತಿಯಲ್ಲಿರುತ್ತದೆ. ಅದು ಪ್ರಾರಂಭದ ಅಳು, ಕಿರುಚುವುದು, ಕೂಗುವುದು ಇತ್ಯಾದಿ.

ಮಗುವಿಗೆ ಭಾಷಾಲೋಕ ಆರಂಭಗೊಂಡ ನಂತರ ಭಾಷೆಯನ್ನು ರೂಢಿಸಿಕೊಳ್ಳಲು ತಾಯಿಯೇ ಕಾರಣಳಾಗುತ್ತಾಳೆ. ಮಗುವಿನ ಭಾಷೆಯ ಕಲಿಕೆಗೆ ತಾಯಿ ಮುಖ್ಯವಾದ ಪಾತ್ರವನ್ನು ವಹಿಸುತ್ತಾಳೆ. ಅಂದರೆ ಆರಂಭದ ದಿನಗಳಲ್ಲಿ ತಾಯಿ ಸದಾ ಜೊತೆಯಲ್ಲಿಯೇ ಇರುವುದರಿಂದ ಇವರಲ್ಲಿ ಒಂದು ಅನ್ಯೋನ್ಯ ಭಾಷೆಯ ಬಂಧ ಏರ್ಪಡುತ್ತದೆ.

ತಾಯಿ ತನ್ನ ಮಗುವಿನೊಡನೆ ಮಾತನಾಡುವಾಗ ವಿಶಿಷ್ಟ ಶೈಲಿಯಲ್ಲಿ ಭಾಷೆಯನ್ನು ಬಳಸುತ್ತಾಳೆ. ಇಲ್ಲಿ ವಿಶಿಷ್ಟವಾದ, ವಿಶೇಷವಾದ, ಸೀಮಿತವಾದ ಪದಬಳಕೆಯನ್ನು ಮಾಡುತ್ತಾಳೆ. ಇಲ್ಲಿ ತಾಯಿ ತನ್ನ ಮಗುವಿನೊಡನೆ ಮಾತನಾಡುವಾಗ ತಿರಾ ಸರಳೀಕರಿಸಿದ ರೂಪದಲ್ಲಿ ಮಾತನಾಡುತ್ತಾಳೆ. ಧ್ವನ್ಯಾತ್ಮಕವಾಗಿ ಸರಳೀಕರಿಸುವ ರೀತಿಯೆಂದರೆ ಉಚ್ಚಾರಣೆಗೆ ಕಠಿಣವೆನಿಸುವ ಧ್ವನಿಗಳನ್ನು ಬಳಸದೆ ಸುಲಭ ಧ್ವನಿಗಳನ್ನು ಬಳಸುವುದನ್ನು ಕಾಣಬಹುದು.

ಈ ಲೇಖನದ ಪ್ರಮುಖ ಉದ್ದೇಶವೆಂದರೆ ಕನ್ನಡದಲ್ಲಿನ ಬಾಲಭಾಷೆಯನ್ನು ಕುರಿತ ಪದಕೋಶದ ಬಗೆಗಿನ ಮಾಹಿತಿಯನ್ನು ನೀಡುವುದಾಗಿದೆ. ಈ ಪದಕೋಶದಲ್ಲಿನ ಪದಗಳನ್ನು

ಬೇರೆ ಬೇರೆ ಪ್ರದೇಶಗಳಿಗೆ ಸೇರಿದ ತಾಯಂದಿರಿಂದ ಸಂಗ್ರಹಿಸಿದ ಉದಾಹರಣೆಗಳ ಮೂಲಕ ವಿಶ್ಲೇಷಿಸಿರುವುದನ್ನು ಕಾಣಬಹುದಾಗಿದೆ. ಹೀಗೆ ಮಗುವಿನ ಭಾಷೆಯ ಕಲಿಕೆಯಲ್ಲಿ ಈ ಲೇಖನದ ಪದಗಳು ತುಂಬಾ ಉಪಯುಕ್ತವೆನಿಸಿವೆ.

* ಸಂಗಮೇಶ ಸವದತ್ತಿಮಠರವರ 'ಭಾಷಾಲೇಖ' ಕೃತಿಯು ಕನ್ನಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ ಪ್ರಬಂಧಗಳನ್ನು ಒಳಗೊಂಡ ಕೃತಿ. ಇದರಲ್ಲಿ ೩೫ ಲೇಖನಗಳನ್ನು ಸಂಕಲಿಸಿ ೯ ದಳಗಳಲ್ಲಿ ಪೋಣಿಸಿ ಲೇಖನ ಮಾಲೆಯನ್ನು ಹೊರತಂದಿದ್ದಾರೆ. ಸಾಮಾನ್ಯ ಭಾಷಾವಿಜ್ಞಾನ, ವರ್ಣನಾತ್ಮಕ ಭಾಷಾವಿಜ್ಞಾನ, ಐತಿಹಾಸಿಕ ಭಾಷಾ ವಿಜ್ಞಾನ, ತೌಲನಿಕ ಉಪಭಾಷಾ ವಿಜ್ಞಾನ, ಪ್ರಬೇಧ ಭಾಷೆ, ದ್ವಿಭಾಷಿಕತೆ, ನಿಷ್ಪತ್ತಿ, ನಿಘಂಟು ಮೊದಲಾದ ಆಧುನಿಕ ಭಾಷಾವಿಜ್ಞಾನದ ಹಲವು ಆಯಾಮಗಳನ್ನು ಎತ್ತಿಕೊಂಡು ಚಿಂತನೆಯನ್ನು ನಡೆಸಿದ್ದಾರೆ.

ಈ ಕೃತಿಯ ಕನ್ನಡ ಭಾಷೆ, ಭಾಷಾ ವೈಜ್ಞಾನಿಕ ಚಿಂತನೆಗಳು ಎಂಬ ಲೇಖನದಲ್ಲಿ ಕನ್ನಡ ಭಾಷೆಯ ಹುಟ್ಟು ಬೆಳವಣಿಗೆಯನ್ನು ಪರಿಚಯಿಸುತ್ತಾ 'ಮಕ್ಕಳ ಭಾಷೆ'ಯನ್ನು ಕುರಿತು ಚರ್ಚಿಸಿದ್ದಾರೆ. ಮಗುವಿನ ಭಾಷಾಧ್ಯಯನ ಮನುಷ್ಯನ ಭಾಷಾಧ್ಯಯನಕ್ಕೆ ಉತ್ತಮ ಪೀಠಿಕೆ ಎನ್ನುತ್ತಾ ಮಾನವನ ಭಾಷೆಯ ವಿಶಿಷ್ಟ ಲಕ್ಷಣಗಳಾದ ಯಾದೃಚ್ಛಿಕತೆ, ಸೃಜನಶೀಲತೆ, ನಾವೀನ್ಯ ಅರ್ಥವಂತಿಕೆ, ಆತ್ಮಾರ್ಥಕತೆ (reflexiveness), ಮತ್ತು ಅಂತರ್ ಭಾಷಾಂತರಿಕತೆ (Interranslatability) ಮೊದಲಾದ ಭಾಷೆಗಳನ್ನು ಮಕ್ಕಳ ಭಾಷೆ ಗತಿಬಿಂಬಿಸುತ್ತದೆ. ೪೦ ರಿಂದ ೬೦ ತಿಂಗಳುಗಳ ಅವಧಿಯಲ್ಲಿ ಒಂದು ಭಾಷೆಯನ್ನು ಮಗು ಕರಗತ ಮಾಡಿಕೊಳ್ಳುತ್ತದೆಂದು ಭಾಷಾ ವಿಜ್ಞಾನಿಗಳು ಹೇಳುತ್ತಾರೆ. ಜೊತೆಗೆ ಮಕ್ಕಳು ಭಾಷೆಯನ್ನು ವಯಸ್ಸಿಗೆ ಅನುಗುಣವಾಗಿ ಹಂತ ಹಂತವಾಗಿ ರೂಢಿಸಿಕೊಳ್ಳುತ್ತಾರೆ. ಭಾಷಾ ವಿಜ್ಞಾನಿಗಳ ಪ್ರಕಾರ ಮಕ್ಕಳಲ್ಲಿ ಭಾಷಾ ಕಲಿಕೆಗೆ ಸಂಬಂಧಿಸಿದಂತೆ ೫ ಹಂತಗಳಿವೆ. ಮೊದಲ ಹಂತದಲ್ಲಿ ಮಗು ಸಾಮಾನ್ಯವಾಗಿ ಏಕಾಕ್ಷರ ಧ್ವನಿಗಳನ್ನು ಹೊರಡಿಸಿದರೆ, ಎರಡನೆ ಹಂತದಲ್ಲಿ ಮಗು ಒಂದೊಂದೇ ಒತ್ತಕ್ಷರಗಳನ್ನು ಸೀಮಿತಗೊಳಿಸಿ ಬಳಸುತ್ತದೆ. ಮೂರನೆಯ ಹಂತದಲ್ಲಿ ಮಗು ಶಬ್ದ ಜೋಡಣೆಗಳನ್ನು ಕಲಿತುಕೊಂಡಿದ್ದರೆ, ನಾಲ್ಕನೆಯ ಹಂತದಲ್ಲಿ ಧ್ವನಿಗಳ ವ್ಯತ್ಯಾಸ ಗುರುತಿಸುವುದರ ಜೊತೆಗೆ ಅನುನಾಸಿಕ ಶಬ್ದಗಳನ್ನು ಬಳಸುತ್ತಾರೆ. ಮತ್ತು ಬೌದ್ಧಿಕವಾಗಿ ಶಿಕ್ಷಣ ಪಡೆಯಲು ಅರ್ಹರಾಗಿರುತ್ತಾರೆ. ಭಾಷಾ ಪರಿಸರಗಳ ಪ್ರಭಾವದಿಂದಾಗಿ ದ್ವಿಭಾಷಿಕತೆಗೆ ಹೆಚ್ಚಿನ ಅವಕಾಶವಿರುತ್ತದೆ. ಇನ್ನು ಐದನೆ ಹಂತದಲ್ಲಿ ಮಕ್ಕಳಲ್ಲಿ ಭಾಷೆಯನ್ನು ಸರಿಯಾಗಿ ಗ್ರಹಿಸುವ ಹಾಗೂ ಅಭಿವ್ಯಕ್ತಗೊಳಿಸುವ ಸಾಮರ್ಥ್ಯ ವಿರುತ್ತದೆ ಎಂಬುದನ್ನೆ ಕಾಣುತ್ತೇವೆ. ಜೊತೆಗೆ ಈ ಲೇಖನದಲ್ಲಿ ಮಕ್ಕಳ ಧ್ವನಿ ವ್ಯತ್ಯಾಸಗಳನ್ನು ಕುರಿತು ಚರ್ಚಿಸಲಾಗಿದೆ. ಮುಂದುವರಿಕೆಯಲ್ಲಿ ಸಂಗಮೇಶ ಸವದತ್ತಿಮಠರ ಇದೇ ಭಾಷಾ ಲೇಖನ ಕೃತಿಯಲ್ಲಿ 'ಮಕ್ಕಳ ಸಾಹಿತ್ಯ ಭಾಷಿಕ ಅಧ್ಯಯನ' ಎಂಬ ಲೇಖನವಿದೆ.

ಈ ಲೇಖನದ ಒಳಗೆ ಮಕ್ಕಳಿಗಾಗಿ ದೊಡ್ಡವರು ಬರೆದ ಸಾಹಿತ್ಯದಲ್ಲಿ, ದೊಡ್ಡವರು ಮಕ್ಕಳಿಗಾಗಿ ರಚಿಸಿದ ಸಾಹಿತ್ಯದ ಭಾಷೆಯನ್ನು ದೊಡ್ಡವರ ಮುಖಾಂತರ ಬರುವ ಮಕ್ಕಳ ಭಾಷೆಯಾಗಿರುವುದರಿಂದ ಅದರಲ್ಲಿ ಮಕ್ಕಳದ್ದೇ ಆದ ಖಾಸಗಿ ಭಾಷಾ ವೈಶಿಷ್ಟ್ಯತೆಗಳು ನೈಜವಾಗಿ ಎಷ್ಟರಮಟ್ಟಿಗೆ ಮೂಡಿಬಂದಾವು? ಎಂಬ ಪ್ರಶ್ನೆಯನ್ನು ಎತ್ತುತ್ತಲೇ ಮಕ್ಕಳ ಸಾಹಿತ್ಯ ಭಾಷಿಕ ಅಧ್ಯಯನವು ವೈಜ್ಞಾನಿಕ ವ್ಯಾಕರಣ ಭಾಗಕ್ಕಿಂತ ಶೈಲಿ, ವಿಜ್ಞಾನ, ಅರ್ಥವಿಜ್ಞಾನಗಳಿಗೆ ಹೆಚ್ಚು ಆದ್ಯತೆ ನೀಡುತ್ತಿದೆ ಎನ್ನುತ್ತಾರೆ. Length ಎಂದರೆ 'ವಿಸ್ತಾರ' ಇದು ಮಕ್ಕಳ ಭಾಷೆಯ ಒಂದು ಲಕ್ಷಣ. ಮಕ್ಕಳು ಮಾತನಾಡುವಾಗ ಅವರು ಹೇಳಬೇಕಾದುದ್ದನ್ನು ನೆನಪಿಸಿಕೊಳ್ಳುತ್ತ ಪ್ರತಿ ಹಂತವನ್ನು ವಿಸ್ತಾರವಾಗಿ ಹೇಳುವ ಗುಣವುಳ್ಳವರಾಗಿರುತ್ತಾರೆ. ಜೊತೆಗೆ ಮಕ್ಕಳ ಸಾಹಿತ್ಯ ಭಾಷಾ ದೃಷ್ಟಿಯಿಂದ ಮಕ್ಕಳ ಶಿಷ್ಟ ಸಾಹಿತ್ಯ ಭಾಷೆ ಮತ್ತು ಮಕ್ಕಳ ಪ್ರಾದೇಶಿಕ ಸಾಹಿತ್ಯ ಭಾಷೆ ಎಂದು ಎರಡು ಭಾಗಗಳಲ್ಲಿ ವಿಂಗಡಿಸಿ ವಿವೇಚಿಸಿದ್ದಾರೆ.

೨.೪. ಸಂಪಾದನಾ ಕೃತಿಗಳು

* ಕೆ. ಮರುಳಸಿದ್ಧಪ್ಪ ಅವರ ಕೃತಿ 'ಆಧುನಿಕ ಕನ್ನಡ ನಾಟಕ' ಈ ಕೃತಿಯಲ್ಲಿ ಆಧುನಿಕ ಕನ್ನಡ ನಾಟಕ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆ ಮತ್ತು ವಿಮರ್ಶೆಗಳಿಗೆ ಪೂರಕವಾಗುವಂತಹ ಕೃತಿ. ಇದರಲ್ಲಿ ಕನ್ನಡ ನಾಟಕ ಮತ್ತು ರಂಗಭೂಮಿ ಪರಂಪರೆಯ ವಿಸ್ತಾರ, ವೈವಿಧ್ಯಗಳನ್ನು ವಿವೇಚಿಸಿ ಹಲವಾರು ಲೇಖನಗಳನ್ನು ಪರಿಶೀಲಿಸಿ ಬರೆದಂತ ಕೃತಿಯಾಗಿದೆ. ಇದೊಂದು ವಿಮರ್ಶಾತ್ಮಕವಾಗಿ ಐತಿಹಾಸಿಕ ವಿಶ್ಲೇಷಣೆಗಳನ್ನು ಒಳಗೊಂಡ ಬೃಹತ್ ಕೃತಿ. ಈ ಕೃತಿಯಲ್ಲಿ ಏಕಾಂಕ, ಪ್ರಸಾರನಾಟಕ ಮತ್ತು ಮಕ್ಕಳ ನಾಟಕ ಪ್ರಕಾರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಕನ್ನಡದಲ್ಲಿ ಮಕ್ಕಳಿಗಾಗಿ ಬರೆದ ನಾಟಕಗಳು ಸಮೃದ್ಧವಾಗಿಲ್ಲವಾದರೂ, ವಿಶೇಷವಾಗಿ ಮಕ್ಕಳೇ ಅಭಿನಯಿಸಲು ರಚಿಸಲಾದ ನಾಟಕಗಳು ಮತ್ತು ಮಕ್ಕಳಿಗಾಗಿ ದೊಡ್ಡವರೂ ಅಭಿನಯಿಸಬಲ್ಲ ನಾಟಕಗಳೆಂದು ವಿಭಾಗಿಸಿ ಈ ಎರಡು ಬಗೆಯ ನಾಟಕಗಳ ಗುರಿ ಬಾಲ ಪ್ರೇಕ್ಷಕರು, ಮಕ್ಕಳು ವಿವಿಧ ವಯಸ್ಸಿನ ಮಕ್ಕಳಿಗೆ ತಕ್ಕಂತೆ ನಾಟಕಗಳಿರಬೇಕಾಗುತ್ತದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ರಂಗಭೂಮಿಯೊಂದು ಮಕ್ಕಳಿಗಾಗಿ ಪ್ರತ್ಯೇಕ ಕೆಲಸ ಮಾಡಬೇಕಾಗಿರುತ್ತದೆ ಎನ್ನುತ್ತ ಮತ್ತು ಇದರಲ್ಲಿ ಕನ್ನಡದಲ್ಲಿ ಮಕ್ಕಳಿಗಾಗಿ ನಾಟಕಗಳನ್ನು ಆರಂಭದಲ್ಲಿ ಯಾರು ಯಾರು ರಚಿಸಲು ಪ್ರಾರಂಭಿಸಿದರು. ಹೊಯ್ಸಳರ 'ಅಗಲಿನ ಮಕ್ಕಳು' 'ಕಳ್ಳ ಸುಳ್ಳ ಮಳ್ಳ' ಮತ್ತು 'ಮಗು ಮತ್ತು ವಾತಾಪಿ' ಮೊದಲಾದ ಪ್ರಮುಖ ನಾಟಕಗಳು ರಂಗನಾಟಕಗಳಾಗಿ ಪ್ರದರ್ಶನಗೊಂಡಿದೆ. ಅನ್ಯ ಭಾಷೆಯ ಶ್ರೇಷ್ಠ ಅನುವಾದ ಮತ್ತು ರೂಪಾಂತರಗಳಾದ 'ಪಂಜರ ಶಾಲೆ', 'ಅಪಾಯಕಾರಿಯ ಕಥೆ' 'ಸಿಂಡ್ರೆಲಾ' ಮೊದಲಾದ ಪ್ರಮುಖ ನಾಟಕಗಳು ಬೆಂಗಳೂರಿನ 'ಬಾಲಭವನ'ದ ಮೂಲಕ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ ಎಂಬುದನ್ನು ಕುರಿತು ಹೇಳಲಾಗಿದೆ.

* ಕೆ.ವಿ. ನಾರಾಯಣ ಅವರ 'ಮತ್ತೆ ಭಾಷೆಯ ಸುತ್ತಮುತ್ತ' ಈ ಕೃತಿಯು ಭಾಷಾಶಾಸ್ತ್ರದ ಅಭ್ಯಾಸಿಗಳಿಗೆ ಅನುಕೂಲವಾಗುವ ಲೇಖನಗಳ ಸಂಕಲನವಾಗಿದೆ. ಈ ಲೇಖನಗಳಲ್ಲಿ ಪ್ರಮುಖವಾಗಿ ಮಗುವಿನ ಭಾಷೆಯ ಅಧ್ಯಯನ ಮಕ್ಕಳಲ್ಲಿ ಭಾಷಾ ಕಲಿಕೆಯ ಆರಂಭ ಮತ್ತು ಶಾಲೆಯಲ್ಲಿ ಭಾಷೆ, ಈ ಲೇಖನಗಳನ್ನು ಗಮನಿಸಿದಾಗ ಮಗುವು ಭಾಷೆಯನ್ನು ಕಲಿಯುವ ಪ್ರಕ್ರಿಯೆಯನ್ನು ಅರಿಯಲು ಭಾಷಾಶಾಸ್ತ್ರಜ್ಞರು, ಮನಶಾಸ್ತ್ರಜ್ಞರು, ಶಿಕ್ಷಣಶಾಸ್ತ್ರಜ್ಞರು ಪ್ರಮುಖರು. ಇವರುಗಳು ಅಧ್ಯಯನಗಳಿಗೆ ಅವಶ್ಯವಾಗುವ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನದಲ್ಲಿ ತೊಡಗಿರುತ್ತಾರೆ. ಅದಕ್ಕಾಗಿ ಕೆಲವು ಮಾದರಿಗಳನ್ನು ಪ್ರಯೋಗ ವಿಧಾನಗಳನ್ನು ಅನುಸರಿಸಿ ಪ್ರಯೋಗ ನಡೆಸಿ ಮಕ್ಕಳ ಮಾತಿನ ಮಾಹಿತಿಯನ್ನು ಗಮನಿಸಿರುತ್ತಾರೆ. ಮಗುವಿನ ಆರಂಭದಲ್ಲಿ ಕೆಲವು ಕೆಲಸಗಳನ್ನು ನೀಡಿ ಭಾಷಿಕ ಸೂಚನೆಗಳನ್ನು ನೀಡಿರುತ್ತಾರೆ. ಹೀಗೆ ಮಗುವಿನಿಂದ ಮಾಹಿತಿ ಸಂಗ್ರಹಿಸುತ್ತಾರೆ. ಮಕ್ಕಳಲ್ಲಿ ಭಾಷಾ ಕಲಿಕೆಯ ಆರಂಭ! ಇಲ್ಲಿ ಮಕ್ಕಳು ತಮ್ಮ ಮೊದಲ ತಿಂಗಳಲ್ಲಿಯೇ ಮೊದಲ ಪದವನ್ನು ಉಚ್ಚರಿಸುವುದಕ್ಕೆ ಮೊದಲೇ ಭಾಷೆಯ ಜ್ಞಾನವನ್ನು ಹೊಂದಿರುತ್ತವೆ. ದೊಡ್ಡವರ ಮುಖಚರ್ಯೆಯನ್ನು ಗಮನಿಸುತ್ತವೆ. ದೊಡ್ಡವರ ಮಾತುಗಳಿಗೆ ಪ್ರತಿಕ್ರಿಯಿಸುತ್ತವೆ. ಈ ಹಂತದಲ್ಲಿ ಮಕ್ಕಳಲ್ಲಿ ಹಿರಿಯರ ಭಾಷೆಯ ವಿವಿಧ ಧ್ವನಿಗಳನ್ನು ಗುರುತಿಸುವ ಸಾಮರ್ಥ್ಯ ಬೆಳೆಯುತ್ತಿರುತ್ತದೆ. ಮಗು ತೊದಲು ಮಾತನಾಡಲಾರಂಭಿಸುವುದಕ್ಕೆ ಮುಂಚಿನ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ಗುರುತಿಸಬಹುದು. ಅವು. ಮಾತಿನ ಉತ್ಪತ್ತಿ, ಮಾತಿನ ಗ್ರಹಿಕೆ, ಮಾತಿನ ಪರಸ್ಪರ ಸಂವಹನ ಕ್ರಿಯೆ. ಈ ಮೂರು ಹಂತಗಳಲ್ಲಿ ಮಗುವಿನ ಭಾಷಾ ಬೆಳವಣಿಗೆಯು ಅದು ಹುಟ್ಟಿದ ತಕ್ಷಣದ ಅಳುವಿನಿಂದ ಹಿಡಿದು ಮಕ್ಕಳಲ್ಲಿನ ತೊದಲು ನುಡಿಗಳವರೆಗೂ ಜೊತೆಗೆ ದೊಡ್ಡವರ ಸಂಭಾಷಣೆಯನ್ನು ಗಮನಿಸುವುದರ ಮೂಲಕ ಮತ್ತು ಅಭ್ಯಾಸ ಮಾಡುವುದರ ಮೂಲಕ, ಸಂಭಾಷಣೆಯ ಬಗ್ಗೆ ಅದರಲ್ಲಿ ಪಾಲ್ಗೊಳ್ಳುವ ಬಗ್ಗೆ ಮಕ್ಕಳು ಸಾಕಷ್ಟು ಕಲಿತಿರುತ್ತದೆ. ಇನ್ನು ಶಾಲೆಯಲ್ಲಿನ ಭಾಷೆಯಿಂದ ಮಕ್ಕಳು ಕುಟುಂಬ ಪರಿಸರದಲ್ಲಿಯೇ ಭಾಷೆಯನ್ನು ಅನೌಪಚಾರಿಕವಾಗಿ ಕಲಿಯುತ್ತಾರೆ. ಇಲ್ಲಿ ಭಾಷೆಗೆ ಸಂಬಂಧಿಸಿದ ಹಲವು ಕೌಶಲಗಳನ್ನು ಮಕ್ಕಳು ಶಾಲೆಯಲ್ಲಿ ಬಲಪಡಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಕೌಶಲಗಳಾದ ಓದುವುದು ಮತ್ತು ಬರೆಯುವುದನ್ನು ಹೊಸದಾಗಿ ಕಲಿಯುತ್ತಾರೆ.

* ಶ್ರೀಮತಿ ಆರ್ಯಾಂಬ ಪಟ್ಟಾಭಿ ಅವರು ಸಂಪಾದಿಸಿರುವ 'ಮಹಿಳಾ ಸಾಹಿತ್ಯ ಸಮೀಕ್ಷೆ' ಕೃತಿಯು ಪ್ರಮುಖವಾಗಿ ಮಹಿಳಾ ಸಾಹಿತ್ಯವನ್ನು ಅವಲೋಕಿಸಿರುವ ಪ್ರಮುಖ ಸಂಕಲನವಾಗಿದೆ. ಇದರಲ್ಲಿ ಪ್ರೊ.ಬಿ.ಎಸ್. ರುಕ್ಕಮ್ಮ ಎನ್ನವರು ಮಕ್ಕಳ ಸಾಹಿತ್ಯ ಭಾಗ-೧ ಮತ್ತು ಡಾ. ಹಸೀನಾ ಬೇಗಂ ಎಂಬುವವರು ಮಕ್ಕಳ ಸಾಹಿತ್ಯ ಭಾಗ-೨ ಎಂಬ ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳಲ್ಲಿ ಸ್ವಾತಂತ್ರ ಆಂದೋಲನ ಬೆಳೆದಂತೆ ಸರ್ವೋದಯ ಸಿದ್ಧಾಂತ ಮಕ್ಕಳನ್ನು ಬಾಲ್ಯದಿಂದಲೇ ತಿದ್ದಿ ರೂಪಿಸಿ ಅವರ ವೈಯಕ್ತಿಕ ಒಲವುಗಳನ್ನು ಗಮನಿಸುವುದು. ಅಧಿಕವಾಗಿ

ಮಕ್ಕಳು ಒಡನಾಟದಲ್ಲಿರುವ ಸ್ತ್ರೀಯರು ಸಹಜವಾಗಿಯೇ ಅವರ ಮನೋಲೋಕ ಪರಿಚಯವುಳ್ಳವರಾಗಿ ಸರಳವಾಗಿ ಶಿಶುಪ್ರಾಸಗಳನ್ನು ಎಳೆಯರಿಗೆ ತಕ್ಕ ಲಾಲಿಹಾಡುಗಳನ್ನು ರಚಿಸಿದರು. ಅವರುಗಳು ಬೆಳೆದಂತೆಲ್ಲ ಅವರ ಅಗತ್ಯಕ್ಕೆ ತಕ್ಕ ಸಣ್ಣಪುಟ್ಟ ಕಥೆಗಳು, ಒಗಟುಗಳು ಮೊದಲಾದವುಗಳನ್ನು ಬರೆಯುತ್ತಾ ಬಂದು ಇಂದು ಎಂಭತ್ತಕ್ಕೂ ಮೇಲ್ಪಟ್ಟು ಮಕ್ಕಳ ಸಾಹಿತ್ಯ ಪ್ರಕಾರದಲ್ಲಿ ನಿರತರಾದ ಮಹಿಳೆಯರಿದ್ದಾರೆ. ಪುಸ್ತಕ ರೂಪದಲ್ಲಿ ಪ್ರಕಟವಾಗದ ಬಿಡಿಕಥೆ, ಕವಿತೆ, ನಾಟಕ ಮುಂತಾದವುಗಳನ್ನು ರೇಡಿಯೋ ನಾಟಕಗಳನ್ನು ಬರೆದವರೂ ಇದ್ದಾರೆ. ಕೆಲವರು ಮಕ್ಕಳಿಗಾಗಿ ಪುರಾಣದ ಕಥೆಗಳನ್ನು ಹೇಳಿರದೆ, ಕೆಲವರು ಐತಿಹಾಸಿಕ ವ್ಯಕ್ತಿಗಳ ವ್ಯಕ್ತಿತ್ವವನ್ನು ಪರಿಚಯಿಸುವ ಕೆಲಸವನ್ನು ಮಾಡಿದ್ದಾರೆ. ಇನ್ನು ಕೆಲವರು ಮಕ್ಕಳಿಗಾಗಿ ಕವಿತೆಗಳನ್ನು, ಕವನಗಳನ್ನು ರಚಿಸಿಕೊಟ್ಟಿದ್ದಾರೆ.

ಹೀಗೆ ಮಕ್ಕಳಿಗೆ ಯಾವ ವಿಷಯವನ್ನಾದರೂ ಹೇಳಬಹುದು. ಆದರೆ ಅದು ಅವರ ಕಲ್ಪನೆಗೆ ನಿಲುಕುವಂತಹ ಅವರ ಮನಸ್ಸನ್ನು ಕಲುಷಿತ ಮಾಡದಂತಹ ಸ್ಫೂರ್ತಿಯನ್ನುಂಟು ಮಾಡುವಂತಹ ಸಾಹಿತ್ಯ ಮಕ್ಕಳ ಸಾಹಿತ್ಯದಲ್ಲಿರಬೇಕು ಎನ್ನುತ್ತಾರೆ. ಮತ್ತು ಇದೇ ಕೃತಿಯ ಇನ್ನೊಂದು ಲೇಖನದಲ್ಲಿ ಮಕ್ಕಳ ಸಾಹಿತ್ಯವನ್ನು ಕುರಿತು ವಿವೇಚಿಸುವ ಸಮಯದಲ್ಲಿ ಮಕ್ಕಳ ಸಾಹಿತ್ಯ ಮೊದಲ ಬಾರಿಗೆ ಜನಿಸಿದ್ದು ಕಾವ್ಯರೂಪದಲ್ಲಿ ಅದು ಮಕ್ಕಳ ಲಾಲಿ ಪದಗಳ ರೂಪದಲ್ಲಿ. ಜನಪದ ಹಾಡಿನಲ್ಲಿ ೧೯ನೇ ಶತಮಾನದ ಉತ್ತರಾರ್ಧ ಮತ್ತು ೨೦ ನೇ ಶತಮಾನದ ಪ್ರಾರಂಭ ಕಾಲದಲ್ಲಿ ದೇಶದ ವಿವಿಧ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ ಅಭಿವೃದ್ಧಿ ಪಡಿಸುವ ಪ್ರಯತ್ನಗಳ ಫಲವಾಗಿ ಪಾಶ್ಚಾತ್ಯ ರಾಷ್ಟ್ರಗಳ ಸಂಪರ್ಕದಿಂದಾಗಿ ವೈಜ್ಞಾನಿಕ ರೀತಿಯಲ್ಲಿ ಮಕ್ಕಳ ಸಾಹಿತ್ಯ ರಚಿಸಲು ಭಾರತೀಯ ಲೇಖಕರು ಸಹ ಪ್ರೇರಣೆ, ಪ್ರೋತ್ಸಾಹ ಪಡೆದರು, ಮಕ್ಕಳ ಸಾಹಿತ್ಯ ಕನ್ನಡದಲ್ಲಿ ಆರಂಭದ ಅವಸ್ಥೆಯಲ್ಲಿರುವಾಗ ಅದನ್ನು ಶಿಶುಸಾಹಿತ್ಯ, ಬಾಲಸಾಹಿತ್ಯ, ಕಂದನ ಕಥೆಗಳೆಂದು ಬಳಕೆಗೆ ಬಂದವು. ಈಗ 'ಮಕ್ಕಳ ಸಾಹಿತ್ಯ' ಎಂದು ಕರೆಸಿಕೊಳ್ಳುತ್ತಿದೆ.

ಮಕ್ಕಳಿಗಾಗಿ ಸಾಹಿತ್ಯ ರಚಿಸುವವರಿಗೆ ತಳಹದಿಯ ರೂಪದಲ್ಲಿ ಕೆಲವು ಸಿದ್ಧತೆಗಳಿರಬೇಕು. ಅವರು ತಮ್ಮ ವಯಸ್ಕ ಪ್ರಪಂಚದಿಂದ ಕಳಚಿಕೊಂಡು ಮಕ್ಕಳ ಮನಸ್ಸಿನ ಪರಕಾಯ ಪ್ರವೇಶ ಮಾಡುವ ಅಭ್ಯಾಸ ಮಾಡಿಕೊಳ್ಳಬೇಕಾದುದು ಅಗತ್ಯವೆಂದು ಹೇಳುತ್ತ ಮಕ್ಕಳ ಕಲ್ಪನೆಯೊಡನೆ ಸಮಸಮವಾಗಿ ಸ್ಪಂದಿಸುವ ಮತ್ತು ಅವರ ಕುತೂಹಲವನ್ನು ಕೆರಳಿಸುವಂತಹ ಕೆಲವು ನಿಯಮಗಳನ್ನು ಲೇಖಕರು ಅನುಸರಿಸಿ ವಿಷಯದ ಆಯ್ಕೆ, ಬಳಸುವ ಭಾಷೆ, ವಿವರಿಸುವ ರೀತಿಯೊಂದಿಗೆ ಮಕ್ಕಳ ವಯೋಮಾನ ಹಾಗೂ ಬುದ್ಧಿಶಕ್ತಿಗಳಿಗೆ ತಕ್ಕ ಕೃತಿಗಳನ್ನು ರಚಿಸುವುದು ಅಗತ್ಯವಿದೆ. ಹೊಸಗನ್ನಡ ಸಾಹಿತ್ಯದಲ್ಲಿರುವಂತೆಯೇ ಮಕ್ಕಳ ಸಾಹಿತ್ಯದಲ್ಲಿಯೂ ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಚಾರ ಸಾಹಿತ್ಯ ಮೊದಲಾದ ವಿವಿಧ ಪ್ರಕಾರಗಳಿವೆ ಎಂದು ಪರಿಚಯಿಸುತ್ತಾ ಈ ಲೇಖನದಲ್ಲಿ ಬರುವ ವಿವಿಧ ಪ್ರಕಾರಗಳನ್ನು ಒಂದೊಂದಾಗಿ ಸಮೀಕ್ಷೆಯನ್ನು ಮಾಡುತ್ತಾ

ಹೋಗಲಾಗಿದೆ. ಈ ಕ್ಷೇತ್ರಗಳಲ್ಲಿ ಮಹಿಳಾ ಲೇಖಕಿಯರ ಮಕ್ಕಳ ಸಾಹಿತ್ಯ ಕೃತಿಗಳನ್ನು ಪರಿಚಯಿಸಲಾಗಿದೆ.

* ಬೋಳಂತಕೋಡಿ ಈಶ್ವರ ಭಟ್ಟ ಅವರು ಪ್ರಧಾನ ಸಂಪಾದಕರಾಗಿ ಸಂಪಾದಿಸಿರುವ 'ಅನುಪಮಾ ಅಭಿನಂದನ' ಎನ್ನುವ ಕೃತಿಯನ್ನು ಕರ್ನಾಟಕ ಸಂಘ ಪುತ್ತೂರು ಅವರು ಪ್ರಕಟಿಸಿದ್ದಾರೆ. ಇದು ಡಾ. ಅನುಪಮಾ ನಿರಂಜನರ ಬದುಕು ಬರಹಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡುವ ಲೇಖನಗಳ ಸಂಕಲನವಾಗಿದೆ. ಇದರಲ್ಲಿ ಸರಸ್ವತಿ ಪೂಜಾರ ಅವರು ಬರೆದಿರುವ 'ಅನುಪಮಾ ಅವರ ಮಕ್ಕಳ ಸಾಹಿತ್ಯ' ಲೇಖನವು ವೃತ್ತಿಯಿಂದ ವೈದ್ಯರಾದ ಅನುಪಮಾ ಅವರು ವೈಜ್ಞಾನಿಕ ಕಥೆ, ಕಾದಂಬರಿ, ಪ್ರವಾಸ ಮುಂತಾದ ಕ್ಷೇತ್ರಗಳಲ್ಲದೆ ಮಕ್ಕಳಿಗಾಗಿ ಕಥೆಗಳನ್ನು ಬರೆದಿದ್ದಾರೆ. ೧೨ ಸಂಪುಟಗಳಲ್ಲಿ ೩೬೫ ಕಥೆಗಳನ್ನು ದಿನಕ್ಕೊಂದು ಕಥೆ ಎಂದು ಬರೆದಿದ್ದಾರೆ. ಈ ಕಥೆಗಳನ್ನು ಅತಿಮಾನುಷ ಕಥೆಗಳು, ಬುದ್ಧಿವಂತಿಕೆಯ ಕಥೆಗಳು, ವಾಸ್ತವಿಕ ಕಥೆಗಳು, ಸಾಹಸ ಕಥೆಗಳು, ಹಾಸ್ಯ ಕಥೆಗಳು, ಅದ್ಭುತ ರಮ್ಯ ಕಥೆಗಳು, ನೀತಿ ಕಥೆಗಳು, ಪೌರಾಣಿಕ ಕಥೆಗಳು, ಐತಿಹಾಸಿಕ ಕಥೆಗಳು, ಮತ್ತು ವೈಜ್ಞಾನಿಕ ಕಥೆಗಳೆಂದು ೧೦ ವಿಧಗಳಾಗಿ ಬರೆದಿದ್ದಾರೆ. ಈ ಒಟ್ಟು ಕಥೆಗಳ ಸಂಖ್ಯೆಯಲ್ಲಿ ನೀತಿ ಕಥೆಗಳೇ ಹೆಚ್ಚು. ಈ ನೀತಿ ಕಥೆಗಳಲ್ಲಿ ಪ್ರಾಣಿ–ಪಕ್ಷಿಗಳಿಂದ ಕೂಡಿರುವಂತವು. ಈ ಪ್ರಾಣಿಗಳೆಲ್ಲ ಮಾತನಾಡುವಂತವು ಹೀಗೆ ಕಥೆಗಳಲ್ಲಿ ಪ್ರಾಣಿಗಳ ಮೂಲಕ ಮಕ್ಕಳನ್ನು ರಂಜಿಸುತ್ತ ಅವರ ಕಲ್ಪನಾಶಕ್ತಿಯನ್ನು ಹಿಗ್ಗಿಸಲು ಪ್ರಯತ್ನಿಸಿದ್ದಾರೆ. ಈ ಮಾಲಿಕೆಯ ಮತ್ತೊಂದು ವಿಶೇಷವೆಂದರೆ ಚೈತ್ರ–ವೈಶಾಖ–ಜೇಷ್ಠ ಎಂದು ವರ್ಷದ ೧೨ ತಿಂಗಳುಗಳ ಹೆಸರನ್ನಿರಿಸಿರುವುದು. ಜೊತೆಗೆ ಪ್ರತಿಯೊಂದು ಕಥೆಗೂ ಚಿತ್ರಗಳನ್ನು ಬರೆಸಿರುವುದರಿಂದ ಮಕ್ಕಳಿಗೆ ಕಥೆ ಇನ್ನೂ ಹತ್ತಿರವಾಗಿ ಸಹಜವಾಗಿ ಗ್ರಹಿಸಲು ಅನುಕೂಲಕರವಾಗಿರುತ್ತದೆ. ಇವರ ಕಥೆಗಳು ಗಾತ್ರದಲ್ಲಿ ಕಿರಿಯದಾಗಿದ್ದರು ಅವು ಹಿರಿಯ ಪರಿಣಾಮವನ್ನು ಬೀರುತ್ತವೆ. ಹೆಚ್ಚಿನ ಕಥೆಗಳು ಹಾಸ್ಯ, ಕರುಣೆ, ಬೀಭತ್ಸ, ಶಾಂತ ಮೊದಲಾದ ರಸಗಳ ಹೂರಣಗಳಿಂದ ಮಕ್ಕಳ ಮನಸ್ಸನ್ನು ಮುದಗೊಳಿಸುತ್ತವೆ.

* ಅರವಿಂದ ಮಾಲಗತ್ತಿ ಅವರು ಸಂಪಾದಿಸಿರುವ 'ಕುವೆಂಪು ಕೃತಿ ವಿಮರ್ಶೆ' ಎಂಬ ಕೃತಿಯ ವಿವಿಧ ಪ್ರಕಾರಗಳಲ್ಲಿನ ಕುವೆಂಪು ಸಾಹಿತ್ಯದೊಂದಿಗೆ ಸಹೃದಯ ವಿಚಾರಶೀಲ ಮನಸ್ಸುಗಳು ನಡೆಸಿದ ಅನುಸಂಧಾನವನ್ನು ದಾಖಲಿಸಿರುವ ವಿಮರ್ಶಾ ಲೇಖನಗಳ ಕೃತಿ. ಈ ಕೃತಿಯಲ್ಲಿ ಕುವೆಂಪು ಅವರ ಶಿಶುಸಾಹಿತ್ಯ ಎಂಬ ವಿಮರ್ಶಾ ಲೇಖನದಲ್ಲಿ ಕುವೆಂಪು ಅವರ ಭಾಷೆಯ ಹಾಗೂ ಅಭಿವ್ಯಕ್ತಿ ಸಾಧನದ ಸಾಧ್ಯತೆಗಳೆಲ್ಲವನ್ನು ಸೂರೆಗೊಂಡ ಮಹೋನ್ನತ ಪ್ರತಿಭೆ. ಈ ಯುಗದ ಯಾವ ಸಾಹಿತ್ಯ ಪ್ರಕಾರವೂ ಇವರಿಂದ ವಂಚಿತವಾಗಿಲ್ಲ ಇದಕ್ಕೆ ಇವರ ಶಿಶುಸಾಹಿತ್ಯವೇ ನಿದರ್ಶನವಾಗಿದೆ. ಈ ದಿವ್ಯ ಪ್ರತಿಭೆಗೆ ಯಾವುದೂ ಹೊರತಲ್ಲ. ಮಕ್ಕಳ ಹೃದಯದ ಅಂತರಾಳದಲ್ಲಿ ನಡೆಯುವ ಭಾವ ಭಾವನೆಗಳನ್ನು, ಸ್ವಪ್ನಾತಿಶಯಗಳನ್ನು,

ಆನಂದೋತ್ಕರ್ಷಗಳನ್ನು ಅಭಿವ್ಯಕ್ತಪಡಿಸುವುದರ ಮೂಲಕ ಈ ಕವಿ ಬದುಕಿನ ಎಲ್ಲ ಕಡೆಗೂ ಗಮನ ಹರಿಸಿದ್ದಾರೆ. ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಈ ಕವಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಅಮಲನ ಕಥೆ', 'ಹಾಳೂರು', 'ಬೊಮ್ಮನಹಳ್ಳಿ ಕಿಂದರಿ ಜೋಗಿ' ಇವು ಕಥನ ಕವನಗಳಾದರೆ, 'ನನ್ನ ಮನೆ', 'ಮೇಘಪುರ', 'ಮರಿವಿಜ್ಞಾನಿ' ಇವು ಕವನ ಸಂಕಲನಗಳು, ಮತ್ತು 'ಮೋಡಣ್ಣನ ತಮ್ಮ', 'ನನ್ನ ಗೋಪಾಲ' ಇವೆರಡು ಮಕ್ಕಳ ನಾಟಕಗಳು ಹೀಗೆ ಇವರ ಮಕ್ಕಳ ಸಾಹಿತ್ಯ ಮಕ್ಕಳ ಮನೋವಿಕಾಸಕ್ಕೆ ಪುಷ್ಕಳವಾದ ಆಹಾರವಾಗಿವೆ ಇವುಗಳಲ್ಲಿ ಮನೋರಂಜನೆಯಿದೆ. ಇವು ಮಕ್ಕಳ ಭಾವಕೋಶವನ್ನು ವಿಕಾಸಪಡಿಸಿ ಉಜ್ವಲಗೊಳಿಸುವಲ್ಲಿ ಯಶಸ್ವಿಯಾಗಿವೆ.

* ಬಸವರಾಜ ಪೋಲೀಸ ಪಾಟೀಲ ಅವರು ಸಂಪಾದಿಸಿರುವ 'ಭಾಷಾ ಸಂಗಮ' ಎಂಬ ಕೃತಿ ಡಾ. ಸಂಗಮೇಶ ಸವದತ್ತಿಮಠ ಅವರ ಷಷ್ಠ್ಯಾಬ್ದಿ ಅಭಿನಂದನ ಕೃತಿಯಾಗಿದೆ. ಈ ಕೃತಿಯಲ್ಲಿ ಇವರ ಸೇವೆಯನ್ನು ಗಮನಿಸಲಾಗಿದೆ. ಈ ಕೃತಿಗಾಗಿ ಇವರ ಅಭಿಮಾನಿಗಳು ಅಪಾರ ಲೇಖನಗಳನ್ನು ಬರೆದುಕಳುಹಿಸಿದ್ದರು. ಈ ಲೇಖನಗಳಲ್ಲಿ ಡಾ. ಬಸವರಾಜ ಕೋಡಗುಂಟಿ ಅವರ 'ಮಕ್ಕಳ ಭಾಷಾ ವಿಜ್ಞಾನ' ಎಂದು ಲೇಖನವು ಪ್ರಮುಖವಾಗಿದ್ದು ಮಗು ಮತ್ತು ಅವರ ಭಾಷೆ ಎನ್ನುವುದು ಒಂದು ಅಂತರ್‌ಶಿಸ್ತೀಯ ಅಧ್ಯಯನ ಕೇಂದ್ರ. ಹೀಗಾಗಿ ಬೇರೆ ಬೇರೆ ಶಾಸ್ತ್ರಗಳು ಒಂದಾಗಿ ಸಂಶೋಧನಾ ರೀತಿ-ನೀತಿಗಳನ್ನು ರೂಪಿಸಿಕೊಂಡವು. ಮಗುವು ಪ್ರತಿ ದಿನವೂ ಬೆಳೆಯುತ್ತಾ ಹೋದಂತೆ ಅದರ ಸಾಮಾಜೀಕರಣ ಪ್ರಕ್ರಿಯೆಯೂ ಬೆಳೆಯುತ್ತಾ ಹೋಗುತ್ತದೆ. ಮಗು ತನ್ನ ತಾಯಿ, ಮನೆ, ಮನೆಯವರು, ನಿತ್ಯ ಒಡನಾಡುವ ವಸ್ತುಗಳು ಮೊದಲಾದವುಗಳ ಮೂಲಕ ಸಂಪರ್ಕ ಬೆಳೆಸಿಕೊಂಡು ಮಗುವಿನ ಪುನರುಚ್ಚರಣೆಗೆ, ತೊದಲ್ನುಡಿ, ತಪ್ಪುನುಡಿ ರಾಗಾತ್ಮಕತೆ ಆರಂಭವಾಗಿ ಮಗುವಿನ ಗ್ರಹಣಶಕ್ತಿ ಅತ್ಯಂತ ಚುರುಕಾಗುತ್ತದೆ. ನಂತರ ಭಾಷೆಯ ಉಚ್ಚರಣೆಗೆ ಧ್ವನಿಗಳನ್ನು ಹೊಂದಿಸುವ ಪ್ರಯತ್ನ ಮಾಡಿ ತೊದಲ್ನುಡಿ, ತಪ್ಪುನುಡಿ ಹೀಗೆ ಸಾಗಿ ಕೊನೆಗೆ ಅದರ ಶುದ್ಧ ಉಚ್ಚರಣೆಯಾಗುತ್ತದೆ. ಇದನ್ನೇ ಮಗುವಿನ ಮೊದಲ ಭಾಷೆಯ ಕಲಿಕೆಯಾಗುತ್ತದೆ. ಹೀಗೆ ಬಸವರಾಜ ಕೋಡಗುಂಟಿ ಅವರ ಈ ಲೇಖನ ಮಕ್ಕಳ ಭಾಷಾ ವಿಜ್ಞಾನದ ಅಪರೂಪದ ಲೇಖನವಾಗಿದೆ. ಇಲ್ಲಿ ಮಕ್ಕಳ ಭಾಷೆಯ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿರುವುದನ್ನು ಕಾಣುತ್ತೇವೆ. ಇದರಲ್ಲಿ ೪-೬ ವರ್ಷ ವಯಸ್ಸಿನ ಮಕ್ಕಳ ಭಾಷೆಯನ್ನು ಧ್ವನಿ ಹಂತದಲ್ಲಿ ಮತ್ತು ವಾಕ್ಯ ಹಂತದಲ್ಲಿ ವಿಶ್ಲೇಷಿಸಲಾಗಿದೆ.

* ಎಲ್.ಎಸ್. ಶೇಷಗಿರಿರಾವ್ ರವರು ಸಂಪಾದಿಸಿರುವ 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಎನ್ನುವ ಬೃಹತ್ ಕೃತಿಯು ಸ್ವಾತಂತ್ರ್ಯೋತ್ತರದಲ್ಲಿ ಬಂದ ಕನ್ನಡದ ಎಲ್ಲಾ ಸಾಹಿತ್ಯ ಪ್ರಕಾರಗಳ ಕುರಿತು ಬಂದ ಲೇಖನಗಳ ಸಂಕಲನವಾಗಿದೆ. ಅದರಲ್ಲಿ ಮಕ್ಕಳ ಸಾಹಿತ್ಯ ಪ್ರಕಾರವನ್ನು ಕುರಿತು ಕೆಲವು ಲೇಖನಗಳು ಇರುವುದನ್ನು ಗಮನಿಸಬಹುದು.

ಇದರಲ್ಲಿ ರಸಿಕ ಪುಸ್ತಿಗೆ ಅವರು ರಚಿಸಿದ 'ಮಕ್ಕಳ ಕವಿತೆ' ಲೇಖನದಲ್ಲಿ ಸ್ವಾತಂತ್ರ್ಯಾನಂತರದ ಕಾಲದಲ್ಲಿ ಬಂದ ಮಕ್ಕಳ ಕವನಗಳನ್ನು ಕುರಿತು ಕೆಲವನ್ನು ಪರಿಚಯಿಸಲಾಗಿದೆ.

ಇನ್ನು ಟಿ.ಎಸ್. ನಾಗರಾಜಶೆಟ್ಟಿ ಅವರು 'ಮಕ್ಕಳ ನಾಟಕ' ಎನ್ನುವ ಲೇಖನವನ್ನು ಇದರಲ್ಲಿ ಮಗುವಿಗೆ ನಾಟಕದ ಮೂಲಕವೇ ತಿಳುವಳಿಕೆ ನೀಡಿದರೆ, ನೀತಿಯನ್ನು ಬೋಧಿಸಿದರೆ ಅದು ಅತ್ಯಂತ ಪ್ರಯೋಜನಕಾರಿಯಾಗುತ್ತದೆ. ಅದು ನಾವು ಹೇಳುವ ಕಥೆಯನ್ನು ಮನಸ್ಸಿನಲ್ಲಿ ದೃಶ್ಯರೂಪವನ್ನು ಚಿತ್ರಿಸಿಕೊಳ್ಳುತ್ತದೆ ಎನ್ನುತ್ತಾ ಕನ್ನಡದ ಆಧುನಿಕ ಸಾಹಿತ್ಯದಲ್ಲಿ ಮೊಟ್ಟಮೊದಲಿಗೆ ಮಕ್ಕಳ ನಾಟಕ ಪುಸ್ತಕ ರೂಪದಲ್ಲಿ ೧೯೨೫ರಲ್ಲಿ ಬಂದಿದೆ ಎನ್ನಬಹುದು. ಈ ನೆಲೆಯಲ್ಲಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಬಂದ ಕುವೆಂಪುರವರ 'ಮೋಡಣ್ಣನ ತಮ್ಮ', 'ನನ್ನ ಗೋಪಾಲ', ಎಂ.ವಿ. ಸೀತಾರಾಮಯ್ಯರ 'ಕೈಕೋಲು' ಶಂ.ಗು. ಬಿರಾದಾರರ 'ನೌಕರಿಯ ಹುಚ್ಚು' ಮೊದಲಾದ ನಾಟಕಗಳು ಬಂದವು ಎನ್ನುತ್ತಾ ಒಟ್ಟಿನಲ್ಲಿ ಕನ್ನಡ ಮಕ್ಕಳ ನಾಟಕಗಳು ಬಂದಿರುವುದು ತುಂಬಾ ಕಡಿಮೆಯೇ ಎನ್ನುತ್ತಾರೆ.

ನಿರುಪಮಾರವರು 'ಮಕ್ಕಳ ಸಾಹಿತ್ಯ ಸಮೀಕ್ಷೆ' ಎನ್ನುವ ಇನ್ನೊಂದು ಲೇಖನದಲ್ಲಿ ಸ್ವಾತಂತ್ರ್ಯೋತ್ತರದಲ್ಲಿ ಬಂದ ಮಕ್ಕಳ ಕವಿತೆಗಳು, ಕಥೆಗಳು, ನಾಟಕಗಳು, ಕಾದಂಬರಿಗಳು ಮತ್ತು ಮಕ್ಕಳ ಕಾಮಿಕ್ಸ್ ಮೊದಲಾದ ಪ್ರಕಾರಗಳ ಸಾಹಿತ್ಯದ ಸಮೀಕ್ಷೆಯನ್ನು ಮಾಡಿರುವುದನ್ನು ನಾವಿಲ್ಲಿ ಕಾಣಬಹುದು.

* ಎಲ್.ಎಸ್. ಶೇಷಗಿರಿರಾವ್ ರವರು ಸಂಪಾದಿಸಿರುವ 'ಭಾರತೀಯ ಸಾಹಿತ್ಯ ಸಮೀಕ್ಷೆ' (ಸಂಪುಟ–೨) ಈ ಬೃಹತ್ ಕೃತಿಯಲ್ಲಿ ಹದಿನೈದು ಭಾರತೀಯ ಪ್ರಮುಖ ಸಾಹಿತ್ಯಗಳನ್ನೇ ಕುರಿತು ಆಯಾ ಭಾಷೆಯ ಪರಿಣಿತರಿಂದ ಬರೆಯಿಸಲಾದ ಲೇಖನಗಳಿವೆ. ಜತೆಗೆ ಅನುಬಂಧವಾಗಿ ಇತರ ಭಾಷೆಗಳಾದ ಡೋಗ್ರಿ, ಇಂಗ್ಲಿಷ್, ಕೊಂಕಣಿ, ಮೈಥಿಲೀ, ಮಣಿಪುರಿ, ನೇಪಾಳಿ ಮತ್ತು ರಾಜಸ್ತಾನಿ ಮೊದಲಾದ ಭಾಷಾ ಸಾಹಿತ್ಯವನ್ನು ಕುರಿತ ಲೇಖನಗಳು ಇವೆ. ಇದರಲ್ಲಿ ಭಾಗ ೧ರ ಮಕ್ಕಳ ಸಾಹಿತ್ಯ ಪ್ರಕಾರವನ್ನು ಕುರಿತು ಬರೆಯುವಾಗ ಕನ್ನಡದಲ್ಲಿ ಆರ್.ಎಲ್. ಅನಂತರಾಮಯ್ಯರವರು ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಮಕ್ಕಳ ಸಾಹಿತ್ಯದ ವಿಕಾಸ, ಪಠ್ಯಪುಸ್ತಕಗಳು, ಕೃತಿಕಾರರು, ಮಕ್ಕಳ ನಿಯತಕಾಲಿಕೆಗಳು, ಹೊಸ ಆಯಾಮಗಳು ಮೊದಲಾದ ಪ್ರಕಾರಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಿಸುತ್ತಾರೆ.

* ಸಬಿಹಾ ಭೂಮೀಗೌಡ ಅವರು ಸಂಪಾದಿಸಿರುವ 'ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ' ಎಂಬ ಕೃತಿಯು ೨೦೦೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ ಎಂಬ ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳನ್ನು ಇಲ್ಲಿ ಸಂಪಾದನಾ ಗ್ರಂಥದ ರೂಪದಲ್ಲಿ ಹೊರತಂದಿದ್ದಾರೆ. ಇದರಲ್ಲಿ ಶಿವರಾಮ ಕಾರಂತರು ಮಕ್ಕಳಿಗಾಗಿ

ನಡೆಸಿದ ವಿವಿಧ ಚಟುವಟಿಕೆಗಳು ಹಾಗೂ ಅವರು ಪ್ರಾಯೋಗಿಕವಾಗಿ ರೂಪಿಸಿದ ಬಾಲವನ, ಪ್ರಕಟಿಸಿದ ಪಠ್ಯಪುಸ್ತಕಗಳು, ಬಾಲಪ್ರಪಂಚದ ಸಂಪುಟಗಳು ಮೊದಲಾದ ಕ್ರಿಯಾಶೀಲ ಚಟುವಟಿಕೆಗಳ ಅಂಗವಾಗಿ ಈ ವಿಚಾರಸಂಕಿರಣವನ್ನು ನಡೆಸಲಾಗಿತ್ತು. ಪ್ರಾಥಮಿಕ ಶಿಕ್ಷಣ ಕ್ರಮವನ್ನು ಕುರಿತು ತನ್ನದೇ ಆದ ಸ್ವತಂತ್ರ ವಿಚಾರಧಾರೆಗಳನ್ನು ತಮ್ಮ ಬರಹಗಳಲ್ಲಿ ಪ್ರಕಟಿಸುತ್ತ ಬಂದ ಕಾರಂತರ ಆಲೋಚನೆಗಳು ಇಂದಿಗೂ ಕೂಡ ಅವು ಎಷ್ಟು ಪ್ರಸ್ತುತ ಎಂಬುದರ ಜಿಜ್ಞಾಸೆಯು ಈ ಲೇಖನಗಳಲ್ಲಿದೆ.

ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯು ಮಕ್ಕಳ ಸಾಹಿತ್ಯಕ್ಕೆ ಗಣನೀಯ ಕೊಡುಗೆಯನ್ನು ಕೊಟ್ಟಿದೆ. ಮತ್ತು ಕೊಡುತ್ತ ಬಂದಿರುವುದನ್ನು ಕಾಣುತ್ತೇವೆ. ಪಂಜೆ ಮಂಗೇಶರಾಯರಿಂದ ಆರಂಭವಾದ ಈ ಧಾರೆಯು ಜಿ.ಎನ್. ಲಕ್ಷ್ಮಣ ಪೈ, ಎಂ.ಎನ್. ಕಾಮತ್, ಸೇಡಿಯಾಪು ಕೃಷ್ಣಭಟ್ಟ, ಕಯ್ಯಾರ ಕಿಞಣ್ಣರೈ, ಕೆಮ್ತೂರು ದೊಡ್ಡಣ್ಣ ಶೆಟ್ಟಿ ಮೊದಲಾದವರಿಂದ ಮುಂದುವರೆದು ಸಮೃದ್ಧವಾಗಿ ಬೆಳೆಯಿತು. ಮಕ್ಕಳ ಸಾಹಿತ್ಯ ಕವನ, ಕಥೆ, ನಾಟಕ ಹೀಗೆ ಹಲವಾರು ಪ್ರಕಾರಗಳಾಗಿ ಸಾಕಷ್ಟು ವೈವಿಧ್ಯಮಯವಾಗಿ ಬೆಳೆಯಿತು. 'ನಾಗರಹಾವೇ ಹಾವೊಳು ಹೂವೆ' ಮೊದಲಾದ ಮಕ್ಕಳ ಕವನಗಳು ಜನಪದ ಹಾಡುಗಳಂತೆ ದೀರ್ಘಕಾಲದವರೆಗೆ ಮಕ್ಕಳ ಸ್ಮೃತಿಯಲ್ಲಿ ಬೆಳೆದಿರುವಂತದ್ದನ್ನು ನೋಡಿದರೆ ಇದು ಮಕ್ಕಳ ಸಾಹಿತ್ಯದ ವೈಶಿಷ್ಟ್ಯವೆನಿಸುತ್ತದೆ. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆಯ ಅವಲೋಕನ ಮತ್ತು ಶಿವರಾಮ ಕಾರಂತರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಈ ಕೃತಿಯಲ್ಲಿ ವಿಶ್ಲೇಷಣೆಯನ್ನು ಮಾಡಲಾಗಿದೆ.

* ರಹಮತ್ ತರೀಕೆರೆ ಅವರು ಸಂಪಾದಿಸಿರುವ ಕನ್ನಡ ವಾರ್ಷಿಕ ೧೯೯೪ಳ ಕೃತಿಯನ್ನು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗಿದೆ. ಈ ಕನ್ನಡ ವಾರ್ಷಿಕ ಕೃತಿಯು ಆಯಾ ವರ್ಷದ ಕರ್ನಾಟಕದ ಸಂಸ್ಕೃತಿಯ ಸಾಧನೆಗಳನ್ನು ಸೂಕ್ಷ್ಮವಾಗಿ ಗುರುತಿಸುತ್ತದೆ. ಅಂದರೆ ಒಂದು ವರ್ಷದ ಅವಧಿಯೊಳಗೆ ಕನ್ನಡಕ್ಕೆ, ಕರ್ನಾಟಕಕ್ಕೆ ಸಂಬಂಧಿಸಿದಂತೆ ಘಟಿಸಿದ ಮುಖ್ಯ ಆಗುಹೋಗುಗಳನ್ನು ಸಾಂಸ್ಕೃತಿಕ ಆಯಾಮದಲ್ಲಿ ವಿಶ್ಲೇಷಿಸುವುದು ವಾರ್ಷಿಕದ ಉದ್ದೇಶವಾಗಿರುತ್ತದೆ. ಇದರಲ್ಲಿ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಲೇಖನಗಳಿವೆ. ಇದರಲ್ಲಿ ಮಕ್ಕಳ ಸಾಹಿತ್ಯ ಎನ್ನುವ ಲೇಖನವನ್ನು ಧನ್ಯಕುಮಾರ ಮಿಣಜಗಿ ಎನ್ನುವವರು ಬರೆದುಕೊಟ್ಟಿದ್ದಾರೆ. ಈ ಲೇಖನದಲ್ಲಿ ೧೯೯೪ರಲ್ಲಿ ಬಂದಂತ ಮಕ್ಕಳ ಸಾಹಿತ್ಯದ ಒಂದು ಇಣುಕು ನೋಟವಾಗಿದೆ. ಆ ವರ್ಷದಲ್ಲಿ 'ಬಣ್ಣ ಬಣ್ಣದ ಓಕುಳಿ' ಎನ್ನುವುದು ಸಿದ್ಧಯ್ಯ ಪುರಾಣಿಕರ ಒಂದು ಉತ್ತಮ ಸಂಕಲನವಾಗಿದೆ. ಇಲ್ಲಿಯ ೨೦ ಕವನಗಳು ಪ್ರಾಸಬದ್ಧವಾಗಿವೆ. 'ಹುಲ್ಲೆ ಹಾಡು' ಎನ್ನುವುದು ಕುರುಬ ಬಸವರಾಜ ಎನ್ನುವವರ ಅತ್ಯುತ್ತಮ ಮಕ್ಕಳ ಕಾವ್ಯವಾಗಿದೆ.

ಇನ್ನು ಸುಮುಖಾನಂದ ಜಲವಳ್ಳಿ ಅವರ 'ಚೆಲುವಿನ ಕನ್ನಡ ಮಕ್ಕಳ ಹಾಡು' ಎನ್ನುವ ಕೃತಿಯಲ್ಲಿ ಕನ್ನಡ ತಾಯಿಯನ್ನು ಕುರಿತು ೧೬ ಕವನಗಳಿವೆ.

ಮಕ್ಕಳ ಸಾಹಿತ್ಯದಲ್ಲಿ ಅಗ್ರಗಣ್ಯರೆನಿಸಿದ ಸಿಸುಸಂಗಮೇಶರ 'ದಾರಿ ಬುತ್ತಿ' ಕಥೆಗಳ ಸಂಕಲನವಾಗಿದೆ. ಇಲ್ಲಿ ೧೮ ಪ್ರೇರಕ ಪ್ರಸಂಗಗಳಿದ್ದು, ಜಗತ್ತಿನ ಹಲವಾರು ಮಹನೀಯರ ಸಾಧನೆಗಳ ಬಗ್ಗೆ ಅವರು ಕಂಡುಕೊಂಡ ಜೀವನಾನುಭವದ ಬಗ್ಗೆ ಕಥಾರೂಪದ ಪ್ರಸಂಗಗಳು ಇದರಲ್ಲಿವೆ. ಎಚ್. ದುಂಡಿರಾಜ್ ಅವರ 'ಅಜ್ಜಿಕಥೆ' ಮತ್ತು ಜರ್ಮನ್ ಮಕ್ಕಳ ನಾಟಕ, 'ಸ್ಕಾಕರ್‌ಲಾಕ್ ಎಂಡ್ ಮಿಕಿ'ಯ ಅನುವಾದವಾಗಿದೆ. ಈ ನಾಟಕವಾಗಿ 'ರೈಲು ಎಂಜಿನ್'ದ ಸುತ್ತ ಹೆಣೆದ ನಾಟಕವಾಗಿದೆ. ಇದರಲ್ಲಿ ಬರುವ ಹಾಡುಗಳು ಎಲ್ಲರ ಗಮನ ಸೆಳೆಯುತ್ತವೆ.

ಈಚನೂರ ಶಾಂತ ಅವರ 'ಚಾಚಾನೆಹರು' ಅವರ ಬಾಳಿನ ಸಂಗತಿಗಳನ್ನು ತೆರೆದುಕೊಳ್ಳುತ್ತ ಸಾಗುತ್ತವೆ. ನೆಹರುರವರನ್ನು ಕುರಿತು ಮಕ್ಕಳಿಗೆ ಹೇಳುವಾಗ ಅವರನ್ನು 'ಚಾಚಾ' ಎಂದೇ ಹೆಸರಿಸಲಾಗಿದೆ. ನೆಹರು ಅವರನ್ನು ಮಕ್ಕಳಿಗೆ ಪರಿಚಯಿಸುವ ರೀತಿ ಮೋಡಿಮಾಡುತ್ತದೆ. ಟಿ.ಎಸ್. ನಾಗರಾಜಶೆಟ್ಟಿ ಅವರ 'ಹೀಗಿದ್ದರು ಹಿರಿಯರು' ಎನ್ನುವ ಕೃತಿಯಲ್ಲಿ ನೆಹರು, ಗಾಂಧಿ, ತಿಲಕ್ ಮತ್ತು ರಾಮಕೃಷ್ಣ ಪರಮಹಂಸರ ಜೀವನದಲ್ಲಿನ ಕೆಲವು ಘಟನೆಗಳನ್ನು ಪರಿಚಯಿಸುತ್ತಾರೆ. ಸಿ.ಎನ್. ಚನ್ನವೀರಯ್ಯನವರ 'ಎಂಥವರು ತಾವು' ಇದು ಭಾರತೀಯ ಸಾಹಿತ್ಯ ಸಂಸ್ಕೃತಿಯ ಕಿರುಪರಿಚಯವಾಗಿದೆ. ಮಹಾಭಾರತದಲ್ಲಿ ಬರುವ ಅನೇಕ ಪಾತ್ರಗಳನ್ನು ಮಕ್ಕಳಿಗೆ ಮನರಂಜಿಸುವಂತೆ ಚಿತ್ರಿಸಿದ್ದಾರೆ.

ಮತ್ತು ವಿಜ್ಞಾನವನ್ನು ಮಕ್ಕಳಿಗೆ ಸರಳವಾದ ರೀತಿಯಲ್ಲಿ ತಿಳಿಸಲು ಶ್ರೀಮತಿ ಗಾಯತ್ರಿಮೂರ್ತಿ ಅವರು ಶಾಖ, ಗಾಳಿ, ನೀರು, ಬೆಳಕು ಮತ್ತು ಶಬ್ದ ಪ್ರಪಂಚ ಎಂಬ ಐದು ಗ್ರಂಥಗಳನ್ನು ರಚಿಸಿದ್ದಾರೆ. ಇಲ್ಲಿಯ ಎಲ್ಲ ಬರಹಗಳು ಕಥೆಗಳ ಮೂಲಕ ಸಂಭಾಷಣೆಯ ಮೂಲಕ ಹೇಳುತ್ತಾರೆ. ಈ ಪ್ರತಿಯೊಂದು ಪುಸ್ತಕವೂ ಪ್ರಯೋಗಾಲಯದ ಅನುಭವವನ್ನೇ ಮಕ್ಕಳಿಗೆ ನೀಡುತ್ತವೆ. ಇನ್ನು ಕಲಬುರ್ಗಿಯ ಸಂಧ್ಯಾ ಸಾಹಿತ್ಯ ಪ್ರಕಾಶನದವರು ಹೊರತಂದಿರುವ 'ಸಂಧ್ಯಾ' ಎನ್ನುವ ವಿಶಿಷ್ಟ ಕೃತಿ ಮಕ್ಕಳ ಸಾಹಿತ್ಯ ಕುರಿತ ಲೇಖನಗಳ ಮಾಲಿಕೆಯಾಗಿದೆ. ಹೀಗೆ ೧೯೯೪ರಲ್ಲಿ ಬಂದ ಕೃತಿಗಳ ಕಿರುಪರಿಚಯವನ್ನು ಈ ಕನ್ನಡ ವಾರ್ಷಿಕ ಕೃತಿಯಲ್ಲಿ ಕಾಣಬಹುದು.

* 'ಕಲಬುರ್ಗಿಯ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನ ಸಂಪುಟ' ಎಂಬ ಕೃತಿಯನ್ನು ಸಿಸು ಸಂಗಮೇಶರು ಸಂಪಾದಿಸಿದ್ದಾರೆ. ಈ ಕೃತಿಯು ೧೯೮೪ರಲ್ಲಿ ಕಲಬುರ್ಗಿಯಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳು, ಪ್ರಬಂಧಗಳು ಮತ್ತು ಕವನಗಳ ಸಂಕಲನವಾಗಿದೆ. ಇದರಲ್ಲಿ ಮಕ್ಕಳ ಕಥೆಗಳನ್ನು ಕುರಿತು ಕೃ. ನಾರಾಯಣರಾವ್

ಅವರ ಲೇಖನದಲ್ಲಿ ಮಕ್ಕಳಿಗಾಗಿ ಬರೆಯುವ ಕಥೆಗಳು ಮೌಲಿಕತೆಯಿಂದ ಕೂಡಿರಬೇಕು. ಇವು ಕಾಲ್ಪನಿಕತೆಯಿಂದ ಕೂಡಿದ್ದರೂ ಇವು ಮಕ್ಕಳನ್ನು ಚಿಂತನಶೀಲರನ್ನಾಗಿ ಮಾಡುವಂತಿರಬೇಕು. ಈ ಕಥೆಗಳಲ್ಲಿನ ನೀತಿಕಥೆಗಳು, ಐತಿಹಾಸಿಕ ಕಥೆಗಳು, ಜಾನಪದ ಕಥೆಗಳು, ಪೌರಾಣಿಕ ಕಥೆಗಳು, ವೈಜ್ಞಾನಿಕ ಕಥೆಗಳು ಮೊದಲಾದ ಕಥೆಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಒಟ್ಟಿನಲ್ಲಿ ಮಕ್ಕಳ ಕಥೆಗಳು ಮಕ್ಕಳ ಜ್ಞಾನಾಭಿವೃದ್ಧಿ ಹಾಗೂ ಅವರ ಭವಿಷ್ಯವನ್ನು ಬೆಳಗುವಲ್ಲಿ ಸಹಕಾರಿಯಾಗುವಂತಿರಬೇಕು.

ಇನ್ನು 'ರೇಡಿಯೋ ಮತ್ತು ಮಕ್ಕಳ ಕಾರ್ಯಕ್ರಮಗಳು' ಎನ್ನುವ ಲೇಖನವನ್ನು ಕೆ.ಎಸ್. ನಿರ್ಮಲಾದೇವಿಯವರು ಬರೆದಿದ್ದಾರೆ. ಇದರಲ್ಲಿ ಮಕ್ಕಳಿಗೆ ಕಾರ್ಯಕ್ರಮಗಳು ಏಕೆ? ಅದರ ಮಹತ್ವ ಅದರ ಉಪಯೋಗ ಮೊದಲಾದ ಅಂಶಗಳನ್ನು ಕುರಿತು ವಿವೇಚಿಸಲಾಗಿದೆ.

'ಮಕ್ಕಳಿಗಾಗಿ ಹೊರಬಂದ ಚರಿತ್ರೆಗಳು' ಎನ್ನುವ ದು.ನಿಂ. ಬೆಳಗಲಿಯವರ ಲೇಖನದಲ್ಲಿ ಮಕ್ಕಳಿಗಾಗಿ ಬಂದಂತ ಚರಿತ್ರೆಯ ಪುಸ್ತಕಗಳನ್ನು ಗಮನಿಸುತ್ತಾ ಕರ್ನಾಟಕದ ಮಹಾನ್ ವ್ಯಕ್ತಿಗಳಿಂದ ಹಿಡಿದು ಭಾರತ ಹಾಗೂ ವಿಶ್ವದ ಮಹಾಪುರುಷರವರೆಗೂ ಈ ಮಾಲಿಕೆಯಲ್ಲಿ ಪರಿಚಯಿಸಲಾಗಿದೆ. ನಂತರದಲ್ಲಿ ಈ ಕೃತಿಯಲ್ಲಿ ಸಮ್ಮೇಳನದಲ್ಲಿ ನಡೆದ ಕವಿಗೋಷ್ಠಿಗಳಲ್ಲಿ ಮಂಡನೆಯಾದ ಹಲವಾರು ಪ್ರಮುಖ ಕವಿತೆಗಳನ್ನು ಪ್ರಕಟಿಸಲಾಗಿದೆ.

* 'ಸಮಕಾಲೀನ ಸಾಹಿತ್ಯ ಸಂಸ್ಕೃತಿ ಮತ್ತು ಅನುಪಮ ನಿರಂಜನರ ಸಾಹಿತ್ಯ' ಎಂಬ ಕೃತಿಯನ್ನು ಬರಗೂರು ರಾಮಚಂದ್ರಪ್ಪರವರು ಸಂಪಾದಿಸಿದ್ದಾರೆ. ಇದು ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಮುದ್ರಿಸಿದ್ದಾರೆ. ಇದೊಂದು ವಿಚಾರ ಸಂಕಿರಣ ಮಾಲೆಯಾಗಿದೆ. ಡಾ. ಅನುಪಮಾ ಅವರು ಸಾಹಿತ್ಯ ರಚನೆ ಮತ್ತು ಸಾಮಾಜಿಕ ಚಟುವಟಿಕೆಗಳಿಂದ ವಿಶಿಷ್ಟ ನೆಲೆಯನ್ನು ಪಡೆದುಕೊಂಡ ಲೇಖಕಿ. ಇವರ ಸಾಹಿತ್ಯದ ವೈವಿಧ್ಯತೆಯನ್ನು ಕುರಿತು ಬಂದ ಲೇಖನಗಳ ವಿಚಾರ ಸಂಕಿರಣ ಮಾಲೆಯೇ ಈ ಕೃತಿಯಾಗಿದೆ. ಇದರಲ್ಲಿ 'ಅನುಪಮಾ ಅವರ ಮಕ್ಕಳ ಸಾಹಿತ್ಯದ ಆಶಯ ಅಭಿವ್ಯಕ್ತಿ ವಿಧಾನ' ಎಂಬ ಲೇಖನವನ್ನು ಟಿ.ಎಸ್. ನಾಗರಾಜಶೆಟ್ಟಿ ಅವರು ಬರೆದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಅತ್ಯಂತ ನಿರ್ಲಕ್ಷೆಗೆ ಒಳಗಾಗಿರುವ ಕ್ಷೇತ್ರವೇ ಈ ಮಕ್ಕಳ ಸಾಹಿತ್ಯ. ಎಷ್ಟೋ ಸಾಹಿತಿಗಳು ಮಕ್ಕಳ ಸಾಹಿತ್ಯವನ್ನು ಮರೆತಿದ್ದಾರೆ. ಇನ್ನು ಕೆಲವು ಆಸಕ್ತಿ ಇರುವವರು ಇದಕ್ಕೆ ಗಮನವನ್ನು ಹರಿಸದೆ ಇರುವ ಸಮಯದಲ್ಲಿ ಮಕ್ಕಳ ಸಾಹಿತ್ಯವನ್ನು ಕುರಿತು ಬರೆದವರು ಅನುಪಮಾ. ಇವರು 'ದಿನಕ್ಕೊಂದು ಕಥೆ' ಎನ್ನವ ಶೀರ್ಷಿಕೆಯಡಿಯಲ್ಲಿ ೩೬೫ ಕಥೆಗಳನ್ನು ವಿವಿಧ ಬಗೆಯ ಮೂಲಗಳಿಂದ ಕನ್ನಡಕ್ಕೆ ತಂದಿದ್ದಾರೆ. ಭಾರತದ ಪುರಾಣ-ಇತಿಹಾಸ, ಪಂಚತಂತ್ರ, ಹಿತೋಪದೇಶ, ಪ್ರಾಚೀನ ಗ್ರೀಕಿನ ಈಸೋಪನ ನೀತಿ ಕಥೆಗಳು, ಪುರಾಣ ಕಥೆಗಳು ಮೊದಲಾದ ಕಡೆಗಳಿಂದ ತಂದು ಮಕ್ಕಳಿಗೆ ನೀಡಿದ್ದಾರೆ.

ಇವುಗಳನ್ನು ಹನ್ನೆರಡು ಬಿಡಿ ಬಿಡಿ ಸಂಚಿಕೆಗಳಲ್ಲೂ ದಿನಕ್ಕೊಂದು ಕಥೆಯಂತೆ ಒಟ್ಟು ೩೬೫ ಕಥೆಗಳನ್ನು ಚೈತ್ರ, ವೈಶಾಖ, ಮೊದಲಾದ ಹನ್ನೆರಡು ಮಾಸಗಳ ಹೆಸರಿನಲ್ಲಿ ರಚನೆ ಮಾಡಿ ಪ್ರಕಟಿಸಿದ್ದಾರೆ. ಈ ಅನುಪಮಾರ ಕಥೆಗಳನ್ನು ಓದಿದ ಕೇಳಿದ ಮಕ್ಕಳಿಗೆ ಭರತಖಂಡದ ಪುರಾಣಗಳ ಬಗ್ಗೆ ತಿಳುವಳಿಕೆ ಮೂಡುವುದಲ್ಲದೆ ಅವುಗಳ ಬಗ್ಗೆ ಗೌರವವು ಮೂಡುತ್ತದೆ. ಈ ಮಟ್ಟಿಗೆ ಇವು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ.

* 'ಶತಮಾನದ ಕನ್ನಡ ಸಾಹಿತ್ಯ ಸಂಪುಟ ೧ ಮತ್ತು ೨' ಎಂಬ ಸಂಪುಟಗಳನ್ನು ಖ್ಯಾತ ವಿಮರ್ಶಕರಾದ ಜಿ.ಎಚ್. ನಾಯಕ ಅವರು ಸಂಪಾದಿಸಿದ್ದಾರೆ. ಈ ಸಂಪುಟಗಳು ಶತಮಾನದ ಕನ್ನಡ ಸಾಹಿತ್ಯದ ಸಮೀಕ್ಷಾ ಸಂಪುಟಗಳಾಗಿವೆ. ಈ ಎಲ್ಲಾ ಸಮೀಕ್ಷಾ ಲೇಖನಗಳು ಇಡೀ ಶತಮಾನದ ಕನ್ನಡ ಸಾಹಿತ್ಯದ ಬಗೆಗಿನ ಒಟ್ಟು ನೋಟವನ್ನು ಪರಿಚಯಿಸುತ್ತದೆ. ಇದರ ೨ನೇ ಸಂಪುಟದಲ್ಲಿ 'ಶತಮಾನದ ಮಕ್ಕಳ ಸಾಹಿತ್ಯ' ಎಂಬ ಲೇಖನವನ್ನು ಸಿಸು ಸಂಗಮೇಶರು ಬರೆದಿರುತ್ತಾರೆ. ಇದರಲ್ಲಿ ಮಕ್ಕಳ ಸಾಹಿತ್ಯದ ಆರಂಭದಲ್ಲಿ ಬಂದಂತ ಮಕ್ಕಳ ಸಾಹಿತಿಗಳು ಮತ್ತು ಅವರ ಕೃತಿಗಳ ಮೂಲಕ ಪರಿಚಯ, ಮಧ್ಯಕಾಲ ಮತ್ತು ಶತಮಾನದ ಕೊನೆಯ ದಶಕಗಳನ್ನು ಹಾಗೂ ಮೊದಲಾದ ವಿಷಯಗಳ ಚರ್ಚೆಯನ್ನು ಕಾಣಬಹುದು.

* ನೀಲತ್ತಹಳ್ಳಿ ಕಸ್ತೂರಿ ಅವರು ಸಂಪಾದಿಸಿರುವ 'ಡಾ.ಜಿ.ಪಿ. ರಾಜರತ್ನಂ ಸಮಗ್ರ ಮಕ್ಕಳ ಸಾಹಿತ್ಯ' ಎಂಬ ಬೃಹತ್ ೭ ಸಂಪುಟಗಳನ್ನು ೨೦೦೮ರಲ್ಲಿ ಜಿ.ಪಿ. ರಾಜರತ್ನಂ ಅವರ ಜನ್ಮ ಶತಮಾನೋತ್ಸವದ ಈ ಸಂದರ್ಭಕ್ಕೆ ಕಾಣಿಕೆಯಾಗಿ ಅವರ ಸಮಗ್ರ ಮಕ್ಕಳ ಸಾಹಿತ್ಯವನ್ನು ಸಂಗ್ರಹಿಸಿ ಹಲವು ಸಂಪುಟಗಳಲ್ಲಿ ಪ್ರಕಟಿಸಿ, ಮಕ್ಕಳಿಗೆ ಒಂದೇ ಕಡೆ ರಾಜರತ್ನಂರವರ ಸಾಹಿತ್ಯ ಸಿಗುವಂತೆ ಮಾಡುವ ಉದ್ದೇಶವನ್ನು ಹೊಂದಿ ಕನ್ನಡ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೈಗೊಂಡು ಈ ಕೆಲಸವನ್ನು ನೀಲತ್ತಹಳ್ಳಿ ಕಸ್ತೂರಿ ಅವರಿಗೆ ವಹಿಸಿತು. ಇದರ ಫಲವಾಗಿ ೨೦೦೯ರಲ್ಲಿ ಇದರ ಮೊದಲನೆಯ ಸಂಪುಟ ಅನಾವರಣಗೊಂಡಿತು. ಸು. ೭೦೦ ಪುಟಗಳ ಆ ಸಂಪುಟ ರಾಜರತ್ನಂರವರ ಮಕ್ಕಳ ಗೀತೆಗಳು, ಕೆಲವು ಸ್ತೋತ್ರಗಳು, ಮಕ್ಕಳ ಗಾಂಧಿ ಲೇಖನಗಳು, ಒಂದೆರಡು ಮಕ್ಕಳ ನಾಟಕಗಳನ್ನು ಒಳಗೊಂಡಿವೆ. ಹೀಗೆ ಇದರ ಮೊದಲನೆಯ ಸಂಪುಟ ರಾಜರತ್ನಂರವರ ಸಂಕ್ಷಿಪ್ತ ಜೀವನ ಪರಿಚಯದೊಂದಿಗೆ ಅವರ ಸಾಹಿತ್ಯ ಸೇವೆಯನ್ನು ಗುರುತಿಸುವ ಕೆಲಸ ಮಾಡಿದೆ.

ಈ ಮಾಲೆಯ ಎರಡನೆ ಸಂಪುಟದಲ್ಲಿ ಪುರಾಣ–ಇತಿಹಾಸಗಳ ಕಥೆಗಳು (ಭಾಗ–೧) ಮತ್ತು ಪುರಾಣ ಇತಿಹಾಸಗಳ ಕಥೆಗಳು (ಭಾಗ–೨) ಈ ಸಂಪುಟವನ್ನು ಪುರಾಣ ಇತಿಹಾಸಗಳ ಕಥೆಗಳು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟದ ಭಾಗ–೧ರಲ್ಲಿ ಭಾಸನ ಭಾರತದ ಕಥೆಗಳು, ನಾಳೀ ಜಂಘ, ಸ್ನೇಹದ ಕಥೆಗಳು

(ಭಾಗ-೧), ಸ್ನೇಹದ ಕಥೆಗಳು (ಭಾಗ-೨), ಏಕಲವ್ಯನ ಕಥೆಗಳು, ಕತೆಗಳ ಬುಟ್ಟಿ, ಕಥಾಕೋಶ ಕಥೆಗಳು (ಜಯವಿಜಯರ ಕಥೆಗಳು, ಕರ್ಣನ ಕಥೆಗಳು, ಕುರುಕ್ಷೇತ್ರದ ಕಥೆಗಳು, ರಾಮಾಯಣದ ಕಥೆಗಳು, ಸಂಮಿಶ್ರ ಕಥೆಗಳು, ನವರಂಗ ಕಥೆಗಳು) ಎಂದು ವಿಭಾಗಿಸಲಾಗಿದೆ ಮತ್ತು ಈ ಸಂಪುಟದ ಭಾಗ-೨ರಲ್ಲಿ 'ಪುಟಾಣಿ ಪಂಚತಂತ್ರದಲ್ಲಿ (ಬೇದಪ್ರಕರಣ, ಪರೀಕ್ಷಾ ಪ್ರಕರಣ, ವಿಶ್ವಾಸ ಪ್ರಕರಣ, ವಂಚನಾಪ್ರಕರಣ ಮತ್ತು ಮಿತ್ರಕಾರ್ಯ ಪ್ರಕರಣ) ಎಂಬ ಐದು ಬೇಧಗಳಿವೆ. ಅಲ್ಲದೆ ಈ ಸಂಪುಟದಲ್ಲಿ ವತ್ಸರಾಜನ ಕಥೆಗಳು, ನಯಸೇನನ ಕಥೆಗಳು, ಶ್ರೀಪಾರ್ಶ್ವನಾಥರ ಕಥೆಗಳು, ಅಶೋಕ ರಾಜನ ಕಥೆಗಳು, ಉಪಗುಪ್ತನ ಕಥೆಗಳು ಮತ್ತು ಮೈಸೂರಿನ ಒಡೆಯರನ್ನು ಕುರಿತು ಸಂಸ ಕವಿ ಬರೆದಿರುವ ಆರು ನಾಟಕಗಳ ಕಥೆಗಳನ್ನು ಒಳಗೊಂಡಿದೆ.

ಈ ಮಾಲೆಯ ೩ನೇ ಸಂಪುಟವು ದೇಶ ವಿದೇಶಗಳ ಕಥೆಗಳನ್ನು ಒಳಗೊಂಡಿದೆ. ಇದರಲ್ಲಿ ಕಾಶ್ಮೀರದ ಕಥೆಗಳು, ಗುಪ್ತಾರ ಕಥೆಗಳು, ಬೆಪ್ಪುತಕಡಿ ಐವಾನ್ ಕಥೆ, ಸರಬುರಡೆ ಕಥೆಗಳು, ಚಿತ್ರಗಳ ಪಟ್ಟಿ, ಆಲಿವರ್ ಟ್ರಸ್ಟ್, ಚಿತ್ರಗಳು, ಚಿಕ್ಕಮಕ್ಕಳು ಏಸಾಪ್ ಪಂಡಿತನ ನೆರಳು, ಕಡ್ಡಿ ಬುಡ್ಡಿ ಜಗಳ ಮೊದಲಾದ ನೂರಾರು ಕಥೆಗಳ ಗುಚ್ಚವನ್ನೇ ಒಳಗೊಂಡಿದೆ.

ರಾಜರತ್ನಂ ಸಮಗ್ರ ಮಕ್ಕಳ ಸಾಹಿತ್ಯ ೪ನೇ ಸಂಪುಟವು ಜೀವನ ಚರಿತ್ರೆಗಳನ್ನು ಒಳಗೊಂಡಿದ್ದರೆ, ೫ನೇ ಸಂಪುಟವು ಬೌದ್ಧಿಕ ಕಥೆಗಳನ್ನು, ೬ನೇ ಸಂಪುಟವು ಇತರೆ ಮಕ್ಕಳ ಕಥೆಗಳನ್ನು ಒಳಗೊಂಡಿರುವುದನ್ನು ಕಾಣಬಹುದು. ಈ ಮಾಲೆಯ ಸಂಪುಟಗಳು ಮಕ್ಕಳ ಸಾಹಿತ್ಯ ಅಧ್ಯಯನಕ್ಕೆ ಉಪಯುಕ್ತವಾಗುವಂತವುಗಳಾಗಿವೆ.

* ರಾಜೇಂದ್ರ ಗಡಾದ ಅವರು 'ಮಕ್ಕಳ ಸಾಹಿತ್ಯ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಮಕ್ಕಳ ಕಥೆ, ಕವನಗಳ ಜೊತೆಗೆ ಒಗಟುಗಳು, ಶಿಶುಪ್ರಾಸಗಳು, ಹನಿಗವನಗಳು, ನೀಳ್ಗತೆ, ರೂಪಕ, ವೈಜ್ಞಾನಿಕ ಬರಹ, ವಿಜ್ಞಾನ ಪ್ರಯೋಗ, ಪ್ರೇರಕ ಪ್ರಸಂಗಗಳು, ವ್ಯಕ್ತಿ ಪರಿಚಯ, ಆರೋಗ್ಯ ಲೇಖನ, ಜೀವ ಚರಿತ್ರೆ, ಅನುಭವ ಕಥನ ಹೀಗೆ ವಿವಿಧ ಮಕ್ಕಳ ಸಾಹಿತ್ಯದ ಪ್ರಕಾರಗಳನ್ನು ಸೇರಿಸಲಾಗಿದೆ. ಇವು ಮಕ್ಕಳಿಗೆ ಉಪಯುಕ್ತವಾಗುವುವು ಎನ್ನುವ ಉದ್ದೇಶದಿಂದ ಆಯ್ಕೆಮಾಡಲಾಗಿದೆ. ಈ ಕೃತಿಯಲ್ಲಿ ದೊಡ್ಡವರು ಮಕ್ಕಳಿಗಾಗಿ ಬರೆದ ಸಾಹಿತ್ಯದ ಜೊತೆಗೆ ಮಕ್ಕಳೇ ಮಕ್ಕಳಿಗಾಗಿ ಬರೆದಂತಹ ರಚನೆಗಳೂ ಇದರಲ್ಲಿವೆ. ಒಟ್ಟು ನೂರಾ ಇಪ್ಪತ್ತಕ್ಕೂ ಹೆಚ್ಚು ಸೃಜನಾತ್ಮಕ ರಚನೆಗಳಿದ್ದು, ಎಲ್ಲಾ ರಚನೆಗಳನ್ನು ವಿಶ್ಲೇಷಣೆಗೊಳಪಡಿಸಿದ್ದಾರೆ. ಒಟ್ಟಾರೆಯಾಗಿ ಮಕ್ಕಳ ಸಾಹಿತ್ಯ ಅಧ್ಯಯನಕ್ಕೆ ಇದು ಉಪಯುಕ್ತ ಕೃತಿಯಾಗಿದೆ.

* ಕೆ.ವಿ. ನಾರಾಯಣ ಅವರು ಸಂಪಾದಿಸಿದ 'ಭಾಷೆ' ಎಂಬ ವಿಶ್ವಕೋಶ-೧ ಇದು ೨೦೦೦ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಇದರಲ್ಲಿ ಮಕ್ಕಳ ಭಾಷೆಯ ಕಲಿಕೆಯ

ಮಾಹಿತಿ, ಸಂಗ್ರಹಕಾರ್ಯ ವಿಧಾನ ಮೊದಲಾದ ವಿಚಾರಗಳನ್ನು ಕುರಿತು ಚರ್ಚಿಸಲಾಗಿದೆ. ಮಗುವು ಹುಟ್ಟಿದ ನಂತರ ಬೆಳೆಯುವಾಗ ಪಡೆದುಕೊಳ್ಳುವ ಹಲವಾರು ಸಾಮರ್ಥ್ಯಗಳಲ್ಲಿ ಮಾತನಾಡುವುದು ಒಂದು ಪ್ರಮುಖ ಹಂತ. ಈ ಕಲಿಕೆಯ ಹಂತದಲ್ಲಿ ಮಗು ಹೇಗೆ ನಡೆದುಕೊಳ್ಳುತ್ತದೆ ಎಂಬುದನ್ನು ತಿಳಿಯಲು ಹಲವಾರು ಅಧ್ಯಯನಗಳನ್ನು ನಡೆಸಲಾಗಿದೆ. ಅದರಲ್ಲಿಯು ಹಲವಾರು ಮಾದರಿಗಳಲ್ಲಿ ಅಧ್ಯಯನಗಳನ್ನು ನಡೆಸಲಾಗಿದೆ. ಇಲ್ಲಿ ಮಗುವನ್ನು ಅದು ಇರುವ ವಾತಾವರಣದಲ್ಲೇ ಇಟ್ಟು ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಯೋಗಗಳನ್ನು ಆಧರಿಸಿ ಅನ್ವೇಷಣೆಯನ್ನು ಮಾಡುವುದು ಇನ್ನೊಂದು ಮಾದರಿಯಾಗಿದೆ.

ಈ ಪ್ರಯೋಗ ವಿಧಾನದಲ್ಲಿ ಅಧ್ಯಯನಕಾರರು ವಿವಿಧ ವಯೋಮಾನದ ಮಕ್ಕಳ ಭಾಷಾ ಕಲಿಕೆಯ ಬಗ್ಗೆ ಕೆಲವು ಸಿದ್ಧಾಂತಗಳನ್ನು ಮಂಡಿಸಲಾಗಿ ಮಕ್ಕಳು ಭಾಷೆಯನ್ನು ಹೇಗೆ ಬಳಸುತ್ತಾರೆ ಮತ್ತು ಭಾಷಿಕವಾಗಿ ಹೇಗೆ ಗ್ರಹಿಸುತ್ತಾರೆ ಎಂಬ ನೆಲೆಗಳಲ್ಲಿ ಈ ಸಿದ್ಧಾಂತಗಳನ್ನು ರೂಪಿಸುತ್ತದೆ.

ಮಗು ತಾನು ತೊದಲು ನುಡಿಯಲಾರಂಭಿಸುವುದಕ್ಕೂ ಮೊದಲು ಭಾಷೆಯ ಜ್ಞಾನವನ್ನು ಹೊಂದಿರುತ್ತದೆ. ದೊಡ್ಡವರ ಮುಖಚರ್ಯೆಯನ್ನು ಗಮನಿಸಿರುತ್ತದೆ. ಹಿರಿಯರ ಮಾತುಗಳಿಗೆ ಪ್ರತಿಕ್ರಿಯಿಸುತ್ತದೆ. ಈ ಹಂತದಲ್ಲಿ ಮಕ್ಕಳಲ್ಲಿ ಹಿರಿಯರ ಭಾಷೆಯ ವಿವಿಧ ಧ್ವನಿಗಳನ್ನು ಗುರುತಿಸುವ ಸಾಮರ್ಥ್ಯವು ಇರುತ್ತದೆ. ಮಗು ತೊದಲು ಮಾತನಾಡಲಾರಂಭಿಸುವುದಕ್ಕೂ ಮುಂಚೆಯೆ ಈ ಬೆಳವಣಿಗೆಗಳನ್ನು ಮಾತಿನ ಉತ್ಪತ್ತಿ, ಮಾತಿನ ಗ್ರಹಿಕೆ ಮತ್ತು ಮಾತಿನ ಪರಸ್ಪರ ಸಂವಹನ ಕ್ರಿಯೆ ಎಂಬ ಮೂರು ಹಂತಗಳನ್ನು ಕಾಣಬಹುದು. ಹೀಗೆ ಈ ಕೃತಿಯ ಲೇಖನದಲ್ಲಿ ಮಕ್ಕಳ ಭಾಷೆಯ ಕಲಿಕೆಯ, ಮಾಹಿತಿ, ಸಂಗ್ರಹಣೆ ವಿಧಾನ, ಕಲಿಕೆಯ ವಿವಿಧ ಹಂತಗಳನ್ನು ಕುರಿತು ವಿವರವಾಗಿ ಹೇಳಲಾಗಿದೆ.

* ಬೊಳುವಾರು ಮಹಮದ್ ಕುಂಞ ಸಂಪಾದಿಸಿರುವ 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ನೂರಾರು ಪದ್ಯಗಳ ಸಂಕಲನವನ್ನು ೧೯೯೧ರಲ್ಲಿ ಸಂಪಾದಿಸಿದ್ದಾರೆ. ಈ ಕೃತಿಗೆ ಶಿವರಾಮ ಕಾರಂತರು ಮುನ್ನುಡಿಯನ್ನು ಬರೆಯುತ್ತ ಯಾರನ್ನು ಮಕ್ಕಳೆಂದು ಕರೆಯಬೇಕು? ಎಷ್ಟು ವಯಸ್ಸಿನವರನ್ನು ಮಕ್ಕಳೆಂದು ಕರೆಯಬೇಕು? ಎಂದು ಪ್ರಶ್ನಿಸುತ್ತಾ ಅವರಿಗೆ ರಚಿಸಬೇಕಾದ ಸಾಹಿತ್ಯ ರೂಪ ಯಾವುದು? ಎಂದು ಹೇಳುತ್ತಾ ಮಕ್ಕಳ ಸಾಹಿತ್ಯದ ಗುಣಮಟ್ಟದ ಬಗೆಗೆ ಕಾರಂತರು ಚರ್ಚಿಸುತ್ತಾರೆ. ಇದರಲ್ಲಿ ರಾಜರತ್ನಂ ಅವರು ಮಕ್ಕಳ ಪದ್ಯಲೋಕದ 'ರಾಜ' ಮತ್ತು 'ರತ್ನ' ಎಂದು ಕರೆಯಲಾಗಿದೆ.

* ಕೆ.ಸಿ. ಶಿವಾರೆಡ್ಡಿ ಅವರು ಪ್ರಧಾನ ಸಂಪಾದಕರಾಗಿ ಸಂಪಾದಿಸಿರುವ 'ಕುವೆಂಪು ಸಮಗ್ರ ಗದ್ಯ' ಸಂಪುಟ ೨ ಎನ್ನುವ ಕೃತಿಯನ್ನು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯದಿಂದ

ಪ್ರಕಟಿಸಲಾಗಿದೆ. ಈ ದೀರ್ಘ ಕೃತಿಯ ಸಂಪುಟ ಎರಡರಲ್ಲಿ 'ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು' ಎಂಬ ಲೇಖನವಿದೆ. ಇದು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ ಏರ್ಪಡಿಸಿದ್ದ ಅಖಿಲ ಭಾರತ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿರುವ ಭಾಷಣದ ಸಾರಾಂಶವಾಗಿದೆ.

ಇದರಲ್ಲಿ ಮಕ್ಕಳ ಸಾಹಿತ್ಯ ಎಂಬುದು ವಯಸ್ಸಿಗೆ ಅನುಗುಣವಾದುದು, ಯಾಕೆಂದರೆ ಆ ಮಕ್ಕಳ ಸಾಹಿತ್ಯದಲ್ಲಿ ಶೈಶವ ಸಾಹಿತ್ಯ, ಬಾಲಸಾಹಿತ್ಯ ಮತ್ತು ಕೌಮಾರ್ಯ ಸಾಹಿತ್ಯವೆಂಬ ಮೂರು ವಿಧಗಳಿದ್ದು, ಶೈಶವ ಸಾಹಿತ್ಯದಲ್ಲಿ ಮಕ್ಕಳಿಗೆ ವೈಚಾರಿಕವಾದ ವಿಷಯಗಳನ್ನು ಕೊಡದೆ ತುಂಬಾ ಸರಳವಾಗಿ ಹೇಳಿದರೆ ಸಾಕು, ಆದರೆ ಬಾಲ ಸಾಹಿತ್ಯ ಮತ್ತು ಕೌಮಾರ್ಯ ಸಾಹಿತ್ಯದಲ್ಲಿ ಮಕ್ಕಳಿಗೆ ಕೊಡಬೇಕಾದ ವಿಷಯಗಳನ್ನು ಯೋಚಿಸಿಕೊಡಬೇಕು. ಇಲ್ಲಿ ಅವರಿಗೆ ಎರಡು ಮೂರು ಮುಖ್ಯ ವಿಚಾರಗಳನ್ನು ಕುರಿತು ಹೇಳಬಹುದು ಎನ್ನುತ್ತಾರೆ. ಅಂದರೆ ಈ ಅವಧಿಯಲ್ಲಿ ಬಾಲಸಾಹಿತ್ಯವಿದೆ, ಭಾವಸಾಹಿತ್ಯವಿದೆ ಮತ್ತು ಬುದ್ಧಿ ಸಾಹಿತ್ಯವು ಇರುತ್ತದೆ. ಇಲ್ಲಿ ಭಾವ ಸಾಹಿತ್ಯದಲ್ಲಿ ಮಕ್ಕಳಿಗೆ ಮನರಂಜನೆಯ ಕಥೆಗಳನ್ನು, ಸಣ್ಣ ಸಣ್ಣ ಕವನಗಳನ್ನು ಹೇಳಬಹುದು. ಆದರೆ, ಮಗು ಬೆಳೆದಂತೆಲ್ಲಾ ಬಾಲ್ಯ ಮತ್ತು ಕೌಮಾರ್ಯದ ಮೌಲ್ಯಕ್ಕೆ ಬಂದಾಗ ಸ್ವಲ್ಪ ಹೊಸ ರೀತಿಯ ವಿಚಾರಣೆಗೆ, ಆಲೋಚನೆಗಳಿಗೆ ಅವಕಾಶವಿರುತ್ತದೆ. ಇಲ್ಲಿ ವೈಚಾರಿಕತೆಗೆ ಆದ್ಯತೆ ಇರುತ್ತದೆ ಎನ್ನುತ್ತಾರೆ. ಜೊತೆಗೆ ನಾವುಗಳು ಇಂದಿಗೂ ಮಕ್ಕಳ ಸಾಹಿತ್ಯವನ್ನು ಆಸಕ್ತಿಯಿಂದಲೇ ಓದುತ್ತಾ ಇದ್ದೇವೆ ಎನ್ನುತ್ತಾ, ಪಾಶ್ಚಾತ್ಯ ಮಕ್ಕಳಿಗೂ ಮತ್ತು ದೇಶಿಯ ಮಕ್ಕಳಿಗೂ ಹೋಲಿಕೆಯನ್ನು ಮಾಡುತ್ತಾರೆ.

ಮಲ್ಲೇಪುರಂ ಜಿ. ವೆಂಕಟೇಶ ಅವರು ಪ್ರಧಾನ ಸಂಪಾದಕರಾಗಿ ಸಂಪಾದಿಸಿರುವ 'ಕನ್ನಡ ವಾರ್ಷಿಕ' ೧೯೯೨ ಎನ್ನುವ ಕೃತಿಯನ್ನು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಲಾಗಿದೆ. ಈ ಕನ್ನಡ ವಾರ್ಷಿಕ ಕೃತಿಯು ಆಯಾ ವರ್ಷದ ಕರ್ನಾಟಕದ ಸಂಸ್ಕೃತಿಯ ಸಾಹಿತ್ಯ ಸಾಧನೆಗಳನ್ನು ಸೂಕ್ಷ್ಮವಾಗಿ ಗುರುತಿಸುತ್ತದೆ. ಅಂದರೆ ಒಂದು ವರ್ಷದ ಅವಧಿಯೊಳಗೆ ಕನ್ನಡಕ್ಕೆ, ಕರ್ನಾಟಕಕ್ಕೆ ಸಂಬಂಧಿಸಿದಂತೆ ಘಟಿಸಿದ ಮುಖ್ಯ ಆಗುಹೋಗುಗಳನ್ನು ಸಾಂಸ್ಕೃತಿಕ ಆಯಾಮದಲ್ಲಿ ವಿಶ್ಲೇಷಿಸುವುದು ಕನ್ನಡ ವಾರ್ಷಿಕದ ಉದ್ದೇಶವಾಗಿರುತ್ತದೆ. ಇದರಲ್ಲಿ ಕನ್ನಡದ ಇತರೇ ಎಲ್ಲಾ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದ ಹಲವಾರು ಲೇಖನಗಳಿವೆ.

ಈ ಕೃತಿಯಲ್ಲಿ 'ಮಕ್ಕಳ ಸಾಹಿತ್ಯ' ಎನ್ನುವ ಲೇಖನವನ್ನು ಡಾ. ಅಮರೇಶ ನುಗಡೋಣಿ ಅವರು ಬರೆದಿರುತ್ತಾರೆ. ಈ ಲೇಖನದಲ್ಲಿ ೧೯೯೨ರಲ್ಲಿ ಬಂದಂತ ಮಕ್ಕಳ ಸಾಹಿತ್ಯದ ಒಂದು ಇಣುಕು ನೋಟವಿದೆ. ೧೯೯೨ನೇ ವರ್ಷದಲ್ಲಿ ಜಯರಾಮಾಚಾರ್ಯ ಅವರು ಬರೆದ 'ಅನುಕರಣಗೀತ ಲಹರಿ' ಎನ್ನುವ ಮಕ್ಕಳ ಕೃತಿಯನ್ನು ಟಿ.ವಿ. ವೆಂಕಟಾಚಲಶಾಸ್ತ್ರಿಯವರು

ಸಂಪಾದಿಸಿಕೊಟ್ಟಿದ್ದಾರೆ. ಇದರಲ್ಲಿರುವ ಮಕ್ಕಳ ಪದ್ಯಗಳು ಮಕ್ಕಳು ಹಾಡುವಂತಿವೆ. ಮತ್ತು ಕುಣಿಯುವಂತಿವೆ. ಜೊತೆಗೆ ಈ ಪದ್ಯಗಳನ್ನು ಮಕ್ಕಳ ಜೊತೆಗೆ ದೊಡ್ಡವರೂ ಕೂಡ ಹಾಡಬಹುದು.

ಮಕ್ಕಳಿಗಾಗಿಯೇ ಹಲವಾರು ಕೃತಿಗಳನ್ನು ಬರೆದ ಬಿ. ಶೇಖರಪ್ಪ ಹುಲಿಗೆರಿ ಇವರ 'ಚಿಕ್ಕ ಚಿಕ್ಕ ಚುಕ್ಕಿ' ಎನ್ನುವ ಕೃತಿಯಲ್ಲಿ ಪ್ರಾಣಿ, ಪಕ್ಷಿ, ಪರಿಸರ, ಸಾಮಾಜಿಕ ಪ್ರಜ್ಞೆ ಮೊದಲಾದ ವಸ್ತು ವೈವಿಧ್ಯತೆಯನ್ನು ಇಟ್ಟುಕೊಂಡು ರಚಿಸಿದ್ದಾರೆ. ಜೊತೆಗೆ ಶಿವರಾಮ ಕಾರಂತ ಅವರು ೫೦ ವರ್ಷಗಳ ಹಿಂದೆ ಬರೆದ 'ಸೂರ್ಯಚಂದ್ರ' ಎನ್ನುವ ನಾಟಕವನ್ನು ಹೊರತಂದಿದ್ದಾರೆ. ಇದನ್ನು ರಂಗದ ಮೇಲೆ ತರುವುದರ ಜತೆಗೆ ಮಕ್ಕಳಲ್ಲಿ ಅಭಿನಯವನ್ನು ಪ್ರಚೋದಿಸಿದರು.

ಮಕ್ಕಳಿಗಾಗಿ ಟಿ.ಎಸ್. ನಾಗರಾಜಶೆಟ್ಟಿ ಅವರು ಕೃತಿಗಳನ್ನು ಬರೆದಿದ್ದಾರೆ. ಅದರಲ್ಲಿ ಇವರ 'ಹಾವು ಕಪ್ಪೆ ಮತ್ತು ಏಡಿ' ಎನ್ನುವ ಕೃತಿಯು ತುಂಬ ಕುತೂಹಲವನ್ನು ಹುಟ್ಟಿಸುವಂತಿದೆ. ಇದರಲ್ಲಿ ಒಂದು ಗಾದೆ ಮಾತನ್ನೋ, ಪ್ರಾಣಿಗಳ ಮೇಲೆ ಪ್ರಚಲಿತವಿರುವ ಸಂಗತಿಗಳನ್ನೋ ಆಯ್ಕೆಮಾಡಿಕೊಂಡು ಅದನ್ನು ಕಥೆಕಟ್ಟಿ ಅರ್ಥೈಸುವ ಕ್ರಿಯೆ ಮಾಡುತ್ತಾರೆ. ಇದರಿಂದ ಈ ಕಥೆಗಳು ಮಕ್ಕಳಿಗೆ ಹೆಚ್ಚು ಪ್ರಿಯವೆನಿಸುತ್ತವೆ. ಕಪ್ಪೆಗೆ ಸುಂದರವಾದ ಬೆನ್ನು ಯಾಕಿದೆ? ಹಾವಿಗೆ ಕಾಲೇಕೆ ಇಲ್ಲ? ಏಡಿಗೆ ಏಕೆ ತಲೆಯಿಲ್ಲ? ಎಂಬ ಕುತೂಹಲ ಹುಟ್ಟಿಸುವಂತ ಪ್ರಶ್ನೆಗಳನ್ನು ಹಾಕಿಕೊಂಡು ಕಥೆಗಳನ್ನು ಸೃಷ್ಟಿಸಿದ್ದಾರೆ. ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ 'ಸೂರ್ಯಚಂದ್ರ' ಮತ್ತು 'ನಾಚಿದ ಬೀಜಣ್ಣ' ಎನ್ನುವ ಕಥೆಗಳು ತುಂಬಾ ಚನ್ನಾಗಿವೆ. 'ನಾಯಿ ನಿದ್ದೆ' ಎನ್ನುವ ಕಥೆಯಲ್ಲಿ ಪ್ರಾಣಿ ಜಗತ್ತಿನ ಕೆಲವು ವೈಶಿಷ್ಟ್ಯಗಳನ್ನು ಹುಡುಕುತ್ತಾ ಕಾಲ್ಪನಿಕವಾಗಿ ನಿರೂಪಿಸಿರುವ ಕಥೆಗಳು ಮಕ್ಕಳನ್ನು ರಂಜಿಸುತ್ತವೆ.

ಇನ್ನು ಸಿಸು ಸಂಗಮೇಶರ 'ಕಥೆ ಹೇಳುವೆ ಬಾ' ಎನ್ನುವ ಕಥಾ ಸಂಕಲನವನ್ನು ಹೊರತಂದಿದ್ದಾರೆ. ಇದರಲ್ಲಿ ಆನೆಯ ಮೇಲೇನೆ ಎರಡು ಕಥೆಗಳನ್ನು ಬರೆದು, ಆನೆಯನ್ನೇ ಮುಖ್ಯವಾಗಿಟ್ಟುಕೊಂಡು ಇತರ ಪ್ರಾಣಿಗಳನ್ನು ಬಳಸಿಕೊಂಡು ಸೊಗಸಾದ ಘಟನೆಗಳೊಂದಿಗೆ ಕಥೆಯನ್ನು ಸೃಷ್ಟಿಸಿದ್ದಾರೆ. ಮಕ್ಕಳಿಗೆ ಹೊಂದುವ ಭಾಷೆ, ಸರಳ ನಿರೂಪಣೆಯಿಂದ ಮಕ್ಕಳ ಮನವನ್ನು ಇವು ಮುಟ್ಟುತ್ತವೆ.

ಮಕ್ಕಳ ನಾಟಕಗಳ ರಚನೆಗೆ ಪ್ರಸಿದ್ಧರಾದ ವೈದೇಹಿ ಅವರು ಮಕ್ಕಳಿಗಾಗಿಯೇ ಪ್ರಮುಖ ಐದು ನಾಟಕಗಳನ್ನು ಹೊರತಂದಿದ್ದಾರೆ. ಅವು 'ಮೂಕನ ಮಕ್ಕಳು', 'ಧಾಣಾ ಡಂಗುರ', 'ನಾಯಿಮರಿ ನಾಟಕ', 'ಧಾಂಧೂಂ ಸುಂಟರಗಾಳಿ' ಮತ್ತು 'ಗೊಂಬೆ ಮ್ಯೂಕ್‌ಬೆತ್' ಪ್ರಮುಖವು. ಇದರಲ್ಲಿ 'ಗೊಂಬೆ ಮ್ಯೂಕ್‌ಬೆತ್' ಮತ್ತು 'ಧಾಂಧೂಂ ಸುಂಟರಗಾಳಿ' ನಾಟಕಗಳು ಶೇಕ್ಸ್‌ಪಿಯರ್‌ನ ನಾಟಕಗಳನ್ನು ಆಧರಿಸಿ ಬರೆದ ನಾಟಕಗಳಾಗಿವೆ. ಇನ್ನು 'ಮೂಕನ ಮಕ್ಕಳು' ನಾಟಕವನ್ನು ಮಾಸ್ತಿಯವರ ಮೂಕನ ಮಕ್ಕಳು ಎಂಬ ಕಥನ ಕವನವನ್ನು ಆಧರಿಸಿ ರಚಿಸಿದ್ದಾರೆ. ಧಾಣಾ

ಡಂಗುರವು 'ಮಣ್ಣಿನ ಮಕ್ಕಳು' ಎಂಬ ಸೋವಿಯತ್ ಮಕ್ಕಳ ಕಥೆಯನ್ನು ಸ್ಥೂಲವಾಗಿಟ್ಟುಕೊಂಡು ಬರೆದದ್ದಾಗಿದೆ. ಈ ಎಲ್ಲ ನಾಟಕಗಳ ಮಕ್ಕಳಿಗೆ ತುಂಬಾ ಪ್ರಿಯವೆನಿಸುತ್ತವೆ. ಇವು ಬೇರೆ ಬೇರೆ ಸಂದರ್ಭಗಳಲ್ಲಿ ರಂಗದ ಮೇಲೆ ಪ್ರಯೋಗಗಳನ್ನು ಕಂಡಿವೆ. ಇವು ಮಕ್ಕಳಿಗಾಗಿಯೇ ಬರೆದವುಗಳಾದರೂ ಕಿರಿಯರನ್ನು ಮತ್ತು ಹಿರಿಯರನ್ನು ರಂಜಿಸುತ್ತವೆ.

* ಕರೀಗೌಡ ಬೀಚನಹಳ್ಳಿ ಅವರು ಸಂಪಾದಿಸಿರುವ ಕನ್ನಡ ವಾರ್ಷಿಕ ೧೯೯೩ ಎನ್ನುವ ಕೃತಿಯನ್ನು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಸಾಹಿತ್ಯ ಪ್ರಕಾರಗಳನ್ನು ಕುರಿತು ಹಲವಾರು ಲೇಖನಗಳಿವೆ. ಅದರಲ್ಲಿ 'ಮಕ್ಕಳ ಸಾಹಿತ್ಯ'ವನ್ನು ಕುರಿತು ಡಾ. ಅಮರೇಶ ನುಗಡೋಣಿ ಅವರು ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ೧೯೯೩ರಲ್ಲಿ ಬಂದ ಮಕ್ಕಳ ಸಾಹಿತ್ಯವನ್ನು ಕುರಿತು ಬರೆಯಲಾಗಿದೆ.

'ಹಾಡುಕುಣಿ ನಲಿ' ಎನ್ನುವ ಕೃತಿಯಲ್ಲಿ ಮೂರು ಬಗೆಯ ಗೀತೆಗಳಿವೆ. ಹಳ್ಳಿಗಳಲ್ಲಿರುವ ಮೌಖಿಕ ಮಕ್ಕಳ ಜನಪದ ಗೀತೆಗಳು, ಅಭಿನಯ ಗೀತೆಗಳು ಮತ್ತು ಆಧುನಿಕ ಕವಿಗಳಾದ ಪಂಜೆ ಮಂಗೇಶರಾಯರು, ಶಿವರಾಮ ಕಾರಂತ, ಸಿದ್ಧಯ್ಯ ಪುರಾಣಿಕ, ಕಣವಿ, ರಾಜರತ್ನಂ ಮೊದಲಾದವರ ಕವಿತೆಗಳಿವೆ.

'ಹೂವಿನ ಬುಟ್ಟಿ' ಎನ್ನುವ ಮಕ್ಕಳ ಕವಿತೆಗಳ ಕೃತಿಯಲ್ಲಿ ಈ ಶತಮಾನದ ಆರಂಭದಲ್ಲಿ ಮಕ್ಕಳಿಗಾಗಿಯೇ ಬರೆದ ಪಂಜೆ ಮಂಗೇಶರಾಯ, ಬಿ.ಎಂ.ಶ್ರೀ, ದಿನಕರ ದೇಸಾಯಿ, ರಾಜರತ್ನಂ ಮೊದಲಾದವರು ಬರೆದ ಒಟ್ಟು ೩೩ ಕವಿತೆಗಳಿವೆ.

ಕಂಚ್ಯಾಣಿ ಶರಣಪ್ಪನವರ 'ತೋಟದ ಆಟ' ಎಂಬ ಕವಿತೆಗಳ ಸಂಕಲನದಲ್ಲಿ ಪ್ರಾಥಮಿಕ ಶಾಲಾ ಮಕ್ಕಳು ಖುಷಿ ಪಡುವ ಕವಿತೆಗಳಿವೆ. ಅಲ್ಲದೆ ಇದರಲ್ಲಿ ಪರಿಸರವನ್ನು ರಕ್ಷಿಸುವ, ಎಲ್ಲರನ್ನು ಮಮತೆಯಿಂದ ಕಾಣುವ, ಆರೋಗ್ಯ ರಕ್ಷಣೆ ಮೊದಲಾದ ಅಂಶಗಳನ್ನು ತಿಳಿಸುವ ಕವಿತೆಗಳಿವೆ.

'ಚುಟುಕು-ಗುಟುಕು' ಎನ್ನುವ ಕವನಸಂಕಲವನ್ನು ಸಿಸು ಸಂಗಮೇಶರ ಹನಿಗವನಗಳನ್ನು ಕೂಡಿರುವಂತ ಕೃತಿಯಾಗಿದೆ. ಇದು ಮಕ್ಕಳಿಗಾಗಿ ಬರೆದ ಪ್ರಮುಖ ಚುಟುಕು ಕವನಗಳಿಂದ ಕೂಡಿದ ಕೃತಿಯಾಗಿದೆ. ಇದರಲ್ಲಿ ಪ್ರತಿ ಕವನಕ್ಕೊಂದು ಅದಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಮತ್ತು ಮಕ್ಕಳಿಗೆ ಇಷ್ಟವಾಗುವ ಚುಟುಕುಗಳಿವೆ.

ಅಲ್ಲದೆ 'ಅನ್ನಜೇನು' (ಗುರುರಾಜ ಬೆಣಕಲ್), ಸಂಜೀವ ಕುದ್ವಾರೆ ಅವರ 'ಕಾಮನ ಬಿಲ್ಲಿನ ಸೈನಿಕರು', ಟಿ.ಎಸ್. ನಾಗರಾಜಶೆಟ್ಟಿ ಅವರ 'ಮಕ್ಕಳ ಯುಗಾದಿ' ವೆಂಕಟೇಶ ಹುಣಶೀಕಟ್ಟಿ

ಅವರು ಬರೆದ 'ವಿಜ್ಞಾನದ ೧೦೧ ಒಗಟುಗಳು' ಈ ವರ್ಷದಲ್ಲಿ ಬಂದ ಇತರೆ ಪ್ರಮುಖ ಕವನ ಸಂಕಲನಗಳಾಗಿವೆ.

ಇನ್ನು ಈ ಅವಧಿಯಲ್ಲಿ 'ಗೋಪಿಯ ಗೊಂಬೆ' ಮತ್ತು 'ಕಾಡಾನೆಯ ಕೊಲೆ' ಈ ಎರಡು ಕಾದಂಬರಿಗಳನ್ನು ನಾ ಡಿಸೋಜಾ ಅವರು ಆಕರ್ಷಕವಾಗಿ ಬರೆದಿದ್ದಾರೆ. ಈ ಎರಡು ಕಾದಂಬರಿಗಳು ಪ್ರೌಢಶಾಲಾ ಮಕ್ಕಳಿಗೆ ಬಹು ಪ್ರಿಯವೆನಿಸುತ್ತವೆ.

ಕಥಾ ವಿಭಾಗಕ್ಕೆ ಬಂದರೆ ಬೇಬಿ ಎಮ್. ಮಾಣಿಯವರ 'ಜಾಣ ಪುಟಾಣಿಗಳು', ನೀಲಾಂಬರಿಯವರ 'ಪಟಾಕಿಯ ಸಂಭ್ರಮ', ರಾಜಶೇಖರ ಭೂಸನೂರ ಮಠ ಅವರ 'ಭಲೇ ಪಿಂಕಿ', ದು.ನಿಂ. ಬೆಳಗಲಿ ಅವರ 'ಬೀರಬಲ್ಲನ ಬುದ್ಧಿವಂತಿಕೆಯ ಕಥೆಗಳು' ಮತ್ತು ಟಿ.ಎಸ್. ನಾಗರಾಜಶೆಟ್ಟಿ ಅವರ 'ಚಿಟ್ಟೆಯ ಬಣ್ಣ' ಮಕ್ಕಳಿಗೆ ತುಂಬಾ ಇಷ್ಟವಾಗುವಂತ ಕಥೆಗಳಾಗಿವೆ.

ಮಕ್ಕಳ ನಾಟಕಗಳನ್ನು ಗಮನಿಸಿದಾಗ ಸುರೇಶ ಹೆಗಡೆಯವರ 'ಜಿಪುಣ ಮೈದುನ' ನಾಟಕದ ವಸ್ತು ಹಳೆಯದಾದರೂ, ದುರಾಸೆಯಿಂದಾಗುವ ಪರಿಣಾಮವನ್ನು ತಿಳಿಸುವ ನಾಟಕದ ವಸ್ತು ತುಂಬಾ ಜನಪ್ರಿಯವಾಗಿದೆ. ತುಮಕೂರು ಶಿವಕುಮಾರರ 'ಗಂಟು ಮೂಟೆ ಗೂನುಬೆನ್ನು' ಎನ್ನುವ ನಾಟಕವು ರಂಗತಂತ್ರಗಳನ್ನು ಮೈಗೂಡಿಸಿಕೊಂಡ ನಾಟಕವಾಗಿದೆ. ಇಂದಿನ ಶಿಕ್ಷಣ ಕ್ರಮವನ್ನು ಟೀಕಿಸುವ ವಸ್ತುವನ್ನು ಹೊಂದಿದೆ.

ಚಂದ್ರಶೇಖರ ಕಂಬಾರರ 'ಪುಷ್ಪರಾಣಿ' ನಾಟಕವು ಪರಿಸರ ರಕ್ಷಣೆಯ ಅವಶ್ಯಕತೆಯನ್ನು ಎತ್ತಿ ಹಿಡಿಯುವ ವಸ್ತುವುಳ್ಳದ್ದು. ಕಾಡು-ನಾಡುಗಳ ಸಂಬಂಧ ತಾಯಿಮಕ್ಕಳಿದ್ದ ಹಾಗೆ ಎನ್ನುವ ಮಾತನ್ನು ಹೇಳುವ ಪ್ರಕೃತಿ ಮತ್ತು ಮನುಷ್ಯ ಸಂಬಂಧವನ್ನು ಎತ್ತಿಹಿಡಿಯುವ ಜನಪದ ಕಥೆಯೊಂದನ್ನು ಆಧರಿಸಿ ನಿರೂಪಿಸುವ ನಾಟಕವಾಗಿದೆ. ಹೀಗೆ ಈ ಎಲ್ಲಾ ನಾಟಕಗಳು ಪ್ರಯೋಗದ ದೃಷ್ಟಿಯಿಂದಲೂ ಉಪಯುಕ್ತ ನಾಟಕಗಳಾಗಿವೆ.

* ಆನಂದ ಪಾಟೀಲ ಮತ್ತು ನ. ರವಿಕುಮಾರ ಸಂಪಾದಿಸಿರುವ 'ಮಕ್ಕಳ ಸಾಹಿತ್ಯ ಶತಮಾನ' ಎಂಬ ಕೃತಿಯಲ್ಲಿ ನವೋದಯದಿಂದ ಹಿಡಿದು ವರ್ತಮಾನದವರೆಗಿನ ಬಾಲ ಸಾಹಿತ್ಯದ ವಿಮರ್ಶೆ ಹಾಗೂ ಅವಲೋಕನ ನಡೆದಿದ್ದು ಕಡಿಮೆ, ಇಲ್ಲಿಯವರೆಗೆ ಬಂದ ಸಾಹಿತ್ಯ ಏನನ್ನು ಧ್ವನಿಸುತ್ತದೆ. ಯಾವ ಯಾವ ಅಗತ್ಯಗಳಿಗೆ ತುಡಿದಿದೆ ಎನ್ನುವುದರ ಸ್ಥೂಲ ನೋಟವನ್ನು ಕೊಡುತ್ತದೆ. ಅಲ್ಲದೆ ಕೃತಿಯು ಮಕ್ಕಳ ಸಾಹಿತ್ಯದ ಅಧ್ಯಯನ, ವಿಮರ್ಶೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇದು 'ಸಂಧ್ಯಾ' ಗೆಳೆಯರ ಬಳಗವು ಆಸಕ್ತರ ಸಹಕಾರದೊಂದಿಗೆ ರಾಜ್ಯದ ವಿವಿದೆಡೆ ವಿದ್ವಾಂಸರ ಉಪನ್ಯಾಸಗಳನ್ನು ಏರ್ಪಡಿಸಿ, ಆ ಭಾಷಣಗಳನ್ನು ಬರೆಸಿ ಪ್ರಕಟಿಸುವ ಕೆಲಸ ಮಾಡಿದ್ದಾರೆ.

ಇದರಲ್ಲಿ ನವೋದಯದ ನೆರಳಿನಲ್ಲಿ ಮಕ್ಕಳ ಸಾಹಿತ್ಯ ಎನ್ನುವ ಎನ್. ಶ್ರೀನಿವಾಸ ಉಡುಪರ ಲೇಖನ, 'ಮಕ್ಕಳಿಗಾಗಿ ತುಡಿದ ಹಿರಿಯರು' ಎನ್ನುವ ಆರ್.ವಿ. ಭಂಡಾರಿ ಅವರ ಲೇಖನ, 'ಮಕ್ಕಳ ಸಾಹಿತ್ಯದಲ್ಲಿ ಹೊಸಗಾಲ' ಎನ್ನುವ ರಾಮಮೂರ್ತಿ ತೆರೆಮನೆ ಎನ್ನುವರ ಲೇಖನ, 'ಮಕ್ಕಳ ಸಾಹಿತ್ಯಕ್ಕಾಗಿ ತುಡಿದ ಹಿರಿಯರು' ಎನ್ನುವ ಡಾ. ಶ್ರೀಪಾದಶೆಟ್ಟಿ ಅವರ ಲೇಖನ ಮುಂತಾದವು ತುಂಬಾ ಉಪಯುಕ್ತವಾಗಿದೆ. ಇಷ್ಟೇ ಅಲ್ಲದೆ ಈ ಕೃತಿಯಲ್ಲಿ ಎಂ.ಎಸ್. ನಾಗೇಂದ್ರ, ಆನಂದ ಪಾಟೀಲ, 'ಬಸುಬೇವಿನಗಿಡದ', 'ಟಿ.ಎಸ್. ನಾಗರಾಜಶೆಟ್ಟಿ, ಸುರೇಶ ಕುಲಕರ್ಣಿ, ಆರ್.ಕೆ. ಶಾನುಭೋಗ, ಎ.ಎಸ್. ಶಂಕರನಾರಾಯಣ ಮೊದಲಾದ ವಿದ್ವಾಂಸರ ಲೇಖನಗಳು ತುಂಬಾ ಉಪಯುಕ್ತವಾಗಿವೆ.

* 'ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಸಿಸು ಸಂಗಮೇಶನ ಸ್ಮರಣೆ' ಎಂಬ ಕೃತಿಯನ್ನು ಡಾ. ಗುರುಲಿಂಗ ಕಾಪಸೆ ಅವರು ಸಂಪಾದಿಸಿದ್ದಾರೆ. ಇದೊಂದು ವಿಚಾರ ಸಂಕಿರಣ ಮಾಲೆಯಾಗಿದ್ದು, ಸಿಸು ಸಂಗಮೇಶರನ್ನು ಹತ್ತಿರದಿಂದ ಬಲ್ಲ, ಮಕ್ಕಳ ಸಾಹಿತ್ಯದಲ್ಲಿ ಪರಿಣಿತಿಯುಳ್ಳ ವಿದ್ವಾಂಸರು ನೀಡಿದ ಉಪನ್ಯಾಸಗಳ ಸ್ಮರಣಿಕೆಯಾಗಿದೆ. ಇದು ಎಂಟು ಪ್ರಬಂಧಗಳನ್ನು ಒಳಗೊಂಡಿರುವ ಕೃತಿ ಇದರಲ್ಲಿ ಮಕ್ಕಳ ಸಾಹಿತ್ಯದ ಚಿಂತನೆಗೆ ತೊಡಗಿಸುವಂಥ ಹಲವಾರು ವಿಚಾರಗಳನ್ನು ಹೊಂದಿರುವುದರ ಜೊತೆಗೆ ವಿಜಾಪುರ ಜಿಲ್ಲೆ ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಮತ್ತು ಸಿಸು ಸಂಗಮೇಶರ ಜೀವನದುದ್ದಕ್ಕೂ ಮಾಡಿದ ಸಾಹಿತ್ಯಿಕ ಸಾಧನೆಯನ್ನು ಪರಿಚಯಿಸುತ್ತದೆ. ಹಾಗೂ 'ಮಕ್ಕಳ ಸಾಹಿತ್ಯದ ತಾತ್ವಿಕ ನೆಲೆಗಳು' ಕುರಿತು ಮೂರು ಅಂಶಗಳನ್ನು ಕುರಿತು ವಿವರಿಸುತ್ತಾರೆ. ಮಕ್ಕಳು ಅಂದರೆ ಎಷ್ಟು ವರ್ಷ ವಯಸ್ಸಿನೊಳಗಿನವರು ಎನ್ನುವಾಗ ಶಿಶುಗಳು, ಬಾಲಕರು, ಕುಮಾರರು, ಕಿಶೋರರು, ಮಕ್ಕಳ ವರ್ಗದಲ್ಲಿ ಬರುತ್ತಾರೆ. ಹುಟ್ಟಿನಿಂದ ಅದರಲ್ಲೂ ಕಲಿಯುವ ಸಾಮರ್ಥ್ಯ ಹೊಂದಿದ ೩ ರಿಂದ ೧೬ ವರ್ಷದೊಳಗಿನವರು ಮಕ್ಕಳೆಂದು ಶಿಕ್ಷಣ ತಜ್ಞರು, ಮನೋವಿಜ್ಞಾನಿಗಳು ಹಾಗೂ ಸಾಹಿತಿಗಳು ಸಾಮಾನ್ಯವಾಗಿ ಒಪ್ಪಿಕೊಂಡಿದ್ದಾರೆ. ಈ ಮಕ್ಕಳಿಗಾಗಿ ರಚಿಸಲ್ಪಡುವ ಸಾಹಿತ್ಯ ಸರಳ ಭಾಷೆಯಲ್ಲಿ ಬರೆಯಲ್ಪಟ್ಟ ಮಕ್ಕಳ ಮನವನ್ನು ತಟ್ಟಿ ತಣಿಸುವ ಸಾಹಿತ್ಯ ಮಕ್ಕಳ ಸಾಹಿತ್ಯವಾಗಿರುತ್ತದೆ. ಇದರಲ್ಲಿ ಕವನ, ಕಥೆ, ನಾಟಕ, ನಗೆಬರಹ, ಚುಟುಕು ಇತ್ಯಾದಿ ಪ್ರಕಾರಗಳಿರುತ್ತವೆ. ಮತ್ತು ಮಕ್ಕಳ ಸಾಹಿತ್ಯದ ತಾತ್ವಿಕ ನೆಲೆಗಳನ್ನು ಗುರುತಿಸುವಾಗ ಮನೋವೈಜ್ಞಾನಿಕ, ಶೈಕ್ಷಣಿಕ, ನೈತಿಕ, ವೈಚಾರಿಕ, ವೈಜ್ಞಾನಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಗುರುತಿಸಬಹುದಾಗಿದೆ. ಈ ಮೂಲಕ ಕನ್ನಡ ಮಕ್ಕಳ ಕಣ್ಮಣಿಯಾಗಿದ್ದ 'ಸಿಸು' ಸಂಗಮೇಶರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಸಲ್ಲಿಸಿದ ಬಹುಮುಖ ಸೇವೆ ಅಮೂಲ್ಯವಾದವು. ಅವರ ಅವಿರತ ಪ್ರಯತ್ನ ಹಾಗೂ ಹೋರಾಟಗಳಿಂದ ಮಕ್ಕಳ ಸಾಹಿತ್ಯಕ್ಕೆ ಅಪಾರವಾಗಿದೆ. ಹೀಗೆ ಈ ಕೃತಿಯು ಮಕ್ಕಳ ಸಾಹಿತ್ಯದ ಅಧ್ಯಯನಕ್ಕೆ ನೆರವಾಗುವ ಕೃತಿಯೆಂದು ಹೇಳಬಹುದು.

* 'ಶತಮಾನದ ಮಕ್ಕಳ ಸಾಹಿತ್ಯ' ಎಂಬ ಕೃತಿಯನ್ನು ಎನ್.ಎಸ್. ರಘುನಾಥ್ ಎನ್ನುವವರು ಸಂಪಾದನೆ ಮಾಡಿದ್ದಾರೆ. ಈ ಬೃಹತ್ ಕೃತಿಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಇದೀಗ ಒಂದು ಶತಮಾನದ ಕಾಲಾವಧಿಯನ್ನು ಮುಗಿಸಿ ಹೊಸ ಶತಮಾನವನ್ನು ಪ್ರವೇಶಿಸಲು ಅಣಿಯಾಗಿದೆ. ಈ ಸಂಪುಟವನ್ನು ಕನ್ನಡ ಸಾಹಿತ್ಯ ಅಕಾಡೆಮಿಗಾಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ಇದು ಕನ್ನಡ ನವೋದಯ ಸಂದರ್ಭದ ಸಾಹಿತ್ಯ ಹಾಗೂ ಶಿಕ್ಷಣದ ಒಂದು ಭಾಗವಾಗಿ ಹುಟ್ಟಿಕೊಂಡು, ಮಕ್ಕಳ ಸಾಹಿತ್ಯದ ಹಲವು ಪ್ರಕಾರಗಳನ್ನು ಪ್ರತಿನಿಧಿಸುವ ಕೃತಿಯಾಗಿದೆ. ಇದರಲ್ಲಿ ಒಟ್ಟು ೧೦೧ ಮಕ್ಕಳ ಕವಿತೆಗಳನ್ನು, ೧೦೪ ಮಕ್ಕಳ ಕಥೆಗಳನ್ನು ೧೯ ಮಕ್ಕಳ ನಾಟಕಗಳನ್ನು ಸೇರಿಸಲಾಗಿದೆ. ವಿದ್ವಾಂಸರಾದ ಎನ್.ಎಸ್. ರಘುನಾಥರವರು ವಿವಿಧ ಆಕರಗಳಿಂದ ಜೋಡಿಸಿಕೊಟ್ಟಿರುವ ಈ ಕೃತಿಯು ವಿವರವಾದ ಹಾಗೂ ವಿಶ್ಲೇಷಣಾತ್ಮಕವಾದ ಪೂರ್ವಪೀಠಿಕೆಯನ್ನು ಒಳಗೊಂಡಿದೆ.

ಕನ್ನಡದಲ್ಲಿ ಹೇಳುವುದಾದರೆ 'ಮಕ್ಕಳ ಸಾಹಿತ್ಯ' ಎನ್ನುವುದು ನವೋದಯ ಸಾಹಿತ್ಯ ಹಾಗೂ ಅದರಲ್ಲಿಯೂ ಪಂಜೆ ಮಂಗೇಶರಾಯರು, ಗೋವಿಂದ ಪೈ, ಕುವೆಂಪು, ಜಿ.ಪಿ. ರಾಜರತ್ನಂ, ಹೊಯ್ಸಳ ಮೊದಲಾದವರ ಸೃಜನಾತ್ಮಕ ಪ್ರತಿಭೆಯಿಂದ ಬಂದ ಮಕ್ಕಳ ಸಾಹಿತ್ಯದ ಸಮೃದ್ಧಿಯ ಕಾಲದಿಂದ ಕಳೆದ ಹಲವಾರು ದಶಕಗಳಲ್ಲಿ ಒಂದು ಬಗೆಯ ನಿಧಾನಗತಿಯಲ್ಲಿ ಸಾಗಿ ಬಂದ ಮಕ್ಕಳ ಸಾಹಿತ್ಯದ ನಿರ್ಮಿತಿಯು ತನ್ನ ನಿರಂತರತೆಯನ್ನು ಕಾಯ್ದುಕೊಂಡಿದೆ. ಈ ದೀರ್ಘಕಾಲದ ಸಾಹಿತ್ಯ ಪರಂಪರೆಯಲ್ಲಿ ಮಕ್ಕಳ ಸಾಹಿತ್ಯದ ಜೊತೆಗೆ ಮಕ್ಕಳಿಗಾಗಿ ಕೊಡಬಹುದಾದ ಸಾಹಿತ್ಯ ಇದೇ ಎನ್ನುವುದು ಈ ಸಂಪುಟದಲ್ಲಿರುವ ಸಾಮಗ್ರಿಯೇ ಸಾಕ್ಷಿಯಾಗಿದೆ.

ಆಧುನಿಕ ಕಾಲದ ಶತಮಾನದ ಮಕ್ಕಳ ಸಾಹಿತ್ಯವನ್ನು ಒಳಗೊಳ್ಳುವ ಈ ಕೃತಿಯಲ್ಲಿ ಈ ಕಾಲಕ್ಕೆ ಹೊರಬಂದ ಹಾಗೂ ಬೇರೆ ಭಾಷೆಗಳಿಂದ ಅನುವಾದಿತವಾದ ಕಥೆ, ಕವನ, ನಾಟಕ ಇತ್ಯಾದಿಗಳಿವೆ. ಆದರೆ ಮಕ್ಕಳ ದೃಷ್ಟಿಯಿಂದ ನೋಡಿದರೆ ಮಕ್ಕಳಿಗೆ ಯಾವ ರೀತಿಯ ಸಾಹಿತ್ಯ ಬೇಕು? ಅವರು ಯಾವ ರೀತಿಯ ಸಾಹಿತ್ಯವನ್ನು ಇಷ್ಟಪಡುತ್ತಾರೆ. ಮತ್ತು ಬುದ್ಧಿ ಭಾವನೆಗಳ ಬೆಳವಣಿಗೆಯ ದೃಷ್ಟಿಯಿಂದ ನೋಡಿದರೆ ಅವರಿಗೆ ಅದು ಅರ್ಥವಾಗುತ್ತದೆಯೇ? ನಾವು ಅವರಿಗೆ ಯಾವ ರೀತಿಯ ಸಾಹಿತ್ಯವನ್ನು ಕೊಡಬಹುದು. ಅದಕ್ಕೆ ಮಕ್ಕಳು ಹೇಗೆ ಪ್ರತಿಕ್ರಿಯಿಸುತ್ತಾರೆ. ಮೊದಲಾದ ಸಮಸ್ಯೆಗಳಿಗೆ ಉತ್ತರವನ್ನು ಹುಡುಕುವ ಪ್ರಯತ್ನವು ಈ ಕೃತಿಯಲ್ಲಿದೆ. ಒಟ್ಟಾರೆಯಾಗಿ ಹೇಳುವುದಾದರೆ ಮಕ್ಕಳ ಸಾಹಿತ್ಯವಿರುವ ಈ ಕೃತಿ ಒಂದು ಉತ್ತಮ ಸಂಪುಟವೆನ್ನಬಹುದು.

* ಬೋಳುವಾರು ಮಹಮದ್ ಕುಂಞ ಅವರು ಸಂಪಾದಿಸಿರುವ 'ಸಂತಮ್ಮಣ್ಣ' ಈ ಕೃತಿಯು ಮಕ್ಕಳ ಪುಸ್ತಕ ಮಾಲೆಗಾಗಿ ಕನ್ನಡ ಪುಸ್ತಕ ಪ್ರಾಧಿಕಾರದವರು ಪ್ರಕಟಿಸಿದ್ದಾರೆ. ಇಂದು ಆಧುನಿಕ ಮಾಧ್ಯಮಗಳ ಸೆಳೆತಗಳಿಗೆ ಆಕರ್ಷಿತವಾಗುತ್ತಿರುವ ಮಕ್ಕಳಿಗೆ ಓದು ಎನ್ನುವ

ಮಾಧ್ಯಮದ ಮೂಲಕ ಅಭಿರುಚಿ ಮೂಡಿಸಿ ಪುಸ್ತಕಗಳಲ್ಲಿ ಆಸಕ್ತಿ ಉಂಟು ಮಾಡಿಸುವ ಸಲುವಾಗಿ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ಸರಳ ಭಾಷೆಯಲ್ಲಿರುವ ಪ್ರಸಿದ್ಧ 'ಶಿಶು ಸಾಹಿತ್ಯ'ವನ್ನು ಅಂದವಾಗಿ ವರ್ಣರಂಜಿತ ಚಿತ್ರಗಳ ಮೂಲಕ ನೀಡಿದ್ದಾರೆ. ಈ ಕೃತಿಯು ಹಲವಾರು ಪ್ರಾತಿನಿಧಿಕ ಕವನಗಳ ಸಂಕಲಿತವಾಗಿದೆ.

೨.೫. ನಿಯತಕಾಲಿಕೆಗಳು

* 'ತುಷಾರ' ಮಾಸಪತ್ರಿಕೆ ನವೆಂಬರ್ ೨೦೧೧, ಸಂಪುಟ ೩೯, ಸಂಚಿಕೆ ೦೮ ಇದರಲ್ಲಿ ಮಕ್ಕಳ ಸಾಹಿತ್ಯದ ವಿಶೇಷ ಸಂಚಿಕೆಯನ್ನು ತರಲಾಗಿತ್ತು. ಈ ತುಷಾರ ಸಂಚಿಕೆಯು ಇಡೀ ಮಕ್ಕಳ ಸಾಹಿತ್ಯದಿಂದಲೂ ತುಂಬಿರುವುದು ತುಂಬಾ ವಿಶೇಷವಾಗಿದೆ. ಇದರಲ್ಲಿ ವಿದೇಶ ಕಥೆಗಳು ೫, ಜಾನಪದ ಕಥೆಗಳು ೨, ಜಾಣ್ಮೆ ಕಥೆಗಳು ೨, ಜಿದ್ದಿನ ಕಥೆಗಳು ೨, ನೀತಿ ಕಥೆಗಳು ४, ಸಾಹಸ ಕಥೆ ೧, ಅಜ್ಜಿ ಕಥೆಗಳು ೨, ಮತ್ತು ಬಲಿದಾನದ ಕಥೆ ಎಂದು ಒಟ್ಟು ೧೯ ಮಕ್ಕಳಿಗೆ ಸಂಬಂಧಿಸಿದ ಬೇರೆ ಬೇರೆ ಕಥೆಗಳನ್ನು ಕೊಡಲಾಗಿದ್ದು ತುಂಬಾ ಕುತೂಹಲವನ್ನು ಹುಟ್ಟಿಸುವಂತ ಕಥೆಗಳು ಈ ಸಂಚಿಕೆಯಲ್ಲಿವೆ. ಅಲ್ಲದೆ ಈ ಸಂಚಿಕೆಯ ವಿಶೇಷ ಬರಹಗಳನ್ನು ಗಮನಿಸಿದಾಗ ಸುಧಾ ಎನ್ನುವರು 'ಜಗತ್ಪ್ರಸಿದ್ಧ ಮಕ್ಕಳ ಪುಸ್ತಕಗಳು' ಎನ್ನುವ ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಜಗತ್ತಿನಲ್ಲಿ ಐದು ಪ್ರಸಿದ್ಧ ಮಕ್ಕಳ ಸಾಹಿತ್ಯ ಕೃತಿಗಳಿವೆ. ಅವು

* ಪಂಚತಂತ್ರ (ಅತ್ಯಂತ ಶ್ರೇಷ್ಟ ಕೃತಿ)
* ಹಿತೋಪದೇಶ (ತುಂಬ ಪ್ರಚಾರದಲ್ಲಿಲ್ಲದಿದ್ದರೂ ಇದರ ಕಥೆಗಳು ಜಗತ್ತಿನಾದ್ಯಂತ ಹಬ್ಬಿವೆ.
* ಜಾತಕ ಕಥೆಗಳು (ನೀತಿ ಬೋಧನೆಗಾಗಿ ಇರುವ ಗ್ರಂಥ ಮತ್ತು ಮಕ್ಕಳಿಗೆ ಬಹಳ ಇಷ್ಟವಾಗಿರುವ ಕೃತಿ)
* ಈಸೋಪನ ಕಥೆಗಳು (ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯವಾಗಿದ್ದ ಪ್ರಾಣಿಕಥೆಗಳ ಸಂಗ್ರಹ ಕೃತಿ)
* ಟಾಲ್‌ಸ್ಟಾಯ್ ಹೇಳಿದ ಕಥೆಗಳು (ಈಸೋಪನ ಕಥೆಗಳನ್ನು ಆಧರಿಸಿ ಟಾಲ್‌ಸ್ಟಾಯ್ ಅವರು ಮರುನಿರೂಪಿಸಿದ ಕಥೆಗಳಿವೆ.)

ಹೀಗೆ ಈ ಜಗತ್ಪ್ರಸಿದ್ಧ ಕೃತಿಗಳನ್ನು ಪರಿಚಯಿಸುತ್ತಾ ಇದರಲ್ಲಿ ಸುಧಾ ಅವರು ಒಂದೊಂದು ಕೃತಿಗೆ ಸಂಬಂಧಿಸಿದ ಒಂದು ಕಥೆಯನ್ನು ಉದಾಹರಣೆಯನ್ನು ನೀಡುತ್ತಾ, ವಿವರಿಸುತ್ತಾರೆ. ಈ ಕೃತಿಗಳ ಕಥೆಗಳು ಮಕ್ಕಳಿಗೆ ತುಂಬಾ ಕುತೂಹಲವನ್ನು ಉಂಟುಮಾಡುತ್ತಾರೆ ಹಾಗೂ ಅವರಲ್ಲಿರುವ ಕಲ್ಪನಾಶಕ್ತಿಯನ್ನು ಅರಳಿಸುವಲ್ಲಿ ಸಹಾಯಕವಾಗುತ್ತವೆ.

ಇನ್ನು ಈ ಸಂಚಿಕೆಯ ಬಿ. ಜನಾರ್ಧನ ಭಟ್ ಅವರ 'ಮಕ್ಕಳ ಸಾಹಿತ್ಯ' ಎನ್ನುವ ಲೇಖನವು ಆರಂಭದಲ್ಲಿ ಮಕ್ಕಳ ಸಾಹಿತ್ಯ ಅಂದರೆ ಏನು? ಎಂಬ ಪ್ರಶ್ನೆಯನ್ನು ಎತ್ತುತ್ತದೆ. ಮತ್ತು ಮಕ್ಕಳ ಸಾಹಿತ್ಯದ ಲಕ್ಷಣಗಳನ್ನು ಕುರಿತು ಚರ್ಚಿಸುತ್ತಾ ಮಕ್ಕಳ ಸಾಹಿತ್ಯದ ಎಲ್ಲ ಲಕ್ಷಣಗಳನ್ನು ಕುರಿತು ಕನ್ನಡದಲ್ಲಿ ಸಾಹಿತ್ಯವನ್ನು ಬರೆದವರಿದ್ದರೆ ಅದು ಶಿವರಾಮ ಕಾರಂತರು ಮಾತ್ರ ಎನ್ನುತ್ತಾರೆ. ಕಾರಂತರ 'ಹುಲಿರಾಯ', 'ಗಜರಾಜ', 'ಮರಿಯಪ್ಪನ ಸಾಹಸಗಳು', 'ಒಂದೇ ರಾತ್ರಿ ಒಂದೇ ಹಗಲು', 'ಚಿತ್ರಮಯ ದಕ್ಷಿಣ ಕನ್ನಡ', 'ಬಾಲಪ್ರಪಂಚ' ಮಕ್ಕಳ ವಿಶ್ವಕೋಶ, 'ವಿಜ್ಞಾನ ಪ್ರಪಂಚ' 'ಮಕ್ಕಳಿಗಾಗಿ ವಿಜ್ಞಾನ ಕೋಶ' ಮತ್ತು ಪ್ರಾಣಿ ಪ್ರಪಂಚ ಮೊದಲಾದವು.

ಕಾರಂತರಂತೆ ದೊಡ್ಡ ಸಾಹಿತಿಯಾಗಿದ್ದೂ, ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿದ ಮತ್ತೊಬ್ಬ ಭಾರತೀಯ ಸಾಹಿತಿಯೆಂದರೆ ರವೀಂದ್ರನಾಥ ಠಾಕೂರ್ ಅವರ ಕಥೆ ಮತ್ತು ನಾಟಕಗಳು ಮಕ್ಕಳ ಮನಸ್ಸನ್ನು ಗೆಲ್ಲುವ ಗುಣವುಳ್ಳವಾಗಿವೆ. ಅವರ 'ಪಂಜರ ಶಾಲೆ' ಕನ್ನಡದಲ್ಲಿ ಮಕ್ಕಳಿಗೆ ಅತ್ಯಂತ ಪ್ರಿಯವಾದ ಮಕ್ಕಳ ನಾಟಕವಾಗಿದೆ.

ಜೊತೆಗೆ ಜಗತ್ತಿನಲ್ಲಿ ಮಕ್ಕಳಿಗೆಂದೇ ರಚಿತವಾದ ಸಾಹಿತ್ಯ ಕೃತಿಗಳ ಇತಿಹಾಸವನ್ನು ಗಮನಿಸಿದಾಗ ಭಾರತದಲ್ಲಿಯೇ ಇಂತಹ ಕಥೆಗಳ ಉಗಮ ಎಂದು ತಿಳಿಸುತ್ತಾ ಜಗತ್ತಿನ ಇತರೇ ಪ್ರಸಿದ್ಧ ಮಕ್ಕಳ ಸಾಹಿತಿಗಳೆನಿಸಿದ ಚಾರ್ಲ್ಸ್ ಪೆರಾಲ, ವಿಲಿಯಂ ಬ್ಲೇಕ್, ಲೂಯಿಸ್ ಕೆರೋಲ್, ಕಾರ್ಲೋರೊಲಾಡಿ, ರುಡ್‌ಯಾರ್ಡ್ ಮೊದಲಾದವರ ಮಕ್ಕಳ ಸಾಹಿತ್ಯವನ್ನು ಮತ್ತು ಅವರ ಕೃತಿಗಳನ್ನು ಪರಿಚಯಿಸುತ್ತಾರೆ.

ಇದರಲ್ಲಿ ಯು.ಕೆ. ಪೈ ಪುತ್ತೂರು ಅವರ ಶಿಶುಪ್ರಾಸ ಏನು? ಹೇಗೆ? ಎನ್ನುವ ಲೇಖನದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನ ಪಡೆದ ಶಿಶುಪ್ರಾಸ ಪ್ರಕಾರವು ಇತ್ತೀಚಿಗೆ ತುಂಬಾ ಪ್ರಸಿದ್ಧಿ ಪಡೆಯುತ್ತದೆ. ಹಿರಿಯ ಸಾಹಿತಿಗಳು ಮಕ್ಕಳ ಶಿಶುಪ್ರಾಸಗಳನ್ನು ರಚಿಸುತ್ತಿದ್ದಾರೆ ಎನ್ನುತ್ತಾ ಸಾವಿರಾರು ಶಿಶುಪ್ರಾಸಗಳನ್ನು ಅವಲೋಕಿಸಿ, ಮಕ್ಕಳ ಲೌಕಿಕ ಪ್ರಾಸಗಳು, ಸಂದೇಶಕ ಪ್ರಾಸಗಳು, ಕ್ರಿಯಾತ್ಮಕ ಪ್ರಾಸಗಳು, ಶೈಕ್ಷಣಿಕ ಪ್ರಾಸಗಳು, ನೈಸರ್ಗಿಕ ಪ್ರಾಸಗಳು, ಅನುಕರಣ ಪ್ರಾಸಗಳು, ವ್ಯಕ್ತಿಗತ ಪ್ರಾಸಗಳು ಮತ್ತು ಹಾಸ್ಯಪ್ರಾಸಗಳು ಎಂಬ ಹಲವಾರು ಶಿಶುಪ್ರಾಸಗಳನ್ನು ಪರಿಚಯಿಸುತ್ತಾ ಅವುಗಳಿಗೆ ಸಂಬಂಧಿಸಿದ ಪ್ರಾಸಗಳ ಉದಾಹರಣೆಯನ್ನು ಕೊಟ್ಟಿದ್ದಾರೆ. ಈ ಶಿಶುಪ್ರಾಸಗಳು ಎರಡುವರೆ ವರ್ಷದಿಂದ ಐದು ವರ್ಷದ ಮಕ್ಕಳಿಗೆ ಸುಲಭವಾಗಿ ಗ್ರಹಿಸಲು ಸಾಧ್ಯವಾಗುತ್ತದೆ ಎಂದು ಈ ಲೇಖನದ ಮೂಲಕ ತಿಳಿಸುತ್ತಾರೆ.

* ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಅಡಿಯಲ್ಲಿ ಡಾ. ಡಿ. ಪಾಂಡುರಂಗಬಾಬು ಅವರ ಸಂಪಾದಕತ್ವದ 'ನಮ್ಮ ಕನ್ನಡ' ಸಂಚಿಕೆ ೬೨ರಲ್ಲಿ ಡಾ. ಸಾಂಬಮೂರ್ತಿ ಅವರು 'ಬಾಲಭಾಷೆ ವಿಶಿಷ್ಟ ಶಬ್ದಕೋಶ' ಎನ್ನುವ ಲೇಖನವನ್ನು ಬರೆದಿರುತ್ತಾರೆ. ಈ ಲೇಖನದಲ್ಲಿ ಮಗುವಿನ ಭಾಷೆಯ ಕಲಿಕೆಯಲ್ಲಿ ತಾಯಿಗೆ ಮೊದಲ ಆದ್ಯತೆ, ತಾಯಿ ಮತ್ತು ಮಗುವಿನ ಅನ್ಯೋನ್ಯ ಬಂಧವೇ ಈ ಕಲಿಕೆಯ ಮುಖ್ಯ ಅಂಗವಾಗಿರುತ್ತೆ ಎನ್ನುತ್ತಾರೆ. ಮತ್ತು ವಿವಿಧ ಪ್ರದೇಶಗಳ ತಾಯಂದಿರಿಂದ ಸಂಗ್ರಹಿಸಿದ ರೂಪಗಳು ಮತ್ತು ತಾಯಿ ಮಗುವಿನ ಸಂಭಾಷಣೆಯಲ್ಲಿ ಬಳಕೆಯಾಗುವ ವಿಶಿಷ್ಟ ಪದರೂಪಗಳನ್ನು ಕುರಿತು ವಿವರಿಸಿದ್ದಾರೆ.

* ನವೆಂಬರ್ ೧೦, ೨೦೧೩ರ ಪ್ರಜಾವಾಣಿ ದಿನಪತ್ರಿಕೆಯ ಭಾನುವಾರದ ಸಾಪ್ತಾಹಿಕ ಪುರಾವಣಿಯು ಮಕ್ಕಳ ಸಾಹಿತ್ಯದ ವಿಶೇಷ ಸಂಚಿಕೆಯಾಗಿ ಬಂದಿತು. ಈ ವಿಶೇಷ ಮಕ್ಕಳ ಸಾಹಿತ್ಯ ಸಂಚಿಕೆಯ ಸಂಪಾದಕತ್ವವನ್ನು ಡಾ.ಎಚ್.ಎಸ್. ವೆಂಕಟೇಶಮೂರ್ತಿ ವಹಿಸಿದ್ದರು. ಈ ಪುರವಣಿಯ ಆರಂಭದ ಪುಟದಲ್ಲಿಯೇ ಕುವೆಂಪು ಅವರ 'ಮಕ್ಕಳ ಸಂಗಮದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯ ಶಿಶು' ಎನ್ನುವ ಮಾತು ತುಂಬಾ ವಿಶೇಷವೆನಿಸಿತ್ತು. ಇದರ ಸಂಪಾದಕರಾದ ಎಚ್.ಎಸ್. ವೆಂಕಟೇಶ ಮೂರ್ತಿಯವರು ಈ ಸಂಚಿಕೆಯನ್ನು ಕುರಿತು ಈ ಸಂಚಿಕೆಯಲ್ಲಿ ನೆನ್ನೆ, ಈವತ್ತು ಮತ್ತು ನಾಳೆಗಳನ್ನು ಕೂಡಿಸುವ ಕೊಂಡಿಯಂಥ ಸೇತುಬಂಧಗಳಿದ್ದಾವೆ. ನೆಲವನ್ನು ಕಾಲಲ್ಲೊತ್ತಿದ್ದರಿಂದಲೇ ಸಾಧಿತವಾಗುವ ಬಯಲ ಜೀಕುಗಳಿದ್ದಾವೆ. ನಮ್ಮ ಮಕ್ಕಳ ಜೀವನದ ಮರ್ಮಗಳನ್ನು ಅರಿಯುವ ಸರಿಯಾದ ಪರಿಯೆಂದರೆ ಮಕ್ಕಳಾಗಿದ್ದೇ ಗಾಂಧಿತಾತನ ಫ್ಯಾನ್ಸಿ ಡ್ರೆಸ್ ಹಾಕುವುದು. ಮಕ್ಕಳು ಮಗುತನ ಕಳೆದುಕೊಳ್ಳದೆ ಪ್ರೌಢಿಮೆಯನ್ನು ಸಂಧಿಸುವ ವಿಚಿತ್ರ ಅಡಗುದಾಣವೆಲ್ಲಿಯಾದರೂ ಇದೆಯೆನ್ನುವುದಾದರೆ ಅದನ್ನು ನಾವು ಮಕ್ಕಳ ಸಾಹಿತ್ಯ ಎಂದು ಕರೆಯಬಹುದು ಎನ್ನುತ್ತಾರೆ. ಮತ್ತು ಈ ವಿಶೇಷ ಸಂಚಿಕೆಯ 'ಕಿಂದರ ಜೋಗಿಯಿಂದ ರಾಮಾಯಣ ದರ್ಶನಂ ಕಡೆಗೆ....' ಎನ್ನುವ ಲೇಖನವನ್ನು ಎಚ್.ಎಸ್. ರಾಘವೇಂದ್ರರಾವ್ ಅವರು ಬರೆದಿದ್ದಾರೆ. ಈ ಲೇಖನದಲ್ಲಿ ಮಕ್ಕಳ ಸಾಹಿತ್ಯದ ಸ್ವರೂಪ, ಅಗತ್ಯ ಮತ್ತು ಸಂವಹನಗಳನ್ನು ಕುರಿತು ಚರ್ಚಿಸುತ್ತಾ ಮಕ್ಕಳ ಸಾಹಿತ್ಯಕ್ಕೆ ಹಲವು ಉದ್ದೇಶಗಳಿವೆ. ಮನರಂಜನೆ, ವಿದ್ಯಾಭ್ಯಾಸ, ಸಾಂಪ್ರದಾಯಿಕವಾದ ನೈತಿಕ ಮೌಲ್ಯಗಳ ಮುಂದುವರಿಕೆ ಕಲ್ಪನಾಶಕ್ತಿ ಮೊದಲಾದವು. ಇವು ಮಕ್ಕಳ ಸಾಹಿತ್ಯದಲ್ಲಿ ಬಿಡಿಬಿಡಿಯಾಗಿ ಕಾಣುತ್ತೇವೆ. ನಾವು ಬಳಸುವ ಭಾಷೆಯ ಅಪರಿಚವಾದ ಚೆಲುವುಗಳನ್ನು ಮಕ್ಕಳಿಗೆ ಕಲಿಸುವುದು ಕೂಡ ಇಂಥ ಬರವಣಿಗೆಯ ಗುರಿಯಾಗಿರುತ್ತದೆ ಎನ್ನುತ್ತಾ ಮಕ್ಕಳ ಕವಿತೆಗಳನ್ನು ಓದುವುದರಿಂದ ಪ್ರಾಸ, ಲಯ, ಗೇಯ, ಗುಣ, ಹೋಲಿಕೆ ಮೊದಲಾದ ಸಂಗತಿಗಳನ್ನು ಮಕ್ಕಳು ಖುಷಿಯಿಂದ ಕಲಿಯಲು ಸಾಧ್ಯವಾಗುತ್ತದೆ. ಹಾಗೂ ಶಿಶುಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯಗಳು ಒಂದೇ ಏಣಿಯ ಮೆಟ್ಟಿಲುಗಳು. ಶಿಶುಸಾಹಿತ್ಯದಲ್ಲಿ ಭಾಷೆಯ ಶಬ್ದಗುಣಕ್ಕೆ ಮೊದಲು ಆದ್ಯತೆಯಾದರೆ, ಅರ್ಥಕ್ಕೆ ಎರಡನೇ ಸ್ಥಾನ. ಆದರೆ ಮಕ್ಕಳ

ಸಾಹಿತ್ಯದಲ್ಲಿ ಅರ್ಥಕ್ಕೆ ಮೊದಲ ಸ್ಥಾನವಾದರೆ, ಶಬ್ದಕ್ಕೆ ಎರಡನೇ ಸ್ಥಾನವಿರುತ್ತದೆ. ಮಕ್ಕಳ ಸಾಹಿತ್ಯದಿಂದ ಮಕ್ಕಳಲ್ಲಿ ಸಾಹಸ ಪ್ರವೃತ್ತಿಯನ್ನು ಮೂಡಿಸುವುದು, ಕಲ್ಪನಾ ಶಕ್ತಿಯನ್ನು ಬೆಳೆಸುವುದು ಮತ್ತು ಲೋಕದ ಬಗೆಗಿನ ತಿಳುವಳಿಕೆಯನ್ನು ಹೆಚ್ಚಿಸುವುದು ಸಾಧ್ಯವಾಗುತ್ತದೆ ಎಂದು ಈ ಲೇಖನದ ಮೂಲಕ ಹೇಳುತ್ತಾರೆ.

ಇದೇ ಸಂಚಿಕೆಯ ಇನ್ನೊಂದು ಪ್ರಮುಖ ಲೇಖನವನ್ನು ಆನಂದ ಪಾಟೀಲ 'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ದಿವ್ಯ ಶಿಶು' ಇದರಲ್ಲಿ ಮಕ್ಕಳನ್ನು ಮಕ್ಕಳಿಗಾಗಿ ಉಳಿಸಿಕೊಳ್ಳುವುದು ಹೇಗೆ? ಎನ್ನುವ ಪ್ರಶ್ನೆಗೆ ಉತ್ತರ ರೂಪದ ಬರಹ ಎನಿಸಿದೆ. ಮಕ್ಕಳಿಗೆ ಮಕ್ಕಳದೇ ಸಮಯ ಅಂತ ಇರಬೇಕು. ಆ ಸಮಯದಲ್ಲಿ ಹಿರಿಯರು ದೂರ ಉಳಿದು ಅವಕ್ಕೆ ಸಾಧ್ಯವಾದಷ್ಟು ಸ್ವಾತಂತ್ರ್ಯ ನೀಡಬೇಕು. ಇಂದಿನ ದಿನಗಳಲ್ಲಿ ಇದನ್ನು ಹೇಗೆಲ್ಲ ಸಾಧ್ಯ ಮಾಡಿಕೊಡಬೇಕು ಅನ್ನೋದನ್ನ ತಮ್ಮ ತಮ್ಮ ಪರಿಸರಗಳಲ್ಲಿ ಹಿರಿಯರು ಕಂಡುಕೊಳ್ಳಬೇಕು ಅನಿಸುತ್ತದೆ. ಹೀಗೆ ಮಕ್ಕಳದೇ ಆದ ಸಮಯವಿರುವಾಗ ಮಗು ತನ್ನದನ್ನ ಯಾವ ಸಂಕೋಚವಿಲ್ಲದೆ ಹೊರಹಾಕಲು ತನ್ನ ಸುತ್ತಲಿನದರೆಡೆಗೆ ಅರಿವಿನ ಕಣ್ಣಿಂದ ನೋಡಲು ಸಾಧ್ಯವಿದೆ. ಅವರಿಗೆ ಹಿರಿಯರು ಯಾವ ನಿರ್ಬಂಧಗಳು ಹಾಕಬಾರದು. ಮಕ್ಕಳನ್ನು ಮಕ್ಕಳ ಹಾಗೆ ಬಿಡಬೇಕು ಎನ್ನುವ ಕಾಳಜಿಯನ್ನು ಕುರಿತು ಈ ಲೇಖನ ವಿಶೇಷವಾಗಿದೆ.

ಇಷ್ಟೇ ಅಲ್ಲದೆ ಈ ವಿಶೇಷ ಪುರವಣಿಯಲ್ಲಿ ಕುಂ.ವೀರಭದ್ರಪ್ಪ ಅವರ 'ಕಥಿ ಕಥಿ ಕಬ್ಬು ಮೈಯಲ್ಲಿ ಜಿಬ್ಬು' ಎನ್ನುವ ಅವರ ಬಾಲ್ಯವನ್ನು ಕುರಿತ ಲೇಖನವಿದೆ. ಜೊತೆಗೆ ಮಕ್ಕಳಿಗೆ ಸಂಬಂಧಿಸಿದ ಕೆಲವು ಕಥೆಗಳನ್ನು, ಕವನಗಳನ್ನು ಮತ್ತು ನಾಟಕಗಳನ್ನು ಕೊಡಲಾಗಿದೆ.

* 'ಮಕ್ಕಳ ದಿನಾಚರಣೆ'ಯ ಆಸುಪಾಸಿನಲ್ಲಿ ಪ್ರಜಾವಾಣಿ ಪತ್ರಿಕೆಯವರು ಭಾನುವಾರದ ಸಾಪ್ತಾಯಿಕ ಪುರವಣಿಯನ್ನು 'ಮಕ್ಕಳ ವಿಶೇಷ ಸಂಚಿಕೆ'ಯನ್ನಾಗಿ ಕಳೆದ ಹಲವಾರು ವರ್ಷಗಳಿಂದ ರೂಪಿಸುತ್ತಾ ಬಂದಿದ್ದಾರೆ. ಈ ವಿಶೇಷ ಸಂಚಿಕೆಗಳನ್ನು ಕನ್ನಡ ಸಾರಸತ್ವ ಲೋಕದ ಹಿರಿಯರು ಅತಿಥಿ ಸಂಪಾದಕರಾಗಿ ರೂಪಿಸುತ್ತಾ ಬಂದಿದ್ದಾರೆ. ಹಾಗೆಯೇ ೨೦೧೫ರ ನವೆಂಬರ್ ೮ರ ಮಕ್ಕಳ ವಿಶೇಷ ಸಂಚಿಕೆಗೆ ಹಿರಿಯ ಲೇಖಕರಾದ ಆನಂದ ಪಾಟೀಲರು ಮಕ್ಕಳ ಸಂಚಿಕೆಯನ್ನು ರೂಪಿಸಿದ್ದಾರೆ. ತಮ್ಮ ಸಾಹಿತ್ಯಿಕ ಬದುಕನ್ನೆಲ್ಲ ಮಕ್ಕಳ ಕಾಳಜಿಗೆ ಮೀಸಲಾಗಿ ಇರಿಸಿರುವ ಪಾಟೀಲರು ಬಹು ಅಕ್ಕರೆಯಿಂದ ಈ ಸಂಚಿಕೆಯನ್ನು ಸಿದ್ಧಪಡಿಸಿದ್ದಾರೆ. ಇದರಲ್ಲಿ ಮಕ್ಕಳ ಹೊಸ ಬರಹಗಳ ಜೊತೆಗೆ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡ ಹಿರಿಯರ ರಚನೆಗಳು ಈ ಸಂಚಿಕೆಯಲ್ಲಿವೆ.

ಈ ಸಂಚಿಕೆಯ ಮುಖಪುಟದಲ್ಲಿ ಡಾ. ಆನಂದ ಪಾಟೀಲರ 'ಪುಟ್ಟರ ನಡುವೆ ಮರುಹುಟ್ಟು ಪಡೆಯಬೇಕಿದೆ ಪಂಚತಂತ್ರ' ಎನ್ನುವ ಸಂಪಾದಕರ ಲೇಖನವಿದೆ. ಇದರಲ್ಲಿ ಇಂದು ಮಕ್ಕಳ

ಬಾಲ್ಯಕ್ಕೆ ಸೂಕ್ತವಾದ ವಾತಾವರಣವೇ ಇಲ್ಲ. ನಾವು ಯಾವುದನ್ನು ಮಕ್ಕಳಿಗೆ ಅನಪೇಕ್ಷೆ ಎಂದು ದೂರವಿಟ್ಟಿರುತ್ತೇವೋ ಅದನ್ನೇ ಮಕ್ಕಳ ಕಣ್ಣಿಗೆ ರಾಚುವಂತೆ ಎದುರಿನಲ್ಲಿಯೇ ತೋರಿಸುವ ಆತಂಕದ ವಾತಾವರಣವಿದೆ. ಇಂದು ಮಕ್ಕಳ ಬಾಲ್ಯ ಸುಂದರ, ಸ್ವಚ್ಛಂದವಾಗಿ ದೀರ್ಘಕಾಲ ಉಳಿಯಲು ಅವಕಾಶವೇ ಇಲ್ಲದಂತಾಗುತ್ತದೆ ಎಂದು ಆತಂಕವನ್ನು ವ್ಯಕ್ತಪಡಿಸುತ್ತಾರೆ. ಅಂದು ರಾಜಕುಮಾರರು ದಾರಿ ತಪ್ಪಿದರೆಂದು ವಿಷ್ಣುಶರ್ಮ 'ಪಂಚತಂತ್ರ' ಕಥೆಗಳನ್ನು ರಚಿಸಿದರೆಂದು ತಿಳಿದಿದ್ದೇವೆ. ಇಂದು ಮಕ್ಕಳು ದಾರಿ ತಪ್ಪುತ್ತಿಲ್ಲ. ಆದರೆ ಅವರನ್ನು ನಮ್ಮ ಪರಿಸರವೇ ದಾರಿ ತಪ್ಪಿಸುತ್ತದೆ. ಹಾಗಾಗಿಯೇ ಹೊಸದಾದ 'ಪಂಚತಂತ್ರ' ನಮ್ಮ ಮಕ್ಕಳ ನಡುವೆ ರಚನೆಯಾಗಬೇಕಿದೆ ಎನ್ನುತ್ತಾರೆ.

ಈ ಸಂಚಿಕೆಯ 'ನಂದನದಲ್ಲಿ ಅಲ್ಲೋಲಕಲ್ಲೋಲ' ಎನ್ನುವ ಲೇಖನವನ್ನು ಮಕ್ಕಳ ನಾಟಕ ಪ್ರಯೋಗಗಳ ಮೂಲಕ ಮಕ್ಕಳನ್ನು ಕ್ರಿಯಾಶೀಲರನ್ನಾಗಿ ಮಾಡಲು ಪ್ರಯತ್ನಶೀಲರಾದ ಡಾ. ನಿಂಬುಸೊಲಗಿ ಅವರದು. ಇದರಲ್ಲಿಯು ಇಂದು ಮಕ್ಕಳಿಗಿರುವ ವಾತಾವರಣವನ್ನು ಕುರಿತು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನಿಜಕ್ಕೂ ಮಕ್ಕಳಿಂದು ಆತಂಕದ ಸ್ಥಿತಿಯಲ್ಲಿದ್ದಾರೆ. ನಿತ್ಯ ಮಾಧ್ಯಮಗಳಲ್ಲಿ ಬರುತ್ತಿರುವ ವರದಿಗಳು ಇದನ್ನೆ ಬಿತ್ತರಿಸುತ್ತಿವೆ. ಇವು ಮಕ್ಕಳಲ್ಲಿ ಆಕ್ರಮಣಕಾರಿ ಪ್ರವೃತ್ತಿ ಬೆಳೆಸುತ್ತಿದೆ ಎನ್ನುತ್ತಾರೆ.

ಇನ್ನು ಈ ಸಂಚಿಕೆಯಲ್ಲಿ ಕತೆಗಾರ್ತಿಯಾಗಿ ಗುರುತಿಸಿಕೊಂಡ ಸುನಂದ ಪ್ರಕಾಶ ಕಡಮೆ ಅವರ 'ಛದ್ಮವೇಷ', 'ಯಶವಂತ ಹೇಳಿದ ಕಥೆ.' ಇದು ಒಬ್ಬ ಶಿಕ್ಷಕಿಯ ಸುತ್ತಲಿನ ಮಕ್ಕಳ ಸಮಯವನ್ನು ಅನಾವರಣಗೊಳಿಸುತ್ತ ಹೋಗುತ್ತದೆ. ಮಕ್ಕಳ ಜೀವನದಲ್ಲಿಯೇ ನಡೆಯುವ ಪ್ರಸಂಗಗಳು ಕತೆಯಾಗಿ ಕಲ್ಪನೆಯಲ್ಲಿ ರೂಪಾಂತರಗೊಳ್ಳಬಲ್ಲವು ಎನ್ನುವ ಸಣ್ಣದೊಂದು ಪ್ರಯೋಗವನ್ನು ಶಿಕ್ಷಕಿ ಕಾಣುತ್ತಾಳೆ. ಮಕ್ಕಳದೇ ಮಾತು, ಅವುಗಳದೇ ಅನುಭವಗಳು ಕತೆಯಾಗುತ್ತ ಹೋಗುತ್ತವೆ. ಈ ಕಥೆಯನ್ನು ಯಶವಂತ ಇರೋ ಘಟನೆಗಳ ಜೊತೆಗೆ ಕೆಲವು ಹೊಸ ಘಟನೆಗಳನ್ನು ಸೇರಿಸಿ ಹೇಳುತ್ತಾನೆ. ಹೀಗೆ ಈ ಕಥೆಯು ರಂಗಪ್ರಯೋಗವಾಗುವುದೇ ಇದರ ವಿಶೇಷ. ಇದು ಮಕ್ಕಳನ್ನು ಮನರಂಜಿಸುತ್ತದೆ. ಇಷ್ಟೆ ಅಲ್ಲದೆ ಈ ಸಂಚಿಕೆಯಲ್ಲಿ ಇನ್ನು ಹಲವಾರು ಮಕ್ಕಳ ಕಥೆಗಳು, ಕವನಗಳು ಮತ್ತು ನಾಟಕಗಳನ್ನು ಕಾಣಬಹುದು.

ಈ ಮೇಲಿನ ಕೆಲವು ಕೃತಿಗಳಲ್ಲಿ ಬಂದಿರುವ ಹೆಚ್ಚಿನ ವಿಷಯಗಳು ಇನ್ನೂ ಕೆಲವು ಬೇರೆ ಬೇರೆ ಪುಸ್ತಕಗಳಲ್ಲಿ ಪುನರಾವರ್ತನೆಯಾಗಿವೆ. ಆದರೂ ಅಲ್ಲಲ್ಲಿ ನನ್ನ ಅಧ್ಯಯನಕ್ಕೆ ಸಂಬಂಧಿಸಿದ ಹೊಸ ಹೊಸ ಅಂಶಗಳನ್ನು, ವಿಚಾರಗಳನ್ನು ಮತ್ತು ಮಾಹಿತಿಗಳನ್ನು ಕುರಿತು ಸಾಹಿತ್ಯ ಕೃತಿ, ಅದರಲ್ಲಿನ ಭಾಷೆ, ವಸ್ತು, ತಂತ್ರಗಳನ್ನು ಗಮನಿಸಲಾಗಿದೆ. ಅಲ್ಲದೆ ಈ ಮುಂದಿನ ಕೃತಿಗಳನ್ನು ಕೂಡ ಸಮೀಕ್ಷೆಗೆ ಒಳಪಡಿಸಲಾಗಿದೆ. ಆದರೆ ಸಮೀಕ್ಷೆಗೆ ಸೀಮಿತ ವ್ಯಾಪ್ತಿಯಿರುವುದರಿಂದ ಅವುಗಳ ವಿವರಣೆಗಳನ್ನು ಕೊಡದೆ ಕೃತಿಗಳ ಪಟ್ಟಿಯನ್ನು ಮಾತ್ರ ಕೊಡಲಾಗಿದೆ.

ಇತರೆ ಆಕರ ಗ್ರಂಥಗಳ ಸಮೀಕ್ಷೆ ಇಂತಿವೆ.

* ಸಂಸ್ಕೃತ ನಾಟಕಗಳ ತಂತ್ರ ಮತ್ತು ಪ್ರಯೋಗ – ಪ್ರೊ.ಎಂ. ರಾಜಗೋಪಾಲಾಚಾರ್ಯ

* ನಾಟಕ ಸಾಹಿತ್ಯ ಮತ್ತು ರಂಗಭೂಮಿ – ಗಿರಡ್ಡಿ ಗೋವಿಂದರಾಜ

* ಕನ್ನಡ ನಾಟಕ ಪರಂಪರೆ – ಎಲ್.ಎಸ್. ಶೇಷಗಿರಿರಾವ್

* ಚಂಪಾ ನಾಟಕಗಳ ಭಾಷೆ – ಎಸ್.ಎಸ್. ಅಂಗಡಿ

* ಕನ್ನಡ ಭಾಷೆ ಮತ್ತು ಸಾಹಿತ್ಯ – ಎಂ.ಎಚ್. ಕೃಷ್ಣಯ್ಯ

* ಕನ್ನಡ ಸಾಹಿತ್ಯ ಸಂಬಂಧ – ವ್ಹಿ.ಜಿ. ಪೂಜಾರ

* ಹೇಗಿದ್ದರು? ಹೇಗಾದರು? – ಸಿಸು ಸಂಗಮೇಶ

❖❖❖

ಅಧ್ಯಾಯ: ಮೂರು

ಮಕ್ಕಳ ಸಾಹಿತ್ಯದ ರಚನೆಯ ಹಿನ್ನೆಲೆ, ಸ್ವರೂಪ ಮತ್ತು ತಾತ್ವಿಕತೆ

೩.೧. ಮಕ್ಕಳ ಸಾಹಿತ್ಯದ ಪ್ರಾಚೀನತೆ

೩.೨. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಮೂಲ

೩.೩. ಮಕ್ಕಳ ಸಾಹಿತ್ಯದ ಪ್ರಾಮುಖ್ಯತೆ

೩.೪. ಮಕ್ಕಳ ಸಾಹಿತ್ಯದ ಸ್ವರೂಪ

೩.೪.೧. ಮಕ್ಕಳ ಸಾಹಿತ್ಯದ ವಸ್ತು

೩.೪.೨. ಮಕ್ಕಳ ಸಾಹಿತ್ಯದ ಲಕ್ಷಣಗಳು

ಅಧ್ಯಾಯ: ಮೂರು

ಮಕ್ಕಳ ಸಾಹಿತ್ಯದ ರಚನೆಯ ಹಿನ್ನೆಲೆ, ಸ್ವರೂಪ ಮತ್ತು ತಾತ್ವಿಕತೆ

ವಿಶ್ವಮಟ್ಟದಲ್ಲಿ ಮಕ್ಕಳ ಸಾಹಿತ್ಯವನ್ನು ಗಮನಿಸಿದಾಗ, ದೊಡ್ಡವರ ಸಾಹಿತ್ಯಕ್ಕೆ ಹೋಲಿಕೆ ಮಾಡಿಕೊಂಡಾಗ ಮಕ್ಕಳ ಸಾಹಿತ್ಯದ ನಡಿಗೆಯು ತುಸು ನಿಧಾನವೆನಿಸುತ್ತದೆ. ಇದು ತನ್ನ ಅಸ್ತಿತ್ವಕ್ಕಾಗಿ ದೀರ್ಘಕಾಲವನ್ನೇ ತೆಗೆದುಕೊಂಡಿದೆ. ಹದಿನೆಂಟನೇ ಶತಮಾನದ ಉತ್ತರಾರ್ಧದವರೆಗೂ ಒಂದು ರೀತಿಯಲ್ಲಿ ಭ್ರೂಣಾವಸ್ಥೆಯಲ್ಲಿಯೇ ಇದ್ದು, ಇಪ್ಪತ್ತನೆ ಶತಮಾನದ ಕಾಲಕ್ಕೆ ಮಕ್ಕಳಿಗಾಗಿ ರಚಿಸಿದ ಸಾಹಿತ್ಯಕ್ಕೆ ಹೆಚ್ಚಿನ ಮನ್ನಣೆಯು ದೊರೆಯಲು ಪ್ರಾರಂಭಿಸಿತು.

ಹೀಗೆ ಮನ್ನಣೆಯನ್ನು ಪಡೆಯುತ್ತಾ ಬಂದ ಮಕ್ಕಳ ಸಾಹಿತ್ಯವನ್ನು ಚಾರಿತ್ರಿಕ ಹಿನ್ನೆಲೆಯ ತಾತ್ವಿಕ ನೆಲೆಯನ್ನು ಪಾಶ್ಚಾತ್ಯ ಸಂದರ್ಭದ ಮಕ್ಕಳ ಸಾಹಿತ್ಯ, ಭಾರತೀಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಹಾಗೂ ಕನ್ನಡದ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಎಂಬ ಮೂರು ಅಂಶಗಳನ್ನು ತಾತ್ವಿಕ ಚಿಂತನೆಗಳ ನೆಲೆಯಲ್ಲಿ ವಿವೇಚಿಸಬಹುದಾಗಿದೆ.

ಮೊದಲನೆಯದಾಗಿ ಪಾಶ್ಚಾತ್ಯ ಸಮಾಜದಲ್ಲಿ ಮಕ್ಕಳ ಸಾಹಿತ್ಯದ ಉಗಮವನ್ನು ಹನ್ನೆರಡನೇ ಶತಮಾನದಲ್ಲಿಯೇ ಗುರುತಿಸಬಹುದು. ಹೊಸ ಹೊಸ ಅವಿಷ್ಕಾರಗಳಿಗೆ ನಾಂದಿ ಹಾಡಿದ ಯುರೋಪ್ ದೇಶಗಳಿಗೆ ಮೊದಲು ಈ ಸಾಹಿತ್ಯವನ್ನು ರಚಿಸಿದ ಕೀರ್ತಿ ಸಲ್ಲುತ್ತದೆ. ಅದರಲ್ಲಿಯು ಮಕ್ಕಳ ಸಾಹಿತ್ಯವನ್ನು ಬೆಳಕಿಗೆ ತಂದ ಕೀರ್ತಿ ಜರ್ಮನ್ ದೇಶದ್ದು. ಮಕ್ಕಳ ಕವನ, ಕಥೆ, ನಾಟಕ, ಪ್ರಾಸ, ನೀತಿಕಥೆ ಮೊದಲಾದ ಮಕ್ಕಳ ಸಾಹಿತ್ಯದ ಪ್ರಕಾರವನ್ನು ರಚಿಸಿದ ಜರ್ಮನಿಯ ಸಾಹಿತ್ಯವು ರಾಜ–ರಾಣಿ, ಮಾಂತ್ರಿಕ, ರಾಕ್ಷಕ, ವೀರಯೋಧ, ಪ್ರಾಣಿ–ಪಕ್ಷಿ ಮೊದಲಾದ ಜೀವ ಮತ್ತು ಪ್ರಾಕೃತಿಕ ಮೂಲಗಳನ್ನು ಬಳಸಿಕೊಂಡು ಅದ್ಭುತವಾದ ಮಕ್ಕಳ ಸಾಹಿತ್ಯವನ್ನು ರಚನೆ ಮಾಡಿದ್ದು, ಭಾರತೀಯ ಸಾಮಾಜಿಕ ಪರಿಸರದಲ್ಲಿ ಮಕ್ಕಳ ಸಾಹಿತ್ಯದ ಬೇರುಗಳನ್ನು ಕ್ರಿಸ್ತಪೂರ್ವ ಯುಗದಲ್ಲಿ ಗುರುತಿಸುವ ಹಾಗೆ, ಪಾಶ್ಚಾತ್ಯ ಭಾಷೆಗಳಲ್ಲಿ ಈ ಬಗೆಯ ಬೇರುಗಳನ್ನು ಕಾಣಲು ಸಾಧ್ಯವಾಗುವುದಿಲ್ಲ.

ಜಗತ್ತಿನ ಪುರಾತನ ನಾಗರೀಕತೆಗಳಲ್ಲಿ ಒಂದಾದ ಭಾರತೀಯ ನಾಗರೀಕತೆ ಸಹಜವಾಗಿಯೇ ತನ್ನ ಹುಟ್ಟಿನ ಜೊತೆಗೆ ಕಥೆಯನ್ನು ಸೃಷ್ಠಿಸಿಕೊಂಡೇ ಹುಟ್ಟಿದೆ. ಪಾಶ್ಚಾತ್ಯ ಮಕ್ಕಳ ಸಾಹಿತ್ಯದ ಉಗಮಕ್ಕೆ ಈ ಬಗೆಯ ಚಾರಿತ್ರಿಕ ಹಿನ್ನೆಲೆ ಇಲ್ಲ. ಸಾಮಾನ್ಯವಾಗಿ ದನಗಾಹಿ ಅಲೆಮಾರಿ ಜನಾಂಗಗಳಿಂದ ಸೃಷ್ಠಿಯಾದ ಯುರೋಪಿನ ಬೇರೆ ಬೇರೆ ರಾಷ್ಟ್ರಗಳು ತನ್ನ ಉಗಮ ಮತ್ತು ವಿಕಾಸಗಳ ಚಾರಿತ್ರಿಕ ದಾಖಲಾತಿ ಅಸ್ಪಷ್ಟ ನೆಲೆಯಲ್ಲಿ ನಿರ್ವಚನಗೊಂಡಿರುವ ಬಹುಮುಖ್ಯ ಕಾರಣ ಈ ಪ್ರಕ್ರಿಯೆಯ ಹಿಂದಿದೆ.

ವರ್ಷವಿಡೀ ತುಂಬಿ ಹರಿಯುತ್ತಿದ್ದ ಸಿಂಧೂ ನದಿಯು ಸಂಪತ್ತಿನಿಂದ ಕೂಡಿದ ಫಲವತ್ತಾದ ಮೆಕ್ಕಲು ಮಣ್ಣಿನಲ್ಲಿ ಬೆಳೆದು ಬಂದು, ಇಡೀ ಜಗತ್ತಿಗೆ ಉತ್ತುವ, ಬೆಳೆಯುವ, ಬೇಯಿಸಿ ತಿನ್ನುವ ಕೃಷಿ ಮೂಲದ ಪಾಠವನ್ನೇಳಿದ ಸಿಂಧೂ ನಾಗರೀಕತೆ ಪ್ರಕೃತಿಯನ್ನು ಆರಾಧಿಸುವ 'ಪೂಜ್ಯೆ' ಪದ್ಧತಿಯನ್ನು ಒಳಗೊಂಡದಾಗಿತ್ತು. ಜಗತ್ತಿನ ಅತೀ ಪುರಾತನ ಪ್ರಜಾಪ್ರಭುತ್ವವಾದಿ ಗಣರಾಜ್ಯವನ್ನು ಹೊಂದಿದ್ದ ಸಿಂಧೂ ನಾಗರೀಕತೆ ಪ್ರಕೃತಿಯಲ್ಲೇ ಪರಮಾತ್ಮನನ್ನು ಕಂಡು ಪ್ರಕೃತಿಯಲ್ಲಿ ಸಿಗುವ ಹೂಗಳನ್ನು ಹರಿದು ತಂದು ಪ್ರಕೃತಿಗೆ ಮರಳಿ ಅರ್ಪಿಸುವ, ಪ್ರಕೃತಿ ಆರಾಧನಾ ಪದ್ಧತಿಯನ್ನು ಒಪ್ಪಿಕೊಂಡಿತ್ತು. ಅಂದರೆ ಪ್ರಕೃತಿಯ ಒಳಗೆ ಖಾಯಂ ಆಗಿ ನೆಲೆಸುವ ಯಾವುದೇ ಒಂದು ನಾಗರಿಕ, ಭಾಷಿಕ ಕುಲಗಳು ಅಗಾಧವಾದ ಸಾಹಿತ್ಯದ, ಸಾಂಸ್ಕೃತಿಕ ಪರಂಪರೆಗಳ ವಕ್ತಾರರಾಗಿರುತ್ತಾರೆ. ಈ ಸೃಷ್ಠಿ ಮೂಲಭೂತವಾಗಿ ಮೊದಲು ಮಕ್ಕಳನ್ನು ಬಳಸಿಕೊಂಡೇ ರಚನೆಯಾದದ್ದಾಗಿರುತ್ತದೆ. ಕಾರಣ ಯಾವುದೇ ಯೌವ್ವನನಿಗೆ ಮಗುವಿನ ಮಾನಸಿಕ ಸ್ಥಿತಿಯನ್ನು ದಾಟಿ, ಬೆಳೆದು ಹೋದ ಕಾರಣಕ್ಕಾಗಿ ತನ್ನ ಬಾಲ್ಯದ ನೆನಪುಗಳು ನಿರಂತರಾಗಿ ಅವನಲ್ಲಿ ಕಾಡುತ್ತಿರುತ್ತದೆ. ಹೀಗಾಗಿ ಮಕ್ಕಳಾಟವು ಚೆಂದ, ಮತ್ತೆ ಯೌವ್ವನ ಚೆಂದ, ಮುಪ್ಪಿನಲ್ಲಿ ಚೆಂದ ನರೆಗಡ್ಡ ಎಂದು ಜನಪದರು ಹೇಳುತ್ತಾರೆ. ಇದು ಮಗುವಿನ ಬಾಲ್ಯ, ಯೌವ್ವನ, ವೃದ್ಧಾಪ್ಯ ಎಂಬ ಮೂರು ಬೆಳವಣಿಗೆಗಳ ಹಂತವನ್ನು ದೂರದಿಂದಲೇ ಕಂಡು ಅನುಭವಿಸಿ ಹಾಡುವ ಜನಪದ ಶೈಲಿ, ಆದರೆ ಪಾಶ್ಚಾತ್ಯ ಮಕ್ಕಳ ಸಾಹಿತ್ಯದ ಹೆಜ್ಜೆ ಗುರುತುಗಳನ್ನು ಮುದ್ರಣ ಕಲೆ ಬರುವ ತುಸು ಮುನ್ನ ಮಾತ್ರ ಗುರುತಿಸಬಹುದು. ಮುದ್ರಣ ಕಲೆ ಬರುವ ಮುನ್ನ ಯುರೋಪಿನಲ್ಲಿ ಮಕ್ಕಳಿಗಾಗಿ ಕೃತಿ ರಚಿಸುವ ಪ್ರಯತ್ನಗಳು ನಡೆದಿವೆ.

ಲ್ಯಾಟಿನ್ ಭಾಷೆಯ 'ಬೀಡ್' ಎನ್ನುವ ವ್ಯಕ್ತಿ ಈ ಪ್ರಯತ್ನವನ್ನು ಮಾಡಿರುವ ದಾಖಲೆಗಳಿವೆ. ಆದರೆ ಈ ಪ್ರಯತ್ನದ ಪರಿಶೀಲನೆಗಾಗಿ ಇನ್ನು ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಅನ್‌ಸೆಲ್ಮ್ ಎಂಬಾತ ಮಕ್ಕಳಿಗೆ ಸಾಮಾನ್ಯ ತಿಳುವಳಿಕೆಯನ್ನು ನೀಡುವ ವಿಶ್ವಕೋಶವನ್ನು ರಚಿಸಿರುವುದರೊಂದಿಗೆ ಪಾಶ್ಚಾತ್ಯ ಮಕ್ಕಳ ಸಾಹಿತ್ಯದ ಉಗಮವನ್ನು ಗುರುತಿಸಬಹುದು ಎಂದಿದ್ದಾನೆ.

ಪಾಶ್ಚಾತ್ಯ ಮಕ್ಕಳ ಸಾಹಿತ್ಯದ ಉಗಮ ಮತ್ತು ವಿಕಾಸವನ್ನು ಕುರಿತು ಊಹಾತ್ಮಕ ಸಿದ್ಧಾಂತದ ಹಿನ್ನೆಲೆಯಲ್ಲಿ ಕೆಲವು ಚರ್ಚೆಗಳಿವೆ. ಯುರೋಪ್ ದೇಶದ ದನಗಾಹಿ ಸಮುದಾಯ ಒಂದೆಡೆ ನಿಂತು ಆಳುವ ವ್ಯವಸ್ಥೆಯನ್ನು ಸೃಷ್ಟಿಸಿಕೊಂಡ ಮೇಲೆ ಸಾಮ್ರಾಜ್ಯಶಾಹಿಯ ಧೋರಣೆಯ ಪ್ರಜಾಶೋಷಣೆ ನಿರಂತರವಾಗಿ ನಡೆಸುತ್ತಾ ಬಂದಿತು. ಅರಸೊತ್ತಿಗೆಯಿಂದ ನಡೆಯುತ್ತಿದ್ದ ಈ ಬಗೆಯ ಶೋಷಣೆಯಲ್ಲಿ ಸ್ವತಂತ್ರ ಹೀನರಾದ ಪ್ರಜಾವರ್ಗ ತಮ್ಮ ಸಂಕಷ್ಟಗಳನ್ನು ಯಾರಿಗೆ ಹೇಗೆ ಹೇಳಿಕೊಳ್ಳಬೇಕು? ಎನ್ನುವ ಪ್ರಶ್ನೆಗಳು ಉದ್ಭವಿಸಿದವು. ಆ ಸಮಾಜ ಕಂಡುಕೊಂಡ ಸುಲಭ ಉತ್ತರ ಮಕ್ಕಳಾಡುವ ಭಾಷೆ. ಈ ಮಕ್ಕಳು ಏನೇ ಮಾಡಿದರೂ, ಆಡಿದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವ ಸಂದರ್ಭವೇ ಸಹಜವಾಗಿ ಇರುತ್ತದೆ. ಅಪ್ಪಿತಪ್ಪಿ ಮಕ್ಕಳ ಬಾಯಲ್ಲಿ ದೊಡ್ಡ ದೊಡ್ಡ ಮಾತುಗಳೇನಾದರೂ ಬಂದರೆ ಮಕ್ಕಳು ಎನ್ನುವ ಕಾರಣಕ್ಕೆ ರಿಯಾಯಿತಿಯು ದೊರೆಯುತ್ತದೆ. ಈ ರೀತಿಯ ರಿಯಾಯಿತಿಯನ್ನೇ ಅರಸೊತ್ತಿಗೆಗಳ ನಿಂದನೆಗಾಗಿ ಬಳಸಿಕೊಂಡ ಪಾಶ್ಚಾತ್ಯ ಕುಲಗಳ ಭಾಷೆಯಲ್ಲಿ ಮೌಖಿಕ ಮಕ್ಕಳ ಸಾಹಿತ್ಯದ ಉಗಮವನ್ನು ಗುರುತಿಸಬಹುದೆಂದು ಕಾಣುತ್ತದೆ. ಈಗಾಗಲೇ ಪ್ರಸ್ತಾಪಿಸಿದಂತೆ ಇದು ಆಧಾರ ರಹಿತ ಮತ್ತು ಊಹಾತ್ಮಕ ಸಿದ್ಧಾಂತದ ಮೇಲೆ ನಿಂತಿರುವ ಸಂಗತಿಯಾಗಿದೆ.

"ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕೃತಿಗಳನ್ನು ರಚಿಸುವ ಪ್ರಯತ್ನ ಹದಿನೇಳನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ನಡೆಯತೊಡಗಿತು. ಮನೋರಂಜನೆ ಮತ್ತು ನೀತಿ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು ಟಿ.ಲೈಯ್ ಎನ್ನುವ ವಿದ್ವಾಂಸ 'A childs delight together with an english grammer' ಎಂಬ ಕೃತಿಯನ್ನು, ಜೇಮ್ಸ್ ಜೇನ್‌ವೇ 'A to confar children the exmplary lights and joyful deaths of several young children (1671)"[೧]

ಈ ಮೂಲಕ ರಚನೆಗೊಂಡ ಪಾಶ್ಚಾತ್ಯ ಮಕ್ಕಳ ಸಾಹಿತ್ಯ ನಿರಂತರ ಪ್ರವಾಹೋಪಾದಿಯಲ್ಲಿ ಹರಿಯುತ್ತಾ ಸಾಗಿತು. ಸಾಮಾನ್ಯವಾಗಿ ಚರ್ಚಾ ಪರಂಪರೆಗಳನ್ನು ಒಪ್ಪಿಕೊಂಡು ಬದುಕುತ್ತಿದ್ದ ಪಾಶ್ಚಾತ್ಯ ಸಮಾಜ ರಚಿಸಿದ ಮಕ್ಕಳ ಸಾಹಿತ್ಯದಲ್ಲಿ ಪಾಪ-ಪುಣ್ಯಗಳ ಚರ್ಚೆ ಯಥೇಚ್ಛವಾಗಿ ಸಿಗುತ್ತದೆ. ಸ್ವರ್ಗ-ನರಕಗಳ ಪರಿಕಲ್ಪನೆಗಳೇ ಬರುತ್ತವೆ. ಹದಿನೆಂಟನೇ ಶತಮಾನದಲ್ಲಿ ರಚನೆಯಾದ ಐಸಾಕ್ ವ್ಯಾಟ್ಸ್ ಅವರ 'Divine and moral songs for children' ಕೃತಿಯಲ್ಲಿ ಈ ಅಂಶಗಳನ್ನು ಗುರುತಿಸಬಹುದು. ಮಕ್ಕಳ ಸೂಕ್ಷ್ಮ ಸಂವೇದನೆಗೆ ಪ್ರಾಯಶಃ ಈಗಾಗಲೇ ಧಾರ್ಮಿಕ ನೆಲೆಯಲ್ಲಿ ಸೃಷ್ಟಿಯಾಗಿರುವ ಅಭೌತಿಕ ಪರಂಪರೆಗಳೊಡನೆ ಸಂಭಾಷಣೆಗಿಳಿಯುವುದು ಮುಖ್ಯವೆಂದು ತೋರುತ್ತವೆ. ಹಾಗಾಗಿ ಜಗತ್ತಿನ ಎಲ್ಲ ಭಾಷೆಗಳ ಮಕ್ಕಳ ಸಾಹಿತ್ಯವು ಇಂತಹ ಲೋಕವೊಂದನ್ನು ಸೃಷ್ಟಿಸಿದೆ. ಮಕ್ಕಳೊಳಗೆ ಭಯ ಮತ್ತು ಮೌಲ್ಯಗಳೆರಡನ್ನೂ ಒಟ್ಟೊಟ್ಟಿಗೆ ಸೃಷ್ಟಿಸುವ ಈ ಪ್ರಕ್ರಿಯೆ ಮುಂದೆ ಸರಿ ಮತ್ತು ತಪ್ಪುಗಳ ಸ್ಪಷ್ಟ ಮಾರ್ಗವನ್ನು ಕಂಡುಕೊಳ್ಳಲು ಸಹಕಾರಿಯಾಗುತ್ತದೆ.

ಯುರೋಪ್ ರಾಷ್ಟ್ರಗಳ ಯುದ್ಧದಾಹ, ಮಕ್ಕಳಲ್ಲಿ 'ಅನಾಥ ಪ್ರಜ್ಞೆ' ಸೃಷ್ಟಿ ಮಾಡಿತು. ತಂದೆಯ ಬರುವಿಕೆಗಾಗಿ ಕಾಯುವ ಮಕ್ಕಳು, ಹೊರ ಸೈನಿಕರ ಹಿಂಸಾಕೃತ್ಯಗಳಿಗೆ ತುತ್ತಾಗುತ್ತಿದ್ದ ಮಕ್ಕಳ ಮನಸ್ಥಿತಿಗಳು ಸಾಹಿತ್ಯಿಕ ಸ್ವರೂಪವನ್ನು ಪಡೆದಿವೆ. ಮಕ್ಕಳ ಮಾನಸಿಕ ತಳಮಳಗಳು ಸಾಹಿತ್ಯಿಕ ಘೋಷಣೆಯ ರೂಪತಾಳಿವೆ. ಇನ್ನು ಪ್ರಥಮ ಮತ್ತು ದ್ವಿತೀಯ ಜಾಗತಿಕ ಯುದ್ಧದಲ್ಲಿ ಇಡೀ ಪಾಶ್ಚಾತ್ಯ ಜಗತ್ತು ಇಬ್ಭಾಗವಾಗಿ ಹೋರಾಡಿ ಸೃಷ್ಟಿಸಿದ ಸಾಮಾಜಿಕ ವಿಷಮಸ್ಥಿತಿ ಯಾವ ಬಗೆಯ ಪರಿಸರವನ್ನು ಸೃಷ್ಟಿಸಿತ್ತು ಎಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಯುದ್ಧದ ಘೋರ ಪರಿಣಾಮಗಳಿಂದ ಮಾನಸಿಕವಾಗಿ ಜರ್ಜರಿತಗೊಂಡಿದ್ದ ಮಕ್ಕಳು ಗ್ರಹ, ನಕ್ಷತ್ರ, ಚಂದ್ರ ತಾರೆಯರನ್ನೇ ತಮ್ಮ ಸಂಗಾತಿಗಳೆಂದು ಪರಿಭಾವಿಸಿರಬೇಕು. ಹಾಗಾಗಿ ಅದೇ ಸಂದರ್ಭದಲ್ಲಿ ಜೆಂಟ ಟೈಲರ್ ಎನ್ನುವಾಕೆಯ 'Rhymes for the nursery' ಸಂಗ್ರಹದಲ್ಲಿ 'The star' ಎನ್ನುವ ಶೀರ್ಷಿಕೆ ನೀಡಿ ಬರೆದ ಕಾವ್ಯ 'Twinkel Twinkle Little Star' ಈ ಕಾವ್ಯದಲ್ಲಿ ಬರುವ 'How are wonder...' ಎನ್ನುವ ಮಕ್ಕಳ ಮಾನಸಿಕ ಅಭಿವ್ಯಕ್ತಿಯೇ ಇಲ್ಲಿ ಬೆರಗುಗೊಳಿಸುವಂತಿದ್ದು, ಹಲವು ವಂಡರ್‌ಗಳನ್ನು ತಮ್ಮ ಬದುಕಿನಲ್ಲಿ ಕಾಣಬೇಕಿರುವ ಮಕ್ಕಳು ಯುದ್ಧ ಎನ್ನುವ ವಂಡರನ್ನು ಕಂಡು, ವಾಕರಿಕೆ ಹುಟ್ಟಿ ನೈಜ ವಂಡರ್‌ಗಳನ್ನು ಆಕಾಶದ ಗ್ರಹ-ನಕ್ಷತ್ರಗಳಲ್ಲಿ ಕಾಣುವ ಪ್ರಯತ್ನ ಮಾಡಿದ್ದಾರೆ. ಹಾಗಾಗಿ ನಿನ್ನ ಎತ್ತರಕೆ ಈ ಯುದ್ಧದಾಹಿ ಮಾನವಕುಲ ಏರಲಾರದೆನ್ನುವ ಸ್ಥಾಯಿಭಾವವೊಂದನ್ನು ಆ ಕಾವ್ಯದಲ್ಲಿ ಗುರುತಿಸಬಹುದು.

ಸಾಮಾನ್ಯವಾಗಿ ಇಂಗ್ಲೀಷಿನಲ್ಲಿ ಮಕ್ಕಳ ಸಾಹಿತ್ಯವನ್ನು ಮಕ್ಕಳ ರೈಮ್ಸ್, ಸ್ಟೋರೀಸ್ ಎಂದು ಕರೆಯಲಾಗಿದೆ. ಇಂಗ್ಲೀಷಿನಲ್ಲಿ ರಚನೆಯಾದ ಈ ಸಾಹಿತ್ಯ ಪ್ರಕಾರವು ಯುರೋಪಿನಾದ್ಯಂತ ಪ್ರಸಾರವಾಯಿತು. ನಂತರ ಕ್ರಿಶ್ಚಿಯನ್ ಮಿಶನರಿಗಳು ಜಗತ್ತಿನ ಬೇರೆ ಬೇರೆ ದೇಶಗಳಿಗೆ ಧರ್ಮ ಪ್ರಸಾರಕ್ಕಾಗಿ ತೆರಳಿ ಬೇರೆ ಬೇರೆ ದೇಶಗಳಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಸೃಷ್ಠಿ ಮಾಡಿದರು. ಹೀಗಾಗಿ ಹಲವು ಮಕ್ಕಳ ಸಾಹಿತ್ಯ ಪ್ರಕಾರಗಳು ಭಾರತ ದೇಶವನ್ನು ಪ್ರವೇಶಿಸಿದವು.

ಐತಿಹಾಸಿಕ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಘಟನೆಗಳು ಯುರೋಪಿನಾದ್ಯಂತ ಚಾಲ್ತಿಯಲ್ಲಿದ್ದ ಗಾದೆಗಳು ಸಾಂಪ್ರದಾಯಿಕ ಆಚರಣೆಗಳು, ನೋವು-ನಲಿವು, ಸೋಲು-ಗೆಲುವು ಭಯ ಮೊದಲಾದ ಅಂಶಗಳನ್ನು ಆಂಗ್ಲ ಮಕ್ಕಳ ಸಾಹಿತ್ಯದಲ್ಲಿ ಗುರುತಿಸಬಹುದು. 'A Little book for Little children' ಎನ್ನುವ ೧೮ನೇ ಶತಮಾನದಲ್ಲಿ ಮಕ್ಕಳ ಸಾಹಿತ್ಯದ ಕೃತಿ ಮೊದಲ ಬಾರಿಗೆ ಮುದ್ರಣಗೊಂಡಿತು. ನಂತರ ೧೮೧೦ರ ವೇಳೆಯಲ್ಲಿ ಪ್ರಕಟಗೊಂಡ ಜೋಸೆಫ್ ರಿಟ್ಸನ್ನರ 'ಗಾರ್ಲೆಂಡ್' ಕೃತಿ ಹಲವಾರು ಬಾರಿ ಮುದ್ರಣಗೊಂಡು 'Popular Rhymes of Scotland'[೨] ಎನಿಸಿತು.

ಒಟ್ಟಾರೆ ಪಾಶ್ಚಾತ್ಯ ಮಕ್ಕಳ ಸಾಹಿತ್ಯವನ್ನು ಹೆಚ್ಚು ಜನಪ್ರಿಯಗೊಳಿಸಿದ ಕೀರ್ತಿ ಇಂಗ್ಲೆಂಡಿನ ಆ್ಯನ್ ಮತ್ತು ಜೇನ್ ಎನ್ನುವ ಕವಿಯತ್ರಿಯರಿಗೆ ಸಲ್ಲುತ್ತದೆ.

ಹದಿನೇಳನೇ ಶತಮಾನದ ಮಧ್ಯಯುಗೀನ ಕಾಲದಲ್ಲಿ ಬಾತುಕೋಳಿಗಳನ್ನು ಕಾಯುತ್ತಿದ್ದ ಹಳ್ಳಿಯ ಜನಪದ ಸಾಮಾನ್ಯ ಸ್ತ್ರೀ ಕಟ್ಟಿದ ಕಥೆಗಳು, ಪೌರಾತ್ಯ ಕಥೆಗಳೆಂದೇ ಖ್ಯಾತಿ ಪಡೆದವು. ಈಕೆ ಫ್ರಾನ್ಸ್ ದೇಶದವಳು. ಫ್ರೆಂಚ್ ಭಾಷೆಯಲ್ಲಿ ಬಾತುಕೋಳಿಗಳನ್ನು ಸಾಂಕೇತಿವಾಗಿ ಬಳಸಿ ಮಾನವ ಬದುಕಿನ ಜೊತೆಗೆ ವಿಶಿಷ್ಟ ಅನುಸಂಧಾನತೆಗಿಳಿಯುವ ಈಕೆಯ ಕಥೆಗಳು ಆಧುನಿಕೋತ್ತರ ಇಂಗ್ಲೀಷ ಭಾಷೆಯಲ್ಲಿ ಅನುವಾದಗೊಂಡು 'History of tails of past times' ಎಂಬ ಹೆಸರಿನಲ್ಲಿ ೧೭೨೯ರ ವೇಳೆಗೆ ರೂಪಾಂತರಗೊಂಡವು. ಈ ಕಥೆಗಳ ೨ನೇ ಭಾಗವು ಶೇಕ್ಸ್‌ಪಿಯರನು ಮಕ್ಕಳಿಗಾಗಿ ಬರೆದ ಹಾಡುಗಳು ಎನ್ನುವ ರೀತಿಯಲ್ಲಿ ಪಾಶ್ಚಾತ್ಯ ಮಕ್ಕಳ ಸಾಹಿತ್ಯ ಕ್ಷೇತ್ರ ಸ್ವೀಕರಿಸಿತು. ಈಕೆ ಮೌಖಿಕ ಪರಂಪರೆಯ ಮೂಲಕ ಕಟ್ಟಿದ ಕಥೆಗಳು ಹಾಡಾಗಿ ಪರಿವರ್ತನೆಗೊಂಡು

''Old mother goose
when she wanted to wander
would ride thought the air
on a very tine gander''[೩]

ಎಂದು ರೂಪಾಂತರಗೊಂಡವು. ಆಕೆಯಿಂದ ಪ್ರೇರಣೆಗೊಂಡು ಖ್ಯಾತಿ ಪಡೆದ 'Mother hubbard' ಎನ್ನುವ ಮಕ್ಕಳ ಪದ್ಯ

''Old mother hubbard
went to the cupboard
to fetch her poor dog a bone''[೪]

ಎಂದು ಪ್ರಕಟವಾಯಿತು. ಇದನ್ನು ೧೮೦೫ರಲ್ಲಿ ಜಾನ್ ಹ್ಯಾರೀಸ್ ಪ್ರಕಟಿಸಿದ ಪಾಶ್ಚಾತ್ಯ ಮಕ್ಕಳ ಕಾವ್ಯ ಪರಂಪರೆ ಉಲ್ಲೇಖಿಸುವ 'Mother' ಸಾಮಾನ್ಯವಾಗಿ ಹಳ್ಳಿಗಾಡಿನ ವೃದ್ಧ ಮಹಿಳೆಯನ್ನು ಕುರಿತು ಸಂಬೋಧಿಸುವ ಶೈಲಿಯದ್ದಾಗಿದೆ. ಪಾಶ್ಚಾತ್ಯ ಮಕ್ಕಳ ಜಗತ್ತು ಸಾಮಾನ್ಯವಾಗಿ ಕೌಟುಂಬಿಕ ಪ್ರೀತಿಯಿಂದ ವಂಚಿತವಾಗಿರುವ ಲೋಕ ಎಂಬುದನ್ನು ನಾವು ಇಂದಿಗೂ ಗಮನಿಸಬಹುದು. ಮಕ್ಕಳಿಗಾಗಿ ರಚನೆಯಾದ ಪಾಶ್ಚಾತ್ಯ ಕಥೆ, ಕವನ ಮತ್ತು ನಾಟಕ ಜನಪದೀಯ ಪರಂಪರೆ 'Mother' ಎನ್ನುವ ಹೆಸರಿನಲ್ಲಿ ಕಾಣಿಸಿಕೊಂಡಿದೆ.

ಮೌಖಿಕ ಪರಂಪರೆಯ ಜನಪದ ಕವಿಯೊಬ್ಬ 'The ant and the cricket' ಎನ್ನುವ ಕವನದಲ್ಲಿ

'A silly young cricket
Accustomed to sing

Through the warn, sunny month of gay
Summer and spring
The degan to began to complain, when
he found that at home
his copboard was MJ and winter was come"[೫]

ಇರುವೆ ಮತ್ತು ಮಿಡತೆಗಳ ಜೀವನ ಚಿತ್ರಣವನ್ನು ಕಟ್ಟಿಕೊಡುವ ಮೂಲಕ ಅನಾಮಧೇಯ ಜನಪದ ಕವಿಯೊಬ್ಬರ ಈ ಕಥೆಯಲ್ಲಿ ಇರುವೆಗಳ ಶ್ರಮಜೀವಿಗಳಾಗಿದ್ದವು. ಆದರೆ ಮಿಡತೆಗಳು ಶುದ್ಧ ಸೋಮಾರಿಗಳಾಗಿದ್ದವು. ಇವು ಉದಾಸೀನತೆಯ ಸಂಕೇತಗಳಾಗಿವೆ. ಸುಗ್ಗಿಯ ಕಾಲದಲ್ಲಿ ಆಹಾರ ಸಂಗ್ರಹ ಮಾಡಿಟ್ಟುಕೊಳ್ಳದೇ ಭಿಕ್ಷೆ ಬೇಡಿ ಬದುಕುವ ಹೀನಾಯ ಸ್ಥಿತಿಯನ್ನು ತಂದುಕೊಳ್ಳುತ್ತವೆ. ಆದರೆ ಇರುವೆಗಳ ಸರಿಯಾದ ಸಮಯಕ್ಕೆ ಅಗತ್ಯವಾದ ಆಹಾರ ಸಂಗ್ರಹವನ್ನು ಮಾಡಿಕೊಂಡಿದ್ದವು. ಇವುಗಳಂತೆಯೇ ಮನುಷ್ಯನಾದವನು ಸಹ ಯಾವ ಯಾವ ಸಂದರ್ಭದಲ್ಲಿ ಏನೇನು ಮಾಡಬೇಕು, ಆ ಕೆಲಸಗಳನ್ನು ಮಾಡಿದಾಗ ಮಾತ್ರ ಸುಖದಿಂದ ಬದುಕಲು ಸಾಧ್ಯ ಎಂಬ ಸಂದೇಶವನ್ನು ನೀಡುತ್ತದೆ.

ಹೀಗೆ ಈ ಪಾಶ್ಚಾತ್ಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಎನ್ನುವ ಈ ಭಾಗದಲ್ಲಿ ಮಕ್ಕಳ ಸಾಹಿತ್ಯ ಪ್ರಜ್ಞೆಗಳನ್ನು ಒಳಗೊಂಡ ತಾತ್ವಿಕವಾದ ಚರ್ಚೆಯನ್ನು ಮಾಡಲಾಗಿದೆ.

ಭಾರತೀಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ

ವಿವಿಧತೆಯಲ್ಲಿ ಏಕತೆಯನ್ನು ಕಾಣುವ ವೈವಿಧ್ಯಪೂರ್ಣ ಭಾರತೀಯ ಭಾಷೆಗಳು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ಮಹತ್ವಪೂರ್ಣ ಪ್ರಾಮುಖ್ಯತೆಯನ್ನು ಕೊಡುತ್ತಾಬಂದಿದೆ. ಮಕ್ಕಳ ಕಥೆ, ಕವನ, ಕಾದಂಬರಿ, ನಾಟಕ ಮೊದಲಾದ ಪ್ರಕಾರಗಳಲ್ಲಿ ರಚನೆಯಾಗಿವೆ. ಉರ್ದು, ಒರಿಯಾ, ಕನ್ನಡ, ಅಸ್ಸಾಮಿ, ಮಲಯಾಳಿ, ತೆಲುಗು, ಸಂಸ್ಕೃತ, ಕಾಶ್ಮೀರ, ಓರಿಯಾ, ಕೊಂಕಣಿ, ಗುಜರಾತಿ, ತಮಿಳು, ಪಂಜಾಬಿ, ಬೆಂಗಾಲಿ, ಮರಾಠಿ, ಸಿಂಧಿ ಮತ್ತು ಹಿಂದಿ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯದ ವಿವಿಧ ಸಾಹಿತ್ಯಿಕ ಪ್ರಕಾರಗಳು ಹೇರಳವಾಗಿ ಲಭ್ಯವಿದೆ. ಒಂದು ದೇಶದ ಇತಿಹಾಸ ಮಕ್ಕಳಿಗೆ ಪ್ರಾಮುಖ್ಯತೆ ಕೊಡದೆ ಹೋದರೆ ಆ ದೇಶವು ಬೌದ್ಧಿಕ ಗುಲಾಮಗಿರಿಗೆ ಈಡಾಗುತ್ತದೆ. ಮಕ್ಕಳು ದೇಶದ ಜೀವನಾಡಿ, ಮಕ್ಕಳ ಅಭಿವೃದ್ಧಿಯ ಮೇಲೆ ದೇಶದ ಅಭಿವೃದ್ಧಿ ನಿಂತಿರುತ್ತದೆ ಎನ್ನುವ ಮಾತುಗಳನ್ನು ಒಪ್ಪುವುದಾದರೆ, ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಅವರದೇ ಮನಸ್ಥಿತಿ ಮತ್ತು ಅಭಿಲಾಷೆಗಳನ್ನು ವ್ಯಕ್ತಪಡಿಸುವ ಮಕ್ಕಳೇ ಸ್ವಂತ ರಚಿಸಿದ ಸಾಹಿತ್ಯ ಮತ್ತು ಮಕ್ಕಳಿಗಾಗಿ ದೊಡ್ಡವರು ರಚಿಸಿದ ಸಾಹಿತ್ಯವಿದೆ. ಈ ಮಕ್ಕಳ ಸಾಹಿತ್ಯ ಕುರಿತು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂದಿಗೂ ಚರ್ಚೆಗಳು ನಡೆಯುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಭಾರತದ ಹಲವಾರು ರಾಜ್ಯಗಳು ಮಕ್ಕಳ ಅಭಿವೃದ್ಧಿ ಮತ್ತು ಸಾಹಿತ್ಯ ರಚನೆಗಾಗಿ ಅಕಾಡೆಮಿಗಳನ್ನು, ಕಲ್ಯಾಣ ಇಲಾಖೆಗಳನ್ನು ತೆರೆದಿವೆ. ಉದಾಹರಣೆಗೆ ಕೊಲ್ಕತ್ತಾದ ರವೀಂದ್ರನಾಥ ಬಾಲಭವನ, ಪುಣೆಯ ಬಾಲಮಂಡಲ ಮತ್ತು ಬಾಲವಿಕಾಸ ಸಂಸ್ಥೆಗಳು, ಮದರಾಸಿನ ಕನ್ನಿಮರಾ ಗ್ರಂಥಾಲಯ, ಹೈದ್ರಬಾದಿನ ಬಾಲ ಅಕಾಡೆಮಿ, ಕರ್ನಾಟಕದ ಬಾಲವಿಕಾಸ ಅಕಾಡೆಮಿ ಅಲ್ಲದೆ ಮಂಗಳೂರಿನ 'ಬಾಲಭವನ', ಬೆಂಗಳೂರಿನ 'ಮಕ್ಕಳಕೂಟ' ಮೊದಲಾದವುಗಳನ್ನು ಹೆಸರಿಸಬಹುದು.

ಈ ಎಲ್ಲ ವಿಷಯಗಳ ಮಧ್ಯ ಯಾವುದೇ ಭಾಷೆಯವರಲ್ಲೂ ಮಕ್ಕಳ ಸಾಹಿತಿಗಳಿಗೆ ಸಾಕಷ್ಟು ಮನ್ನಣೆ, ಪ್ರೋತ್ಸಾಹ ಸಿಗದಿರುವುದು ವಿಷಾದವೆನಿಸಿದರೂ, ಇಂತಹ ಸ್ಥಿತ್ಯಂತರ ಸಮಯದಲ್ಲಿಯೇ ಮಕ್ಕಳ ಸಾಹಿತ್ಯ ರಚನೆಯಾಗುತ್ತಿರುವುದು, ಬೆಳೆಯುತ್ತಿರುವುದು ಹರ್ಷದಾಯಕವಾಗಿದೆ. ಅಲ್ಲದೆ ಮುಖ್ಯವಾಗಿ ಭಾರತೀಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯದಲ್ಲಾಗಿರುವ ರಚನೆ, ಬೆಳವಣಿಗೆಗಳನ್ನು ಕುರಿತು ಹೇಳುವುದಾದರೆ ಈಗಾಗಲೇ ಮೇಲೆ ಹೇಳಿರುವಂತೆ ಸುಮಾರು ಹದಿನಾರು ಭಾರತದ ವಿವಿಧ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ ರಚನೆಯಾಗಿರುವ ವಿಷಯವನ್ನು ಡಾ. ನಿರುಪಮಾರವರು ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೪ರಲ್ಲಿ ಪ್ರಕಟಿಸಿರುವ 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' ಕೃತಿಯಲ್ಲಿ ವಿವರಣಾತ್ಮಕವಾದ ದಾಖಲಾತಿಗಳನ್ನು ನೀಡುತ್ತಾರೆ. ಆಧುನಿಕ, ಆಧುನಿಕೋತ್ತರ ಭಾರತದಲ್ಲಿ ರಚನೆಯಾದ ಮಕ್ಕಳ ಸಾಹಿತ್ಯದಲ್ಲಿ ಆಧುನಿಕ ಕಾಲ ವೈಜ್ಞಾನಿಕ, ವೈಚಾರಿಕ ಸಾಹಿತ್ಯ ಸೃಷ್ಟಿಗೆ ಮಹತ್ವವನ್ನು ನೀಡಿದರೆ ಆಧುನಿಕ ಪೂರ್ವ ಮಕ್ಕಳ ಸಾಹಿತ್ಯ ಪೌರಾಣಿಕ ಮತ್ತು ಐತಿಹಾಸಿಕ ಸಂಗತಿಗಳಿಗೆ ಮಹತ್ವ ನೀಡಿರುವುದನ್ನು ಗುರುತಿಸಬಹುದು. ಪ್ರಸ್ತುತವಾಗಿ ಈ ಅಧ್ಯಾಯಕ್ಕಾಗಿ ರಾಷ್ಟ್ರೀಯ ಭಾಷಾ ಸ್ಥಾನಮಾನವನ್ನು ಪಡೆದ ಹಿಂದಿ ಭಾಷೆ, ಉತ್ತರ ಭಾರತದ ಮರಾಠಿ ಮತ್ತು ಅಸ್ಸಾಮಿ ಹಾಗೂ ದಕ್ಷಿಣ ಭಾರತದ ತಮಿಳು ಮತ್ತು ತೆಲುಗು ಭಾಷೆಗಳನ್ನು ಮಾತ್ರ ಪ್ರಾತಿನಿಧಿಕವಾಗಿ ಆಯ್ದುಕೊಂಡು ಈ ಭಾಗದ ಮಕ್ಕಳ ಸಾಹಿತ್ಯದ ಪರಿಚಯವನ್ನು ಮಾಡಿಕೊಳ್ಳುವ ಪ್ರಯತ್ನವಾಗಿದೆ.

ಹಿಂದಿ ಭಾಷೆಯಲ್ಲಿ ಮಕ್ಕಳ ಸಾಹಿತ್ಯ

ಭಾರತೀಯ ಭಾಷೆಯಲ್ಲಿಯೆ ಇಂಡೋ-ಆರ್ಯನ್ ಭಾಷಾ ವರ್ಗಕ್ಕೆ ಸೇರಿದ ಹಿಂದಿ ಭಾಷೆ ಹಲವಾರು ಅಪಭ್ರಂಶ ಭಾಷೆಗಳನ್ನು ಒಳಗೊಂಡಿದ್ದು, ಶೌರಸೇನಿ ಅಪಭ್ರಂಶದ ಜೊತೆಗೆ ಪ್ರಾಚೀನ ಪ್ರಾದೇಶಿಕ ಆಡು ಭಾಷೆಗಳಾಗಿದ್ದ ಮೈಥಿಲಿ, ರಾಜಸ್ಥಾನ, ಖಡಿಬೋಲಿ ಮೊದಲಾದ ಭಾಷೆಗಳ ಸಮ್ಮಿಶ್ರಣದಲ್ಲಿ ಹುಟ್ಟಿದ ಭಾಷೆ ಹಿಂದಿಯಾಗಿದೆ. ನಂತರ ಮೊಗಲರ ಆಳ್ವಿಕೆಯಲ್ಲಿ ಅರಬಿಕ್, ಉರ್ದು, ಪರ್ಶಿಯನ್ ಭಾಷೆಯ ಪದಗಳೂ ಹಿಂದಿಯಲ್ಲಿ ಸೇರಿಕೊಂಡಿವೆ.

ನಮಗೆ ದೊರೆತ ಮಾಹಿತಿಯಿಂದ ಹಿಂದಿಯಲ್ಲಿ ಮಕ್ಕಳ ಸಾಹಿತ್ಯದ ಆರಂಭ ೧೯ನೇ

ಶತಮಾನದ ಮಧ್ಯಭಾಗದಲ್ಲಿ ಎನ್ನಬಹುದು. ಆಗಿನ ಸಂಯುಕ್ತ ಪ್ರಾಂತ್ಯಗಳಲ್ಲಿ ಶಾಲಾ ಆಳ್ವಿಕೆಯನ್ನು ಮಾಡುತ್ತಿದ್ದ ರಾಜಾಶಿವಪ್ರಸಾದ್, ಸಿತಾರೆ ಹಿಂದ್, ಅವರು ಮಕ್ಕಳಿಗಾಗಿ ಹಲವಾರು ಪುಸ್ತಕಗಳನ್ನು ರಚಿಸಿದರು. ಅವರಲ್ಲಿ ೧೮೬೭ರಲ್ಲಿ ಬಂದ ಬಚ್ಚೋಂಕಿ ಕಹಾನಿ ಮತ್ತು 'ಲಡ್ಕೋಯೇ ಕಹಾನಿ' ಪ್ರಸಿದ್ಧವಾದವುಗಳು. ೧೮೫೧ರಲ್ಲಿ ಪಂಡಿತ್ ಬದರೀಲಾಲ್‌ರವರೂ, ೧೮೧೨ರಲ್ಲಿ ಬಂದ 'ರಾಜ ನೀತಿ' ಎಂಬ ಹೆಸರಿನಡಿಯಲ್ಲಿ 'ಹಿತೋಪದೇಶ್'ನಲ್ಲಿಯ ಕಥೆಗಳನ್ನು ಹಿಂದಿಗೆ ಅನುವಾದಿಸಿದರು. ನಂತರ ೧೯೧೪-೧೯೧೫ರಲ್ಲಿ ಕ್ರಮವಾಗಿ ಬಂದ 'ವಿದ್ಯಾರ್ಥಿ', ಶಿಶು ಮತ್ತು ಬಾಲಸಖಿ ಎಂಬ ನಿಯತಕಾಲಿಕೆಗಳು ಮಕ್ಕಳಿಗಾಗಿಯೇ ರಚಿತವಾದ ಪ್ರಸಿದ್ಧ ನಿಯತಕಾಲಿಕೆಗಳು ಎನಿಸಿದವು. ನಂತರ ರಾಮ್‌ನರೇಶ್ ತ್ರಿಪಾಠಿಯವರು 'ಬಾಲಕಾಂತ ಕಹಾನಿಯ' ಕೃತಿಯಲ್ಲಿ ಮಕ್ಕಳಿಗಾಗಿ ಬರೆದ ಪ್ರಸಿದಧ ಕವನಗಳಿವೆ. ಇದು ಹಲವಾರು ಬಾರಿ ಮರು ಮುದ್ರಣವನ್ನು ಕಂಡ ಕೃತಿಯಾಗಿದೆ. ಈ ಅವಧಿಯಲ್ಲಿಯೇ ಮಕ್ಕಳ ಸಾಹಿತ್ಯವು ಸಮೃದ್ಧವಾಗಿ ಸೃಷ್ಠಿಯಾಗಿ ಮಕ್ಕಳ ನಗು ಮತ್ತು ನಲಿವಿಗಾಗಿ ಹೊಸ ಹೊಸ ಬಗೆಯ ಕಥೆಗಳು ಮತ್ತು ಕವನಗಳು ರಚನೆಯಾದವು. ಇದರಲ್ಲಿ ಜಾನಪದ ಕಥೆಗಳ ಪೈಕಿ ಆಸಕ್ತಿದಾಯಕವಾದ ಹಾಡುಗಳನ್ನು, ಕಥೆಗಳನ್ನಾಗಿ ಪರಿವರ್ತಿಸಿ, ಪ್ರಾಣಿ-ಪಕ್ಷಿಗಳ ಸಾಮ್ರಾಜ್ಯವನ್ನು ಮನುಷ್ಯ ಪ್ರಪಂಚವೆಂಬಂತೆ ಪರಿಚಯಿಸಿ ಬರೆಯಲಾಯಿತು. ನಂತರ ೧೯೫೦ರ ನಂತರ ಮಕ್ಕಳ ಸಾಹಿತ್ಯವು ತನ್ನ ಹೊಸ ದಾರಿಯನ್ನು ಕಂಡುಕೊಂಡಿತು. ಜೊತೆಗೆ ಮಕ್ಕಳ ವಯೋಗುಣಕ್ಕೆ ಅನುಗುಣವಾಗಿ ಸಾಹಿತ್ಯ ರಚನೆಯ ಅಗತ್ಯವಿದೆ ಎಂದು ಅವರ ನೆಲೆಯಲ್ಲಿಯೇ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿತು.

ಮರಾಠಿ ಭಾಷೆಯಲ್ಲಿ ಮಕ್ಕಳ ಸಾಹಿತ್ಯ

ಇತರೇ ಭಾಷೆಗಳಂತೆಯೇ ಈ ಭಾಷೆಯ ಮಕ್ಕಳ ಸಾಹಿತ್ಯದ ಇತಿಹಾಸ ಕ್ರಿ.ಶ. ೫೭೦ರ ಕಾಲದ 'ಪಂಚತಂತ್ರ'ದಿಂದಲೇ ಆರಂಭವಾಗುತ್ತದೆ. ವಿವಿಧ ರೀತಿಯ ಪ್ರಾಣಿಗಳ ಕಥೆಗಳನ್ನೊಳಗೊಂಡ ಈ ಕೃತಿಯಲ್ಲಿ ಬಹುದಿನಗಳವರೆಗೂ ನೆನಪಿನಲ್ಲಿರಬಹುದಾದ ಹಲವಾರು ಘಟನೆಗಳಿದ್ದು ಇದರಲ್ಲಿನ ನೀತಿಯು ಮಕ್ಕಳ ಮನಸ್ಸಿನಲ್ಲಿ ನಿಲ್ಲುವಂತಿದೆ. ಹೀಗಾಗಿ ಇದು ಮಕ್ಕಳ ಸಾಹಿತ್ಯದ ಪ್ರಮುಖ ಕೃತಿಯಾಗಿದೆ. ಇದೇ ಕಾರಣಕ್ಕಾಗಿಯೇ ಈ ಕೃತಿ ಹಲವು ಭಾಷೆಗಳಿಗೆ ಅನುವಾದಗೊಂಡಿದೆ.

ಕ್ರಿ.ಶ. ೧೮೨೨ರ ವೇಳೆಗೆ ಮಹಾರಾಷ್ಟ್ರದಲ್ಲಿ 'ಮುಂಬಯಿ ಶಿಕ್ಷಣ ಮಂಡಲಿ' ಎಂಬ ಶಿಕ್ಷಣ ಸಂಸ್ಥೆಗಳು ಆರಂಭವಾಗಿ ಮಕ್ಕಳಿಗಾಗಿ ಶಾಲೆಗಳನ್ನು ತೆರೆದರು. ೧೮೩೦ರಲ್ಲಿ 'ಛಾತ್ರೆ ವೇತಾಳ'ರು 'ಪಂಚವಿಶಲೆ'ಯನ್ನು ಸಂಸ್ಕೃತದಿಂದ ಮರಾಠಿಗೆ ಅನುವಾದಿಸಿದರು. ನಂತರ ತಾರಾಚಂದದತ್ತರು ಬರೆದ 'ಬೋಧಕಥಾ' ಎಂಬ ಮಕ್ಕಳ ಕಥೆಗಳನ್ನು ಮರಾಠಿಗೆ ಅನುವಾದಿಸಿದರು.

೧೮೮೧ರಲ್ಲಿ ವಿಷ್ಣುಶಾಸ್ತ್ರಿ ಚಿಪ್ಳುಕಾರಿಕರ 'ಗಲಿವಾರಂಚ ವೃತ್ತಾಂತ'ವನ್ನು ನಾಲ್ಕು ಭಾಗಗಳಲ್ಲಿ ಬರೆದರು. ಶಾಲಾ ಪಠ್ಯಪುಸ್ತಕಗಿಂತ ಭಿನ್ನವಾಗಿದ್ದು ವಿರಾಮವಿದ್ದಾಗ ಮಕ್ಕಳ ಓದಬಹುದಾದ ಸಾಹಿತ್ಯ ರಚನೆಯನ್ನು ಮಾಡಿದರು. ಇದರ ಕಥೆಗಳಲ್ಲಿ ಹೇಳಿದಂತೆ ನೀತಿಯನ್ನು ಪದೇ ಪದೇ ಹೇಳದೇ ಕುತೂಹಲವನ್ನುಂಟು ಮಾಡುತ್ತಿದ್ದವು. ೧೯೧೯ರಲ್ಲಿ ಕೆ.ಆರ್. ಸಹಸ್ರಬುದ್ದೆ ಅವರು ತಂದ 'ಬಾಲೋದ್ಯಾನ' ಎಂಬ ಮಕ್ಕಳ ಪತ್ರಿಕೆಯು ವರ್ಣರಂಜಿತ ಚಿತ್ರಗಳಿಂದ ಕೂಡಿದ ಪ್ರಾಣಿಗಳ ಕತೆಗಳನ್ನು ಪ್ರಕಟಿಸಿದರು.

ಮಕ್ಕಳ ಸಾಹಿತ್ಯದ ಕವಿತೆಗಳಾಗಲೀ, ಕಥೆಗಳಾಗಲೀ ಅವುಗಳ ಪ್ರಾಸ, ನಾದ, ಲಯ, ಅನುರಣನ ಶಕ್ತಿಗಳಿಂದ ಎಲ್ಲಾ ಭಾಷೆಗಳಲ್ಲಿಯೂ ಹೆಚ್ಚಾಗಿ ರಚನೆಯಾಗಿರುವಂತೆ ಮರಾಠಿಯಲ್ಲಿಯೂ ಇವೆ. ಉದಾ.

"ಚೆಂದೋ ಬಾ ಚೆಂದೋ ಭಾಗ್‌ಲಾಸ್ ಕಾ?

ಇತಾ ಈಸಾ ಬೈಸೆ ರೇ ಮೋರಾ"[೬]

ಈ ತರದ ಕನ್ನಡದ ಪದ್ಯಗಳೆಂದರೆ 'ಚಂದಮಾಮ, ಚಕ್ಕುಲಿ ಮಾಮಾ' ಮೊದಲಾದವು.

ನಂತರದ ಅವಧಿಯಲ್ಲಿ ಮಕ್ಕಳ ಬದುಕಿಗೆ ಸ್ಫೂರ್ತಿ ತುಂಬುವಂತೆ ಶ್ರೇಷ್ಠ ವ್ಯಕ್ತಿಗಳ ಜೀವನ ಚಿತ್ರಣಗಳನ್ನು ಕೊಡುವ 'ಫ್ಲಾರೆನ್ಸ್ ನೈಟಿಂಗೇಲ್', 'ಕ್ವೀನ್ ವಿಕ್ಟೋರಿಯಾ' 'ಅಹಿಲ್ಯಾದೇವಿ' 'ಆನಂದಿಬಾಯಿ', ತಾರಾಮತಿ ಮೊದಲಾದ ಸಾಧಕರ ಜೀವನ ಚರಿತ್ರೆಗಳ ಕುರಿತು ಹಲವಾರು ಪುಸ್ತಕಗಳು ಹೊರಬಂದವು.

ಅಸ್ಸಾಮಿ ಭಾಷೆಯಲ್ಲಿ ಮಕ್ಕಳ ಸಾಹಿತ್ಯ

ಅಸ್ಸಾಮಿ ಸಾಹಿತ್ಯ ಚರಿತ್ರೆಯನ್ನು ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿಭಾಗಿಸಿರುವಂತೆಯೇ ನಾಲ್ಕು ಭಾಗಗಳಾಗಿ ವಿಭಾಗಿಸಿ, ಕ್ರಿ.ಶ. ೧೨೦೦ ರಿಂದ ೧೪೫೦ ಮೊದಲ ಯುಗವಾಗಿದ್ದು ಇದಕ್ಕೆ ವೈಷ್ಣವ ಪೂರ್ವಯುಗವೆಂದು, ಕ್ರಿ.ಶ. ೧೪೫೦ ರಿಂದ ೧೬೫೦ರ ವರೆಗಿನ ಎರಡನೇ ಯುಗವನ್ನು ವೈಷ್ಣವ ಯುಗವೆಂದು, ೧೬೫೦ ರಿಂದ ೧೮೩೦ರವರೆಗಿನ ಯುಗವನ್ನು ಮಧ್ಯ ಅಸ್ಸಾಮಿ ಯುಗವೆಂದು ೧೮೩೦ ರಿಂದ ಆರಂಭವಾದ ಯುಗವನ್ನು ಆಧುನಿಕ ಅಸ್ಸಾಮಿ ಯುಗವೆಂದು ವರ್ಗೀಕರಿಸಲಾಗಿದೆ.

ಈ ಅಸ್ಸಾಮಿ ಭಾಷೆಯಲ್ಲಿ ವೈಷ್ಣವ ಪೂರ್ವಯುಗ (ಕ್ರಿ.ಶ. ೧೨೦೦-೧೪೫೦) ಈ ವೈಷ್ಣವ ಪಂಥದ ಮೊಟ್ಟಮೊದಲ ಹರಿಕಾರ 'ಶಂಕರದೇವ' ಈತ ಎಲ್ಲ ವರ್ಗದ ಜನರೂ ಭಗವಂತನ ದೃಷ್ಟಿಯಲ್ಲಿ ಒಂದೇ, ಹರಿಭಕ್ತಿಗೆ ಎಲ್ಲರೂ ಅರ್ಹರು ಎಂದು ಸಾರಿದೆ. ಈತ ಜನಸಾಮಾನ್ಯರಿಗೆ ಅರ್ಥವಾಗುವಂತ ಕೃಷ್ಣನ ಬಾಲಲೀಲೆಗಳನ್ನು ಹಾಡುವ ಮೂಲಕ ಹಲವಾರು

ಪದ್ಯಗಳನ್ನು ಹೇಳಿದೆ. ಈತ ಮಕ್ಕಳಿಗಾಗಿ ಎಂದು ಪ್ರತ್ಯೇಕವಾಗಿ ರಚಿಸದಿದ್ದರೂ ಆತನ ಸಾಹಿತ್ಯ ಸಮೂಹದಲ್ಲಿ ಇಂದಿಗೂ ಮಕ್ಕಳಿಗೆ ಪ್ರಿಯವಾದ ಸಾಹಿತ್ಯವೆನಿಸಿದೆ.

ಜೊತೆಗೆ ಪ್ರಾಚೀನ ಅಸ್ಸಾಮಿ ಜಾನಪದ ಸಾಹಿತ್ಯವು ಜೀವನದ ವಿವಿಧ ಘಟ್ಟಗಳನ್ನು ಪ್ರತಿಬಿಂಬಿಸುವ ಜೀವಂತ ಸಾಹಿತ್ಯವಾಗಿ ಹಿರಿಯರ ಮತ್ತು ಮಕ್ಕಳ ಪ್ರಿಯ ಸಾಹಿತ್ಯವಾಗಿದೆ. ಇವುಗಳಲ್ಲಿ ಲಾವಣಿಗಳಿಂದ 'ಫೂಲ್ ಕುನ್ಯೆರ್' ಮತ್ತು 'ಮೋನಿ ಕುನ್ಯೆರ್' ಇಂದಿಗೂ ಮಕ್ಕಳ ನಾಲಿಗೆ ಮೇಲೆ ನಲಿದಾಡುತ್ತವೆ.

ಅಸ್ಸಾಮಿನಲ್ಲಿ ಮಕ್ಕಳಿಗಾಗಿ ಬರೆಯುವವರಲ್ಲಿ 'ರಾಮ ಸರಸ್ವತಿ' ಪ್ರಮುಖರು. ಇವರು ಮಹಾಭಾರತವನ್ನು ಅಸ್ಸಾಮಿ ಭಾಷೆಗೆ ಅನುವಾದಿಸಿದವರಲ್ಲಿ ಪ್ರಮುಖರು. ೧೮೪೬ರಲ್ಲಿ 'ಅರುಣೋದಯ' ಎಂಬ ಮಾಸ ಪತ್ರಿಕೆಯಲ್ಲಿ ಮಕ್ಕಳಿಗಾಗಿ ಬೈಬಲಿನ ಕಥೆಗಳನ್ನು ಪ್ರಕಟಿಸಿತು. ಕ್ರಿ.ಶ. ೧೯೧೧ರಲ್ಲಿ 'ಲಕ್ಷ್ಮೀಕಾಂತ ಬಿಜ್' ಅವರು ಅನೇಕ ಜಾನಪದ ಕಥೆಗಳನ್ನು ಮಕ್ಕಳಿಗಾಗಿ ಸಂಗ್ರಹಿಸಿದರು. ಅವುಗಳಲ್ಲಿ ಪ್ರಮುಖವೆಂದರೆ 'ಬುರಿಯೇರ್ ಸಾಧು', 'ಕವಲ್‌ದ್ಯೂತ ನಟಿಲಾರಾ' ಮೊದಲಾದವು.

ಇತ್ತೀಚಿಗೆ ಅಸ್ಸಾಂ ಪ್ರಕಟಣಾ ಸಂಸ್ಥೆ ೫ ರಿಂದ ೯ ಮತ್ತು ೯ ರಿಂದ ೧೫ ಎಂಬ ಎರಡು ವರ್ಗದ ಮಕ್ಕಳಿಗಾಗಿ ಪುರಾಣ ಕಥೆಗಳನ್ನು, ಹಿತೋಪದೇಶ, ಪಂಚತಂತ್ರ ಮೊದಲಾದವುಗಳನ್ನು ಪ್ರಕಟಿಸಿದೆ. ಜೊತೆಗೆ ಪ್ರಪಂಚದಲ್ಲಿ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಆದರ್ಶ ಪುರುಷರ, ಮಹನೀಯರ ಜೀವನ ಚರಿತ್ರೆಗಳು ಮಕ್ಕಳ ಚಾರಿತ್ರ್ಯವನ್ನು ರೂಪಿಸುವಲ್ಲಿ ಪ್ರಮುಖವು ಎನ್ನುವುದಕ್ಕಾಗಿ ಹಲವಾರು ಲೇಖಕರುಗಳು ಬರೆದ ಜೀವನ ಚರಿತ್ರೆಗಳು ಮಕ್ಕಳ ಸಾಹಿತ್ಯದಲ್ಲಿ ಪುಸ್ತಕಗಳಾಗಿ ಪ್ರಕಟಣೆಗೊಂಡಿವೆ.

ಉದಾ. ಮಹದೇವ ಶರ್ಮರ, 'ಬಾಪೂಜಿ', ಶರತ್‌ಚಂದ್ರ ಗೋಸ್ವಾಮಿ ಅವರ 'ಸಾಕ್ರಟೀಸ್', 'ಪ್ಲೇಟೋ', ಅರಿಸ್ಟಾಟಲ್, ಹಾರೂನ್ ರಷಿದ್‌ರವರ 'ಮಹಾತ್ಮಗಾಂಧಿ', ಮಾರ್ಕೋ ಪೋಲೋ ಮೊದಲಾದವು.

ತೆಲುಗು ಭಾಷೆಯಲ್ಲಿ ಮಕ್ಕಳ ಸಾಹಿತ್ಯ

ದಕ್ಷಿಣ ಭಾರತದ ಪ್ರಮುಖ ಭಾಷೆಗಳಲ್ಲಿ ತೆಲುಗು ಒಂದು ಪ್ರಮುಖ ಭಾಷೆಯಾಗಿದೆ. ತೆಲುಗು ಸಾಹಿತ್ಯವನ್ನು ಸಾಮಾನ್ಯವಾಗಿ ಆರು ಯುಗಗಳಾಗಿ ವಿಂಗಡಿಸಿದ್ದಾರೆ. ೧. ನನ್ನಯ್ಯ ಪೂರ್ವಯುಗ (ಕ್ರಿ.ಶ. ೧೦೦-೧೦೨೦), ೨. ಪುರಾಣ ಯುಗ (ಕ್ರಿ.ಶ. ೧೦೨೦-೧೪೦೦), ೩. ಶ್ರೀನಾಥ ಯುಗ (ಕ್ರಿ.ಶ. ೧೪೦೦-೧೫೧೦), ೪. ಪ್ರಬಂಧಯುಗ (ಕ್ರಿ.ಶ. ೧೫೧೦-೧೬೦೦), ೫. ದಾಕ್ಷಿಣಾತ್ಯ ಯುಗ (ಕ್ರಿ.ಶ. ೧೬೦೦-೧೮೨೦) ಮತ್ತು ೬. ಆಧುನಿಕ ಯುಗ (ಕ್ರಿ.ಶ. ೧೮೨೦ ರಿಂದ ಇಂದಿನವರೆಗೂ)

ಈ ತೆಲುಗು ಭಾಷೆಯಲ್ಲೂ ಜಾನಪದ ರಚನೆಗಳೆ ಹೆಚ್ಚಾಗಿವೆ. ಇವು ಲಾಲಿಪಾಟಲು, ಉಗ್ಗುಪಾಟಲು, ಜೋಲಪಾಟಲು ಎಂಬ ಹೆಸರಿನಲ್ಲಿ ಜೋಗುಳದ ಹಾಡುಗಳಿಂದ ಆರಂಭವಾಗಿ ಮಕ್ಕಳ ಬೆಳವಣಿಗೆಯ ಎಲ್ಲ ಹಂತಗಳಲ್ಲಿನ ಮಕ್ಕಳಿಗಾಗಿ ದೊಡ್ಡವರು ಹೇಳುವ ಪದ್ಯಗಳೇ ಹೆಚ್ಚಾಗಿವೆ.

ದಕ್ಷಿಣ ಭಾರತದ ಜಾನಪದ ಕವನಗಳನ್ನು ಚಾರ್ಲ್ಸ್ ಇ. ಗ್ರೋವರ್ ಫೋಕ್ ಸಾಂಗ್ ಆಫ್ ಸೌತ್ ಇಂಡಿಯಾ ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದರು. ನಂತರ ೧೯೦೫ರ ವೇಳೆಗೆ ಇಂಡಿಯನ್ ಆಂಟಿಕ್ವರಿ ಪತ್ರಿಕೆಯಲ್ಲಿ ತೆಲುಗು ಬಾಲಗೀತೆಗಳನ್ನೇ ಪ್ರತ್ಯೇಕ ಗ್ರಂಥ ರೂಪದಲ್ಲಿ ರೋಮನ್ ಲಿಪಿಯಲ್ಲಿ ಪ್ರಕಟಿಸಲಾಯಿತು. ಪ್ರಪ್ರಥಮ ಬಾರಿಗೆ ತೆಲುಗಿನಲ್ಲಿ ಮಕ್ಕಳಿಗೆಂದು ಅಚ್ಚಾದ ಪುಸ್ತಕವೆಂದರೆ ೧೮೯೮ರಲ್ಲಿ ರಾವಿಪಾಟಿ ಗುರುಮೂರ್ತಿ ಶಾಸ್ತ್ರಿ ಅವರು ಬರೆದ 'ವಿಕ್ರಮಾಂಕನ ಕಥೆಗಳು', ತೆಲುಗಿನ ಬಾಲ ವಾಙ್ಮಯ ಬ್ರಹ್ಮರೆನಿಸಿದ ಚಿಂತಾ ದೀಕ್ಷಿತರು ಮಕ್ಕಳಿಗಾಗಿ 'ಬಂಗಾರು ಚಿಲಕ', 'ಶಂಪಾಲತ', 'ಲೀಲಾ ಸುಂದರಿ' ಮೊದಲಾದ ರಂಜನೀಯ ಕಥೆಗಳನ್ನು ಬರೆದರು. ಬಳ್ಳಾರಿಯವರಾದ ರೂಪನಗುಡಿ ನಾರಾಯಣರಾವ್ ಉಪಾಧ್ಯಾಯರು ಮಕ್ಕಳಿಗಾಗಿ 'ಕಥಾಮಣಿ ಪ್ರವಾಳ ಮುಕ್ತಾವಳಿ' ಎಂಬ ಕಥಾ ಸಂಕಲವನ್ನು ಮೂರು ಭಾಗಗಳಲ್ಲಿ ಬರೆದರು. ಅಲ್ಲದೆ ಪುರಾಣ ಪ್ರಸಿದ್ಧ ನಾರಿಯರ ವಿವಾಹ ಕಥೆಗಳನ್ನು 'ಪರಿಣಯ ಕಥಾಮಂಡರಿ'ಯನ್ನು ಅರವಿಂದ ಜೀವನ ಚರಿತ್ರೆ, ಮತ್ತು 'ಬಾಲ ವ್ಯಾಕರಣಮು' ಎಂಬ ಪಠ್ಯಪುಸ್ತಕವನ್ನು ಬರೆದರು. ಮುಂದೆ ೧೯೩೭ರ ಸಮಯಕ್ಕಾಗಲೇ ಮಕ್ಕಳ ಸಾಹಿತ್ಯಾಭಿವೃದ್ಧಿಗಾಗಿ ಹಲವು ಬಾಲಸಂಸ್ಥೆಗಳು, ಬಾಲನಂದ ಸಂಘಗಳು ಸ್ಥಾಪಿಸಲ್ಪಟ್ಟವು. ಇದರಲ್ಲಿ ಮಕ್ಕಳ ಕಥೆಗಳು, ಗೀತೆಗಳು, ಆಟಗಳು, ಕಿರುನಾಟಕಗಳ ಮೊದಲಾದವುಗಳನ್ನು ಮಕ್ಕಳಿಗಾಗಿ ಕಲಿಸಲಾಗಿತ್ತು.

ತಮಿಳು ಭಾಷೆಯಲ್ಲಿ ಮಕ್ಕಳ ಸಾಹಿತ್ಯ

ಕ್ರಿಪೂ. ೩ನೇ ಶತಮಾನದಿಂದಲೇ ತಮಿಳು ಸಾಹಿತ್ಯವು ರಚನೆಯಾಗಿರುವುದನ್ನು ಕಾಣುತ್ತೇವೆ. ಈ ಸಾಹಿತ್ಯಕ್ಕೆ 'ಸಂಗಂ ಸಾಹಿತ್ಯ ಯುಗ'ವೆಂತಲೂ ಕರೆಯಲಾಗುತ್ತದೆ. ತಮಿಳು ಭಾಷೆಯಲ್ಲಿ ಕ್ರಿ.ಪೂ. ೫ನೇ ಶತಮಾನದಿಂದಲೇ ಮಕ್ಕಳಿಗಾಗಿ ಸಾಕಷ್ಟು ಜಾನಪದ ಸಾಹಿತ್ಯವಿತ್ತೆಂದು ತೊಲ್ಕೂಪಿಯಂನಿಂದ ತಿಳಿದುಬರುತ್ತದೆ.

೧೮೯೯ರ ನಂತರ ತಮಿಳಿನಲ್ಲಿ ಹಲವಾರು ಪ್ರಸಿದ್ಧ ಮಕ್ಕಳ ಪತ್ರಿಕೆಗಳು ಪ್ರಕಟಗೊಳ್ಳತೊಡಗಿದವು. ತಮಿಳು ಭಾಷೆಯಲ್ಲಿ ಅತ್ಯಂತ ಪ್ರಮುಖ ಮಕ್ಕಳ ಬರಹಗಾರರೆಂದರೆ ಭಾರತಿ, ಕವಿಮಣಿ, ಭಾರತಿದಾಸನ್, ವಾಣಿದಾಸನ್ ತಮಿಳ್ ಒಲಿ ಮೊದಲಾದವರು. ಇವರುಗಳಲ್ಲಿ ಭಾರತಿದಾಸನ್‌ರವರು ತಮ್ಮ ಮಕ್ಕಳ ಕವನಗಳಲ್ಲಿ ಹೊಸ ಬಗೆಯ ಛಂದಸ್ಸುಗಳನ್ನು ಪರಿಚಯಿಸಿದರು. ಇನ್ನು ಕವಿಯೋಗಿ ಶುದ್ಧಾನಂದ ಭಾರತಿಯವರ 'ಪಾಪ್ಪಪಾಟ್ಟು' ವಾಣಿದಾಸನ್‌ರವರ 'ಕುಳಂದೈ

ಇಲಕ್ಕಿಯವಂ', ತಮಿಳ್ ಅಳಗನ್‌ರವರ ಮಳಲ್ಯೆ ಅಮುದಂ ಮಿನ್ನೂರ್, ಶ್ರೀನಿವಾಸನ್‌ರವರ ವಣ್ಣ ವಣ್ಣ ವಿನ್‌ಗಳ ಮತ್ತು ಅಲಟ್ಟೂರ್ ಮೋಹನರಂಗಮ್ ರವರ 'ಪೆಳ್ಳಿಪರವ್ಯೆಗಳ್' ಮೊದಲಾದವು ತಮಿಳು ಭಾಷೆಯಲ್ಲಿನ ಪ್ರಸಿದ್ಧ ಮಕ್ಕಳ ಸಾಹಿತ್ಯ ಕೃತಿಗಳೆನಿಸಿವೆ.

ಒಟ್ಟಾರೆಯಾಗಿ ಜಗತ್ತಿನಾದ್ಯಂತ ಮಕ್ಕಳ ಸಾಹಿತ್ಯವನ್ನು ಗಮನಿಸಿದಾಗ ಹಂತ ಹಂತವಾಗಿ ಬದಲಾವಣೆಯನ್ನು ಪಡೆಯುತ್ತಾ ಬಂದಿರುವುದನ್ನು ಕಾಣುತ್ತೇವೆ. ಹೀಗೆ ಮನ್ನಣೆಯನ್ನು ಪಡೆಯುತ್ತಾ ಬಂದ ಮಕ್ಕಳ ಸಾಹಿತ್ಯವನ್ನು ಚಾರಿತ್ರಿಕ ನೆಲೆಯ ತಾತ್ವಿಕತೆಯಲ್ಲಿ ಪಾಶ್ಚಾತ್ಯ, ಭಾರತೀಯ ಮತ್ತು ಕನ್ನಡದ ಸಂದರ್ಭಗಳಲ್ಲಿ ನಡೆದ ಚಿಂತನೆಗಳ ನೆಲೆಯಲ್ಲಿ ಚರ್ಚಿಸಲಾಗಿದೆ.

೩.೧. ಮಕ್ಕಳ ಸಾಹಿತ್ಯದ ಪ್ರಾಚೀನತೆ

ಮಕ್ಕಳ ಸಾಹಿತ್ಯದ ಪರಂಪರೆಗೆ ತನ್ನದೇ ಆದ ಪರಂಪರೆ ಇದೆ. ಮಕ್ಕಳ ಸಾಹಿತ್ಯದ ಹುಟ್ಟು, ಬೆಳವಣಿಗೆಯ ಇತಿಹಾಸವನ್ನು ಪ್ರಾರಂಭದ ದಿನಗಳಲ್ಲಿ ಮಕ್ಕಳ ಸಾಹಿತ್ಯ ನಡೆದು ಬಂದ ದಾರಿಯನ್ನು ಗಮನಿಸಿದಾಗ ಮಾನವ ಜಗತ್ತಿನ ಹುಟ್ಟಿನೊಂದಿಗೆ ಮಕ್ಕಳ ಸಾಹಿತ್ಯ ಹುಟ್ಟಿಕೊಂಡಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಆಗ ತಾನೇ ಹುಟ್ಟಿದ ಕೂಸು ಅಳುವಾಗ ಅದು ವಾತಾವರಣಕ್ಕೆ ಹೊಂದಿಕೊಳ್ಳುವ ಸಲುವಾಗಿ ಅಳುವುದು ಎನಿಸಿದರು ಆ ಅಳು ಮಗುವು ಹೊರಡಿಸುವ ಧ್ವನಿಗೆ ದಾರಿಮಾಡಿಕೊಡುತ್ತದೆ.

ಮಗುವು ಅಳುವಾಗ, ಹಠಮಾಡುವಾಗ ತುಂಟಾಟವಾಡುವಾಗ ಆ ಮಗುವನ್ನು ರಮಿಸಲು ನಿರ್ಮಾಣವಾದ ನಾದಮಯವಾದ, ಲಯಬದ್ಧವಾದ, ಪ್ರಾಸಬದ್ಧವಾದ, ಧ್ವನಿಪೂರ್ಣವಾದ ಅಕ್ಷರಗಳ ರೂಪವೇ ಶಿಶುಸಾಹಿತ್ಯವೆನಿಸುತ್ತದೆ. ಇದು ಬೇರೆ ಬೇರೆ ಪ್ರದೇಶ, ಬೇರೆ ಬೇರೆ ಜನಾಂಗ, ಅವರ ಭಾಷೆ ಅವರ ಪರಿಸರಕ್ಕೆ ಅನುಗುಣವಾಗಿ ಮೂಡಿ ಬರುವಾಗ ಬೇರೆ ಬೇರೆ ಅಕ್ಷರ ರೂಪವನ್ನು ಪಡೆಯುತ್ತದೆ. ಆದರೆ ಇದರ ಉದ್ದೇಶ ನಾದ-ಲಯಗಳ ಮಾತ್ರೆಗಳ ಮೂಲ ಒಂದೇ ಆಗಿರುತ್ತದೆ. ತಾಯಿ ಮಗುವಿಗೆ ಹಾಲುಣಿಸುವಾಗ, ಲಾಲಿಹಾಡುವಾಗ, ಊಟಮಾಡಿಸುವಾಗ, ನಡೆ-ನುಡಿ ಕಲಿಸುವಾಗ ತಾಯಿ ಗುನುಗುವುದೇ ಮಕ್ಕಳ ಸಾಹಿತ್ಯವೆನಿಸಿದೆ. ಈ ಮಕ್ಕಳ ಸಾಹಿತ್ಯದ ಮೂಲ ಉದ್ದೇಶವೇ ಮಕ್ಕಳನ್ನು ಮನೋರಂಜನೆಗೊಳಿಸುವುದು ಅವರನ್ನು ಮುದಗೊಳಿಸುವುದಾಗಿದೆ. ಇಂಥ ಸಾಹಿತ್ಯವನ್ನು ಆಯಾ ಭಾಷೆಯ ಜಾನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಆದರೆ ಅದರಲ್ಲಿ ಇದನ್ನು ಪ್ರತ್ಯೇಕವಾಗಿ ಮಕ್ಕಳ ಸಾಹಿತ್ಯವೆಂದು ಹೇಳಿರುವುದಿಲ್ಲ.

ಕಾಲಕ್ರಮೇಣ ಆಯಾ ಭಾಷೆಯ ಸಾಹಿತ್ಯ ಸೃಷ್ಟಿಯಾಗುತ್ತಾ ಹೋದಂತೆ ಆ ಕಾಲದಲ್ಲಿದ್ದ ಶಿಕ್ಷಣ ಪದ್ಧತಿಗಳಾದ ಗುರುಕುಲ ಪದ್ಧತಿ, ಆಶ್ರಮ ಪದ್ಧತಿಯ ಮೂಲಕ ವಿದ್ಯಾರ್ಜನೆಗಾಗಿ ಬಂದ ಮಕ್ಕಳಿಗೆ ಅಲ್ಲಿದ್ದ ಪಂಡಿತ, ಪಾಮರರು ಅಮರಕೋಶ, ಭಾಗವತ, ರಾಮಾಯಣ

ಮತ್ತು ಮಹಾಭಾರತ ಮೊದಲಾದ ಮಹಾಕಾವ್ಯಗಳಲ್ಲಿನ ಶ್ಲೋಕಗಳನ್ನು ಬಾಯಿಪಾಠ ಮಾಡಿಸುತ್ತಿದ್ದರು. ಆ ಶ್ಲೋಕಗಳ ಅರ್ಥ ಅವರುಗಳಿಗೆ ಆಗಲಿ, ಬಿಡಲಿ ಕಂಠಪಾಠ ಮಾಡಿಸುತ್ತಿದ್ದರು. ಹೀಗೆ ಆರಂಭದಲ್ಲಿ ಬೆಳೆದು ಬಂದ ಸಾಹಿತ್ಯದಲ್ಲಿ ಮಕ್ಕಳಿಗಾಗಿ ನಿರ್ಮಾಣವಾದ ಪ್ರತ್ಯೇಕ ಸಾಹಿತ್ಯವಿರಲಿಲ್ಲ, ಆದರೆ ಪುರಾಣಗಳು, ರಾಮಾಯಣ, ಮಹಾಭಾರತದಂತ ಮಹಾಕಾವ್ಯಗಳಲ್ಲಿ ಮಕ್ಕಳನ್ನು ಕುರಿತು ಅದರಲ್ಲಿ ಬರುವ ಬಾಲಲೀಲೆಗಳನ್ನು ಶೌರ್ಯಸಾಹಸಗಳನ್ನು ವರ್ಣಿಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಕೃಷ್ಣ–ರಾಮರ ಬಾಲಲೀಲೆಗಳು, ಅರ್ಜುನ, ಭೀಮ, ದೃವ ಪ್ರಹ್ಲಾದ, ಮಾರ್ಕಂಡೇಯ ಅಭಿಮನ್ಯು, ಏಕಲವ್ಯ, ಶ್ರವಣಕುಮಾರ ಮೊದಲಾದವರು ಹೀಗೆ ಬಂದ ಈ ಸಾಹಿತ್ಯವನ್ನು ಮಕ್ಕಳಿಗಾಗಿ ಬರೆದ ಸಾಹಿತ್ಯವೆನ್ನಬಹುದು.

ಹಾಗೆಯೇ ಜಾನಪದದ ಶೈಲಿಯಲ್ಲಿ ಲಯಬದ್ಧವಾಗಿ ಹೇಳುತ್ತಾ ಮಕ್ಕಳಿಗೆ ನಡೆ–ನುಡಿ ಕಲಿಸುವಾಗ ಮಕ್ಕಳ ಕಾಲ್ಪನಿಕ ಪ್ರಪಂಚಕ್ಕೆ ಒತ್ತುಕೊಟ್ಟು ಆಲೋಚಿಸುವುದನ್ನು ಕಲಿತರು. ಅದೇ ಆಲೋಚನೆಯಲ್ಲಿ ಮಕ್ಕಳ ತುಂಟತನವನ್ನು ತಡೆದು ಅವರಲ್ಲಿ ಯೋಚನೆಗೆ ಅವಕಾಶ ಕಲ್ಪಿಸಲು ಒಗಟುಗಳನ್ನು ಕಟ್ಟಿಹೇಳಿ ಉತ್ತರವನ್ನು ಕೇಳುತ್ತಿದ್ದರು, ಹಾಗೂ ಅವರಲ್ಲಿ ಜಾಣ್ಮೆ ತಾಳ್ಮೆಯನ್ನು ಕಲಿಸುತ್ತಿದ್ದರು. ಹೀಗೆ ಆಟ, ಪಾಠ, ಓಟ, ಹಾಡು, ಒಗಟು, ಗಾದೆ, ಕುಣಿತ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಸಲು ಆರಂಭಿಸುವ ಸಾಹಿತ್ಯವನ್ನು ಬೆಳಸಿದರು.

ನಂತರದಲ್ಲಿ ಮಕ್ಕಳಿಗಾಗಿಯೇ ಜಾನಪದ ಶೈಲಿಯಲ್ಲಿ ಶಿಶು ಪ್ರಾಸಗಳಂತಹ ಪದ್ಯಗಳನ್ನು ರಚಿಸಿ, ಅವುಗಳನ್ನು ಮಕ್ಕಳಿಗೆ ಹೇಳುವುದರ ಮೂಲಕ ಸ್ಫೂರ್ತಿ ಪಡೆದರು. ಈ ಜಾನಪದ ಪದ್ಯಗಳ ಜೊತೆ ಜೊತೆಯಲ್ಲಿಯೇ ಪೌರಾಣಿಕ ಐತಿಹಾಸಿಕ, ಘಟನೆಗಳನ್ನು ಕುರಿತು. ಅದರಲ್ಲಿ ಪ್ರಾಣಿ, ಪಕ್ಷಿಗಳ, ರಾಜ ರಾಣಿ ಮಂತ್ರಿ ಮತ್ತು ಬೊಂಬೆಗಳ ಪಾತ್ರವನ್ನು ಸೃಷ್ಠಿಸಿ, ಮಕ್ಕಳೇ ಕಲ್ಪಿಸಿಕೊಳ್ಳುವ ಪ್ರಸಂಗಗಳನ್ನು ಕಥೆಗಳ ರೂಪದಲ್ಲಿ ಹೆಣೆದು ಹೇಳುತ್ತಿದ್ದರು. ಹೀಗೆ ಇಡೀ ಪ್ರಪಂಚದಲ್ಲಿಯೇ ಮೊಟ್ಟ ಮೊದಲಬಾರಿಗೆ ಮಕ್ಕಳಿಗಾಗಿ ಕಥೆಗಳನ್ನು ಕಟ್ಟಿ ಹೇಳಿರುವುದು ಭಾರತದಲ್ಲಿಯೇ ಎಂದು ಹೆಮ್ಮೆಯಿಂದ ಹೇಳಬಹುದು.

ಕ್ರಿಸ್ತಪೂರ್ವದಲ್ಲಿಯೇ ಜಗತ್‌ಪ್ರಸಿದ್ಧ ಪಂಡಿತರಾದ ವಿಷ್ಣುಶರ್ಮರು ಸಂಸ್ಕೃತ ಭಾಷೆಯಲ್ಲಿ ಪಂಚತಂತ್ರದ ಕಥೆಗಳನ್ನು ರಚಿಸಿದರು. ಈ ಕಥೆಗಳು ವಿಶ್ವದ ಎಲ್ಲಾ ಭಾಷೆಗಳಿಗೂ ಅನುವಾದಗೊಂಡು ಪ್ರಸಿದ್ಧಿಯನ್ನು ಪಡೆದವು. ಇವು ಕೇವಲ ಮಕ್ಕಳಿಗಾಗಿ ಮಾತ್ರವಲ್ಲ ದೊಡ್ಡವರು ಓದಿ ತಣಿಯುವಂತವು. ಇವುಗಳಷ್ಟು ವಿಶ್ವದಲ್ಲಿಯೇ ಪ್ರಸಿದ್ಧಿ ಪಡೆದ ಬೇರಾವ ಕಥೆಗಳಿಲ್ಲ ಎನ್ನುವಷ್ಟು ಯಶಸ್ವಿಯಾದ ಕಥೆಗಳಾಗಿವೆ. ಇವುಗಳ ನಿರೂಪಣಾ ಶೈಲಿಯು ಮಕ್ಕಳ ಸಾಹಿತ್ಯದ ತಂತ್ರ ಗುರಿಯನ್ನು ಹೊಂದಿವೆ.

ದಕ್ಷಿಣ ಭಾರತದ ಪ್ರಸಿದ್ಧ ರಾಜನ ಇಬ್ಬರು ದಡ್ಡ ಮಕ್ಕಳನ್ನು ತಿದ್ದಿ ಅವರನ್ನು ಸರ್ವಾಂಗ ಪಂಡಿತರನ್ನಾಗಿ ಮಾಡಲು ವಿಷ್ಣುಶರ್ಮರು ಅವರಿಗೆ ಪ್ರಕೃತಿಯ ಸೊಬಗನ್ನು, ಗಿಡ–ಮರಗಳನ್ನು, ಪ್ರಾಣಿ–ಪಕ್ಷಿಗಳನ್ನು ತೋರಿಸಿ. ಅವುಗಳನ್ನು ಕುರಿತು ವಿವರಿಸಲು ಈ 'ಪಂಚತಂತ್ರ' ಎಂಬ ಕಥೆಯನ್ನು ಕಟ್ಟಿ ಯಾರೂ ಕೇಳದ, ಕಾಣದ ಬೇರೆ ಬೇರೆ ವಿಷಯಗಳನ್ನು ಈ ಕಥೆಗಳಲ್ಲಿ ತುಂಬಿ, ಪಂಚತಂತ್ರ (ಐದುತಂತ್ರ)ಗಳನ್ನು 'ಮಿತ್ರಬೇಧ ತಂತ್ರ', 'ಮಿತ್ರಸಂಪ್ರಾಪ್ತಿ', 'ಸಂಧಿವಿಗ್ರಹ ತಂತ್ರ', 'ಲಬ್ಧನಾಶ ತಂತ್ರ' ಮತ್ತು 'ಕಾರ್ಯತ್ವ ತಂತ್ರ' ಈ ವಿಷಯಗಳನ್ನು ಮೂಲ ವಸ್ತುಗಳನ್ನಾಗಿಟ್ಟುಕೊಂಡು ಕಥೆಗಳನ್ನು ಹೆಣೆದು ಇವುಗಳಲ್ಲಿ ಸ್ನೇಹ, ಪ್ರೀತಿ, ವಿಶ್ವಾಸ, ಮೊದಲಾದ ಪ್ರಸಂಗಳಲ್ಲಿ ಜಾಣತನ, ಜಾಣ್ಮೆಯ ಪ್ರದರ್ಶನ, ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಕೆಲಸಗಳನ್ನು ಮಾಡುವುದು. ಮತ್ತು ತಪ್ಪು ಮಾಡಿದವರಿಗೆ ಶಿಕ್ಷಿಸುವುದು ಮೊದಲಾದ ವಿಷಯಗಳನ್ನು ತುಂಬಿ ಸುತ್ತಮುತ್ತಲಿನ ವಾತಾವರಣ ಪ್ರಾಣಿ, ಪಕ್ಷಿಗಳ ಸ್ವಭಾವ, ಪ್ರಕೃತಿ, ಮೊದಲಾದ ನಿಯಮಗಳನ್ನು ಕಥೆಗಳ ರೂಪದಲ್ಲಿ ತುಂಬಿ, ಕೊನೆಯಲ್ಲಿ ಉಪದೇಶಗಳನ್ನು ಕೆಲವು ಪಂಕ್ತಿಗಳಲ್ಲಿ ಹೇಳಿದ್ದಾರೆ. ಈ ಕಥೆಗಳೆಲ್ಲ ಗದ್ಯದ ರೂಪದಲ್ಲಿವೆ. ಉಪದೇಶಗಳು (ನಿಷ್ಕರ್ಷೆ) ಪದ್ಯರೂಪದಲ್ಲಿದೆ. ಹೀಗೆ ಈ ಪಂಚತಂತ್ರ ಕಥೆಗಳ ಮೂಲಕ ಆ ಮಕ್ಕಳನ್ನು ಎಲ್ಲಾ ವಿಷಯಗಳಲ್ಲಿ ಪಂಡಿತರನ್ನಾಗಿ ಮಾಡಿ ಸನ್ಮಾರ್ಗಕ್ಕೆ ತರುವಲ್ಲಿ ಯಶಸ್ವಿಯಾದರು.

ಈ ಪಂಚತಂತ್ರದಲ್ಲಿ ಒಂದು ಕಥೆ ಮುಗಿದ ಕೂಡಲೇ ಮುಂದಿನ ಕಥೆಯು ಅದಕ್ಕೆ ಕೊಂಡಿಯಂತೆ ಜೋಡಣೆಯಾಗಿಯೇ ಮುಂದಿವರೆಯುತ್ತಾ ಹೋಗುತ್ತದೆ. ಅಂದರೆ ಕಥೆಯನ್ನು ಕೇಳುವವರ ಕುತೂಹಲ ಹೆಚ್ಚಿಸಿ ಮನಸ್ಸನ್ನು ಕೇಂದ್ರಿಕರಿಸಲು ಈ ಕಥೆಗಳು ಪ್ರೇರಕವಾಗಿರುತ್ತವೆ. ಇದು ಕಥೆಗಳ ರಚನಾಕಾರರ ನಿರೂಪಣಕಾರರ ತಂತ್ರ ವೈಶಿಷ್ಟ್ಯವಾಗಿದೆ. ಇಂತಹ ಕಥೆಗಳ ಆಗರವೇ ಪಂಚತಂತ್ರದ ಕಥೆಗಳಾಗಿವೆ.

ನಂತರದ ಕಾಲವಧಿಯಲ್ಲಿ ಸುಮಾರು ಹನ್ನೊಂದನೇ ಶತಮಾನದ ಕೊನೆಯ ಭಾಗದಲ್ಲಿ ಪಂಡಿತ ಸೋಮದೇವನು ರಚಿಸಿದ "ಕಥಾ ಸರಿತ್ಸಾಗರ" ಎಂಬ ಕೃತಿಯಲ್ಲಿ ಕಥೆಗಳ ಮಹಾಪೂರವೇ ಇರುವುದನ್ನು ಕಾಣುತ್ತೇವೆ. ಇವು ಪಂಚತಂತ್ರದ ಕಥಾ ಶೈಲಿಯಲ್ಲಿಯೇ ಬಂದಿದ್ದು, ಇವು ಹದಿನೆಂಟು ವಿಭಾಗಗಳ ಒಂದುನೂರು ಇಪ್ಪತ್ನಾಲ್ಕು ತರಂಗಗಳಲ್ಲಿ ವಿಭಾಗಗಳಾಗಿವೆ. ಈ ಕಥೆಗಳು ಹಿರಿಯರಿಗೆ ಹೇಳುವಂತಿವೆ. ಇದಾದ ನಂತರದ ಕಾಲಾವಧಿಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಪಂಡಿತ ಹೇಮಚಂದ್ರ ವಿರಚಿತ "ಶುಕಸಪ್ತತಿ" ಕಥೆಗಳಲ್ಲಿ ಮಕ್ಕಳಿಗೆ ಒಳ್ಳೆಯ ಗುಣ ಕಲಿಸುವ ಕಥೆಗಳಾಗಿ ಪ್ರಸಿದ್ಧಿಪಡೆದಿವೆ.

ಆ ನಂತರ ಸು. ಹದಿನಾಲ್ಕನೇ ಶತಮಾನಕ್ಕೆ ಸೇರಿದ ಪಂಡಿತ ನಾರಾಯಣ ಎಂಬುವನು ರಚಿಸಿದ 'ಹಿತೋಪದೇಶ' ಎಂಬ ಕಥೆಗಳನ್ನು ಮಕ್ಕಳಿಗಾಗಿಯೇ ರಚಿಸಿರುವುದನ್ನು ಕಾಣಬಹುದು.

ಈ ಕಥೆಗಳು ನಾಲ್ಕು ವಿಭಾಗಗಳಾಗಿ ವಿಂಗಡಿಸಲ್ಪಟ್ಟು ಪಂಚತಂತ್ರದ ಕಥೆಗಳಂತೆ ನೀತಿಯನ್ನು ನಿರೂಪಿಸುವ ಕಥೆಗಳಾಗಿವೆ. ಇವು ನೀತಿ, ಜ್ಞಾನ, ವ್ಯವಹಾರ, ಒಳಿತು, ಕೆಡುಕುಗಳ ಉಪದೇಶಗಳನ್ನು ಮಕ್ಕಳು ಚಿಕ್ಕದಿಂರಿರುವಾಗಲೇ ಅವರ ಮನದಲ್ಲಿ ಮೂಡಿಸಬೇಕೆಂಬುದು ಈ ಹಿತೋಪದೇಶ ಕಥೆಗಳನ್ನು ರಚಿಸಲಾಗಿದೆ. ಇದೇ ರೀತಿಯಲ್ಲಿಯೇ ಮಕ್ಕಳಿಗಾಗಿ ಬೃಹತ್ಕಥೆಗಳು, ಅಕ್ಬರ ಬೀರಬಲ್ಲರ ಕಥೆಗಳು, ತೆನಾಲಿ ರಾಮಕೃಷ್ಣರ ಕಥೆಗಳು ಮತ್ತು ಇಸೋಪನ ಕಥೆಗಳು, ಮೊದಲಾದ ಕಥೆಗಳು ಹುಟ್ಟಿಕೊಂಡು ಬಂದಿರುವುದನ್ನು ಕಾಣಬಹುದು.

ಸಂಸ್ಕೃತದಲ್ಲಿ ಬಂದ ವಿಷ್ಣುಶರ್ಮರ ಪಂಚತಂತ್ರವನ್ನು ಸಂಸ್ಕೃತದ ನಂತರ ಮೊಟ್ಟ ಮೊದಲಬಾರಿಗೆ ಕನ್ನಡಕ್ಕೆ ತರ್ಜುಮೆಗೊಳಿಸಿದ ಕೀರ್ತಿ ಗದಗಿನ ರೋಣ ತಾಲೂಕಿನ ಸವಡಿ ಗ್ರಾಮದವನಾದ 'ದುರ್ಗಸಿಂಹ'ನಿಗೆ ಸಲ್ಲುತ್ತದೆ. ಈತ ಹದಿನಾಲ್ಕನೇ ಶತಮಾನದಲ್ಲಿ ಚಾಲುಕ್ಯರ ಜಗದೇಕ ಮಲ್ಲನ ಕಾಲದವನು. ಇವನು "ಕರ್ನಾಟಕ ಪಂಚತಂತ್ರಂ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದನು. ಈ ಪಂಚತಂತ್ರದ ಕಥೆಗಳೆಂದರೆ, ಪ್ರಾಮಾಣಿಕತೆಗೆ ಹೆಸರಾದವು ಮತ್ತು ನೀತಿ ಪ್ರಧಾನವಾಗಿರುವಂತವು. ಅಲ್ಲದೆ ಇವು ವ್ಯವಹಾರಿಕ ಬದುಕಿನ ಜಾಣತನದ ತಂತ್ರಗಳನ್ನು ಒಳಗೊಂಡಂತಹ ಕಥೆಗಳಾಗಿದ್ದು ಇವು ಕಥೆಗಳೊಳಗೆ ಕಥೆಗಳಾಗಿ ಬಗೆಬಗೆಯ ಉಪಕಥೆಗಳಾಗಿ ಮಕ್ಕಳ ಮನಸ್ಸನ್ನು ರಂಜಿಸುವಲ್ಲಿ ಯಶಸ್ವಿಯಾಗಿವೆ.

ಹೀಗೆ ಮಕ್ಕಳ ಸಾಹಿತ್ಯದ ಪ್ರಾಚೀನತೆಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ಸಂಗತಿಗಳನ್ನು ಗಮನಿಸುತ್ತಾ ಬಂದಾಗ ಕ್ರಿ.ಶ. ಪೂರ್ವದಲ್ಲಿ ಬಂದ ಸಾಂಸ್ಕೃತಿಕ ವಿಷ್ಣುಶರ್ಮದ ಪಂಚತಂತ್ರದಿಂದ ಹಿಡಿದು ಸುಮಾರು ಹದಿಮೂರು ಹದಿನಾಲ್ಕನೇ ಶತಮಾನದವರೆಗೆ ಬಂದಂತ ಮಕ್ಕಳ ಕಥೆಗಳು ವಿಭಿನ್ನ ರೂಪಗಳಲ್ಲಿ ಹೇಳಿರುವ ಸಂಪ್ರದಾಯಗಳು ಕಂಡುಬಂದವು ಮತ್ತು ಆ ನಂತರದ ಅವಧಿಯಲ್ಲಿ ಮಕ್ಕಳ ಅವಶ್ಯಕತೆಗಳಿಗೆ ಅನುಗುಣವಾದ ಸಾಹಿತ್ಯ ಬರತೊಡಗಿತು ಆದರೂ ಸಾಂಪ್ರದಾಯಿಕತೆಯ ಪ್ರಭಾವವು ಇತ್ತು ಅಲ್ಲಿನ ಧಾರ್ಮಿಕ ಕಟ್ಟುಪಾಡುಗಳು, ಮೋಕ್ಷದ ದಾರಿ ಮೊದಲಾದ ಮೌಢ್ಯಕಲ್ಪನೆಗಳಿಂದ ಮಕ್ಕಳನ್ನು ಬಾಲ್ಯದಿಂದಲೇ ಆ ತರಹದ ಕಥೆ, ಕಾವ್ಯ, ಮಂತ್ರ-ತಂತ್ರಗಳಲ್ಲಿ ದೂಡಲಾಗುತ್ತಿತ್ತು. ಅವುಗಳನ್ನೇ ಪರೋಕ್ಷವಾಗಿ ಪ್ರತಿಬಿಂಬಿಸುವ ಸಾಹಿತ್ಯ ಕೃತಿಗಳು ಸಹ ರಚನೆಯಾಗುತ್ತಾ ಬರತೊಡಗಿದವು. ಆಂಗ್ಲ ಕವಿಯಾದ ಚಾಸರ್‌ನ 'ದಿ ಕ್ಯಾಂಟರ್‌ಬರಿ ಟೇಲ್ಸ್', ಜಾನ್‌ಬನಿಯನವರ 'ದಿ ಪಿಲಿಗ್ರಿಮ್ಸ್ ಪ್ರೋಗ್ರೆಸ್' ಮೊದಲಾದ ಕೃತಿಗಳು ಈ ಮಾದರಿಯವು, ಆದರೂ ಇವು ಮಕ್ಕಳನ್ನು ಆಕರ್ಷಿಸಿ ಅವರಲ್ಲಿ ಓದುವ ಪ್ರೇರಣೆ ಮೂಡಿಸಿದವು.

ನಂತರ ಹದಿನೇಳನೆಯ ಶತಮಾನದ ವೇಳೆಗೆ ಬ್ರಿಟನ್ ದೇಶದಿಂದ 'ಚಾಪ್ ಬುಕ್ಸ್' ಎನ್ನುವ ಕೃತಿಯಲ್ಲಿ ಜನಪದ ಶೈಲಿಯ ಹಾಡು, ಕಥೆ, ಸಾಹಸ ಚರಿತ್ರೆ ನಿರೂಪಣೆ ಮೊದಲಾದವು

ಸಾಂಪ್ರದಾಯಿಕ ಮನಸ್ಸಿನಲ್ಲಿಯೇ ಮಕ್ಕಳು ಮುಳುಗಿ ಹೋಗದಂತೆ ತಡೆದವು. ಈ ಕೃತಿಯು ಮುಂದೆ ಅಮೆರಿಕದವರೆಗೂ ಮುಂದುವರೆದವು. ನಂತರದಲ್ಲಿ ಇಟಲಿ ದೇಶದಿಂದ 'ಪೆಂಟಾಮಿರೋನ್' ಎನ್ನುವ ಕೃತಿಯು ಪ್ರಕಟವಾದಾಗ ಯುರೋಪಿನಲ್ಲಿ ಮಕ್ಕಳ ಸಾಹಿತ್ಯದ ಎಳೆಗಳು ಇನ್ನಷ್ಟು ಬಲಗೊಂಡವು. ೧೭೪೪ ರಲ್ಲಿ ಬ್ರಿಟನ್ ಲೇಖಕನಾದ 'ಜಾನ್ ನ್ಯೂ ಬೆರ್ರಿ' ಎಂಬುವನು 'ಎ ಲಿಟಲ್ ಪ್ರೆಟ್ಟಿ ಪಾಕೆಟ್ ಬುಕ್' ಎನ್ನುವ ಹೆಸರಿನ ಕೃತಿಯನ್ನು ಹೊರತಂದಾಗ ಮಕ್ಕಳ ಸಾಹಿತ್ಯದ ಸಂವೇದನೆಗಳು ಹೀಗಿರಬಹುದು ಎಂಬ ಕಲ್ಪನೆಯು ಸ್ಪಷ್ಟವಾಗಿ ಮೂಡತೊಡಗಿತು.

ಮುಂದೆ ೧೯ನೇ ಶತಮಾನದ ಮಧ್ಯಭಾಗದಲ್ಲಿ ಮಕ್ಕಳ ಸಾಹಿತ್ಯವೆಂದರೆ ಬರಿ ಉಪದೇಶವನ್ನು ಮಾಡುವ ಸಾಹಿತ್ಯವಲ್ಲ, ಬದಲಾಗಿ ಅದು ಮಕ್ಕಳ ಕಲ್ಪನಾ ಲೋಕದ ವಿಸ್ತಾರತೆ ಹಾಗೂ ಅದರ ವಾಸ್ತವ ಬದುಕಿನ ಅರಿವು ಎಂಬ ಜಾಗೃತಿ ನಿಧಾನವಾಗಿ ಎಲ್ಲರಲ್ಲಿಯೂ ಬೆಳೆಯತೊಡಗಿತು ನಂತರ ಥಾಮಸ್ ಹ್ಯೂಗ್ಸ್‌ನ 'ಟಾಮ್ ಚ್ರಾನ್ಸ್ ಸ್ಕೂಲ್ ಡೇಸ್' ಕೃತಿಯು ಮಕ್ಕಳ ಸಾಹಿತ್ಯದ ಒಂದು ಆರಂಭಿಕ ಕೃತಿಯ ಪ್ರಮುಖ ಪ್ರಯತ್ನವೆನಿಸಿದರೂ, ಲುಯಿಸ್ ಕೆರೋಲ್‌ನ 'ಆ್ಯಲೀಸ್ ಇನ್ ವಂಡರ್ ಲ್ಯಾಂಡ್' ಮತ್ತು ಎಡ್ವರ್ಡ್ ಲಿಯರ್ ಕವಿಯ 'ಲಿಮರಿಕ್ಸ್' ಎಂಬ ಕೃತಿಗಳು ಬಂದ ಮೇಲೆ ಮಕ್ಕಳಿಗಾಗಿ ಬರೆದ ಸಾಹಿತ್ಯದ ದಿಕ್ಕು ದೆಸೆಗಳೇ ಬದಲಾದವು.

ಇಂಗ್ಲೀಷ್ ಸಾಹಿತ್ಯದ 'ಫ್ಯಾಂಟಸಿ' ಮತ್ತು 'ಅಸಂಬದ್ಧತೆ' ಈ ಮಾದರಿಯಲ್ಲಿಯೇ ಕಾಣಿಸಿಕೊಂಡವು ಈ ಆಂಗ್ಲ ಸಾಹಿತ್ಯದಲ್ಲಿ ಜೆ.ಎಂ. ಬ್ಯಾರಿ ಕವಿಯ 'ಪೀಟರ್ ಪ್ಯಾನ್' ರಾಲ್‌ಪಾಲ್‌ನ 'ಚಾರ್ಲಿ ಆ್ಯಂಡ್ ಚಾಕ್ಲೇಟ್ ಪ್ಯಾಕ್ಟರಿ' ಮಾರ್ಕ್ ಟ್ವೈನ್‌ನ 'ಹಕ್ಲಬರಿ ಫಿನ್', 'ರುಡ್‌ಯಾರ್ಡ್ ರೆಪ್ಲಿಂಗ್‌ನ 'ದಿ ಜಂಗಲ್ ಬುಕ್' ಎನಿಡ್ ಬ್ಲೈಟನ್‌ಳ ದಿ ಫೇಮಸ್ ಫೈವ್', ಜೆ.ಜೆ ಕಾಲಿಂಗ್‌ಳ 'ಹ್ಯಾರಿಪಾಟರ್' ಧನಗೋಪಾಲ ಮುಖರ್ಜಿಯ "ಗೇನೆಕ್' ಅನಿತಾ ದೇಸಾಯಿಯವರ 'ವಿಲೇಜ್ ಬೈ ದ ಸೀ' ಮತ್ತು ನಿಕೊಲಾಯ್ ನಾಸಾವ್‌ನ 'ಡುನ್ನೊ' ಮೊದಲಾದ ಪ್ರಸಿದ್ಧ ಮಕ್ಕಳ ಕೃತಿಗಳು ಮಕ್ಕಳ ಸಾಹಿತ್ಯದ ಚರಿತ್ರೆಯಲ್ಲಿಯೇ ಸಾಕಷ್ಟು ಸಂಚಲನವನ್ನು ಮೂಡಿಸಿವೆ. ಇತ್ತ ಭಾರತದಲ್ಲಿಯೂ ರವೀಂದ್ರನಾಥ ಟ್ಯಾಗೋರ್, ಉಪೇಂದ್ರ ಕಿಶೋರ್ ರಾಯ್, ಬೆಹರಿಲಾಲ್ ಪುರಿ, ರಸ್ಕಿನ್, ಬಾಂಡ್, ಕೃಷ್ಣಚಂದ್ರಕರ್, ಸಾನೆಗುರೂಜಿ, ಕುವೆಂಪು, ಪಂಜೆ ಮಂಗೇಶರಾಯ, ಜಿ.ಪಿ. ರಾಜರತ್ನಂ, ಶಿವರಾಮ ಕಾರಂತರು, ಪ್ರೇಮಚಂದ್ ಮೊದಲಾದವರ ಕೃತಿಗಳು ಮಕ್ಕಳ ಸಾಹಿತ್ಯ ಪ್ರಕಾರವನ್ನು ಭದ್ರವಾಗಿಟ್ಟಿವೆ. ಜೊತೆಗೆ ಇವರ ಕೃತಿಗಳು ಹೊಸ ಹೊಸ ಸಾಧ್ಯತೆಗಳನ್ನು ತೋರಿಸಿವೆ.

೩.೨ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಹಿನ್ನೆಲೆ

ಕನ್ನಡ ಭಾಷೆಯಲ್ಲಿ ಪ್ರಾಚೀನ ಕಾಲದಲ್ಲಿಯೇ ಗ್ರಂಥಗಳ ರಚನೆಯಾಗಿದ್ದವು ಎಂದು ನಮಗೆ ತಿಳಿಯುತ್ತದೆ. “ನಮಗೆ ಗ್ರಂಥರೂಪದಲ್ಲಿ ದೊರೆತಿರುವುದರಲ್ಲಿ ೯ನೆಯ ಶತಮಾನದಲ್ಲಿ ಬಂದ ಶ್ರೀವಿಜಯನ ‘ಕವಿರಾಜ ಮಾರ್ಗ’ವೇ ಮೊದಲನೆಯದು. ಆದರೂ ಕವಿರಾಜಮಾರ್ಗದ ಕಾಲಕ್ಕೂ ಹಿಂದೆಯೇ ಅನೇಕ ಕವಿಗಳು ಪದ್ಯ ಗ್ರಂಥಗಳನ್ನು, ಗದ್ಯಗ್ರಂಥಗಳನ್ನು ರಚಿಸಿದ್ದಂತೆ ತಿಳಿದುಬರುತ್ತದೆ.”[೭] ಈ ಪ್ರಾಚೀನ ಕವಿಗಳಲ್ಲಿ ೬ನೇ ಶತಮಾನದ ಕೊನೆಯಲ್ಲಿದ್ದ ಗಂಗರಾಜನಾದ ದುರ್ವಿನೀತನ ಹೆಸರು ಹೇಳಿರುವಂತಿದೆ. ಸುಮಾರು ೬ನೇ ಶತಮಾನದ ಕನ್ನಡ ಭಾಷೆಯಲ್ಲಿ ಬರೆದ ಶಾಸನಗಳು ದೊರೆಯುತ್ತವೆ. “ಕವಿರಾಜಮಾರ್ಗದಲ್ಲಿ ಹೇಳಿರುವ ಕವಿಗಳಲ್ಲದೆ. ಶ್ಯಾಮ ಕುಂದಾಚಾರ್ಯನು ಸುಮಾರು ೬೫೦ ರಲ್ಲಿ ಗ್ರಂಥ ರಚನೆ ಮಾಡಿರುವಂತೆ ತೋರುತ್ತದೆ. ಭಟ್ಟಾಕಳಂಕನು (೧೬೦೪) ತತ್ವಾರ್ಥ ಮಹಾಶಾಸ್ತ್ರಕ್ಕೆ ವ್ಯಾಖ್ಯಾನರೂಪವಾದ ೯೬,೦೦೦ ಗ್ರಂಥಪರಿಮಿತಿಯುಳ್ಳ ‘ಚೂಡಾಮಣಿ’ಯೆಂಬ ಜೈನ ಗ್ರಂಥವು ಕನ್ನಡ ಭಾಷೆಯಲ್ಲಿ ಹುಟ್ಟಿರುವುದಾಗಿ ಹೇಳುತ್ತಾನೆ. ಈ ಚೂಡಾಮಣಿಯನ್ನು ಬರೆದವನು ಶ್ರೀವರ್ಧನದೇವನೆಂದೂ ಇವನು ದಂಡಿಯಿಂದ ಸ್ತುತಿಸಲ್ಪಟ್ಟಿರುವನೆಂದೂ ಶಾಸನಗಳಿಂದ ತಿಳಿದು ಬರುತ್ತದೆ. ಈತನು ೭ನೆಯ ಶತಮಾನ ದಲ್ಲಿದ್ದಿರಬೇಕು. ಆ ಕಾಲದಲ್ಲಿ ಇಂಥ ಅಪಾರವಾದ ಗ್ರಂಥವು ಹುಟ್ಟಬೇಕಾದರೆ ಅದಕ್ಕೆ ಬಹಳ ಕಾಲ ಹಿಂದೆಯೇ ಕನ್ನಡದಲ್ಲಿ ಗ್ರಂಥರಚನೆ ಆರಂಭವಾಗಿರಬೇಕು ಇದಲ್ಲದೆ ೧೧ನೆಯ ಶತಮಾನಕ್ಕೆ ಹಿಂದೆ ಇದ್ದ ಅಮೃತಸಾಗರನೆಂಬ ಕವಿಯಿಂದ ರಚಿತವಾದ ‘ಯಾಪ್ಪರುಂಗಲಕ್ಕಾರಿಹೈ’ ಎಂಬ ತಮಿಳು ಛಂದೋ ಗ್ರಂಥದಿಂದ ಕನ್ನಡದಲ್ಲಿ ‘ಗುಣಗಾಂಡಿಯಂ’ ಎಂಬ ಒಂದು ಛಂದೋಗ್ರಂಥವು ಇದ್ದಂತೆಯೂ ಅದರಲ್ಲಿ ಕವಿ ತನ್ನ ವಿನಯವನ್ನು ಸೂಚಿಸಿರುವುದಲ್ಲದೆ ಒಬ್ಬ ಸ್ತ್ರೀಯನ್ನು ಸಂಭೋದಿಸಿ ಗ್ರಂಥವನ್ನು ಬರೆದಿರುವಂತೆಯೂ ತಿಳಿಯುತ್ತದೆ.”[೮]

ಹೀಗೆ ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ. ಇಷ್ಟೆ ಯಾಕೆ, ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ, ಸ್ಥೂಲವಾಗಿ ಹೇಳುವುದಾದರೆ, ‘ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ.’

ಇಂತಹ ಸಾಹಿತ್ಯದ ಒಟ್ಟು ಚರಿತ್ರೆಯ ಸ್ವರೂಪವು ಆಧುನಿಕತೆಯ ಪ್ರಭಾವದಿಂದಾಗಿ ಬದಲಾಗುತ್ತಾ ಬರುತ್ತದೆ. ಈ ಬದಲಾದ ಪರಿಕಲ್ಪನೆಯ ದೃಷ್ಟಿಯಿಂದ ಹತ್ತೊಂಬತ್ತೆನೆಯ ಶತಮಾನದ ನಂತರದಿಂದ ಇತ್ತೀಚೀನ ಒಟ್ಟಾರೆ ಕನ್ನಡ ಬರವಣೆಗೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸಾಹಿತ್ಯ ಚರಿತ್ರೆಯ ಪ್ರಕಾರಗಳನ್ನಾಗಿ ರೂಪಿಸುವ ಪ್ರಯತ್ನವನ್ನು ಮಾಡಲಾಯಿತೆ? ಈ ಪ್ರಮುಖ ಸಾಹಿತ್ಯ ಪ್ರಕಾರಗಳೆಂದರೆ ಕಾದಂಬರಿ, ಕಾವ್ಯ (ಮಹಾಕಾವ್ಯ) ನಾಟಕ, ಸಣ್ಣಕತೆ,

ಸಾಹಿತ್ಯ ವಿಮರ್ಶೆ, ಸಾಹಿತ್ಯ ಮೀಮಾಂಸೆ, ಜಾನಪದ, ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ, ಸಂಶೋಧನೆ, ಜೀವನ ಚರಿತ್ರೆ, ಮತ್ತು ಆತ್ಮಕಥೆಗಳು ಮೊದಲಾದವು.

ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ಪ್ರಕಾರವು ವಿಶಿಷ್ಟವಾದ ಪ್ರಾಮುಖ್ಯತೆಯನ್ನು ಪಡೆದಿದೆ. ಜಗತ್ತಿನ ಎಲ್ಲ ಸಾಹಿತ್ಯಗಳಲ್ಲಿ ಮಕ್ಕಳ ಸಾಹಿತ್ಯ ಎನ್ನುವ ಪ್ರಕಾರ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ. ಆದರೆ ಈ ಮಕ್ಕಳ ಸಾಹಿತ್ಯ ಎನ್ನುವ ರಮಣೀಯವಾದ, ಹೃದ್ಯವಾದ, ಮನಕುಲುಕುವ, ಮನಸ್ಸಿಗೆ ಮುದ ನೀಡುವ ಮತ್ತು ಮಕ್ಕಳ ಕಲ್ಪನೆಯ ರೆಕ್ಕೆ ಅರಳಿಸುವ ಸಾಹಿತ್ಯ ಮೊದಲಿನಿಂದಲೂ ಸಾಕಷ್ಟು ಸೃಷ್ಟಿಯಾಗಿದ್ದರೂ ಅದರ ನಿಖರ ಚರಿತ್ರೆ ಬರೆಯಲ್ಪಟ್ಟಿಲ್ಲ. ಮತ್ತು ಅದರ ನಿಖರವಾದ ವಿಮರ್ಶೆಯು ನಡೆದಿಲ್ಲವೆಂಬುದನ್ನು ಗಮನಿಸಬಹುದು. ಇದು ಮಕ್ಕಳ ಸಾಹಿತ್ಯವನ್ನು ಕುರಿತು ಈ ಸಮಾಜ ತೋರಿಸುತ್ತ ಬಂದಿರುವ ಅಲಕ್ಷ್ಯವೇ ಎನ್ನಬಹುದು. ಆಂಗ್ಲ ಸಾಹಿತ್ಯ ಸೇರಿದಂತೆ ಪ್ರಪಂಚದ ಹಲವು ಭಾಷೆಗಳಲ್ಲಿ ಮಕ್ಕಳ ಸಾಹಿತ್ಯದ ಕೃಷಿ ತುಂಬ ವಿಪುಲವಾಗಿ ನಡೆದು ಬಂದಿರುವುದನ್ನು ಕಾಣಬಹುದು.

ಜಗತ್ತಿನ ಪ್ರತಿಯೊಂದು ನಾಗರಿಕತೆ, ಪುರಾಣ ಸಾಹಿತ್ಯ ಮತ್ತು ಪಾರಂಪರಿಕವಾಗಿ ಬಂದ ದಂತಕಥೆ, ನಂಬಿಕೆ ಹಾಗೂ ಅತಿಶಯ ಕಲ್ಪನೆಯ ಸಾಹಿತ್ಯಗಳನ್ನು ಹೊಂದಿರುತ್ತದೆ. ಜೊತೆಗೆ ಜನಪದ ಮಾದರಿಯ ಕಥೆ ಹಾಗೂ ಹಾಡುಗಳನ್ನು ಎಲ್ಲ ಕಡೆಗಳಲ್ಲಿಯೂ ಕಾಣಬಹುದು. ಭಾರತದ ಪಂಚತಂತ್ರ, ಪರ್ಶಿಯಾದ ಅಸುರಿಕ್ ಮರದ ಕತೆ, ಗ್ರೀಕ್‌ರ ಇಸೋಪನ ಕಥೆಗಳು ಮೊದಲಾದವು ಮಕ್ಕಳನ್ನು ಹಾಗೂ ಹಿರಿಯರನ್ನು ಏಕಕಾಲದಲ್ಲಿಯೇ ರಂಜಿಸಿವೆ. ಮಕ್ಕಳ ಬಾಲ್ಯವ್ಯವಸ್ಥೆಗೆಂದು ಪ್ರತ್ಯೇಕ ಸಾಹಿತ್ಯ ಮೊದಲಿನಿಂದಲೂ ಇರದಿದ್ದರೂ ಬಾಯಿಂದ ಬಾಯಿಗೆ ಹರಿದ ಕೆಲವು ವಿಶಿಷ್ಟ ಕಥೆ, ಕವನ, ಅಣಕ, ಹಾಗೂ ದೃಶ್ಯ ಪ್ರಸಂಗಗಳು ಮಕ್ಕಳನ್ನು ರಂಜಿಸುವಲ್ಲಿ, ಅವರ ಮನಸ್ಸನ್ನು ರೂಪಿಸುವಲ್ಲಿ ಮತ್ತು ಅವರನ್ನು ಸಂವೇದನಾಶೀಲರನ್ನಾಗಿ ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಮಕ್ಕಳ ಬಾಲ್ಯವೆಂಬುದು ಒಂದು ಸೂಕ್ಷ್ಮ ಬೆಳವಣಿಗೆಯ ಹಂತವಾಗಿರುತ್ತದೆ. ಹುಟ್ಟುತ್ತ ಬಹುಶಃ ಖಾಲಿಯಿರುವ ಮಗುವಿನ ಸಂವೇದನಾಶೀಲ ಗುಣ ಅದರ ಸುತ್ತಮುತ್ತಲಿನ ಪರಿಸರದ ಪ್ರಭಾವದಿಂದ ತುಂಬಿಕೊಳ್ಳುತ್ತಾ ಸಾಗುತ್ತದೆ. ಮಕ್ಕಳ ನರವ್ಯೂಹ, ಮತ್ತು ಇಂದ್ರಿಯಗಳ ದತ್ತಾಂಶ ಸಂಸ್ಕರಣ ಪ್ರಕ್ರಿಯೆ, ಅದಕ್ಕೆ ಉಪಯೋಗವಾಗುವ ಮಾಹಿತಿಗಳ ಪರಿಣಾಮದಿಂದ ಒಂದು ಅತ್ಯುತ್ತಮವಾದ ರಚನೆಯಾಗುತ್ತದೆ. ಹೀಗೆ ಮಕ್ಕಳ ಮನಸ್ಸು ಮೆದುಳು, ನರಮಂಡಲ, ಮೊದಲಾದವುಗಳ ಬೆಳವಣಿಗೆಯ ಹಂತದಲ್ಲಿ ಹಾಡು, ಕಥೆ, ಕವನ, ನಾಟಕ ಮೊದಲಾದ ಪ್ರಕಾರಗಳು ಅವರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತವೆ. ಇಂತಹ ಮಕ್ಕಳ ಸಾಹಿತ್ಯದ ಬೇರುಗಳನ್ನು ಜಾನಪದ ಸಾಹಿತ್ಯದಲ್ಲಿಯೂ ಕಾಣುತ್ತೇವೆ. "ಮಕ್ಕಳಿಗೆ ಹಾಡುವ ಲಾಲಿ ಹಾಡುಗಳಲ್ಲಿ. ಅಜ್ಜ ಅಜ್ಜಿಯರು ಹೇಳುವ ಕತೆಗಳಲ್ಲಿ, ಪ್ರಾಸಬದ್ಧವಾದ ಪದಗಳಲ್ಲಿ, ಕೋಲಾಟದ ಹಾಡುಗಳಲ್ಲಿ ಒಗಟು ಗಾದೆಗಳಲ್ಲಿ ಮಕ್ಕಳ ಸಾಹಿತ್ಯವನ್ನು ಕಾಣಬಹುದು.

ಅಲ್ಲದೆ ರಾಜಕುಮಾರ, ರಾಜಕುಮಾರಿಯರ ಕಥೆಗಳು, ಅದ್ಭುತ ರಮ್ಯ ಪವಾಡಗಳನ್ನು ಒಳಗೊಂಡ ಕಥೆಗಳು, ಕಾಗಕ್ಕ-ಗುಬ್ಬಕ್ಕನ ಕಥೆಗಳನ್ನು ಮತ್ತು ಪಂಚತಂತ್ರದಂತಹ ನೂರಾರು ಪ್ರಾಣಿ-ಪಕ್ಷಿಗಳಿಗೆ ಸಂಬಂಧಿಸಿದ ಕಥೆಗಳು ತಲತಲಾಂತರದಿಂದ ಈ ಮಕ್ಕಳ ಸಾಹಿತ್ಯಕ್ಕೆ ಸೇರಿಸಲಾಗಿದೆ. ಇವು ಮಕ್ಕಳ ಮನಸ್ಸನ್ನು ಆಕರ್ಷಿಸುವುದರ ಜೊತೆಗೆ ಅರಳಿಸುವ ಕೆಲಸವನ್ನು ಮಾಡಿವೆ. ಜೊತೆಗೆ ಇವು ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹರಡುತ್ತಾ ಬಂದಿವೆ. ಹೀಗಾಗಿ ಈ ಕನ್ನಡ ಮಕ್ಕಳ ಸಾಹಿತ್ಯದ ಪ್ರಾಚೀನತೆಯನ್ನು ಮನುಷ್ಯನ ಹುಟ್ಟಿನಿಂದಲೇ ಉಗಮವಾಗಿರುವುದೊಂದು ಹೇಳಬಹುದು."[೯]

ಪಾಶ್ಚಾತ್ಯ ದೇಶಗಳಲ್ಲಿ ಮುದ್ರಣ ಕಲೆಯ ಆವಿಷ್ಕಾರವಾದ ಮೇಲೆ ಮಕ್ಕಳ ಸಾಹಿತ್ಯ ೧೮ನೇ ಶತಮಾನದ ಆನಂತರದಲ್ಲಿ ನಿಶ್ಚಿತ ರೂಪವನ್ನು ಪಡೆಯಿತು. ಇದಕ್ಕಿಂತ ಹಿಂದೆ ಅಂದರೆ ಕ್ರಿ.ಶ. ೭ನೇ ಶತಮಾನದಲ್ಲಿ ಚೀನಿ ಭಾಷೆಗೆ ಅನುವಾದಗೊಂಡ ಬುದ್ಧನ ಪೂರ್ವಜನ್ಮದ ವೃತ್ತಾಂತಗೊಳನ್ನೊಳಗೊಂಡ 'ಜಾತಕ ಕಥೆ'ಗಳನ್ನು ಮಕ್ಕಳ ಸಾಹಿತ್ಯದ ಆದ್ಯ ಕಥೆಗಳೆಂದು ಗುರುತಿಸಲಾಗಿದೆ. ಇದು ಮುಂದೆ ಎಲ್ಲಾ ಭಾಷೆಗಳಿಗೂ ಅನುವಾದಗೊಂಡು ಎಲ್ಲರ ಕೈಸೇರುವಂತಾಯಿತು. ೧೮ನೇ ಶತಮಾನದ ಹಾಸುಪಾಸಿನಲ್ಲಿ ಬಹುಮುಖ್ಯವಾಗಿ ಜೊನಾಥನ್ ಸ್ವಿಫ್ಟ್‌ನ 'ಗಲಿವರನ ಪ್ರವಾಸಗಳು', ಡೇನಿಯಲ್ ಡಿಪೋನ 'ರಾಬಿನ್ ಸನ್ ಕ್ರೂಸೊ' ಪರ್ಶಿಯನ್ ಭಾಷೆಯ 'ಸಾವಿರದೊಂದು ರಾತ್ರಿ' ಕಥೆಗಳು, ಬನಿಯನ್ ಕವಿ 'ದಿ ಫಿಲ್‌ಗ್ರಿಮ್ಸ್ ಪ್ರೊಗ್ರೆಸ್' ಲೂಯಿ ಕೆರಾಲ್‌ರ 'ಆ್ಯಲೀಸ್ ಇನ್‌ವಂಡರ್‌ಲ್ಯಾಂಡ್' ಕೃತಿಗಳು ಮಕ್ಕಳ ಕಲ್ಪನಾ ವೈಖರಿಯನ್ನು ವಿಕಾಸಗೊಳಿಸುವ ಹಂತಕ್ಕೆ ಪ್ರವೇಶಿಸಿದವು.

ಕನ್ನಡದಲ್ಲಿ ಮಕ್ಕಳಿಗಾಗಿಯೇ ಮಕ್ಕಳ ಸಾಹಿತ್ಯದ ಕೋಳಿ ಕೂಗಿದುದು ೧೯ನೇ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷರ ಆಳ್ವಿಕೆಯೊಂದಿಗೆ ಯುರೋಪ್‌ನಿಂದ ಭಾರತಕ್ಕೆ ಬಂದ ಕ್ರೈಸ್ತ ಮಿಶನರಿಗಳಿಂದ ಅವರು ತಮ್ಮ ಧರ್ಮಪ್ರಸಾರಕ್ಕಾಗಿ ಕನ್ನಡ ಕಲಿತು ಬೋಧನೆಯನ್ನು ಮಾಡತೊಡಗಿದರು. ಜೊತೆಗೆ ಮಕ್ಕಳಿಗೂ ಸಾಹಿತ್ಯವನ್ನು ನಿರ್ಮಿಸಿದರು. ಶಿಕ್ಷಣದಲ್ಲಿ ಅಳವಡಿಸಿಕೊಳ್ಳಲು ಕಲ್ಲಚ್ಚಿನಲ್ಲಿ ಅಕ್ಷರಜ್ಞಾನವನ್ನು ಪಡೆದು ಇಲ್ಲಿರುವವರಿಗೂ ಅದನ್ನು ಕಲಿಸಿಕೊಟ್ಟರು.

ನಂತರ ಮಂಗಳೂರಿನಲ್ಲಿ ಸ್ಥಾಪಿಸಿದ 'ಬಾಸೆಲ್ ಮಿಶನ್' ಸಂಸ್ಥೆಯು ಮಕ್ಕಳಿಗಾಗಿ 'ಬಾಲಬೋಧಿನಿ' ಎಂಬ ಕನ್ನಡ ಪುಸ್ತಕವನ್ನು ಪಠ್ಯಪುಸ್ತಕದ ರೂಪದಲ್ಲಿ ಪ್ರಕಟಿಸಿದರು. ಮುಂದೆ ಇದೇ ಸಂಸ್ಥೆ 'ಅಕ್ಷರ ಮಾಲೆ'ಯಲ್ಲಿ ಭೂಗೋಳ, ವಾಚನ ಪುಸ್ತಕಗಳನ್ನು ಕಲ್ಲಚ್ಚಿನಲ್ಲಿ ಮುದ್ರಿಸಿತು. ಹೀಗೆ ಪ್ರಾರಂಭದಲ್ಲಿ ಪಠ್ಯಪುಸ್ತಕ ರೂಪದಲ್ಲಿ ಮಕ್ಕಳ ಸಾಹಿತ್ಯ ಹೊರಹೊಮ್ಮಿತು. ಈ ಸಂದರ್ಭದಲ್ಲಿಯೇ ಶಿಕ್ಷಣ ಕ್ಷೇತ್ರದಲ್ಲಿದ್ದ ಅನೇಕ ಸಾಹಿತ್ಯ ಪ್ರೇಮಿಗಳು, ಸಾಹಿತಿಗಳು, ಪಠ್ಯಪುಸ್ತಕಗಳಲ್ಲಿ ಕವಿತೆ, ಕಥೆ ಮತ್ತು ನಾಟಕ ರೂಪದ ಸಂಭಾಷಣೆಗಳನ್ನು ಸೇರಿಸುತ್ತ ಹೋದರು. ಹೀಗೆ ಪಠ್ಯಪುಸ್ತಕಗಳ ರಚನೆಯಿಂದಲೇ ಕನ್ನಡ ಮಕ್ಕಳ ಸಾಹಿತ್ಯ ತನ್ನ ಅಂಬೆಗಾಲನ್ನಿಡಲು ಪ್ರಾರಂಭಿಸಿತು.

೧೯ನೇ ಶತಮಾನದ ವೇಳೆಗೆ ಅಖಂಡ ಕರ್ನಾಟಕವು ಮೈಸೂರು, ಮದ್ರಾಸ್, ಹೈದ್ರಾಬಾದ್ ಮತ್ತು ಮುಂಬೈ ಎಂಬ ಪ್ರಾಂತಗಳಾಗಿ ಆಳ್ವಿಕೆಯಲ್ಲಿತ್ತು. ಆಗ ಆಯಾ ಪ್ರದೇಶಗಳಿಗೆ ಸೇರಿದ ಸಾಹಿತ್ಯ ಪ್ರೇಮಿಗಳು ಭಾಷಾಶಿಕ್ಷಣಕ್ಕಾಗಿ ಪಠ್ಯಪುಸ್ತಕ ರಚನಾ ಕಾರ್ಯದಲ್ಲಿದ್ದು ಸೇವೆ ಸಲ್ಲಿಸಿದರು. ಅದರಲ್ಲಿ ಪ್ರಮುಖ ಶಿಕ್ಷಣ ತಜ್ಞರೆನಿಸಿದ ಡೆಪ್ಯುಟಿ ಚೆನ್ನಬಸಪ್ಪ ಅವರು ಪ್ರಮುಖರು. ಜೊತೆಗೆ ವೆಂಕಟ ರಂಗೋಕಟ್ಟಿ, ಗಂಗಾಧರ ಮಡಿವಾಳೇಶ್ವರ ತೂರಮರಿ, ಗೌರೀಶ, ಶಿವರುದ್ರಪ್ಪ, ಸೋಮಲಿಂಗಪ್ಪ ಕುಲಕರ್ಣಿ ಮೊದಲಾದವರು ಮಕ್ಕಳ ಓದಿಗಾಗಿ ಕಥೆ, ಕವಿತೆಗಳನ್ನು ರಚಿಸಿ, ಪಠ್ಯಪುಸ್ತಕಗಳಲ್ಲಿ ಸೇರಿಸಿ ಪ್ರಕಟಿಸಿದರು.

ಗೌರೀಶರು ಗೌರೀಶ 'ವಾಚನ ಮಾಲೆ'ಯ ಅಡಿಯಲ್ಲಿ ಪಠ್ಯಪುಸ್ತಕವನ್ನು ಪ್ರಾರಂಭಿಸಿದ್ದರು. ೧೮೭೩ರಲ್ಲಿ ಮುಂಬೈ ಸರಕಾರದವರು ಮೊಟ್ಟಮೊದಲ ಬಾರಿಗೆ ಒಂದು ಪದ್ಯಾವಳಿಯನ್ನು ಪ್ರಕಟಿಸಿದರು. ಇದರಲ್ಲಿ ಮಕ್ಕಳಿಗಾಗಿಯೇ ಪ್ರಾಣಿ-ಪಕ್ಷಿಗಳ ಪರಿಚಯಾತ್ಮಕ ಕವಿತೆಗಳಿದ್ದವು.

ಮೈಸೂರು ಪ್ರಾಂತ್ಯದಲ್ಲಿ ಪ್ರಮುಖವಾಗಿ ಚ. ವಾಸದೇವಯ್ಯ ಅವರು 'ಬಾಲಬೋಧೆ' ಎಂಬ ಕೃತಿಯನ್ನು ರಚಿಸಿ ಅದನ್ನು ಮಕ್ಕಳಿಗೆ ಪಠ್ಯವಾಗಿ ಇಟ್ಟರು. ಎಂ.ಎಸ್. ಪುಟ್ಟಣ್ಣನವರು ಸು. ನೂರೈವತ್ತಕ್ಕೂ ಹೆಚ್ಚು ಕಥೆಗಳನ್ನು ಸಂಗ್ರಹಿಸಿ 'ನೀತಿ-ಚಿಂತಾಮಣಿ' ಎನ್ನುವ ಹೆಸರಿನಲ್ಲಿ ಪುಟ್ಟ ಪುಟ್ಟ ಪುಸ್ತಕಗಳನ್ನಾಗಿ ಮಾಡಿ ಪ್ರಕಟಿಸಿದರು. ಗ್ಯಾರೆಟ್ ಜಾನ್ ಎಂಬುವವರು 'ಚಿಕ್ಕವರಿಗೆ ತಕ್ಕ ಪಾಠಗಳು' ಎಂಬ ಪಠ್ಯಪುಸ್ತಕವನ್ನು ಮಕ್ಕಳಿಗಾಗಿ ರಚಿಸಿದರು.

ಮದ್ರಾಸ್ ಪ್ರಾಂತಕ್ಕೆ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಕ್ಕಳ ಸಾಹಿತ್ಯಕ್ಕಾಗಿ ಅಪಾರವಾಗಿ ಶ್ರಮಿಸಿದೆ. ಇಲ್ಲಿ ಕ್ರೈಸ್ತ ಮಿಶನರಿಗಳು ಸ್ಥಾಪಿಸಿದ ಬಾಸೆಲ್ ಮಿಶನ್ ಸಂಸ್ಥೆಯ ಕೆಲಸ ಮಹತ್ತರವಾದುದು. ಇದು ಹಲವಾರು ಪಠ್ಯಪುಸ್ತಕಗಳ ಜೊತೆಗೆ ಕಾವ್ಯ ಸಂಗ್ರಹಗಳನ್ನು ಪ್ರಕಟಿಸಿತು.

ಈ ಸಂಸ್ಥೆಯ ಮೂಲಕ ೧೮೬೨ರಲ್ಲಿ ಜೆ. ಮ್ಯೂಕ್ ಎಂಬುವವರು 'ಬಾಲಗೀತೆಗಳು' ಎಂಬ ಮಕ್ಕಳ ಗೀತೆಗಳ ಪುಸ್ತಕವನ್ನು ಸಂಪಾದಿಸಿ ಪ್ರಕಟಿಸಿದರು. ಇದು ಕನ್ನಡದಲ್ಲಿಯೇ ಪ್ರಕಟವಾದ ಮೊಟ್ಟ ಮೊದಲ ಪದ್ಯಸಂಕಲನವೆನಿಸಿದೆ. ಜೊತೆಗೆ ಈ ಸಂಸ್ಥೆಯ ಕಿಟೆಲ್ ಅವರು ಮಕ್ಕಳ ಪಾಠಗಳಿರುವ ಮೊದಲನೇ ಪುಸ್ತಕವನ್ನು ೧೮೬೬ರಲ್ಲಿ ಪ್ರಕಟಿಸಿದರು. ಮತ್ತು 'ಪಂಚತಂತ್ರ' 'ಕಾವ್ಯಮಂಜರಿ' 'ಇಸೋಪನ ನೀತಿಕಥೆಗಳು' ಮೊದಲಾದ ಪುಸ್ತಕಗಳನ್ನು ಪ್ರಕಟಿಸಿದರು. ಹೀಗೆ ೧೯ನೇ ಶತಮಾನದ ಅಂತ್ಯದ ಅವಧಿಗೆ ಇಂಗ್ಲಿಷರ ಮಕ್ಕಳ ಸಾಹಿತ್ಯದ ಬೆಳಕು ಕನ್ನಡದಲ್ಲೂ ಮಿಂಚತೊಡಗಿತು. ಅಲ್ಲದೆ ಬೇರೆ ಬೇರೆ ಭಾಷೆಗಳಲ್ಲಿಯ ಸಾಹಿತ್ಯವನ್ನು ಮಕ್ಕಳಿಗಾಗಿ ರಚಿಸಿದರು. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಬಂದ ಪ್ರಮುಖ ಸಾಹಿತಿಗಳೆಲ್ಲರು ಮಕ್ಕಳ ಸಾಹಿತ್ಯದ ಬೇರನ್ನು ಭದ್ರಗೊಳಿಸಿದರು. ಇನ್ನು ಈ ೨೦ನೇ ಶತಮಾನದಲ್ಲಿ ಬಂದ ಮಕ್ಕಳ ಸಾಹಿತಿಗಳು ಈ ಸಾಹಿತ್ಯವನ್ನು ಇನ್ನು ಹೆಚ್ಚು ಸಮೃದ್ಧಗೊಳಿಸಿದರು.

೩.೩. ಮಕ್ಕಳ ಸಾಹಿತ್ಯದ ಪ್ರಾಮುಖ್ಯತೆ

ಸಾಮಾನ್ಯವಾಗಿ ನಾವು ಮಕ್ಕಳನ್ನು ಮತ್ತು ಅವರ ಸಾಹಿತ್ಯವನ್ನು ಟೀಕಿಸುವ ಅಗತ್ಯವಿರುವುದಿಲ್ಲ. ಹಾಗೆಂದ ಮಾತ್ರಕ್ಕೆ ಮಕ್ಕಳನ್ನು ಮತ್ತು ಅವರ ಸಾಹಿತ್ಯವನ್ನು ನಿರ್ಲಕ್ಷ್ಯವನ್ನು ಮಾಡಬಾರದು. ಎಲ್ಲಿಯವರೆಗೆ ನಾವು ಮಕ್ಕಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲವೋ ಅಲ್ಲಿಯವರೆಗೆ ಆ ನಾಡಿನ ದೇಶದ ಭವಿಷ್ಯವನ್ನು ಕುರಿತಾದ ಚಿಂತನೆಗಳೆಲ್ಲವೂ ಅರ್ಥಪೂರ್ಣವೆನಿಸಲಾರವು.

'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂಬ ಅರ್ಥಪೂರ್ಣ ಮಾತಿನಂತೆ ವ್ಯಕ್ತಿತ್ವ ನಿರ್ಮಾಣದ ಭದ್ರಬುನಾದಿಯೇ ಬಾಲ್ಯವಾಗಿದ್ದು, ಈ ಬಾಲ್ಯವನ್ನು ಎತ್ತಿ ಹಿಡಿಯುವ ಸುಭದ್ರವಾದ ಗೋಡೆಯೇ ಯೌವನವಾಗಿರುತ್ತದೆ.

ಯಾವುದೇ ದೇಶದ ಅಥವಾ ಜನಾಂಗದ ಇತಿಹಾಸದಲ್ಲಿ ಮಕ್ಕಳಿಗೆ ಅತ್ಯಧಿಕ ಪ್ರಾಮುಖ್ಯತೆಯನ್ನು ನೀಡಲಾಗಿರುತ್ತದೆ. ಮಕ್ಕಳು ದೇಶದ ಜೀವನಾಡಿ. ಮಕ್ಕಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿಯಾಗಿರುತ್ತದೆ. ಚಿಕ್ಕ ಮಕ್ಕಳ ಸಾಮಾಜಿಕ ವರ್ತನೆ ಮತ್ತು ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಅಧ್ಯಯನ ಮಾಡುವ ಹಲವಾರು ಪ್ರಯತ್ನಗಳು ವಿಶ್ವಾದ್ಯಂತ ನಡೆಯುತ್ತಿದ್ದು, ಮಗು ತನ್ನ ಬೌದ್ಧಿಕ ಬೆಳವಣಿಗೆ ಮತ್ತು ದೈಹಿಕ ಬೆಳವಣಿಗೆಯ ಜೊತೆಗೆ ಸುಸಂಸ್ಕೃತ ಪ್ರಜೆಯಾಗುವಲ್ಲಿ ಈ ಪ್ರಯತ್ನಗಳು ಬಹಳ ಸಹಾಯಕವಾಗಿರುತ್ತವೆ.

ಮಕ್ಕಳ ಬಾಲ್ಯದ ಅವಧಿಯು ಅತ್ಯಂತ ಮಹತ್ವದ್ದೂ ಅದು ಅವರ ಮುಂದಿನ ಇಡೀ ವ್ಯಕ್ತಿತ್ವವನ್ನೇ ರೂಪಿಸುವ ಕಾಲವಾಗಿರುತ್ತದೆ. ಮಕ್ಕಳು ತಮ್ಮದೇ ಆದ ವೈಶಿಷ್ಟ್ಯ ವಿಭಿನ್ನ ಮಾನಸಿಕ ಸ್ಥಿತಿಗಳನ್ನು ಬೇರೆ ಬೇರೆ ಅಭಿರುಚಿಗಳನ್ನು ಹೊಂದಿದ್ದರೂ ಕೆಲವು ಗುಣಸ್ವಭಾವಗಳು ಎಲ್ಲಾ ಮಕ್ಕಳಲ್ಲೂ ಸಾಮಾನ್ಯವಾಗಿರುತ್ತವೆ. ಹೀಗಾಗಿ ದೊಡ್ಡವರು ಅನೇಕ ರೀತಿಯಲ್ಲಿ ಅವರಿಗೆ ಉತ್ತಮವಾದ ಮಾರ್ಗದರ್ಶನ ನೀಡುವ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಸಾಹಿತ್ಯದ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಮಕ್ಕಳಿಗೆ ಹಿತವನ್ನು ಬಯಸುವ ಉತ್ತಮ ಗುಣಗಳನ್ನು ಬೆಳೆಸುವ, ಅವರಿಗೆ ಸಂಸ್ಕಾರವನ್ನು ನೀಡುವ ಉತ್ತಮ ವ್ಯಕ್ತಿಯನ್ನಾಗಿ ಮಾಡುವ ಈ ಮಕ್ಕಳ ಸಾಹಿತ್ಯದ ಕೆಲಸ ಮಹತ್ವದಾಗಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳ ಸಾಹಿತ್ಯವನ್ನು ಕುರಿತು ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಚರ್ಚೆ ಅಲ್ಲಿ ತಳೆಯುತ್ತಿರುವ ಧೋರಣೆಗಳು, ಅನುಸರಿಸಬೇಕಾದ ಸಿದ್ಧಾಂತಗಳು ಮಕ್ಕಳ ಸಾಹಿತ್ಯ ರಚನೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿವೆ.

ಮಕ್ಕಳ ಸಾಹಿತ್ಯವನ್ನು ನಾವು ಎರಡು ರೀತಿಯಲ್ಲಿ ವಿಭಾಗಿಸಿರುವುದನ್ನು ಕಾಣುತ್ತೇವೆ. ಒಂದು ಮಕ್ಕಳೇ ತಮಗಾಗಿ ರಚಿಸಿಕೊಂಡಿರುವ ಸಾಹಿತ್ಯವಾದರೆ, ಇನ್ನೊಂದು ಹಿರಿಯ

ಸಾಹಿತಿಗಳು ಮಕ್ಕಳನ್ನು ಕುರಿತು ರಚನೆ ಮಾಡಿದ ಸಾಹಿತ್ಯವಿದೆ. ಮಕ್ಕಳ ಸಾಹಿತ್ಯವನ್ನು ರಚಿಸುವುದು ಅತಿ ಸುಲಭದ ಕೆಲಸವಲ್ಲ. ಹೇಗೇಗೊ ಹಗುರವಾಗಿ ಬರೆದುದೆಲ್ಲವೂ ಮಕ್ಕಳ ಸಾಹಿತ್ಯವಾಗದು.

ಹಾಗೆ ನೋಡಿದರೆ ಮಕ್ಕಳೆಲ್ಲರೂ ಮಕ್ಕಳ ಸಾಹಿತಿಗಳೇ ಏಕೆಂದರೆ ಮಕ್ಕಳು ತಮ್ಮ ಸುತ್ತಮುತ್ತ ವಾತಾವರಣ ಪರಿಸರವನ್ನು ಸದಾ ಕುತೂಹಲದಿಂದ ನೋಡುತ್ತ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡಿರುತ್ತಾರೆ. ತಮ್ಮ ಅಗಾಧವಾದ ಕಲ್ಪನಾ ಪ್ರಪಂಚದ ಮೂಲಕ ತಾವು ನೋಡಿದ ಲೋಕವನ್ನು ಮರುಸೃಷ್ಟಿ ಮಾಡಬಲ್ಲರಾಗಿರುತ್ತಾರೆ. ಇವರು ಕವಿತೆಯೊಳಗೊಂದು ಕವಿತೆ, ಕಥೆಯೊಳಗೊಂದು ಕಥೆ ಕಟ್ಟುವಂತರಾಗಿರುತ್ತಾರೆ. ಪ್ರಕೃತಿಯ ವಿಸ್ಮಯ ಲೋಕವನ್ನು ಮುಗ್ಧತೆಯಿಂದ ನೋಡಿರುತ್ತಾರೆ. ಹೀಗೆ ನೋಡಿದ ತಕ್ಷಣ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವುದು ಸಾಹಿತಿಗಳಿಗೆ ಮಾತ್ರ ಸಾಧ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು ಮಕ್ಕಳು ಪ್ರೇರಣೆಯನ್ನು ಪಡೆದು ಸಾಹಿತ್ಯವನ್ನು ರಚಿಸುತ್ತಾರೆ.

ಇನ್ನು ಮಕ್ಕಳಿಗಾಗಿಯೇ ಸಾಹಿತ್ಯವನ್ನು ರಚಿಸಿದವರು ಅಪಾರ ಸಂಖ್ಯೆಯಲ್ಲಿದ್ದಾರೆ. ಇವರು ಬಾಲಸಾಹಿತಿಗಳಾಗಿಯೇ ಬೆಳೆದು ಪ್ರೌಢ ಸಾಹಿತ್ಯ ರಚನಾಕಾರರಾಗಿರುತ್ತಾರೆ. ಇವರಲ್ಲಿ ಮತ್ತೆ ಎರಡು ರೀತಿಯ ಮಕ್ಕಳ ಸಾಹಿತ್ಯ ರಚನಾಕಾರರನ್ನು ಕಾಣಬಹುದು. ಒಂದು ಸದಾ ಪ್ರೌಢ ಸಾಹಿತ್ಯವನ್ನು ಬರೆಯುವ ಖ್ಯಾತ ಸಾಹಿತಿಗಳು ಆಗಾಗ ಮಕ್ಕಳಿಗಾಗಿ ರಚಿಸುವ ಕೃತಿಗಳು. ಮತ್ತು ಮಕ್ಕಳಿಗಾಗಿಯೇ ಬರೆಯುವ ಮಕ್ಕಳ ಸಾಹಿತಿಗಳಿರುವವರು ಮಕ್ಕಳಿಗಾಗಿ ಬರೆದ ಹಿರಿಯ ಸಾಹಿತಿಗಳೆಂದರೆ ಪಂಜೆ ಮಂಗೇಶರಾಯ, ಕುವೆಂಪು, ಬೇಂದ್ರೆ, ಕಾರಂತ, ನಾ.ಕಸ್ತೂರಿ, ಮೇವುಂಡಿ ಮಲ್ಲಾರಿ, ಜಿ.ಪಿ. ರಾಜರತ್ನಂ, ಆನಂದಕಂದ, ದಿನಕರ ದೇಸಾಯಿ, ವೈದೇಹಿ, ಅನುಪಮಾ ನಿರಂಜನ, ಕಯ್ಯಾರ ಕಿಞ್ಞಣ್ಣ ರೈ, ಮಹಮ್ಮದ್ ಬೋಳುವಾರು ಕುಂಞ, ಎಂ.ಎನ್. ಕಾಮತ್, ಹೊಯ್ಸಳ, ದೇವುಡು ನರಸಿಂಹಚಾರ್ಯ, ನಾ. ಡಿಸೋಜ, ಸುಮತೀಂದ್ರ ನಾಡಿಗ, ಎಚ್.ಎಸ್. ವೆಂಕಟೇಶಮೂರ್ತಿ, ಲಕ್ಷ್ಮೀನಾರಾಯಣ ಭಟ್, ಗುರುಲಿಂಗ ಕಾಪಸೆ, ಸಿಸು ಸಂಗಮೇಶ, ಎ.ಕೆ. ರಾಮೇಶ್ವರ, ನಿರುಪಮಾ, ಈಶ್ವರ ಕಮ್ಮಾರ, ರಸಿಕ ಪುತ್ತಿಗೆ, ಶಂ.ಗು. ಬಿರಾದಾರ, ಕಂಚ್ಯಾಣಿ ಶರಣಪ್ಪ, ಪಳಕಳ ಸೀತಾರಾಮಭಟ್ಟ, ಆನಂದ ಪಾಟೀಲ, ಜಯವಂತ ಕಾಡದೇವರ, ರಾಜೇಂದ್ರ ಗಡಾದ ಮೊದಲಾದವರು ಹೀಗೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಬರಹಗಾರರ ಸಂಖ್ಯೆ ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದಾರೆಂದು ಹೇಳಬಹುದು.

ಇಂಥ ಮಕ್ಕಳ ಸಾಹಿತ್ಯ ರಚನೆಯ ಕೆಲಸವೇನೂ ಸರಳವಲ್ಲ. ಇವರು ಬರೆದ ಕೃತಿಗಳು ಮಕ್ಕಳನ್ನು ಎಷ್ಟರ ಮಟ್ಟಿಗೆ, ಎಷ್ಟು ಮಕ್ಕಳಿಗೆ ತಲುಪುತ್ತವೆ ಎಂಬುದನ್ನು ಗಮನಿಸಬೇಕು. ಈ ಆಧುನಿಕ ಓಟದ ಪ್ರಪಂಚದಲ್ಲಿ ಮಕ್ಕಳಿಗೆ ಪುಸ್ತಕ ಓದುವ ವಾತಾವರಣವನ್ನು ಎಷ್ಟರ ಮಟ್ಟಿಗೆ

ಕಟ್ಟಿಕೊಡುತ್ತಿದ್ದೇವೆ. ಈ ಪುಸ್ತಕ ಓದು ಅವರ ಭವಿಷ್ಯದ ಜಗತ್ತಿಗೆ ಉಪಯುಕ್ತವಾಗುತ್ತದೆಯೇ? ಎಂಬುದನ್ನೆಲ್ಲಾ ಗಮನಿಸಬೇಕಾದ ಅಗತ್ಯವಿದೆ.

ಸಮಾಜ ಜೀವಿಗಳಾಗಿ ಬೆಳೆಯಬೇಕಾದ ಮಕ್ಕಳಲ್ಲಿ ಮೊದಲು ಆತ್ಮವಿಶ್ವಾಸವನ್ನು ತುಂಬುವ ಕಾರ್ಯವನ್ನು, ಪಾಲಕರು, ಪೋಷಕರು, ಶಾಲೆ ಶಿಕ್ಷಕರು, ಸಮಾಜ-ಚಿಂತಕರು ಯಾವುದೇ ಸಮಯದಲ್ಲಿ ಮಾಡಬೇಕಾಗಿರುತ್ತದೆ. ಅವರು ಮಕ್ಕಳಿಗೆ ಒಳ್ಳೆಯ ಓದು, ಉತ್ತಮ ಅಭಿರುಚಿ, ಧ್ಯಾನ-ಯೋಗ, ಸಂಸ್ಕೃತಿ, ಸಂಸ್ಕಾರ, ತಾಳ್ಮೆ, ಸಂವಹನ ಕೌಶಲ್ಯಗಳು, ಸಮಸ್ಯೆಗಳ ನಿವಾರಣೆ ಮೊದಲಾದ ಮಾನವೀಯ ಮೌಲ್ಯಗಳನ್ನು ಕಲಿಸಬೇಕಾಗುತ್ತದೆ. ಜೊತೆಗೆ ಉತ್ತಮವಾದ ಮಕ್ಕಳ ಸಾಹಿತ್ಯವನ್ನು ಪರಿಚಯಿಸುವ ಮೂಲಕವು ಮಕ್ಕಳಲ್ಲಿ ಮಾನವೀಯ ನೆಲೆಗಳನ್ನು ಕಾಣಬಹುದು.

೩.೪. ಮಕ್ಕಳ ಸಾಹಿತ್ಯದ ಸ್ವರೂಪ

'ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು' ಎನ್ನುವ ಹಾಗೆ ಇಂದಿನ ಮಕ್ಕಳು ನಾಳೆ ಮನುಷ್ಯರಾಗಬೇಕೇ ಹೊರತು ಮೃಗಗಳಾಗಬಾರದು. ಈ ಕೆಲಸ ಒತ್ತಾಯ, ಹೆದರಿಕೆಗಳಿಂದ ಸಾಧ್ಯವಾಗುವುದಿಲ್ಲ. ಒಂದು ಮೊಗ್ಗು ಅರಳಲು ಅಗತ್ಯವಾದ ನೀರು, ಗೊಬ್ಬರ, ಗಾಳಿ, ಬೆಳಕು ನೀಡಬೇಕೆ ಹೊರತು ನಾವೇ ಬಲವಂತವಾಗಿ ಅರಳಿಸಲು ಸಾಧ್ಯವಿಲ್ಲ. ಹಾಗೆಯೇ ಮಕ್ಕಳು ತಮಗೆ ತಾವೇ ಬೆಳೆಯಲು ಅನುವು ಮಾಡಿಕೊಡಬೇಕು. ಅವರು ತಮಗೆ ತಕ್ಕ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅಗತ್ಯವಾದ ಅವಕಾಶವನ್ನು ಹಿರಿಯರು ಕಲ್ಪಿಸಿಕೊಡಬೇಕು. ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯದ ಪಾತ್ರ ಹಿರಿದಾದುದಾಗಿದೆ.

ಮಕ್ಕಳಿಗೆ ಯಾವುದೂ ಶಿಕ್ಷೆ ಅನಿಸದೆ ಶಿಕ್ಷಣ ಅನ್ನಿಸುವ ಹಾಗೆ, ಅವಮಾನ ಎನಿಸದೆ ಪ್ರೀತಿಯ ಮಾತು, ಹಿತನುಡಿ, ಸಲಹೆ ಅನ್ನಿಸುವ ಹಾಗೆ, ರಂಜನೀಯವಾದ ಹಾದಿಯಲ್ಲಿ ಅವರನ್ನು ಕರೆದೊಯ್ಯಬೇಕು. ಈ ಬಗೆಯ ಮಕ್ಕಳ ಸಾಹಿತ್ಯದಿಂದ ಮೌಲ್ಯಗಳನ್ನು ಅವರಲ್ಲಿ ತರಬೇಕು. ಈ ಸಾಹಿತ್ಯದ ಒಟ್ಟು ಸ್ವರೂಪ ಹೇಗಿರಬೇಕೆಂದರೆ ಸು. ೩ ರಿಂದ ೧೦ ವರ್ಷದ ವಯಸ್ಸಿನ ಮಕ್ಕಳಿಗೆ ಕಥೆಗಳು ಬಹಳ ಇಷ್ಟವಾಗುತ್ತವೆ. ಈ ಅವಧಿಯಲ್ಲಿ ಮಕ್ಕಳು ಉದಾಹರಣೆಗಳಿಂದ ಕಲಿಯುವುದು ಹೆಚ್ಚು. ಉತ್ತಮವಾದ ಮೌಲ್ಯಗಳನ್ನು ಅವರಿಗೆ ಕಲಿಸಲು ಕಥೆಗಳನ್ನು ಉದಾಹರಣೆಯಾಗುವಂತೆ ರಚಿಸಬೇಕು. ಮತ್ತು ಹಳೆ ಕಥೆಗಳನ್ನು, ಹೊಸ ಹೊಸ ಕಥೆಗಳನ್ನು ಇಂದಿನ ವಾತಾವರಣ ಹಾಗೂ ಪರಿಸರಕ್ಕೆ ತಕ್ಕ ಹಾಗೆ ರಚಿಸಲು ಸಾಧ್ಯವಿರುತ್ತದೆ.

ಹೀಗೆ ಕಥೆಯನ್ನು ರಚನೆ ಮಾಡುವ ಮತ್ತು ಹೇಳುವ ಕಲೆಗಾರಿಕೆ ನೈತಿಕ ಶಿಕ್ಷಣವನ್ನು ಮಕ್ಕಳಿಗೆ ತುಂಬುವಂತಿರಬೇಕು. ನಂತರ ವಯಸ್ಸಿನ ಮಕ್ಕಳಿಗೆ ನಾಟಕ, ಕಾದಂಬರಿಗಳನ್ನು ಕೊಡಬಹುದು. ಇದರಲ್ಲಿ ಚುರುಕಾದ ಸಂಭಾಷಣೆ, ನವಿರಾದ ನಿರೂಪಣೆಯ ಜೊತೆಗೆ ಧಾರ್ಮಿಕ ಸಂತರು, ದೇಶಭಕ್ತರು, ನಾಡು ನುಡಿಗಾಗಿ ತ್ಯಾಗ ಬಲಿದಾನ ಮಾಡಿದವರು,

ಸಾಹಸಿಗಳು ಮೊದಲಾದವರನ್ನು ಈ ಅವಧಿಯ ಮಕ್ಕಳ ಸಾಹಿತ್ಯದಲ್ಲಿ ತರಬಹುದು. ಈ ಮೂಲಕ ಮಕ್ಕಳಲ್ಲಿ ಐತಿಹಾಸಿಕ ಪ್ರಜ್ಞೆಯನ್ನು, ಸಾಂಸ್ಕೃತಿಕ ಮೌಲ್ಯಗಳನ್ನು, ಧೈರ್ಯ-ಸ್ಥೈರ್ಯಗಳನ್ನು ತುಂಬುವುದರ ಜೊತೆ ಜೊತೆಯಲ್ಲಿಯೇ ಅವರಲ್ಲಿ ಅಗಾಧವಾದ ಕಲ್ಪನಾ ಸಾಮರ್ಥ್ಯವನ್ನು ಬೆಳಸಬಹುದು. ಹೀಗೆ ಮಕ್ಕಳ ಸಾಹಿತ್ಯ ಮುಖ್ಯವಾಗಿ ಮಕ್ಕಳಿಗೆ ಆಹ್ಲಾದವನ್ನು ನೀಡಿ ಅವರು ತಮ್ಮ ಬಾಲ್ಯದ ದಿನಗಳನ್ನು ನೆನೆದರೆ ಸವಿ ಅನ್ನಿಸಬೇಕು. ಆ ಅವಧಿಯ ಕಥೆ, ಕವನ, ನಾಟಕ, ಕಾದಂಬರಿಗಳು ಅವರಲ್ಲಿ ಉತ್ತಮವಾದ ಅಂತಃಸತ್ವವನ್ನು ಬೆಳೆಸುವಂತಿರಬೇಕು. ಒಟ್ಟಿನಲ್ಲಿ ಮಕ್ಕಳನ್ನು ಮನುಷ್ಯರಾಗುವತ್ತ ಮಕ್ಕಳ ಸಾಹಿತ್ಯದ ಗಮನವಿರಬೇಕು.

೩.೪.೧. ಮಕ್ಕಳ ಸಾಹಿತ್ಯದ ವಸ್ತು

ಮಕ್ಕಳ ಸಾಹಿತಿಗಳಿಗೆ 'ವಸ್ತು'ವಿನ ಬರವಿಲ್ಲ. ಇದು ಪ್ರಪಂಚದ ಯಾವುದೇ ಸಾಹಿತ್ಯಕ್ಕೂ ವಸ್ತುವಾಗಬಲ್ಲದು. ಮಕ್ಕಳಿಗೆ ಇಂದು ಏನೂ ಗೊತ್ತಿರುವುದಿಲ್ಲವೆಂದು ನಾವು ತಿಳಿಯಬಾರದು. ಇಲ್ಲಿ ಮಗು ತನ್ನ ಸುತ್ತಮುತ್ತಲಿನ ಪರಿಸರದ ಮೂಲಕವೇ ಎಲ್ಲವನ್ನು ಸೂಕ್ಷ್ಮವಾಗಿ ಅರಿತಿರುತ್ತದೆ. ಮಕ್ಕಳ ಸಾಹಿತಿಗಳಿಗೆ 'ವಸ್ತು'ಗಳು ಬೇಕಾದಷ್ಟು ಇದ್ದರೂ ಇದರಲ್ಲಿ ಗಟ್ಟಿಯಾದುದನ್ನೆ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಬರಿ ಪೊಳ್ಳು-ಸುಳ್ಳು ವಿಷಯಗಳು ಈ ಸಾಹಿತ್ಯದ ಮೂಲಕ ಅರಿಯಬೇಕಿಲ್ಲ. ಹಾಗೇ ಮಾಡಿದರೆ ಏನೂ ಅರಿಯದ ಮುಗ್ಧಮನಸ್ಸಿನ ಮಕ್ಕಳಿಗೆ ನಾವಾಗಿಯೇ ಕೆಟ್ಟದ್ದನ್ನು ಕಲಿಸಿದಂತಾಗುತ್ತದೆ. ಮಗುವಿಗೆ ಯಾವುದನ್ನು ಹೇಳಬೇಕು, ಯಾವುದನ್ನು ಹೇಳಬಾರದು ಎಂಬ ವಿಚಾರವಂತಿಕೆಯೂ ಸಾಹಿತ್ಯ ರಚನಾಕಾರರಲ್ಲಿ ಇರಬೇಕು.

ಇತ್ತೀಚಿನ ಬಹಳಷ್ಟು ಜನ ಸಾಹಿತಿಗಳು ಮಕ್ಕಳಿಗೆ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಎಲ್ಲರು ಚಂದ್ರ, ಭೂಮಿ, ಸೂರ್ಯ ಮೊದಲಾದವುಗಳನ್ನೆ ಎಳೆದಾಡುವವರು. ಆದರೂ ಕೆಲವೇ ಕೆಲವು ಜನ ಮಾತ್ರ ಮಕ್ಕಳಿಗೆ ಮಾರ್ಗದರ್ಶನ ನೀಡಬಹುದಾದಂತಹ ಸಾಹಿತ್ಯವನ್ನು ನೀಡುವವರಿದ್ದಾರೆ.

ಮಕ್ಕಳ ಸಾಹಿತ್ಯದಲ್ಲಿ ಕಲ್ಪನೆಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಲಾಗುತ್ತದೆ. ತಮಗಾಗಿ ಬರೆದ ಸಾಹಿತ್ಯವನ್ನು ಕೇಳುವಾಗ ಇಲ್ಲವೇ ಓದುವಾಗ, ಮಕ್ಕಳು ಕುತೂಹಲದಿಂದ ಕಣ್ಣು-ಬಾಯಿಯನ್ನು ಬಿಟ್ಟು ವಿಸ್ಮಿತರಾಗಿ ನೋಡುತ್ತಿರುತ್ತಾರೆ. ಇದು ಎಷ್ಟು ಚನ್ನಾಗಿದೆ! ಎಂಥಾ ಅದ್ಭುತವಾಗಿದೆ ಎನ್ನುವಂತಿರಬೇಕು. ಈ ಮನೋಧೋರಣೆಯಿಂದಲೇ ಮಕ್ಕಳಿಗೆ ಸಾಹಿತ್ಯವನ್ನು ರಚಿಸುವವರಲ್ಲಿರಬೇಕು. ಮಕ್ಕಳ ಸಾಹಿತ್ಯ ಮಕ್ಕಳನ್ನು ಮನರಂಜಿಸುವಂತಿರಬೇಕು. ಇದು ಕೇವಲ ಮನೋರಂಜನೆ ಯನ್ನು ಕೊಡುವ ಬರವಣಿಗೆ ಆಗಿರಬಾರದು. ಆಕಾಶದಲ್ಲಿ ಹಾರಾಡುವ ಆನೆ-ಕುದುರೆಗಳು, ನಡೆದಾಡುವ ಬೆಟ್ಟ-ಗುಡ್ಡಗಳು, ಕ್ಷಣಮಾತ್ರದಲ್ಲಿ ಎಲ್ಲವನ್ನು ಮಾಯಮಾಡುವ ಮಾಂತ್ರಿಕರು, ಪರ್ವತಗಾತ್ರದ ರಾಕ್ಷಸರು, ಮಲ್ಲಿಗೆ ತೂಕದ ರಾಜಕುಮಾರಿ, ಗಾಳಿಯಲ್ಲಿ

ತೇಲುವ ರಾಜಕುಮಾರಿ ಮೊದಲಾದ ವಸ್ತುಗಳು ಇಲ್ಲವೇ ನೀತಿಕಥೆಗಳನ್ನು ಹೇಳುವ ಪ್ರಾಣಿ–ಪಕ್ಷಿಗಳು, ಬುದ್ಧಿಯನ್ನು ಕಲಿಯುವ ಮನುಷ್ಯರು, ಮಾತಾಡುವ ಗಿಳಿಮರಿ ಮೊದಲಾದವುಗಳೇ ಈ ಮಕ್ಕಳ ಸಾಹಿತ್ಯದಲ್ಲಿ ತುಂಬಿಕೊಂಡಿದೆ.

ಹೀಗೆ ಕನ್ನಡದಲ್ಲಿ ಮಕ್ಕಳಿಗೆ ಸಂಬಂಧಿಸಿದ ಯಾವುದೇ ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು, ಪತ್ರಿಕೆಗಳನ್ನು ಗಮನಿಸಿದಾಗ ಈ ಮೇಲಿನ ವಸ್ತುಗಳಿಂದಲೇ ತುಂಬಿ ಹೋಗಿರುತ್ತವೆ. ಇದರಲ್ಲಿ ಹೊಸತನಕ್ಕೆ ಅವಕಾಶವೇ ಕಡಿಮೆ, ಇದರ ಬದಲಾಗಿ ಇಂದಿನ ಆಧುನಿಕ ಜಗತ್ತಿನಲ್ಲಿ ಮಕ್ಕಳಿಗೆ ಪೂರಕವಾಗುವಂತ ವಿಜ್ಞಾನ, ತಂತ್ರಜ್ಞಾನ, ಖಗೋಳ ಜ್ಞಾನ, ಮನೋವಿಕಾಸಕ್ಕೆ ಸಂಬಂಧಿಸಿದ ವಸ್ತುಗಳನ್ನು ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ತರ್ಕ, ವಿಮರ್ಶೆ ಮೊದಲಾದ ವೈಜ್ಞಾನಿಕ ವಿಷಯಗಳನ್ನು ಕುರಿತು ಸಾಹಿತ್ಯದ ರಚನೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಹೀಗೆ ಯಾರೇ ಮಕ್ಕಳಿಗಾಗಿ ಸಾಹಿತ್ಯವನ್ನು ರಚನೆ ಮಾಡುವಾಗ, ಅದು ಕಥೆ, ಕವನ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಇಲ್ಲವೇ ಪಠ್ಯಪುಸ್ತಕವೇ ಆಗಿರಲಿ, ಇವರಲ್ಲಿ ಹೇಳುವ ವಿಷಯಗಳು ಮಕ್ಕಳ ಬದುಕಿಗೆ ಆದಷ್ಟು ಹತ್ತಿರವಾಗಿರಬೇಕು, ಮತ್ತು ಉಪಯುಕ್ತವಾಗಿರಬೇಕು. ಮಕ್ಕಳು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ, ಎಲ್ಲವನ್ನು ಪ್ರಶ್ನೆ ಮಾಡಿ, ಅದನ್ನು ಅರ್ಥಪೂರ್ಣವಾಗಿ ತಿಳಿದು, ವಿಶ್ಲೇಷಿಸಿ, ಅದರ ಸರಿತಪ್ಪುಗಳನ್ನು ಅರ್ಥಮಾಡಿಕೊಂಡು ತೀರ್ಮಾನಿಸುವಂತಿರಬೇಕು. ಇದರಲ್ಲಿ ಮನೋರಂಜನೆಯು ಮಿತಿಮೀರಬಾರದು. ಮಕ್ಕಳನ್ನು ಭ್ರಮೆಯ ಕಲ್ಪನೆಯಲ್ಲಿ ಬಂಧಿಸುವಂತಿರಬಾರದು.

ಇಲ್ಲಿ ಮಕ್ಕಳಿಗೆ ಪುಸ್ತಕದಲ್ಲಿರುವುದು ಮತ್ತು ವಾಸ್ತವ ಜಗತ್ತಿನಲ್ಲಿರುವುದು ಒಂದೇ ಎನ್ನುವ ಭಾವನೆಯಿರಬೇಕು. ಏನೇ ಸಮಸ್ಯೆಗಳು ಬಂದರು ಅದು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು ಪರಿಹಾರವನ್ನು ಕಾಣುವ ಪ್ರೇರಣೆಯಲ್ಲಿರಬೇಕು, ಭಯ, ದುಃಖ, ಕೋಪ, ಮತ್ಸರ, ಸ್ವಾರ್ಥಗಳಿಂದ ಮುಕ್ತವಾಗಿ, ಆತ್ಮವಿಶ್ವಾಸದಿಂದ ಮಕ್ಕಳು ಭವಿಷ್ಯವನ್ನು ಎದುರು ನೋಡುವಂತಿರಬೇಕು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಸಾಹಿತ್ಯ ರಚನೆ ಮಾಡುವವರು, ನಾವು ತಯಾರಿಸಲು ಹೊರಟಿರುವುದು ಮುಂದಿನ ಸತ್ಪ್ರಜೆಗಳನ್ನು ಎಂಬ ಅರಿವು ಸಾಹಿತ್ಯರಚನೆಕಾರರಲ್ಲಿರಬೇಕಾಗುತ್ತದೆ.

೩.೪.೨. ಮಕ್ಕಳ ಸಾಹಿತ್ಯದ ಲಕ್ಷಣಗಳು

ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ ಬದಲಾವಣೆಯಾಗುತ್ತಾ ಬಂದು ಪಾಶ್ಚಾತ್ಯರ ಪ್ರಭಾವದಿಂದ ದೇಶಿಯ ಸಾಹಿತ್ಯಕ್ಕೂ ಮನ್ನಣೆ ದೊರೆತ ನಂತರ ಆಧುನಿಕ ಯುಗದಲ್ಲಿ ಮಕ್ಕಳಿಗಾಗಿಯೇ ಸಾಹಿತ್ಯ ರಚನೆಯಾಗತೊಡಗಿ, ಅದರಲ್ಲಿಯು ಇತರೇ ಸಾಹಿತ್ಯ ಪ್ರಕಾರಗಳಂತೆ ಕವನ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ ಮತ್ತು ಕಾಮಿಕ್ಸ್ ಮೊದಲಾದ ಪ್ರಕಾರಗಳಾಗಿ ಕವಲೊಡೆದು ಮಕ್ಕಳಿಗೆ ಅತಿ ಪ್ರಿಯವೆನಿಸುತ್ತವೆ.

ಪಂಜೆಮಂಗೇಶರಾಯರು ತಮ್ಮ 'ಬಾಲ್ಯ ಸಾಹಿತ್ಯ'ದ ಶೀರ್ಷಿಕೆಯಲ್ಲಿ ಅವರು ಮಕ್ಕಳನ್ನು ಕುರಿತು ಈ ರೀತಿಯಲ್ಲಿ ಉಲ್ಲೇಖಿಸುವುದನ್ನು ಕಾಣಬಹುದು. "ಮಕ್ಕಳ ಕಥೆಗಳಲ್ಲಿ ಒಂದಿಷ್ಟು ಅದ್ಭುತ ರಸವಿರಬೇಕು. ಮಕ್ಕಳಲ್ಲಿ ಕಲ್ಪನಾಶಕ್ತಿ ಹೆಚ್ಚು. ಅದನ್ನು ಹತೋಟಿಯಲ್ಲಿಡುವಷ್ಟು ಬುದ್ಧಿಯು ಬೆಳೆದಿರುವುದಿಲ್ಲ. ಕಥೆಗಳಲ್ಲಿ ಅದ್ಭುತವಿದ್ದರೆ, ಅವರ ಕಲ್ಪನಾಶಕ್ತಿಯ ಓಟಕ್ಕೆ ಅವಕಾಶವಾಗುತ್ತದೆ. ಕಾಲು ತಾಗಿದರೆ ಬಾನಿಗೇರುವ ಜಾಯಮಾನ, ಕಿವಿ ತಿರುವಿದರೆ ನೀರೊಳಗೆ ಹೋಗುವ ಮಾಟದ ಕುದುರೆ, ದೀಪ ಉಜ್ಜಿದರೆ ಕಣ್ಣಮುಂದೆ ಬರುವ ಭೂತ, ಮುಂತಾದ ಕಥೆಗಳು ಅವುಗಳೊಳಗಿನ ಅದ್ಭುತ ರಸದಿಂದ ಮಕ್ಕಳಿಗೆ ಪ್ರಿಯವಾಗುತ್ತದೆ"[೧೦] ಎನ್ನುವರು.

ಮಕ್ಕಳ ಸಾಹಿತ್ಯದ ಪಿತಾಮಹರೆನಿಸಿದ ಪಂಜೆ ಮಂಗೇಶರಾಯರು ಮಕ್ಕಳಿಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟವರು. ಇವರು ಮಕ್ಕಳ ಸಾಹಿತ್ಯದ ಒಟ್ಟು ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ೧೯೩೫ರಲ್ಲಿ ಬಾಲಸಾಹಿತ್ಯವನ್ನು ಕುರಿತು ಹೈದರಾಬಾದ್ ನಾಡಹಬ್ಬದ ಭಾಷಣದಲ್ಲಿ ಅವರು ಮಕ್ಕಳ ಸಾಹಿತ್ಯದ ಕೆಲವು ಲಕ್ಷಣಗಳನ್ನು ಗುರುತಿಸುತ್ತಾರೆ. ಅವು ಹೀಗೆ:

* ಮಕ್ಕಳಿಗಾಗಿ ಬರೆಯುವ ಕಥೆ, ಕವನ, ನಾಟಕಗಳ ವಸ್ತುಗಳು ಮಕ್ಕಳ ಪ್ರಪಂಚಕ್ಕೆ ಒಳಪಟ್ಟಿರಬೇಕು. ಅವರಿಗೆ ಪರಿಚಯವಿರುವ ವಸ್ತುವನ್ನೇ ಆಯ್ಕೆ ಮಾಡಿಕೊಂಡಿರಬೇಕು.
* ಮಕ್ಕಳ ಸಾಹಿತ್ಯದಲ್ಲಿ ಒಂದಿಷ್ಟು ಅದ್ಭುತ ರಸವಿದ್ದರೆ, ಮಕ್ಕಳ ಕಲ್ಪನಾ ಶಕ್ತಿಗೆ ಪ್ರಚೋದನೆ ಸಿಗುತ್ತದೆ.
* ಮಕ್ಕಳ ಸಾಹಿತ್ಯದ ಭಾಷೆ ಸುಲಭ ಹಾಗೂ ಸರಳವಾಗಿರಬೇಕು. ಅಲ್ಲಿ ಬಳಸಿರುವ ಶಬ್ದಗಳು ಮಕ್ಕಳ ಮನೆಗಳಲ್ಲಿಯೇ ಬಳಸುವಂತವಾಗಿರಬೇಕು.
* ಮಕ್ಕಳ ಸಾಹಿತ್ಯದಲ್ಲಿ ಬಳಸುವ ವಾಕ್ಯಗಳು ದೀರ್ಘವಾಗಿರದೆ, ಸರಳವಾಗಿ ಚಿಕ್ಕ ಚಿಕ್ಕವಾಗಿರಬೇಕು.
* ಮಕ್ಕಳ ಸಾಹಿತ್ಯದಲ್ಲಿ ಯಾವುದೇ ಧರ್ಮ ಬೋಧನೆ ಸಲುವಾಗಿ ರಚಿಸಿದಂತೆ ಇರಬಾರದು.
* ಮಕ್ಕಳ ಸಾಹಿತ್ಯದ ಕಥೆಗಳಲ್ಲಿ ನಿರೂಪಣೆಗಿಂತ, ಸಂಭಾಷಣೆಗೆ ಒತ್ತನ್ನು ನೀಡಿರಬೇಕು.
* ಮಕ್ಕಳ ಸಾಹಿತ್ಯದಲ್ಲಿ ಅಸಹ್ಯ-ಅಶ್ಲೀಲ ಪದಗಳಿಗೆ ಅವಕಾಶವಿರಬಾರದು.
* ಪುನರುಕ್ತಿ ಮಕ್ಕಳಿಗೆ ಪ್ರಿಯವಾದರಿಂದ ಅವುಗಳನ್ನು ಹೆಚ್ಚಾಗಿ ಬಳಸಿರಬೇಕು. ಮತ್ತು ಇದರಿಂದ ಅವರ ಭಾಷೆಯಲ್ಲಿ ಇನ್ನು ಸ್ಪಷ್ಟತೆಯನ್ನು ಕಾಣಬಹುದು.
* ಮಕ್ಕಳ ಸಾಹಿತ್ಯದ ಕೃತಿಗಳನ್ನು ದಪ್ಪ ಅಕ್ಷರಗಳಲ್ಲಿ ಅಂದವಾಗಿ ಮುದ್ರಿಸಿರಬೇಕು.

ಅಡಿಟಿಪ್ಪಣಿ

೧. ಕನ್ನಡ ವಿಷಯ ವಿಶ್ವಕೋಶ, ಪು-೯೭೭.

೨. ಮಕ್ಕಳ ಸಾಹಿತ್ಯ ಒಂದಿಷ್ಟು ಮಾತುಕತೆ ತ್ರೈಮಾಸಿಕ ಸಂಚಿಕೆ-೨೦, ಪುಟ-೨

೩. ಅದೇ ಪು-೫

೪. ಅದೇ ಪು-೫

೫. ೮ನೇ ತರಗತಿ ಇಂಗ್ಲೀಷ್ ಪಠ್ಯಪುಸ್ತಕ, ಪುಟ-೮೯

೬. ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ, ಲೇ. ಡಾ. ನಿರುಪಮಾ, ಪು-೨೫೧.

೭. ಆರ್. ನರಸಿಂಹಾಚಾರ್ಯ, ಕರ್ನಾಟಕ ಕವಿಚರಿತೆ (ಪ್ರಥಮ ಸಂಪುಟ), ಪು-೧೧,

೮. ಅದೇ ಪು-೧೨

೯. ಕನ್ನಡದಲ್ಲಿ ಮಕ್ಕಳ ಸಾಹಿತ್ಯ, ಕನ್ನಡ ವಿಶ್ವಕೋಶ (ಸಂಪುಟ ಮೂರು), ಪು-೭೪೮

೧೦. ಪಂಜೆ ಮಂಗೇಶರಾಯರು, ಬಾಲ ಸಾಹಿತ್ಯ ಮಂಡಳಿ, ಪಂಜೆಯವರ ನೆನಪಿಗಾಗಿ, ಪು-೬೦.

❖❖❖

ಅಧ್ಯಾಯ: ನಾಲ್ಕು

ಮಕ್ಕಳ ಸಾಹಿತ್ಯದ ವಸ್ತು, ತಂತ್ರ ಮತ್ತು ಶೈಲಿ

೪.೧. ಮಕ್ಕಳ ಕಥೆಗಳ ಹುಟ್ಟು ಮತ್ತು ಬೆಳವಣಿಗೆ

೪.೨. ಮಕ್ಕಳ ಕಥೆಗಳ ಪ್ರಾಚೀನತೆ

೪.೩. ಮಕ್ಕಳ ಕಥೆಗಳ ಸ್ವರೂಪ

೪.೪. ಮಕ್ಕಳ ಕಥೆಗಳ ಪ್ರಾಮುಖ್ಯತೆ

೪.೫. ಮಕ್ಕಳ ಕಥೆಗಳ ಪ್ರಕಾರಗಳು

೪.೬. ಮಕ್ಕಳ ಕಥೆಗಳಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಬಳಕೆ

೪.೭ ಮಕ್ಕಳ ಕಾವ್ಯಗಳಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಬಳಕೆ

೪.೮. ಮಕ್ಕಳ ನಾಟಕಗಳಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಬಳಕೆ

ಅಧ್ಯಾಯ: ನಾಲ್ಕು

ಮಕ್ಕಳ ಸಾಹಿತ್ಯದ ವಸ್ತು, ತಂತ್ರ ಮತ್ತು ಶೈಲಿ

ಯಾವುದೇ ಪ್ರಕಾರದ ಸಾಹಿತ್ಯದ ಪ್ರಾರಂಭವೆಂದರೆ ಅದು ಸಂಧಿಕಾಲ ಮಾತ್ರವಲ್ಲ ಸಂದಿಗ್ಧ ಕಾಲವೂ ಆಗಿರುತ್ತದೆ. ಇದರ ಆಂತರಿಕ ಹಾಗೂ ಬಾಹ್ಯ ವಿಚಾರಧಾರೆಯ ಮೂಲಕ ಮೂರ್ತ ರೂಪಕ್ಕೆ ಯಾವುದೇ ಧಕ್ಕೆಯಾಗದಂತೆ ಹಳೆಯತನದಿಂದ ಹೊಸತನವನ್ನು ಮೈಗೂಡಿಸಿಕೊಂಡು ತನ್ನತನವನ್ನು ಮೆರೆಯುವಂತೆ ಮಾಡುವುದು ಕಷ್ಟವೇ ಆಗಿರುತ್ತದೆ. ಹೊಸ ವಿಚಾರ ಭಾವಗಳಿದ್ದರೂ ಬಳಕೆಯ ಭಾಷೆಯಿಂದ ಬಿಡಿಸಿಕೊಂಡು ಪರಂಪರೆಯಿಂದ ಹೊರಬರಲು ಪ್ರಯತ್ನಿಸಿದರೂ ಅದು ತನ್ನತನವನ್ನು ಉಳಿಸಿಕೊಂಡೇ ಬರುತ್ತದೆ. ಅಂಥ ಸ್ವಂತಿಕೆಯ ಸೃಜನಶೀಲ ಪ್ರತಿಭೆ ಹಾಗೂ ಹೋರಾಟದ ಮನೋಭಾವ ಮಕ್ಕಳ ಸಾಹಿತ್ಯದ ಕಥೆಗಳಲ್ಲಿ, ಕವನಗಳಲ್ಲಿ ಮತ್ತು ನಾಟಕಗಳಲ್ಲಿ ಅವಿರ್ಭಾವವಾಗಿ ಆಯಾ ಕಾಲದ ಸಾಹಿತ್ಯದ ಪ್ರವರ್ತಕವೆನಿಸುತ್ತದೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯವನ್ನು ಅಭ್ಯಾಸ ಮಾಡುವಾಗ ಕೆಲವು ಮೂಲಭೂತ ವಿಷಯಗಳನ್ನು ತಿಳಿಯುವ ಅಗತ್ಯವಿರುತ್ತದೆ. ಈ ಮಕ್ಕಳ ಸಾಹಿತ್ಯವನ್ನು ಪ್ರೌಢ ಸಾಹಿತ್ಯದಷ್ಟೇ ಸ್ವತಂತ್ರ ಅಸ್ತಿತ್ವ ಹೊಂದಿದ ಸಾಹಿತ್ಯವೆಂದು ಪರಿಗಣಿಸಬಹುದು.

ಮಕ್ಕಳ ಸಾಹಿತ್ಯ ಆರಂಭವೆನ್ನುವುದು ಕಲ್ಪನೆ ಮಾತ್ರ. ಸಾಹಿತ್ಯದ ಇತಿಹಾಸವು ಸನಾತನವೆನ್ನುವಷ್ಟು ಪ್ರಾಚೀನವಾದರೂ ಮಕ್ಕಳ ಸಾಹಿತ್ಯ ಬೆಳಕಿಗೆ ಬಂದದ್ದು ಇತ್ತೀಚಿಗೆ. ಸಾಹಿತ್ಯವು ಮನಸ್ಸಿನ ಪರಿಶ್ರಮ ಹಾಗೂ ಹೋರಾಟದೊಂದಿಗೆ ಉದ್ಭವಿಸುತ್ತದೆ ಎನ್ನಬಹುದು. ಮಕ್ಕಳ ಮನಸ್ಸು ಹಾಗೂ ಬುದ್ಧಿ ಭಾವನೆಗಳನ್ನು ಮನದಟ್ಟು ಮಾಡಿಕೊಂಡು ರಚಿಸಿದ ವೈಜ್ಞಾನಿಕ ಸಾಹಿತ್ಯವಾಗಿದೆ ಎನ್ನಬಹುದು. ಈ ದೃಷ್ಟಿಯಿಂದ ಮಕ್ಕಳ ಸಾಹಿತ್ಯದ ಬೆಳವಣಿಗೆ ಮನಶಾಸ್ತ್ರ ಮತ್ತು ವೈಚಾರಿಕ ಬೆಳವಣಿಗೆಯ ಫಲದಿಂದ ಬಂದಿದೆ ಎನ್ನಬಹುದು. ವಿಶ್ವಸಾಹಿತ್ಯ ಪರಂಪರೆಯಲ್ಲಿ ಮಕ್ಕಳ ಸಾಹಿತ್ಯವನ್ನು ಕಾಲ್ಪನಿಕ, ರಮ್ಯ, ಭಯಾನಕ, ಅದ್ಭುತ ರೋಚಕ ಘಟನೆಗಳನ್ನು ಅರೇಬಿಯನ್ ನೈಟ್, ಗಲಿವರ್ ಯಾತ್ರೆ, ಪಂಚತಂತ್ರ, ವಿಕ್ರಮಾದಿತ್ಯನ ಕಥೆಗಳು

ಮೊದಲಾದ ಹಲವು ಕೃತಿಗಳು ಮಕ್ಕಳ ಸಾಹಿತ್ಯದ ಮೂಲ ವಸ್ತುಗಳೆನ್ನಬಹುದು. ಇದು ಆಧುನಿಕ ವಿಷಯಗಳಿಂದ ಭಿನ್ನವಾಗಿರುತ್ತದೆ. ಆದರೆ ಮಕ್ಕಳಲ್ಲಿ ಆಧುನಿಕ ಕಲ್ಪನೆ ಬಂದಿದ್ದು, ಮುದ್ರಣ ಮಾಧ್ಯಮ ಆರಂಭವಾದ ನಂತರದ ಕಾಲದಿಂದ ಎನ್ನಬಹುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ ಬದಲಾವಣೆ ಆವಿಷ್ಕಾರವನ್ನು ಪಡೆಯುತ್ತ ಬಂದು ಆಧುನಿಕ ಯುಗದ ಗಮನಾರ್ಹ ಕೊಡುಗೆಯಿಂದಾಗಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ನೂತನ ಸತ್ವಪೂರ್ಣ ಸಾಹಿತ್ಯಸೃಷ್ಟಿ ಈ ಯುಗದಲ್ಲಿ ತನ್ನ ಛಾಪನ್ನು ಮೂಡಿಸಲು ಸಾಧ್ಯವಾಯಿತು. ಅದರ ವಸ್ತು, ವೈವಿಧ್ಯ, ರೂಪವೈವಿಧ್ಯ ಬೆರಗುಗೊಳಿಸುವಂತಿದೆ. ಪ್ರಾಚೀನ ಸಾಹಿತ್ಯ ಕೇವಲ ಕಾವ್ಯ ರೂಪಕ್ಕೆ ಮಾತ್ರ ಸೀಮಿತವಾಗಿದ್ದರೆ, ಈ ಯುಗದ ಸಾಹಿತ್ಯ ಭಾವಗೀತೆ, ಕಥೆ, ಕಾದಂಬರಿ, ಪ್ರಬಂಧ, ನಾಟಕ ವಿಮರ್ಶೆ, ಚುಟುಕು ಸಾಹಿತ್ಯ, ವಿಮರ್ಶೆ, ಪತ್ರಿಕಾ ಸಾಹಿತ್ಯ, ಅಂಕಣ ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯ ಮೊದಲಾದ ಅನಂತ ಮುಖವಾಗಿ ಬೆಳೆದಿದೆ.

ಹೀಗೆ ಒಂದು ಪ್ರಮುಖ ಸಾಹಿತ್ಯ ರೂಪವಾಗಿ ಬೆಳೆದ 'ಮಕ್ಕಳ ಸಾಹಿತ್ಯ'ದಲ್ಲಿ ಮತ್ತೆ ಹಲವು ಸಾಹಿತ್ಯ ಪ್ರಕಾರಗಳನ್ನು ಕಾಣಬಹುದು. ಈ ಮಕ್ಕಳ ಸಾಹಿತ್ಯದಲ್ಲಿಯು ಕನ್ನಡ ಪ್ರೌಢ ಸಾಹಿತ್ಯ ಪ್ರಕಾರದಲ್ಲಿರುವಂತೆಯೇ, ಮಕ್ಕಳ ಕಥೆಗಳು, ಕವನಗಳು, ನಾಟಕಗಳು, ಕಾದಂಬರಿಗಳು, ಮಕ್ಕಳ ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಕಾಮಿಕ್ಸ್ ಹೀಗೆ ಹಲವು ಪ್ರಕಾರಗಳು ಬರುತ್ತವೆ. ಈ ಒಟ್ಟಾರೆ ಮಕ್ಕಳ ಸಾಹಿತ್ಯದಲ್ಲಿ ನನ್ನ ಅಧ್ಯಯನಕ್ಕೆ ಇದರ ಸಮಗ್ರ ವ್ಯಾಪ್ತಿ, ವಿಶಾಲವಾಗಿರುವುದರಿಂದ ಇದರಲ್ಲಿ ನಾನು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ 'ಮಕ್ಕಳ ಕಥೆಗಳು', 'ಮಕ್ಕಳ ಕವನಗಳು' ಮತ್ತು 'ಮಕ್ಕಳ ನಾಟಕಗಳು' ಈ ಮೂರು ಪ್ರಕಾರಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಂಡಿರುತ್ತೇನೆ. ಜೊತೆಗೆ ಈ ನನ್ನ ನಾಲ್ಕನೇ ಅಧ್ಯಾಯವಾದ 'ಮಕ್ಕಳ ಸಾಹಿತ್ಯದ ವಸ್ತು ತಂತ್ರ ಮತ್ತು ಶೈಲಿ' ಇದರಲ್ಲಿ ನಾನು ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಇದ್ದ ಕೆಲವು ಮಕ್ಕಳ ಸಾಹಿತ್ಯಗಳ ಕೆಲವು ಕೃತಿಗಳಲ್ಲಿನ ಕಥೆಗಳನ್ನು, ನಾಟಕಗಳನ್ನು ಮತ್ತು ಕಾವ್ಯಗಳನ್ನು ಗಮನಿಸುವುದರ ಜೊತೆಗೆ ಮುಖ್ಯವಾಗಿ ನನ್ನ ಅಧ್ಯಯನದ ವ್ಯಾಪ್ತಿಯಂತೆ ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಆಯ್ಕೆ ಮಾಡಿಕೊಂಡ ಪ್ರಾತಿನಿಧಿಕವಾಗಿ ಬಂದ ಮಕ್ಕಳ ಕಥೆ, ಕವನ ಮತ್ತು ಕಾವ್ಯಗಳನ್ನು ವಿಶ್ಲೇಷಿಸಲಾಗುತ್ತದೆ. ಮತ್ತು ವಸ್ತು, ತಂತ್ರಗಳನ್ನು ಸಾಹಿತಿಕವಾಗಿ ಗಮನಿಸಿ, ಅದರಲ್ಲಿರುವ ಶೈಲಿಯನ್ನು ಪ್ರಾದೇಶಿಕ ನೆಲೆಯಲ್ಲಿ ಅದು ಹೇಗೆ ಭಿನ್ನವಾಗಿದೆ ಎಂದು ಗಮನಿಸುತ್ತಾ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಅಲ್ಲದೆ ಈ ಪ್ರಕಾರದ ಮಕ್ಕಳ ಸಾಹಿತ್ಯದ ಹುಟ್ಟು, ಬೆಳವಣಿಗೆ, ಅದರ ಸ್ವರೂಪ ಪ್ರಾಮುಖ್ಯತೆಯನ್ನು ಅಧ್ಯಯನಕ್ಕೆ ಪೂರಕವಾಗಿ ಗಮನಿಸುವುದು ಅಗತ್ಯವಿದೆ.

ಅಜ್ಜಿ, ಅಜ್ಜಿ! ನನಗೊಂದು ಕಥೆ ಹೇಳು, ಅಮ್ಮಾ ! ನನಗೊಂದು ಕಥೆ ಹೇಳು ಎಂದು ಮಕ್ಕಳು ಒಂದಲ್ಲ ಒಂದು ಸಾರಿಯಾದರೂ ಮನೆಯಲ್ಲಿ ಕೇಳಿಯೇ ಕೇಳಿರುತ್ತಾರೆ. ಕಥೆ ಕೇಳುವುದರೆಂದರೆ ಮಕ್ಕಳಿಗೆ ಎಲ್ಲಿಲ್ಲದ ಪ್ರೀತಿ, ಕಥೆಯನ್ನು ಆಲಿಸುತ್ತಲೇ ನಿದ್ದೆಗೆ ಜಾರಿಬಿಡುತ್ತಾರೆ. ಕಥೆಗಳನ್ನು ಕೇಳುವುದಕ್ಕೋಸ್ಕರ ಊಟ, ಆಟ, ನಿದ್ರೆ ಎಲ್ಲವನ್ನು ತೊರೆಯಬಲ್ಲರು.

ಮಕ್ಕಳು ಹಿರಿಯರು ಹೇಳುವ ಕಥೆಯನ್ನು ಆಲಿಸುತ್ತಾ ಗಂಭೀರವಾಗಿ ಕುಳಿತಿರುತ್ತಾರೆ. ಮಧ್ಯೆ ಮಧ್ಯೆ ತಲೆ ಅಲ್ಲಾಡಿಸುತ್ತಾ, ಕಣ್ಣುಗಳನ್ನು ಅರಳಿಸಿಕೊಂಡು ಕೇಳುತ್ತಿರುತ್ತಾರೆ. ಆ ಕಥೆಯು ಮುಗಿಯುವರೆಗೂ ಅವರ ಗಮನ ಬೇರೆ ಎಲ್ಲೂ ಹೋಗಿರುವುದಿಲ್ಲ. ಹೀಗೆ ಮಕ್ಕಳ ಮನಸ್ಸನ್ನು ಕೇಂದ್ರೀಕರಿಸುವಲ್ಲಿ ಮಕ್ಕಳ ಪಾತ್ರ ತುಂಬಾ ಮುಖ್ಯವಾಗಿರುತ್ತದೆ.

ಯಾವುದೇ ದೇಶದ ಇತಿಹಾಸದಲ್ಲಿ ಅದರ ಅಭಿವೃದ್ಧಿಯಲ್ಲಿ ಮಕ್ಕಳಿಗೆ ಅತ್ಯಧಿಕ ಪ್ರಾಮುಖ್ಯತೆಯಿರುತ್ತದೆ. ಮಕ್ಕಳೇ ಆ ದೇಶದ ಜೀವನಾಡಿ, ಮಕ್ಕಳ ಅಭಿವೃದ್ಧಿಯೇ ಆ ದೇಶದ ಅಭಿವೃದ್ಧಿಯಾಗಿರುತ್ತದೆ. ಮಕ್ಕಳ ಸಾಮಾಜಿಕ ವರ್ತನೆಯನ್ನು, ಅವರ ಮನಸ್ಸನ್ನು, ಅವರ ಬೇಕು ಬೇಡಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿಶ್ವಾದ್ಯಂತ ಹಲವಾರು ಅಧ್ಯಯನಗಳು ನಡೆದಿವೆ. ಇಂದಿಗೂ ನಡೆಯುತ್ತಿವೆ. ಮಕ್ಕಳ ಬೌದ್ಧಿಕ ಬೆಳವಣಿಗೆ, ದೈಹಿಕ ಬೆಳವಣಿಗೆಯ ಜೊತೆಗೆ ಮಗು ಒಂದು ಸುಸಂಸ್ಕೃತ ಪ್ರಜೆಯನ್ನಾಗಿಸುವಲ್ಲಿ ಈ ಕಥೆಗಳು ತುಂಬಾ ಮುಖ್ಯವಾಗಿವೆ.

ಹುಟ್ಟಿದ ನಂತರ ಯಾವುದೇ ಮಗುವಿಗೆ ಮೊದಲ ಆರು ವರುಷಗಳು ತುಂಬ ಮಹತ್ವದಾಗಿರುತ್ತದೆ. ಇದು ಮಗುವಿನ ಇಡೀ ಜೀವಿತವಧಿಯ ವರ್ತನೆಗೆ ಪೂರಕವಾಗಿದ್ದು, ಮಗುವಿಗೆ ಉತ್ತಮ ಸಂಸ್ಕಾರದ ಬುನಾದಿ ಹಾಕಲು ಸಹಾಯಕವಾಗಿದೆ. ಈ ಅವಧಿಯೇ ಮಗುವಿನ ಇಡೀ ಜೀವನವನ್ನೇ ಉತ್ತಮವಾಗಿ ರೂಪಿಸಬಲ್ಲ ಕಾಲವಾಗಿರುತ್ತದೆ. ಇಲ್ಲಿ ಮಕ್ಕಳು ತಮ್ಮದೇ ಆದ ವ್ಯಕ್ತಿತ್ವ, ಅಭಿರುಚಿ, ವೈಶಿಷ್ಟ್ಯ, ಭಿನ್ನ ಮಾನಸಿಕ ಗುಣವನ್ನು ಬೆಳೆಸಿಕೊಳ್ಳಲು ಸಾಧ್ಯವಿರುತ್ತದೆ. ಅಲ್ಲದೆ ಇಲ್ಲಿ ಹಿರಿಯರು ಮಕ್ಕಳಿಗೆ ಅನೇಕ ರೀತಿಯಲ್ಲಿ ಮಾರ್ಗದರ್ಶನ ಮಾಡಲು ಅವಕಾಶವಿರುತ್ತದೆ.

ಮಕ್ಕಳ ಬಾಲ್ಯವೇ ಸುಮಾರು ಹುಟ್ಟಿನಿಂದ ಹದಿನಾಲ್ಕು ವರ್ಷಗಳ ವಯಸ್ಸಿನವರೆಗೆ ಇರುತ್ತದೆ ಎನ್ನುತ್ತಾರೆ. ಈ ಅವಧಿಯೇ ತುಂಬಾ ಮೌಲ್ಯಯುತ ಕಾಲವಾಗಿರುತ್ತದೆ. ಇದು ಮಾನವನ ತುಂಬು ಜೀವನಕ್ಕೆ ಬೇಕಾಗುವ ಸರ್ವವಿಕಾಸದ ತಳಹದಿಯಾಗಿದೆ. ಇಲ್ಲಿ ಮಕ್ಕಳ ಭವಿಷ್ಯದ ಜೀವನಕ್ಕೆ ಬೇಕಾಗುವ, ಅವರಿಗೆ ಉಪಯುಕ್ತವಾಗುವ ವೈಜ್ಞಾನಿಕ ಹಾಗೂ ವೈಚಾರಿಕ ಮೌಲ್ಯಗಳ ತಳಹದಿಯನ್ನು ಹಾಕುವ ಅಗತ್ಯವಿರುತ್ತದೆ. ನಮ್ಮ ಪೂರ್ವಿಕರು ಪ್ರಾಚೀನ ಕಾಲದಿಂದಲೂ ಈ ಕಾರ್ಯವನ್ನು ಮಾಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಮನೆಯಲ್ಲಿ ಹಿರಿಯರಾದವರು ಮಕ್ಕಳನ್ನು ಕೂಡಿಸಿಕೊಂಡು ಬುದ್ಧಿಯ ಮಾತುಗಳನ್ನು ಇಲ್ಲವೆ ಅವರಿಗೆ ಜಾಣ್ಮೆಯ ಕಥೆಗಳನ್ನು

ಹೇಳುತ್ತಾ ತಿಳುವಳಿಕೆಯನ್ನು ಹೇಳುತ್ತಿದ್ದರು. ಮುಂದೆ ಬದಲಾದ ಕಾಲಾವಧಿಯಲ್ಲಿ ಮಕ್ಕಳಿಗೆ ಕೇವಲ ಬುದ್ಧಿಯ ಮಾತುಗಳನ್ನು, ಇಲ್ಲವೇ ನೀತಿ ಕಥೆಗಳನ್ನು ಹೇಳಲು ಹೋದರೆ ಮಕ್ಕಳಿಗೆ ಇಷ್ಟವಾಗುತ್ತಿರಲಿಲ್ಲ. ಆಗ ಹಿರಿಯರು ನೀತಿಯ ಜೊತೆಗೆ ಪ್ರಪಂಚಜ್ಞಾನ, ಜೀವನಮಾರ್ಗ, ಲೌಕಿಕ ವ್ಯವಹಾರ, ಜನರ ಗುಣ ಸ್ವಭಾವ, ಜಾಣ್ಮೆ, ತಾಳ್ಮೆ ಮೊದಲಾದ ವಿಚಾರಗಳನ್ನು ಮತ್ತು ವಿಶ್ವದ ನಾನಾ ವಿಷಯಗಳನ್ನು ಕ್ರೂಢೀಕರಿಸಿ ಮಕ್ಕಳಿಗೆ ಕಥೆಯ ರೂಪದಲ್ಲಿ ಹೇಳಲಾರಂಭಿಸಿದಾಗ ಮಕ್ಕಳಿಗೆ ಇನ್ನು ಹೆಚ್ಚಿನ ಕುತೂಹಲಕ್ಕೆ ಅವಕಾಶವಾಯಿತು.

ಮಕ್ಕಳಲ್ಲಿ ವಿವಿಧ ರೀತಿಯ ಧ್ಯೇಯ ಆದರ್ಶಗಳನ್ನು ಬೆಳೆಸುವಲ್ಲಿ ಕಥೆಗಳು ಪ್ರಮುಖವಾದವು. ಇವುಗಳಿಗೆ ವಸ್ತುಗಳಾಗಿ ಮಾನವ ಪಾತ್ರಗಳೇ ಇರಬೇಕು ಎಂದೇನಿರಲಿಲ್ಲ. ಕಥೆ ಹೇಳುವವರ ಶಕ್ತಿಗೆ, ಜಾಣ್ಮೆಗೆ ತಕ್ಕಂತೆ ಈ ಕಥೆಗಳಲ್ಲಿ ಪ್ರಾಣಿ, ಪಕ್ಷಿಗಳನ್ನು, ಗಿಡ ಮರಗಳನ್ನು ಸೇರಿಸಿ ಹೇಳಿ ಮಕ್ಕಳನ್ನು ರಂಜಿಸುತ್ತಿದ್ದರು. ಹೀಗೆ ಪ್ರಾಚೀನ ಕಾಲಾವಧಿಯಿಂದಲೂ ವೈಶಿಷ್ಟ್ಯವನ್ನು ಪಡೆದ ಮಾಧ್ಯಮವಾಗಿ ಮಕ್ಕಳ ಕಥಾ ಪ್ರಕಾರವು ಮಕ್ಕಳ ಸಾಹಿತ್ಯ ಪ್ರಕಾರದಲ್ಲಿಯೇ ಪ್ರಮುಖವೆನಿಸಿದೆ.

೪.೧. ಮಕ್ಕಳ ಕಥೆಗಳ ಹುಟ್ಟು ಮತ್ತು ಬೆಳವಣಿಗೆ

ಪ್ರಾಚೀನ ಕಾಲದಿಂದಲೂ ಅಂದರೆ ಮಾನವ ಜನ್ಮ ಪ್ರಾರಂಭವಾದ ಮೇಲೆ ಅವರ ಆರಂಭದ ಸಂಕೇತ ಸಂಜ್ಞೆಗಳ ಮೂಲಕ ವ್ಯವಹರಿಸುವ ಕಾಲವಧಿಯ ನಂತರ, ಬಳಕೆಗೆ ಬಂದ ಮನುಷ್ಯನ ಮಾತಿನ ಆರಂಭದಿಂದ 'ಕಥೆ' ಪ್ರಕಾರವು ಹುಟ್ಟಿದೆ ಎನ್ನಬಹುದು. ಮಾನವನ ಬುದ್ಧಿಗೆ ಕಲ್ಪನೆ ಮತ್ತು ಆಲೋಚನೆ ಎಂಬ ಎರಡು ಶಕ್ತಿಗಳು ಬೆರೆತಾಗ 'ಕಥೆ' ಹುಟ್ಟಿಕೊಳ್ಳುತ್ತದೆ.

'ಕಥೆ' ಎನ್ನುವ ಪದವು 'ಕಥ್' ಎನ್ನುವ ಧಾತುವಿನಿಂದ ಉತ್ಪತ್ತಿಯಾಗುತ್ತದೆ. ಈ ಕಥ್ ಪದದ ಅರ್ಥ 'ಹೇಳುವುದು', 'ವಿವರಿಸುವುದು' ಎಂಬ ಅರ್ಥವನ್ನು ಕೊಡುತ್ತದೆ.

'ಕಥೆ' ಎಂದರೆ "ಕಥೆಯನ್ನು ಹೇಳುವ ಕತೆಗಾರ ಒಂದೇ ವಿಷಯವನ್ನೆತ್ತಿ ಅದನ್ನು ರಸವತ್ತಾಗಿ ವರ್ಣಿಸಿ, ಕೇಳುವ ಮತ್ತು ಓದುಗನ ಮೇಲೆ ಒಂದು ನಿರ್ದಿಷ್ಟವಾದ ಪರಿಣಾಮವನ್ನುಂಟು ಮಾಡುತ್ತಾನೆ. ಅದರಲ್ಲಿ ನಿರ್ದೇಶಿಸಿರುವ ವಿಷಯ ಒಂದೇ ಒಂದು ಸನ್ನಿವೇಶಕ್ಕೆ ಸಂಬಂಧಪಟ್ಟಿರಬಹುದು. ಜೀವನದ ವಿಷಯ ಒಂದೇ ಚಿತ್ರವನ್ನು ಚಿತ್ರಿಸಿರಬಹುದು. ಜೀವನದ ಅನೇಕ ಅಂಶಗಳು ಬಂದಿರಬಹುದು. ಕಥೆ ನಡೆಯುವ ಕಾಲ ಒಂದೇ ದಿನದಲ್ಲಿ ಕೆಲವು ಗಂಟೆಗಳ ಅವಧಿಯಲ್ಲಿ ನಡೆದಿದ್ದಾಗಬಹುದು, ಆದರೆ ಕಥೆಯ ವಸ್ತು, ಅಲ್ಲಿನ ಪಾತ್ರರಚನೆ, ಅದರಲ್ಲಿನ ಆವರಣ ಎಲ್ಲವೂ ಒಂದೇ ಒಂದು ಗುರಿಯನ್ನು ಮುಟ್ಟಿಸುವಂತೆ ಪರಿಪೋಷಕವಾಗಿದ್ದು, ಓದುಗನಲ್ಲಿ ಒಂದೇ ಒಂದು ಪರಿಣಾಮವನ್ನು ಮೂಡಿಸುವಂತಿದ್ದರೇ, ಅದು ಕಥೆ ಎನ್ನಿಸಿಕೊಳ್ಳುವುದು."[೧]

ಪ್ರಾಚೀನ ಕಾಲದಲ್ಲಿ ಕಥೆ ಹೇಳುವುದು ಒಂದು ಕಲೆಯಾಗಿತ್ತು. ಮಾನವನು 'ಲಿಪಿ' ಕಲಿತ ನಂತರ ಮಹತ್ತರ ಘಟನೆಗಳನ್ನು, ಮಹತ್ವದ ಸಂಭಾಷಣೆ, ಮಾತುಗಳನ್ನು, ಕಥೆಗಳನ್ನು, ಕವನಗಳನ್ನು ಮೊದಲಾದವುಗಳನ್ನು ಬರೆದು ಸಂರಕ್ಷಿಸತೊಡಗಿದನು. ಕಥೆಯು ಈ 'ಲಿಪಿ'ಯು ಬಂದ ಮೇಲೆ ಇದರ ಬೆಳವಣಿಗೆಯು ಸರ್ವವ್ಯಾಪಿಯಾಯಿತು. ನಂತರ ಕಥೆಗಳ ಸೃಷ್ಟಿಯು ಅಧಿಕವಾಯಿತು.

ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ಅವರದೇ ಆದ ಒಂದು ಸಾಂಸ್ಕೃತಿಕ ವೈಶಿಷ್ಟ್ಯವಿರುತ್ತದೆ. ಅವರವರ ವೈಶಿಷ್ಟ್ಯತೆಗೆ ತಕ್ಕಂತೆ ಕಥೆಗಳಿರುತ್ತವೆ. ಕಥೆಗಳನ್ನು ಹೇಳುವುದರಲ್ಲಿ ಭಾರತ ದೇಶವೂ ತುಂಬಾ ಪ್ರಾಮುಖ್ಯತೆಯನ್ನು ಪಡೆದು, ಕಥೆ ಹೇಳುವ ಸಂಪ್ರದಾಯಕ್ಕೆ ತವರುಮನೆ ಎಂದೇ ಕರೆಸಿಕೊಂಡಿದೆ. ನಮ್ಮ ಹಿರಿಯರು ಎಂತಹ ಗಂಭೀರವಾದ ವಿಷಯಗಳನ್ನಾದರೂ ಕಥೆಗಳ ಮೂಲಕ ಮಕ್ಕಳಿಗೆ ಮನಮುಟ್ಟುವಂತೆ ಹೇಳುವ ಜಾಣ್ಮೆಯನ್ನು ಹೊಂದಿದ್ದಾರೆ. ಹೀಗೆ ಕಥೆ ಹೇಳುವುದು ಬುದ್ಧಿವಂತಿಕೆಯ ದ್ಯೋತಕವೆನಿಸಿವೆ.

ಆರಂಭದಲ್ಲಿ 'ಕಥೆ'ಯು ಹಿರಿಯರು, ಮತ್ತು ಪಂಡಿತರ ಅನುಭವಗಳ ಬರವಣಿಗೆಯ ಮಾಧ್ಯಮವಾಯಿತು. ನಂತರದ ಕಾಲದಲ್ಲಿ ಕಥೆಗಳು ನೀತಿಯ ಬೋಧನೆಗಾಗಿ, ಧರ್ಮಗಳ ಪ್ರಚಾರಕ್ಕಾಗಿ, ಗ್ರಂಥಗಳ ರೂಪದಲ್ಲಿ ಕಾಣಿಸಿಕೊಂಡವು. ಉದಾಹರಣೆಗೆ ಹೇಳುವುದಾದರೆ ಗೌತಮ ಬುದ್ಧನ ಬೌದ್ಧಧರ್ಮದ 'ಜಾತಕ ಕಥೆಗಳು', ಪಂಚತಂತ್ರದಂತ ನೀತಿಕಥೆಗಳು ಮೊದಲಾದವು ಹೀಗೆ ಪುರಾಣ ಕೃತಿಗಳ ಬರವಣಿಗೆಗೆ ಕಾರಣವಾಗಿ ಹಿಂದೂ, ಬೌದ್ಧ, ಇಸ್ಲಾಂ ಮತ್ತು ಕ್ರೈಸ್ತ ಮತ್ತು ಜೈನಧರ್ಮದ ಕಥೆಗಳು, ಹುಟ್ಟಿಕೊಂಡವು. ಅಲ್ಲದೆ ಪರಿಶುದ್ಧ ನೀತಿಯನ್ನೇ ಬೋಧಿಸಲು ಹುಟ್ಟಿಕೊಂಡ ಕಥೆಗಳೇ ಪಂಚತಂತ್ರ ಮತ್ತು ಈಸೋಪನ ಕಥೆಗಳು ಪ್ರಮುಖವಾದವು.

೪.೨. ಮಕ್ಕಳ ಕಥೆಗಳ ಪ್ರಾಚೀನತೆ

ಕನ್ನಡ ಸಾಹಿತ್ಯದಲ್ಲಿ ಶಿಷ್ಟ ಸಾಹಿತ್ಯವೂ ಅಲ್ಲದ, ಜಾನಪದ ಸಾಹಿತ್ಯವೂ ಅಲ್ಲದ ಕಥಾಪರಂಪರೆಯೊಂದು ಪ್ರಾಚೀನ ಕಾಲದಿಂದಲೂ ಇರುವುದನ್ನು ಕಾಣುತ್ತೇವೆ. ಪ್ರಾಚೀನರೇ ಕಥೆಯನ್ನು 'ಕಥಾಯಾಂ ಸರಸಂ ವಸ್ತು' ಎಂದಿದ್ದಾರೆ. ಅಂದರೆ ಸರಸವಾದ ವಸ್ತುವನ್ನೇ ಇಟ್ಟುಕೊಂಡು ಮೊದಲಿನಿಂದಲೂ ಬೇರೆ ಬೇರೆ ವಿಭಿನ್ನ ಕಥೆಗಳನ್ನು ಕಟ್ಟಿರುವುದನ್ನು ಕಾಣುತ್ತೇವೆ. ಆರಂಭದಿಂದಲು ಅನೇಕ ರಾಜಮನೆತನದ ರಾಜಕುಮಾರರನ್ನು ಸಂತೈಸಲು ಅನೇಕ ಕಥೆಗಳನ್ನು ಸೃಷ್ಟಿಸಿ ಹೇಳಿರುವುದನ್ನು ಕಾಣುತ್ತೇವೆ. ಜೊತೆಗೆ ಸಾಹಿತ್ಯದಲ್ಲಿ ಮನುಷ್ಯನ ಜೊತೆಯಲ್ಲಿಯೇ ಪ್ರಾಣಿ, ಪಕ್ಷಿಗಳು ಕಥೆಗಳನ್ನು ಹೇಳಿವೆ ಎನ್ನಬಹುದು. ಮನೋರಂಜನೆಗಾಗಿ ಕಥೆಗಳನ್ನು ಹೇಳುವುದು, ಮಕ್ಕಳಿಗೆ ನಿದ್ದೆ ಬರದಿದ್ದಾಗಲೂ ಕಥೆ ಹೇಳುವುದು, ಸಮಯವನ್ನು ಸಾಗಿಸಲು ಕಥೆ ಹೇಳುವುದು, ದೂರದ ಪ್ರಯಾಣಗಳಲ್ಲಿ ಕಥೆ ಹೇಳುವುದು ಹೀಗೆ ಬೇರೆ ಬೇರೆ ಸಮಯ ಸಂದರ್ಭಕ್ಕಾಗಿ ಕಥೆಗಳನ್ನು ಸೃಷ್ಟಿಸಿ ಹೇಳುತ್ತಾ ಬಂದಿರುವುದನ್ನು ಕಾಣುತ್ತೇವೆ.

ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ಹಲವಾರು ಬಗೆಯ ಕಥೆಗಳಿರುವವು. ಇದರಲ್ಲಿ ಪ್ರಮುಖವಾಗಿ ಅಂದರೆ ಪಂಚತಂತ್ರ, ಕಥಾಸರಿತ್ಸಾಗರ, ಭಾಗವತ, ಬೃಹತ್ಕಥಾಮಂಜರಿ, ಹಿತೋಪದೇಶ, ಶುಕಸಪ್ತತಿ ಮೊದಲಾದವು ಮೂಲ ಸಂಸ್ಕೃತ ಭಾಷೆಯಲ್ಲಿವೆ. ಇವುಗಳನ್ನು ನಂತರದ ಅವಧಿಯಲ್ಲಿ ಆಯಾ ಭಾಷಾ ಪಂಡಿತರು ತಮ್ಮ ತಮ್ಮ ಭಾಷೆಗಳಿಗೆ ಭಾಷಾಂತರಿಸಿಕೊಂಡಿರುತ್ತಾರೆ. ನಂತರದ ಕಾಲಾವಧಿಯಲ್ಲಿ ಗುರುಕುಲ ಆಶ್ರಮಗಳಲ್ಲಿ ಗುರುಗಳು ತಮ್ಮ ಶಿಷ್ಯರುಗಳಿಗೆ ಕಥೆಗಳನ್ನು ಹೇಳುವ ಮೂಲಕ ತಿಳುವಳಿಕೆಯನ್ನು ಹೇಳುತ್ತಿದ್ದನ್ನು ಕಾಣುತ್ತೇವೆ.

ಕಾಲಕ್ರಮೇಣ ನಂತರದಲ್ಲಿ ತಮ್ಮ ತಮ್ಮ ಧರ್ಮಗಳನ್ನು ಹೆಚ್ಚು ಹೆಚ್ಚು ಪ್ರಚಾರಕ್ಕೆ ತರಲು ಕಥೆಗಳನ್ನು ಒಂದು ಮಾಧ್ಯಮವಾಗಿ ಬಳಸಿಕೊಳ್ಳಲಾರಂಭಿಸಿದರು. ಇದರಲ್ಲಿ ಬೌದ್ಧ ಧರ್ಮವೇ ಪ್ರಮುಖವಾದುದು. ಇವರು 'ತ್ರಿಪಿಟಿಕ' ಎಂಬ ಕೃತಿಯಲ್ಲಿ ಕಥೆಗಳನ್ನು ಸೇರಿಸಿ ಕಥೆಗಳ ಮೂಲಕ ಧರ್ಮಪ್ರಸಾರ ಮಾಡಿದರು. ಈ ಧರ್ಮದ ಜೊತೆ ಜೊತೆಯಲ್ಲಿಯೇ, ಜೈನ ಧರ್ಮದವರು, ಕ್ರೈಸ್ತ ಧರ್ಮದವರು, ಮುಸ್ಲಿಂ ಧರ್ಮದವರು ಕಥೆಗಳ ಮೂಲಕ ಧರ್ಮ ಪ್ರಸಾರ ಮಾಡಿರುವುದನ್ನು ಕಾಣುತ್ತೇವೆ.

ಇನ್ನು ಮೌರ್ಯರ ಅರಸ ಅಶೋಕ ಮಹಾರಾಜನ ಕಾಲಕ್ಕಾಗಲೇ ಬೌದ್ಧ ಮತವು ಧರ್ಮಪ್ರಚಾರಕ್ಕಾಗಿ ವಿದೇಶಗಳಿಗೆ ಹೋಗುವ ಮೂಲಕ ಕಥೆಗಳು ಪ್ರಸಿದ್ಧಿ ಪಡೆದವು. ನಂತರ ಮೊಘಲರ ವಿಶ್ವವಿಖ್ಯಾತ ಅಕ್ಬರ್‌ಬೀರಬಲ್‌ನ ಕಥೆಗಳು, ಮತ್ತು ವಿಜಯನಗರದ ಅರಸರ ಕಾಲದಲ್ಲಿ ತೆನಾಲಿರಾಮ ಕೃಷ್ಣರ ಕಥೆಗಳು ಪ್ರಸಿದ್ಧಿ ಪಡೆದವು. ಹೀಗೆ ಈ ಕಥೆಗಳ ಜೊತೆಗೆ ಅಲ್ಲಿನ ಪ್ರಾದೇಶಿಕ ಕಥೆಗಳು ಬೆರೆತವು. ಇವು ಅತಿ ವೇಗವಾಗಿ ಪಾಶ್ಚಾತ್ಯ ದೇಶಗಳನ್ನು ತಲುಪಿದವು. ಇನ್ನು ಹತ್ತೊಂಬತ್ತನೇ ಶತಮಾನದ ವೇಳೆಗಾಗಲೇ ಯುರೋಪ್ ಖಂಡದವರು ಕಥೆಗಳ ಮೂಲ ಏಷ್ಯಾ ಖಂಡ ಎಂದು ಒಪ್ಪುತ್ತಾ ತಮ್ಮ ಸಂಸ್ಕೃತಿಯನ್ನು ಇಂತಹ ಕಥೆಗಳಲ್ಲಿ ಗುರುತಿಸಲು ಪ್ರಯತ್ನಿಸಿದರು. ಇತ್ತ ಭಾರತದಲ್ಲಿಯೇ ಅವು ಹೆಚ್ಚು ಪ್ರಚಾರದಲ್ಲಿದ್ದು, ಆಂಗ್ಲರ ಮುದ್ರಣ ಆವಿಷ್ಕಾರದ ನಂತರ ಅವು ಬರವಣಿಗೆಯಲ್ಲಿ ಬರತೊಡಗಿ, ಶಾಲಾ ಮಕ್ಕಳ ಪಠ್ಯಪುಸ್ತಕಗಳ ವಸ್ತುವಾಗಿ ಮಕ್ಕಳಿಗೆ ಒಗ್ಗುವ ಕಥೆಗಳಾಗಿ ಸೇರಿದವು. ಹೀಗೆ, ಮಕ್ಕಳ ಸಾಹಿತ್ಯ ನಿರ್ಮಾಣಗೊಂಡು ಶಾಲಾ ಮಕ್ಕಳ ಕ್ರಮಿತ ಪಠ್ಯಪುಸ್ತಕಗಳ ಜೊತೆಯಲ್ಲಿ ಸ್ವತಂತ್ರವಾಗಿಯೂ ಮಕ್ಕಳ ಕಥೆಗಳ ಪುಸ್ತಕಗಳು ಪ್ರಕಟವಾಗತೊಡಗಿದವು.

೪.೩. ಮಕ್ಕಳ ಕಥೆಗಳ ಸ್ವರೂಪ

ಮಕ್ಕಳಿಗಾಗಿ ರಚನೆಯಾಗುವ, ಹೇಳುವ ಕಥೆಗಳು ಹೇಗಿರಬೇಕು ಮತ್ತು ಅವು ಯಾವ ಸ್ವರೂಪದಲ್ಲಿರಬೇಕು ಎಂಬ ಚರ್ಚೆ ದೇಶಾದ್ಯಂತ ಬೇರೆ ಬೇರೆ ರೀತಿಯಲ್ಲಿ ನಡೆಯುತ್ತಲೇ

ಕೊನೆಗೆ ಜನಹಿತವಾಗಿ, ಸರ್ವವ್ಯಾಪಿಯಾಗಿ, ಪ್ರಸ್ತುತತೆಯ ಅಡಿಯಲ್ಲಿ ಕೆಲವು ವಿಚಾರಗಳಿಗೆ ಅನುಗುಣವಾಗಿ ಮಕ್ಕಳ ಸಾಹಿತ್ಯ ಮತ್ತು ಕಥೆಗಳನ್ನು ನಿರ್ಮಿಸಬೇಕು ಎಂಬ ಅಭಿಪ್ರಾಯ ಬಂದಿದೆ.

ಇನ್ನು ಚಿಕ್ಕ ಚಿಕ್ಕ ಮಕ್ಕಳಲ್ಲಿ ದೊಡ್ಡ ಮಕ್ಕಳಷ್ಟು ವಿಚಾರವಂತಿಕೆ ಮತ್ತು ಬುದ್ಧಿ ಬೆಳೆದಿರುವುದಿಲ್ಲ. ಈ ಮಕ್ಕಳು ಹೆಚ್ಚು ಭಾವುಕರಾಗಿರುತ್ತಾರೆ. ಹೀಗಾಗಿ ಈ ಮಕ್ಕಳಿಗಾಗಿ ರಚನೆಯಾಗುವ ಮತ್ತು ಹೇಳುವ ಕಥೆಗಳು ಹೆಚ್ಚು ಭಾವಪೂರ್ಣವಾಗಿರಬೇಕಾಗಿರುತ್ತದೆ. ಆದ್ದರಿಂದ ಮಕ್ಕಳ ವಯಸ್ಸಿಗೆ ತಕ್ಕಂತೆ ಕಥೆಗಳ ವಸ್ತು ವಿಷಯಗಳು ಆ ಮಕ್ಕಳ ಮನಸ್ಸಿಗನುಗುಣವಾದ ಕಥಾ ಪ್ರಕಾರಗಳನ್ನು ಹಂತಹಂತವಾಗಿ ಪರಿಚಯಿಸಿದರೆ ಮಕ್ಕಳ ಕಲ್ಪನಾಶಕ್ತಿ, ಪ್ರಪಂಚ ಜ್ಞಾನ ಮತ್ತು ಅವರ ಬೌದ್ಧಿಕ ಬೆಳವಣಿಗೆಗೆ ಸಹಾಯವಾಗುತ್ತದೆ.

ಮಕ್ಕಳ ಕಥೆಗಳು ಹಾಸ್ಯರಸವುಳ್ಳ ವಸ್ತುಗಳಿಂದ ಕೂಡಿದ್ದರೆ ಮಕ್ಕಳು ಕೇಳಲು ಬಹಳ ಇಷ್ಟಪಡುತ್ತಾರೆ. ಅವರು ತಮ್ಮದೇ ಕಲ್ಪನಾ ಕಥಾಲೋಕದಲ್ಲಿಯೇ ವಿಹರಿಸುತ್ತಾರೆ. ಅದ್ಭುತ ಕಲ್ಪನೆಯುಳ್ಳ ಕಥೆಗಳು ಮಕ್ಕಳ ಮನಸ್ಸನ್ನು ಆಕರ್ಷಿಸುತ್ತವೆ. ಇನ್ನು ಈ ಕಥೆಗಳಲ್ಲಿ ವಾಸ್ತವತೆಯನ್ನು ಸೇರಿಸಿದಾಗಲೂ ಅವರಲ್ಲಿ ಸದ್ಯದ ಪ್ರಚಲಿತ ಪರಿಸ್ಥಿತಿಯ ಅರ್ಥವಾಗುತ್ತದೆ. ಜೊತೆಗೆ ಮಕ್ಕಳಿಗೆ ಹೇಳುವ ಕಥೆಗಳಲ್ಲಿ ಮನುಷ್ಯ ಪಾತ್ರಗಳಿಗಿಂತ ಪ್ರಾಣಿ ಪಕ್ಷಿಗಳನ್ನು ಪಾತ್ರಗಳನ್ನಾಗಿ ಮಾಡಿಕೊಂಡಾಗ ಹೆಚ್ಚು ಇಷ್ಟಪಡುವುದನ್ನು ಕಾಣಬಹುದು.

ಮಕ್ಕಳಿಗಾಗಿ ರಚನೆಯಾಗುವ ಕಥೆಗಳಲ್ಲಿನ ವಸ್ತುಗಳು ಈ ಲೋಕದಲ್ಲಿ ದೀರ್ಘಕಾಲ ಬಾಳಿ ಬದುಕಿ ಒಳ್ಳೆಯ ಕೆಲಸ ಮಾಡಿ ಹೆಸರು ಮಾಡಿದ ವ್ಯಕ್ತಿಗಳ ವ್ಯಕ್ತಿತ್ವವನ್ನು ಅವರ ಜೀವನದ ಕಥೆಗಳನ್ನು ಕುರಿತು ರಚಿಸಿದಂತಹವುಗಳನ್ನು ಹೇಳಬೇಕು. ಆಗ ಅವರಲ್ಲಿ ತಾವು ಹೀಗೆ ಒಳ್ಳೆಯವರಾಗಬೇಕು ಎಂಬ ಹಿತಾಸಕ್ತಿ ಮೂಡಿ ಮಹಾನ್ ವ್ಯಕ್ತಿಗಳಂತೆ ತಾವಾಗಬೇಕು ಎಂಬ ಜೀವನ ಪ್ರೀತಿ ಆದರ್ಶಗಳು ಮಕ್ಕಳಲ್ಲಿ ಬೆಳೆಯಲು ಸಹಾಯಕವಾಗುತ್ತದೆ.

ಇಂತ ಉತ್ತಮ ಕಥೆಗಳನ್ನು ಬರೆಯುವಾಗ ಅವರಿಗೆ ಅರ್ಥವಾಗುವ ಶೈಲಿಯಲ್ಲಿ ನೇರವಾಗಿ, ಆಕರ್ಷಕವಾದ ಘಟನೆಗಳಿಂದ ಕಣ್ಣಿಗೆ ಕಟ್ಟುವಂತೆ ಹೇಳಲು ಬರುವಂತ ಕಥೆಗಳು ರಚನೆಯಾಗಬೇಕು. ಈ ಕಥೆಗಳಲ್ಲಿ ಅವರಿಗೆ ಯಾವುದೇ ಗೊಂದಲಗಳು ಬರಬಾರದು. ಅವರು ಯಾವುದಾದರೂ ಪ್ರಶ್ನೆ ಕೇಳಿದಾಗಲು ಸರಿಯಾಗಿ ಉತ್ತರಿಸಬಲ್ಲ ಜಾಣ್ಮೆಯೂ ಇರಬೇಕಾಗುತ್ತದೆ. ಇಂತ ಕಥೆಗಳು ರಚನೆಯಾದಾಗ ಮಕ್ಕಳಿಗೆ ತುಂಬಾ ಪ್ರಯೋಜನವಾಗುತ್ತದೆ.

೪.೪. ಮಕ್ಕಳ ಸಾಹಿತ್ಯದಲ್ಲಿ ಕಥೆಗಳ ಪ್ರಾಮುಖ್ಯತೆ

ಮನುಷ್ಯ ತಾನು ದೊಡ್ಡವನಾಗಿ ಬೆಳೆದ ಮೇಲೆ ತಮ್ಮ ಸ್ನೇಹಿತರೊಟ್ಟಿಗೆ ತಾವು ಕಳೆದ ಬಾಲ್ಯವನ್ನು, ಮೆಲುಕು ಹಾಕುವಾಗ, ತಮ್ಮ ಬಾಲ್ಯದ ಸವಿಯನ್ನು ನೆನೆದಾಗ 'ಹನಿ ಉದುರುವುದು

ಎಲೆ ಅದುರುವುದು' ಎಂಬ ಆದಿ ಕವಿಯ ಮಾತಿನಂತೆ ಮಗುವಿನ ಜೀವನದಲ್ಲಿ ಅದು ಹೇಗೆ ಚಿರತ್ವವನ್ನು ಪಡೆದಿರುತ್ತದೆ. ಆ ಚಿರತ್ವವು ಉಳಿಯಲು ಕಾರಣವಾದ ಅಂಶಗಳನ್ನು ಮಕ್ಕಳ ಸಾಹಿತ್ಯದ ಕಥೆಗಳಲ್ಲಿ ಕಾಣಬಹುದು.

ಮಕ್ಕಳ ಕಥೆಗಳು ಅವರ ಮನಸ್ಸಿನಲ್ಲಿ ದೀರ್ಘಕಾಲ ನೆಲೆನಿಲ್ಲಲು ಅನೇಕ ಸಂಗತಿಗಳು ಕಾರಣವಾಗಿರುತ್ತವೆ. ಹೀಗಾಗಿಯೇ ಮಕ್ಕಳ ಸಾಹಿತ್ಯಕ್ಕೆ ಉನ್ನತ ವ್ಯಕ್ತಿತ್ವವನ್ನು ರೂಪಿಸುವ ವಿಶೇಷ ಶಕ್ತಿಯಿರುತ್ತದೆ. ಅದು ಮಕ್ಕಳನ್ನು ಕ್ರಿಯಾಶೀಲರನ್ನಾಗಿ ಉದ್ದೀಪಿಸಿ ಅವರ ಉತ್ತಮ ವ್ಯಕ್ತಿತ್ವಕ್ಕೆ ಸೂಕ್ತವಾದ ಹಾದಿಯನ್ನು ತೋರಿಸುತ್ತದೆ.

ಬಾಲ್ಯದ ಸಾಹಿತ್ಯ ಮಗುವಿನ ವ್ಯಕ್ತಿತ್ವ ವಿಕಸನಕ್ಕೆ ಪರಿಣಾಮಕಾರಿಯಾದ ತಳಪಾಯವನ್ನು ಹಾಕುತ್ತವೆಯೆಂಬ ವಿಚಾರವು ಅನೇಕ ಮಹನೀಯರ ಅನುಭವಗಳಿಂದ ತಿಳಿದುಬಂದಿದೆ. ವಿಶ್ವಕವಿ ರವೀಂದ್ರನಾಥ ಠಾಕೋರ್, ಭಾರತದ ರಾಷ್ಟ್ರಪಿತರಾದ ಮಹಾತ್ಮ ಗಾಂಧೀಜಿ, ಅಬ್ದುಲ್ ಕಲಾಂ, ರಾಷ್ಟ್ರಕವಿ ಕುವೆಂಪು, ಶಿವಾಜಿ, ಅಂಬೇಡ್ಕರ್ ಮೊದಲಾದವರು ತಮ್ಮ ಬಾಲ್ಯದಲ್ಲಿ ಸಾಹಿತ್ಯ ಕೃತಿಗಳು ಬೀರಿದ ಪ್ರಭಾವವನ್ನು ತಮ್ಮ ಆತ್ಮಚರಿತ್ರೆಗಳಲ್ಲಿ ದಾಖಲಿಸಿದ್ದಾರೆ. ಅಂತಹ ನೆನಪುಗಳು ಬಾಲ್ಯದಲ್ಲಿ ತಮ್ಮ ವ್ಯಕ್ತಿತ್ವ ವಿಕಸನಕ್ಕೆ ಹೇಗೆ ಬೀಜರೂಪದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿದವು. ಹಾಗೂ ಸಾಧನೆಯ ಕಡೆಗೆ ಆದರ್ಶ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾದವು ಎಂಬುದನ್ನು ನಾವಿಲ್ಲಿ ಕಾಣಬಹುದು. ಈ ಘಟನೆಗಳ ಕೆಲವು ಉದಾಹರಣೆಗಳನ್ನು ಗಮನಿಸುವುದಾದರೆ ಮಹಾತ್ಮ ಗಾಂಧೀಜಿಯವರ ಆದರ್ಶ ವ್ಯಕ್ತಿತ್ವ ಬೆಳವಣಿಗೆಗೆ ಅವರ ಶಾಲೆಯ ಪಠ್ಯಕ್ರಮಕ್ಕಿಂತಲೂ ತಾನು ಓದಿದ ಹಾಗೂ ನೋಡಿದ ಎರಡು ನಾಟಕಗಳು ಹೆಚ್ಚು ಪರಿಣಾಮಕಾರಿಯಾದವು. ತಮ್ಮ ಬಾಲ್ಯದ ಶಾಲೆಯ ಪಠ್ಯಗಳನ್ನು ಬಿಟ್ಟು ಬೇರೇನನ್ನು ಓದಲು ಆಸಕ್ತಿಯನ್ನುವಹಿಸಿದ ಗಾಂಧಿಯವರು 'ಶ್ರವಣ ಕುಮಾರನ ಪಿತೃಭಕ್ತಿ', 'ಹರಿಶ್ಚಂದ್ರ ನಾಟಕ' ಕೃತಿಗಳನ್ನು ಆಕಸ್ಮಿಕವಾಗಿ ಓದಿದ್ದರಿಂದ, ನೋಡಿದ್ದರಿಂದ ತಮ್ಮ ಬದುಕಿನುದ್ದಕ್ಕೂ ಅವರ ಹೃದಯವನ್ನು ಸಜೀವಗೊಳಿಸಿದ ಪರಿಣಾಮವನ್ನು ಈ ಕೆಳಗಿನ ಉದಾಹರಣೆಗಳಲ್ಲಿ ಕಾಣಬಹುದು.

"ನಮ್ಮ ತಂದೆಯವರು ಕೊಂಡು ತಂದಿದ್ದ 'ಶ್ರವಣ ಪಿತೃಭಕ್ತಿ' ನಾಟಕದ ಮೇಲೆ ನನ್ನ ಕಣ್ಣು ಬಿತ್ತು. ಬಹಳ ಅನುರಾಗದಿಂದ ಗಾಢತೆಯಿಂದ ಅದನ್ನು ಓದಿದೆ. ಆ ಸಮಯಕ್ಕೆ ಸರಿಯಾಗಿ ಒಂದು ದಿನ ಒಬ್ಬ ಕಾಶಿ–ಬೊಂಬಾಯಿಯವನು ಚಿತ್ರಗಳ ಪೆಟ್ಟಿಗೆಯನ್ನು ನಮ್ಮೂರಿಗೆ ತಂದು ತೋರಿಸುತ್ತಿದ್ದನು. ಅವನು ತೋರಿಸಿದ ಚಿತ್ರಗಳಲ್ಲಿ ಯತಾರ್ಥವಾಗಿ ಶ್ರವಣಕುಮಾರ ತನ್ನ ತಂದೆ ಹಿರಣ್ಯಗಜ, ತಾಯಿಯಾದ ತಾಂಡವಿಯನ್ನು ಅಡ್ಡೆಯಲ್ಲಿ ಹೊತ್ತಿದ್ದ ಚಿತ್ರ ಬಂದಿತ್ತು. ಆ ಪುಸ್ತಕ ಮತ್ತು ಆ ಚಿತ್ರ ಎರಡೂ ನನ್ನ ಮನಸ್ಸಿನಲ್ಲಿ ಆಳವಾಗಿ ನಾಟಿಕೊಂಡವು.

‘ಇದೋ ನಿನಗೊಂದು ಮೇಲ್ಪಂಕ್ತಿ’ ಎಂದು ನನಗೆ ನಾನೇ ಹೇಳಿಕೊಂಡೆ. ಶ್ರವಣ ಸತ್ತಾಗ ಅವನ ತಂದೆ-ತಾಯಿ ಮಾಡಿದ ವಿಲಾಪ ಈಗಲೂ ನನಗೆ ನೆನಪಿದೆ. ಎದೆ ಕರಗಿಸುವ ಆ ದಾಟಿಯನ್ನು ಬಾರಿಸಲು ಕಲಿತೆ, ನನ್ನ ತಂದೆ ನನಗೆ ಕೊಂಡುಕೊಟ್ಟಿದ್ದ ರಾಗಮಾಲಿಕೆ ಒಂದು ಇತ್ತು. ಅದನ್ನು ನಾನು ನುಡಿಸುತ್ತಿದ್ದೆ...”

ಇನ್ನು “ಹರಿಶ್ಚಂದ್ರ ನಾಟಕವು ನನ್ನ ಮನಸ್ಸನ್ನು ಸೆಳೆಯಿತು. ಎಷ್ಟು ಸಲ ನೋಡಿದರೂ ಮತ್ತೆ ಮತ್ತೆ ಅದನ್ನು ನೋಡಲು ಮನಸ್ಸಾಗುತ್ತಿತ್ತು. ಎಷ್ಟೋ ಸಲ ಅದನ್ನು ನನ್ನ ಮನಸ್ಸಿನಿಂದ ಹೊರಹಾಕಲು ಪ್ರಯತ್ನಿಸಿದರೂ ಅದು ನನ್ನ ಮನಸ್ಸಿನಲ್ಲಿಯೇ ಮತ್ತೆ ಬರುತ್ತಿತ್ತು. ನಾನು ಈ ನಾಟಕವನ್ನು ನೂರಾರು ಸಲ ಆಡಿರುವೆ. ಕನಸಿನಲ್ಲಿಯೂ ಅದೇ ಹರಿಶ್ಚಂದ್ರನಂತೆ ಎಲ್ಲರೂ ಸತ್ಯವಾದಿಗಳಾಗಬಾರದೇಕೆ? ಎಂಬುದೇ ನನ್ನ ಚಿಂತೆ, ಹಗಲೂ ರಾತ್ರಿ ಹಲವು ವಿಪತ್ತುಗಳನ್ನು ಅನುಭವಿಸಿ ಹರಿಶ್ಚಂದ್ರ ಸತ್ಯವನ್ನು ಪಾಲಿಸಲಿಲ್ಲವೇ, ಅದೇ ನಿಜವಾದ ಸತ್ಯಪಾಲನೆ, ಈ ಭಾವನೆಯ ಆದರ್ಶ ನನ್ನಲ್ಲಿಯೂ ಮೂಡಿತು. ಹರಿಶ್ಚಂದ್ರನು ನಿಜವಾಗಿಯೂ ಆ ಎಲ್ಲಾ ಕಷ್ಟಗಳನ್ನು ಅನುಭವಿಸಿದನೆಂದು ನಾನು ನಂಬಿದ್ದೆ. ಆ ದುಃಖವನ್ನು ನೆನೆದು ನಾನು ಅಳುತ್ತಿದ್ದೆ, ಅದೇನೇ ಇರಲಿ, ಈಗಲೂ ಹರಿಶ್ಚಂದ್ರ-ಶ್ರವಣರು ನನ್ನ ಹೃದಯದಲ್ಲಿ ಸಜೀವರಾಗಿದ್ದಾರೆ. ಇಂದಿಗೂ ನಾನು ಆ ನಾಟಕವನ್ನು ಓದಿದರೆ ಮತ್ತೆ ಅದೇ ರೀತಿ ಕಣ್ಣೀರು ಹಾಕುತ್ತೇನೆ ಎನಿಸುತ್ತದೆ...”[೨]

ಒಂದು ಕಡೆಯಲ್ಲಿ ಮಕ್ಕಳನ್ನು ರಂಜಿಸುವ ಕಥೆ, ಕವನಗಳನ್ನು ಕುರಿತು ಹೇಳುವಾಗ ‘ಗುರುದೇವ’ರೆನಿಸಿದ ರವೀಂದ್ರನಾಥ ಠಾಕೂರರು ತಮ್ಮ ಬಾಲ್ಯದಲ್ಲಿ ಸವಿದ ಸಾಹಿತ್ಯವನ್ನು ನೆನೆದು ಹೀಗೆ ಹೇಳಿಕೊಂಡಿದ್ದಾರೆ.

“... ಟಪಟಪ ಬಂತು ಮಳೆ, ನದಿಯೊಳು ಬಂತು ನೆರೆ... ಎಂಬ ಹಾಡು ನನ್ನ ಬಾಲ್ಯದ ಅವಧಿಯಲ್ಲಿ ಒಂದು ಮೋಹಮಂತ್ರದಂತಿತ್ತು. ಆ ಮೋಹವನ್ನು ನಾನು ಈಗಲೂ ಮರೆಯಲು ಸಾಧ್ಯವಾಗಿಲ್ಲ, ನನ್ನ ಮನಸ್ಸಿನ ಆ ಮುಗ್ಧ ಸ್ಥಿತಿಯನ್ನು ನೆನಪಿಗೆ ತಂದುಕೊಂಡು ನೋಡುತ್ತಿದ್ದರೆ, ಹಾಡಿನ ಸವಿಯನ್ನು, ಅದರ ಪ್ರಯೋಜನವನ್ನು ತಿಳಿಯುತ್ತೇನೆ, ಇಷ್ಟು ಮಹಾಕಾವ್ಯ, ಖಂಡಕಾವ್ಯ, ತತ್ವವನ್ನು ತಿಳಿಯುತ್ತೇನೆ, ಇಷ್ಟು ಮಹಾಕಾವ್ಯ, ಖಂಡಕಾವ್ಯ, ತತ್ವ, ನೀತಿ, ಮನುಷ್ಯನ ಅಸಾಧ್ಯ ಪ್ರಯತ್ನ, ಮೈ ಬೆವರು ಸುರಿಸುವ ಕಸರತ್ತು, ಇವೆಲ್ಲ ನಿತ್ಯವೂ ಹೇಗೆ ನಿಷ್ಪ್ರಯೋಜನವಾಗುತ್ತ ಮರೆತು ಹೋಗುತ್ತಿವೆ. ಆದರೆ ಈ ಅಸಂಗತ, ಅರ್ಥಹೀನ, ಯಾದೃಚ್ಛಿಕ ಪದಗಳು, ಹೇಗೆ ಜನರ ಜ್ಞಾಪಕದಲ್ಲಿ ಚಿರಕಾಲದಿಂದ ಬಂದಿವೆ ಎಂಬುದನ್ನು ನಾನರಿಯಲಾರೆ...”[೩] ಎಂದು ತಮ್ಮ ಬಾಲ್ಯವನ್ನು ನೆನೆಯುತ್ತಾ ಈ ಹಾಡುಗಳಲ್ಲಿ ಒಂದು ಚಿರತ್ವವಿದೆ ಎನ್ನುತ್ತಾರೆ.

ಮುಂದುವರೆದು ರವೀಂದ್ರರು "ಜಲಪಡೇ ಪಾತಾ ನಡೆ (ಹನಿ ಉದುರುವುದು ಎಲೆ ಅದುರುವುದು) ಎಂಬುದು ಮಾತ್ರ ಮತ್ತೆ ಮತ್ತೆ ನೆನಪಿಗೆ ಬರುತ್ತಿತ್ತು. ಇದೇ ನನ್ನ ಜೀವನದಲ್ಲಿ ನೆನಪಿನಲ್ಲಿರುವ ಕವಿತೆಯ ಸಾಲು, ಈ ಕವಿತೆಯಲ್ಲಿ ಪ್ರಾಸವಿರುವುದರಿಂದ ಪದ್ಯ ಮುಗಿದರೂ ಅದು ಮುಗಿದಂತಾಗುವುದಿಲ್ಲ. ಅದನ್ನು ಹೇಳಿ ಮುಗಿಸಿದರೆ, ಅದರ ಝುಂಕಾರ ನಿಲ್ಲುವುದಿಲ್ಲ. ಪ್ರಾಸವನ್ನು ತೆಗೆದುಕೊಂಡು ಕಿವಿಗೂ, ಮನಸ್ಸಿಗೂ ಆಟ ನಡೆಯುತ್ತಿರುತ್ತದೆ. ಹೀಗೆ ತಿರುಗಿ ತಿರುಗಿ ಬಂದು ಅದು ನನ್ನ ಸಮಸ್ತ ಚೈತನ್ಯದಲ್ಲಿಯೂ ಹನಿ ಉದುರುತ್ತಲೂ ಎಲೆ ಅದುರುತ್ತಲೂ ಇತ್ತು..."[೪]

"ಹುಡುಗನ ಮನಸ್ಸು ಮೃದುವಾಗುವುದಕ್ಕೆ ಕಣ್ಣೆದುರಿಗೆ ಬಣ್ಣ ಬಣ್ಣದ ಚಿತ್ರವಿಚಿತ್ರ ಆಶ್ಚರ್ಯ ಸುಖ ಚಿತ್ರ ಕಾಣುತ್ತಿದ್ದಕ್ಕೆ ಮೂಲ ಕಾರಣ ಆ ಪದ್ಯದಲ್ಲಿ ನಿರರ್ಗಳವಾಗಿಯೂ ವೇಗವಾಗಿಯೂ ಬರುತ್ತಿದ್ದ ಪದಪುಂಜ ಮತ್ತು ಲಯದ ಆಂದೋಲನ, ಶೈಶವದಲ್ಲಿ ಅನುಭವಿಸಿದ ಸಾಹಿತ್ಯರಸದ ಈ ಎರಡು ಸಂಗತಿಗಳು ಇಂದಿಗೂ ನನ್ನಲ್ಲಿ ಜಾಗೃತವಾಗಿದೆ. ಮತ್ತು ಟಪ ಟಪ ಬಂತು, ಮಳೆ ನದಿಯೊಳು ಬಂತು ನೆರೆ ಎಂಬುದೂ ನೆನಪಿದೆ. ಈ ಹಾಡು ನನ್ನ ಬಾಲ್ಯದ ಮೇಘದೂತದಂತೆ..."[೫] ಎನ್ನುತ್ತಾರೆ.

ಮತ್ತು "ಬಾಲಕ ರವೀಂದ್ರರಿಗೆ ತಾಯಿ ಶಾರದಾದೇವಿ ಅವರು ರಾಮಾಯಣವನ್ನು ಮಹಾಭಾರತವನ್ನು ಓದಿಸುತ್ತಾ ಅದರ ಉಪಕಥೆಗಳನ್ನು ಹೇಳುತ್ತಿದ್ದರು. ಮತ್ತು ಬಾಲ್ಯದಲ್ಲಿ ರವೀಂದ್ರರಿಗೆ ಪ್ರತಿದಿನ ನೋಡಿಕೊಳ್ಳುತ್ತಿದ್ದ ಸೇವಕನಾದ ಬ್ರಜೇಶ್ವರನು ರವೀಂದ್ರರಿಗೆ ಪ್ರತಿದಿನ ಸಂಜೆ ರಾಮಾಯಣವೆನ್ನೋದುತ್ತಿದ್ದನು. ಇದು ರವೀಂದ್ರರ ಎಳೆಯ ಮನಸ್ಸಿನ ಮೇಲೆ ತುಂಬ ಪರಿಣಾಮವನ್ನುಂಟು ಮಾಡುತ್ತಿತ್ತು"[೬] ಎನ್ನುತ್ತಾರೆ.

ಇನ್ನು ನಮ್ಮ ರಾಷ್ಟ್ರಕವಿ 'ಕುವೆಂಪು'ರವರು ತಮ್ಮ ಬಾಲ್ಯವನ್ನು ನೆನೆಯುತ್ತಾ ತಮ್ಮ ಹತ್ತಿರದ ಪರಿಚಿತರಾದ ಮಂಜಪ್ಪಗೌಡರಿಂದ ಪ್ರಸಿದ್ಧ ಆಂಗ್ಲ ಕವಿಯಾಗಿದ್ದ 'ಲಾಂಗ್‌ಫೆಲೊ' ಎಂಬಾತ ರಚಿಸಿದ 'ದಿ ಸಾಮ್ ಆಫ್ ಲೈಫ್' ಎಂಬ ಕವನವನ್ನು ಒಂದೊಂದೆ ಪದ್ಯವಾಗಿ ಹೇಳುತ್ತಾ ವಿವರಿಸುತ್ತಾ ಹೋದಾಗ ಆ ಕವಿತೆ ಬಾಲಕ ಕುವೆಂಪು ಅವರ ಬದುಕಿನ ರೂಪುರೇಷೆಗಳನ್ನು ಕಟ್ಟುವಲ್ಲಿ ತುಂಬಾ ಪ್ರಭಾವ ಬೀರಿತೆಂಬುದುನ್ನು ಅವರು ತಮ್ಮ ಆತ್ಮಕಥೆಯಾದ 'ನೆನಪಿನ ದೋಣಿಯಲ್ಲಿ' ಬರೆದುಕೊಂಡಿದ್ದಾರೆ. ಅಲ್ಲದೆ ಬಾಲ್ಯದಲ್ಲಿಯೇ ಮಕ್ಕಳ ವಿದ್ಯಾಭ್ಯಾಸದ ಮಹತ್ವವನ್ನು ವಿದ್ಯೆಯಿಂದಲೇ ಅವನ ಏಳಿಗೆ, ವಿಚಾರಶೀಲ ಕೃತಿಗಳಿಂದ ಮಕ್ಕಳ ಚೇತನ ವಿಕಾಸಗೊಂಡು ಅವರ ಉದಯವಾಗುತ್ತದೆ ಎಂಬುದನ್ನು ಹೇಳುತ್ತಾ ತಮ್ಮ ಬಾಲ್ಯದಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ಇನ್ನಿತರ ಕೃತಿಗಳ ಬಗೆಗಿನ ವಿಚಾರಗಳನ್ನು ತಮ್ಮ ಆತ್ಮಕಥನದಲ್ಲಿ ನೆನೆಯುತ್ತಾ ಲಾಂಗ್‌ಫೆಲೋ ಕವಿಯ ಆ ಕವಿತೆ ಬೀರಿದ ಪ್ರಭಾವವನ್ನು ಹೀಗೆ ಹೇಳುತ್ತಾರೆ.

ನನ್ನ ಆತ್ಮಕ್ಕೆ ಚೈತನ್ಯಪೂರ್ಣವಾದ ಒಂದು ಮಂತ್ರದೀಕ್ಷೆಯನ್ನು ಕೊಟ್ಟಿತ್ತು ಆ ಕವಿತೆ. "ಜಗತ್ತು ಮತ್ತು ಜೀವನ ಬರಿಯ ಒಂದು ಶೂನ್ಯ ಸ್ವಪ್ನವಲ್ಲ. ಹಾಗೆಂದುಕೊಂಡು ನಿದ್ರಿಸುವ ಜೀವ ಸತ್ತಂತೆಯೇ ಸರಿ! ಬದುಕು ಮಿಥ್ಯೆಯಲ್ಲ; ಬದುಕು ಸದೃಢ ಸತ್ಯ. ಪಂಚಭೂತಗಳಿಂದ ಹುಟ್ಟಿಬಂದ ನೀನು ಪಂಚಭೂತಗಳಲ್ಲಿ ಸೇರಿ ಹೋಗುತ್ತೀಯ ಎಂಬುದು ಆತ್ಮಕ್ಕಲ್ಲ; ಆ ಮಾತು ಅನ್ವಯವಾಗುವುದು ದೇಹಕ್ಕೆ, ನಮ್ಮ ದಾರಿ, ನಮ್ಮ ಗುರಿ, ಸುಖಕ್ಕೂ ಅಲ್ಲ, ದುಃಖಕ್ಕೂ ಅಲ್ಲ, ಕರ್ಮಕ್ಕೆ; ಕರ್ಮ ಮಾಡುವುದೆ ನಮ್ಮ ಕರ್ತವ್ಯ. ಇಂದಿಗಿಂತ ನಾಳೆ, ಒಂದೊಂದು ದಿನಕ್ಕೂ ನಮ್ಮ ದಾರಿ ಮುಂದುಮುಂದಕ್ಕೆ ಸಾಗುತ್ತಿರಬೇಕು. ವಿದ್ಯೆ, ಕಲೆ, ಜ್ಞಾನ ಇವು ಅನಂತ, ಅಪಾರ. ನಮ್ಮ ಆಯುಸ್ಸಾದರೊ ಕ್ಷಣಿಕವೆಂಬಂತೆ ಮಿಂಚಿ ಹರಿಯುತ್ತಿದೆ. ಯಾವತ್ತಾದರೂ ಮೃತ್ಯುವಿನ ಕರೆಬರಬಹುದು ನಮಗೆ. ಆದ್ದರಿಂದ ಬದುಕಿನ ರಂಗದಲ್ಲಿ, ಮೂಕಪ್ರಾಣಿಗಳಂತಲ್ಲದೆ, ವೀರರಂತೆ ಹೋರಾಡುತ್ತಾ ಮುನ್ನುಗ್ಗಬೇಕು. ಭವಿಷ್ಯತ್ತಿನಲ್ಲಿ ಸುಖ, ಸ್ವಪ್ನವನ್ನು ನಂಬಿ ಕುಳಿತಿರಲಾರದು, ಹಾಗೆಯೇ ಕಳೆದ ಕಾಲದ ವೈಭವವನ್ನೆ ಮೆಲುಕು ಹಾಕುತ್ತಲೂ ಇರಬಾರದು. ಹಿಂದಕ್ಕೂ ನೋಡದೆ, ಮುಂದಕ್ಕೂ ಹಾಕದೆ, ಇಂದಿನದನ್ನು ಇಂದೆ ಮಾಡಿ ಪೂರೈಸಬೇಕು, ಹೃದಯದ ಧೈರ್ಯೋತ್ಸಾಹ ಕೆಡದೆ, ಭಗವಂತನಲ್ಲಿ ಶ್ರದ್ಧೆಯಿಟ್ಟು, ಇದಕ್ಕೆಲ್ಲ ನಮಗೆ ಮಾರ್ಗದರ್ಶಿಗಳಾಗಿದ್ದಾರೆ. ಜಗತ್ತಿನ ಮಹಾಪುರುಷರು ಅವರನ್ನನುಸರಿಸಿ ಅವರ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆದರೆ ನಮ್ಮ ಬದುಕು ಭವ್ಯವಾಗುತ್ತದೆ. ಅಳಿದ ಮೇಲೆ ನಾವೂ ಅವರಂತೆಯೆ ಕಾಲದ ಹೊಳೆಯ ಮರುಳು ದಿಣ್ಣೆಯ ಮೇಲೆ ನಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಬಹುದು. ಬಹುಶಃ ನಮ್ಮ ತರುವಾಯ ನಮ್ಮ ಹಿಂದೆ ಸಂಸಾರ ಮಹಾಸಾಗರದಲ್ಲಿ ತೇಲುತ್ತಾ ಬರುವ ಯಾವನಾದರೊಬ್ಬ ಹಡಗೊಡೆದು ದಿಕ್ಕುಗೆಟ್ಟು ಬರುವ ಜೀವನ ಪ್ರಯಾಣಿಕರು ಆ ನಮ್ಮ ಹೆಜ್ಜೆ ಗುರುತುಗಳನ್ನು ಕಂಡು ಧೈರ್ಯ ತಂದುಕೊಂಡು ಮುಂದೆ ಬರಬಹುದು. ಆದ್ದರಿಂದ ಎದ್ದೇಳು! ಕರ್ಮನಿರತನಾಗು! ಬಂದದ್ದೆಲ್ಲಾ ಬರಲಿ! ಹೋಗುತ್ತಾ ಜಯಿಸುತ್ತಾ ಮುಂದುವರಿ! ಕರ್ಮ ಮಾಡುತ್ತಾ ತಾಳ್ಮೆಗೆಡದೆ ಕಾಯುವುದನ್ನು ಕಲಿ!"[೭]

ಹೀಗೆ ಆಲಿಸುತ್ತಾ ಆಲಿಸುತ್ತಾ ನನ್ನ ಜೀವ ಜ್ವಾಲಾಮಯವಾಯ್ತು, ನನ್ನ ಅಂತಃಶ್ಚೇತನಕ್ಕೊಂದು ಮೊತ್ತ ಮೊದಲನೆಯ 'ಉಪನಯನ'ವಾಯ್ತು! ಚೈತನ್ಯ ಕಣ್ಣು ಬಿಟ್ಟಿತು ಎಚ್ಚರಗೊಂಡು! 'ಇನ್ನೆಲ್ಲಿಯ ನಿದ್ದೆ?'

ನಾನು ಈ ಪದ್ಯವನ್ನು ಮತ್ತೆ ಮತ್ತೆ ಓದಿ ಬಾಯಿಪಾಠ ಮಾಡಿಕೊಂಡೆ, ಅದು ನನ್ನ ಹೃದಯದಲ್ಲಿ ಎಷ್ಟು ಆಳವಾಗಿ ಬೇರೂರಿತೆಂದರೆ ಅಂದು ಬಾಯಿಪಾಠ ಮಾಡಿದ್ದು ಇಂದಿಗೂ ಒಂದು ಚೂರು ಮಾಸಿಲ್ಲ. ಇದು ನನ್ನ ಬಾಲ್ಯದ 'ಗುರು'ವಾಗಿ ನನ್ನ ಚೇತನಕ್ಕೆ ಕಣ್ತೆರೆಯಿಸಿದ ಈ ಕವನ ನನ್ನ ಪ್ರಪ್ರಥಮ ದೀಕ್ಷಾಗುರುವಾಗಿಯೆ ಸದಾ ನಿಂತಿದೆ! ಎನ್ನುತ್ತಾರೆ.

ಕ್ಷಿಪಣಿಯ ಜನಕರೆನಿಸಿದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂರವರು ತಮ್ಮ ಬಾಲ್ಯವನ್ನು ಕುರಿತು ಕೆಲವು ಘಟನೆಗಳನ್ನು ತಮ್ಮ 'ವಿಗ್ಸ್ ಆಫ್ ಫೈರ್' ಆತ್ಮಕಥನದಲ್ಲಿ ಬಿಚ್ಚಿಟ್ಟಿದ್ದಾರೆ. ಅವರು ಬಾಲ್ಯದಲ್ಲಿ ತಮ್ಮ ಊರಾದ ತಮಿಳುನಾಡಿನ ರಾಮೇಶ್ವರಂನಲ್ಲಿ ಕಳೆಯುತ್ತಿದ್ದಾಗ "... ಹುಟ್ಟಿದ ಪ್ರತಿಯೊಂದು ಮಗು ತನ್ನ ಅನುವಂಶಿಕ ಗುಣಗಳೊಂದಿಗೆ ಬೆಳೆಯುತ್ತಾ ಪರಿಸರದ ಸಾಮಾಜಿಕ, ಆರ್ಥಿಕ ವಾತಾವರಣದಿಂದ ಜೀವನದಲ್ಲಿ ವಿಶಿಷ್ಟವಾದ ತರಬೇತಿಯನ್ನು ಪಡೆಯುತ್ತದೆ. ನಾನು ನನ್ನ ತಂದೆಯವರಿಂದ ಪ್ರಾಮಾಣಿಕತೆ, ಸ್ವ-ಶಿಸ್ತುಗಳನ್ನು ಪಡೆದರೆ, ತಾಯಿಯಿಂದ ಉತ್ತಮ ಗುಣಗಳನ್ನು, ಆಳವಾದ ಕರಣೆಯನ್ನು ಬಳುವಳಿಯಾಗಿ ಪಡೆದೆ, ಹಾಗೆ ನನ್ನ ಒಡಹುಟ್ಟಿದವರಿಂದ ಜೀವನ ಮೌಲ್ಯಗಳನ್ನು ಕಲಿತೆ... ಜೊತೆಗೆ ಪ್ರತಿದಿನ ರಾತ್ರಿ ಮಲಗುವ ವೇಳೆ ನಮ್ಮ ತಾಯಿ ಮತ್ತು ಅಜ್ಜಿ ರಾಮಾಯಣದ ಕೆಲವು ಘಟನೆಗಳನ್ನು ಕಥೆಗಳ ರೂಪದಲ್ಲಿ, ಹಾಗೂ ಪ್ರವಾದಿಯ ಜೀವನ ಚರಿತ್ರೆಯನ್ನು ಕಥೆಯ ರೂಪದಲ್ಲಿ ಹೇಳುತ್ತಿದ್ದರು. ಆ ಕ್ಷಣಗಳನ್ನು ನಾನೂ ಎಂದು ಮರೆಯಲಾರೆ..."[೮] ಎಂದು ತಮ್ಮ ಆತ್ಮಕಥನದ ಪುಟಗಳಲ್ಲಿ ಹೇಳಿಕೊಂಡಿದ್ದಾರೆ.

ಈ ಮೇಲಿನ ಎಲ್ಲಾ ಮಹನೀಯರ ಉಲ್ಲೇಖಗಳು ಮಕ್ಕಳ ಮನಸ್ಸಿನಲ್ಲಿ ತಾನು ಕೇಳಿದ ಅಥವಾ ಓದಿದ ಕೆಲವು ಸಾಲುಗಳನ್ನು ನೆನಪಿನಲ್ಲಿಟ್ಟುಕೊಳ್ಳುವಲ್ಲಿ ಪ್ರಮುಖ ಮಹತ್ವವನ್ನು ಹೊಂದಿವೆ. ಕಥೆ, ಕವಿತೆಯಲ್ಲಿ ಬರುವ ಪ್ರಾಸದ ಅಕ್ಷರ ಸಂಯೋಜನೆಯ ಬಿರುಗಾಳಿಯನ್ನು ಆಯ್ಕೆ ಮಾಡಿಕೊಂಡು ಮಗು ಆಕರ್ಷಿತಗೊಳ್ಳುತ್ತದೆಂಬುದು ರವೀಂದ್ರರ ಅನುಭವವಾದರೆ (ಇಲ್ಲಿನ ಹಾಡಿನ ನಾದ, ಲಯ, ರಂಜನೆ, ಕವಿತೆಯ ದೀರ್ಘತೆ, ಘಟನೆಗಳು, ಚಿತ್ರಗಳು, ಮಗುವಿನ ಮನಸ್ಸನ್ನು ಆಕರ್ಷಿಸುತ್ತವೆ ಮತ್ತು ತಾನು ಕೇಳುವ ಕಥೆ) ಬಾಲ್ಯದಲ್ಲಿ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ನಾಟಕ ಕೃತಿಗಳು, ಇತರೆ ಮಕ್ಕಳ ಮೇಲೂ ಪ್ರಭಾವ ಬೀರುವಂತಹವು. ಕುವೆಂಪುರವರ ಮೇಲೆ ಗಾಢವಾದ ಪ್ರಭಾವ ಬೀರಿದ 'ದಿ ಸಾಮ್ ಆಫ್ ಲೈಫ್' ಕವಿತೆ ಅವರ ವ್ಯಕ್ತಿತ್ವವನ್ನು ಬದಲಿಸಿತು. ಇನ್ನು ಬಾಲ್ಯದಲ್ಲಿ ತಂದೆ ತಾಯಿಗಳಿಂದ ಪ್ರಭಾವಿತರಾದ ಅಬ್ದುಲ್ ಕಲಾಂ ಅವರು ಪ್ರವಾದಿಯವರ ಜೀವನ ಕಥೆಗಳು ಮತ್ತು ರಾಮಾಯಣದ ಕಥೆಗಳಿಂದ ಪ್ರಭಾವಿತರಾಗಿರುವುದನ್ನು ಕಾಣುತ್ತೇವೆ.

ಹೀಗೆ ಮಕ್ಕಳ ಬಾಲ್ಯದಲ್ಲಿ ಸಾಹಿತ್ಯದ ಕಥೆ, ಕವನ ಹಾಗೂ ನಾಟಕಗಳು ಮತ್ತು ಅದರಲ್ಲಿರುವ ನಾದ, ಲಯ, ರಂಜನೆ, ನೀತಿ, ಕವಿತೆಗಳ ದೀರ್ಘತೆ, ಅದರಲ್ಲಿರುವ ಘಟನೆಗಳು, ದೃಶ್ಯಗಳು ಮೊದಲಾದವು ಮಕ್ಕಳ ಮನಸ್ಸನ್ನು ಆಕರ್ಷಿಸುತ್ತವೆ. ಮತ್ತು ತಾವು ಕೇಳುವ ವಿಷಯದ ಕಡೆಗೂ ತಮ್ಮ ಮನಸ್ಸನ್ನು ಕೇಂದ್ರೀಕರಿಸುತ್ತವೆ. ಹೀಗಾಗಿ ಮಕ್ಕಳ ಸಾಹಿತ್ಯಕ್ಕೆ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ವಿಶೇಷವಾದ ಸಾಮರ್ಥ್ಯವಿದೆ ಎನ್ನಬಹುದು.

ಒಟ್ಟಾರೆಯಾಗಿ ಮಕ್ಕಳ ಸಾಹಿತ್ಯದಿಂದ ಪ್ರತಿಯೊಬ್ಬ ಮಗುವಿನ ಬಾಲ್ಯದಲ್ಲಿ ಮಹತ್ವದ

ಪಾತ್ರವಹಿಸಿ, ಮಕ್ಕಳಲ್ಲಿ ಉನ್ನತ ಮೌಲ್ಯಗಳು ಬೆಳೆಸಲು ಅವರನ್ನು ಆದರ್ಶ ಪುರುಷರನ್ನಾಗಿ ರೂಪಿಸುವ ಕೆಲಸವನ್ನು ಮಾಡುತ್ತಿದೆ.

೪.೫. ಮಕ್ಕಳ ಕಥೆಗಳ ಪ್ರಕಾರಗಳು

ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ ಎನ್ನಬಹುದು. ಮಕ್ಕಳು ಸಮಾಜದ ಸರಕುಗಳು ಇದ್ದಹಾಗೆ. ಆ ಸರಕುಗಳನ್ನು ಸರಿಯಾಗಿ ಬಳಸಿಕೊಂಡು ಅವರನ್ನು ಉತ್ತಮ ನಾಗರಿಕರನ್ನಾಗಿ ಬೆಳಸಿ, ಎಲ್ಲರೊಡನೆ ಪ್ರೀತಿಯ ಒಡನಾಟದಿಂದ ಬದುಕುವಂತೆ ಮಾಡುವುದು. ಅವರಲ್ಲಿ ಮೂಢನಂಬಿಕೆಯನ್ನು ತೊಡೆದು ಹಾಕಿ, ವೈಜ್ಞಾನಿಕ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸುವಲ್ಲಿ ಮಕ್ಕಳ ಸಾಹಿತ್ಯದ ಪಾತ್ರ ಅಪಾರ. ಅದರಲ್ಲಿಯೂ ಮಕ್ಕಳ ಕಥೆಗಳು ಮಕ್ಕಳ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆ ತುಂಬಾ ಹತ್ತಿರವಾದವು.

ಪಂಚತಂತ್ರ, ಹಿತೋಪದೇಶ, ಜಾತಕ ಕಥೆಗಳು, ಜಾನಪದ ಕಥೆ, ಕಥಾಸರಿತ್ಸಾಗರ, ಉಪನಿಷತ್ ಕಥೆ, ಪುರಾಣ ಕಥೆ, ವೇದಗಳ ಕಥೆ, ದಂತಕಥೆ, ಬೀರಬಲ್ಲನ ಕಥೆ, ತೆನಾಲಿ ರಾಮನ ಕಥೆ, ದೃಷ್ಟಾಂತ ಕಥೆ, ಸಾಧುಸಂತರ ಕಥೆ ಎಂದು ಮುಂತಾದ ಕಥೆಗಳನ್ನು ವಿಭಾಗ ಮಾಡಿರುವುದನ್ನು ಕಾಣುತ್ತೇವೆ. ಈ ಎಲ್ಲಾ ಪ್ರಕಾರದ ಕಥೆಗಳ ಉದ್ದೇಶವು ಮಕ್ಕಳ ಹಿತವನ್ನೆ ಬಯಸುವಂತವಾಗಿರುತ್ತವೆ. ಇಂತಹ ಕಥೆಗಳ ರಾಶಿಯನ್ನು ಒಂದು ವ್ಯವಸ್ಥಿತವಾಗಿ ವರ್ಗೀಕರಿಸಿ, ಅದರಲ್ಲಿ ಯಾವ ಯಾವ ಕಥೆಗಳು ಯಾವ ಪ್ರಕಾರದ ಕಥೆಗಳಲ್ಲಿ ಬರುತ್ತವೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ನಾವಿಲ್ಲಿ ಕೆಲವು ಮಕ್ಕಳ ಕಥೆಗಳ ವರ್ಗೀಕರಣವನ್ನು ಮಾಡಿರುವುದನ್ನು ಗಮನಿಸಿದರೆ ಅವು ಇಂತಿವೆ.

* ಧಾರ್ಮಿಕ ಕಥೆಗಳು
* ಜಾನಪದ ಕಥೆಗಳು
* ಐತಿಹಾಸಿಕ ಕಥೆಗಳು
* ನೀತಿ ಕಥೆಗಳು
* ವೈಜ್ಞಾನಿಕ ಕಥೆಗಳು
* ಪ್ರಾಣಿ–ಪಕ್ಷಿ ಕಥೆಗಳು
* ಸಾಹಸ ಕಥೆಗಳು
* ಸಾಮಾಜಿಕ ಕಥೆಗಳು
* ಪ್ರವಾಸ ಕಥೆಗಳು ಮತ್ತು
* ಹಾಸ್ಯ ಮತ್ತು ಕಾಮಿಕ್ಸ್‌ಗೆ ಸಂಬಂಧಿಸಿದ ಕಥೆಗಳು

* **ಧಾರ್ಮಿಕ ಕಥೆಗಳು:** ಮಕ್ಕಳ ಈ ಕಥೆಗಳನ್ನು ಪೌರಾಣಿಕ ಕಥೆಗಳು ಎಂದು ಕರೆಯುವುದುಂಟು. ಇದರಲ್ಲಿ ಧಾರ್ಮಿಕ ಗ್ರಂಥಗಳಿಗೆ ಸಂಬಂಧಿಸಿದಂತೆ, ಜಾತಕ ಕಥೆಗಳಿಗೆ ಸಂಬಂಧಿಸಿದಂತೆ ಹದಿನೆಂಟು ಪುರಾಣಗಳಿಗೆ ಸಂಬಂಧಿಸಿದಂತೆ, ವೇದ-ಉಪನಿಷತ್ತುಗಳಿಗೂ ಸಂಬಂಧಿಸಿದಂತೆ ಅದರಲ್ಲಿ ಬರುವ ಉಪಕಥೆಗಳನ್ನು ಕುರಿತು ಹಾಗೂ ಅದರಲ್ಲಿ ಬರುವ ಮಹಾಪುರುಷರ ಜೀವನದ ಘಟನೆಗಳನ್ನು ಆಧರಿಸಿದ ವಸ್ತುಗಳ ವಿಷಯಗಳಿಂದ ಈ ಕಥೆಗಳು ರಚನೆಯಾಗಿರುತ್ತವೆ.

* **ಜಾನಪದ ಕಥೆಗಳು:** ಈ ಪ್ರಕಾರದ ಮಕ್ಕಳ ಕಥೆಗಳಲ್ಲಿ ಪ್ರಾಚೀನ ಕಾಲಕ್ಕೆ ಸಂಬಂಧಿಸಿದ ಅವರ ಜನ ಜೀವನವನ್ನು ಪರಿಚಯಿಸುವ ಮುಖ್ಯ ಗುರಿಯೊಂದಿಗೆ ಇವು ರಚನೆಯಾಗಿರುತ್ತವೆ. ಇಂತಹ ಕಥೆಗಳು ಎಲ್ಲಾ ದೇಶಗಳಲ್ಲಿಯೂ ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಈ ಕಥೆಗಳು ಅದ್ಭುತ ರಮ್ಯವಾಗಿ ಮಕ್ಕಳಿಗೆ ಮನೋರಂಜನೆಯನ್ನು ನೀಡುತ್ತವೆ. ಅಲ್ಲದೆ ಈ ಕಥೆಗಳು ಅಂದಿನ ಸಾಮಾಜಿಕ ವ್ಯವಸ್ಥೆಯ ಆಚಾರ-ವಿಚಾರ, ರೀತಿ-ನೀತಿ, ಅವರ ಸಂಸ್ಕೃತಿ, ಅವರಲ್ಲಿನ ಸಹಕಾರ ಗುಣವನ್ನು ಪರಿಚಯಿಸುವಂತ ಕೆಲಸವನ್ನು ಮಾಡುತ್ತವೆ.

ಈ ಜಾನಪದ ಕಥೆಗಳ ರೀತಿಯಲ್ಲಿಯೇ ಕಿನ್ನರ ಕಥೆಗಳು ಎಂಬ ಕಥೆಗಳು ಬರುವುದನ್ನು ಕಾಣುತ್ತೇವೆ. ಇವು ಯಕ್ಷ-ಯಕ್ಷಿಣಿ, ದೇವ-ದೇವತೆಗಳ, ಭೂತ-ಪ್ರೇತಗಳಿಂದ ಕೂಡಿದ ಕಥೆಗಳು ರಚನೆಗೊಂಡಿರುತ್ತವೆ. ಈ ಕಥೆಗಳಲ್ಲಿ ಅಸಾಮಾನ್ಯ ಘಟನೆಗಳು, ಮೈನವಿರೇಳಿಸುವ ಪ್ರಸಂಗಗಳು, ಅದ್ಭುತ ಚಮತ್ಕಾರಗಳು, ಮಂತ್ರ-ತಂತ್ರಗಳು ಮೊದಲಾದ ವಿಷಯಗಳು ಈ ಕಥೆಗಳಿಗೆ ವಸ್ತುಗಳಾಗಿರುತ್ತವೆ. ಇವು ಮಕ್ಕಳಲ್ಲಿ ಕಲ್ಪನೆಗೆ ಹೆಚ್ಚು ಅವಕಾಶ ಮಾಡಿಕೊಡುತ್ತವೆ.

* **ಐತಿಹಾಸಿಕ ಕಥೆಗಳು:** ಈ ತರದ ಕಥೆಗಳಿಗೆ ಇತಿಹಾಸವೆ ಆಧಾರವಾಗಿರುತ್ತದೆ. ಈ ಹಿಂದೆ ನಡೆದಂತ ಅನೇಕ ಘಟನೆಗಳ ತುಲನೆಯೇ ಐತಿಹಾಸಿಕ ಕಥೆಗಳಾಗಿರುತ್ತವೆ. ಇಲ್ಲಿ ಹಿಂದೆ ಇದ್ದ ರಾಜಮನೆತನಗಳ ರಾಜ-ರಾಜಕುಮಾರಿಯರು, ಮಂತ್ರಿಗಳು, ಸೈನಿಕರು, ಚತುರರು ಮೊದಲಾದ ಮಹಾನ್‌ಪುರುಷರಿಗೆ ಸಂಬಂಧಿಸಿದ ಹಾಗೂ ಅವರಿಗೆ ಇದ್ದ ಜನಪರ ಕಾಳಜಿಯುಳ್ಳ ಕೆಲಸ ಕಾರ್ಯಗಳನ್ನು ಮಾಡಿರುವುದನ್ನೆ ಈ ಕಥೆಗಳಿಗೆ ವಸ್ತುಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ.

ಅಲ್ಲದೆ ಈ ಕಥೆಗಳು ನಮ್ಮ ಪರಿಸರ, ಪರಂಪರೆ, ನಾಡು-ನುಡಿಗಳ ಬಗ್ಗೆ ಕಾಳಜಿ, ಸಂಸ್ಕೃತಿ, ಸಹಕಾರ ಮನೋಭಾವ, ತಾಳ್ಮೆ, ಜಾಣ್ಮೆ ಮೊದಲಾದ ವಿಷಯಗಳನ್ನು ಮಕ್ಕಳಿಗೆ ತಲುಪಿಸುವ ಕಾರ್ಯವನ್ನು ಮಾಡುತ್ತವೆ.

* **ನೀತಿ ಕಥೆಗಳು:** ಕಥೆಗಳಲ್ಲಿಯೇ ಹೆಚ್ಚು ಪ್ರಚಾರದಲ್ಲಿರುವವು ಈ ನೀತಿ ಕಥೆಗಳಾಗಿವೆ. ಪಂಚತಂತ್ರ ಕಥೆಗಳು, ಈಸೋಪನ ಕಥೆಗಳು ಕೆಲವು ಪೌರಾಣಿಕ ಕಥೆಗಳು, ವೇದ-ಉಪನಿಷತ್ತುಗಳಲ್ಲಿ

ಬರುವ ಕಥೆಗಳು ಮೊದಲಾದವು ಈ ನೀತಿ ಕಥೆಗಳಲ್ಲಿ ಬರುತ್ತವೆ. ಈ ಪ್ರಕಾರದ ಕಥೆಗಳಲ್ಲಿ ನೀತಿಬೋಧನೆಯೇ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಈ ಕಥೆಗಳಲ್ಲಿ ಉಪದೇಶಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗಿರುತ್ತದೆ.

ಇಂತಹ ನೀತಿ ಕಥೆಗಳಲ್ಲಿ ಮನುಷ್ಯ ಸ್ವಭಾವವನ್ನು ಪರಿಚಯಿಸುತ್ತ ಅವನಲ್ಲಿ ಮೋಸ, ಕಳ್ಳತನ, ಕೆಟ್ಟ ಬುದ್ಧಿ, ಅಹಂಕಾರ, ಕೋಪ ಮೊದಲಾದ ಗುಣಗಳ ಜೊತೆಗೆ ಅವನಲ್ಲಿ ಪ್ರಾಮಾಣಿಕತೆ, ಸರಳತೆ, ತಾಳ್ಮೆ, ಸಹಾಯಮಾಡುವ ಮನಸ್ಸು ಮೊದಲಾದ ಗುಣಗಳು ಇರುತ್ತವೆ. ಈ ಸಮಯದಲ್ಲಿ ಅವರಿಗೆ ನೀತಿಯ ಬೋಧನೆಯ ಮೂಲಕ ಉತ್ತಮ ಮೌಲ್ಯಗಳನ್ನು ಬೆಳೆಸಲು ಈ ನೀತಿಕಥೆಗಳು ಸಹಾಯಕವಾಗುತ್ತವೆ. ಇವು ಸಣ್ಣ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಮನಮುಟ್ಟುತ್ತವೆ.

* **ವೈಜ್ಞಾನಿಕ ಕಥೆಗಳು:** ಈ ಪ್ರಕಾರದ ಕಥೆಗಳಲ್ಲಿ ವಾಸ್ತವತೆಗೆ ಹೆಚ್ಚಿನ ಆದ್ಯತೆ ಇರುವುದನ್ನು ಕಾಣುತ್ತೇವೆ. ಇಲ್ಲಿ ಯಾವುದೇ ವಿಷಯ ಅಥವಾ ವಸ್ತುವನ್ನು ಕುರಿತು ಅದರಲ್ಲಿರುವ ಮೂಲವೇನು ಎಂಬುದನ್ನು ತಿಳಿಯುವಲ್ಲಿ ಹೆಚ್ಚು ಅವಕಾಶವಿರುತ್ತದೆ. ಈ ಕಥೆಗಳಲ್ಲಿ ವಸ್ತುವಿನ ಉಪಯೋಗ, ಅದರ ಪರಿಣಾಮ ಮೊದಲಾದವುಗಳನ್ನು ಸಂಶೋಧನೆಗಳ ಮೂಲಕ ಪರಿಶೀಲಿಸಿ ಕಥೆಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಇಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ವಸ್ತುಗಳನ್ನು ಕುರಿತು ಕಥೆಗಳು ರಚನೆಯಾಗಿರುತ್ತವೆ. ಇವುಗಳಿಂದ ಮಕ್ಕಳಲ್ಲಿ ಜ್ಞಾನದ ಜೊತೆಗೆ ಕಲ್ಪನಾಶಕ್ತಿಯ ವಿಕಾಸಕ್ಕೆ ಅವಕಾಶವಿರುತ್ತವೆ. ಇದಕ್ಕೆ ಕಾರಂತರು ರಚಿಸಿದ 'ಬಾಲಪ್ರಪಂಚ'ದ ಸಂಪುಟಗಳು ಉತ್ತಮ ಉದಾಹರಣೆ ಎನ್ನಬಹುದು.

* **ಸಾಹಸ ಕಥೆಗಳು:** ಈ ಸಾಹಸ ಕಥೆಗಳಲ್ಲಿ ಧೈರ್ಯ-ಸ್ಥೈರ್ಯ ಮತ್ತು ಸಾಹಸಗಳನ್ನು ಎತ್ತಿಹಿಡಿಯುವ, ವೀರತನವನ್ನು ತೋರುವ ವರ್ಣನೆಗಳಿಂದ ಕೂಡಿರುತ್ತದೆ. ಇವುಗಳಿಂದ ಮಹಾನ್ ವ್ಯಕ್ತಿತ್ವವನ್ನು ಪಡೆಯಲು, ಮಕ್ಕಳಿಗೆ ಪ್ರೇರಣೆ ಸಿಗುತ್ತವೆ. ಈ ಕಥೆಗಳಿಂದ ಮಕ್ಕಳು ಎಂತಹ ಕಠಿಣ ಸವಾಲುಗಳು ಎದುರಾದರೂ ಅವುಗಳನ್ನು ಧೈರ್ಯವಾಗಿ ಸಾಹಸ ಕಥೆಗಳಲ್ಲಿ ಬರುವ ನಾಯಕ-ನಾಯಕಿಯರ ಹಾಗೇ ಎದುರಿಸುವ ಪ್ರೇರಣೆಯನ್ನು ಪಡೆಯಲು ಸಹಾಯಕವಾಗುತ್ತವೆ. ಮತ್ತು ಬಂದ ಸಮಸ್ಯೆಗಳನ್ನು ಸರಿಯಾಗಿ ನಿಭಾಯಿಸುವಂತೆ ಮಾಡಲು ಈ ಕಥೆಗಳಿಂದ ಅವಕಾಶವಿರುತ್ತದೆ.

* **ಪ್ರಾಣಿ-ಪಕ್ಷಿ ಕಥೆಗಳು:** ಈ ಪ್ರಕಾರದ ಕಥೆಗಳಲ್ಲಿ ಮುಖ್ಯವಾಗಿ ಪ್ರಾಣಿ-ಪಕ್ಷಿಗಳಿಗೆ ಕಥೆಗಳ ಪಾತ್ರಧಾರಿಗಳಾಗಿರುತ್ತವೆ. ಇವು ಮಕ್ಕಳಿಗೆ ಅತಿ ಪ್ರಿಯವಾಗಿರುತ್ತವೆ. ಕಥೆಯಲ್ಲಿ ಹೇಗೆ ಪ್ರಾಣಿ-ಪಕ್ಷಿಗಳು ಪ್ರತಿಕ್ರಿಯಿಸುತ್ತವೆ ಎಂಬ ಕುತೂಹಲ ಗಾಢವಾಗಿರುತ್ತವೆ. ಇಂತ ಕಥೆಗಳಲ್ಲಿ

ಮಾತುಬಾರದ ಪ್ರಾಣಿ-ಪಕ್ಷಿಗಳು ಪ್ರೀತಿ, ಆತ್ಮೀಯತೆಯನ್ನು ತೋರಿಸುತ್ತ ಸರಳವಾಗಿಯೇ ಕೇಳುಗರಿಗೆ ನೀತಿಯನ್ನು ಬೋಧಿಸುವಲ್ಲಿ ಯಶಸ್ವಿಯಾಗುತ್ತವೆ.

ಇಂತ ಕಥೆಗಳಿಗೆ ಉತ್ತಮ ಉದಾಹರಣೆಗಳೆಂದರೆ ಪಂಚತಂತ್ರ ಕಥೆಗಳು, ಜಾತಕ ಕಥೆಗಳು, ಹಿತೋಪದೇಶ ಕಥೆಗಳು ಮುಖ್ಯವಾದವು. ಈ ಪ್ರಖ್ಯಾತಿ ಪಡೆದ ಕೃತಿಗಳಲ್ಲಿ ಪ್ರಾಣಿ ಪಕ್ಷಿಗಳೇ ಮುಖ್ಯ ಪಾತ್ರಗಳಾಗಿರುವುದನ್ನು ಕಾಣುತ್ತೇವೆ. ಈ ಕಥೆಗಳು ಸಹಜವಾಗಿಯೇ ಮಕ್ಕಳಿಗೆ ಪ್ರಿಯವೆನಿಸುತ್ತವೆ.

* **ಸಾಮಾಜಿಕ ಕಥೆಗಳು:** ಇವು ವಾಸ್ತವ ಕಾಲಮಾನಕ್ಕೆ ತಕ್ಕಂತೆ ರಚನೆಯಾದ ಕಥೆಗಳಾಗಿರುತ್ತವೆ. ಇವು ಮಕ್ಕಳಿಗೆ ತಂದೆ, ತಾಯಿ, ಮನೆ, ಸಮಾಜ, ದೇಶ ಮೊದಲಾದ ಪರಿಸರವನ್ನು ಪರಿಚಯಿಸುವ ಕಥೆಗಳಾಗಿ ರಚನೆಯಾಗಿರುತ್ತವೆ. ಇಲ್ಲಿ ಬರುವ ಕಥೆಗಳಲ್ಲಿ ಮಗುವಿಗೆ ಒಂದು ಉತ್ತಮವಾದ ವಾತಾವರಣವನ್ನು ಪರಿಚಯಿಸುವ ಕಥೆಗಳಾಗಿದ್ದು, ಪ್ರತಿಯೊಂದು ಕಥೆಯೂ ಯಾವುದೇ ಒಂದು ವಸ್ತುವನ್ನು ಇಲ್ಲವೇ ನೀತಿಯನ್ನು ಹೇಳುವಂತೆಯೇ ರಚನೆಯಾಗಿರುತ್ತವೆ. ಅಲ್ಲದೆ ಇಲ್ಲಿ ಮಗು ತನ್ನ ಸಮಾಜದ ಜೊತೆಗೆ ಹೊಂದಿಕೊಳ್ಳುವಂತ ಗುಣಗಳನ್ನು ಬೆಳೆಸುವಲ್ಲಿ ಸಹಾಯಕವಾಗಿವೆ.

* **ಪ್ರವಾಸ ಕಥೆಗಳು:** ಈ ಪ್ರಕಾರದ ಕಥೆಗಳನ್ನು ಯಾರಾದರೂ ತಾವು ಬೇರೆ ದೇಶ ಇಲ್ಲವೇ ಪ್ರದೇಶಗಳಿಗೆ ಭೇಟಿಕೊಟ್ಟಾಗ ಅಲ್ಲಿ ತಮಗಾದ ಅನುಭವಗಳನ್ನು ವೈವಿಧ್ಯಮಯವಾಗಿ ಬರೆದು, ಅಲ್ಲಿ ನೆಲೆಸಿರುವ ಜನರು, ಅವರ ನೆಲ-ಜಲವನ್ನು ಕುರಿತು, ಅವರ ಸಂಸ್ಕೃತಿಯನ್ನು ಕುರಿತು ಹೇಳುವುದನ್ನು ಕಾಣುತ್ತೇವೆ. ಈ ಕಥೆಗಳು ಮಕ್ಕಳಿಗೆ ಕುತೂಹಲವನ್ನು ಕೆರಳಿಸುವುದರ ಜೊತೆಗೆ ತಾವು ಆ ಪ್ರದೇಶಗಳ ಆಹಾರ ವಿಧಾನ, ಉಡಿಗೆ, ಅವರ ಸಂಸ್ಕೃತಿಯನ್ನು ತಿಳಿಯಬೇಕೆಂಬ ಮನಸ್ಸನ್ನು ಮಾಡಲು ಸಹಾಯ ಮಾಡುತ್ತವೆ.

ಇವು ಮಕ್ಕಳಲ್ಲಿ ವೈವಿಧ್ಯತೆಯನ್ನು ಬೆಳೆಸಿ ಅವರಲ್ಲಿ ಹೊಸ ವಿಚಾರಗಳ ಬಗ್ಗೆ ಹರಿಯುವಂತೆ ಮಾಡುತ್ತವೆ.

* **ಹಾಸ್ಯ ಮತ್ತು ಕಾಮಿಕ್ಸ್ ಕಥೆಗಳು:** ಮಕ್ಕಳಿಗೆ ಸಂಬಂಧಿಸಿದ ಹಾಸ್ಯ ಕಥೆಗಳೆಂದರೆ ತೆನಾಲಿ ರಾಮಕೃಷ್ಣನ ಕಥೆಗಳು, ಬೀರಬಲ್ಲನ ಕಥೆಗಳು ಮೊದಲಾದವು. ಈ ಪ್ರಕಾರದ ಕಥೆಗಳಲ್ಲಿ ಮಕ್ಕಳು ಹೆಚ್ಚು ಕುತೂಹಲಗೊಳಿಸುವುದರ ಜೊತೆಗೆ ನಗುವಿಗೆ ಹೆಚ್ಚು ಅವಕಾಶವಿರುವುದನ್ನು ಕಾಣುತ್ತೇವೆ. ಇಲ್ಲಿ ಮನೋರಂಜನೆಯೇ ಮುಖ್ಯವಾಗಿರುತ್ತದೆ.

ಇನ್ನು ಕಾಮಿಕ್ಸ್ ಕಥೆಗಳಲ್ಲಿ ಸಾಹಿತ್ಯಕ್ಕಿಂತ ಚಿತ್ರಗಳಿಗೆ ಹೆಚ್ಚಿನ ಆದ್ಯತೆ ಇದ್ದು, ಇಡೀ ವಿಷಯದ ವಸ್ತುವನ್ನು ಹೇಳಲು ಚಿತ್ರಕ್ಕೆ ಅವಕಾಶವಿರುತ್ತದೆ. 'ಕಾಮಿಕ್ಸ್' ಎಂದರೆ ಹಾಸ್ಯ

ಎನ್ನುವಂತಿದೆ. ಇವು ತಕ್ಷಣದ ಮನೋರಂಜನೆಯನ್ನು ನೀಡಿ ಮರೆಯಾಗುತ್ತವೆ. ಇಂತಹ ಕಥೆಗಳನ್ನು ಪತ್ರಿಕೆಗಳಲ್ಲಿ ಹೆಚ್ಚಾಗಿ ಕಾಣಬಹುದು.

೪.೬. ಮಕ್ಕಳ ಕಥೆಗಳಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಬಳಕೆ

ಮಕ್ಕಳ ಸಾಹಿತ್ಯದಲ್ಲಿ ಕಲ್ಪನೆಗೆ ಹೆಚ್ಚು ಪ್ರಾಧಾನ್ಯತೆಯನ್ನು ನೀಡಲಾಗಿರುತ್ತದೆ. ಅದರಲ್ಲಿಯೂ ಮಕ್ಕಳು ತಮಗಾಗಿ ಬರೆದ ಕಥೆಗಳನ್ನು ಕೇಳುವಾಗ ಇಲ್ಲವೆ ಓದುವಾಗ ತುಂಬಾ ಕುತೂಹಲದಿಂದ ಕೇಳುತ್ತಿರುತ್ತಾರೆ. ಇಂತಹ ಕಥಾ ವಸ್ತುವಿನಲ್ಲಿ ಹೊಸತನವಿರುವುದರ ಜೊತೆಗೆ ಹೊಸ ಹೊಸ ವಸ್ತು, ತಂತ್ರ ಮತ್ತು ಶೈಲಿಗಳ ಬಲಗಳಿಂದ ಕೂಡಿರುವ ಅಗತ್ಯವಿದೆ.

ಇಲ್ಲಿ ಮಕ್ಕಳಿಗೆ ಯಾವುದು ಪ್ರಿಯವೆನಿಸುವುದು, ಯಾವುದು ಅವರಿಗೆ ಒಗ್ಗುತ್ತದೆ ಎಂಬುದನ್ನು ಮಕ್ಕಳಿಂದಲೇ ಅರಿತು ಅದನ್ನು ದೊಡ್ಡವರು ತಮ್ಮ ಸಾಹಿತ್ಯದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ. ಅದಕ್ಕಾಗಿ ಆಯ್ದ ಕೆಲವು ಮಕ್ಕಳಗುಂಪಿಗೆ ಕೆಲವೊಂದು ಮಕ್ಕಳ ಕಥೆಗಳನ್ನು ಓದಿಸಿ, ಕೇಳಿಸಿ ಇದರಲ್ಲಿ ನಿಮಗೆ ಯಾವುದು ಹಿತವೆನಿಸುತ್ತದೆ? ಅದು ಏಕೆ? ಎಂಬುದನ್ನು ಪರೀಕ್ಷಿಸುವ ಕೆಲಸವಾಗಬೇಕಿದೆ. ಹೀಗೆ ಮಾಡಿದ ಒಂದು ಪ್ರಾಯೋಗಿಕ ವರದಿಯೊಂದರ ಆಧಾರದ ಮೇಲೆ ಮಕ್ಕಳ ಸಾಹಿತ್ಯದ ಕಥೆಗಳಲ್ಲಿ, ನಾಟಕಗಳಲ್ಲಿ, ಕಾವ್ಯಗಳಲ್ಲಿ ಯಾವ ಯಾವ ತಂತ್ರಗಳನ್ನು ಅಳವಡಿಸಿದರೆ ಚೆನ್ನಾಗಿರುತ್ತದೆ ಎಂದು ನಿರ್ಧರಿಸಬಹುದು. ಹೀಗೆ ಮಕ್ಕಳನ್ನು ಮನರಂಜಿಸಬಲ್ಲ ಸಾಹಿತ್ಯವಾಗಿ ಅವರನ್ನು ಕುತೂಹಲ ಕೆರಳಿಸಬಲ್ಲ, ನಗಿಸಿ ಕುಣಿಸಬಲ್ಲ ಸಾಹಿತ್ಯವಾಗಿರಬೇಕು. ಸರಳ ವಾಕ್ಯಗಳ ರಚನೆ, ಚಿಕ್ಕದಾದ ಸಾಲುಗಳು, ಹೆಚ್ಚು ಹೆಚ್ಚು ಆಲೋಚನೆಗೆ ಒಳಪಡಿಸಬಲ್ಲ ವೈಜ್ಞಾನಿಕ ವಿಚಾರಗಳಿಗೆ ಸಂಬಂಧಿಸಿದ ವಿಷಯಗಳು, ಮತ್ತು ಅದರ ತಲೆ ಬರಹ ಆಕರ್ಷಕವಾಗಿದ್ದು ಇಲ್ಲಿನ ವಸ್ತು ಮತ್ತು ಭಾಷೆಗೂ ಅಂದರೆ ವಸ್ತುವಿಗೆ ತಕ್ಕಂತೆ ಭಾಷೆಯನ್ನು ಅಳವಡಿಸಿಕೊಳ್ಳುವ ಅಗತ್ಯವಿರುತ್ತದೆ. ಅಲ್ಲದೆ ಮುಖ್ಯ ವಸ್ತುವನ್ನಾಗಲಿ, ಇಲ್ಲವೆ ಇತರೆ ಯಾವುದೇ ವಸ್ತುವನ್ನು ಆಗಲಿ ಆಕರ್ಷಕವಾಗಿ, ಅದ್ಭುತವಾಗಿ ಚಿತ್ರಿಸುವ ಶ್ರಮ ಮಕ್ಕಳ ಸಾಹಿತಿಗಳದ್ದಾಗಿರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿಯೇ ನನ್ನ ಅಧ್ಯಯನಕ್ಕೆ ಪೂರಕವಾಗಿ 'ಮಕ್ಕಳ ಸಾಹಿತ್ಯದ ವಸ್ತು, ತಂತ್ರ ಮತ್ತು ಶೈಲಿ' ಎಂಬ ನಾಲ್ಕನೆ ಅಧ್ಯಾಯಕ್ಕೆ ಸಂಬಂಧಿಸಿದಂತೆ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಇದ್ದ ಕೆಲವು ಮಕ್ಕಳ ಸಾಹಿತ್ಯ ಕೃತಿಗಳಲ್ಲಿನ ಕಥೆಗಳನ್ನು ಗಮನಿಸುವುದರ ಜೊತೆಗೆ ಮುಖ್ಯವಾಗಿ ನನ್ನ ಅಧ್ಯಯನದ ವ್ಯಾಪ್ತಿಯಂತೆ ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಬಂದ ಪ್ರಾತಿನಿಧಿಕ ಮಕ್ಕಳ ಸಾಹಿತಿಗಳ ಕಥೆಗಳನ್ನು ಆಯ್ದುಕೊಂಡು ಅದನ್ನು ಕುರಿತು ವಿವರವಾದ ಅಧ್ಯಯನ ಮಾಡುವುದರ ಜೊತೆಗೆ ಈ ಕಥೆಗಳಲ್ಲಿ ಬಂದ ವಸ್ತು ಮತ್ತು ತಂತ್ರಗಳನ್ನು ಸಾಹಿತಿಕವಾಗಿ ಗಮನಿಸುವುದರ ಜೊತೆಗೆ ಅದರಲ್ಲಿರುವ ಶೈಲಿಯನ್ನು ಪ್ರಾದೇಶಿಕ ನೆಲೆಯುಲ್ಲಿ ಅದು ಹೇಗೆ ಭಿನ್ನವಾಗಿದೆ ಎಂದು ಗಮನಿಸಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ.

* ಪಂಜೆ ಮಂಗೇಶರಾಯರ 'ಗುಡು ಗುಡು ಗುಮ್ಮಟ ದೇವರು' ಕಥೆಯು ಒಂದು ಹಳ್ಳಿಯಲ್ಲಿರುವ ಆಡು ಮತ್ತು ಆಡಿನ ಮರಿಯನ್ನು ಕುರಿತ ಕಥೆಯಾಗಿದೆ. ಆ ಮರಿಯನ್ನು ಬಿಟ್ಟು ಆಡು ಎಲ್ಲಿಯೂ ಹೋಗುತ್ತಿರಲಿಲ್ಲ. ಹಾಗೆಯೇ ಮರಿಯು ತಾಯಿಯನ್ನು ಬಿಟ್ಟಿರುತ್ತಿರಲಿಲ್ಲ.

ಆಡಿನ ಮರಿಯು ದಿಟ್ಟತನದಿಂದ ಹಾಗೂ ತನ್ನ ಬುದ್ಧಿಶಕ್ತಿಯಿಂದ ನರಿ, ಹುಲಿ, ಹದ್ದು ಮತ್ತು ಸಿಂಹಗಳ ಬಾಯಿಂದ ತಪ್ಪಿಸಿಕೊಂಡು ಬರುವ ಕಥೆ, ಆಗ ಒಂದು ದಿನ ಆಡಿನ ಮರಿಗೆ ಅಜ್ಜಿ ಮನೆಗೆ ಹೋಗಿ ತಿಂಡಿ ತಿನ್ನುವ ಆಸೆ ಆಯಿತು. ಅದು ತಾಯಿಯ ಹತ್ತಿರ ಬಂದು ಅಮ್ಮಾ ಅಮ್ಮ ನಾನು ಅಜ್ಜಿಯ ಮನೆಗೆ ಹೋಗಲೇ? ಅಲ್ಲಿ ಕಡುಬು, ದೋಸೆ, ಚಕ್ಕುಲಿ ಮತ್ತು ವಡೆ ಇದೆ ಎಂದಿತು.

ಆಗ ತಾಯಿಯೂ "ಆಯಿತು ಮಗೂ, ಆದರೆ ಆ ದಾರಿ ಕೆಟ್ಟದು ದಾರಿಯಲ್ಲಿ ಹೆದರಬೇಡ, ಜೋಕೆ!"[೯] ಎಂದಿತು.

ಆಡು ಮರಿಯು ತನ್ನಜ್ಜಿ ಮನೆಗೆ ಹೊರಟಿತು. ಆ ದಾರಿಯಲ್ಲಿ ನರಿ, ಹದ್ದು, ಹುಲಿ, ಸಿಂಹಗಳು ಅಡ್ಡ ಹಾಕಿದಾಗ ಆ ಆಡಿನ ಮರಿಯು 'ನಾನು ಅಜ್ಜಿ ಮನೆಗೆ ಹೋಗಿ ಬರುತ್ತೇನೆ ಆಮೇಲೆ ನುಂಗಬಹುದು' ಈಗ ದಾರಿ ಬಿಡು ಎಂದು ಅಜ್ಜಿ ಮನೆಗೆ ಹೋಗುತ್ತದೆ. ಮನೆಗೆ ಬಂದ ಮೇಲೆ ಅಜ್ಜಿಯು ವಿಚಾರಿಸಿದಾಗ ಆ ಮರಿಯು ಮನೆಗೆ ಬರುವಾಗ ನರಿ, ಹದ್ದು, ಹುಲಿ, ಸಿಂಹಗಳ ಬಗ್ಗೆ ಅಜ್ಜಿಗೆ ಹೇಳುತ್ತದೆ. ಮತ್ತು ಒಂದು ಉಪಾಯವನ್ನು ಮಾಡಿ "ಸತ್ತು ಹೋದ ನನ್ನ ಅಣ್ಣನ ಚರ್ಮ ಇದೆಯಲ್ಲ ಆ ಚರ್ಮದಿಂದ ಒಂದು ಡೋಲು ಮಾಡಿಕೊಡು ಆ ಡೋಲಿನ ಒಳಗೆ ಅಡಗಿ ಕುಳಿತುಕೊಂಡು ಹೋಗುತ್ತೇನೆ. ಆಗ ನನ್ನನ್ನು ಯಾರೂ ಕಾಣಲಾರರು."[೧೦]

ನಂತರ ಅಜ್ಜಿ ಮಾಡಿಕೊಟ್ಟ ಡೋಲಿನೊಳಗೆ ಮರಿ ಕೂತುಕೊಳ್ಳುತ್ತದೆ. ಅಜ್ಜಿ ಆ ಡೋಲನ್ನು ದಾರಿಯಲ್ಲಿ ಹೊರಳಿಸಿ ಬಿಡುತ್ತಾಳೆ. ಡೋಲು ಗುಡುಗುಡನೆ ಉರುಳುತ್ತ ಹೋದಾಗ ದಾರಿಯಲ್ಲಿ ಕಾದಿದ್ದ ಸಿಂಹ ಹೆದರಿ ಓಡಿ ಹೋದರೆ, ಹೀಗೆ ಹುಲಿಯೂ ಹದ್ದೂ ಹೆದರಿ ಓಡಿ ಹೋಗುತ್ತವೆ. ಆಗ ಡೋಲಿನ ಒಂದು ಕಡೆಯ ಚರ್ಮ ಹರಿಯುತ್ತಿದ್ದಾಗ ಇನ್ನೊಂದು ಕಡೆಯಿಂದಲೂ ಆಡಿನ ಮರಿ ತಪ್ಪಿಸಿಕೊಂಡು 'ಮೇಮೇ' ಎನ್ನತೊಡಗುತ್ತದೆ. ಮರಿಯ ಕೂಗನ್ನು ಕೇಳಿ ತಾಯಿ ಆಡು ಹೊರಗೆ ಬರುತ್ತದೆ. ನರಿ ಅಲ್ಲಿಂದ ಹಾರಿಬಿಡುತ್ತದೆ. ತಾಯಿ ಮರಿಯನ್ನು ಮನೆಯೊಳಕ್ಕೆ ಕರೆದುಕೊಂಡು ಹೋಗುತ್ತದೆ. ಆಮೇಲೆ ಆಡು ಆಡಿನ ಮರಿಯು ಒಟ್ಟಿಗೆ ಸುಖದಿಂದಿದ್ದರು.

ಈ ಕಥೆಯಲ್ಲಿ ಮಕ್ಕಳನ್ನು ಕಥೆ ಸೆಳೆಯುತ್ತದೆ. ಏಕೆಂದರೆ ಇಲ್ಲಿಯ ಕಥಾವಸ್ತುವೇ ಆಡು ಮತ್ತು ಆಡಿನ ಮರಿ. ಇವು ಎಲ್ಲ ಮಕ್ಕಳಿಗೂ ಪ್ರಿಯವಾದುವೆ. ಇಲ್ಲಿ ದಾರಿಯಲ್ಲಿ ಆಡು

ಮರಿಯು ಎದುರಿಸುವ ನರಿ, ಹದ್ದು, ಹುಲಿ, ಸಿಂಹಗಳಂತೆ ಬಲಿಷ್ಟ ಪ್ರಾಣಿಗಳನ್ನು ಇಲ್ಲಿ ಮರಿಗೆ ಆಡಿನ ಧೈರ್ಯ, ತಾಯಿಯ ಎಚ್ಚರಿಕೆ ಮಾತು, ಅಜ್ಜಿ ಡೋಲು ಮಾಡಿ ಮರಿಯನ್ನು ಉಳಿಸಲು ಸಹಾಯ ಮಾಡಿದ್ದು, ಮರಿ ಕೊಟ್ಟ ಮಾತನ್ನು ಪಾಲಿಸಿಯೂ ಪ್ರಾಣ ಉಳಿಸಿಕೊಂಡು ಬರುತ್ತದೆ. ಕೊನೆಯಲ್ಲಿ ನರಿಯಿಂದಲೂ ತಪ್ಪಿಸಿಕೊಂಡು ಬರುತ್ತದೆ. ಈ ಎಲ್ಲ ಅಂಶಗಳಿಗೂ ಸೊಗಸಾದ ಚಿತ್ರಗಳಿವೆ. ಮತ್ತು ಮಧ್ಯೆ ಮಧ್ಯೆಯಲ್ಲಿ ಬರುವ ಸಂಭಾಷಣೆಗಳು ಕಥೆಯನ್ನು ಕೇಳುವ ಅಥವಾ ಓದುವ ಮಕ್ಕಳಿಗೆ ಇಷ್ಟವಾಗುತ್ತದೆ.

* ರಾಷ್ಟ್ರಕವಿ ಕುವೆಂಪುರವರ ಪ್ರಮುಖ ಮಕ್ಕಳ ಕಥೆಯಾದ 'ನರಿಗಳಿಗೇಕೆ ಕೋಡಿಲ್ಲ?' ಎಂಬ ಕಥೆಯನ್ನು ನೋಡುವುದಾದರೆ, ಕುವೆಂಪುರವರು ಆರಂಭದಲ್ಲಿಯೇ ತಮ್ಮ ತೀರ್ಥಹಳ್ಳಿಗೆ ನಾಲ್ಕೈದು ಮೈಲು ದೂರದಲ್ಲಿರುವ ನವಿಲುಕಲ್ಲು ಬೆಟ್ಟವನ್ನು ಮತ್ತು ಹಸುರಾದ ಅಂಗಿಯನ್ನು ತೊಟ್ಟಂತಿರುವ ಅಲ್ಲಿಯ ದಟ್ಟ ಕಾಡನ್ನು ಆ ಮಲೆನಾಡಿನ ಸುಂದರ ಸೊಬಗನ್ನು ವರ್ಣಿಸುತ್ತಾ ಆ ಸುಂದರ ಬೆಟ್ಟವಾದ ನವಿಲುಕಲ್ಲಿನಲ್ಲಿ ಐವತ್ತೆರಡು ವರ್ಷಗಳ ಹಿಂದೆ ಒಂದು ಗುಬ್ಬಚ್ಚಿಯ ಸಂಸಾರವಿತ್ತು. ಗುಬ್ಬಕ್ಕ ಮತ್ತು ಗುಬ್ಬಣ್ಣ ಈ ಸಂಸಾರದ ಗಾಲಿಗಳಂತಿದ್ದರು. ಇವರಿಗಿದ್ದ ಮನೆ ಸವಿಯಾದ ಮನೆಯಾಗಿತ್ತು. ಆ ಮನೆ ಒಂದು ಹೆಮ್ಮರದ ನೆತ್ತಿಯ ಕೊಂಬೆಯ ತುದಿಯಲ್ಲಿತ್ತು. ಅದು ಗಾಳಿ ಬಂದಾಗ ತೊಟ್ಟಿಲಂತೆ ತೂಗುತ್ತಿತ್ತು. ಹೀಗೆ ಆ ಹಕ್ಕಿಗಳೆರಡೂ ನಲಿಯುತ್ತಿದ್ದವು. ಅವರ ಮನೆಯು ಬೆಲ್ಲದ ಗೋಡೆಯಿಂದ, ಸಕ್ಕರೆಯ ಬಾಗಿಲಿನಿಂದ, ಕಬ್ಬಿನ ಮುಚ್ಚಿಗೆಯಿಂದ ಮತ್ತು ಮನೆಯ ಅಂಗಳದಲ್ಲಿರುವ ಸರೋವರವು ಜೇನುತುಪ್ಪದಿಂದ ಕೂಡಿತ್ತು.

ಇಷ್ಟೆಲ್ಲ ಸುಖಗಳಿದ್ದರೂ ಈ ಪಕ್ಷಿ ಜೋಡಿಗಳಿಗೆ ಮಕ್ಕಳಿರಲಿಲ್ಲ. ನಂತರ ಹರಕೆ ಹೊತ್ತು, ದೇವರಿಗೆ ಮೊರೆಯಿಟ್ಟ ಮೇಲೆ ಮೂರು ಮಕ್ಕಳಾದವು. ಆ ಹರಕೆ ತೀರಿಸುವುದಕ್ಕಾಗಿ ಗುಬ್ಬಣ್ಣನು ಕಾಶಿಗೆ ಯಾತ್ರೆ ಹೋದನು. ಈ ಗುಬ್ಬಕ್ಕಳು ಮಕ್ಕಳನ್ನು ಸಲುಹುತ್ತಿದ್ದಳು.

ಹೀಗಿರುವಾಗ ಒಂದು ದಿನ ರಾತ್ರಿ ದೊಡ್ಡ ಮಲೆನಾಡಿನ ಆನೆ ಮಳೆಯು ಗುಡುಗು, ಮಿಂಚು, ಸಿಡಿಲು, ಬಿರುಗಾಳಿಯೊಂದಿಗೆ ಸುರಿಯುತ್ತಿತ್ತು. ಈ ಸಮಯದಲ್ಲಿಯೇ ಬಾರಿ ಮಳೆಗೆ ಸಿಕ್ಕಿಹಾಕಿಕೊಂಡ ಹುಲಿಯಣ್ಣ, ಕರಡ್ಯಣ್ಣ ಮತ್ತು ನರಿಯಣ್ಣರು ಆ ರಾತ್ರಿ ಉಳಿಯಲು ಒಂದು ಮನೆಯನ್ನು ಹುಡುಕುತ್ತಿರುವಾಗ ಗುಬ್ಬಕ್ಕನ ಮನೆಯನ್ನು ಕಂಡು ಹೇಗೋ ಅಂದು ಆಶ್ರಯವನ್ನು ಪಡೆಯುತ್ತಾರೆ. ಗುಬ್ಬಕ್ಕನ ಆತಿಥ್ಯವನ್ನು ಸ್ವೀಕರಿಸಿ, ಮರುದಿನ ಹೊರಡುವಾಗ ನರಿಯಣ್ಣನು ತನ್ನ ಕುತಂತ್ರದಿಂದ ಆ ಮೂರು ಗುಬ್ಬಕ್ಕನ ಮಕ್ಕಳನ್ನು ನುಂಗಿ ಪರಾರಿಯಾಗುತ್ತಾನೆ. ನಂತರ ಸಿಕ್ಕು ಪಶ್ಚಾತ್ತಾಪ ಪಟ್ಟು ತನ್ನ ತಪ್ಪನ್ನು ಒಪ್ಪುತ್ತದೆ.

ಹೀಗೆ ಈ ಕಥೆಯಲ್ಲಿ ಕುವೆಂಪುರವರು ಮಲೆನಾಡಿನ ವರ್ಣನೆಯನ್ನು, ಅದ್ಭುತವಾಗಿ ವರ್ಣಿಸಿರುವುದನ್ನು ಕಾಣುತ್ತೇವೆ. ಮತ್ತು ಮಲೆನಾಡಿನ ಭೀಕರ ಮಳೆಯನ್ನು ಪರಿಚಯಿಸುತ್ತಾರೆ.

ಇಲ್ಲಿ ಕುವೆಂಪುರವರು ಪಾತ್ರಗಳಿಗಾಗಿ ಪಕ್ಷಿ ಮತ್ತು ಪ್ರಾಣಿಗಳನ್ನು ಬಳಸಿಕೊಂಡಿರುವುದು ತುಂಬಾ ವಿಶೇಷವೆನಿಸುತ್ತದೆ. ಹಾಗೂ ಆ ಪಕ್ಷಿ ದಂಪತಿಗಳ ಮನೆಯ ವರ್ಣನೆಯು ಅದ್ಭುತವಾಗಿದೆ. ಇಲ್ಲಿ ಗುಬ್ಬಣ್ಣನು ಹರಕೆ ತೀರಿಸುವುದಕ್ಕಾಗಿ ಕಾಶಿಗೆ ಯಾತ್ರೆ ಹೋಗುವುದು, ಸುರಿವ ಮಳೆಯಲ್ಲಿ ನಡುರಾತ್ರಿಯಲ್ಲಿ ಆಶ್ರಯಿಸಿ ಬಂದ ಹುಲಿಯಣ್ಣ, ಕರಡ್ಯಣ್ಣ ಮತ್ತು ನರಿಯಣ್ಣರಿಗೆ ಆ ರಾತ್ರಿ ಆಶ್ರಯ ನೀಡಿ ಗುಬ್ಬಕ್ಕಳು ಸತ್ಕರಿಸುವುದು ಒಂದು ಮಾನವೀಯತೆಯ ನಂಬಿಕೆಯೇ ಇಲ್ಲಿ ವಸ್ತುವಾಗಿದೆ. ಜೊತೆಗೆ ಪ್ರಾಣಿ-ಪಕ್ಷಿಗಳ ಮೂಲಕ ಕಥೆಯನ್ನು ಹೆಣೆದಿರುವ ತಂತ್ರವನ್ನು ಕಾಣುತ್ತೇವೆ.

ಇನ್ನು ಗುಬ್ಬಕ್ಕಳು "ಅಪ್ಪಾ, ಇಲ್ಲಿ ಜಾಗವಿಲ್ಲ, ಮೂವರು ಮಕ್ಕಳು ಬೇರೆ ಇದ್ದಾರೆ. ನಮಗೆ ಕಾಲು ಚಾಚಿ ಮಲಗಲು ತಾವಿಲ್ಲ. ನೀನು ಹೀಗೆ ದೊಂಬಿ ಮಾಡಬೇಡ ಮಾರಾಯಾ! ಮಕ್ಕಳೆದ್ದಾರು!"[೧೧] ಎನ್ನುವ ಮಾತಂತೂ ಪಕ್ಕಾ ಮಲೆನಾಡಿನ ಪ್ರಾದೇಶಿಕ ಭಾಷಾ ಶೈಲಿಯಲ್ಲಿರುವುದನ್ನೇ ಕಾಣಬಹುದು.

ಅಲ್ಲದೆ ಮೂವರು ಅತಿಥಿಗಳು ಚಳಿ ಕಾಯಿಸಿಕೊಳ್ಳುತ್ತಿದ್ದಾಗ, ಕರಡ್ಯಣ್ಣನು ಬೆಲ್ಲದ ಗೋಡೆಯ ಮೇಲೆ ತಗುಲಿ ಹಾಕಿದ್ದ ಮಹಾತ್ಮಗಾಂಧಿ, ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಪಟಗಳನ್ನು ನೋಡಿ ಇವೇಕೆ ಈ ಪಟಗಳು ಎಂದು ಕೇಳಿದಾಗ "ಮಕ್ಕಳು ಈ ಮಹಾಪುರುಷರ ಸನ್ನಿಧಿಯಲ್ಲಿಯೇ ಬೆಳೆದರೆ ಅವರೂ ಮಹಾತ್ಮರಾಗುತ್ತಾರೆ. ಭಾರತ ಮಾತೆಯ ಉದ್ಧಾರ ಮಾಡುತ್ತಾರೆ. ಅದಕ್ಕೋಸ್ಕರ ಈ ಪಟಗಳನ್ನು ಇಟ್ಟಿದ್ದೇನೆ. ಅವರಿಗೆ ದಿನವೂ ಅವರ ಕಥೆಗಳನ್ನು ಜೋಗುಳವಾಗಿ ಹೇಳುತ್ತೇನೆ. ಹಾಲು ಬೆಣ್ಣೆಗಳಲ್ಲಿ ಅವರ ಮಹಿಮೆಯನ್ನು ಊಡುತ್ತೇನೆ"[೧೨] ಎಂದು ಗುಬ್ಬಕ್ಕ ಹೇಳುವುದು. ಈ ಕಥೆಯಲ್ಲಿಯೇ ಗುಬ್ಬಕ್ಕ ತನ್ನ ಮಕ್ಕಳಿಗೆ ಮಹಾನ್ ಪುರುಷರಂತಾಗಲು ಅವರುಗಳ ಕಥೆಗಳನ್ನು ಪರಿಚಯಿಸುವುದು ಕವಿಯ ಮತ್ತೊಂದು ತಂತ್ರವೆಂದೇ ಹೇಳಬಹುದು.

ಒಟ್ಟಾರೆಯಾಗಿ ಈ ಕಥೆಯ ಕೊನೆಯಲ್ಲಿ ನರಿಯಣ್ಣ ತನ್ನ ಕುತಂತ್ರದಿಂದ ಗುಬ್ಬಕ್ಕನ ಮಕ್ಕಳನ್ನು ನುಂಗಿ ಪರಾರಿಯಾದರೂ ಅವನನ್ನು ಗುಬ್ಬಕ್ಕ, ಕರಡ್ಯಣ್ಣ ಮತ್ತು ಹುಲಿಯಣ್ಣನ ಸಹಾಯದಿಂದ ಹಿಡಿದು, ತನ್ನ ಮಕ್ಕಳನ್ನು ಉಪಾಯದಿಂದ ಮತ್ತೆ ಪಡೆಯುವುದು ಮಕ್ಕಳಿಗೆ ತುಂಬಾ ಖುಷಿಯನ್ನು ಕೊಡುವಂತಾಗಿದೆ. ಹಾಗೂ ಈ ಕಥೆಯ ಕೊನೆಯಲ್ಲಿ ಹುಲಿಯಣ್ಣನು ನರಿಯಣ್ಣನಿಗಿದ್ದ ಎರಡು ಕೋಡುಗಳನ್ನು ಶಿಕ್ಷೆಗಾಗಿ ಮುರಿದಾಗ, ಕರಡ್ಯಣ್ಣನು 'ಇನ್ನು ಮೇಲೆ ನರಿ ಜಾತಿಗೆ ಕೋಡುಗಳಿರದೆ ಹೋಗಲಿ' ಎಂದು ಶಾಪ ವಿತ್ತಾಗ ಮಕ್ಕಳಿಗೆ ತಡೆಯಲಾರದಂತಹ ನಗುವನ್ನು ತರುತ್ತದೆ. ಅಂದಿನಿಂದ ನರಿಯ ಜಾತಿಗೆ ಕೋಡುಗಳಿಲ್ಲ!

* ಗೆಳೆತನ ಎನ್ನುವ ಜಯವಂತ ಕಾಡದೇವರ ಕಥೆಯನ್ನು ಓದಿದಾಗ ತಿಳಿಯುವುದೇನೆಂದರೆ 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ!' ಎನ್ನುವ ಗಾದೆ ಮಾತು ಸತ್ಯವೆನಿಸುತ್ತದೆ.

ಸಂಕ್ರಾಂತಿ ಹಬ್ಬದ ದಿನದಂದು ಶ್ರೀ ವಿವೇಕಾನಂದ ಶಾಲೆಯ ಮಕ್ಕಳನ್ನು ವನಭೋಜನಕ್ಕಾಗಿ ಕೃಷ್ಣಾನದಿ ದಡಕ್ಕೆ ಕರೆದುಕೊಂಡು ಹೋಗುವಾಗ ಸಿದ್ಧಗೌಡರ ತೋಟದ ಮಾವಿನ ಮರದ ಕೆಳಗೆ ನಿಂತುಕೊಂಡಾಗ ಮಕ್ಕಳಿಗೆಲ್ಲಾ ಈ ಮರ ತುಂಬಾ ಪ್ರಿಯವೆನಿಸಿತು. ಈ ಮರವನ್ನೆ ಕುರಿತ ಕಥೆಯನ್ನು ಗಿರಿಯಪ್ಪ ಎಂಬ ಕನ್ನಡ ಶಿಕ್ಷಕರು ಮಕ್ಕಳಿಗೆ ಹೇಳುವಾಗ ಅದೇ ಹಳ್ಳಿಯಲ್ಲಿ ಹಿಂದೆ ಇದ್ದ ಹಸನ್ ಬೇಹಾರಿ ಮತ್ತು ಶಶಿಕಾಂತ ಚೌಹಾನ್ ಎಂಬ ಗೆಳೆಯರು ಓದಿನಲ್ಲಿ ತುಂಬಾ ಜಾಣಮಕ್ಕಳಾಗಿದ್ದರು. ಇವರಲ್ಲಿ ಹಸನ್ ಕಡುಬಡವನ ಮನೆಯವನಾಗಿದ್ದರೂ ಕೊರತೆಗಳ ನಡುವೆಯು ತರಗತಿಗೆ ಮೊದಲಾಗಿರುತ್ತಿದ್ದ. ಇವನು ಬಿಇ ಓದಲು ನಗರಕ್ಕೆ ಬಂದನು. ಇತ್ತ ಶಶಿಕಾಂತನು ಶ್ರೀಮಂತ ಹತ್ತಿ ವ್ಯಾಪಾರಿಯ ಮಗನಾಗಿದ್ದ. ಓದಿನಲ್ಲೂ ಮುಂದಿದ್ದವನು ಇವನು ಮೆಡಿಕಲ್‌ಗಾಗಿ ನಗರಕ್ಕೆ ಬಂದಾಗ ಹಣವಿಲ್ಲದೆ ಊರಿಗೆ ವಾಪಸ್ ಹೊರಟ ಹಸನ್‌ಗೆ ಸಹಾಯ ಮಾಡಿ ತನ್ನ ರೂಮ್‌ಗೆ ಕರೆದುಕೊಂಡು ಹೋಗಿ ಮಾನವೀಯತೆಯನ್ನು ಮೆರೆಯುವುದು ಈ ಕಥೆಯ ವಿಶೇಷವೆನಿಸುತ್ತದೆ. ಇಲ್ಲಿ ಸಹಾಯ ಮಾಡಿದ ಶಶಿಕಾಂತನಿಗೆ ಕಷ್ಟ ಬಂದಾಗ ಹಸನ್‌ನು ಹಳೆಯ ಕೃತಜ್ಞತೆಯನ್ನು ಮರೆಯದೆ ತಾನೂ ಸಹಾಯ ಮಾಡುವುದು ಮತ್ತು ಎಂತಹ ಉನ್ನತ ಹುದ್ದೆಗೆ ಹೋದರೂ ಬಂದ ದಾರಿಯನ್ನು ಮರೆಯಬಾರದು ಎನ್ನುವ ಕಥಾ ವಸ್ತುವನ್ನು ಈ ಕಥೆಯು ಹೇಳುತ್ತದೆ. ಈ ಕಥೆಯನ್ನು ಮಕ್ಕಳಿಗೆ ಗಿರಿಯಪ್ಪ ಶಿಕ್ಷಕರು ಹೇಳುವುದು ಕಥೆಯ ಒಳಗೊಂದು ಕಥೆಯನ್ನು ಹೇಳುವ ತಂತ್ರವನ್ನು ಲೇಖಕರು ಮಾಡಿರುವುದನ್ನು ಕಾಣಬಹುದು.

ಈ ಕಥೆಯು ಮಕ್ಕಳಿಗೆ ಕೇಳಲೂ ಸಾಮಾನ್ಯವೆನಿಸಿದರೂ ಕಥೆಯ ವಸ್ತುವನ್ನು ಅದನ್ನು ಹೇಳಲು ಬಳಸಿರುವ ತಂತ್ರವು ತುಂಬಾ ವಿಶೇಷವೆನಿಸಿದೆ. ಇದು ಸರಳವಾದ ಶೈಲಿಯಲ್ಲಿರುವುದನ್ನು ಕಾಣಬಹುದು. ಮತ್ತು "ಗೆಳೆತನ ಇದ್ದರೆ ಹೀಗಿರಬೇಕು"[೧೩] ಎನ್ನುವುದು ತುಂಬಾ ಮುಖ್ಯವೆನಿಸುತ್ತದೆ.

* ಎಸ್. ಅನಂತನಾರಾಯಣ ಅವರ 'ಮೋಸಕ್ಕೆ ತಕ್ಕ ಶಿಕ್ಷೆ' ಎನ್ನುವ ಕಥೆಯಲ್ಲಿ ಒಂದು ಹಳ್ಳಿಯ ನಾಲ್ಕು ಜನ ಯುವಕರು ಸುಳ್ಳು ಹೇಳುವುದರಲ್ಲಿ ಮತ್ತು ಬೇರೆಯವರಿಗೆ ಮೋಸ ಮಾಡುವುದರಲ್ಲಿ ಪ್ರವೀಣರಾಗಿದ್ದರು. ಒಮ್ಮೆ ಈ ಹಳ್ಳಿಗೆ ಬಂದ ಹಿರಿಯ ಪ್ರಯಾಣಿಕ ಒಂದು ಕಡೆ ಛತ್ರದಡಿಯಲ್ಲಿ ಕುಳಿತು ಸುಧಾರಿಸಿಕೊಳ್ಳುತ್ತಿದ್ದಾಗ ಈ ನಾಲ್ಕು ಜನ ಮೋಸಗಾರರಿಗೆ ಆ ಪ್ರಯಾಣಿಕ ಬೆಲೆ ಬಾಳುವ ರೇಶಿಮೆ ಬಟ್ಟೆಗಳ ಮೇಲೆ ದುರಾಸೆ ಮೂಡಿ ಅವನಿಗೆ ಮೋಸ ಮಾಡಿ ಅವನಲ್ಲಿರುವ ಬೆಲೆಬಾಳುವ ಬಟ್ಟೆಗಳನ್ನು ದೋಚುವ ತಂತ್ರವನ್ನೂಡಿ ಅವನನ್ನು ಪರಿಚಯಿಸಿಕೊಂಡು, ಕಥೆ ಹೇಳುವುದು ಬೇಡ ತಮ್ಮ ತಮ್ಮ ಜೀವನದ ಒಂದು ಅದ್ಭುತವಾದ ಅನುಭವವನ್ನು ಹೇಳುವುದು ಎಂದು ಉಪಾಯ ಮಾಡಿ ಪಣವನ್ನು ಕಟ್ಟಿಕೊಂಡು ಸೋತವರು ಗೆದ್ದವರಿಗೆ ಏನಾದರೂ ಕೊಡಬೇಕು ಎಂದು ಪಂದ್ಯ ಕಟ್ಟಿಕೊಂಡರು. ತಮ್ಮ ತಮ್ಮ ಅನುಭವಗಳನ್ನು ಹೇಳತೊಡಗಿದರು.

ಇದರಲ್ಲಿ ಮೊದಲಿನವರು "ತಮ್ಮ ಅನುಭವಗಳನ್ನು ಸತ್ಯವಾಗಿ ನಡೆದಂತೆ ಹೇಳೋಣ. ಅದು ಸತ್ಯವಲ್ಲ, ನಿಜವಲ್ಲವೆಂದು, ಸುಳ್ಳೆಂದು ಯಾರಾದರೂ ಅನುಮಾನಪಟ್ಟರೆ, ಅದು ಸುಳ್ಳೆಂದು ಹೇಳಿದರೆ ಆತ ಉಳಿದವರು ಹೇಳಿದಂತೆ ಕೇಳಬೇಕು" ಎಂದನು. ಹಾಗೆಯೇ ಆಗಲಿ ಎಂದು ಉಳಿದವರೂ ಪಂದ್ಯಕ್ಕೆ ಒಪ್ಪಿದರು. ನಂತರ ತಾವು ಒಬ್ಬೊಬ್ಬರು ಚಿತ್ರವಿಚಿತ್ರವಾದ ಸುಳ್ಳು ಸುಳ್ಳು ಕಥೆಗಳನ್ನು ಹೇಳಲು ಪ್ರಾರಂಭಿಸಿದರು. ಇವರೇಳಿದ ಯಾವ ಕಥೆಗೂ ಆ ಪ್ರಯಾಣಿಕನು ಸುಳ್ಳು ಎನ್ನದೆ ತಾನದನ್ನು ನಂಬುತ್ತೇನೆನ್ನುವ ಹಾಗೆ ತಲೆಹಾಕುತ್ತಿದ್ದ. ಆದರೆ ಇವರಿಗೆ ತೀರ್ಪುಕೊಡಲು ಬಂದ ಹಳ್ಳಿಯ ಹಿರಿಯನಿಗೆ ಮಾತ್ರ ಇವು ಸುಳ್ಳು ಕತೆಗಳೆಂದು ಬೇಜಾರೆನಿಸಿತು. ಆದರೆ ಪ್ರಯಾಣಿಕನು ಇವರ ಕಥೆಯನ್ನು ನಂಬಿದವನ ಹಾಗೆ ತಲೆದೂಗಿದ. ಅಲ್ಲದೆ ಇವರುಗಳು ಬಲೆಗೆ ಅವನು ಬೀಳಲೇ ಇಲ್ಲ. ಕೊನೆಗೆ ಪ್ರಯಾಣಿಕ ತನ್ನ ಅನುಭವದ ಕಥೆಯನ್ನು ಹೇಳಲು ಪ್ರಾರಂಭಿಸಿ "ನೋಡಿ, ಆ ನದಿಯಾಚೆಗೆ ಒಂದು ಬೆಟ್ಟವಿದೆಯಲ್ಲ ಅದರಾಚೆಗೆ ಇರುವ ಗುಡ್ಡ, ಕಣಿವೆಗಳ ಆಚೆ ನನ್ನ ಜಮೀನಿತ್ತು. ಅದರಲ್ಲಿ ನಾನು ಹತ್ತಿಯನ್ನು ಬೆಳೆಯುತ್ತಿದ್ದೆ. ಹೀಗಿರುವಾಗ ಒಂದು ವರ್ಷ ಏನಾಯಿತೆಂದರೆ ಒಂದು ಹತ್ತಿಯ ಗಿಡ ಸುಮ್ಮನೆ ಮೇಲಕ್ಕೆ ಮೇಲಕ್ಕೆ ಬೆಳೆಯುತ್ತಲೇ ಹೋಗುತ್ತಿತ್ತು. ಕೊನೆಗೆ ಅದು ಹತ್ತಿಯ ಮರವಾಯಿತು. ಆ ಮರದಲ್ಲಿ ನಾಲ್ಕು ದೊಡ್ಡ ದೊಡ್ಡ ಹತ್ತಿಯ ಹಣ್ಣುಗಳು ಬಿಟ್ಟವು. ಆ ಹಣ್ಣುಗಳನ್ನು ನೋಡಿ ಎಲ್ಲರೂ ಆಶ್ಚರ್ಯಪಡುತ್ತಿದ್ದರು. ಹಣ್ಣುಗಳು ಇನ್ನು ದೊಡ್ಡವಾಗಿ ಹಣ್ಣಾದವು. ಆಗ ನಾಲ್ಕಾರು ಏಣಿಗಳನ್ನು ಒಂದಕ್ಕೊಂದು ಕಟ್ಟಿ ಆ ನಾಲ್ಕು ಹಣ್ಣುಗಳನ್ನು ಕೆಳಗಿಳಿಸಿಕೊಂಡರು. ಅವುಗಳನ್ನು ಕತ್ತರಿಸಿದಾಗ ಒಂದೊಂದು ಹಣ್ಣಿನಿಂದಲೂ ಒಬ್ಬೊಬ್ಬ ಯುವಕ ಹೊರಕ್ಕೆ ಬಂದ. ಆ ನಾಲ್ಕಾರು ಯುವಕರು ನನ್ನ ತೋಟದ ಗಿಡದಲ್ಲಿ ಬೆಳೆದ ಹತ್ತಿಯ ಗಿಡದ ಹಣ್ಣಿನಲ್ಲಿ ಬೆಳೆದವರಾದದ್ದರಿಂದ ನನಗೆ ಸೇರಿದ ಯುವಕರೆಂದು ಹೇಳಿಕೊಂಡರು. ನನ್ನ ಸೇವೆ ಮಾಡಲು ಸಿದ್ಧರಾದರು. ಆದರೆ ನಾಲ್ಕು ಜನರೂ ಶುದ್ಧ ಸೋಮಾರಿಗಳು, ಯಾವ ಕೆಲಸವನ್ನು ಮಾಡಲು ಮನಸ್ಸಿಲ್ಲದ ಶೋಂಭೇರಿಗಳಾಗಿದ್ದರು. ಹೀಗಾಗಿ ಆ ನಾಲ್ಕು ಜನ ಸೋಮಾರಿಗಳು ಕೆಲವು ದಿನಗಳ ನಂತರ ಓಡಿ ಹೋಗಿದ್ದರು. ಅವರನ್ನು ಹುಡುಕುತ್ತ ನಾನು ಊರೂರು ಸುತ್ತುತ್ತ ಬಂದಾಗ ಕೊನೆಗೆ ಅವರು ಈ ಊರಿನಲ್ಲಿ ಸಿಕ್ಕರು. ನೀವೇ ಆ ನಾಲ್ವರು ಯುವ ಸೇವಕರು, ಅಲ್ಲಿಂದ ಓಡಿಬಂದವರು. ನಡೆಯಿರಿ ನನ್ನ ಜೊತೆಯಲ್ಲಿ..." ಎಂದು ಪ್ರಯಾಣಿಕ ತನ್ನ ಕಥೆ ಮುಗಿಸಿದ.

ಆಗ ಆ ನಾಲ್ಕು ಯುವಕರು ತೆಪ್ಪಗಾದರು. ತಮ್ಮ ಮೋಸದ ಬಲೆಗೆ ತಾವುಗಳೇ ಸಿಕ್ಕಿಹಾಕಿಕೊಂಡು ಒದ್ದಾಡಿದರು. ಪ್ರಯಾಣಿಕನ ಕಥೆಯನ್ನು ಒಪ್ಪಿದರೆ ತಾವು ಅವನ ಸೇವಕರಾಗಿದ್ದವರೆಂದು ಒಪ್ಪಿಕೊಂಡಾಗುತ್ತದೆ. ಅವನ ಕಥೆ ಸುಳ್ಳೆಂದರೆ ಆಗ ತಮ್ಮ ಪಂದ್ಯದ ಪ್ರಕಾರ ಅವನು ಹೇಳಿದ ಹಾಗೆ ಕೇಳಬೇಕಾಗುತ್ತದೆ.

ಹೀಗೆ ಶುದ್ಧ ಸೋಮಾರಿಗಳಾದ ಆ ನಾಲ್ಕು ಜನ ಯುವಕರು ತಾವೇ ತೋಡಿದ ಹಳ್ಳಕ್ಕೆ ತಾವುಗಳೇ ಬೀಳುವ ಪ್ರಸಂಗವನ್ನು ತಂದುಕೊಂಡರು. ಈ ಕಥೆಯಲ್ಲಿ ಯುವಕರಾಗಿದ್ದ ಆ ನಾಲ್ಕು ಜನ ತರುಣರು ದುಡಿಯುವುದನ್ನೆ ಬಿಟ್ಟು ಬೇರೆಯವರಿಗೆ ಸದಾ ತೊಂದರೆಯನ್ನು ಮಾಡುತ್ತಾ ಕಾಲಹರಣ ಮಾಡುತ್ತಿರುವ ವ್ಯಕ್ತಿಗಳ ಕಥೆಯನ್ನು ವಸ್ತುವಾಗಿಟ್ಟುಕೊಂಡು, ಆ ಸೋಮಾರಿಗಳಿಗೆ ಅದೇ ಶಾಶ್ವತವಲ್ಲ, ಅವರ ಅನ್ಯಾಯಕ್ಕೂ ಒಂದು ಅಂತ್ಯವಿದೆ ಎನ್ನುವ ಹಾಗೆ ಇಲ್ಲಿ ಲೇಖಕರು ಕೊನೆಯಲ್ಲಿ ಆ ಕಳ್ಳರು ತಮ್ಮ ಬುದ್ಧಿವಂತಿಕೆಯ ಬಲೆಯಲ್ಲಿ ಪ್ರಯಾಣಿಕನನ್ನು ಬೀಳಿಸುವ ಬದಲಿಗೆ ತಾವುಗಳೇ ಬೀಳುವುದನ್ನು ಕಾಣುವ ತಂತ್ರವನ್ನು ಬಳಸಿಕೊಂಡಿದ್ದಾರೆ. ಈ ಕಥೆಯಲ್ಲಿ ಲೇಖಕರು ಬಳಸಿರುವ ಶೈಲಿಯು ತುಂಬಾ ಸರಳವಾಗಿದೆ. ಮತ್ತು ಎಲ್ಲರನ್ನು ಇದು ತಲುಪುವಂತಿದೆ ಎನ್ನಬಹುದು. ಕೊನೆಯಲ್ಲಿ ಈ ಯುವಕರು ತಮ್ಮ ಮೋಸಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಬೇಕಾಯಿತು.

* ರಾಜಶೇಖರ ಭೂಸನೂರಮಠ ಅವರ 'ಬ್ರಾಂಟಿ' ಎನ್ನುವ ಕಥೆಯಲ್ಲಿ ಒಮ್ಮೆ ಉತ್ತರ ಧ್ರುವ ಪ್ರದೇಶದ ಹತ್ತಿರ ವಿಜ್ಞಾನಿಗಳಿಗೊಂದು ದೊಡ್ಡ ತತ್ತಿ (ಮೊಟ್ಟೆ) ಸಿಕ್ಕಿತು. ಹಿಮದ ನಡುಗಡ್ಡೆಯಲ್ಲಿ ಹುಗಿದುಹೋಗಿದ್ದ ಆ ಬಾರಿ ಗಾತ್ರದ ಮೊಟ್ಟೆ ಕೆಟ್ಟಿರಲಿಲ್ಲವಾದ್ದರಿಂದ ಅದನ್ನು ಏಕ್ಸರೇ ತೆಗೆದು ಪರೀಕ್ಷಿಸಿದಾಗ ಅದು ಬ್ರಾಂಟಾಸಾರಸ್ ಎಂಬ ಪೆಡಂಭೂತದ್ದೆಂದು ತಿಳಿಯಿತು. ಎಷ್ಟೋ ಲಕ್ಷಾಂತರ ವರ್ಷಗಳ ಹಿಂದೆ ನಾಶವಾಗಿದ್ದ ಆ ಪ್ರಾಣಿಯ ಜೀವಂತ ಮೊಟ್ಟೆ ಸಿಕ್ಕಿದ್ದು ವಿಜ್ಞಾನಿಗಳಿಗೆಲ್ಲಾ ಸಂತೋಷದ ವಿಷಯವಾಗಿತ್ತು. ಮುಂದೆ ವಿಜ್ಞಾನಿಗಳು ಆ ಮೊಟ್ಟೆಯನ್ನು ಮರಿಮಾಡಿಸಲು ಕಾವು ಪೆಟ್ಟಿಗೆಯಲ್ಲಿಟ್ಟರು. ಇದರ ಜವಾಬ್ದಾರಿ ವಿಜ್ಞಾನಿಯಾದ ಆ ಮುದ್ದು ಹುಡುಗಿ ಪಿಂಕಿಯ ತಂದೆಯದ್ದಾಗಿತ್ತು. ಈ ಸುದ್ಧಿ ಎಲ್ಲೆಡೆಗೂ ಹಬ್ಬಿತು. ಈ ಅದ್ಭುತ ಕೌತುಕವನ್ನು ನೋಡಲು ವಿಜ್ಞಾನಿಗಳು, ಪತ್ರಿಕೆಯವರು, ಮಾಧ್ಯಮದವರು, ಪ್ರವಾಸಿಗರು ಬರತೊಡಗಿದರು. ಆ ಮೊಟ್ಟೆ ಟಿ.ವಿ. ಮತ್ತು ಪತ್ರಿಕೆಗಳಲ್ಲಿ ಬರತೊಡಗಿತು. ಇಡೀ ಜಗತ್ತೇ ಬ್ರಾಂಟಾಸಾರಸ್ಸಿನ ಮೊಟ್ಟೆ ಒಡೆದು ಅದರಲ್ಲಿರುವ ಮರಿ ಯಾವುದೆಂದು ನೋಡಲು ಕಾದಿತ್ತು. ಬಾರಿ ಬಿಗಿ ಭದ್ರತೆಯಲ್ಲಿದ್ದ ಆ ಮೊಟ್ಟೆಯು ನಲವತ್ತಾರು ದಿನಗಳಾದ ಮೇಲೆ ಒಡೆದು ಮರಿ ಬ್ರಾಂಟಾಸಾರಸ್ ಹೊರಗೆ ಬಂದಿತು. ಪಿಂಕಿ ಅದರ ಹೆಸರೇನು ಡ್ಯಾಡಿ? ಎಂದು ಕೇಳಿದಳು. ಆದರೆ ಪಿಂಕಿಯ ತಂದೆ ಅವಳು ಅಲ್ಲಿಗೆ ಬರುವುದನ್ನು ತಡೆದರು. ಅವಳು ಮಾತ್ರ ಆ ಪ್ರಾಣಿ ಸಂಗ್ರಹಾಲಯದ ಹತ್ತಿರ ಬರುವುದನ್ನು ಬಿಡಲಿಲ್ಲ. ಬ್ರಾಂಟಾಸಾರಸ್ಸಿಗೆ ಆಕೆ 'ಬ್ರಾಂಟಿ' ಎಂದು ಕರೆದಳು. ಆ ಬ್ರಾಂಟಿಗೂ ಕೂಡ ಈ ಪಿಂಕಿ ಅಂದರೆ ಬಲು ಇಷ್ಟ.

ಒಂದೇ ತಿಂಗಳಲ್ಲಿಯೇ ಬಹಳ ಬೆಳೆದ ಬ್ರಾಂಟಿ ತಲೆಯಿಂದ ಬಾಲದವರೆಗೆ ಸು. ಮೂರು ಮೀಟರ್ ಉದ್ದವಿತ್ತು. ಅದಕ್ಕೆ ತಿನ್ನಲು ಎಳೆಯ ಬಿದಿರು ಮತ್ತು ಬಾಳೆಹಣ್ಣು ಕೊಡುತ್ತಿದ್ದರು. ಅದಕ್ಕೇನು ತಿನ್ನಲು ಇಷ್ಟವೆಂದು ಯಾರಿಗೂ ಗೊತ್ತಿರಲಿಲ್ಲ. ಒಮ್ಮೆ ಅದು ತನ್ನ ಮುಂದೆ ಇದ್ದ

ಆಹಾರವನ್ನು ಮುಟ್ಟಿರಲೇ ಇಲ್ಲ. ಹೀಗೆ ಮೂರು ದಿನಗಳ ಕಾಲ ಉಪವಾಸವನ್ನು ಮಾಡಿತು. ವಿಜ್ಞಾನಿಗಳಿಗೆ ಬಹಳ ಚಿಂತೆಯಾಯಿತು. ಎಲ್ಲ ರೀತಿಯ ಪ್ರಯೋಗ ನಡೆಸಿದರು. ಉಪಯೋಗವಾಗಲಿಲ್ಲ. ಬ್ರಾಂಟಿಯ ಉಪವಾಸದ ವಿಷಯ ಕೇಳಿದ ಪಿಂಕಿ ಅಜ್ಜಿ ಮನೆಯಿಂದ ಬೇಗನೆ ಹೊರಟು, ಬ್ರಾಂಟಿಯ ಬಳಿ ಬಂದು ಅದನ್ನು ರಮಿಸಿದಳು. ಮತ್ತು ಬ್ರಾಂಟಿಗೆ ಬಾಳೆಹಣ್ಣನ್ನು ಬಿಟ್ಟು ತಾನು ತಂದಿದ್ದ ಬ್ರೆಡ್ಡು, ಬನ್ನುಗಳನ್ನು ತಿನ್ನಿಸಿದಳು. ಈಗಂತೂ ಈ ಬ್ರಾಂಟಿ ಬಹಳ ದೊಡ್ಡದಾಗಿದೆ. ಯಾರನ್ನು ಹೆದರಿಸುವುದಿಲ್ಲ. ಅದನ್ನು ಅತ್ತಿ ಅಡ್ಡಾಡಲು ಪಿಂಕಿಗೆ ಮಾತ್ರ ಸಾಧ್ಯ. ಆಕೆಯನ್ನು ತನ್ನ ಬೆನ್ನಮೇಲೆ ಕೂರಿಸಿಕೊಂಡು ಅಡ್ಡಾಡುತ್ತ ಇಲ್ಲವೆ ಕೊಳದಲ್ಲಿ ಈಜುತ್ತ ಅದು ಮೋಜು ಮಾಡುತ್ತಿದೆ.

ಹೀಗೆ ಈ ಬ್ರಾಂಟಿ ಕಥೆಯು ಮಕ್ಕಳಿಗೆ ತುಂಬಾ ಕುತೂಹಲಕಾರಿಯಾಗಿದೆ. ಇಲ್ಲಿ ಪಿಂಕಿಯಂತೆ ಇತರೇ ಮಕ್ಕಳಿಗೂ ಸಹ ಪ್ರಾಣಿ-ಪಕ್ಷಿಗಳು ಪ್ರಿಯರಾದ್ದರಿಂದ ಈ ತರಹದ ಪ್ರಾಣಿಯ ಕಥಾವಸ್ತುವನ್ನು ವೈಜ್ಞಾನಿಕ ದೃಷ್ಟಿಕೋನದ ತಂತ್ರವನ್ನು ಬಳಸಿಕೊಂಡು ಕಥೆಯನ್ನು ಲೇಖಕರು ಕಟ್ಟಿರುವುದನ್ನು ಕಾಣಬಹುದು. ಮಕ್ಕಳಷ್ಟೇ ಪ್ರಾಣಿಗಳಿಗೂ ಮಕ್ಕಳನ್ನು ಕಂಡರೆ ಇಷ್ಟ, ತಮ್ಮನ್ನು ಪ್ರೀತಿಸುವವರನ್ನು ಕಂಡರೆ ತುಂಬಾ ಖುಷಿ, ಮನುಷ್ಯನಿಗಿಂತ ಪ್ರಾಣಿಗಳಲ್ಲಿಯೇ ಮಾನವೀಯತೆ ಹೆಚ್ಚು ಎನ್ನುವುದನ್ನು ನಾವು ಈ ಕಥೆಯಿಂದ ತಿಳಿಯಬಹುದು.

* ರಸಿಕ ಪುತ್ತಿಗೆ ಅವರ 'ಕಾಡಿನ ಜಾಣರು' ಎನ್ನುವ ಕಥೆಯು ತುಂಬಾ ಸ್ವಾರಸ್ಯಕರವಾಗಿದೆ. ಈ ಕಥೆಯು ಪ್ರಾರಂಭವಾಗುವುದೇ ಅರಣ್ಯ ಶಾಲೆಗೆ ರಜೆ ಕೊಡಲಾಗಿತ್ತು ಎನ್ನುವುದರಿಂದ ಈ ಶಾಲೆಯು ರಜೆಯನ್ನು ಕೊಡುವ ಹಿಂದಿನ ದಿನ ಆ ಶಾಲೆಯ ಹೆಡ್‌ಮಾಸ್ಟರ್ ಅದ ಬಿಳಿಕರಡೆಪ್ಪನವರು ತಮ್ಮ ವಿದ್ಯಾರ್ಥಿಗಳೆಲ್ಲರನ್ನು ಒಟ್ಟುಗೂಡಿಸಿಕೊಂಡು, ರಜೆಯ ಅವಧಿಯಲ್ಲಿ ಯಾರೂ ಅನಗತ್ಯ ತುಂಟಾಟ, ಹುಡುಗಾಟದಲ್ಲಿ ಕಳೆಯಬಾರದು, ಕೋತಿಗಳು ಹೊಸದಾಗಿ ಕಲಿತ ತಿಪ್ಪರಲಾಗವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು, ಹೆಗ್ಗಣಗಳು ಬಿಲಕೊರೆಯುವ ಕಲೆಯಲ್ಲಿ ಪರಿಣಿತರಾಗಬೇಕು. ನವಿಲುಗಳು ಹೊಸದಾಗಿ ಕಲಿಸಿದ ನೃತ್ಯವನ್ನು ಚೆನ್ನಾಗಿ ಕಲಿತು ಬರಬೇಕು, ನರಿಗಳು ಮತ್ತು ಮೊಲಗಳು ಮೊನ್ನೆ ಕಲಿಸಿದ ಸಂಗೀತ ಹಾಗೂ ಗೆಣಸು ತಿನ್ನುವ ಪಾಠಗಳನ್ನು ಮನನ ಮಾಡಿಕೊಂಡುಬರಬೇಕು. ಒಂದು ವೇಳೆ ಮನನ ಮಾಡಿಕೊಳ್ಳದೆ ಬಂದರೆ ಶಾಲೆಯು ಪ್ರಾರಂಭವಾದ ಮೇಲೆ ಅವರನ್ನು ತರಗತಿಗೆ ಸೇರಿಸಲಾಗುವುದಿಲ್ಲ ಎಂದು ಆಜ್ಞೆ ಮಾಡಿದರು.

ಆವಾಗ ಸೀಳುನಾಯಿಗಳಲ್ಲಿ ಅತ್ಯಂತ ತುಂಟನಾದ ಬಾಲಣ್ಣನು ಎದ್ದು ನಿಂತು, ಸಾರ್ ನಮಗೆ ಏನೂ ಕೆಲಸ ಇಲ್ಲವಾ? ಎಂದು ಕೇಳಿದ. ಆಗ ಅವರ ತರಗತಿಯ ಉಪಾಧ್ಯಾಯರಾದ ತೋಳಪ್ಪನವರು ಸುಮ್ನೆ ನಿಂತ್ಕೋ ಎಂದು ಗದರಿಸಿ ಏಟು ಬಿಟ್ಟರು. ಜಿಂಕೆಗಳು ತರಗತಿಯ

ಉಪಾಧ್ಯಾಯಿನಿ ಕುಮಾರಿ ಹರಿಣಾಕ್ಷಿಯವರು ತಮ್ಮ ತರಗತಿ ಮಕ್ಕಳು ಪಕ್ಕದ ಕಾಡಿಗೆ ಪಿಕ್‌ನಿಕ್ ಹೋಗುವ ಕಾರ್ಯಕ್ರಮವನ್ನು ಹಾಕಿಕೊಂಡಿರುವುದನ್ನು ಮೊದಲೇ ಮುಖ್ಯ ಶಿಕ್ಷಕರಾದ ಬಿಳಿಕರೆಡಪ್ಪನವರಿಗೆ ತಿಳಿಸಿದ್ದರಿಂದ ಅವರಿಗೆ ಯಾವ ಕೆಲಸವನ್ನು ಹೇಳಲಿಲ್ಲ. ಇತ್ತ ಜಿಂಕೆಗಳು ಪಿಕ್‌ನಿಕ್ ಹೋಗುವ ಸುದ್ಧಿ ಮಂಗಗಳ ತರಗತಿಯ ಅಧ್ಯಾಪಕಿ ಕುಮಾರಿ ಕರಿಮುಸುಡಮ್ಮನವರಿಗೆ ತಿಳಿದು ಹರಿಣಾಕ್ಷಿ ಶಿಕ್ಷಕಿಯನ್ನು ಭೇಟಿ ಮಾಡಿ, ನಿಮ್ಮ ಪಿಕ್‌ನಿಕ್‌ನಲ್ಲಿ ನಮ್ಮ ತರಗತಿಯ ಹಲವು ಮಕ್ಕಳನ್ನು ಕರೆದುಕೊಂಡು ಹೋಗಿ ಎಂದು ಕೇಳಿ ಒಪ್ಪಿಸಿದರು. ಈ ವಿಷಯವನ್ನು ತಿಳಿದ ಕಾಡುಕೋಳಿಗಳ ತರಗತಿ ಶಿಕ್ಷಕರಾದ ಕೆಂಪುಜುಟ್ಟಪ್ಪನವರು ಹರಿಣಾಕ್ಷಿಯವರನ್ನು ಭೇಟಿ ಮಾಡಿ, ನಮ್ಮ ಕಾಡುಕೋಳಿಗಳನ್ನು ಪಿಕ್‌ನಿಕ್ ಕರೆದುಕೊಂಡು ಹೋಗಿ ಎಂದು ಕೇಳಿ ಒಪ್ಪಿಸಿದರು. ಈ ಕೆಂಪುಜುಟ್ಟಪ್ಪ ಶಿಕ್ಷಕರು ಒಳ್ಳೆಯ ಹಾಡುಗಾರರಾಗಿದ್ದರು.

ಮುಂದೆ ಒಂದು ದಿನ ನಸುಕಿಗೇ ಹದಿನಾರು ಜಿಂಕೆಗಳು, ಆರು ಕೋತಿಗಳು, ಹನ್ನೆರಡು ಕಾಡುಕೋಳಿಗಳು, ಹರಿಣಾಕ್ಷಮ್ಮನವರ ಮನೆಯ ಹತ್ತಿರ ಒಂದು ಅಲ್ಲಿಂದ ಶಿಕ್ಷಕ ಶಿಕ್ಷಕಿಯರ ಜೊತೆಗೂಡಿ ಎಲ್ಲರೂ ದೇವರ ಪ್ರಾರ್ಥನೆ ಮಾಡಿ ಕೆಂಜಿಗನಮನೆ ಕಾಡಿಗೆ ಹೊರಟರು.

ಶಿಕ್ಷಕರಾದ ಕೆಂಪುಜುಟ್ಟಪ್ಪನವರು ತಮ್ಮದೇ ರಾಗದಲ್ಲಿ 'ಮುಂದೆ ಮುಂದೆ ಸಾಗುವ, ನಾವು ಜೊತೆಗೆ ಹೋಗುವ ಜಿಂಕೆ, ಕೋತಿ, ಕೋಳಿಗಳು ಒಂದು ಗೂಡಿ ಹೋಗುವ' ಎಂದು ಹೇಳುತ್ತಾ ಹೋಗುತ್ತಿದ್ದಾಗ ಉಳಿದವರೆಲ್ಲರೂ ಇದನ್ನೇ ಹಾಡುತ್ತಾ ಮುಂದೆ ಮುಂದೆ ಸಾಗಿದರು.

ಕೆಂಪು ಮೂತಿಯ ಗಡವ ಕೋತಿ ಮರ ಮರಕ್ಕೆ ನೆಗೆಯುತ್ತಾ ಮುಂದಿನ ದಾರಿಯನ್ನು ತೋರಿಸಿದರೆ, ಕಿರುಕೊಂಬಿನ ಜಿಂಕೆಯು ಅದು ತೋರಿಸಿದ ದಾರಿಯಲ್ಲಿಯೇ ಮುಂದೆ ಹೋಗಿ ತಿರುಗಿ ನೋಡುತ್ತಿತ್ತು. ಹಾಗೇ ಕಾಡಿನ ಕಡೆಗೆ ಗುಂಪು ಸಾಗುತ್ತಿರುವಾಗ ಕಾಡಿನ ಮಧ್ಯದಲ್ಲಿ ಎಲ್ಲೋ ಸರ ಸರ ಸರ ಸರ ಎಂದು ಏನೋ ಶಬ್ದವೊಂದು ಕೇಳಲಾರಂಭಿಸಿತು.

ಇಲ್ಲಿಂದಲೇ ಈ ತುಂಟ ಪ್ರಾಣಿಗಳ ಕಥೆಯು ಹೊಸ ಬದಲಾವಣೆಯನ್ನು ಪಡೆಯುವುದನ್ನು ಕಾಣುತ್ತೇವೆ. ಎಲ್ಲರೂ ಈ ಸರ ಸರ ವಿಚಿತ್ರ ಶಬ್ದವನ್ನು ಕೇಳಿ ಜಾಗೃತರಾಗಿ ಏನೋ ಅಪಾಯ ಕಾದಿದೆ ಎಂದು ಯೋಚಿಸಿ ತಮ್ಮ ತಮ್ಮಲ್ಲೇ ಚರ್ಚಿಸಿದರು. ಕೊನೆಗೆ ಗಡವ ಕೋತಿಯು ನೀವು ಹೇಳಿದರೆ ಈ ಶಬ್ದ ಎಲ್ಲಿಂದ ಕೇಳಿ ಬರುತ್ತಿದೆ ಎಂದು ನೋಡಿ ಬರುವೆ ಎಂದಿತು. ಆಗ ಕೆಂಪುಜುಟ್ಟಪ್ಪನವರು ಬೇಡ ಬೇಡ ನಾನೇ ನೋಡಿ ಬರುತ್ತೇನೆ ಎಂದರು. ಅದನ್ನು ಕೇಳಿದ ಶಿಕ್ಷಕಿಯರು ಬೇಡ ಸಾರ್, ಅವರ ಬಳಿ ಬಂದೂಕು ಇರುತ್ತದೆ ನೀವು ಹೋಗುವುದು ಬೇಡ ಗಡವ ಕೋತಿಯೇ ಹೋಗಿ ಬರಲಿ ಎಂದು ಕೋತಿಯನ್ನು ಕಳುಹಿಸಿದರು.

ಕ್ಷಣಮಾತ್ರದಲ್ಲಿ ಛಂಗನೆ ಹಾರಿ ನೋಡಿ ಬಂದ ಕೋತಿಯು ಅಲ್ಲಿ ಇಬ್ಬರು ಮನುಷ್ಯರು ಗರಗಸದಿಂದ ಗಂಧದ ಮರವನ್ನು ಕುಯ್ತಾ ಇದ್ದಾರೆ. ಅವರಲ್ಲಿ ಬಂದೂಕು ಇದೆ ಎಂದಿತು.

ತಕ್ಷಣ ಕರಿಮುಸುಡೆಮ್ಮ ಶಿಕ್ಷಕಿಯು ಹೆದರುವ ಅಗತ್ಯವಿಲ್ಲ ಆಚೆ ಕಾಡಿನಲ್ಲಿರುವ ಫಾರೆಸ್ಟ್ ಆಫೀಸರ್ ಮನೆಗೊತ್ತು, ಅವರನ್ನು ಕರೆತರುತ್ತೇನೆ. ಹರಿಣಾಕ್ಷಿ ನೀವು ಹೋಗಿ ಮುಖ್ಯ ಶಿಕ್ಷಕರನ್ನು, ಶಾಲಾಸಮಿತಿಯ ಅಧ್ಯಕ್ಷರಾದ ಗಜರಾಯರನ್ನು ಕರೆತನ್ನಿ ಎಂದು ಹೇಳಿ, ಫಾರೆಸ್ಟ್ ಆಫೀಸರಾದ ಕರಿಯಪ್ಪನವರನ್ನು ಆ ಕಳ್ಳರ ಬಳಿ ಕರೆತಂದು ನಾಲ್ಕು ಕಡೆಗಳಿಂದ ಮರಗಳನ್ನು ಸುತ್ತುವರೆದು ಆ ಕಳ್ಳರನ್ನು ಹಿಡಿದು ಬೇಡಿ ಹಾಕಿ ಜೀಪಿಗೆ ಹತ್ತಿಸಿದರು. ಇತ್ತ ಕರಿಯಪ್ಪನವರು ಶಾಲಾ ಸಿಬ್ಬಂದಿಗೆ ಮತ್ತು ಕರಿಮುಸುಡೆಮ್ಮನವರಿಗೆ ಧನ್ಯವಾದ ಹೇಳಿ, ಕಾಡಿನ ಸಂಪತನ್ನು ಉಳಿಸಿದಿರೆಂದು ಹೇಳಿದರು.

ಹೀಗೆ ಈ ಕಥೆಯಲ್ಲಿ ಕಾಡಿನ ಪ್ರಾಣಿಗಳನ್ನೇ ಶಾಲಾ ಮಕ್ಕಳನ್ನಾಗಿ ಬಳಸಿಕೊಂಡಿರುವ ತಂತ್ರವನ್ನು ಮಾಡಿಕೊಂಡಿದ್ದಾರೆ. ಅಲ್ಲದೆ ಅವರುಗಳಲ್ಲೇ ಅಂದರೆ ಆ ಕಾಡಿನ ಪ್ರಾಣಿಗಳೇ ಶಾಲಾ ಮುಖ್ಯಸ್ಥರಾದ ಹೆಡ್‌ಮಾಸ್ಟರ್ ಬಿಳಿಕರೆಡಪ್ಪ, ಹರಿಣಾಕ್ಷಿ, ಕರಿಮುಸುಡೆಮ್ಮ ಮತ್ತು ಕೆಂಪುಜುಟ್ಟಪ್ಪ ಇತರೆ ಶಾಲಾ ಸಿಬ್ಬಂದಿಗಳ ಪಾತ್ರವಾಗಿದೆ. ಇಲ್ಲಿ ಇವರುಗಳು ರಜಾ ಅವಧಿಯಲ್ಲಿ ಮಕ್ಕಳೊಂದಿಗೆ ಪಿಕ್‌ನಿಕ್ ಹೊರಡುವ ವಸ್ತುವನ್ನು ಇಟ್ಟುಕೊಂಡಿದ್ದರು. ಪಿಕ್‌ನಿಕ್ ಹೋಗುವ ದಾರಿ ಮಧ್ಯೆದಲ್ಲಿಯೇ ಕಥೆಯು ಹೊಸ ತಿರುವನ್ನು ಪಡೆದಿರುವುದನ್ನು ಕಾಣುತ್ತೇವೆ.

ಕಾಡಿನ ಸಂಪತ್ತನ್ನು ದೋಚುವ ಕಳ್ಳರ ಸರ ಸರ ಸದ್ದಿನಿಂದಾಗಿ ಪಿಕ್‌ನಿಕ್ ಅಲ್ಲಿಯೇ ನಿಂತಿತ್ತು ಎಲ್ಲರು ಆ ಕಳ್ಳರನ್ನು ಹಿಡಿದುಕೊಡಲು ನಿರತರಾಗಿ, ಯಶಸ್ವಿಯಾಗಿ ಕಳ್ಳರನ್ನು ಹಿಡಿಯುತ್ತಾರೆ. ಹೀಗೆ ಈ ಕಥೆಯು ಒಂದು ಅರ್ಥಪೂರ್ಣವಾಗಿ ಮುಕ್ತಾಯವನ್ನು ಪಡೆಯುವುದು ಈ ಕಥೆಯಲ್ಲಿ ವಿಶೇಷವಾಗಿದೆ.

* ಸಿಸು ಸಂಗಮೇಶರ 'ಆಶೆ ಬುರುಕಿ ಆಶಾ' ಎಂಬ ಪುಟ್ಟ ಕಥೆಯು ಆಶಾ ಎನ್ನುವ ಪುಟ್ಟ ಹುಡುಗಿಯ ಕಥೆಯೇ ಆಗಿದೆ. ಈ ಆಶಾಗೆ ಮೂರು ವರ್ಷ, ಇವಳ ಅಣ್ಣ ಅನಿಲನಿಗೆ ಆರು ವರ್ಷ. ಆಶಾಳು 'ನಂಗೆ ಎಲ್ಲಾ ಬೇಕು' 'ಎಲ್ಲಾ ನಂದು' ಎಂದು ಮಾತಿ ಮಾತಿಗೂ ಅನ್ನುವುದು, ನೋಡಿದ್ದೆಲ್ಲಾ, ತನಗೆ ಬೇಕು ಎನ್ನುವ ಹಠ ಸ್ವಭಾವವೇ ಅವಳನ್ನು ಆಶೆ ಬುರುಕಿ ಆಶಾ ಎಂದು ಕರೆಯುವಂತೆ ಮಾಡಿದೆ.

ಅಣ್ಣ ಅನಿಲ ಪಡಸಾಲೆಯಲ್ಲಿ ಕೂತು ಅಕ್ಷರ ಚೌಕುಗಳನ್ನಿಟ್ಟುಕೊಂಡು ಆಡುತ್ತಿದ್ದರೆ ಹೊರಗಿನಿಂದ ಬಂದ ಆಶಾ ಇದು ನಂದು! ಇದು ನಂದು! ಎಂದು ಆ ಚೌಕವನ್ನು ಕಿತ್ತುಕೊಂಡಳು. ಇತ್ತ ಅಮ್ಮ ಅವಳನ್ನು ರಮಿಸಲು ಈ ಪುಸ್ತಕ, ಗೊಂಬೆ ನಿಂದು ಎಂದು ಕೂಡಲೇ ಆಶಾ ಹಿಗ್ಗಿದಳು. ಆಟದ ವಸ್ತುಗಳನ್ನು ತೆಗೆದುಕೊಂಡು ಆಟವಾಡಲಾರಂಬಿಸಿದಳು. ಅಷ್ಟರಲ್ಲಿಯೇ ಅಲ್ಲಿಗೆ ಪಿನ್ನು-ಪುಗ್ಗಾ ಮಾರುವ ಜೋಗೇರ ಗೌರಮ್ಮ ಬಂದಳು. ಬಣ್ಣ ಬಣ್ಣದ ಹಲವಾರು ಬಲೂನುಗಳನ್ನು ಹಿಡಿದು ತಂದಿದ್ದಳು. ಅವು ಗಾಳಿಯಲ್ಲಿ ತೇಲಾಡುತ್ತಿದ್ದವು.

ಮೇಲೆ ಏರಲು ಹವಣಿಸುತ್ತಿದ್ದವು. ಅವುಗಳನ್ನು ಕಂಡ ಆಶಾ ಅಳುತ್ತ ಅವ್ವಾ, ನನಗೆ ಪುಗ್ಗಾ ಬೇಕು ಎಂದು ಚೀರಿದಳು. ಆಗ ಆ ಗೌರಮ್ಮಳಿಗೆ ಇವಳ ಆಶೆಬುರಿಕಿತನ ತಿಳಿದುದ್ದರಿಂದ "ನಿನಗೆ ಎಲ್ಲಾ ಬೇಕು ಹೌದಲ್ಲೋ? ತಗೋ ಈ ಪುಗ್ಗಾ ಗೊಂಚಲು ತಗೋ!" ಎಂದು ಬಲೂನ್ ಕಟ್ಟಿದ ದಾರದ ಗಂಟನ್ನು ಆಶಾಳ ಕೈಗೆ ಕಟ್ಟಿದಳು.

ನನ್ನ ಪುಗ್ಗಾ, ನನ್ನಪುಗ್ಗಾ ಎಂದು ಹಿಗ್ಗುತ್ತಾ ಕುಣಿಯುತ್ತಿದ್ದಾಗ ಆ ಪುಗ್ಗಾಗಳು ಆಶಾಳನ್ನೆತ್ತಿಕೊಂಡೇ ಆಕಾಶಕ್ಕೆ ಹಾರಿದವು. ಎಲ್ಲಾ ಪುಗ್ಗಾಗಳ ತೇಲುತ್ತಿದ್ದರಿಂದ ಇವಳ ತೂಕ ಕಡಿಮೆಯಾಗಿ ಇನ್ನು ಮೇಲಕ್ಕೆ ಹಾರಿದವು.

ಆಶಾ ಅವ್ವಾ ಅವ್ವಾ ಎಂದು ಚೀರತೊಡಗಿ, ನಾನು ಬೀಳ್ತೀನಿ ಎಂದು ಚೀರಿದಳು. ಆಗ ಗೌರಮ್ಮ ಕಂಡದ್ದೆಲ್ಲಾ ನಂದು ಎಂದು ಕೇಳ್ತಿಯಾ ಎಂದು ಕೇಳುತ್ತಿದ್ದಳು. ಆಶಾಗೆ ಗಾಬರಿ ಹೆಚ್ಚಾಗಿ ಜೋರಾಗಿ ಕೂಗತೊಡಗಿದ್ದಾಗ ಕಾಗೆಯೊಂದು ಹಾರಿ ಬಂದು ಬಲೂನನ್ನು ಕುಕ್ಕಿತು. ಆಗ ಪುಗ್ಗಾಗಳೆಲ್ಲಾ ಠಪ್! ಠಪ್! ಎಂದು ಒಡೆದವು. ಆಶಾ ಕೆಳಗಿಳಿಯುತ್ತಾ ಬಂದು 'ನಂಗೆ ಪುಗ್ಗಾ ಬೇಡ' ಏನು ಬೇಡ ಎಂದು ಅಮ್ಮನ ಬಳಿಗೆ ಓಡಿದಳು.

ಈ ಕಥೆಯಲ್ಲಿ ಎಲ್ಲಾ ಮಕ್ಕಳ ವಯೋ ಸಹಜ ಗುಣವೆನ್ನುವಂತೆ ಆಶಾಳು ಎಲ್ಲಾ ನನಗೆ ನನಗೆ ಎನ್ನುತ್ತಿದ್ದಳು. ಅವಳಿಗೆ ಈ ಆಸೆ ಎಲ್ಲಾ ಮಕ್ಕಳಿಗಿಂತಲೂ ಸ್ವಲ್ಪ ಜಾಸ್ತಿಯೇ ಇತ್ತು. ಇಲ್ಲಿ ಆಶಾ ಎಲ್ಲವನ್ನು ಅಳುವುದರ ಮೂಲಕವೇ ಕೇಳುತ್ತಿದ್ದಳು. ಕೊನೆಗೆ ಈ ಆಶಾಳ ಆಸೆಗೆ ಕಡಿವಾಣವಾಕಲು ಜೋಗೇರ ಗೌರಮ್ಮಳ ಹೊಸ ತಂತ್ರವು ಫಲಿಸಿತು. ಪುಗ್ಗಾಗಳ ಜೊತೆಗೆ ತಾನು ಮೇಲೆ ಹಾರುತ್ತಿರುವಾಗ ಭಯಪಡುತ್ತಾ ಆಶಾ ಚೀರುತ್ತಿದ್ದಾಗ ಅವಳಿಗೆ ಏನು ಬೇಡ, ಕೆಳಗಿಳಿದರೆ ಸಾಕು ಎನ್ನುವಂತಾಗಿತ್ತು. ಈ ಕಥೆಯಿಂದ ಇತರೆ ಮಕ್ಕಳಿಗೂ ನಾವು ಎಲ್ಲವನ್ನು ಬೇಕು ಎಂದು ಕೇಳಬಾರದು ಕೇಳಿದರೆ ತಮಗೂ ಆಶಾಳಿಗೆ ಆದ ಗತಿಯೇ ಬರುತ್ತದೆ ಎಂದೆನಿಸಿ ಈ ಕಥೆಯನ್ನು ಕೇಳಿದ ಮಕ್ಕಳೆಲ್ಲರೂ ಅಂದುಕೊಳ್ಳುವರು.

* ಶಿವರಾಮ ಭಟ್‌ರ 'ಪ್ರಾಮಾಣಿಕ' ಎಂಬ ಕಥೆಯು ಮಕ್ಕಳಿಗೆ ಪ್ರಾಮಾಣಿಕತೆ ಎಂದರೇನು ಎಂದು ತಿಳಿಯುವುದಕ್ಕೆ ತುಂಬಾ ಉತ್ತಮ ಕಥೆ ಎನ್ನಬಹುದು. ಈ ಕಥೆಯಲ್ಲಿ ನಾರಾಯಣ ಎಂಬ ಬಡಹುಡುಗನಿದ್ದನು. ಅವನು ತುಂಬಾ ಪ್ರಾಮಾಣಿಕನಾಗಿದ್ದನು. ಒಮ್ಮೆ ಅವನ ತಂದೆ ಅವನಿಗೊಂದು ನೋಟು ಕೊಟ್ಟು ಅಂಗಡಿಗೆ ಹೋಗಿ ಚಿಲ್ಲರೆ ತೆಗೆದುಕೊಂಡು ಬರುವಂತೆ ಹೇಳಿದರು. ಅದರಂತೆಯೇ ನಾರಾಯಣನು ಅಂಗಡಿಗೆ ಹೋಗಿ ಚಿಲ್ಲರೆ ತೆಗೆದುಕೊಂಡು ಮನೆಗೆ ಬಂದು ಹಣವನ್ನು ಎಣಿಸುತ್ತಿರುವಾಗ ಅಂಗಡಿಯವನು ಬೆಳ್ಳಿಯ ನಾಣ್ಯದ ಬದಲಿಗೆ ಚಿನ್ನದ ನಾಣ್ಯವನ್ನು ಕೊಟ್ಟಿದ್ದನು. ಅದನ್ನು ನೋಡಿದ ತಕ್ಷಣ ಆ ಹುಡುಗ ನಾರಾಯಣನು ಕೂಡಲೇ ಅಂಗಡಿಗೆ ಹೋದನು. "ಅಯ್ಯಾ ನೀವು ನನಗೆ ಚಿಲ್ಲರೆ ಸರಿಯಾಗಿ ಕೊಡಲಿಲ್ಲ"

ಎಂದನು. ಅದಕ್ಕೆ ಅಂಗಡಿಯವನು ನೀನು ಅಂಗಡಿಯ ಮುಂದೆಯೇ ಎಣಿಸಿ ನೋಡಿಕೊಂಡು ಹೋಗಬೇಕಿತ್ತು. ನೀನು ಮನೆಗೆ ಹೋಗಿ ಈಗ ಚಿಲ್ಲರೆ ಸರಿಯಾಗಿ ಕೊಟ್ಟಿಲ್ಲವೆಂದರೆ ಅದಕ್ಕೆ ನಾನು ಜವಾಬ್ದಾರನಲ್ಲ ಎಂದನು. ಅದಕ್ಕೆ ನಾರಾಯಣನು ನೀವು ಹೀಗೆ ಮಾತನಾಡುವುದು ಸರಿಯಲ್ಲ. ಈ ರೀತಿ ಮಾತನಾಡಿದರೆ ನಿಮಗೆ ನಷ್ಟ, ನನಗಲ್ಲ. ದಯವಿಟ್ಟು ನನ್ನ ಮಾತು ಕೇಳಿ ಎಂದನು. ಅದಕ್ಕೆ ನಾರಾಯಣನು ನೀವು ನನಗೆ ಬೆಳ್ಳಿಯ ನಾಣ್ಯದ ಬದಲಾಗಿ ಚಿನ್ನದ ನಾಣ್ಯವನ್ನು ಕೊಟ್ಟಿದ್ದೀರಿ ಅದನ್ನು ವಾಪಸು ತೊಗಳಿ ಎಂದನು. ಅದನ್ನು ಕೇಳಿದ ಅಂಗಡಿಯವನಿಗೆ ಇಂಥ ಪ್ರಾಮಾಣಿಕನ ಮೇಲೆ ತಾಳ್ಮೆ ಇಲ್ಲದೆ ರೇಗಿ ಹೋದೆನಲ್ಲ ಎಂದು ಪಶ್ಚಾತ್ತಾಪ ಪಟ್ಟು ನಿನಗೆ ಏನು ಸಹಾಯಬೇಕಾದರೂ ಕೇಳು ನಾನು ನಿನಗೆ ಸಹಾಯ ಮಾಡುತ್ತೇನೆ ಎಂದಾಗ, ಹುಡುಗ ನಾರಾಯಣನು "ನಮ್ಮ ಬಡತನದಿಂದ ನನಗೆ ಓದು ಬರಹ ಕಲಿಯಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ನನಗೆ ಓದಲು ಸಹಾಯ ಮಾಡಿ" ಎಂದು ಕೇಳಿದಾಗ ಅಂಗಡಿಯವನು ಹುಡುಗನಿಗೆ ಓದಲು ಸಹಾಯ ಮಾಡಿ ಕೊನೆಗೆ ಅವನನ್ನು ಕೆಲಸಕ್ಕೂ ಸೇರಿಸಿದನು.

ಈ ಕಥೆಯಲ್ಲಿ ಪ್ರಾಮಾಣಿಕತೆಯೇ ಕಥೆಯ 'ವಸ್ತು'ವೆನಿಸಿದರೂ ನಾರಾಯಣನು ಅನಕ್ಷರಸ್ಥ ಮತ್ತು ಕಡುಬಡವನಾಗಿದ್ದರೂ ಸ್ವಲ್ಪವೂ ದುರಾಸೆ ಇಲ್ಲದೆ ಚಿನ್ನದ ನಾಣ್ಯವನ್ನು ಬಳಸಿಕೊಳ್ಳದ್ದೆ ನೇರವಾಗಿ ಅಂಗಡಿಗೆ ಹೋಗಿ ಮಾಲಿಕನಿಗೆ ಕೊಡುವುದು ಇತರೆ ಹುಡುಗರಿಗೂ ಮಾದರಿಯಾಗುವಂತದ್ದು, ನಾರಾಯಣ ಪ್ರಾಮಾಣಿಕತೆಯೇ ತನ್ನ ಬಾಳಿಗೊಂದು ಬೆಳಕನ್ನು ತಂದಿತೆನ್ನಬಹುದು. ಅಂಗಡಿಯವನು ಇವನ ಪ್ರಾಮಾಣಿಕತೆಗೆ ಕರಗಿ ಇವನ ಓದಿಗೆ ಸಹಾಯ ಮಾಡಲು ಒಪ್ಪುವುದನ್ನು ನೋಡಿದಾಗ ಒಳ್ಳೆಯತನಕ್ಕೆ ಯಾವಾಗಲೂ ಬೆಲೆ ಇದ್ದೇ ಇರುತ್ತದೆ. ಮತ್ತು ಒಳ್ಳೆಯವರಿಗೆ ದೇವರು ಯಾವ ರೂಪದಲ್ಲಾದರೂ ಬಂದು ಸಹಾಯ ಮಾಡಬಹುದು ಎಂಬ ತತ್ವವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

* ಟಿ.ಎಸ್. ನಾಗರಾಜಶೆಟ್ಟಿ ಅವರ 'ನಾಚಿದ ಬೀಜಣ್ಣ' ಎನ್ನುವ ಕಥೆಯಲ್ಲಿ ಆ ದಿನ ಕಾಡಿಗೆಲ್ಲಾ ಸಂಭ್ರಮದ ದಿನ, ಕಾಡಿನಲ್ಲಿರುವ ಪಕ್ಷಿ, ಪ್ರಾಣಿ, ಕ್ರಿಮಿ, ಕೀಟಗಳೆಲ್ಲವೂ ಹೆಚ್ಚಿನ ಸಂಖ್ಯೆಯಲ್ಲಿ ಒಂದು ಕಡೆಯಲ್ಲಿ ಸೇರಿದ್ದವು. ಕಾಡಿನ ರಾಜನೇ ಆ ದಿನ ಸಭೆಯನ್ನು ಕರೆದಿದ್ದ. ಆ ಸಭೆಯ ಪ್ರಮುಖ ಉದ್ದೇಶವೇ ಸಭೆಗೆ ಬಂದವರೆಲ್ಲರು ತಮಗೆ ಬೇಕಾದ ವರವನ್ನು ಕೇಳಿ ಪಡೆಯಬಹುದಾಗಿತ್ತು. ಕಾಡಿನ ರಾಜ ಬಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡನು. ಆನೆ, ಸಿಂಹ, ನವಿಲು, ಗರುಡ, ಮಿಡತೆ ಮೊದಲಾದವುಗಳೆಲ್ಲ ಸಭೆಯನ್ನು ಅಲಂಕರಿಸಿದ್ದವು. ಕೋಗಿಲೆಯು ಪ್ರಾರ್ಥನೆಯನ್ನು ಹಾಡಿತು. ಗಿಳಿಯು ಎಲ್ಲರನ್ನು ಸ್ವಾಗತಿಸಿತು. ಮತ್ತು ಸಿಂಹ ಪ್ರಮುಖರನ್ನು ಪರಿಚಯಿಸಿತು. ನಂತರ ಕಾಡಿನ ರಾಜ ಎದ್ದು ನಿಂತು "ನನ್ನ ಪ್ರೀತಿಯ ಪ್ರಜೆಗಳೇ, ನೀವೆಲ್ಲರೂ ಸೇರಿ ಈ ಕಾಡಿನ ಜಗತ್ತು ಆಗಿದೆ. ನೆಲದ ಮೇಲೆ ಆಕಾಶದಲ್ಲಿ, ನೀರಿನಲ್ಲಿ, ಮರಗಳ ಮೇಲೆ ನೆಲೆಸಿ ಪರಸ್ಪರ ಸಹಕಾರದಿಂದ ಬದುಕುತ್ತಿದ್ದೀರಿ. ಇದು ಬಹಳ

ಸಂತೋಷದ ಸಂಗತಿ. ಈ ದಿನ ನಿಮಗೆ ಬೇಕಾದ ವರಗಳನ್ನು ಕೇಳಿರಿ, ಕೊಡಲಾಗುವುದು ಆದರೆ ಒಂದು ವಿಷಯ ಮಾತ್ರ ನೆನಪಿರಲಿ, ನೀವು ಕೇಳುವ ವರ ನಿಮಗೆ ಅನುಕೂಲ ಆಗುವಂತೆ ಇರಬೇಕು. ಅಷ್ಟೇ ಅಲ್ಲ, ಅದರಿಂದ ಬೇರೆಯವರಿಗೆ ತೊಂದರೆ ಆಗಬಾರದು”[೧೫] ಎಂದು ಸಭೆಯನ್ನುದ್ದೇಶಿಸಿ ಹೇಳಿತು.

ರಾಜನ ಮಾತನ್ನು ಕೇಳಿದ್ದೆ ತಡ ಹುಲಿಯು ತನಗೆ ಬೇಕಾದ ವರವನ್ನು ಕೇಳಿ ರಾಜನಿಂದ ಬೈಸಿಕೊಂಡು ತೆಪ್ಪಗಾಯಿತು. ನಂತರ ಕೋಗಿಲೆ ಬಂದು ತನಗೆ ಇನ್ನೂ ಚೆನ್ನಾಗಿ ಹಾಡಬೇಕೆಂದಾಸೆ ಕೇಳುಗರಿಗೆ ಇನ್ನು ಇಂಪಾಗಿ ನನ್ನ ಹಾಡು ಕೇಳುವಂತಾಗಬೇಕು ಅಂತಹ ವರ ಕೊಡಿ ಎಂದಾಗ, ರಾಜನು ನಿನ್ನದು ನಿಸ್ವಾರ್ಥ ಬೇಡಿಕೆ. ನೀನು ಇನ್ನು ಚೆನ್ನಾಗಿ ಹಾಡು ಎಂದು ವರ ನೀಡಿತು. ಎರೆಹುಳು ಬಂದು ಸ್ವಾಮಿ ಮಣ್ಣೇ ನನಗೆ ಆಹಾರವಾಗುವಂತೆ ವರ ಕೊಡು ಎಂದಾಗ ರಾಜ ತಥಾಸ್ತು ಎಂದು ವರವನ್ನು ಕೊಟ್ಟಿತು. ಹೀಗೆ ಎಲ್ಲ ಪ್ರಾಣಿಗಳು ತಮಗೆ ಬೇಕಾದ ವರವನ್ನು ಕೇಳಿ ಪಡೆಯುತ್ತಿದ್ದಾಗ ಅಲ್ಲೇ ಮೂಲೆಯಲ್ಲಿ ಕೂತಿದ್ದ ಬೀಜವೂ ಸಂಕೋಚದಿಂದ ಮುದುಡಿಕೊಂಡು, ವರ ಕೇಳಲು ನಾಚಿಕೆ ಪಡುತ್ತಿತ್ತು. ಅದನ್ನು ಕಂಡು ಹರಿಯುತ್ತಿದ್ದ ಹೊಳೆಯು ಬೀಜಣ್ಣನನ್ನು ನೀನು ಈ ಕಾಡಿನವನೇ ನೀನು ವರವನ್ನು ಕೇಳು ಎಂದಿತು. ಆಕಾಶದಲ್ಲಿನ ವಾಯುದೇವನು ಇವನಿಗೆ ಏನಾದರೂ ಸಹಾಯ ಮಾಡೋಣವೆಂದು ನೀರು, ಗಾಳಿ, ಸೂರ್ಯ ದೇವತೆಗಳು ಯೋಚಿಸಿ ವರಪಡೆಯುವಂತೆ ಹೇಳಿದರು. ಆದರೂ ಬೀಜಣ್ಣ ನಾಚುತ್ತಾ ‘ಏನೋ ತಮ್ಮ ದಯೆ, ತಮಗೆ ತೋಚಿದ ಹಾಗೆ ಮಾಡಿ’ ಇಷ್ಟು ಹೇಳಲು ಬೀಜಣ್ಣ ಬೆವತುಬಿಟ್ಟಿದ್ದನು. ಆಗ ನೀರು ಹೇಳಿತು ನಿನಗೆ ಗೊಬ್ಬರ ಮೊದಲಾದ ಪುಷ್ಟಿಕರ ಆಹಾರಗಳನ್ನು ನೆಲದಿಂದ ಹೀರಲು ರೆಂಬೆ ಕೊಂಬೆಗಳಿಗೆಲ್ಲ ಆಹಾರ ಹರಡಲು ಬೇಕಾದ ಶಕ್ತಿ ಕೊಡುತ್ತೇನೆ. ಜೊತೆಗೆ ನೀನು ಬೆಳೆಯಲು ಅಗತ್ಯವಾದ ಜಲಜನಕವನ್ನು ನೀಡುತ್ತೇನೆ ಎಂದಿತು.

ಗಾಳಿಯು ಹೀಗೆ ಹೇಳಿತು– ನಿನ್ನ ಬೆಳವಣಿಗೆಗೆ ಬೇಕಾದ ಆಮ್ಲಜನಕ ಮೊದಲಾದ ಅನಿಲಗಳನ್ನು ಕೊಡುತ್ತೇನೆ ಎಂದರೆ, ಸೂರ್ಯನು– ನನ್ನ ಬೆಳಕಿನಿಂದ ನಿನ್ನ ಆಹಾರ ತಯಾರಿಕೆಗೆ ಶಕ್ತಿಯನ್ನು ಕೊಡುತ್ತೇನೆ ಎಂದು ಈ ಮೂವರು ನಂತರ ಮನುಷ್ಯನನ್ನು ಕರೆದು ‘ಈ ಬೀಜವನ್ನು ನೀನು ಹದ ಮಾಡಿದ ಹೊಲದಲ್ಲಿ ಬಿತ್ತಬೇಕು. ಇದರಿಂದ ನಿನಗೆ ಆಹಾರ ಸಿಗುತ್ತದೆ’ ಎಂದರು. ಮನುಷ್ಯನು ಹಾಗೆ ಮಾಡಲಾರಂಭಿಸಿದರು. ಹೀಗೆ ಈ ಕಥೆಯಲ್ಲಿ ನಾಚಿದ ಬೀಜಣ್ಣನು ನಿಧಾನವಾಗಿ ಧೈರ್ಯತಂದುಕೊಂಡು ತಲೆಯೆತ್ತಿದ. ನೀರನ್ನು ಕುಡಿದ ನೆಲವನ್ನು ಸ್ವಲ್ಪ ಸ್ವಲ್ಪ ಸೀಳಿ, ಪುಟಾಣಿ ಮೊಳಕೆಯಾಗಿ ಹೊರಬಂದ ಅದು ಬೆಳೆಯಲು ನೀರು, ಬೆಳಕು, ಗಾಳಿಗಳೆಲ್ಲ ಸಹಕಾರ ನೀಡಿದವು. ಕೊಂಬಿನಾಕಾರದಲ್ಲಿ ತುಸು ಬಾಗಿದ್ದರೂ, ನಂತರ

ಗಿಡವಾಗಿ, ಮುಂದೆ ಮರವಾದ, ಮನುಷ್ಯ ಪ್ರಪಂಚವನ್ನೇ ಹೊಟ್ಟೆ ತುಂಬಿಸುವಂತ ದವಸಧಾನ್ಯವಾದ ಹಣ್ಣು ಹಂಪಲುಗಳನ್ನು ಕೊಡತೊಡಗಿದ.

ಈ ಕಥೆಯಲ್ಲಿ ಲೇಖಕರು ಕಥೆಯ ವಸ್ತುವಾಗಿ ಕಾಡಿನ ರಾಜನು ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ ಎಲ್ಲಾ ಪ್ರಾಣಿ-ಪಕ್ಷಿಗಳು ತಮಗೆ ಬೇಕಾದ ವರವನ್ನು ಕೇಳಿ ಪಡೆಯಬೇಕು ಎನ್ನುವುದಾಗಿದೆ. ಅದರಂತೆ ಸಭೆಗೆ ಬಂದ ಕೆಲವು ಪ್ರಾಣಿಗಳು ತಮ್ಮ ಸ್ವಾರ್ಥಕ್ಕಾಗಿ ವರಗಳನ್ನು ಕೇಳಿದವು. ಇನ್ನು ಕೆಲವು ನಿಸ್ವಾರ್ಥ ವರಗಳನ್ನು ಕೇಳಿ ಪಡೆದವು. ಆದರೆ ಸಭೆಯಲ್ಲಿಯೇ ಇದ್ದ ಬೀಜಣ್ಣ ಮಾತ್ರ ತಾನು ಯಾವ ವರವನ್ನು ಕೇಳದೇ ನಾಚಿ ಮೂಲೆಯಲ್ಲಿ ಅಡಗಿ ಕುಳಿತಿದ್ದ. ಇಲ್ಲಿ ಹೊಸ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಈ ಕಥೆಯಲ್ಲಿ ನಾಚಿ ಕುಳಿತಿದ್ದ ಬೀಜಣ್ಣನಿಗೆ ದೇವಾನು ದೇವತೆಗಳಾದ ಗಾಳಿ (ವಾಯುದೇವ), ಸೂರ್ಯ (ಸೂರ್ಯದೇವ) ಮತ್ತು ನೀರು ಒಟ್ಟಿಗೆ ಸೇರಿ ಬೀಜಣ್ಣನಿಗೆ ಸಹಾಯ ಮಾಡಲು ಮುಂದಾದರು. ಕೇಳು ಬೀಜಣ್ಣ, ಏನಾದರೂ ಕೇಳಿ ಪಡೆ, 'ಕೇಳದೆ ಇದ್ದರೆ ಅಮ್ಮನೇ ಮಗುವಿಗೆ ತಿಂಡಿಕೊಡುವುದಿಲ್ಲ. ಅಳದೆ ಇದ್ದರೆ ಹಾಲು ಕುಡಿಸುವುದಿಲ್ಲ' ಎಂದೆಲ್ಲ ಹೇಳಿದರು ಬೀಜಣ್ಣ ಒಪ್ಪಲಿಲ್ಲ.

ಆಗ ಗಾಳಿ, ನೀರು, ಸೂರ್ಯ ಇವರುಗಳು ಬೀಜಣ್ಣನಿಗೆ ಹದ ಮಾಡಿದ ಹೊಲದಲ್ಲಿ ಬೀಜವನ್ನು ವ್ಯವಸಾಯದ ಮೂಲಕ ಬಿತ್ತಿದಾಗ ಅದು ಫಲವಾಗಿ ಬರಲು ಏನೇನು ಅಗತ್ಯವಿದೆಯೋ ಅವುಗಳ ಪೂರೈಕೆ ತಾವು ಮಾಡುವುದಾಗಿ ಹೇಳಿದರು. ಅದರಂತೆ ಬೀಜಣ್ಣ ಹುತ್ತ, ದವಸಧಾನ್ಯ, ಹಣ್ಣು, ಹಂಪಲು, ಗೆಡ್ಡೆ-ಗೆಣಸು ಮೊದಲಾಗಿ ಬೆಳೆದು ಮನುಷ್ಯ ಕುಲವನ್ನೆ ಬೆಳಗುವಂತಹ ವರವನ್ನು ಪಡೆದನು. ಆಗಿನಿಂದಲೇ ಬೀಜವು ಮೊಳಕೆಯಾಗಿ, ನಮಗೆಲ್ಲ ಆಹಾರವಾಗಿ ಲಭಿಸುವಂತಾಗಿದೆ. ಈ ಕಥೆಯಲ್ಲಿ ಬೀಜ, ಅದು ಹೇಗೆ ದವಸವಾಗಿ ಬರುತ್ತದೆ. ಅದರ ಮಹತ್ವವೇನು ಮೊದಲಾಗಿ ಬೀಜದ ಮಹಿಮೆಯನ್ನು ಪರಿಚಯಿಸುವ ತಂತ್ರವನ್ನು ಬಳಸಲಾಗಿದೆ. ಈ ಕಥೆಯು ಮಕ್ಕಳನ್ನು ತಲುಪುವಲ್ಲಿ ಯಶಸ್ವಿಯಾಗಿದೆ.

* ಕಮಲ ರಾಮಸ್ವಾಮಿ ಅವರ 'ಗುರು ಕಲಿಸಿದ ಪಾಠ' ಎನ್ನುವ ಕಥೆಯು 'ನಂಬಿದವರನ್ನು ದೇವರು ಎಂದು ಕೈಬಿಡುವುದಿಲ್ಲ' ಎಂಬ ತತ್ವವನ್ನು ಒಳಗೊಂಡಿದೆ. ಈ ಕಥೆಯಲ್ಲಿ ಬರುವ ಸಾಹುಕಾರನಿಗೆ ಒಬ್ಬನೇ ಮಗನಿದ್ದನು. ಅವನು ಒಳ್ಳೆಯವನು, ಬುದ್ಧಿವಂತನು ಆಗಿದ್ದನು. ಆದರೆ ತುಂಬ ತುಂಟ, ಹುಡುಗಾಟದ ಹುಡುಗನಾಗಿದ್ದನು. ಅವನು ತುಂಟತನವನ್ನು ಬಿಡಿಸಿ ಒಳ್ಳೆಯ ವಿದ್ಯೆ ಬುದ್ಧಿ ಕಲಿಸುವ ಗುರುಗಳನ್ನು ಸಾಹುಕಾರನು ಹುಡುಕುತ್ತಿದ್ದನು. ಆಗ ಅದೇ ಊರಿನಲ್ಲಿದ್ದ ಒಬ್ಬ ಸಂಸ್ಕೃತ ಉಪಾಧ್ಯಾಯರಿದ್ದರು. ಅವರು ವಿವೇಕಿಗಳಾಗಿದ್ದರು. ಎಂತಹವರನ್ನಾದರೂ ದಾರಿಗೆ ತರುವ ಗುಣವುಳ್ಳವರಾಗಿದ್ದರು. ಇದನ್ನು ತಿಳಿದ ಸಾಹುಕಾರನು ಆ ಗುರುಗಳನ್ನು ತನ್ನ ಮಗನ ಗುರುವಾಗಲು ನೇಮಿಸಿದನು. ಹೀಗೆ ಪ್ರತಿದಿನದಂತೆ ಗುರುಗಳು

ಸಂಜೆ ತನ್ನ ತುಂಟ ಶಿಷ್ಯನೊಡನೆ ತಿರುಗಾಡಲು ಹೋದಾಗ, ಕಥೆ, ಹರಟೆ ಹಾಗೂ ಇತರೆ ವಿಚಾರ ಮಾಡುವ ಮೂಲಕ ಶಿಷ್ಯನಲ್ಲಿ ತಿಳುವಳಿಕೆ ಮೂಡಿಸುತ್ತಿದ್ದರು.

ಒಂದು ದಿನ ಹೀಗೆ ಹೊಲದ ಬಳಿ ಹೋಗುತ್ತಿದ್ದಾಗ, ಅಲ್ಲಿ ಒಂದು ಜೊತೆ ಹಳೇ ಬೂಟು, ಒಂದು ಹರಕು ಕೋಟು ಇಟ್ಟಿದ್ದನ್ನು ಕಂಡರು. ಆ ಹೊಲದಲ್ಲಿ ಬಡರೈತನೊಬ್ಬ ಕೆಲಸ ಮಾಡುತ್ತಿದ್ದ. ಆಗ ತುಂಟ ಹುಡುಗನು ತನ್ನ ತರ್ಲೆ ಮಾಡಲು ಪ್ರಾರಂಭಿಸಿ ಗುರುಗಳೇ ಈ ಬೂಟುಗಳನ್ನು ಬಚ್ಚಿಟ್ಟು ಬಿಡೋಣ ಆಗ ಆ ರೈತ ಏನು ಮಾಡುವನೆಂದು ನೋಡೋಣವೇ, ಅದು ತಮಾಷೆಯಾಗಿರುತ್ತೆ ಎಂದನು.

ಆಗ ಗುರುಗಳು ಮಗು ಯಾವಾಗಲೂ ನಮ್ಮ ತಮಾಷೆ ಬೇರೆಯವರನ್ನು ನೋಯಿಸಬಾರದು, ಅದರಲ್ಲೂ ಬಡತನದಲ್ಲಿರುವವರನ್ನು ಎಂದೂ ನೋಯಿಸಬಾರದು, ನೀನು ಶ್ರೀಮಂತನಾಗಿದ್ದರೆ ಆ ಬಡವನಿಗೆ ಹೆಚ್ಚಿನ ಸಂತೋಷವಾಗುವ ಕೆಲಸವನ್ನು ಮಾಡು, ಆಗ ಇನ್ನು ಆನಂದ ಪಡಬಹುದು. ಅವನ ಆ ಬೂಟುಗಳಲ್ಲಿ ಒಂದೊಂದು ಬೆಳ್ಳಿ ರೂಪಾಯಿ ಇಡು ಮರೆಯಲ್ಲಿ ನಿಂತು ನೋಡು ಎಂದರು. ಶಿಷ್ಯನು ಹಾಗೆ ಮಾಡಿದನು.

ಹೊಲದಲ್ಲಿದ್ದ ರೈತ ಮನೆಗೆ ಹೋಗಲು ತೊರೆಯಲ್ಲಿ ಕಾಲು ತೊಳೆದು ಹಳೆಯ ಕೋಟನ್ನು ಹಾಕಿಕೊಂಡು ಬೂಟಿನಲ್ಲಿ ಕಾಲಿಟ್ಟಾಗ ಕಾಲಿಗೆ ಏನೋ ಒತ್ತಿದಂತಾಗಿ ಕಾಲು ತೆಗೆದು ಬೂಟನ್ನು ಕೊಡವಿದ. ನಾಣ್ಯ ಬಿತ್ತು ಆಶ್ಚರ್ಯದಿಂದ ಆಚೀಚೆ ನೋಡಿದಾಗ ಯಾರೂ ಇರಲಿಲ್ಲ. ನಾಣ್ಯವನ್ನು ಕಣ್ಣಿಗೆ ಒತ್ತಿಟ್ಟುಕೊಂಡು ಜೇಬಿಗೆ ಹಾಕಿಕೊಂಡನು. ಇನ್ನೊಂದು ಬೂಟಿನಲ್ಲಿಯೂ ನಾಣ್ಯ ದೊರೆತಾಗ ಅವನು ಮೊಣಕಾಲೂರಿ ಆಕಾಶಕ್ಕೆ ಮುಖ ಮಾಡಿ ಕೈ ಜೋಡಿಸಿ, "ಹೇ ದಯಾಮಯಿ ತಂದೆ! ಈ ದಿನ ನೀನು ನನ್ನ ಕಾಪಾಡಿದೆ. ಬಹಳ ನಿಶ್ಶಕ್ತಿಯಿಂದ ನರಳುತ್ತಿದ್ದ ಹೆಂಡತಿಗೆ ಮತ್ತು ಜ್ವರ ಬಂದ ಮಗುವಿಗೆ ಔಷಧಿಗೆ ನೀನೇ ಹಣ ಒದಗಿಸಿದೆಯಾ ದೇವಾ! ನಿನ್ನನ್ನು ನಂಬಿದವರಿಗೆ ಎಂದೂ ಮೋಸವಿಲ್ಲ" ಎಂದು ಕಣ್ಣೀರು ಹಾಕುತ್ತಾ ಮನೆಗೆ ಹೊರಟನು. ಇದನ್ನು ನೋಡಿದ ಹುಡುಗನಿಗೆ ಸಂಕಟವಾಯಿತು. ಕಣ್ಣಲ್ಲಿ ನೀರು ಬಂತು. ಆಗ ಗುರುಗಳು ನೋಡಿದಿಯಾ ಮಗು ಬೂಟುಗಳನ್ನು ಬಚ್ಚಿಡುವ ಬದಲು, ಆ ನಾಣ್ಯಗಳ ದಾನದ ಪರಿಣಾಮ, ನಿನ್ನ ತುಂಟಾಟ, ಚೇಷ್ಟೆಗಳಿಗಿಂತ ಈ ಸಂತೋಷವೇ ದೊಡ್ಡದಲ್ಲವೇ ಎಂದರು. ಆಗ ಹುಡುಗನು ಅಳುತ್ತಾ ಹೌದು ನಿಮ್ಮಿಂದ ನಾನು ಮರೆಯಲಾಗದ ಪಾಠವನ್ನು ಕಲಿತೆ, ನಮಗಾಗುವ ಸಂತೋಷಕ್ಕಿಂತ ನಮ್ಮಿಂದ ಇನ್ನೊಬ್ಬರಿಗಾಗುವ ಸಂತೋಷವೇ ನಮಗೆ ಇನ್ನೂ ಹೆಚ್ಚಿನ ಸಂತೋಷವನ್ನು ತರುತ್ತದೆ ಎಂದನು.

ಹೀಗೆ ಈ ಕಥೆಯಲ್ಲಿ ಸಾಹುಕಾರನ ಮಗನ ಕುಚೋದ್ಯವನ್ನು ಅವನ ಗುರುಗಳು ತಮ್ಮ ಅನುಭವದ ಪಾಠದಿಂದ ಅವನ ಮನಪರಿವರ್ತನೆಯನ್ನು ಮಾಡಿರುವುದನ್ನು ಕಾಣುತ್ತೇವೆ. ಈ

ಕಥೆಯಲ್ಲಿಯು ಲೇಖಕರು ಮತ್ತೊಮ್ಮೆ ಒಳ್ಳೆಯತನ, ಪ್ರಾಮಾಣಿಕತೆಯ ವಸ್ತುವನ್ನು ಆಯ್ಕೆ ಮಾಡಿಕೊಂಡು, ಗುರುಗಳ ಮಾತುಗಳಾದ ಅವರ ಅನುಭವ ಪಾಠದಿಂದ ತುಂಟನಾದ ಹುಡುಗನ ಬದಲಾವಣೆಯ ತಂತ್ರವನ್ನು ಮಾಡಲಾಗಿದೆ. ಈ ಕಥೆಯ ಕೊನೆಯಲ್ಲಿ 'ನಂಬಿದವರನ್ನು ಕೈಬಿಡುವುದಿಲ್ಲ ದೇವರು' ಮತ್ತು 'ನಮಗೆ ಆಗುವ ಸಂತೋಷಕ್ಕಿಂತ ನಮ್ಮಿಂದ ಇತರರಿಗಾಗುವ ಸಂತೋಷವೇ ಮುಖ್ಯ' ಎನ್ನುವ ತತ್ವವನ್ನು ಹೇಳುತ್ತದೆ.

* ಯು.ಆರ್. ಲಲಿತ ಅವರ 'ಹಸಿರುಮರ'ವೆಂಬ ಕಥೆಯಲ್ಲಿ ಹಳ್ಳಿಯಲ್ಲಿದ್ದ ನಾಟಿವೈದ್ಯನು, ಅವನಿಗೆ ಹೆಂಡತಿ, ಮಗನಿದ್ದನು. ಆ ಊರಿಗೆಲ್ಲ ಅವನೊಬ್ಬನೆ ವೈದ್ಯ ಹಾಗಾಗಿ ಅವನಿಗೆ ಮತ್ತು ಅವನು ಕೊಟ್ಟ ಔಷಧಿಗೆ ಬಹಳ ಬೆಲೆಯಿತ್ತು. ಆದರೂ ಅವನಿಂದ ಎಲ್ಲಾ ತರಹದ ಕಾಯಿಲೆಗಳನ್ನು ವಾಸಿಮಾಡಲಾಗುತ್ತಿರಲಿಲ್ಲ. ಜನರು ವಿಧಿ ಇಲ್ಲದೆ ಅವನ ಬಳಿ ಬರುತ್ತಿದ್ದರು.

ಆ ವೈದ್ಯ ವಾಸಿಸುತ್ತಿದ್ದ ಹಳ್ಳಿಯ ಹೊರಭಾಗದಲ್ಲಿ ಒಂದು ಹಸಿರು ಮರವಿತ್ತು. ಅದು ಸದಾಕಾಲ ಹಸಿರಾಗಿಯೇ ಇರುತ್ತಿತ್ತು. ಅದು ಹೂವಾಗಲಿ, ಕಾಯಾಗಲಿ ಬಿಟ್ಟಿರಲಿಲ್ಲ. ಅದರ ಮಹತ್ವವು ಅವರಿಗೆ ಗೊತ್ತಿರಲಿಲ್ಲ. ಹೀಗಿರುವಾಗ ಬೇರೆ ಕಡೆಯಿಂದ ಬಂದ ಕಜ್ಜಿಬುರುಕನೊಬ್ಬ ಆ ಮರದ ನೆರಳಿಗೆ ಕೂತನು. ಅವನ ಕಾಲು ಬುಡಕ್ಕೆ ಆ ಮರದ ಟೊಂಗೆಯೊಂದು ಗಾಳಿಗೆ ಮುರಿದು ಬಿತ್ತು. ಅದನ್ನು ತುರಿಸುತ್ತಿರುವ ಕಜ್ಜಿಗೆ ಹಚ್ಚಿಕೊಂಡ. ಹೀಗೆ ಹಚ್ಚಿದ ನಾಲ್ಕೈದು ದಿನದಲ್ಲಿ ಅವನ ಕಜ್ಜಿ ವಾಸಿಯಾಯಿತು. ಯಾವ ಔಷಧಿಗೂ ಹೋಗದ ತನ್ನ ಕಜ್ಜಿ ಈ ಮರದ ಎಲೆಗೆ ವಾಸಿಯಾದದ್ದು ಕಂಡು ಸಂತೋಷಗೊಂಡು ಇದನ್ನು ಇಡೀ ಹಳ್ಳಿಗೆಲ್ಲಾ ಸಾರಿದನು. ಜನರು ಆ ಮರಕ್ಕೆ ಮುಗಿಬಿದ್ದರು. ಅದರ ಎಲೆಗಳನ್ನೆ ತಮ್ಮ ಕಾಯಿಲೆಗೆ ಬಳಸಿಕೊಂಡರು. ಈ ಮರ ಊರಿನ ಜನರಿಗೆಲ್ಲಾ ವರವಾದರೆ ನಾಟಿ ವೈದ್ಯನಿಗೆ ಆದಾಯವಿಲ್ಲದೆ ಶಾಪವಾಯಿತು. ಅವನ ಜೀವನೋಪಾಯವೇ ಕಷ್ಟವಾಯಿತು. ಸುಖದಲ್ಲೆ ಇದ್ದ ವೈದ್ಯನಿಗೆ ಬೇರೆ ಉದ್ಯೋಗ ಕಾಣಲಿಲ್ಲ. ಚಿಂತೆಗೀಡಾದ ವೈದ್ಯನು ಒಂದು ದುಷ್ಟ ಯೋಚನೆಯಲ್ಲಿಯೇ ತೊಡಗಿ, ಅದರ ಪೂರ್ವಾಪರ ಯೋಚಿಸದೆ ಆ ಕೆಲಸವನ್ನು ಆತುರದಲ್ಲಿ ಒಂದು ಅಮಾವಾಸ್ಯೆಯ ರಾತ್ರಿ ಹೆಂಡತಿಗೆ ಸುಳ್ಳು ಹೇಳಿ ಹೊರಟು ಬೆಳಗಾಗುವುದರೊಳಗೆ ಆ ಮರವನ್ನು ಕಡಿದು ಬಂದನು. ಬೆಳಿಗ್ಗೆ ಎದ್ದಾಗ ಜನಕ್ಕೆ ಮರ ಕಾಣಲಿಲ್ಲ. ಮರವಿಲ್ಲವೆಂದು ಅತ್ತ ಜನರಲ್ಲಿ ಈ ವೈದ್ಯನು ಸೇರಿ ಅತ್ತನು.

ಮತ್ತೆ ಈ ವೈದ್ಯನ ಬಳಿಯೇ ಜನರು ಬರತೊಡಗಿದರು. ಅವನ ಜೀವನ ಮತ್ತೆ ಸುಧಾರಿಸಿತು. ಆದರೆ ಇಲ್ಲಿ ಕಥೆಯೇ ಬೇರೆ ತಿರುವನ್ನು ಪಡೆಯುತ್ತದೆ. ಒಂದು ದಿನ ಅವನ ಪ್ರೀತಿಯ ಮಗ ಕಾಯಿಲೆಯಿಂದ ಮಲಗಿದ. ಏನು ಮಾಡಿದರೂ ಅವನ ರೋಗ ವಾಸಿಯಾಗಲಿಲ್ಲ. ಆ ಹುಡುಗನನ್ನು ನೋಡಲು ನೆಂಟರಿಷ್ಟರೆಲ್ಲ ಬಂದರು. ಅವರಲ್ಲಿದ್ದ ಒಬ್ಬ ಆ ಮದ್ದಿನ

ಮರವಿದ್ದರೆ ಈ ರೋಗ ವಾಸಿಯಾಗುತ್ತಿತ್ತು. ಅನ್ಯಾಯವಾಗಿ ಯಾರೋ ಕಡಿದು ಹಾಕಿದರು ಎಂದನು. ಅದನ್ನು ಕೇಳಿದ ವೈದ್ಯ ಮರುಗಿದ. ಕಡಿದ ಮರ ಚಿಗುರಲಿಲ್ಲ. ಇತ್ತ ಮಗನು ಸತ್ತನು. ಮಗನನ್ನು ಕಳೆದುಕೊಂಡ ವೈದ್ಯನ ನೋವು ಕಡಿಮೆಯಾಗಲಿಲ್ಲ.

ಈ ಕಥೆಯು ಯಾವುದೇ ಕೆಟ್ಟ ಕೆಲಸ ಮಾಡುವ ಮೊದಲು ಸಾವಿರ ಸಲ ಯೋಚಿಸುವುದು ಒಳಿತು ಇಲ್ಲದಿದ್ದರೆ ಆತುರದಲ್ಲಿ ಮರ ಕಡಿದ ವೈದ್ಯನ ಪರಿಸ್ಥಿತಿಯಂತಾಗುತ್ತದೆ. ಈ ಕಥೆಯು 'ಆತುರಗಾರನಿಗೆ ಬುದ್ಧಿಮಟ್ಟ' ಎನ್ನುವ ಗಾದೆಯನ್ನು ನೆನಪಿಗೆ ತರುತ್ತದೆ. ಇದರಲ್ಲಿ ಅವಸರದಲ್ಲಿ ಮಾಡಿದ ಕೆಲಸದಿಂದ ನಂತರದಲ್ಲಿ ಆದ ಪರಿಣಾಮವನ್ನು ಎತ್ತಿ ತೋರಿಸುವ ತಂತ್ರವನ್ನು ಒಳಗೊಂಡಿದೆ.

* ಶ್ರೀಶೈಲ ಪ. ಕಳಸದ ಅವರ 'ಕುಶಾಲ' ಎನ್ನುವ ಕಥೆಯು ಮಕ್ಕಳಿಗೆ ತುಂಬಾ ಪ್ರಿಯವೆನಿಸುತ್ತದೆ. ಈ ಕಥೆಯಲ್ಲಿ 'ಕುಶಾಲ' ಎನ್ನುವ ಹುಡುಗನೆ ಮುಖ್ಯ ಪಾತ್ರದಾರಿ. ಈ ಇಡೀ ಕಥೆಯನ್ನು ಅವನ ಕ್ಲಾಸಿನ ಅಧ್ಯಾಪಕಿಯೇ ಪರಿಚಯಿಸುತ್ತಾ ಹೋಗುತ್ತಾರೆ.

ಕುಶಾಲನು ಎಂಟನೆ ತರಗತಿ ಓದುವ ಹುಡುಗ, ಕ್ಲಾಸಿನಲ್ಲಿಯೇ ಜಾಣ ಹುಡುಗ, ವಿನಯಶಾಲಿ, ಮಿತಭಾಷಿ ಮತ್ತು ಸ್ನೇಹಪರ ಜೀವಿ, ಅವನ ತಂದೆ ಚಾಮಯ್ಯ ಬ್ಯಾಂಕಿನ ಗುಮಾಸ್ತರಾಗಿದ್ದರು. ಅವರ ತಂದೆ ನಮ್ಮ ಮನೆಗೆ ಬಂದು 'ನೀವು ಎಯ್ತ್ ಬಿ ಕ್ಲಾಸ್ ಟೀಚರಾ?' ಎಂದು ಕೇಳಿ 'ನೀವು ಕ್ಲಾಸಿನಲ್ಲಿ ಡಿಸಿಪ್ಲೆನ್ ಮಾಡೊಲ್ಲ ಅಂತ ಕಾಣುತ್ತೆ, ಯಾಕ್ರಿ ಎಂದು ಕೇಳಿದಾಗ ನಮ್ಮ ಮಗು ಎರಡು ತಿಂಗಳಲ್ಲಿ ಮೂರು ಸೆಟ್ ನೋಟ್ ಬುಕ್ಸ್, ಟೆಕ್ಸ್‌ಬುಕ್ಸ್, ಕಂಪಾಸ್ ಬಾಕ್ಸ್ ಎಲ್ಲಾ ಕಳೆದುಕೊಂಡಿದ್ದಾನೆ' ಎಂದು ಹೇಳಿ ಹೋದರು. ಅದು ಹೇಗೆ ಸಾಧ್ಯ, ನನ್ನ ಕ್ಲಾಸಿನಲ್ಲಿ ಅಂಥವರ್‍ಯಾರಿದ್ದಾರೆ ಎಂದು ಯೋಚಿಸಿ ಶಾಲೆಗೆ ಹೋದೆ. ಕ್ಲಾಸಿನಲ್ಲಿ ಎಲ್ಲಾ ಮಕ್ಕಳನ್ನು ವಿಚಾರಿಸಿದಾಗ ಒಂದೊಂದು ಮಕ್ಕಳು ಒಂದೊಂದು ಕಥೆಯನ್ನು ಹೇಳಿದರು. ಕೊನೆಯಲ್ಲಿ ಕುಶಾಲನ ಆತ್ಮೀಯ ಗೆಳೆಯ ಆಂಥೋನಿಯನ್ನು ಕರೆದು ವಿಚಾರಿಸಿದಾಗ, ಕುಶಾಲನ ತಂದೆ ಈ ಮುಂಚೆ ಬೆಳಗಾವಿಯ ಶಹಪೂರದಲ್ಲಿದ್ದರು. ಮನೆ ಹೊಸಹಟ್ಟಿಯ ಮೂಲೆಯಲ್ಲಿತ್ತು. ಅಲ್ಲಿ ಅಕ್ಕಪಕ್ಕದ ಜನರು ಗುಡಿಸಿನಲ್ಲಿ ವಾಸ ಮಾಡುವ ಬಡವರು, ಕೂಲಿಕಾರರಾಗಿದ್ದರು. ಆ ಬೀದಿಯ ತುದಿಯಲ್ಲಿ ಒಂದು ಮುರುಕು ಶಾಲೆ, ಹರಕು ಬಟ್ಟೆಯ ಹೊಲಸು ಹುಡುಗರು. ಅವರಲ್ಲಿ ಕುಶಾಲನೂ ಚುಕ್ಕಿಗಳ ನಡುವೆ ಚಂದ್ರನಂತಿದ್ದ.

ಅಂತ ವಾತಾವರಣದಲ್ಲಿ ಮಗನನ್ನು ಬಿಡಲು ಚಾಮಯ್ಯನವರಿಗೆ ಇಷ್ಟವಿರಲಿಲ್ಲ. ಆದರೆ ಕುಶಾಲ ಆ ವಾತಾವರಣಕ್ಕೆ ಹೊಂದಿಕೊಂಡಿದ್ದ. ಅವನ ತಲೆಯಲ್ಲಿ ಮೇಲುಕೀಳು ಎಂಬ ವಿಚಾರ ಸುಳಿಯಲ್ಲೆ ಇಲ್ಲ. ಅವನೆಂದರೆ ಎಲ್ಲರಿಗೂ ಇಷ್ಟವಾಗಿದ್ದ. ಶಾಲೆಯಲ್ಲಿ ಜಾಣ ಹುಡುಗನಾಗಿದ್ದ, ಕೊರವರ ಕೆಂಚಿಯ ಮಗ ಹುಚ್ಚ ಮತ್ತು ಅನಾಥ ಶ್ರೀನಾಥ ಇವರು

ಕಡುಬಡ ಮಕ್ಕಳಾಗಿದ್ದರು. ಕುಶಾಲನು ಅವರಿಗೆ ಆತ್ಮೀಯ ಗೆಳೆಯನಾಗಿದ್ದನು. ಅವರಿಗೆ ತನ್ನ ಕೈಲಾದ ಸಹಾಯ ಮಾಡುತ್ತಿದ್ದ. ಆದರೆ ಚಾಮಯ್ಯರಿಗೆ ಆ ಮಕ್ಕಳನ್ನು ಕಂಡರೆ ಆಗುತ್ತಿರಲಿಲ್ಲ. ಇದನ್ನು ನೋಡಲಾಗದೆ ಆ ಊರಿನಿಂದ ಇಲ್ಲಿಗೆ ವರ್ಗಮಾಡಿಸಿಕೊಂಡು ಬಂದರು.

ರಜೆಯಲ್ಲಿ ಕುಶಾಲನು ತಮ್ಮ ಗೆಳೆಯರನ್ನು ಭೇಟಿಯಾದಾಗ ಅವರು ಕೂಲಿ ಮಾಡುತ್ತಿದ್ದರು. ನಾವು ಹೈಸ್ಕೂಲಿಗೆ ಹೋಗೋ ವಿಚಾರ ಬಿಟ್ಟಿದ್ದಿವಿ. ಹೊಟ್ಟೆಗೆ ಇಲ್ಲ ಎಂದಾಗ ಶಾಲೆ ಎಲ್ಲಿ? ಶಿಕ್ಷಣ ಎಲ್ಲಿ? ಅಂದರು ಕುಶಾಲನಿಗೆ ದುಃಖವಾಯಿತು. ಆಗ ಅವನು ನೀವು ಜಾಣರಿದಿರಿ ಶಾಲೆ ಬಿಡಬೇಡಿ ನಾನು ಕೈಲಾದ ಸಹಾಯ ಮಾಡುತ್ತೇನೆ ಎಂದು ಬಂದನು.

ಇಲ್ಲಿ ಬಂದ ಮೇಲೆ ಗೆಳೆಯ ಆಂಥೋನಿಯ ಕೈಯಲ್ಲಿ ಬೆಳಗಾವಿಯ ಹುಚ್ಚ ಮತ್ತು ಶ್ರೀನಾಥನಿಗೆ ಎರಡು ಸೆಟ್ ಪುಸ್ತಕಗಳನ್ನು ಕಳುಹಿಸಿ ಮನೆಯಲ್ಲಿ ಕಳೆದಿವೆಯೆಂದು ಮತ್ತೆ ಪಡೆಯುತ್ತಿದ್ದನು. ಇದು ತಂದೆಗೆ ಗೊತ್ತಾಗಿ ಒದೆ ತಿಂದು ಉಪವಾಸ ಬಿದ್ದು, ಬೆಳಗ್ಗೆ ಎದ್ದು ಬೆಳಗಾವಿಗೆ ಹೋದನು.

ನಾನು ಚಾಮಯ್ಯ ಮತ್ತು ಆಂಥೋನಿ ಸೇರಿ ಬೆಳಗಾವಿಗೆ ಹೋದಾಗ ಕುಶಾಲನು ಹರಕು ಗೋಣಿ ಚೀಲದ ಮೇಲೆ ರೊಟ್ಟಿ ಜಗಿಯುತ್ತಿದ್ದನು. ನಮ್ಮನ್ನು ನೋಡಿದ ಕೂಡಲೇ ಎದರಿ ಅಡಗಿ ಕುಳಿತನು. ಹೇಗೋ ಅವನನ್ನು ಸಮಾಧಾನ ಪಡಿಸಿ ಕರೆದು ತಂದೆವು. ಚಾಮಯ್ಯನವರು ಮಗನನ್ನು ತಬ್ಬಿ ಅತ್ತುಬಿಟ್ಟರು. ಈ ಕಥೆಯಲ್ಲಿ ಕುಶಾಲನ ಒಳ್ಳೆಯ ಗುಣವೇ ವಿಶೇಷ ವಸ್ತುವಾಗಿದೆ. ದೊಡ್ಡವರಲ್ಲಿರುವಂತೆ ಮಕ್ಕಳಲ್ಲಿ ಮೇಲು-ಕೀಳು ಎಂಬ ಯಾವುದೇ ಸಂಕುಚಿತ ಭಾವನೆಯಿರುವುದಿಲ್ಲ. ಅವರು ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುತ್ತಾರೆ. ಹಾಗೆಯೇ ಈ ಕಥೆಯಲ್ಲಿ ಕುಶಾಲನು ಬೆಳಗಾವಿಯ ಹತ್ತಿರದ ಹಳ್ಳಿಯಲ್ಲಿರುವಾಗ ಕಡುಬಡ ಮಕ್ಕಳ ಜೊತೆಗೆ ಉತ್ತಮ ಒಡನಾಟ ಮತ್ತು ಸ್ನೇಹವನ್ನು ಹೊಂದಿದ್ದನು. ತಂದೆ ವರ್ಗಮಾಡಿಸಿಕೊಂಡು ಈ ಊರಿಗೆ ಬಂದಾಗ ತಮ್ಮ ಸ್ನೇಹಿತರ ಓದಿಗೆ ಪುಸ್ತಕಗಳ ಸಹಾಯ ಮಾಡಲು ತನ್ನ ಬಳಿಯಿರುವ ಪುಸ್ತಕಗಳನ್ನೇ ಕೊಟ್ಟು, ಅವು ಕಳೆದಿವೆಯೆಂದು ಸುಳ್ಳು ಹೇಳಿ ಹೊಸ ಪುಸ್ತಕಗಳನ್ನು ಪಡೆಯುವ ತಂತ್ರವನ್ನು ಇಲ್ಲಿ ಕುಶಾಲನು ಮಾಡುತ್ತಾನೆ. ಅದು ತನ್ನ ತಂದೆಗೆ ಗೊತ್ತಾಗಿ, ಮಗನಿಗೆ ಶಿಕ್ಷಿಸಿದಾಗ ಅವನು ಅಲ್ಲಿಂದ ಸ್ನೇಹಿತರನ್ನು ಹುಡುಕಿಕೊಂಡು ಬೆಳಗಾವಿಗೆ ಹೋದನು. ಇಲ್ಲಿ ಕುಶಾಲನ ಒಳ್ಳೆಯತನ ಅವನ ತಂದೆಗೆ ಇರುವುದಿಲ್ಲ. ಆತ ಸದಾ ಸಿಡಿಮಿಡಿ ಎನ್ನುವ ಮನುಷ್ಯನಾಗಿದ್ದನು. ಆದರೆ ಮಗ ಸ್ನೇಹಜೀವಿಯಾಗಿ ತನ್ನ ಕೈಲಾದ ಸಹಾಯವನ್ನು ಮಾಡುವುದು ಇತರೆ ಮಕ್ಕಳ ಮನಸ್ಸಿಗೆ ನಾಟುವಂತ ಕೆಲಸವೆನ್ನಬಹುದು.

* ಈಶ್ವರ ಚಂದ್ರ ಅವರ 'ಕೂಗೆಲೆ ಕೂಗೆಲೆ ಕೋಗಿಲೆ' ಈ ಕಥೆಯು ಬಹಳ ಹಿಂದಿನ ಕಥೆಯನ್ನು ನೆನಪಿಸುವಂತಿದೆ. ಆಗ ಕೋಗಿಲೆಗೆ ಹಾಡುವುದಕ್ಕೆ ಇನ್ನು ಬರುತ್ತಿರಲಿಲ್ಲ. ಆದರೆ

ಅದಕ್ಕೆ ಹಾಡುವುದನ್ನು ಕಲಿಯಲು ತುಂಬಾ ಆಸೆ ಹೇಳಿಕೊಡುವವರು ಯಾರು? ಅದು ಒಂದು ಸರೋವರದ ಬಳಿಗೆ ಹಾರಿಕೊಂಡು ಹೋದಾಗ ಅಲ್ಲಿ ಬಿಳಿ ಹಂಸಗಳು ನೀರಿನಲ್ಲಿ ತೇಲಾಡುತ್ತಿದ್ದವು. ಒಂದು ಹಂಸ ದಡದ ಬಳಿ ಬಂದಾಗ ಅದನ್ನು ನೋಡಿದ ಕೋಗಿಲೆ ಹಂಸ, ಹಂಸ ನನಗೆ ಹಾಡು ಕಲಿಯಲು ತುಂಬ ಆಸೆಯಿದೆ. ದಯವಿಟ್ಟು ಹೇಳಿಕೊಡುತ್ತೀಯಾ? ಎಂದು ಕೇಳಿತು. ಆಗ ಆ ಹಂಸವು ತುಂಬ ಗರ್ವದಿಂದ 'ಥೂ, ನಿನ್ನಂಥ ಕಪ್ಪು ಹಕ್ಕಿಗೆ ಹಾಡು ಬೇರೆ ದಂಡ!' ಎಂದು ಹೇಳಿ ತನ್ನ ಪಾಡಿಗೆ ಹಾಡಲು ಶುರು ಮಾಡಿತು. ಅದರ ಕಂಠವು ಕರ್ಕಶವಾಗಿತ್ತು. ಸದ್ಯ ಇದು ನನಗೆ ಹಾಡು ಹೇಳಿಕೊಡಲು ಒಪ್ಪದಿದ್ದುದು ಒಳ್ಳೆಯದು ಎಂದು ಕೋಗಿಲೆ ಪುರ್ರನೆ ಹಾರಿಕೊಂಡು ಹೋಯಿತು.

ಮುಂದೆ ಕೆರೆಯ ಬಳಿ ಬಂದಾಗ ಕೊಕ್ಕರೆಯನ್ನು ಕಂಡ ಕೋಗಿಲೆಯೂ ಕೊಕ್ಕರೆ, ಕೊಕ್ಕರೆ ನನಗೆ ಹಾಡಲು ತುಂಬ ಇಷ್ಟ, ಹಾಡು ಹೇಳಿಕೊಡು ಎಂದು ಕೇಳಿತು. ಆಗ ಕೊಕ್ಕರೆಯು ಸೊಕ್ಕಿನಿಂದ 'ಥೂ ನಿನ್ನಂಥ ಕಪ್ಪು ಹಕ್ಕಿಗೆ ಹಾಡು ಬೇರೆ ಕೇಡು' ಎಂದು ಬೈದು ತನ್ನ ಕಾಡಿಗೆ ಹಾರಿಕೊಂಡು ಹೋಯಿತು. ಕೊಕ್ಕರೆಯ ಕಂಠವು ಕರ್ಕಶವಾಗಿತ್ತು. ಸದ್ಯ ಇದು ನನಗೆ ಹಾಡು ಹೇಳಿಕೊಡಲು ಒಪ್ಪದಿದ್ದದು ಒಳ್ಳೆಯದೇ ಆಯಿತು ಎಂದು ಕೋಗಿಲೆ ಪುರ್ರನೆ ಹಾರಿಕೊಂಡು ಹೋಯಿತು.

ನಂತರ ಕಾಡಿನೊಳಗೆ ಬಂದಾಗ ಅಲ್ಲಿ ಒಂದು ನವಿಲು ರೆಕ್ಕೆ ಬಿಚ್ಚಿ ನರ್ತನ ಮಾಡುತ್ತಿತ್ತು. ಇಂಥ ಸುಂದರ ಹಕ್ಕಿಯ ಕಂಠ ಚೆನ್ನಾಗಿರಬಹುದು ಇದರಿಂದ ಹಾಡು ಕಲಿಯಬೇಕು ಎಂದುಕೊಂಡು ಕೋಗಿಲೆ ಅದನ್ನು 'ನವಿಲೇ ನವಿಲೇ ನನಗೆ ಹಾಡು ಕಲಿಯಲು ತುಂಬ ಇಷ್ಟ, ದಯವಿಟ್ಟು ಹೇಳಿಕೊಡ್ತಿಯಾ' ಎಂದಾಗ ಆ ನವಿಲು ಗರ್ವದಿಂದ 'ಥೂ ನಿನ್ನಂಥ ಕಪ್ಪು ಹಕ್ಕಿಗೆ ಹಾಡು ಬೇರೆ ಕೇಡು' ಎಂದು ಗದರಿತು. ಈ ನವಿಲಿನ ಕಂಠವು ಕರ್ಕಶವಾಗಿತ್ತು. ಇದು ಹಾಡು ಹೇಳಿಕೊಡಲು ಒಪ್ಪದಿದ್ದುದೇ ಒಳ್ಳೆಯದಾಯಿತು ಎಂದುಕೊಳ್ಳುತ್ತಾ ನನಗೆ ಹಾಡನ್ನು ಹೇಳಿಕೊಡಲು ಯಾರು ಸಿಗಲಿಲ್ಲ ಎಂದುಕೊಳ್ಳುತ್ತಾ ನದಿಯ ದಡದ ಮಾವಿನ ತೋಪಿನಲ್ಲಿ ಕುಳಿತು ಯೋಚಿಸತೊಡಗಿತ್ತು.

ಆಗ ಇದ್ದಕ್ಕಿದ್ದಂತೆಯೇ ನದಿಯ ಕಡೆಯಿಂದ ಮಧುರವಾದ ಜುಳು ಜುಳು ಧ್ವನಿ ಕೇಳಿಸಿತು. ಗಾಳಿ ಬೀಸಿತು, ತೋಪಿನಲ್ಲಿ ಮರ ಮರವೆಂದು ಮರ್ಮರ ಹುಲ್ಲುಗಾವಲಿನಲ್ಲಿ ಸುಳಿದ ಗಾಳಿ ಸುಂಯ್ ಎಂದಿತು. ಕೋಗಿಲೆಗೆ ಇದು ಸಂತೋಷವೆನಿಸಿತು. ಮೂರು ದಿನಗಳ ಕಾಲ ಜಾಗ ಬಿಟ್ಟು ಕದಲದೆ ಆ ಧ್ವನಿಗಳನ್ನು ಮನಸ್ಸಿನಲ್ಲಿಟ್ಟು ಆಲಿಸುತ್ತಾ ಕುಳಿತುಕೊಂಡಿತು. ನಂತರ ವಸಂತಮಾಸ ಬಂದಾಗ ಮಾವಿನ ಮರ ಚಿಗುರೊಡೆಯಿತು. ಕೋಗಿಲೆಯು ಪ್ರಕೃತಿಯಿಂದ ತಾನು ಕಲಿತ ಹಾಡನ್ನು ಹಾಡತೊಡಗಿತು. ಕುಹೂ... ಕುಹೂ... ಎಂದು ಮೋಹಕವಾಗಿ

ಹಾಡಿದಾಗ ಈ ಹಾಡನ್ನು ಕೇಳಿದ ಕಾಡಿನ ಪ್ರಾಣಿಗಳೆಲ್ಲಾ ಬಂದು ಆಲಿಸಿದವು. ಅದರಲ್ಲಿ ಹಂಸ, ನವಿಲು, ಕೊಕ್ಕರೆಗಳು ಇದು ಇಂಪಾಗಿ ಹಾಡುವುದನ್ನು ಕಂಡು ನಾಚಿದವು. ಇದಾವುದನ್ನು ಗಮನಿಸದೆ ಕೋಗಿಲೆಯು ತನ್ನ ಪಾಡಿಗೆ ತಾನೂ ಹಾಡುತ್ತಿತ್ತು.

ಈ ಕಥೆಯಲ್ಲಿ ಈಶ್ವರ ಚಂದ್ರರು ಕೋಗಿಲೆಯು ಹಾಡನ್ನು ಕಲಿಯಲು ಬಯಸುವುದನ್ನು ಕಥಾವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಕೋಗಿಲೆಯು ತಾನು ಹಾಡು ಕಲಿಯಲು ತುಂಬಾ ಇಷ್ಟವಿದ್ದರೂ ಅದಕ್ಕೆ ಹಾಡನ್ನು ಹೇಳಿಕೊಡಲು ಹಂಸವಾಗಲಿ, ನವಿಲಾಗಲಿ ಮತ್ತು ಕೊಕ್ಕರೆಯಾಗಲಿ ಮುಂದೆ ಬರಲಿಲ್ಲ. ಅವುಗಳೆಲ್ಲವು ಕೋಗಿಲೆಯು ಕಪ್ಪು ಬಣ್ಣದ ಹಕ್ಕಿ ಅದಕ್ಕೆ ಏಕೆ ಹಾಡು ಎಂದು ಮುದಲಿಸಿದವು. ನಂತರದಲ್ಲಿ ಕೋಗಿಲೆಯು ನದಿಯ ದಡದಲ್ಲಿ ಕುಳಿತು ಅಲ್ಲಿಯ ಜುಳು ಜುಳು ನಾದ, ತಂಪಾದ ಗಾಳಿಗೆ ಪ್ರಭಾವಿತವಾಗಿ ತಾನೇ ಸ್ವತಃ ಹಾಡನ್ನು ಹಾಡಲು ಕಲಿತು ಕುಹೂ... ಕುಹೂ... ಎಂದು ಹಾಡುವುದನ್ನು ಕಲಿಯಿತು. ಇಲ್ಲಿ ಲೇಖಕರು ಈ ಕಥೆಯ ಮೂಲಕ ನಾವು ಏನನ್ನಾದರೂ ಕಲಿಯಬೇಕಾದರೆ ಬೇರೆಯವರನ್ನು ಅವಲಂಬಿಸದೆ ನಮ್ಮ ಸ್ವಪ್ರಯತ್ನದಿಂದ ಶಿಸ್ತಿನಿಂದ ಕಲಿಯಲು ಪ್ರಯತ್ನಿಸುವುದು ಒಳ್ಳೆಯದು. ಇದಕ್ಕೆ ಶ್ರದ್ಧೆ, ಬಹಳ ಮುಖ್ಯವಾಗಿರುತ್ತದೆ. ಇದಕ್ಕೆ ಉತ್ತಮ ಇನ್ನೊಂದು ಉದಾಹರಣೆಯನ್ನು ಕೊಡುವುದಾದರೆ ಏಕಲವ್ಯ ಎನ್ನಬಹುದು.

ಕಲಿಯುವಿಕೆಗೆ ಪರಿಶ್ರಮ, ಶ್ರದ್ಧೆ ಪ್ರಮಾಣಿಕತೆಗಳಿದ್ದರೆ ಯಾರ ಮಾರ್ಗದರ್ಶನದ ಅಗತ್ಯವಿಲ್ಲ ಎನ್ನುವ ತಂತ್ರವನ್ನು ಈ ಕಥೆಯ ಮೂಲಕ ಹೇಳಲಾಗಿದೆ. ಇಲ್ಲಿ ಕೋಗಿಲೆಗೆ ಹಾಡನ್ನು ಕಲಿಸಲು ಯಾರೂ ಮುಂದಾಗಲಿಲ್ಲವಾದರೂ ಅದು ತನ್ನ ಸ್ವಂತ ಪ್ರಯತ್ನದಿಂದ ಹಾಡನ್ನು ಕಲಿತು ಇಂಪಾಗಿ ಹಾಡಿದಾಗ ಅದನ್ನು ಕೇಳಲು ಎಲ್ಲರೂ ಬಂದರೂ ಅಲ್ಲದೆ ನಿನಗೇಕೆ ಹಾಡು ಎಂದ ಹಂಸ, ನವಿಲು ಮತ್ತು ಕೊಕ್ಕರೆಗಳು ಕೋಗಿಲೆಯ ಹಾಡನ್ನು ಕೇಳಿ, ಹಾಡಲು ಬಣ್ಣ ಮುಖ್ಯವಲ್ಲ ಎಂದರಿತು. ನಾಚಿಕೆಪಟ್ಟವು. ಈ ಕಥೆಯು ಮಕ್ಕಳಿಗೆ ಸ್ಫೂರ್ತಿ ನೀಡುವಂತಾಗಿದೆ.

* ಪಳಪಳ ಸೀತಾರಾಮ ಭಟ್ಟ ಮತ್ತು ಬೈಲ ಅವರು 'ಮಂತ್ರಿಯ ಆಯ್ಕೆ' ಕಥೆಯಲ್ಲಿ ದೇವಗಡದ ರಾಜನಿಗೆ ಸುಜನ್‌ಸಿಂಗ್ ಮುಖ್ಯಮಂತ್ರಿಯಾಗಿದ್ದ ಆತ ವಿದ್ಯಾವಂತ, ಬುದ್ಧಿವಂತ ಮತ್ತು ಗುಣವಂತನಾಗಿದ್ದು ಅವನಿಗೆ ತುಂಬಾ ವಯಸ್ಸಾಗಿತ್ತು. ಆತ ಒಂದು ದಿನ ರಾಜನ ಬಳಿ ಬಂದು ಮಹಾಸ್ವಾಮಿ, ನನಗೆ ವಯಸ್ಸಾಯಿತು. ಇನ್ನು ಕೆಲಸ ಮಾಡಲು ನನಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ಬೇರೊಬ್ಬ ಮಂತ್ರಿಯನ್ನು ನೇಮಿಸಿಕೊಂಡು ನನ್ನನ್ನು ನಿವೃತ್ತಗೊಳಿಸಿ ಎಂದು ಕೇಳಿದನು.

ಆಗ ರಾಜನು ನಿಮ್ಮ ಉತ್ತರಾಧಿಕಾರಿಯನ್ನು ನೀವೇ ಆರಿಸಿಕೊಡಬೇಕು ಎಂದನು. ಮಂತ್ರಿಯು ಒಪ್ಪಿ ಒಂದು ತಿಂಗಳ ಅವಧಿಯೊಂದಿಗೆ ಮರಳಿದನು. ಇತ್ತ ಹೊಸ ಮಂತ್ರಿಯ

ಸುದ್ಧಿ ಎಲ್ಲಾ ಕಡೆ ಹರಡಿ, ನೂರಾರು ಮಂದಿ ಅರಮನೆಗೆ ಬಂದು ವೃದ್ಧ ಮಂತ್ರಿಯನ್ನು ಕಂಡು ತಮ್ಮ ತಮ್ಮ ಅರ್ಹತೆಗಳನ್ನು ಕುರಿತು ಹೇಳಿದರು. ಎಲ್ಲರು ತಾವು ತುಂಬ ಕಲಿತವರು, ಬುದ್ಧಿವಂತರು, ಪರೋಪಕಾರಿಗಳು ಎಂದು ಹೇಳಿಕೊಂಡರು. ವೃದ್ಧಮಂತ್ರಿಯು ತನ್ನದೆ ಆದ ರೀತಿಯಲ್ಲಿ ಅವರನ್ನು ಪರೀಕ್ಷಿಸಿ, ಮತ್ತೆ ಬರಬೇಕು ಎಂದು ಹೇಳಿಕಳುಹಿಸಿದನು. ನಿಶ್ಚಿತ ದಿನದಂದು ರಾಜಧಾನಿಯಲ್ಲಿ ವಿವಿಧ ಸ್ಪರ್ಧೆಗಳಿಂದ ಕತ್ತಿವರಸೆ, ಬಿಲ್ಲುವಿದ್ಯೆ, ಮಲ್ಲವಿದ್ಯೆ ಮತ್ತು ಕುದುರೆ ಸವಾರಿ ಮೊದಲಾದ ಸ್ಪರ್ಧೆಗಳು ನಡೆದವು. ಈ ಸ್ಪರ್ಧೆಯಲ್ಲಿ ಭಾಗವಹಿಸಿ ಸಂಜೆ ಮನೆಗೆ ತೆರಳುವಾಗ ಅವರುಗಳಿಗೊಂದು ಎತ್ತಿನ ಗಾಡಿ ಕಂಡಿತು. ಅದು ಧಾನ್ಯದ ಚೀಲಗಳಿಂದ ತುಂಬಿತ್ತು. ವಯಸ್ಸಾದ ರೈತನೊಬ್ಬ ಗಾಡಿ ಹೊಡೆಯುತ್ತಿರುವಾಗ ಅದರ ಚಕ್ರಗಳು ರಸ್ತೆಯ ಕೆಸರಲ್ಲಿ ಹೂತು ಹೋಗಿದ್ದವು. ಆ ಮುದುಕ ರೈತನು ಅದನ್ನು ಎತ್ತಲು ಹೆಣಗಾಗುತ್ತಿದ್ದನು. ಆಗ ನೂರಾರು ಜನ ಯುವಕರು ಆ ದಾರಿಯಲ್ಲಿ ಹಾದುಹೋದರು. ಉಡುಗೆ ಕೆಸರಾದಿತ್ತೆಂದು ಮತ್ತು ತಮ್ಮ ಗೌರವಕ್ಕೆ ಧಕ್ಕೆಯಾಗುತ್ತದೆ ಎಂದು ಯಾರೂ ಆ ಗಾಡಿಯ ಕಡೆಗೆ ಸುಳಿಯಲಿಲ್ಲ. ಆ ವೃದ್ಧನು ಯಾರ ಸಹಾಯನು ಕೇಳಲಿಲ್ಲ. ಅಷ್ಟರಲ್ಲಿಗೆ ಯುವಕನೊಬ್ಬ ಅಲ್ಲಿಗೆ ಬಂದು ಮುದುಕನ ಅವಸ್ಥೆ ಕಂಡು ಮನಸ್ಸು ಕರಗಿ, ಕೂಡಲೇ ತನ್ನ ಕಚ್ಚೆಯನ್ನು ಎತ್ತಿಕಟ್ಟಿ, ಅಂಗಿಯ ಕೈಗಳನ್ನು ಮೇಲಕ್ಕೆ ಎತ್ತಿ ವೃದ್ಧನ ನೆರವಿಗೆ ಬಂದು, ಇಬ್ಬರೂ ಸೇರಿ ಎರಡು ಚಕ್ರಗಳಿಗೆ ಕೈಕೊಟ್ಟು ತಮ್ಮ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಗಾಡಿಯನ್ನು ತಳ್ಳಿದಾಗ ಹೂತುಹೋಗಿದ್ದ ಚಕ್ರಗಳು ಪಕ್ಕನೆ ಮೇಲಕ್ಕೆದ್ದವು. ಗಾಡಿ ಚಲಿಸಿತು. ಆ ವೃದ್ಧನು, ಯುವಕನಿಗೆ ಧನ್ಯವಾದ ಹೇಳಿ ದೇವರು ನಿನ್ನನ್ನು ಕಾಪಾಡಲಿ ಎಂದು ಹೊರಟನು.

ಅಲ್ಲಿಗೆ ಒಂದು ತಿಂಗಳ ಅವಧಿ ಮುಗಿಯುತ್ತಾ ಬಂತು ಹೊಸ ಮಂತ್ರಿಯ ಆಯ್ಕೆಯನ್ನು ಪ್ರಕಟಿಸುವ ದಿನ ಬಂದಿತು. ಅರಮನೆ ತುಂಬಾ ಜನ ತುಂಬಿದ್ದರು. ರಾಜನು ಸಭೆಗೆ ಆಗಮಿಸಿದನು. ಮತ್ತು ಮಂತ್ರಿಯಾಗುವವನು ಎಂಥವನಿರಬೇಕು ಎಂಬುದನ್ನು ವಿವರಿಸಿ, ತನ್ನ ಆಯ್ಕೆಯ ವ್ಯಕ್ತಿಯನ್ನು ಪರಿಚಯಿಸಿದನು. ಜನರ ಸಂರಕ್ಷಕನಾಗುವವನು ವಿದ್ಯಾವಂತ, ಬುದ್ಧಿವಂತನಾಗಿದ್ದರೂ ಸಾಲದು, ಆತ ಗುಣವಂತನೂ ಆಗಿರಬೇಕು. ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು ಎಂಬ ಕಳಕಳಿ ಅವನಲ್ಲಿರಬೇಕು. ಪಂಡಿತ ಜಾನಕೀನಾಥನಿಗೆ ಈ ಎಲ್ಲ ಸದ್ಗುಣಗಳಿವೆ. ಮಂತ್ರಿಯಾಗಲು ಅವನೇ ಅತ್ಯಂತ ಅರ್ಹವ್ಯಕ್ತಿ ಎನ್ನುವ ಭರವಸೆ ನನಗಿದೆ ಎಂದನು. ಮತ್ತು ಹಿಂದಿನ ದಿನದ ರೈತನ ಎತ್ತಿನಗಾಡಿಯ ಕಥೆಯನ್ನು ಹೇಳಿ ಅವನು ಯೋಗ್ಯನೆಂದು ರಾಜನಿಗೆ ಪರಿಚಯಿಸಿದನು. ಜನರು ಸಂತೋಷಗೊಂಡರು.

ಈ ಕಥೆಯಲ್ಲಿ ಭಟ್ಟರು ಮತ್ತು ಬೈಲ ಅವರು ಇಡೀ ರಾಜ್ಯದ ಜವಾಬ್ದಾರಿಯನ್ನು ಹೊರುವ ಮಂತ್ರಿಯು ಹೇಗಿರಬೇಕು ಎನ್ನುವ ವಸ್ತುವನ್ನು ಆಯ್ಕೆ ಮಾಡಿಕೊಂಡು ರಾಜನಷ್ಟೇ ಜವಾಬ್ದಾರಿಯು ಈತನಿಗೂ ಇರುತ್ತದೆ. ಆ ಮಂತ್ರಿಯೇ ಆ ರಾಜ್ಯದ ಕೇಂದ್ರಬಿಂದು. ಆತ

ಬರಿ ವಿದ್ಯಾವಂತ, ಬುದ್ಧಿವಂತನಾಗಿದ್ದರೆ ಸಾಲದು ಆತನಲ್ಲಿ ಮುಖ್ಯವಾಗಿ ಒಳ್ಳೆಯ ಗುಣವಂತನಾಗಿರಬೇಕು. ಮತ್ತು ವಿನಯಶೀಲನಾಗಿ ರಾಜ್ಯದ ಹಿತರಕ್ಷಕನು ಆಗಿರಬೇಕು. ಇಂತ ಸದ್ಗುಣ ಮಂತ್ರಿಯನ್ನು ಹುಡುಕುವ ವೃದ್ಧಮಂತ್ರಿಯು ಎಲ್ಲಾ ಪರೀಕ್ಷೆಗಳನ್ನು ಮಾಡುವುದರ ಜೊತೆಗೆ ಅವರನ್ನು ಹೊಸ ಹೊಸ ತಂತ್ರಗಳಿಂದ ಪರೀಕ್ಷೆ ಮಾಡುವುದು ಇಲ್ಲಿ ತುಂಬಾ ವಿಶೇಷವಾಗಿದೆ. ಕೊನೆಗೆ ಒಳ್ಳೆಯ ಗುಣವುಳ್ಳ ಮಂತ್ರಿಯನ್ನು ಆಯ್ಕೆ ಮಾಡಿ ರಾಜನಿಗೆ ಒಪ್ಪಿಸುವುದು ಈ ಕಥೆಯಲ್ಲಿ ಆತನ ಕರ್ತವ್ಯ ಪಾಲನೆಯನ್ನು ಪ್ರತಿಬಿಂಬಿಸುತ್ತದೆ.

* ವಿಶ್ವಜ ಕಾಡದೇವರ ಅವರ 'ಬುದ್ಧಿವಂತ ರಾಜ' ಕಥೆಯಲ್ಲಿ ಒಂದು ಕಾಲದಲ್ಲಿದ್ದ ರಾಜನಿಗೆ ತನ್ನ ಹೊಸ ಪ್ರಧಾನಿಯನ್ನು ಆಯ್ಕೆ ಮಾಡುವುದೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ಒಟ್ಟು ಮೂವರು ಈ ಪ್ರಧಾನಿ ಹುದ್ದೆಗೆ ಸ್ಪರ್ಧೆ ನಡೆಸಿದ್ದರು. ಈ ಮೂವರು ರಾಜನಿಗೆ ಆಪ್ತವಾಗಿದ್ದವರೆ ಆಗಿದ್ದರು. ಆದ್ದರಿಂದ ರಾಜನಿಗೆ ಯಾರನ್ನು ಪ್ರಧಾನಿಯನ್ನಾಗಿ ಮಾಡುವುದೆಂದು ಚಿಂತೆಯಾಗಿತ್ತು.

ಬಹಳ ದಿನಗಳವರೆಗೂ ರಾಜ ಯಾವ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ರಾಜ ಯಾರನ್ನು ಪ್ರಧಾನಿಯನ್ನಾಗಿ ಮಾಡಬೇಕೆಂದು ಚಿಂತಿಸತೊಡಗಿದನು. ರಾಜನ ಚಿಂತೆಯನ್ನು ದೂರಮಾಡಲು ರಾಜನ ಆಸ್ಥಾನಿಕರೆಲ್ಲರೂ ನದಿಯ ದಡದ ಮೇಲೆ ಹೋಗಿ ಅಲ್ಲಿಯೇ ಊಟ ಮಾಡಬಹುದು ಎಂದು ಎಲ್ಲ ತೀರ್ಮಾನಿಸಿ ಹೊರಟರು. ಅಂದು ಪ್ರಧಾನಿ ಹುದ್ದೆಗೆ ಆಯ್ಕೆಯಾಗುವ ಹಂಬಲವಿರುವ ಮೂರು ಜನರು ನದಿಯ ದಂಡೆಗೆ ಬಂದಿದ್ದರು. ಎಲ್ಲರೂ ಸೇರಿ ಆ ಕೂಟದಲ್ಲಿ ಊಟ ಮಾಡಿ ಸಂತೋಷಪಟ್ಟರು. ಆದರೆ ಊಟವಾದ ನಂತರ ರಾಜ ಮತ್ತೆ ಚಿಂತೆಯಲ್ಲಿ ಮುಳುಗಿದ. ಹಾಗೆ ದಂಡೆಗೆ ಬಂದು ಕುಳಿತಾಗ ಸೂರ್ಯನ ಬಿಸಿಲಿಗೆ ಹೊಳೆಯುತ್ತ ಹರಿಯುವ ನೀರಿನ ಕಡೆಗೆ ನೋಡುತ್ತಾ ಕುಳಿತ ರಾಜನಿಗೆ ನೀರಿನಲ್ಲಿ ಒಂದು ದುಂಡಾದ ವಸ್ತು ಹರಿದು ಹೋಗುವುದು ಕಂಡಿತು. ಕೂಡಲೇ ಆ ಮೂವರನ್ನು ಕರೆದು "ನೋಡಿ ಅಲ್ಲಿ ಹೋಗುತ್ತಿರುವ ವಸ್ತು ಯಾವುದು ಹೇಳಿ"[೧೬] ಎಂದನು.

ಆಗ ಮೊದಲಿನವನು ಅದರತ್ತ ನೋಡುತ್ತ ಮಹಾರಾಜರೇ ಹರಿದು ಹೋಗುತ್ತಿರುವ ವಸ್ತು ಯಾವುದೋ ಒಂದು ಹಣ್ಣು ಆಗಿರಬಹುದೆಂದರೆ, ಎರಡನೆಯವನು ರಾಜರೇ, ಹರಿದು ಹೋಗುತ್ತಿರುವುದು ಬೇರೆ ಯಾವುದೂ ಅಲ್ಲ, ಅದು ಮಾವಿನ ಹಣ್ಣು ಎಂದನು. ಆದರೆ ಆ ಮೂರನೆಯವನು ರಾಜನು ನೋಡುವ ವೇಳೆಗಾಗಲೇ ಬಟ್ಟೆಯನ್ನು ಕಳಚಿ, ರಾಜನ ಅಪ್ಪಣೆಯು ಇಲ್ಲದೆ ನೀರಿಗೆ ಧುಮುಕಿ, ಹರಿದು ಹೋಗುತ್ತಿರುವ ಆ ವಸ್ತುವನ್ನು ಕೈಯಲ್ಲಿ ಹಿಡಿದುಕೊಂಡು ಬಂದು, "ಮಹಾರಾಜರೇ ಇದು ಮಾವಿನ ಹಣ್ಣು"[೧೭] ಎಂದು ಹೇಳಿ ರಾಜನಿಗೆ ಕೊಟ್ಟನು.

ಆಗ ರಾಜನು ಸಂತೋಷಗೊಂಡು ಪ್ರಧಾನಿಯ ಆಯ್ಕೆ ಆಯಿತೆಂದು ನಿಟ್ಟುಸಿರು ಬಿಟ್ಟು

ಅರಮನೆ ಕಡೆಗೆ ಹೊರಟನು. ಆದರೆ ಮರುದಿನ ರಾಜಸಭೆಯನ್ನು ಕರೆದು ನಾನು ನನ್ನ ರಾಜ್ಯದ ಹೊಸ ಪ್ರಧಾನಿಯನ್ನು ಆಯ್ಕೆ ಮಾಡಿರುವೆ. ನಂತರ ಯಾವ ವ್ಯಕ್ತಿ ಯಾವುದೇ ಅಪ್ಪಣೆಯಿಲ್ಲದೆ ತನ್ನ ಜೀವದ ಬಗ್ಗೆ ವಿಚಾರ ಮಾಡದೇ ನೀರಿನಲ್ಲಿ ಧುಮುಕಿ ಮಾವಿನ ಹಣ್ಣನ್ನು ತಂದನೋ ಅವನೇ 'ನಮ್ಮ ಮುಂದಿನ ಪ್ರಧಾನಿ' ಎಂದನು. ಎಲ್ಲರೂ ಸಂತೋಷಪಟ್ಟರು. ಈ ಕಥೆಯಲ್ಲಿ ರಾಜನು ಯಾರು ನಮ್ಮ ಪ್ರಧಾನಿ ಎಂದು ಚಿಂತಿಸುತ್ತಿದ್ದಾಗ ಇದ್ದ ಮೂವರಲ್ಲಿ ಯೋಗ್ಯ ಯಾರು ಎಂದು ಹುಡುಕುವಲ್ಲಿ ಯಶಸ್ವಿಯಾದ ರಾಜನು ಬರೀ ಲೆಕ್ಕ ಹಾಕುತ್ತ ಕುಳಿತುಕೊಳ್ಳದೇ ನೀರಿನಲ್ಲಿ ಧುಮುಕಿ ಕರ್ತವ್ಯಪ್ರಜ್ಞೆ ಮೆರೆದ ಮೂರನೆಯ ವ್ಯಕ್ತಿಯ ಕ್ರಿಯಾಶೀಲ ವರ್ತನೆ ನನಗೆ ಹೆಚ್ಚು ಮೆಚ್ಚುಗೆಯಾಯಿತು ಎಂದನು.

ಈ ಕಥೆಯಲ್ಲಿ 'ಮಾತಿಗಿಂತ ಕೃತಿಯೇ ಲೇಸು' ಎನ್ನುವ ತತ್ವವನ್ನು ಅಡಗಿಸಲಾಗಿದೆ. ಇದು ಮಕ್ಕಳಲ್ಲಿಯು ಯೋಚನಾಶಕ್ತಿಯನ್ನು ಬೆಳೆಸುವಲ್ಲಿ ಸಹಾಯಕವಾಗಿದೆ.

ಕನ್ನಡದ ಪ್ರಮುಖ ಮಕ್ಕಳ ಕಥೆಗಳೆಂದರೆ

* ಬೇರೆಯವರಿಗೆ ಕೇಡುಮಾಡಲು ಹೋಗಿ ತನ್ನ ಸಂತತಿಯನ್ನೇ ಹಾಳುಮಾಡಿಕೊಂಡ ಕೊಕ್ಕರೆಯ ಕಥೆ	ಪಂಚತಂತ್ರದ ನೀತಿ ಕಥೆ
* ಮೂರು ಮೀನುಗಳ ಕಥೆ	ಪಂಚತಂತ್ರ ನೀತಿ ಕಥೆ
* ನಿರ್ಜನ ನಗರದಲ್ಲಿ ಬೊಂಬೆಗಳ ಸಾಮ್ರಾಜ್ಯ	ಕಥಾಸರಿತ್ಸಾಗರದಿಂದ
* ಮಾಡಿದ್ದುಣ್ಣೋ ಮಹಾರಾಯ	ಕಥಾಸರಿತ್ಸಾಗರ
* ಸವತಿಯರು ಮಗುವಿಗಾಗಿ ಜಗಳವಾಡಿದ್ದು	ನೀತಿ ಚಿಂತಾವಣಿ
* ವಜ್ರಬಾಹುವೆಂಬ ದೊರೆ	ನೀತಿ ಚಿಂತಾವಣಿ
* ಮಲ್ಲವ್ವ, ಬೀರಕ್ಕ	ನೀತಿ ಚಿಂತಾಮಣಿ
* ಲೀಲಾ ಹೊಸಬಳಾದಳು	ಹೊಯಿಸಳ
* ದೆವ್ವದ ಮನೆ	ಶಂ.ಗು. ಬಿರಾದಾರ
* ಮೂರ್ಖ ಬಾವಲಿ	ಶಂ.ಗು. ಬಿರಾದಾರ
* ಸಹಾಯ ಮಾಡಿದ ಕೋತಿಗಳು	ಕುಮಾರ ವೆಂಕಣ್ಣ
* ದುರಾಸೆಯ ಫಲ	ಕೋರಗಲ್ ವಿರುಪಾಕ್ಷಪ್ಪ
* ಅತಿಆಸೆ ಗತಿಗೇಡು	ಎಚ್.ಆರ್. ಚಂದ್ರವದನರಾವ್
* ನಿಜವಾದವರು ಯಾರು?	ಕೆ.ಎಸ್. ಗೋಪಾಲ ಶ್ರೀವತ್ಸ

* ಮೂರ್ಖ ಕಾಗೆ	ಗಣೇಶ ಪಿ. ನಾಡೋರ
* ನಿಜವಾದ ಆಸ್ತಿ	ಶಿವರಾಂ ಭಟ್
* ಕರುಣಾಳು ತಂದೆ	ಗೋಪಾಲಕೃಷ್ಣ
* ಬೆವರಿನ ಬೆಲೆ	ಮಧುಕೇಶ್ವರ ಬೆಳಗಲಿ
* ಮೂಢನಂಬಿಕೆ	ಹ.ಮ. ಪೂಜಾರ
* ಬುದ್ಧಿಕಲಿತ ಪ್ರಾಣಿಗಳು	ಹ.ಮ. ಪೂಜಾರ
* ಸೋಮಾರಿ ತಿಮ್ಮ	ಎಂ.ಆರ್. ಶಿವಶಂಕರ್
* ಇಲಿ ಬೋನಿನಲ್ಲಿ ಅಳಿಲು	ಎಂ.ಆರ್. ಶಿವಶಂಕರ್
* ಹೋತದ ಜಾಣತನ	ಮುನಿಯಾಲಾ ಗಣೇಶ್ ಶೆಣೈ
* ವಿದ್ಯೆ-ಉಪಾಸನೆ	ಮೂರ್ತಿ ರಾಮನಾಥಪುರ
* ಪ್ರಾಮಾಣಿಕತೆಯ ಪರೀಕ್ಷೆ	ಪ. ರಾಮಕೃಷ್ಣಶಾಸ್ತ್ರಿ
* ಒಳ್ಳೆ ಗುಣವೇ ದೊಡ್ಡತನ	ಪ. ರಾಮಕೃಷ್ಣ ಶಾಸ್ತ್ರಿ
* ಪ್ರೀತಿಯ ಗುಬ್ಬಿ	ಎನ್. ವೇದಮೂರ್ತಿ
* ಆಮೆಯ ಸ್ವಾರ್ಥ	ಬಿ. ಸುಬ್ರಾಯ ಅಡಿಗ
* ಪ್ರಾಣಿ ದಯೆ	ಎಚ್.ಆರ್. ಲೀಲಾವತಿ
* ಸಾಧು ಮತ್ತು ಠಕ್ಕ	ಬಿ. ವಾಸುದೇವ ವರ್ಣ
* ಕುದುರೆ ಯಾರದು?	ಬಿ. ವಾಸುದೇವ ವರ್ಣ
* ಟೊಪ್ಪಿಯ ಪವಾಡ	ಬಿ. ವಾಸುದೇವ ವರ್ಣ
* ಉತ್ತಮ ದರ್ಜೆ	ಎನ್.ಕೆ. ಲಕ್ಷ್ಮಿ
* ತಿಂಡಿಪೋತ ತೋಳ	ಸೂ. ಸುಬ್ರಮಣ್ಯಂ
* ಪಡ್ಡೆ ಹುಡುಗರ ಪ್ರವಾಸ	ನೀಲಾಂಬರಿ
* ಬಡವರ ಬಂಧು	ಕೃ ನಾರಾಯಣರಾವ್
* ಪಂಚಪಾಂಡವರ ದೀಪಾವಳಿ	ಕೃ ನಾರಾಯಣರಾವ್
* ಕ್ರಾಂತಿವೀರ ಮದನಲಾಲ್ ಧೀಂಘ್ರಾ	ಕೃ ನಾರಾಯಣರಾವ್
* ಕುದುರೆ ಕಲಿತ ಪಾಠ	ಕೆ.ಎಂ. ಸಂಗಣ್ಣವರ
* ದೊಡ್ಡವರ ಸಂಘ	ಮಲ್ಲಿಕಾರ್ಜುನ ಹುಲಗಬಾಳಿ

* ನಾಯಿ ಮತ್ತು ಯಜಮಾನ	ಬಿ.ಟಿ. ಸತೀಶ್
* ಆಪತ್ತಿಗೆ ಸಂಶಯವೇ ಕಾರಣ	ಬಾಬೋಜಿರಾವ್
* ಮಟ್ಟಿನಲ್ಲೇ ಚಿನ್ನವಿದೆ	ಸಂಗಮೇಶ ಗುಜಗೊಂಡ
* ಸುಳ್ಳಿನ ಫಲ	ರಘುಸುತ
* ಹಾವು ಮುಂಗುಸಿಯ ಸಂಧಾನ	ಎಸ್.ಎ. ಚಂಗಾವಿ
* ಬುದ್ಧನ ಸಲಹೆ	ಡಾ. ನಿರುಪಮ
* ಬಯಸದೆ ಬಂದ ಭಾಗ್ಯ	ಮೋಹನ್ ವರ್ಣೇಕರ್
* ಅತ್ಯಂತ ಕೆಟ್ಟ ವಸ್ತು	ಡಿ.ಎನ್. ಶ್ರೀನಾಥ್
* ಕುಯುಕ್ತಿಯ ಫಲ	ಡಿ.ಎನ್. ಶ್ರೀನಾಥ್
* ಹಾವಿನ ಪೂಜೆ	ಗೌರಿ ಅಭಿ
* ದುಡಿಮೆಯ ಸುಖ	ಗೌರಿ ಅಭಿ
* ಬಡರೈತನ ಜಾಣ ಮಗಳು	ಮಂಗಳಗೌರಿ
* ಅರಸನ ಆಸ್ತಿ	ಪವನ್‌ಕುಮಾರ ಗಾಯಕವಾಡ
* ಆನೆಯ ತೂಕ	ಎನ್ಕೆ. ಸುಬ್ರಹ್ಮಣ್ಯ
* ಜಾಣ ಮೊಲ	ಎನ್.ಕೆ. ಸುಬ್ರಹ್ಮಣ್ಯ
* ಅತಿಆಸೆ ಗತಿಗೇಡು	ವೆಂಕಟಾಚಲ
* ದೊಡ್ಡಮರಾ	ಸುರೇಶ್ ವಗ್ಗಾ
* ಅಸೂಹೆ ತಂದ ಅನಾಹುತ	ಎಚ್. ಗವಿಸಿದ್ದಯ್ಯ
* ಸ್ನೇಹ ಜೀವನ	ಈಶ್ವರ ಶಾಪುರಕರ್
* ಕುತಂತ್ರಿ ಶಾಸ್ತ್ರಿ	ದಿನೇಶ್ ಸಾರಂಗ
* ಕೋಪ ಬಂದಾಗ...	ವೆಂ. ಮಂಜುನಾಥ
* ಮೂರ್ಖ ಕತ್ತೆ	ಅನ್ನಪೂರ್ಣ ಪ್ರ. ಕಠಾರಿ
* ಜಂಬದ ಬಾತುಕೋಳಿ	ಸಿದ್ಧಲಿಂಗಪ್ಪ ಮಲ್ಲಪ್ಪ ಹದಿಮೂರ
* ತಪ್ಪಿದ ಬಲಿ	ಜಂಬುನಾಥ ಕಂಚ್ಯಾಣಿ
* ಪ್ರಾಮಾಣಿಕ ರೈತ	ಕುಮಾರ್ ಭದ್ರಾವತಿ
* [illegible]	ಸಂಪಟೂರ್ ವಿಶ್ವನಾಥ್

* ತೋಟದಲ್ಲಿ ತಾತನ ಪಾಠ	ಸಂಪಟೂರ್ ವಿಶ್ವನಾಥ್
* ಮುದುಕನ ಜಾಣ್ಮೆ	ಡಾ.ಮ.ನಿ. ತೋಳನೂರ
* ತಾವರೆಯ ಬಯಕೆ	ನಾಗರಾಜ ಮೇಟಿ
* ಕನಸಿನಲ್ಲಿ ಕಾಣಿಸಿದ ಅದೃಷ್ಟ	ಕಂಬಳಿ ಅವದಾನಿ
* ದೊಡ್ಡಸ್ತಿಕೆಯ ಅಮಲು	ನಾಗರತ್ನ ಎಂ. ಶಿವ
* ಬಂದಿದ್ದಲ್ಲ ಬಾರಿಸಿದ್ದಲ್ಲ	ಸಾಲಗುಂದಿ ಅಮರೇಶ್ವರ
* ಕಾಣಿಕೆ	ಅಮರೇಶ ನುಗಡೋಣಿ
* ರಾಜ ಬುದ್ಧಿವಂತಿಕೆ	ಬಾಲಕೃಷ್ಣ ನಾಯಕ ಹಿರೇಗುತ್ತಿ
* ನ್ಯಾಯಾಧೀಶರ ತೀರ್ಪು	ವಿಶ್ವಜ ಕಾಡದೇವರ
* ಚತುರ ಬೀರರು	ಮಾದೇವ ಮಿತ್ರ
* ಹುಂಜಣ್ಣನ ಸಾಲ	ಪ್ರಕಾಶ್ ಎಸ್. ಮನ್ನಂಗಿ
* ಜಗ್ಗೋಜಿಯ ಜಂಬ	ಗೀತಾಶಾಸ್ತ್ರಿ
* ಉಡುಗೊರೆ	ಎಚ್.ಎನ್. ಹೆಬ್ಬಾರ್
* ಕಳ್ಳ ನರಿಯ ತುಂಡು ಬಾಲ	ಟಿ.ಎಸ್. ಲಲಿತ
* ವ್ಯವಹಾರ ಜ್ಞಾನವಿಲ್ಲದ ವಿದ್ವಾಂಸರು	ಆರ್. ಬಸವರಾಜ
* ಸಮಯಕ್ಕೆ ತಕ್ಕ ಉಪಾಯ	ಆರ್. ಬಸವರಾಜ
* ವಿಜ್ಞಾನ ವಿಸ್ಮಯ	ಗಾಯಿತ್ರಿ ಮೂರ್ತಿ
* ಪ್ರವಾಸ	ಹಳಿಮನಿ ರಾಜಶೇಖರ
* ಬುದ್ದಿಮಾತು	ಜಿ.ಎಸ್. ವಡಗಾಂವಿ

೪.೭. ಮಕ್ಕಳ ಕಾವ್ಯಗಳಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಬಳಕೆ

ಪುಂಗಿಯ ನಾದಕ್ಕೆ ಹಾವು ತಲೆದೂಗುವುದು ವೈಜ್ಞಾನಿಕವಾಗಿ ಅಸತ್ಯವಾಗಿರಬಹುದು. ಆದರೆ ತಾಯಿಯ ಹಾಡಿಗೆ ಮಗು ಮರುಳಾಗುವುದು ಸುಳ್ಳಲ್ಲ. ತೊಟ್ಟಿಲಲ್ಲಿ ಮಲಗಿದ ಎಳೆಯ ಕೂಸು ಸಹ ಅಮ್ಮನ ಲಾಲಿಗೆ ಸ್ಪಂದಿಸುತ್ತದೆ. ತನ್ನ ಅಳುವನ್ನು ನಿಲ್ಲಿಸಿ ಕಣ್ಣರಳಿಸುತ್ತದೆ. ಹಾಡಿನ ಇಂಪಿಗೆ ಬಾಯಿ ತೆರೆದು ನಗುತ್ತದೆ. ಅದರ ಸೊಬಗನ್ನು ಸವಿಯುತ್ತಲೇ ನಿದ್ರೆಗೆ ಜಾರುತ್ತದೆ.

ಮಕ್ಕಳ ಹಾಡಿನಲ್ಲಿನ ಪ್ರಾಸ, ಲಯ ಹಾಗೂ ಗೇಯ ಗುಣಗಳಿಗೆ ಅಂತಹ ಮಂತ್ರಶಕ್ತಿಯಿದೆ.

ಬಹುಶಃ ಮಕ್ಕಳ ಕಾವ್ಯ ಲಾಲಿಹಾಡಿನಿಂದಲೇ ಶುರುವಾಗಿರಬೇಕು. ಮಕ್ಕಳಂತೂ ಶಿಶುಪ್ರಾಸಗಳಿಗೆ ಮಾರುಹೋಗುತ್ತವೆ. ಆಡುವ ಮಕ್ಕಳಿಂದ ಹಿಡಿದು ಹಾಡುವ ಹಿರಿಯರಿಗೂ ಈ ಮಕ್ಕಳ ಗೀತೆಗಳು ಸೃಷ್ಟಿಯಾಗಿರಬೇಕು.

ಮಕ್ಕಳ ಕಾವ್ಯವನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಿ ಹೇಳಲು ಸಾಧ್ಯ. ಮೊದಲನೆಯದು 'ರಂಜನಾತ್ಮಕ ಕವಿತೆಗಳು' ಎರಡು 'ಬೋಧನಾತ್ಮಕ ಕವಿತೆಗಳು' ಇದರಲ್ಲಿ ಲಾಲಿಹಾಡುಗಳು, ಶಿಶುಪ್ರಾಸಗಳು, ಅಭಿನಯಗೀತೆಗಳು ಮೊದಲನೆಯ ಭಾಗದಲ್ಲಿ ಸೇರಿದರೆ, ಕಥನ ಕವಿತೆಗಳು, ಸಮುದಾಯ ಗೀತೆಗಳು, ದೇಶಭಕ್ತಿಗೀತೆಗಳು ಮತ್ತು ವೈಜ್ಞಾನಿಕ ಕವಿತೆಗಳು ಬೋಧನಾತ್ಮಕ ಅಥವಾ ಉಪದೇಶದ ಗೀತೆಗಳಾಗಿ ಗುರುತಿಸಬಹುದಾಗಿದೆ.

ಈ ರೀತಿಯ ಮಕ್ಕಳ ಸಾಹಿತ್ಯ ಸೃಷ್ಟಿಯಾಗಲು ಅವರ ಒಡನಾಡಿಗಳಾಗಿ ಓದು, ಆಟ–ನೋಟಗಳಲ್ಲಿ ಭಾಗಿಯಾದಾಗ ಮಾತ್ರ ಸಾಧ್ಯ. ಮಕ್ಕಳ ಮಾನಸಿಕ ಸ್ಥಿತಿ, ಸ್ವಭಾವ, ಅಭಿರುಚಿ, ಕಲ್ಪನೆಗಳನ್ನು ಒಳಗಣ್ಣಿನಿಂದ ಕಂಡಿರಬೇಕು. ಪ್ರೀತಿ–ವಿಶ್ವಾಸಗಳಿಂದ ಮಗುವಿಗೆ ರಂಜನೀಯ ವಿಷಯಗಳನ್ನು ಹೇಳಿದರೆ ಕೇಳಬಯಸುತ್ತವೆ. ಆದರೆ ಕೆಲವೊಂದು ಅರ್ಥವಿಲ್ಲದ ಪ್ರಾಸಗಳು, ನಾಲಗೆ ಹೊರಳಿಸುವ ಪದ್ಯಗಳು, ಚುಟುಕುಗಳು, ಒಗಟುಗಳು ಮೊದಲಾದವು ಕಿರಿದರೊಳು ಹಿರಿದಾದ ಅರ್ಥ ನೀಡುವ ಪ್ರಾಸಗಳು ಎರಡು ಸಾಲುಗಳಿಂದಲೇ ಕೂಡಿದ್ದರೂ ಮಕ್ಕಳನ್ನು ಹಾಗೂ ಹಿರಿಯರನ್ನು ಆಕರ್ಷಿಸಬಲ್ಲವು.

ಉದಾ. "ಅಂಗಿಮ್ಯಾಲ ಅಂಗಿ
ಶಾನುಭೋಗರ ತಂಗಿ"

"ಆರು ಕಾಸಿನ ಜೀರಿಗೆ
ನಾನೂ ಬರ್ತಿನಿ ನೀರಿಗೆ"

ಈ ತರಹದ ಪ್ರಾಸಗಳಲ್ಲಿ ಅಂತ್ಯ ಪ್ರಾಸಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದನ್ನು ಕಾಣುತ್ತೇವೆ. ಇಲ್ಲಿಯ ಸಾಲುಗಳಲ್ಲಿ ಒಂದಕ್ಕೊಂದು ಸಂಬಂಧವೇ ಇರುವುದಿಲ್ಲ. ಆದರೆ ಇವು ಕಿವಿಗೆ ಕೇಳಲು ಹಿತವೆನಿಸುತ್ತವೆ. ಜೊತೆಗೆ ಕೆಲವೊಂದು ಪ್ರಾಸಗಳು ಹಿರಿದಾದ ಒಳ ಅರ್ಥವನ್ನೆ ಕೊಡುವಂತಿರುತ್ತವೆ. ಹಾಗೂ ಇವು ಮತ್ತೆ ಮತ್ತೆ ಹೇಳಿ ಹಾಡಿ ಆನಂದಿಸುವಂತಿರುತ್ತವೆ.

ಇನ್ನು ಮಕ್ಕಳ ಕಾವ್ಯ ಸ್ವರೂಪವನ್ನು ಎರಡು ನೆಲೆಗಳಲ್ಲಿ ನೋಡಬಹುದಾಗಿದೆ. ಒಂದು ಮಕ್ಕಳೆ ತಮಗಾಗಿ ರಚಿಸಿಕೊಂಡ ಮಕ್ಕಳ ಕಾವ್ಯವಾದರೆ, ಇನ್ನೊಂದು ಮಕ್ಕಳಿಗಾಗಿ ಹಿರಿಯರು ರಚಿಸಿದಂತ ಮಕ್ಕಳ ಕಾವ್ಯಗಳಿವೆ. ಈ ಎರಡು ಬಗೆಯ ಕಾವ್ಯ ನೆಲೆಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಮಕ್ಕಳನ್ನು ಕುರಿತು ಹಿರಿಯರು ರಚಿಸಿದಂತ ಮಕ್ಕಳ ಕಾವ್ಯಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಮಾಡಲಾಗುತ್ತದೆ.

ಇಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಕ್ಕಳ ಕಾವ್ಯಗಳಲ್ಲಿ ಬಳಸುವ ಭಾಷೆ ಆಯಾ ಮಕ್ಕಳ ವಯೋಮಾನಕ್ಕೆ ತಕ್ಕಂತಿರಬೇಕು. ಇಲ್ಲಿ ಬಳಸುವ ಸಾಹಿತ್ಯದಲ್ಲಿ ಸಮಾಸ ಪದಗಳು, ಸಂಧಿ ಪದಗಳು, ವ್ಯಾಕರಣಗಳ ಗೊಂದಲವಿಲ್ಲದೆ, ಮಕ್ಕಳ ತೊದಲು ನುಡಿಯ ಜೊತೆಗೆ ವಸ್ತುವಿನ ದೃಷ್ಟಿಯಿಂದ, ಭಾಷೆಯ ದೃಷ್ಟಿಯಿಂದ, ಶೈಲಿಯ ದೃಷ್ಟಿಯಿಂದ ಭಾವನಿರೂಪಣೆ ಮೊದಲಾದ ಎಲ್ಲ ದೃಷ್ಟಿಗಳಿಂದಲೂ ಮಕ್ಕಳಿಗೆ ಸಂತೋಷ ಕೊಡುವ, ಅವರ ಮನಸ್ಸಿಗೆ ಮುದ ನೀಡುವ ಭಾಷೆಯಲ್ಲಿಯೇ ರಚನೆಯಾಗಿರಬೇಕು.

ಈ ಮೇಲಿನ ಭಾಷಾ ಶೈಲಿಯ ಉದ್ದೇಶದ ಹಿನ್ನೆಲೆಯಲ್ಲಿಯೇ ಅಧ್ಯಯನಕ್ಕಾಗಿ, ಸಾಮಾನ್ಯವಾಗಿ ಮೂರರಿಂದ– ಹದಿನಾಲ್ಕು ವರ್ಷಗಳ ಮಧ್ಯದೊಳಗಿನವರನ್ನು ಮಕ್ಕಳೆಂದು ಕರೆಯುತ್ತೇವೆ. ಮಕ್ಕಳ ಮನೋಭಾವಗಳು ಈ ಅವಧಿಯ ಒಳಗೆ ವಯಸ್ಸಿಗೆ ತಕ್ಕಂತೆ ವಿಚಿತ್ರ, ಅವರ ಅಭಿರುಚಿಗಳು ಭಿನ್ನ ಭಿನ್ನವಾಗಿದ್ದು ಏನೆಲ್ಲ ಕಲ್ಪಿಸಿಕೊಳ್ಳುವ ಬಯಸುವ ಮನಸ್ಸುಗಳಿರುತ್ತವೆ. ಹೀಗಾಗಿಯೇ ಇದರಲ್ಲಿ ಕೆಲವು ಪದ್ಯಗಳನ್ನು ಸಣ್ಣ ವಯಸ್ಸಿನ ಮಕ್ಕಳಿಗಾಗಿ ಹಾಗೂ ಇನ್ನು ಕೆಲವು ಕವನಗಳನ್ನು ಸ್ವಲ್ಪ ದೊಡ್ಡ ವಯಸ್ಸಿನ ಮಕ್ಕಳಿಗಾಗಿ ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಮಾಡಲಾಗಿದೆ. ಅಂದರೆ ಸು. ಐದು ವರ್ಷದಿಂದ ಹತ್ತು ವರ್ಷಗಳವರೆಗಿನ ಮಕ್ಕಳು ಮನನ ಮಾಡಿಕೊಳ್ಳುವಂತಹ ಸಾಹಿತ್ಯವನ್ನು ಶಿಶು ಕಾವ್ಯಗಳೆಂದೂ, ಹತ್ತು ವರ್ಷದಿಂದ ಹದಿನಾಲ್ಕು ವರ್ಷದವರೆಗಿನ ಹದಿಹರೆಯದ ಮೊದಲ ಹಂತದ ಮಕ್ಕಳ ಸಾಹಿತ್ಯವನ್ನು ಬಾಲ ಸಾಹಿತ್ಯವೆಂದು ವಿಂಗಡಿಸಿಕೊಂಡು ಕೆಲವು ಪ್ರಾತಿನಿಧಿಕ ಕವನಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮಕ್ಕಳಿಗಾಗಿ ಬರೆಯುವ ಕವನಗಳು ಹೇಗಿರಬೇಕು? ಮಕ್ಕಳಿಗೆ ಮೊಟ್ಟಮೊದಲಿಗೆ ಪರಿಚಯವಾಗುವ ಪ್ರಪಂಚವೇ ಅವರು ಹುಟ್ಟಿದ ಮನೆ, ಬೆಳೆದು ಆಡಿದ ಮನೆ, ಮನೆಯ ಸದಸ್ಯರು, ನೆರೆಹೊರೆ, ಪರಿಸರದ ಪ್ರಾಣಿ–ಪಕ್ಷಿಗಳು, ಸಸ್ಯಲೋಕ ಮೊದಲಾದವುಗಳ ಬಗ್ಗೆ ಅವರಿಗೆ ಆಸಕ್ತಿ, ಕುತೂಹಲ ಮೂಡುತ್ತವೆ. ಹೀಗಾಗಿಯೇ ಇದಕ್ಕೆ ಸಂಬಂಧಿಸಿದ ಕವನಗಳು, ಕಥೆಗಳು ಮತ್ತು ನಾಟಕಗಳು ಮಕ್ಕಳಿಗೆ ಬಹಳ ಪ್ರಿಯವೆನಿಸುತ್ತವೆ.

ಆಧುನಿಕ ಕಾಲದ ಮಕ್ಕಳಂತೂ ಅಂದರೆ ವಿಜ್ಞಾನ ಯುಗದ ನಗರೀಕರಣದ ಪ್ರಭಾವದಲ್ಲಿ ಬೆಳೆದ ಮಕ್ಕಳು ಚಂದ್ರಲೋಕ, ಗ್ರಹಗಳು, ಬಾಹ್ಯಾಕಾಶ, ಯಂತ್ರಮಾನವ ಮೊದಲಾದ ಸಾಹಸಮಯವಾದ ಕಥೆ, ಕವನಗಳನ್ನು ಇಷ್ಟಪಡುತ್ತಾರೆ. ಇನ್ನು ಕೆಲವು ಪದ್ಯಗಳು ಗಂಭೀರವಾಗಿದ್ದು ದೊಡ್ಡವರ ಕವಿತೆಗಳಿರುವಂತೆ ಇರುತ್ತವೆ. ಇವುಗಳನ್ನು ಮಕ್ಕಳ ಕವಿತೆಗಳೇ? ಎಂದು ಪ್ರಶ್ನಿಸುವಂತಿರುತ್ತವೆ. ಆದರೆ ಈ ತರಹದ ಕವಿತೆಗಳು ಮಕ್ಕಳ ಕವಿತೆಗಳೆ ಆಗಿರುತ್ತವೆ. ಇವು ನಿಸರ್ಗದ ಮೂಲಕ ಮಕ್ಕಳ ಕಲಿಕೆಗೆ ಪೂರಕವಾಗಿದ್ದು, ಲಯ, ಪ್ರಾಸ ಪದಗಳು ಮಕ್ಕಳು ಕೇಳುವಿಕೆಗೆ ಹಿತವೆನಿಸುವಂತಿರುತ್ತವೆ. ಹೀಗಾಗಿ ಈ ತರಹದ ಕವನಗಳನ್ನು ಮಕ್ಕಳ ಪದ್ಯಗಳೆಂದು

ಹೇಳಬಹುದು. ಈ ನೆಲೆಯ ಕೆಲವು ಪ್ರಾತಿನಿಧಿಕ ಕವನಗಳನ್ನು ಪ್ರಮುಖವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

*** ಶಂಗು ಬೀರಾದಾರರ**

ಬಾ ಬಾ ಗಿಳಿಯೆ– ಕವಿತೆ

"ಬಾ ಬಾ ಗಿಳಿಯೆ ಬಣ್ಣದ ಗಿಳಿಯೆ
ಹಣ್ಣನು ಕೊಡುವೆನು ಬಾ ಬಾ
ಹಸಿರು ಪಕ್ಕದ ಚಂದದ ಗಿಳಿಯೆ
ನನ್ನೊಡನಾಡಲು ಬಾ ಬಾ ।

ಕೆಂಪು ಮೂಗಿನ ಮುದ್ದಿನ ಗಿಳಿಯೆ
ಹಾಡನು ಕಲಿಸುವೆ ಬಾ ಬಾ
ಮರದಲಿ ಕುಳಿತು ನೋಡುವೆ ಏಕೆ
ಹಾರುತ ಹತ್ತಿರ ಬಾ ಬಾ।

ಠಕ್ಕಿನ ಕಾಮಿ ಮನೆಯೊಳಗಿಲ್ಲ
ಹೆದರುವೆ ಏಕೆ ಬಾ ಬಾ
ಸೊಕ್ಕಿನ ಟಾಮಿ ಹತ್ತಿರವಿಲ್ಲ
ಕುಣಿಕುಣಿದಾಡುತ ಬಾ ಬಾ

ಹಾಡುವುದನ್ನು ಕಲಿಸುವೆ ನಿನಗೆ
ಹಾರಲು ಕಲಿಸಲು ಬಾ ಬಾ
ಹಣ್ಣನು ತಿಂದು, ಹಾಲನು ಕುಡಿದು
ಮುಗಿಲಿಗೆ ಹಾರುವ ಬಾ ಬಾ।"[೧೮]

ಈ ಮಕ್ಕಳ ಕಾವ್ಯವನ್ನು ಗಮನಿಸಿದಾಗ ಮೊದಲನೆಯದಾಗಿ ದ್ವಿರುಕ್ತಿ ಪದಗಳನ್ನೇ ಬಳಸಿ ಕಾವ್ಯ ರಚಿಸಿರುವುದನ್ನು ಕಾಣಬಹುದು. ಅಂದರೆ ಪದವೊಂದನ್ನು ಎರಡು ಸಲ ಉಚ್ಚರಿಸುವ ಬಗೆ ದ್ವಿರುಕ್ತಿ ಎನಿಸುತ್ತದೆ. ಬಾಬಾ ಗಿಳಿಯೆ ಬಣ್ಣದ ಗಿಳಿಯೆ ಎಂದು ದ್ವಿರುಕ್ತಿ ಪದಗಳ ಮೂಲಕ ಗಿಳಿಯನ್ನು ವರ್ಣಿಸಿರುವುದನ್ನು ಈ ಪದ್ಯದಲ್ಲಿ ಕಾಣಬಹುದು.

ಮಕ್ಕಳ ಕೆಲವು ಪದ್ಯಗಳಲ್ಲಿ ಯಾವುದೇ ಗಂಭೀರವಲ್ಲದ ಅರ್ಥಗಳಿರುವುದನ್ನು ಕಾಣುತ್ತೇವೆ. ಈ ತರಹದ ಕಾವ್ಯಗಳಲ್ಲಿ ಮಕ್ಕಳು ಕೇಳಿದಾಗ ಅವರ ಮನಸ್ಸಿಗೆ ಮುದ ನೀಡುವಂತ ಸರಳ ಪದಗಳ ಮೂಲಕ ಬಾಯಿಪಾಠಕ್ಕೆ ಬರುವಂತ ಪದ್ಯಗಳ ಸಾಲಿಗೆ ಈ ಪದ್ಯವು ಸೇರುತ್ತದೆ.

ಅಲ್ಲದೆ ಈ ಕವನದಲ್ಲಿ ಮಕ್ಕಳಿಗೆ ವಿಶೇಷವಾದ ಯಾವ ಮಾಹಿತಿಯನ್ನು ನೀಡದಿದ್ದರೂ, ಕವನವು ಕೇಳುಗರಲ್ಲಿ ಏನೋ ಆಕರ್ಷಣೆಯನ್ನು ಉಂಟು ಮಾಡುತ್ತದೆ. ಕವನದ ಪ್ರತಿ

ಚರಣವು ಮಕ್ಕಳಿಗೆ ಹಿತವೆನಿಸುವಂತಿದೆ. ಇಲ್ಲಿ ಮುದ್ದಾದ ಗಿಳಿಮರಿಯನ್ನು ಕುರಿತು ಹಣ್ಣನು ಕೊಡುವೆ, ಹಾಡನು ಕಲಿಸುವೆ, ಹಾಲನ್ನು ಕೊಡುವೆ ಎನ್ನುತ ಇಲ್ಲಿ ಯಾರಿಗೂ ಅಂಜುವ ಅಗತ್ಯವಿಲ್ಲ, ಧೈರ್ಯದಿಂದಲೇ ಹಾರುತ ಬಾ, ಬಂದು ನನಗೂ ಹಾರುವುದನ್ನು ಕಲಿಸು, ನಿನಗೆ ನಾನು ಹಾಡುವುದನ್ನು ಕಲಿಸುತ್ತೇನೆಂದು ವಿನಮ್ರವಾಗಿ ವಿನಂತಿಸಿಕೊಳ್ಳುವುದನ್ನು ಕಂಡಾಗ ಮಕ್ಕಳ ಮನಸ್ಸಿನ ಮುಗ್ದತೆಯು ಕಾಣುತ್ತದೆ. ಹೀಗೆ ಕವಿತೆಯಲ್ಲಿ ಯಾವುದೇ ಕ್ಲಿಷ್ಟ ಪದಗಳ ಬಳಕೆಯನ್ನು ಮಾಡದೆ ಸಹಜವಾಗಿ ನಿಸರ್ಗದಲ್ಲಿರುವಂತ ಗಿಳಿ ಪಕ್ಷಿಯ ಪರಿಚಯದ ಮೂಲಕ ಮಕ್ಕಳಲ್ಲಿ ಬಣ್ಣದ ಗಿಳಿ, ಕೆಂಪು ಮೂಗು, ಚಂದದ ಗಿಳಿ, ಮುದ್ದಿನ ಗಿಳಿ ಈ ಪದಗಳು ಗಿಳಿಯ ಬಗೆಗಿನ ಕುತೂಹಲವನ್ನು ಇಮ್ಮಡಿಗೊಳಿಸುವಂತಿವೆ. ಪ್ರತ್ಯಕ್ಷವಾಗಿಯೇ ಗಿಳಿಯನ್ನು ಮಕ್ಕಳು ನೋಡಲು ಪ್ರೇರೇಪಿಸುವಂತಿದೆ. ಹೀಗೆ ಈ ಪದ್ಯವು ಮಕ್ಕಳ ಮನಸ್ಸನ್ನು ಅರಳಿಸಿ, ಉಲ್ಲಾಸಗೊಳಿಸಿ, ಮಕ್ಕಳ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುತ್ತದೆ.

* **ಸುಮತೀಂದ್ರನಾಡಿಗ ಅವರ 'ಬಣ್ಣದ ಚಿಟ್ಟೆ'**

ನಾಡಿಗರ ಈ ಕವನದಲ್ಲಿಯು ಸಹ ಹಿಂದೆ ಗಮನಿಸಿದಾಗ ಬಾಬಾ ಗಿಳಿಯೆ ಕವನಕ್ಕೆ ಪೂರಕವಾಗಿರುವಂತೆ ಇದೆ. ಇದರಲ್ಲಿಯು ಸಹ ದ್ವಿರುಕ್ತಿ ಪದಗಳಿಂದಲೇ ಪದ್ಯವನ್ನು ರಚಿಸಿರುವುದನ್ನು ಕಾಣುತ್ತೇವೆ.

"ಬಣ್ಣದ ಚಿಟ್ಟೆ, ಬಣ್ಣದ ಚಿಟ್ಟೆ
ಎಲ್ಲಿಗೆ ಹೋಗ್ತೀಯಾ?
ಹೂವಿನ ಜೊತೆಗೆ ಆಡೋದಕ್ಕೆ
ನೀನೂ ಬರ್ತೀಯ?
ತಿಂಡಿ ತಿಂದು ಹೋಗೋಣಾಂತೆ
ತಿಂಡಿ ತಿನ್ತೀಯ?
ಹೂವಿನ ಬಂಡು ನಾ ಕುಡಿತೀನಿ
ನೀನೂ ಕುಡಿತೀಯಾ?
ಕುಡಿಯೋದಕ್ಕೆ ನಿನಗಿದೆ ಸೊಂಡಿಲು
ಸೊಂಡಿಲು ನನಗಿಲ್ಲ
ಜೇನಿನ ತುಪ್ಪ ಕುಡಿಯೋದಕ್ಕೆ
ಸೊಂಡಿಲು ಬೇಕಿಲ್ಲ?
ಜೇನ ಸಹವಾಸ ಬೇಡ ನಂಗೆ
ಆಡೋಕ್ ಬರ್ತೀಯ?
ಆಡೋದಕ್ಕೆ ಬಂದ್ರೆ ನನ್ನ

ಮುಟ್ಟದೆ ಇರ್ತೀಯ?
ಆಯ್ತಪ್ಪ ನೀ ಹೇಳಿದ ಹಾಗೆ
ಮುಟ್ಟದೆ ಇರ್ತೀನಿ
ತೋಟದಲ್ಲಿ ನಾ ನಿನ್ನ ಜೊತೆಗೆ
ಆಡ್ಲಿಕ್ ಬರ್ತೀನಿ"[೧೯]

ಪ್ರಸ್ತುತ ಕವನದಲ್ಲಿ ಮಕ್ಕಳಿಗೆ ಪ್ರಿಯ ಎನಿಸುವ 'ಬಣ್ಣದ ಚಿಟ್ಟೆ'ಯನ್ನು ಕುರಿತು ಪದ್ಯದ ಆರಂಭವನ್ನು ದ್ವಿರುಕ್ತಿ ಪದಗಳಿಂದ ಪ್ರಾರಂಭಿಸಿರುವುದನ್ನು ಕಾಣಬಹುದು. ಮಗುವಿಗೂ ಮತ್ತು ಚಿಟ್ಟೆಯ ನಡುವೆ ಒಂದು ರೀತಿಯ ಸಂಭಾಷಣೆ ಮೂಲಕ ಕವಿತೆಯನ್ನು ಕಟ್ಟಿದ್ದಾರೆ. ಇಲ್ಲಿ ಪ್ರಶ್ನೆ, ಅದಕ್ಕೊಂದು ಉತ್ತರವನ್ನು ನೀಡುವಂತ ಸಂಭಾಷಣಾ ಶೈಲಿಯನ್ನು ಬಳಕೆ ಮಾಡಿಕೊಂಡಿರುವುದು ವಿಶೇಷವೆನಿಸಿದೆ. ಅಲ್ಲದೆ ಕವನವು ಐದು ಮೂರು, ಐದು, ಮೂರು ಮಾತ್ರೆಯ ಗಣ ವಿಭಾಗ ಕ್ರಮವನ್ನು ಅನುಸರಿಸಿ, ತುಂಬಾ ಸರಳ ಪದಗಳ ಮೂಲಕ ಚಿಟ್ಟೆ ಮತ್ತು ಮಗುವಿನ ಮುಗ್ದ ಮಾತುಗಳಲ್ಲಿ ಚಿಟ್ಟೆ ಎಲ್ಲಿಗೆ ಹೋಗ್ತೀಯಾ? ಹೂವಿನ ಜೊತೆಗೆ ಆಡೋಕೆ ನಾನು ಬರ್ತೀನಿ, ತಿಂಡಿಯನ್ನು ತಿಂದು ಹೋಗೋಣ ಬಾ, ಹೂವಿನ ಮಕರಂದವನ್ನು ಕುಡಿಯಲು ನನಗೆ ಸೊಂಡಿಲಿಲ್ಲ? ಜೇನು ಹುಳುಗಳ ಸಹವಾಸವೇ ನಮಗೆ ಬೇಡ, ನಾವಿಬ್ಬರೂ ತೋಟದಲ್ಲಿ ಆಡೋಣ ಬಾ ಎನ್ನುವಂತ ಸರಳ ಭಾಷಾ ಶೈಲಿಯ ನಿರೂಪಣೆಯನ್ನು ಈ ಪದ್ಯದಲ್ಲಿ ಕಾಣಬಹುದಾಗಿದೆ. ಹೀಗೆ ದ್ವಿರುಕ್ತಿ ಪದಗಳ ಜೊತೆಗೆ ಸರಳ ಸಂಭಾಷಣಾ ಶೈಲಿಯ ನಿರೂಪಣೆ ಇರುವುದರಿಂದಲೇ ಈ ಪದ್ಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕನ್ನಡದಲ್ಲಿ ಸಂಭಾಷಣಾ ಶೈಲಿ ಎನ್ನುವುದು ನೇರಾನೇರ ಮಾತಿಗಿಳಿಯುವುದರ ಸಾಂಕೇತಿಕ ರೂಪವಾಗಿದೆ. ಈ ಬಗೆಯ ರಚನೆಗಳನ್ನು ಮಕ್ಕಳ ಕಾವ್ಯದಲ್ಲಿ ಕಾಣಬಹುದು. ಅಂತಹದೆ ಮತ್ತೊಂದು ಕವನವನ್ನು ಉದಾಹರಿಸುವುದಾದರೆ ರಾಜರತ್ನಂರವರ 'ನಾಯಿಮರಿ' ಕವನ ಮೊದಲ ಸಾಲಿನಲ್ಲಿ ನಿಲ್ಲುವಂತದ್ದು.

*** ರಾಜರತ್ನಂ ರವರ 'ನಾಯಿಮರಿ' ಕವನ**

"ನಾಯಿಮರಿ! ನಾಯಿಮರಿ!
ತಿಂಡಿ ಬೇಕೆ?
ತಿಂಡಿ ಬೇಕು! ತೀರ್ಥ ಬೇಕು!
ಎಲ್ಲ ಬೇಕು!
ನಾಯಿಮರಿ! ನಿನಗೆ ತಿಂಡಿ
ಏಕೆ ಬೇಕು?
ತಿಂದು ಗಟ್ಟಿಯಾಗಿ ಮನೆಯ

ಕಾಯಬೇಕು?
ನಾಯಿಮರಿ! ಕಳ್ಳಬಂದರೇನು
ಮಾಡುವೆ?
ಲೊಳ್! ಲೊಳ್ ಬೌ ಎಂದು
ಕೂಗಿಕರೆಯುವೆ!
ಜಾಣ ಮರಿ! ತಾಳು! ಹೋಗಿ
ತಿಂಡಿ ತರುವೆನು
ತಾ! ನಿನ್ನ ಮನೆಯ ನಾನು
ಕಾಯುತಿರುವೆನು"[೨೦]

ಈ ಕವನದಲ್ಲಿ ಪುಟ್ಟ ಮಗು ತನ್ನ ಪ್ರೀತಿಯ ಸಾಕು ಪ್ರಾಣಿಯಾದ ನಾಯಿಮರಿಯೊಂದಿಗೆ ನೇರವಾದ ಮಾತಿಗಿಳಿದಿರುವುದನ್ನು ಕಾಣುತ್ತೇವೆ. ಈ ನಾಯಿಮರಿ ಕವನವನ್ನು ಬಾಲ್ಯದಲ್ಲಿ ಕೇಳದೇ ಬೆಳದಿರುವ ಮಕ್ಕಳೇ ಇಲ್ಲವೆನ್ನಬಹುದು. ಮಕ್ಕಳಿಗೆ ಸಹಜವಾಗಿ ಪ್ರಾಣಿ–ಪಕ್ಷಿಗಳ ಬಗ್ಗೆ ಅಪಾರವಾದ ಕುತೂಹಲವಿರುತ್ತದೆ. ಈ ಮಕ್ಕಳ ಮನಸ್ಸಿನ ಕುತೂಹಲವನ್ನು ತಣಿಸಲೆಂದೇ ಮಕ್ಕಳ ಮನಸ್ಸನ್ನರಿತ ರಾಜರತ್ನಂರವರು ಇದನ್ನೇ ತಮ್ಮ ಕವನಕ್ಕೆ ವಸ್ತುವನ್ನಾಗಿ ಆರಿಸಿಕೊಂಡು ಒಂದು ರೀತಿಯಲ್ಲಿ ಯಾವ ಕ್ಲಿಷ್ಟ ಪದಗಳ ಬಳಕೆಯನ್ನೇ ಮಾಡದೆ ಮಗು ಮತ್ತು ನಾಯಿಮರಿಯ ಆತ್ಮೀಯ ಬಂದವನ್ನು ಸಂಭಾಷಣಾ ಶೈಲಿಯಲ್ಲಿ ರಚಿಸಿರುವುದು ಸೊಗಸಾಗಿದೆ. ಅಲ್ಲದೆ ಇಡೀ ಕವನವನ್ನು ನಾಲ್ಕು, ನಾಲ್ಕು, ಮಾತ್ರೆಯ ಎರಡು ಗಣ ಹಾಗೂ ಮೂರು, ಮೂರು ಮಾತ್ರೆಯ ಎರಡು ಗಣ ಪ್ರಯೋಗಗಳ ಪದಗಳನ್ನು ಕಟ್ಟಿ, ಮಕ್ಕಳು ಕೇಳಿದಾಗ ಲಯಬದ್ಧವಾದ ಗೇಯತೆಯನ್ನು ಉಂಟು ಮಾಡುವುದು ಪದ್ಯದ ವಿಶೇಷವಾಗಿದೆ. ಜೊತೆಗೆ ನಾಯಿಮರಿ ಕಳ್ಳ ಬಂದರೇನು ಮಾಡುವೆ? ಎಂದು ಪ್ರಶ್ನಿಸಿದಾಗ ನಾಯಿಮರಿಯ 'ಲೊಳ್, ಲೊಳ್, ಭೌ ಭೌ ಎಂದು ಕೂಗುತ್ತೇನೆ ಎನ್ನುತ್ತದೆ. ಇಲ್ಲಿಯ ಲೊಳ್ ಲೊಳ್ ಭೌ ಭೌ ಎಂಬ ಅನುಕರಣ ವಾಚಕ ಪದಗಳ ಬಳಕೆ ಮಾಡಿರುವುದನ್ನು ಕಾಣಬಹುದು.

ಮಕ್ಕಳ ಕವಿತೆಯನ್ನು ರಚಿಸುವ ಪ್ರಮುಖ ಕವಿಗಳು ಸಾಮಾನ್ಯವಾಗಿ ಮಕ್ಕಳ ಆಸಕ್ತಿಯನ್ನು ಕೆರಳಿಸುವ ಬೇರೆ ಬೇರೆ ಭಾಷಿಕ ಮಾರ್ಗಗಳ ಮೂಲಕ ಕವನ ರಚನೆಯನ್ನು ಮಾಡಿರುವ ಹಲವಾರು ಉದಾಹರಣೆಗಳೇ ಇವೆ. ಇಂಥವುಗಳ ನಿರೂಪಣಾ ಶೈಲಿಯಲ್ಲಿ ಕವನಗಳು ರಚನೆಯಾಗಿರುವುದನ್ನು ಕಾಣಬಹುದು. ಇಂಥ ಕವನಕ್ಕೆ ಉದಾಹರಣೆಯನ್ನು ಬಿ.ಎಂ. ಶರ್ಮಾರವರ 'ಬಾವಿಯಲ್ಲಿ ಚಂದ್ರ' ಎಂಬ ಕವಿತೆಯು ಉತ್ತಮವಾದುದು ಎನಿಸುತ್ತದೆ.

* ಬಾವಿಯಲ್ಲಿ ಚಂದ್ರ

"ತಿಂಗಳು ಬೆಳಕಿನ ಇರುಳಿನಲಂದು
ಅಮ್ಮನು ಕೆಲಸದೊಳಿತಿರೆ ಕಂಡು
ಗೋಪಿಯು ಪುಟ್ಟುವು ಹೊರಗಡೆ ಬಂದು
ಬಾವಿಗೆ ಇಣುಕಿದನು!

ಬಾವಿಲಿ ಚಂದ್ರನ ಬಿಂಬವ ಕಂಡು
ಚಂದ್ರನು ಬಾವಿಗೆ ಬಿದ್ದನು ಎಂದು
ಅಯ್ಯೋ ಪಾಪವೆ! ಎನ್ನುತಲೊಂದು
ಕೊಕ್ಕೆಯ ಹುಡುಕಿದನು

ಚಂದ್ರನ ಮೇಲಕೆ ಎತ್ತಲಿಕೆಂದು
ಬಾವಿಯ ಹಗ್ಗಕೆ ಕೊಕ್ಕೆಯ ಬಿಗಿದು
ದೂರದಿ ಗೋಪಿಯ ನಿಲ್ಲಿಸಿ ಪುಟ್ಟು
ಹಗ್ಗವನಿಳಿಸಿದನು

ಹಗ್ಗದ ಕೊಕ್ಕೆಯು ಕಲ್ಲಿಗೆ ಸಿಕ್ಕಿ
ಪುಟ್ಟುವು ಚಂದ್ರನು ಸಿಕ್ಕೇ ಸಿಕ್ಕ
ಎನ್ನುತ ತುಂಬಾ ಬಲದಿಂದೆಳೆಯೇ
ಹಗ್ಗವು ತುಂಡಾಯ್ತು

ಎಳೆತದ ರಭಸಕೆ ಪುಟ್ಟುವು ಬಿದ್ದ
ಮೆಲ್ಲನೆ ಮನೆ ಕಡೆ ನೋಡುತಲೆದ್ದ
ತಂಗಿಗೆ ಆಗಸ ತೋರುತಲೆಂದ
ಗೋಪಿ ನೋಡಲ್ಲಿ

ಚಂದ್ರನ ಮೇಲಕೆ ಏರಿಸಿ ಬಿಟ್ಟೆ
ನಮ್ಮಯ ದೇವರ ಬದುಕಿಸಿ ಕೊಟ್ಟೆ
ಅಮ್ಮಗೆ ಗೊತ್ತಾದರೆ ನಾ ಕೆಟ್ಟೆ
ಎಂದೋಡಿದ ಪುಟ್ಟು!"[೨೧]

ಈ ಕವನದಲ್ಲಿ ಕವಿಯು ಕಥೆಯ ಮಾದರಿಯ ನಿರೂಪಣಾ ಶೈಲಿಯನ್ನು ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಮಕ್ಕಳ ಸಾಹಿತ್ಯದಲ್ಲಿಯೇ ಪ್ರಸಂಗವೊಂದನ್ನು ಮಕ್ಕಳಿಗೆ ಮನದಟ್ಟಾಗುವಂತೆ ಹೇಳಲು ನಿರೂಪಣಾ ಶೈಲಿ ಕವಿತೆಗಳಿಗಿಂತ ಕಥೆಗಳಿಗೆ ಪೂರಕವಾಗಿರುವುದನ್ನು ಕವಿಯು ಮಕ್ಕಳ ಕವಿತೆಯ ರಚನೆಯಲ್ಲಿ ಈ ಪ್ರಕಾರವನ್ನು ಬಳಸಿಕೊಂಡಿರುವುದು ವಿಶೇಷವಾಗಿದೆ. ಈ ತರಹದ ಪದ್ಯಗಳು ಮಕ್ಕಳ ಮನಸ್ಸನ್ನು ಮುಟ್ಟಿ,

ಬಹು ದೀರ್ಘಕಾಲದವರೆಗೂ ಅವರಲ್ಲಿ ನೆನಪಿನಲ್ಲಿರಲು ಸಹಾಯಕವಾಗುತ್ತವೆ. ಅಲ್ಲದೆ ಕವಿತೆಯು ಮಕ್ಕಳಲ್ಲಿ ಅಡಗಿರುವಂತಹ ವಿಶಿಷ್ಟ ಕಲ್ಪನೆಯನ್ನು ಹೊರಗೆಳೆಯುವ ಪ್ರಯತ್ನವೆನಿಸಬಹುದು. ಇಲ್ಲಿ ಗೋಪಿಯು ಹುಣ್ಣಿಮೆಯ ಬೆಳದಿಂಗಳಲ್ಲಿ ಪೂರ್ಣಚಂದ್ರನ ಬಿಂಬವನ್ನು ತಿಳಿನೀರಿನ ಬಾವಿಯಲ್ಲಿ ಕಂಡು, ಚಂದಮಾಮನೆ ಬಾವಿಯಲ್ಲಿ ಬಿದ್ದಿರುವನು ಹೇಗಾದರೂ ಮಾಡಿ ಅವನನ್ನು ಮೇಲಕೆ ಏರಿಸಿಬಿಡಲು ಮಾಡುವ ಸಾಹಸವೇ ಸೊಗಸಾಗಿರುವಂತಹದ್ದು. ಇನ್ನು ಪದ್ಯದಲ್ಲಿ ಬರುವಂತ ಬಟ್ಟೆ, ಕೊಟ್ಟೆ, ನಾ ಕೆಟ್ಟೆ ಮೊದಲಾದ ಅಂತ್ಯ ಪ್ರಾಸ ಪದಗಳು ಕವನಕ್ಕೆ ಇನ್ನಷ್ಟು ಸೊಬಗನ್ನು ತಂದು, ಮಕ್ಕಳು ಈ ತರಹದ ಹಲವಾರು ಸಾಹಸಗಳಿಗೆ ಕೈಹಾಕಲು ಪ್ರೇರೇಪಿಸುತ್ತವೆ.

ಈ ಮೇಲಿನ ಕವನದಂತೆ ನಿರೂಪಣಾ ಶೈಲಿಯ ರಚನೆಗೆ ಇನ್ನೊಂದು ಉದಾಹರಣೆಯನ್ನು ನೋಡುವುದಾದರೆ ಗಿರಿಬಾಲೆ ಎನ್ನುವವರ 'ಊರಿಗೊಬ್ಬ ರಾಜನಂತೆ' ಎಂಬ ಕವನವನ್ನು ಗಮನಿಸಬಹುದು. ಈ ಕವನವು ಒಂದು ರೀತಿಯಲ್ಲಿ ಕಥನ ಕವನವಾಗಿದೆ. ಮಕ್ಕಳ ಕಥೆಯ ಆರಂಭದಲ್ಲಿ ಬರುವ 'ಒಂದಾನೊಂದು ಕಾಲದಲ್ಲಿ ಒಂದು ಊರಿತಂತೆ, ಆ ಊರಿಗೆ ಒಬ್ಬ ರಾಜನಿದ್ದನಂತೆ' ಎನ್ನುವ ಹಾಗೆ ಈ ಪದ್ಯವು ಒಂದಾನೊಂದು ಊರಿತ್ತಂತೆ ಎಂದು ಆರಂಭವಾಗುತ್ತದೆ. ಹೀಗೆಯೇ ಇಡೀ ಪದ್ಯವು ಕಥೆಯ ನಿರೂಪಣಾ ಶೈಲಿಯಲ್ಲಿ ರಚನೆಯಾಗಿರುವುದು ವಿಶೇಷವಾಗಿದೆ.

"ಒಂದಾನೊಂದು ಊರಿತ್ತಂತೆ
ಊರಿಗೊಬ್ಬ ರಾಜನಂತೆ
ರಾಜನಿಗೊಬ್ಬ ಮಂತ್ರಿಯಂತೆ
ಮಂತ್ರಿಗೊಬ್ಬ ಮಗಳಂತೆ

ಮಗಳಿಗೊಂದು ಗೊಂಬೆಯಂತೆ
ಗೊಂಬೆಗೊಂದು ಅಂಗಿಯಂತೆ
ಗುಂಡಿ ಕಿತ್ತು ಹೋಗಿತಂತೆ

ದರ್ಜಿಯನ್ನು ಕರೆದರಂತೆ
ದರ್ಜಿಬಂದು ನೋಡಿದನಂತೆ
ಗುಂಡಿ ಬಲು ಹಳೆಯದಂತೆ
ಬೇರೆ ಗುಂಡಿ ತಂದರಂತೆ

ಅಂಗಿಗಿಟ್ಟು ಹೊಲಿದರಂತೆ
ಅಂಗಿ ಸರಿಯಾಯಿತಂತೆ

ಮಂತ್ರಿ ಮಗಳ ಆಸೆಯಂತೆ
ಗೊಂಬೆಗಂಗಿ ಹಾಕಿದರಂತೆ

ತುಂಬ ಚಂದ ಕಂಡಿತಂತೆ
ಗೊಂಬೆಯಾಟ ಆಡಿದಳಂತೆ
ಬೇರೆ ಗೊಂಬೆ ತಂದಳಂತೆ
ಎರಡಕ್ಕೂ ಮದುವೆಯಂತೆ

ಊರಿನ ರಾಜ ಬಂದನಂತೆ
ನಿಂತು ಮದುವೆ ಮಾಡುವನಂತೆ
ನಾನೂ ನೀನು ಹೋಗೋಣಂತೆ
ಮದುವೆ ನೋಡಿ ಬರೋಣವಂತೆ”[೨೨]

ಮಕ್ಕಳ ಕುತೂಹಲವನ್ನು ಕೆರಳಿಸುವಲ್ಲಿ ಈ ಪದ್ಯ ಯಶಸ್ವಿಯಾಗಿದೆ. ಪ್ರಸ್ತುತ ಪದ್ಯವು ಮಕ್ಕಳಲ್ಲಿ ಹೊಸ ಕಲ್ಪನಾಪ್ರಪಂಚವನ್ನು ಹುಟ್ಟುಹಾಕುತ್ತದೆ. ಇಲ್ಲಿ ಒಂದೂರು ಆ ಊರಿಗೆ ಒಬ್ಬ ರಾಜ, ರಾಜನಿಗೊಬ್ಬ ಮಂತ್ರಿ, ಮಂತ್ರಿಗೊಬ್ಬ ಮಗಳು ಹೀಗೆ ಬರುವ ಸಾಲುಗಳು ಒಂದಕ್ಕೊಂದು ಕೊಂಡಿಗಳಂತೆ ಹೆಣೆದಿರುವುದನ್ನು ಕಾಣಬಹುದು. ಇಂತಹ ಕಲ್ಪನಾತೀತ ಕವನಗಳಿಂದ ಮಕ್ಕಳಿಗೆ ತಮ್ಮದೇ ಆದ ಕಲ್ಪನಾ ಪ್ರಪಂಚ ಕಾಣುತ್ತದೆ. ಅಲ್ಲದೆ ಸಾಮಾನ್ಯವಾಗಿ ಬಾಲ್ಯದಲ್ಲಿ ಆಟಿಕೆಗಳನ್ನು ಹಿಡಿದುಕೊಂಡು ಅದರಲ್ಲಿಯೂ ಮಕ್ಕಳು ಸದಾ ತಮ್ಮ ಹಿರಿಯರನ್ನು ಅನುಕರಿಸುತ್ತಾ ಅವರಂತೆಯೇ ನಟನೆಯನ್ನು ಮಾಡುತ್ತಾ ಆಟಿಕೆಗಳ ಮೂಲಕ ಅಡಿಗೆ ಮಾಡುವುದು, ಗೊಂಬೆಗಳೊಂದಿಗೆ ಆಡುವಾಗ, ಅವುಗಳಿಗೆ ಸ್ನಾನ ಮಾಡಿಸುವುದು, ಬಟ್ಟೆ ಹಾಕುವುದು, ಮದುವೆ ಮಾಡುವುದು ಹೀಗೆ ಮೊದಲಾದ ಆಟಗಳನ್ನು ಆಡುತ್ತಾ ಖುಷಿಯನ್ನು ಪಡುತ್ತಿರುತ್ತಾರೆ. ಪ್ರಸ್ತುತ ಈ ಕವನದಲ್ಲಿಯೂ ಈ ತರಹದ ವಸ್ತುವನ್ನಿಟ್ಟುಕೊಂಡೆ ನಿರೂಪಣಾ ಶೈಲಿಯಲ್ಲಿ ರಚಿಸಲಾಗಿದೆ. ಅಲ್ಲದೆ ಇಡೀ ಪದ್ಯವು ರಾಜನಂತೆ, ಮಂತ್ರಿಯಂತೆ, ಗೊಂಬೆಯಂತೆ, ಮಗಳಂತೆ ಎಂಬ ಅಂತ್ಯ ಪ್ರಾಸಗಳ ಬಳಕೆಯನ್ನೆ ಮಾಡಿರುವುದು ತುಂಬಾ ವಿಶೇಷವೆನಿಸಿದೆ. ಈ ತರಹದ ಪದ್ಯಗಳು ಸಣ್ಣ ಮಕ್ಕಳಿಗೆ ತುಂಬಾ ಪ್ರಿಯವೆನಿಸುತ್ತವೆ.

ಇನ್ನು ಮಕ್ಕಳ ಕವನಗಳಿಗೆ ಹಲವಾರು ಬೇರೆ ಬೇರೆ ಹೆಸರುಗಳು ಇವೆ. ಅದರಲ್ಲಿ ಶಿಶುಪ್ರಾಸಗಳು ಇವೆ. ಈ ಶಿಶುಪ್ರಾಸಗಳು ಮಕ್ಕಳ ಕವನ ಸಾಹಿತ್ಯದಲ್ಲಿ ಶಿಶುಪ್ರಾಸಗಳೆಂದರೆ ಮಕ್ಕಳ ಕಾವ್ಯಗಳು ಎನ್ನುವಷ್ಟರ ಮಟ್ಟಿಗೆ ಆವರಿಸಿವೆ. ಪ್ರಾಸವನ್ನು ಹೊರತುಪಡಿಸಿ ಮಕ್ಕಳ ಕಾವ್ಯವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಮಕ್ಕಳ ಕಾವ್ಯದಲ್ಲಿ ಪ್ರಾಸಬದ್ಧ ಪದಗಳ ಹಾಸುಹೊಕ್ಕಾಗಿದೆ. ಈ ಪ್ರಾಸ ಪದಗಳಲ್ಲಿ ಆದಿಪ್ರಾಸ ಪದ್ಯಗಳು, ಅಂತ್ಯಪ್ರಾಸ ಪದ್ಯಗಳು, ಮಧ್ಯಪ್ರಾಸ ಪದ್ಯಗಳನ್ನು ಕಾಣಬಹುದು. ಆದರೆ ಸಾಮಾನ್ಯವಾಗಿ ಅಂತ್ಯಪ್ರಾಸದ ರಚನೆಗಳನ್ನೇ ಹೆಚ್ಚಾಗಿ ಕಾಣಬಹುದು.

* ರಾಜರತ್ನಂ ರವರ 'ತುತ್ತೂರಿ'

"ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಊದಿದನು

ತನಗೇ ತುತ್ತೂರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಬದ ಕೋಳಿಯ ರೀತಿಯಲಿ

ತುತ್ತೂರಿಯೂದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ

ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು

ಬಣ್ಣದ ತುತ್ತೂರಿ ಹಾಳಾಯ್ತು
ಜಂಬದ ಕೋಳಿಗೆ ಗೋಳಾಯ್ತು"[೨೩]

ಪ್ರಸ್ತುತ ಪದ್ಯವು ಅಂತ್ಯಪ್ರಾಸದ ರಚನೆಗೆ ಒಂದು ಉತ್ತಮ ಉದಾಹರಣೆ ಎನ್ನಬಹುದು. ಬಾಲ್ಯದಲ್ಲಿ ರತ್ನಂರವರ ಈ ಪದ್ಯವನ್ನು ಕೇಳಿರದ ಮಕ್ಕಳೇ ಇಲ್ಲ ಎನ್ನಬಹುದು. ಅಷ್ಟೊಂದು ಜನಪ್ರಿಯ ಮಕ್ಕಳ ಪ್ರಿಯ ಪದ್ಯವಾಗಿದೆ. ಜೊತೆಗೆ ಇಡೀ ಪದ್ಯವು ನಾಲ್ಕು ಮಾತ್ರೆಯ ಮೂರು ಗಣವಿಂಗಡಣೆಯಲ್ಲಿಯೇ ರಚಿಸಿರುವುದು ತುಂಬಾ ವಿಶೇಷವಾಗಿದೆ. ಈ ಪದ್ಯದ ಆರಂಭದಲ್ಲಿ ಬರುವ ಬಣ್ಣ, ತಗಡು, ತುತ್ತೂರಿ, ಕಾಸು ಮೊದಲಾದ ಪದಗಳು ಸಹಜವಾಗಿ ಮಕ್ಕಳ ಬಳಕೆಗೆ ಪೂರಕವಾಗಿದೆ. ಜೊತೆಗೆ ಮಕ್ಕಳ ಗ್ರಹಿಕೆಗೆ ಒಗ್ಗುವಂತಿವೆ. ಅಲ್ಲದೆ ಮಕ್ಕಳು ಪಾಠದ ಮೂಲಕ ಕಲಿಕೆಗೆ ಪ್ರೇರಣೆಯನ್ನು ನೀಡುವಂತಿವೆ. ಪದ್ಯದ ಒಳ ಅರ್ಥವು ಗಂಭೀರವಾದ ವಿಷಯವನ್ನು ಹೇಳಿದರೂ, ಅದರ ಲಯ ಮತ್ತು ಅರ್ಥದ ದೃಷ್ಟಿಯು ಮಕ್ಕಳಿಗೆ ಪೂರಕವಾಗುವಂತಿದೆ. ಹಾಗೂ ಇದರಲ್ಲಿ ಬರುವ ತುತ್ತೂರಿ, ಕಸ್ತೂರಿ, ಊದಿದನು, ಇದೆಯೆಂದ, ಇಲ್ಲೆಂದ, ಬೀದಿಯಲಿ, ರೀತಿಯಲಿ, ಹಾಳಾಯ್ತು, ಗೋಳಾಯ್ತು ಎಂಬ ಪ್ರಾಸ ಪದಗಳು ಪದ್ಯದ ಸೊಬಗನ್ನು

ಹೆಚ್ಚಿಸಿವೆ. ಈ ಪ್ರಾಸಬದ್ಧ ಪದಗಳು ಮಕ್ಕಳು ಅದರ ಗುಂಗಿನಲ್ಲಿರುವಂತೆಯೇ ಪ್ರೇರೇಪಿಸುತ್ತವೆ. ಈ ಬಗೆಯ ರಚನೆಗಳು ಕಂಠಪಾಟ ಮಾಡಲು ಯೋಗ್ಯವಾಗಿದ್ದು ಮಕ್ಕಳ ಕಲಿಕೆಯ ತೀವ್ರತೆಯನ್ನು ಹೆಚ್ಚಿಸುತ್ತವೆ.

ಅಂತ್ಯ ಪ್ರಾಸಗಳಿರುವಂತೆ ಆದಿಪ್ರಾಸ ಪದಗಳ ರಚನೆಯನ್ನು ಮಕ್ಕಳ ಕಾವ್ಯದಲ್ಲಿ ಕಾಣಬಹುದಾದರೂ ಸಂಖ್ಯೆಯಲ್ಲಿ ಅವು ಬಹಳ ಕಡಿಮೆ ಎಂದು ಹೇಳಬಹುದು. ಜಯರಾಮಾಚಾರ್ಯ ಎನ್ನುವವರ 'ನವಿಲು' ಎನ್ನುವ ಕವನವು ಆದಿಪ್ರಾಸದಿಂದ ರಚನೆಯಾಗಿರುವುದನ್ನು ಕಾಣಬಹುದು.

ನವಿಲು

"ಕೋಟೆಯ ರಾಯನ
ತೋಟಗಳಲ್ಲಿಯೆ
ಕೂಟವ ಕೂಡುತ
ಲೂಟಿ ಮಾಡುವೆನು"

ಇಲ್ಲಿ ಬರುವ ಕೋಟೆ, ತೋಟ, ಕೂಟ ಇವು ಆದಿಪ್ರಾಸಕ್ಕೆ ಉದಾಹರಣೆಗಳಾಗಿವೆ.

ಭಾಷೆಯು ಪ್ರಾಚೀನ ಕಾಲದಿಂದಲೂ ದೈವದತ್ತವಾದುದು ಎನ್ನುವ ನಂಬಿಕೆ ನಮ್ಮಲ್ಲಿ ಬಲವಾಗಿತ್ತು. ಆದರೆ ಹದಿನೆಂಟನೇ ಶತಮಾನದ ನಂತರದ ಕಾಲದಲ್ಲಿ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಆದ ಆವಿಷ್ಕಾರಗಳಿಂದ ಭಾಷೆ ದೈವದತ್ತವಾದುದ್ದಲ್ಲ. ಅದು ಅನುಕರಣೆಯಿಂದ ಬರುವಂತದೆಂದು ಜಗತ್ತಿಗೆ ತಿಳಿಯಿತು. ಹೀಗೆ ಮಕ್ಕಳ ಭಾಷಾ ಕಲಿಕೆಯು ಅನುಕರಣಾ ಸಾಮರ್ಥ್ಯದಿಂದಲೇ ಬರುವಂತದ್ದಾಗಿದೆ. ಈ ಹಿನ್ನೆಲೆಯಲ್ಲಿಯೇ ಮಕ್ಕಳ ಸಾಹಿತ್ಯದಲ್ಲಿ ಮಕ್ಕಳಿಗೆ ಪೂರಕವಾಗುವಂತ ಅನುಕರಣ ಪದಗಳ ಮೂಲಕವೇ ಹಲವಾರು ಮಕ್ಕಳ ಕಾವ್ಯಗಳು ರಚನೆಯಾದವು. ಅವು ಮಕ್ಕಳಿಗೆ ತುಂಬಾ ಪ್ರಿಯವಾದ ಕವನಗಳಾಗಿವೆ. ಈ ಅನುಕರಣಾ ಪದಗಳಿಗೆ ಒಂದು ಉದಾಹರಣೆಯನ್ನು ನೋಡುವುದಾದರೆ, 'ನವಗಿರಿ ನಂದ'ರ ಸಂಗೀತ ಸಭೆ ಎನ್ನುವ ಕವನ.

*** ಸಂಗೀತ ಸಭೆ**

"ರಂಗನ ಮನೆಯ ಅಂಗಳದಲ್ಲಿ
ಸಂಗೀತ ಸಭೆ ಕೇಳಿದಿರಾ
ರಂಗನ ತಂಗಿಗೆ ಇರುವೆಯು ಕಚ್ಚಲು
ತೆಗೆದಳು ರಾಗಾ
ವ್ಯಾಂ ವ್ಯಾಂ ವ್ಯಾಂ!

ಹಟ್ಟಿಯ ದನವು ಅಲ್ಲಿಗೆ ಬಂದು
ಹಾಡಿತು ಹಾಡು
ಅಂಬಾ ಅಂಬಾ!
ಅಂಗಳ ನಾಯಿ ತಾನೂ ಬಂದು
ಪದವನು ಹೇಳಿತು
ಭೌ ಭೌ ಭೌ!
ಒಳಗಿನ ಬೆಕ್ಕು ಓಡುತ ಬಂದು
ತೆಗೆಯಿತು ರಾಗಾ
ವ್ಯಾಂ ವ್ಯಾಂ ವ್ಯಾಂ!
ಆಡುವ ಆಡು ನೋಡುತ ಬಂದು
ಹಾಡಿತು ಹಾಡು
ಬೇ ಬೇ ಬೇ!
ಕತ್ತೆತ್ತೆಂದಿತು
ಕೊ ಕ್ಕೋ ಕ್ಕೋ!
ಮರದಲಿ ಕಾಗೆ 'ಕಾಕಾ' ಕೂಗಲು
ಹಕ್ಕಿಗಳೆಲ್ಲಾ
ಚಿಲೀ ಪಿಲೀ!
ನೋಡಲು ಕೇಳಲು ರಂಗನ ತಂಗಿಗೆ
ನಗುವೆ ಹೊಮ್ಮಿತು
ಹ್ಹ ಹ್ಹ ಹ್ಹಾ!"[೨೪]

ಪ್ರಸ್ತುತ ಪದ್ಯವು ತುಂಬಾ ವಿಶೇಷವಾದ ಪದ್ಯವೆಂದೇ ಹೇಳಬಹುದು. ಇಡೀ ಪದ್ಯದ ಮೂಲಕ ಮಕ್ಕಳಿಗೆ ನಿಸರ್ಗದಲ್ಲಿರುವಂತ ಪ್ರಾಣಿ-ಪಕ್ಷಿ ಸಂಕುಲದ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಆ ಪ್ರಾಣಿ-ಪಕ್ಷಿಗಳ ಕೂಗನ್ನು ಪರಿಚಯಿಸಲಾಗುತ್ತದೆ. ಜೊತೆಗೆ ಕವಿತೆಯಲ್ಲಿ ಬರುವ ವ್ಯಾಂ ವ್ಯಾಂ ವ್ಯಾಂ ಅಂಬಾ ಅಂಬಾ, ಭೌ ಭೌ ಭೌ, ಬೇ, ಬೇ, ಚಿಲಿ ಪಿಲೀ, ಕೊ ಕ್ಕೊ ಕ್ಕೋ ಮೊದಲಾದ ಅನುಕರಣಾ ಪದಗಳು ಮಕ್ಕಳಿಗೆ ಪ್ರಾಣಿ ಮತ್ತು ಪಕ್ಷಿಗಳಿಗೆ ಇರುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಪರಿಚಯಿಸುತ್ತವೆ. ಹಾಗೂ ಆ ಪ್ರಾಣಿ ಪಕ್ಷಿಗಳನ್ನು ಮಕ್ಕಳು ಕಂಡಾಗ, ಅವುಗಳ ಕೂಗಿನಿಂದಲೇ ಆ ನಿರ್ದಿಷ್ಟವಾದ ಪ್ರಾಣಿ ಪಕ್ಷಿಗಳನ್ನು ಗುರುತಿಸುವ, ಅವುಗಳನ್ನು ನೆನಪಿಟ್ಟುಕೊಳ್ಳುವ, ಅವುಗಳನ್ನು ಕರೆಯುವ, ಅವುಗಳಂತೆಯೇ ಕೂಗುವ ಕೆಲಸವನ್ನು ಮಾಡುತ್ತವೆ. ಮನೆಯ ಹಿರಿಯರು ಸಹ ಮಕ್ಕಳಿಗೆ ನಾಯಿಯನ್ನು ಪರಿಚಯಿಸುವಾಗ ಆರಂಭದಲ್ಲಿ 'ನಾಯಿ' ಎನ್ನುವ ಬದಲು ಭೌ ಭೌ ಎಂದು ಹೇಳಿರುತ್ತಾರೆ. ದನಗಳ ಬದಲು ಅಂಬಾ ಎಂದು ಹೇಳಿಕೊಟ್ಟಿರುತ್ತಾರೆ. ಹೀಗೆ ಈ ತರಹದ ಕವನಗಳಲ್ಲಿ ಮಕ್ಕಳಿಗೆ ಪ್ರಾಣಿ-ಪಕ್ಷಿಗಳ

ಪರಿಚಯವನ್ನು ಮತ್ತು ಅವುಗಳ ಬಳಸುವ ಭಾಷೆಯ ಪರಿಚಯವನ್ನು ಅನುಕರಣ ಪದಗಳ ಬಳಕೆಯಲ್ಲಿ ಪರಿಚಯಿಸಿಕೊಡಲಾಗುತ್ತದೆ. ಈ ರೀತಿಯ ಅನುಕರಣ ಪದಗಳು ಆರಂಭದಲ್ಲಿ ಮಕ್ಕಳ ಭಾಷಾ ಕಲಿಕೆಗೂ ಪೂರಕವಾಗುತ್ತವೆ.

ಇನ್ನು ತುಸು ದೊಡ್ಡವರಾದ ಮಕ್ಕಳಲ್ಲಿ ತಿಳುವಳಿಕೆಯ ಜ್ಞಾನ ಹೆಚ್ಚಾಗುತ್ತಾ ಹೋಗುತ್ತದೆ. ಈ ಮಕ್ಕಳು ಯಾವುದನ್ನು ಪ್ರಶ್ನೆ ಮಾಡದೇ ಒಪ್ಪುವವರಲ್ಲ. ಈ ಪ್ರಶ್ನಿಸುವಂತ ಮಕ್ಕಳಿಗಾಗಿಯೇ ಮಕ್ಕಳ ಸಾಹಿತ್ಯದಲ್ಲಿ ಕೆಲವು ಪದ್ಯಗಳು ಬರತೊಡಗಿದವು. ಅವುಗಳಲ್ಲಿ ಒಂದಾದ ಕುವೆಂಪುರವರ ಅರ್ಧಚಂದ್ರ ಪದ್ಯವು ಒಂದೆಂದು ಹೇಳಬಹುದು.

*** ಕುವೆಂಪು ಅವರ 'ಅರ್ಧಚಂದ್ರ' ಕವನ**

"ದೇವರ ಪೆಪ್ಪರಮೆಂಟೇನಮ್ಮಾ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟಮ್ಮಾ!

ದಿನದಿನ ನೋಡುವೆ, ದಿನವೂ ಕರಗುತ
ಎರಡೇ ವಾರದೊಳಳಿಯುವುದು!
ಮತ್ತದು ದಿನದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು!

ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ?
ನೀನು ದೇವರ ಬಾಲಕನಾಗಲು
ನಿನಗೂ ಕೊಡುವನು, ಕಂದಯ್ಯಾ!

ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮಾ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ!"[೨೫]

ಪ್ರಸ್ತುತ ಪದ್ಯವು ಪ್ರಶ್ನಾರ್ಥಕ ರೂಪದ ಪದಗಳಿಂದ ರಚನೆಯಾಗಿರುವುದನ್ನು ಕಾಣಬಹುದು. ಮಕ್ಕಳಲ್ಲಿ ಇಂತಹ ಪ್ರಶ್ನೆಗಳೇ ಉದ್ಭವಿಸದೆ ಹೋದರೆ ಹೊಸ ಹೊಸ ಆವಿಷ್ಕಾರಗಳು, ಸಂಶೋಧನೆಗಳು ನಡೆಯುತ್ತಿರಲಿಲ್ಲ ಎನ್ನಬಹುದು. ಮಕ್ಕಳಲ್ಲಿ ಕುತೂಹಲದ ಜೊತೆಗೆ ವೈಚಾರಿಕ ಮನೋಭಾವ ಬಂದಿರುವುದರಿಂದ ಅವರಲ್ಲಿ ಸಾಮಾಜಿಕವಾಗಿ, ನೈಸರ್ಗಿಕವಾಗಿ, ವೈಜ್ಞಾನಿಕವಾಗಿ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇಂತಹ ಪ್ರಶ್ನೆಗಳು ಉದ್ಭವಿಸಿದೆ ಎಂದರೆ ಅಲ್ಲಿ

ವಿಚಾರಶೀಲತೆ ಜೀವಂತವಾಗಿದೆ ಎಂದೇ ಅರ್ಥ. ಈ ನೆಲೆಯಲ್ಲಿಯೇ ಈ ಕವನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಕವನದಲ್ಲಿ ಮಗುವಿಗೆ ಪ್ರಕೃತಿಯ ವಿಸ್ಮಯದ ಬಗ್ಗೆ ಕುತೂಹಲವಿದೆ. ಜೊತೆಗೆ ಅದರ ಬಗ್ಗೆ ಮಾಹಿತಿಯನ್ನು ಪಡೆಯುವ ಹಂಬಲವು ಇರುವುದನ್ನು ಕಾಣುತ್ತೇವೆ. ಮಗುವು ತನ್ನಮ್ಮನನ್ನು ಆಕಾಶದಲ್ಲಿರುವ ಚಂದಮಾಮನು ದೇವರು ಮಾಡಿರುವಂತ ಪೆಪ್ಪರಮೆಂಟೇನಮ್ಮ ಎಂದು ಪ್ರಶ್ನಿಸುತ್ತದೆ. ಈ ಪೆಪ್ಪರಮೆಂಟೇನೊಂದು ಒಂದು ಸಿಹಿಯಾಗಿರುವ ಪದಾರ್ಥ, ಮಕ್ಕಳಿಗೆ ತುಂಬಾ ಪ್ರಿಯವಾದುದು. ಹಾಗಾಗಿ ಚಂದಿರನು ದೇವರು ಮಾಡಿರುವ ಸಿಹಿಯಾದ ಪೆಪ್ಪರಮೆಂಟೇನಮ್ಮ? ಅದು ಎಷ್ಟೇ ತಿಂದರೂ ಸಿಹಿ ಕಡಿಮೆಯಾಗದ ಖಾಲಿಯಾಗದೆ ಇರುವಂತ ಅಂದರೆ ಎಷ್ಟೇ ನೋಡಿದರೂ ಕರಗದೇ ಸುಂದರವಾಗಿಯೇ ಕಾಣುವ ಚಂದಿರನು ಅಕ್ಷಯ, ಮತ್ತೆ ಮತ್ತೆ ಬರುವ ಎಂದು ಮೊದಲಾದ ಪ್ರಶ್ನೆಗಳನ್ನು ಕೇಳುತ್ತದೆ. ಕೊನೆಯಲ್ಲಿ ದೇವರಿಗಿಂತ ನೀನೆ ಹೆಚ್ಚು ಎಂದು ತಾಯಿಯ ಹಿರಿಮೆಯನ್ನು ಎತ್ತಿ ಹಿಡಿಯುತ್ತದೆ.

ಇಲ್ಲಿ ಪದ್ಯವು ಕೇಳುಗರಲ್ಲಿ ತುಂಬಾ ಸರಳ ಎನಿಸಿದ್ದು ಅದರಲ್ಲಿ ಏನೋ ಒಂದು ಹಿರಿದಾದ ಅರ್ಥವಿದೆ. ಪದ್ಯದಲ್ಲಿ ಬಳಸಿರುವ ಪದಗಳ ರಚನೆ ತುಂಬಾ ಸರಳವಿದೆ. ಅಲ್ಲದೆ ಇದರಲ್ಲಿ ಬರುವ 'ದೇವರ ಪೆಪ್ಪರಮೆಂಟೇನಮ್ಮ ಗಗನದೊಳಲೆಯುವ ಚಂದಿರನು? ಅಕ್ಷಯವಾಗುವ ಪೆಪ್ಪರಮೆಂಟದು ನನಗೂ ದೊರಕುವುದೇನಮ್ಮ? ಎಂಬ ಸಾಲುಗಳು ಪ್ರಶ್ನಾರ್ಥಕ ರೂಪಗಳಾಗಿವೆ.

ಹೀಗೆ ಮಕ್ಕಳಿಗೆ ಬಹು ಪ್ರಿಯವಾದ 'ಚಂದಿರ'ನನ್ನೆ ವಸ್ತುವಾಗಿಟ್ಟುಕೊಂಡು ಅಮ್ಮ ಮಗುವಿನ ಪ್ರಶ್ನಾರ್ಥಕ ಪದಗಳ ಮೂಲಕವೇ ಇನ್ನೊಂದು ಪದ್ಯ ಇದಕ್ಕೆ ಪೂರಕವೆಂಬಂತಿದೆ.

*** ನೀ.ರೇ. ಹಿರೇಮಠರ ಚಂದಿರನೇತಕೆ ಓಡುವನಮ್ಮ....**

"ಚಂದಿರನೇತಕೆ ಓಡುವನಮ್ಮ
ಮೊಡಕೆ ಹೆದರಿಹನೇ?
ಬೆಳ್ಳಿಯ ಮೋಡದ ಅಲೆಗಳ ಕಂಡು
ಚಂದಿರ ಬೆದರಿಹನೆ?
ಹಿಂಜಿದ ಅರಳೆಯು ಗಾಳಿಗೆ ಹಾರಿ
ಮೋಡಗಳಾಗಿಹವೇ
ಅರಳೆಯು ಮುತ್ತಿ ಮೈಯನು ಸುತ್ತಿ
ಚಂದಿರನ ಬಿಗಿಯುವವೆ?"[೨೬]

ಈ ಕವನದಲ್ಲಿಯು ಮಗುವು ತನ್ನಮ್ಮನನ್ನು ಆಕಾಶ ಕಾಯದ ಬಗ್ಗೆ, ಚಂದಿರನ ಬಗ್ಗೆ, ಮೋಡಗಳು ಮೊದಲಾದವುಗಳ ಕುರಿತು ವಿಧ ವಿಧವಾಗಿ ಪ್ರಶ್ನೆಗಳನ್ನು ಕೇಳುತ್ತಾ, ಅದಕ್ಕೆ

ಉತ್ತರವನ್ನು ಪಡೆಯಲು ಪ್ರಯತ್ನಿಸುತ್ತದೆ. ಕವನದಲ್ಲಿ ಬಳಕೆಯಾದ ಭಾಷಾ ರಚನೆಯನ್ನು ಗಮನಿಸಿದಾಗ ಯಾವುದೇ ಗಂಭೀರವಾದ ಅರ್ಥಗಳಿಲ್ಲದೆ, ಕ್ಲಿಷ್ಟಪದಗಳ ಬಳಕೆಯನ್ನು ಮಾಡದೆ ಮಕ್ಕಳಿಗೆ ಸರಳ ಎನಿಸುವಂತ ಪದಗಳ ಬಳಕೆಯನ್ನೇ ಮಾಡಲಾಗಿದೆ. ಇಡೀ ಪದ್ಯವು ಲಯಪೂರ್ಣವಾಗಿ ರಚನೆಯಾಗಿರುವುದು.

ಇನ್ನು ಮಕ್ಕಳ ಸಾಹಿತ್ಯದಲ್ಲಿ ಒಂದು ಪದವನ್ನು ಮತ್ತೆ ಮತ್ತೆ ನಿರಂತರವಾಗಿ ಬಳಕೆ ಮಾಡಿದ ರಚನೆಗಳನ್ನು ಕಾಣುತ್ತೇವೆ. ಅಂದರೆ ಪದವೊಂದನ್ನು ಪುನಃ ಪುನಃ ಪ್ರವಾಹೋಪಾದಿಯಲ್ಲಿ ಬರುವ ಸಾಲುಗಳನ್ನು ಕೇಳುವಾಗ ಒಂದು ಬಗೆಯ ನಾದಮಯತೆಯ ಲಯವನ್ನು ಸೃಷ್ಠಿಸುವ ಮಂತ್ರಮುಗ್ಧರನ್ನಾಗಿ ಮಾಡುವ ಕಾವ್ಯ ರಚನೆಗಳನ್ನು ಮಾಡಲಾಗಿರುತ್ತದೆ. ಇಂತಹ ರಚನೆಗಳನ್ನು ಪುನರಾವೃತ್ತಿ ಪದಗಳಲ್ಲಿ ಕಾಣಬಹುದು.

*** ಪಂಜೆ ಮಂಗೇಶರಾಯರ 'ಹಾವಿನ ಹಾಡು'**

"ನಾಗರ ಹಾವೇ! ಹಾವೊಳು ಹೂವೆ!
ಬಾಗಿಲ ಬಿಲದಲಿ ನಿನ್ನಯ ಠಾವೆ?
ಕೈಗಳ ಮುಗಿವೆ, ಹಾಲನ್ನೀವೆ!
ಬಾ ಬಾ ಬಾ ಬಾ ಬಾ ಬಾ ಬಾ

ಹಳದಿಯ ಹೆಡೆಯನು ಬಿಚ್ಚೋ ಬೇಗಾ!
ಹೊಳಹಿನ ಹೊಂದಲೆ ತೂಗೋ ನಾಗಾ!
ಕೊಳಲನ್ನೂದುವೆ ಲಾಲಿಸು ರಾಗಾ!
ನೀ ನೀ ನೀ ನೀ ನೀ ನೀ ನೀ ನೀ"[೨೭]

ಪಂಜೆಯವರ ಈ ಲಯಬದ್ಧವಾದ ಕವನವು ಮಕ್ಕಳ ಪ್ರಿಯ ಕವನ ಎನ್ನಬಹುದು. ಇದು ಮಕ್ಕಳಿಂದ ಹಿಡಿದು ಹಿರಿಯವರೆಗೂ ಈ ಕವನವನ್ನು ಗುನುಗುವುದನ್ನು ಕೇಳಿರುತ್ತೇವೆ.

ಹದಿನಾರು ಸಾಲುಗಳ ಈ ಕವನ 'ನಾಗರಹಾವಿನ' ಹೊರರೂಪದ ವರ್ಣನೆಯನ್ನು ಮಕ್ಕಳಿಗೆ ತಿಳಿಸುವಂತ ವಸ್ತುವನ್ನು ಹೊಂದಿದ್ದರೂ, ಹಿರಿಯರಿಗೆ, ಇದರ ಇನ್ನೊಂದು ರೂಪವನ್ನು ವ್ಯಕ್ತಪಡಿಸುವಂತಿದೆ. ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ನಾಗರಹಾವಿಗೆ ವಿಶೇಷ ಸ್ಥಾನವನ್ನು ಕೊಡಲಾಗಿದ್ದು, ನಾಗರ ಪಂಚಮಿ ಎಂದರೆ ಸಂಭ್ರಮದ ಹಬ್ಬವಾಗಿದೆ. ಅಂದು ನಾಗಗಳಿಗೆ ಹಾಲು, ತುಪ್ಪ, ಎಳನೀರನ್ನು ಎರೆಯುತ್ತಾರೆ. ನಾಗನಿಗೆ ಹರಕೆ ಹೊರುತ್ತಾರೆ. ಪೂಜೆ ಸಲ್ಲಿಸುತ್ತಾರೆ. ಆದರೆ ಇದನ್ನೆಲ್ಲಾ ಮಾಡುವುದು ಕಲ್ಲುನಾಗರಕ್ಕೆ, ನಿಜವಾದ ನಾಗರ ಹಾವನ್ನು ಕಂಡರೆ ಭಯಪಟ್ಟು ಕಲ್ಲಸೆವರು. ಹೀಗೆ ಹಾವುಗಳ ರಾಜನೆನಿಸಿದ 'ನಾಗರಹಾವು' ಹೂವಿನಂತಿದ್ದು, ರಮಣೀಯವೂ ಆಗಿರುವಂತದ್ದು, ಹೊರ ಪ್ರಪಂಚಕ್ಕೆ ಅದು ಸುಂದರವಾಗಿದ್ದರೂ, ಅಂತರಂಗದಲ್ಲಿ ಅದು ತುಂಬ ಕಠೋರ ಪ್ರಾಣಿಯೂ ಹೌದು.

ಆದರೆ ಕವಿಯಿಲ್ಲಿ ಹಾವಿಗೆ ಹಾಲನ್ನೀವೆ, ಕೈಗಳ ಮುಗಿವೆ ಎನ್ನುತ್ತಾ ಒಳಗೆ ಬರಲು ಆಹ್ವಾನಿಸುತ್ತಾರೆ. ಮತ್ತು

"ಎಲೆ ನಾಗಣ್ಣಾ! ಹೇಳಲೋ ನಿನ್ನಾ
ತಲೆಯಲಿ ರನ್ನವಿಹ ನಿಜವನ್ನಾ
ಬಲು ಬಡವರಿಗೆ ಕೊಪ್ಪರಿಗೆಯ ಚಿನ್ನಾ
ತಾ ತಾ ತಾ ತಾ ತಾ ತಾ ತಾ ತಾ"

ಹಾವಿನ ಹೆಡೆಯಲ್ಲಿ ರತ್ನವಿದೆ ಎಂದೇಳುತ್ತಾರೆ. ಅದು ಯಾರಿಗೂ ಕಾಣುವಂತದಲ್ಲ. ಇದು ಕವಿಯ ಕಲ್ಪನೆ, ಅಂದರೆ ನಾಗರಹಾವಿನ ಸ್ಥಳದಲ್ಲಿ ಅಪಾರ ಚಿನ್ನ, ನಿಧಿ ಇರುತ್ತದೆ. ಅದನ್ನು ಹಾವು ಸದಾ ಕಾಯುತ್ತದೆ ಎನ್ನುವ ಕಲ್ಪನೆಯಲ್ಲಿ ಹೇಳುತ್ತಾರೆ. ಇನ್ನು ಕಡೆ ಚರಣದಲ್ಲಿ ಹಾವಿನ ಹೊರಗಿನ ಮೈ ತಣ್ಣಗಿದ್ದರೂ ಅದರ ಮನದಲ್ಲಿ ಬಿಸಿ ಇರುತ್ತದೆ. ಅಂದರೆ ದ್ವೇಷ ಭಾವವಿರುತ್ತದೆ. ಅದರ ದ್ವೇಷ, 'ಹನ್ನೆರಡು ವರುಷ' ಇರುತ್ತದೆ ಎನ್ನುವ ಮಾತೇ ಇದೆ. ಅದರ ನಾಲಿಗೆ ಸೀಳಿರುವುದರಿಂದ ಅದಕ್ಕೆ ನೀತಿ, ಎರಡು ಇರುತ್ತವೆ. ಒಳಗೊಂದು-ಹೊರಗೊಂದು ಎಂಬುದು ಇಂಥ ರೀತಿ-ನೀತಿಯ ಪ್ರಾಣಿಯಿಂದ ಯಾವತ್ತೂ ದೂರವಿರಬೇಕೆಂಬುದು ಕವಿತೆಯ ಆಶಯವಾಗಿದೆ.

ಒಟ್ಟಾರೆಯಾಗಿ ಇಲ್ಲಿ ಕವಿತೆಯು ಹಿತವಾದ ಮುದಲಿಕೆಯ ಭಾಷೆಯ ಬೆಡಗಿನಿಂದಾಗಿ ಮತ್ತಷ್ಟು ಧ್ವನಿಪೂರ್ಣವಾಗಿದೆ. ಇಲ್ಲಿ ಬಾ ಬಾ ಬಾ ಬಾ, ನೀ ನೀ ನೀ ನೀ, ತಾ ತಾ ತಾ ತಾ ಮತ್ತು ಪೋ ಪೋ ಪೋ ಪೋ ಎನ್ನುವ ಪುನರುಚ್ಚರಿಸುವ ಪದಗಳು ಕವಿಯ ಕವನ ರಚನಾ ಸಾಮರ್ಥ್ಯವನ್ನು ಬಿಂಬಿಸುತ್ತವೆ. ಇದೇ ಪದ್ಯದಲ್ಲಿ ಎಲ್ಲೂ ಒತ್ತಕ್ಷರಗಳ ಹಾವಳಿಗಳಿಲ್ಲ. ಲಲಿತ ಪದಗಳ ಸರಳ ವರ್ಣಗಳ ಬಳಕೆ ಬಹಳ ಸೊಗಸಾಗಿದೆ. ಹೀಗೆ ಕವಿತೆಯ ಮೋಡಿಯು ಪ್ರಾಸ, ಒಳಪ್ರಾಸ, ಶಬ್ದಗಳ ಗಾರುಡಿ, ಲಘು ಗುರುಗಳ ಸಾಮ್ಯತೆಯ ಲಯಗತಿ, ಗೇಯತೆ, ಮೊದಲಾದವುಗಳ ಆಗಾರವಾಗಿ ಬಹುಪ್ರಿಯ ಮಕ್ಕಳ ಕವನವೆನಿಸಿದೆ.

ಅಲ್ಲದೆ ಮಕ್ಕಳ ಕವನಗಳಲ್ಲಿಯೇ ಬಾಲಗೀತೆಗಳು ಎಂದು ಕರೆಸಿಕೊಳ್ಳುವ ತುಸು ದೊಡ್ಡ ಮಕ್ಕಳ ವಯಸ್ಸಿಗನುಗುಣವಾಗಿ ರಚಿಸಿರುವ ಹಲವಾರು ಕವನಗಳಿವೆ. ಅದರಲ್ಲಿ ಪ್ರಾಕೃತಿಕ ವಸ್ತುವನ್ನೆ ನಿಸರ್ಗದ ಚೆಲ್ಲಾಟವನ್ನೇ ಮಕ್ಕಳಿಗೆ ಪರಿಚಯಿಸುವಂತ ಕವಿಶಿಷ್ಯ ಎನ್ನುವ ಕಾವ್ಯನಾಮದಲ್ಲಿ ರಚನೆಯಾದ ಪಂಜೆಯವರ 'ತೆಂಕಣಾಗಾಳಿಯಾಟ' ಪದ್ಯ ಒಂದು ಉತ್ತಮ ಉದಾಹರಣೆ ಎನ್ನಬಹುದು.

ಪಂಜೆಯವರ 'ತೆಂಕಣಗಾಳಿಯಾಟ'

"ಬರಲಿದೆ! ಅಹಹಾ! ದೂರದಿ ಬರಲಿದೆ
ಬುಸುಗುಟ್ಟುವ ಪಾತಾಳದ ಹಾವೊ?

ಹಸಿವಿನ ಭೂತವು ಕೂಯುವ ಕೂವೋ?
ಹೊಸತಿದು, ಕಾಲಿನ ಕೋಣನ ಓವೊ!
ಉಸಿರಿನ ಸುಯ್ಯೋ? ಸೂಸೂಕರಿಸುತ,
ಬರುವುದು! ಬರಬರ ಭರದಲಿ ಬರುವುದು”[೨೮]

ಪ್ರಸ್ತುತ ಪದ್ಯವು ರಗಳೆಯ ಪ್ರಬೇಧದಲ್ಲಿ ರಚನೆಯಾದ, ಅಮೂರ್ತದಿಂದ ಮೂರ್ತದೆಡೆಗೆ ಕೊಂಡೊಯ್ಯುವ ಉನ್ನತವಾದ ಕಲ್ಪನೆಗಳ ಕವನವಾಗಿದೆ. ಕನ್ನಡಿಗರಿಗೆಲ್ಲರಿಗೂ ಪರಿಚಿತವಾದ ಈ ಕವನವು ತೆಂಕಣ ದಿಕ್ಕಿನಲ್ಲಿ ಬೀಸುವ ಗಾಳಿಯ ಬೀಸು, ಬಿರುಸು, ಆವೇಶ, ರಭಸಗಳಿಂದ ಆರಂಭವಾಗುವ ಈ ಕವನದಲ್ಲಿ ಬರುವ ಪದಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಮೇಲ್ನೋಟಕ್ಕೆ ಮಕ್ಕಳ ಕವನಕ್ಕೆ ಪೂರಕವಾಗಿರುವಂತಿದ್ದರೂ ಇದರಲ್ಲಿ ವ್ಯಕ್ತವಾಗಿರುವ ಕವಿಯ ಕಲ್ಪನೆ, ಸ್ಫೂರ್ತಿ, ಪ್ರತಿಭೆ ಪ್ರಕೃತಿ ವಿಕೋಪದ ವರ್ಣನೆ, ಪ್ರಾಸ ವರ್ಣನೆ, ಮೊದಲಾದವುಗಳೆಲ್ಲವೂ ಕವನಕ್ಕೊಂದು ಹೊಸತನವನ್ನು ನೀಡಿರುವುದು ಮಕ್ಕಳ ಜೊತೆಗೆ ಹಿರಿಯರನ್ನು ಆಕರ್ಷಿಸುವ ಸುಂದರವಾದ ಕವನವಾಗಿರುವುದರಿಂದ ಈ ಕವನವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಇನ್ನು ಮಲೆನಾಡನ್ನು ಬಿಟ್ಟರೆ ದಕ್ಷಿಣ ಕನ್ನಡ ಪ್ರದೇಶವೆಂದರೆ ಮಳೆಗೆ ಪ್ರಸಿದ್ಧಿಯನ್ನು ಪಡೆದಿದೆ. ಅಲ್ಲಿ ಮಳೆಗಾಲದ ಆರಂಭದಲ್ಲಿ 'ತೆಂಕಣ ಗಾಳಿಯ' ಆರ್ಭಟವನ್ನು ಸ್ವತಃ ಕಂಡ ಕವಿಯು ಅದನ್ನು ಈ ಕವನದ ಮೂಲಕ ಬಹು ಸೊಗಸಾಗಿ ವರ್ಣಿಸಿದ್ದಾರೆ. ಅಲ್ಲಿಯ ಮಳೆ, ಸುಂಟರಗಾಳಿಯನ್ನು ಪಾತಾಳದ ಹಾವಿನ ಬುಸುಗುಟ್ಟುವಿಕೆ, ಹಸಿವಿನ ಭೂತದ ಕೂಗು, ಕೋಣನ ನಿಟ್ಟುಸಿರು, ಭಯಾನಕವಾದ ಆಗಮವನ್ನು ತೋರಿಸುತ್ತದೆ. ಇಲ್ಲಿ ಬೀಸುವ ಗಾಳಿಯು ಸೂಸೂಕರಿಸುತ ಎಲ್ಲವನ್ನು ನುಂಗುವ ರೀತಿಯಲ್ಲಿದೆ ಎನ್ನುತ್ತಾರೆ.

“ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ
ಅಬ್ಬರದಲಿ ಭೋರ್ ಭೋರೆನ್ನ ಗುಮ್ಮಿಸಿ”

ಇಲ್ಲಿ ಗಾಳಿಯ ಬಿರುಸಿನ ಅಬ್ಬರವು ಸಮುದ್ರವನ್ನು ಅಲ್ಲೋಲ ಕಲ್ಲೋಲಗೊಳಿಸುವಂತ ಪರಿಣಾಮವನ್ನುಂಟುಮಾಡುತ್ತದೆ. ಈ ಚರಣಗಳಲ್ಲಿ ಬೊಬ್ಬೆಯ, ಉಬ್ಬರ, ಬೊಬ್ಬುಳಿ, ಅಬ್ಬರ, ಹಬ್ಬಿಸಿ, ಭೋರ್ ಭೋರನ್ನಿ ಪದಗಳಲ್ಲಿ 'ಬ' ಕಾರವು ಒತ್ತಕ್ಷರವಾಗಿ ಬಂದಿರುವುದನ್ನು ಕಾಣುತ್ತೇವೆ. ಜೊತೆಗೆ ಬೊಬ್ಬೆ, ಹಬ್ಬಿಸಿ ಪದಗಳು ಸಮುದ್ರದಲೆಗಳ ಏರಿಳಿತಗಳ ಸ್ವರೂಪಕ್ಕೆ ಮಾದರಿಯಾಗಿದೆ.

“ನಡುಮುರಿಯುತ ನಗ ನಾವೆಗೆ ಕೂವೆಗೆ
ಉಡಿಸಿದ ಹಾಯಿಯ ಹರಿಯುತ ಬಿರಿಯುತ

ಹಡಗನು ಕೀರಿಸಿ, ತುಮುರೆನು ತೇರಿಸಿ
ದಡದಲಿ ಝಾಡಿಸಿ, ದೋಣಿಯನಾಡಿಸಿ,
ಇದೆ! ಇದೇ! ಬರುತಿದೆ, ಇದೆ! ಇದೆ! ಬರುತಿದೆ

ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದೆ ಕಿಚ್ಚನು ಊದಲು ಹಾರುತ
ಬರುತಿದೆ! ಇದೆ! ಇದೆ! ಇದೆ! ಇದೆ! ಬರುತಿದೆ”[೨೯]

ಮುಂದುವರೆಯುತ್ತಾ ನಾವೆ, ಕೂವೆ, ಹಾಯಿ, ಹಡಗು, ದೋಣಿ, ತುಮುರ ಮೊದಲಾದವುಗಳು ಚಿತ್ರಣ ಕಣ್ಣಿಗೆ ಕಟ್ಟುವಂತಿದ್ದು ಅವು ತೆಂಕಣ ಬಿರುಗಾಳಿಯ ಹೊಡೆತಕ್ಕೆ ಬಲಿಯಾಗುತ್ತವೆ. ಅಲ್ಲದೆ ಈ ಗಾಳಿಯು ಪಕ್ಷಿಗಳ ಕಣ್ಣಿಗೆ ಧೂಳಿನ ಕಾಡಿಗೆ ಇಕ್ಕುತ್ತ, ಹೊಲದೆತ್ತುಗಳ ಓಡುತ್ತ ಕೊಟ್ಟಿಗೆಯನ್ನು ಸೇರುತ್ತಾ, ಕಾಡಿಗೆ ಸಿಕ್ಕಿದ ಅಂದರೆ ಅರಣ್ಯಕ್ಕೆ ಹತ್ತಿದ ಕಿಚ್ಚನ್ನು (ಬೆಂಕಿ) ಕಾಳ್ಗಿಚ್ಚು ಹಾರಿಸುತ ಎನ್ನುವರ್ಥ ಬರುತ್ತದೆ. ಇಲ್ಲಿ ಕಡೆಯ ಪದಗಳೆಲ್ಲವು ಅಂತ್ಯಪ್ರಾಸದಿಂದ ಕೂಡಿರುವುದರ ಜೊತೆಗೆ ವಿಶೇಷ ಅರ್ಥವನ್ನು ಕಾಣಬಹುದು.

“ಸಡಿಲಿಸಿ ಮಡದಿಯರುಡಿಯನು ಮುಡಿಯನು
ಬಡಮುದುಕರ ಕೊಡೆಗರಿ ಹರಿದಾಡಿಸಿ
ಹುಡುಗರ ತಲೆ ತಲೆ ಟೊಪ್ಪಿಯ ಆಟವ
ದಡಬಡನಾಡಿಸಿ, ಮನೆಮನೆ ತೋಟವ
ಅಡಿಮೇಲಾಗಿಸಿ, ತೆಂಗನು ಲಾಗಿಸಿ
ಅಡಕೆಯ ಬಾಗಿಸಿ, ಪನೆ ಇಬ್ಬಾಗಿಗೆ
ಬುಡದೂಟಾಡಿಸಿ, ತಲೆ ತಾಟಾಡಿಸಿ
ಗುಡಿಸಲ ಮಾಡನು ಹುಲುಹುಲು ಮಾಡಿಸಿ,
ಬಂತೈ! ಬಂತೈ! ಇದೆ! ಇದೆ! ಬಂತೈ!”

ಚರಣಗಳಲ್ಲಿ ಮಳೆಗಾಳಿಯ ಹೊಡೆತಕ್ಕೆ ಸಿಕ್ಕ ಹೆಂಗಸರ ಮುಡಿ (ತಲೆ) ಕೆದರುವ, ಸೀರೆ ಉಡಿಗೆಗಳು ಹಾರಾಡುವ ದೃಶ್ಯವು ವಯಸ್ಸಿನಂತರವಿಲ್ಲದೆ ಮಕ್ಕಳು, ಹೆಂಗಸರು, ಹಿರಿಯರು ಎನ್ನದೇ ಎಲ್ಲರು ಪರಿತಪಿಸುವಂತೆ ಮಾಡಿದೆ. ಈ ಚರಣಗಳಲ್ಲಿ ಎರಡನೆ ಅಕ್ಷರವು ‘ಡ’ ಕಾರದ ಪುನರಾವರ್ತನೆಯನ್ನು ಕಾಣಬಹುದು.

“ಗಿಡಗಿಡದಿಂ ಚೆಲು ಗೊಂಚಲು ಮಿಂಚಲು
ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ,

ಪಡುವಣ ಮೋಡವ ಬೆಟ್ಟಕೆ ಗಟ್ಟಕೆ
ಹೊಡೆದಟ್ಟುತ, ಕೋಲ್ ಮಿಂಚನು ಮಿರುಗಿಸಿ
ಹೊಡೆದಟ್ಟುತ, ಕೋಲ್‌ಮಿಂಚನು ಮಿರುಗಿಸಿ
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್
ಕುಡಿನೀರನು ಒಣಗಿದ ನೆಲಕೆರೆವೋಲ್
ಬಂತೈ ಬೀಸುತ! ಬೀಸುತ ಬಂತೈ!
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ! ಬಂತೈ! ಬಂತೈ! ಬಂತೈ!"

ಇಲ್ಲಿ ತೆಂಕಣ ಗಾಳಿಯ ಆರ್ಭಟದಿಂದಾಗಿ, ಗಿಡ-ಮರಗಳು, ಅವರಲ್ಲಿರುವ ಹಣ್ಣುಗಳು, ಉದುರಿ ಚೆದುರಿ ಹೋಗಿರುವುದಲ್ಲದೆ, ಬೆಟ್ಟಗುಡ್ಡಗಳನ್ನು ಬಿಡದೆ, ಗುಡುಗು-ಸಿಡಿಲುಗಳ ಆರ್ಭಟದಿಂದ ಚದುರಿ ಭೂತಾಯಿಯನ್ನೇ ನಡುಗಿಸಿವೆ. ಜೊತೆಗೆ ಜಡಿಮಳೆ, ಬಿರುಮಳೆ ಅಂದರೆ ಬಿರುಸಾದ ಮಳೆ ಜಿಟಿ ಜಿಟಿ ಮಳೆ, ಸುರಿತಿದೆ, ಕೊಂಕಣ ಪ್ರದೇಶವನ್ನೆ ನಡುಗಿಸಿದೆ ಎನ್ನುತ್ತಾರೆ. ಇಲ್ಲಿ ಇದೆ ಇದೆ ಬರುತಿದೆ ಎನ್ನುವ ಸಾಲುಗಳು ಪುನರಾವರ್ತಿಸಿ, ಬಂದು ಕೊನೆಯಲ್ಲಿ ಬಂತೈ ಬಂತೈ ಇದೆ ಇದೆ ಬಂತೈ ಎಂಬುದು ಬಿರುಗಾಳಿಯ ಘೋರವಾದ ಬರುವಿಕೆಯ ಪ್ರತೀಕವಾಗಿದೆ.

ಒಟ್ಟಾರೆಯಾಗಿ ಮಂಗೇಶರಾಯರ 'ತೆಮಕಣಗಾಳಿಯಾಟ' ಕಾವ್ಯವು ಸುಂಟರಗಾಳಿಯು ಬೀಸುವ ದೃಶ್ಯದ ಚಿತ್ರಣ ಮಾತ್ರವಲ್ಲದೆ ನಿಸರ್ಗ ಮತ್ತು ಮಾನವನ ಕೊಂಡಿಯಾಗಿರುವ 'ಗಾಳಿ' ಒಂದು ಅದ್ಭುತ ಶಕ್ತಿಯಾಗಿ ಮಿಂಚಿರುವುದನ್ನು ಕಾಣುತ್ತೇವೆ. ದೂರದ ಗಾಳಿ ಹತ್ತಿರವಾಗುವ ಅನುಭವ, ನಂತರ ಸಮುದ್ರದ ಮೇಲೆ ಅದರ ಭೀಕರತೆಯ ಚೆಲ್ಲಾಟ, ಕಾಡಿನ ಕಾಳ್ಗಿಚ್ಚು, ಹೀಗೆ ಮನುಷ್ಯ ಮತ್ತು ಸುತ್ತಲಿನ ಪರಿಸರದಲ್ಲಿ ಏರುಪೇರಾದಾಗ ಆಗುವ ಭೀಕರ ಪರಿಣಾಮವನ್ನು ಕವನದ ಮೂಲಕ ಕಟ್ಟಿಕೊಂಡಿದ್ದಾರೆ. ಇದರಲ್ಲಿ ಬಳಕೆಯಾಗಿರುವ ಭಾಷೆ, ಛಂದಸ್ಸುಗಳು ಮತ್ತು ಕೆಲವು ಒತ್ತಕ್ಷರಗಳು ಮಕ್ಕಳಿಗೆ ಸ್ವಲ್ಪ ಕಠಿಣ ಅನಿಸಿದರೂ, ಇದರಲ್ಲಿ ಬಳಸಿರುವ ಪುನರುಕ್ತಿ ಪದಗಳು, ಪ್ರಾಸಪದಗಳು, ಪದನಾಮ, ಪದೌಚಿತ್ಯ ಪದಗಳ ಬಳಕೆ, ಜೊತೆಗೆ ದ್ವಿತೀಯ ವಿಭಕ್ತಿ ಪ್ರಯೋಗವನ್ನು ಎತ್ತು, ಆಡು, ದನಗಳನ್ನು ಹಟ್ಟಿಗೆ ಅಟ್ಟುವ ಎನ್ನುವ ಪದಗಳ ಬದಲಿಗೆ ಎತ್ತಿಗೆ, ದನಕೆ, ಅಡಿಗೆ, ಹಟ್ಟಿಗೆ ಅಟ್ಟಿಸಿ ಎನ್ನುವ ಚತುರ್ಥಿ ವಿಭಕ್ತಿ ಪ್ರತ್ಯಯ ಪ್ರಯೋಗ ಮಾಡಿರುವುದನ್ನು ಗಮನಿಸಬಹುದು. ಒಟ್ಟಿನಲ್ಲಿ ಪಂಜೆಯವರ ಅದ್ಭುತ ಕಾವ್ಯಶಕ್ತಿಗೆ ಈ ಕವನ ಸಾಕ್ಷಿಯಾಗಿದೆ.

ಇತರೆ ಪ್ರಮುಖ ಮಕ್ಕಳ ಕವಿತೆಗಳೆಂದರೆ

* ಡೊಂಬರ ಚೆನ್ನಿ	ಪಂಜೆ ಮಂಗೇಶರಾವ್
* ಕನ್ನಡಿಗರ ತಾಯಿ	ಎಂ. ಗೋವಿಂದ ಪೈ
* ಗೋವಿನ ಬಾಳು	ಎಸ್.ಜಿ. ನರಸಿಂಹಚಾರ್
* ಸಂತಮ್ಮಣ್ಣ	ಹೊಯಿಸಳ
* ನಂಗೊತ್ತಿಲ್ಲಪ್ಪ	ಹೊಯಿಸಳ
* ಕರಡೀ ಕುಣಿತ	ದ.ರಾ. ಬೇಂದ್ರೆ
* ಕುಣಿಯೋಣು ಬಾರ	ದ.ರಾ. ಬೇಂದ್ರೆ
* ಜಾನಿ ಜೇನ್ನೊಣಗಳ ಜಗಳ	ಶಿವರಾಮ ಕಾರಂತ
* ತಿನ್ನದ ದೇವರು	ಶಿವರಾಮ ಕಾರಂತ
* ಕಪ್ಪೆ ಭಟ್ಟರ	ಶಿವರಾಮ ಕಾರಂತ
* ಕನ್ನಡ	ಕುವೆಂಪು
* ಗುರು	ಕುವೆಂಪು
* ಮೂರ್ತಿಯ ಚಂದ್ರ	ಕುವೆಂಪು
* ಹೇರಾಸೆ	ಕುವೆಂಪು
* ಟುವ್ವಿ ಟುವ್ವಿ	ಕುವೆಂಪು
* ಹೂ ಕೊಯ್ಯುವ ಹಾಡು	ಕಯ್ಯಾರ ಕಿಞಣ್ಣ ರೈ
* ದೋಣಿ	ಕಯ್ಯಾರ ಕಿಞಣ್ಣ ರೈ
* ಕಾಶೀಗ್ ಹೋದ ನಂ ಭಾವ	ಕಯ್ಯಾರ ಕಿಞಣ್ಣ ರೈ
* ನಾಯಿಮರಿ	ಜಿ.ಪಿ. ರಾಜರತ್ನಂ
* ನಮ್ಮ ಮನೆಯ ಸಣ್ಣಪಾಪ	ಜಿ.ಪಿ. ರಾಜರತ್ನಂ
* ಕಳ್ಳಮಲ್ಲ	ಜಿ.ಪಿ. ರಾಜರತ್ನಂ
* ತೋಳನ ತೀರ್ಪು	ಜಿ.ಪಿ. ರಾಜರತ್ನಂ

* ರೊಟ್ಟಿಯಂಗಡಿ ಕಿಟ್ಟಪ್ಪ	ಜಿ.ಪಿ. ರಾಜರತ್ನಂ
* ಗಡಿಯಾರ	ದಿನಕರ ದೇಸಾಯಿ
* ಮೃಗಶಾಲೆಯ ಸಿಂಹಗಳು	ವಿ. ಸೀತಾರಾಮಯ್ಯ
* ಹಿಂದಿನ ಸಾಲಿನ ಹುಡುಗರು	ಕೆ.ಎಸ್. ನರಸಿಂಹಸ್ವಾಮಿ
* ನನ್ನ ಕುದುರೆ	ಸಿದ್ಧಯ್ಯ ಪುರಾಣಿಕ
* ಗಿರಿಗಿರಿ ಗಿಂಡಿ	ಚನ್ನವೀರ ಕಣವಿ
* ಮಿಂಚು ಹುಳ	ಚನ್ನವೀರ ಕಣವಿ
* ಚಂದಿರನೇತಕೆ ಓಡುವನಮ್ಮ	ನೀ.ರೇ. ಹಿರೇಮಠ
* ನಕ್ಷತ್ರ	ಜಿ.ಎಸ್. ಶಿವರುದ್ರಪ್ಪ
* ಪ್ರಶ್ನೆ	ಜಿ.ಎಸ್. ಶಿವರುದ್ರಪ್ಪ
* ಪಾಠದ ಬಾರವು ಬೇಡಮ್ಮ	ಸುಜನಾ
* ಕಡುಬಿನ ಊಟ	ಅನಾಮಧೇಯ
* ಸೂರ್ಯಚಂದ್ರರ ಕಬ್ಬಡಿ ಆಟ	ಅನಾಮಧೇಯ
* ಯಾಕೋ ಗೊತ್ತಿಲ್ಲ	ಪಳಪಳ ಸೀತಾರಾಮ ಭಟ್ಟ
* ಮೊದಲು ಕೆಲಸ ಮಾಡುವೆ	ಸಿಸು ಸಂಗಮೇಶ
* ಬಣ್ಣದ ಹಕ್ಕಿ	ಸಿ.ಫ. ಕಟ್ಟಿಮನಿ
* ನವಿಲು	ಜಯರಾಮಚಾರ್ಯ
* ದಡ್ಡನ ಹಾಡು	ಮಚ್ಚಿಮಲೆ ಶಂಕರನಾರಾಯಣರಾವ್
* ಮಂಗಗಳ ಉಪವಾಸ	ಮಚ್ಚಿಮಲೆ ಶಂಕರನಾರಾಯಣರಾವ್
* ಇರುವೆ	ಸಿದ್ಧಕಟ್ಟೆ ಚಂದ್ರಶೇಖರ ಶೆಟ್ಟಿ
* ತಟ್ಟನೆ ಹೇಳಿರಿ	ಮುಂಡಾಜೆ ರಾಮಚಂದ್ರ ಭಟ್ಟ
* ಮನೆಗೆಲಸ	ತೋನ್ಸೆ ಮಂಗೇಶರಾವ್
* ಹೂವಿನ ಜೇನಿಗೆ ತುಂಬಿಯ ಆಟ	ಸರೋಜಿನಿ ಮಹಿಷಿ

* ನರಿಯ ಗರ್ವಭಂಗ	ಕಂಚ್ಯಾಣಿ ಶರಣಪ್ಪ
* ಮುದ್ದುಮರಿ	ಕಂಚ್ಯಾಣಿ ಶರಣಪ್ಪ
* ತಾಯಿ	ಇ. ಮಾಕ್ಸಾಡೆನ್
* ಪುಟ್ಟ ತಂಗಿ	ಎಸ್.ಡಿ. ಇಂಚರ
* ಚಟಾಕಿ	ಎಲ್. ಗುಂಡಪ್ಪ
* ಕಂದನ ಬಯಕೆ	ಕವಿತಾ ಕೃಷ್ಣ
* ಎಷ್ಟು ಮಜ!	ಕವಿತಾ ಕೃಷ್ಣ
* ಅಮ್ಮನ ಕೇಳುವೆ	ಅಶೋಕ ಚೊಳದ ಗುಡ್ಡ
* ಚಂದ್ರಗ್ರಹಣ	ಸಿ.ಎಂ. ಗೋವಿಂದ ರೆಡ್ಡಿ
* ಬಣ್ಣದ ಟಿ.ವಿ.	ಚಂದ್ರಗೌಡ ಕುಲಕರ್ಣಿ
* ತಾಯಿ ತಂದೆ	ರಾ.ಮಾ. ವಿಶ್ವಾಮಿತ್ರ
* ಪುಟ್ಟನ ಪ್ರಶ್ನೆ	ಸೂರ್ಯ ನಾರಾಯಣ ಮಡಿ
* ಕಡಲ ಕೆರೆ	ಅಮೃತ ಸೋಮೇಶ್ವರ
* ಸಂಗೀತ ಸಭೆ	ವೆಂಕಟರಾಜ ಪುಣಿಂಚತ್ತಾಯ
* ಬೆಳೆಸಿ ಹಸಿರು ಕಾನನ	ಡಾ.ಕೆ.ಎಂ. ಶೆಟ್ಟಿ ಬಳ್ಳಮಂಜ
* ಕುಂಭಕರ್ಣನ ನಿದ್ದೆ	ಎನ್. ಶ್ರೀನಿವಾಸ ಉಡುಪ
* ಕಪ್ಪೆ ಮತ್ತು ನಾಯಿ	ಎನ್. ಶ್ರೀನಿವಾಸ ಉಡುಪ
* ಮಾಯದ ಚಂಡು	ಕೃಷ್ಣಮೂರ್ತಿ ಬಿಳಿಗಿರಿ
* ಕಾನ್ವೆಂಟ್ ಗುಂಡಣ್ಣ	ಮುಳಕುಂಟೆ ರಮೇಶ್
* ಸೀಮೆ ಹಸು	ಮುಳಕುಂಟೆ ರಮೇಶ್
* ಯಾರಮ್ಮ	ಮುಳಕುಂಟೆ ರಮೇಶ್
* ಆನೆ ಬಂದಿತ್ತು	ಬೆಂಡರವಾಡಿ ಸುಬ್ರಹ್ಮಣ್ಯ ಶರ್ಮಾ
* ಹಾಡು	ವಿ.ಜಿ. ಭಟ್ಟ

* ದೇವರೊಬ್ಬನೆ — ಕೆ. ಚಿದಾನಂದ
* ಚಂದಿರ ಮಾಮ — ಕೆ. ಚಿದಾನಂದ
* ಬಂಧುಬಳಗ — ಕೆ. ಚಿದಾನಂದ
* ತೆಂಗಿನ ಮರವೇ ಆಗ್ತೀಯ — ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
* ಹಕ್ಕಿ ಹಾಗೇ ನಾನೂನೂ — ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
* ಇರುವೆ ಎಲ್ಲಿರುವೆ — ಬಿ.ಎಸ್. ಚಂದ್ರಶೇಖರ
* ಪುಟ್ಟಿ ಮತ್ತು ನಾಯಿಮರಿ — ರಾಘವೇಂದ್ರ ಉಡುಪ
* ಬಣ್ಣದ ಬುಗುರಿ — ಶೇಖರಪ್ಪ ಹುಲಿಗಿರಿ
* ಗೋವಿನ ಹಾಡು — ಜಾನಪದ
* ತಿರುಕನ ಕನಸು — ಮುಪ್ಪಿನ ಷಡಕ್ಷರಿ

೪.೮. ಮಕ್ಕಳ ನಾಟಕಗಳಲ್ಲಿ ವಸ್ತು, ತಂತ್ರ ಮತ್ತು ಶೈಲಿಯ ಬಳಕೆ

*** ಕುವೆಂಪು ಅವರ 'ಮೋಡಣ್ಣನ ತಮ್ಮ' ನಾಟಕ**

ಈ ನಾಟಕದಲ್ಲಿ ಬರುವ ಪಾತ್ರಗಳು ಎರಡೇ, ಮೋಡ ಮತ್ತು ಹುಡುಗ (ಕಿಟ್ಟಿ). ಇಲ್ಲಿ ವನದ ಕಡೆಯಿಂದ ಬಂದ ಹುಡುಗನು ತನ್ನ ಸುತ್ತಮುತ್ತಲೂ ನೋಡುತ್ತಾ ಬಂದು, ಆಕಾಶದ ಕಡೆಗೊಮ್ಮೆ ನೋಡಿದಾಗ ಸಂತಸದಿಂದ ಮಂದಸ್ಮಿತನಾಗಿ ತನ್ನ ಸಂತೋಷವನ್ನು ತೋರ್ಪಡಿಸುವುದೇ ಇಲ್ಲಿಯ ನಾಟಕದ ಕಥಾವಸ್ತುವಾಗಿದೆ. ಈ ಹುಡುಗನು ಆಕಾಶದಲ್ಲಿ ತೇಲುತ್ತಿದ್ದ ಮೋಡವನ್ನು ಸಂಬೋಧಿಸುವುದರ ಮುಖಾಂತರ ನಾಟಕ ಪ್ರಾರಂಭವಾಗುತ್ತದೆ.

ಹುಡುಗ: "ಓ ಮೋಡಣ್ಣ ಓ ಮೋಡಣ್ಣ
ನಾನೂ ಬರುವೆನು ಕೈ ನೀಡಣ್ಣಾ"[೩೫]

ಇಲ್ಲಿ ಕಿಟ್ಟಿ ಎಂಬ ಹುಡುಗನು ಆಕಾಶದಲ್ಲಿ ತಾನು ಮೋಡದ ಜೊತೆಗೆ ತೇಲಬಹುದೆಂಬ ಹಂಬಲದಿಂದ, ಮೋಡಣ್ಣ ನಿಲ್ಲು ನಾನು ಬರುತ್ತೇನೆ ಕೈ ಹಿಡಿದೆಳೆಯಣ್ಣಾ ಎಂದು ಮೋಡಕ್ಕೆ ವಿನಂತಿಸಿಕೊಳ್ಳುತ್ತಾನೆ. ಆಗ

ಮೋಡಣ್ಣ: ಬರಬೇಡಣ್ಣಾ! ಬರಬೇಡಣ್ಣಾ!
ಅಪ್ಪನು ಬೈವಳು ನೀ ನೋಡಣ್ಣಾ
ಎಂದು ಮೇಲಿನಿಂದಲೆ ಉತ್ತರಿಸುತ್ತಾನೆ.

ಹುಡುಗ: ನಿನ್ನನು ನೋಡಲು ನಾ, ಮೋಡಣ್ಣಾ!

ನನ್ನೀ ಜನ್ಮವ ನಿಂದಿಪೆನಣ್ಣ
ಬಲು ಸಂತೋಷದಿ ತೇಲುವೆಯಣ್ಣ
ಬಳಲದೆ ಆಟವನಾಡುವೆಯಣ್ಣ
ಮಿಂಚಿನ ಬಳಿಯೇ ನೀನಿರುವೆ
ಮಿಂಚಿನ ಬಳೆಯನೆ ಧರಿಸಿರುವೆ
ಗುಡುಗಿನ ಸಂಗಡ ಆಡುವೆ ನೀನು
ಗುಡುಗಾಟವ ಆಡುವವೋಲು ನಾನು
ದೂರದ ಗಿರಿಗಳ ಏರುವೆ ನೀನು
ದೂರದ ಪುರಗಳ ನೋಡುವೆ ನೀನು
ಎಲೆ ಮೋಡಣ್ಣಾ, ಎಲೆ ಮೋಡಣ್ಣಾ
ನಾನೂ ಬರುವೆನು ಕೈ ನೀಡಣ್ಣಾ!

ಮತ್ತೆ ಇಲ್ಲಿ ಆ ಹುಡುಗನು ಮೋಡವನ್ನು ಕುರಿತು ನಾನು ನಿನ್ನ ನೋಡಬೇಕು, ನೀನು ಆಕಾಶದಲ್ಲಿ ತೇಲುವಂತೆಯೇ ನಾನು ತೇಲಬೇಕು. ನೀನು ಮಿಂಚಿನ ಬಳಿಯಲ್ಲಿದ್ದು, ಮಿಂಚಿನ ಬಳೆಯನ್ನು ತೊಟ್ಟಿರುವೆ, ನಿನ್ನಂತೆಯೇ ನಾನು ಗುಡುಗಿನ ಜೊತೆಗೆ ಆಡಬೇಕು, ನಿನ್ನಂತೆ ನಾನು ಗಿರಿಶಿಖರಗಳನ್ನು ಏರಬೇಕು ಇದು ನನ್ನ ಆಸೆಯಾಗಿದೆ ಅಣ್ಣ, ನಾನೂ ನಿನ್ನಲ್ಲಿಗೆ ಬರುವೆ ಕೈ ನೀಡಣ್ಣನೆಂದು ಕೇಳುತ್ತಾನೆ.

ಮೋಡ: ಬರಬೇಡಣ್ಣಾ! ಬರಬೇಡಣ್ಣಾ!
ಅವ್ವನು ಬೈವಳು ನೀ ನೋಡಣ್ಣಾ!

ಎಂದು ಹುಡುಗನಿಗೆ ಮತ್ತೆ ಬರುವುದು ಬೇಡವೆಂದೇ ಹೇಳುತ್ತದೆ.

ಹುಡುಗನಿಗೆ ಮೋಡಣ್ಣನು ಬರಬೇಡ ಎಂದುದಕ್ಕೆ ಮತ್ತೆ ನಿರಾಶೆಯಾಗುತ್ತದೆ. ಆಗ ಸುತ್ತಲು ನೋಡಿ ಗಿರಿಯನ್ನು ಕಂಡು ಅದರ ಸಹಾಯವನ್ನು ಬೇಡುತ್ತಾನೆ. ಆಗ, ಗಿರಿಯು ಆ ಹುಡುಗನ ಅಳುವಿನ ಮುಖವನ್ನು ನೋಡಲಾಗದೆ ಹುಡುಗನನ್ನು ಕರೆದುಕೊಂಡು ಹೋಗು ಎಂದು ಶಿಫಾರಸ್ಸು ಮಾಡುತ್ತಾನೆ.

ಆಗ ಗಿರಿಯ ಮಾತನ್ನು ಕೇಳಿದ ಮೋಡವು ಗಿರಿಯನ್ನು ಕುರಿತು ಕೋಪಗೊಂಡು, ನಿನೇನು ಹೇಳ್ತಿಯಾ ಗಿರಿಯಣ್ಣ ಆ ಹುಡುಗನನ್ನು ಕರೆದುಕೊಂಡು ಹೋದರೆ ಅವನ ತಾಯಿಯ ವಿಲಾಪವನ್ನು ನೋಡಲಾರೆ, ಅವರ ಶಾಪವನ್ನು ನಾನು ಸಹಿಸಲಾರೆ ಎಂದು ಹೇಳಿ ನೀನು ಸುಮ್ಮನಿರು ಗಿರಿಯಣ್ಣ ಎನ್ನುತ್ತದೆ.

ಮತ್ತೆ ಹುಡುಗನು ಮೋಡಣ್ಣನಲ್ಲಿ ನಾನು ನಿನ್ನಲ್ಲಿಗೆ ಬರುವೆ ದಮ್ಮಯ್ಯಣ್ಣಾ, ಮೋಡಣ್ಣ ಎಂದು ಪರಿಪರಿಯಾಗಿ ಬೇಡುತ್ತದೆ. ಆದರೂ ಮೋಡಣ್ಣ ಕರಗುವುದಿಲ್ಲ. ಇಲ್ಲಿ ಬರುವುದು ಬೇಡ, ಇಲ್ಲಿ ನಿನಗೆ ಹಾಲು ಕೊಡುವರ್ಯಾರು? ನಿನ್ನ ತಾಯಿಯು ಇರುವುದಿಲ್ಲ ಎಂದೆಲ್ಲಾ ಹೇಳುತ್ತದೆ.

ಹುಡುಗನಿಗೆ ದಾರಿ ಕಾಣದ ಹಾಗಾಯಿತು. ಮತ್ತೆ ಏನೂ ತೋರದೆ ಹತ್ತಿರದಲ್ಲಿದ್ದ ಕಾಡನ್ನು ಸಹಾಯಕ್ಕೆ ಕರೆಯುತ್ತಾನೆ. ಆದರೆ ಇಲ್ಲಿ ಕಾಡು ಅಸಮಾನದಿಂದ ಮೋಡಣ್ಣನಿಗೆ ನೀನು ಈ ಹುಡುಗನನ್ನು ಕರೆದುಕೊಂಡು ಹೋಗುವುದು ಬೇಡ, ಎಂದು ಜನರು ಕಾಡಿಗೆ ಮಾಡುವ ವಂಚನೆಯನ್ನು ನೆನೆದು ಅಸಹನೆಯನ್ನು ತೋರುತ್ತದೆ. ಕಿಟ್ಟಿಗೆ ಕಾಡಿನ ಸಹಾಯವು ಫಲಕಾರಿಯಾಗುವುದಿಲ್ಲ.

ಕೊನೆಗೆ ಈ ಹುಡುಗನ ಬಲವಂತದ ಗೋಳನ್ನು ಸಹಿಸಲಾರದೆ, ಬುದ್ದಿವಾದವನ್ನು ಹೇಳಿ ಬರುತ್ತೇನೆಂದು ಮೋಡಣ್ಣ ಬರುತ್ತಾನೆ.

ಮೋಡಣ್ಣ: “ಬುದ್ದಿಯ ಹೇಳುವೆನಾಲಿಸು ನೀನು
ಬುದ್ಧಿಯರಿಯೆ ಕರೆದೊಯ್ವೆನೊ ನಾನು
ಧರ್ಮಮೇಘ ನಿನಾಗಲು ಬೇಕು
ಧರ್ಮದ ಮಳೆಯನು ಸುರಿಯಲು ಬೇಕು
ಸತ್ಯವನೆಂದಿಗು ಬಿಡಬೇಡ
ಮಿಥ್ಯೆಯನೆಂದು ಹಿಡಿಯಲು ಬೇಡ
ಚಿತ್ತದಿ ಭಕ್ತಿಯ ಬೀಜವನು
ಬಿತ್ತುತ ಪಡೆಯೈ ಮುಕ್ತಿಯನು
ದೇವರ ದಿನವೂ ಭಜಿಸಲು ಬೇಕೋ
ಪಾವನನಾತನ ನೆನೆಯಲು ಬೇಕೋ
ಮಾನವರೆಲ್ಲಾ ದೇವರ ಪುತ್ರರು
ಆದುದರಿಂದವರೆಲ್ಲಾ ಮಿತ್ರರು
ಜಾತಿ ವೈರಿಗಳ ಮರೆಯಲು ಬೇಕೋ
ನೀತಿ ನಡೆತೆಗಳ ಕಲಿಯಲು ಬೇಕೋ
ನಿರ್ಮಲ ಮನುಜನೆ ದೇವಾಲಯವೋ
ನಿರ್ಮಲ ಹೃದಯವೆ ದೇವರ ಪೀಠ
ಶುದ್ಧವಾದ ಮನಸೇ ಪೂಜಾರಿ”[೩೬]

ಹೀಗೆ 'ಮೋಡಣ್ಣನ ತಮ್ಮ' ನಾಟಕವು ಗೇಯ ನಾಟಕವಾಗಿದ್ದು ಪದ್ಯದ ರೂಪದಲ್ಲಿದೆ. ಇದು ತತ್ವದ ಪ್ರತಿಪಾದನೆಗೆ ಉಪದೇಶ ಪ್ರಧಾನವಾದ ನಾಟಕವಾಗಿದೆ. ಇದರ ಭಾಷೆಯ ಅಲ್ಲಲ್ಲಿ ಸ್ವಲ್ಪ ಕ್ಲಿಷ್ಟ ಅನಿಸಿದರೂ ಇದರ ಸತ್ವವು ಮಕ್ಕಳ ಮನಸ್ಸನ್ನು ತಟ್ಟುತ್ತದೆ. ಜೊತೆಗೆ ಈ ನಾಟಕದಲ್ಲಿ ಮಕ್ಕಳು ಕೆಟ್ಟ ಗುಣಗಳನ್ನು ಬಿಟ್ಟು, ಒಳ್ಳೆಯ ಗುಣ ವರ್ತನೆಗಳನ್ನು ರೂಢಿಸಿಕೊಂಡು ಭವಿಷ್ಯದಲ್ಲಿ ಗುಣವಂತರಾಗಿ ಬಾಳಿರಿ ಎನ್ನುವ ಸಂದೇಶವಿದೆ. ಒಟ್ಟಾರೆ ಇದೊಂದು ಪ್ರಕೃತಿ ಪ್ರಧಾನವಾದ ನಾಟಕವೆನ್ನಬಹುದು.

*** ಕುವೆಂಪು ಅವರ ಮತ್ತೊಂದು ಪ್ರಸಿದ್ಧ ಮಕ್ಕಳ ನಾಟಕ 'ಬಾಲ ಗೋಪಾಲ'**

ಈ ನಾಟಕವು ಮಕ್ಕಳಿಗೆ ಪ್ರಿಯವಾದ ನಾಟಕವಾಗಿದೆ. ಇಲ್ಲಿ ಬರುವ ಪಾತ್ರಗಳು ಎರಡೇ, ಪುಟ್ಟ ಬಾಲಕ (ಗೋಪಾಲ) ಮತ್ತು ಗೋಪಾಲನ ತಾಯಿ. ಆದರೂ ಈ ನಾಟಕದ ಒಂದೊಂದು ಮಾತುಗಳು ಇಡೀ ನಾಟಕದ ಜೀವನಾಡಿಯನ್ನೆ ಎತ್ತಿ ಹಿಡಿಯುವಂತದ್ದು. ಜೊತೆಗೆ ಇದೊಂದು ಭಕ್ತಿಪ್ರಧಾನವಾದ ನಾಟಕವಾಗಿದೆ.

ಇಲ್ಲಿ ಗೋಪಾಲನು ಮುಗ್ಧ ಮನಸ್ಸಿನ ಹುಡುಗ. ಅವನ ತಾಯಿ ಅಪಾರ ದೈವ ಭಕ್ತಿಯಿರುವ ವಿಧವೆ, ಗಂಡನಿಲ್ಲದೆ ಕಡುಬಡತನದಿಂದ ತನ್ನ ಮಗನ ಭವಿಷ್ಯಕ್ಕಾಗಿ ನೂಲನ್ನು ತೆಗೆದು ಮಾರಿಬಂದ ಹಣದಿಂದ ಜೀವನ ನೆಡಸುತ್ತಾಳೆ. ಅವಳಿಗೆ ಭಗವಂತನಾದ ಗೋಪಾಲನೇ ಆರಾಧ್ಯ ದೈವನಾಗಿರುತ್ತಾನೆ. ಈ ನಾಟಕವು ಗದ್ಯರೂಪದಲ್ಲಿರುವ ಭಕ್ತಿಯನ್ನು ವಸ್ತುಪ್ರಧಾನವಾಗಿಸಿದ ನಾಟಕವಾಗಿದೆ.

ಇಲ್ಲಿ ತಾಯಿಯು ಗೋಪಾಲನಿಗೆ ಬೇಗನೆ ಶಾಲೆಗೆ ಹೋಗುವಂತೆ ಹೇಳುತ್ತಾಳೆ.

ಗೋಪಾಲ: "ಆಗಲಮ್ಮಾ, ಹೋಗುತ್ತೇನೆ. ಅಮ್ಮ, ನಾನು ಬರುವಾಗ ಕಾಡನ್ನು ದಾಟಿ ಬರಬೇಕು. ಬೈಗಿನ ಹೊತ್ತು ನನಗಲ್ಲಿ ಒಬ್ಬನೇ ಬರುವುದಕ್ಕೆ ಹೆದರಿಕೆ ಜೊತೆಗೆ ಯಾರಾದರೂ ಬೇಕಮ್ಮ, ನೆರೆಯೂರಿನಿಂದ ಬರುವ ಹುಡುಗರಿಗೆ ಜೊತೆಗೆ ಆಳುಗಳಿರುವರಮ್ಮ, ರಾಮು, ಕಿಟ್ಟಿ, ನಾಣಿ, ಮಧು ಇವರೆಲ್ಲರಿಗೂ ಒಬ್ಬೊಬ್ಬ ಆಳು ನನಗೆ ಮಾತ್ರ ಯಾರು ಇಲ್ಲ"[೩೭] ಎನ್ನುತ್ತಾನೆ.

ಮಗನ ಈ ಮಾತನ್ನು ಕೇಳಿದ ತಾಯಿಗೆ ಏನೂ ತೋಚದೇ ಒಂದು ಕ್ಷಣ ಯೋಚಿಸಿ ಮಗನಿಗೆ ಧೈರ್ಯ ಹೇಳಲು

ತಾಯಿ: ನೀನು ಶಾಲೆಯಿಂದ ಬರುವಾಗ ಹೆದರಿಕೆಯಾದರೆ ಗೋಪಾಲನನ್ನು ಕೂಗು, ಬರುತ್ತಾನೆ.

ಗೋಪಾಲ: ಯಾರವನು?

ತಾಯಿ: ಅವನು ನಿನ್ನ ಅಣ್ಣ, ಕಾಡಿನಲ್ಲಿ ದನ ಕಾಯುತ್ತಿರುತ್ತಾನೆ. ನೀನು ಕರೆದರೆ ಬಂದು, ನಿನ್ನ ಕಾಡಿನಿಂದ ದಾಟಿಸುತ್ತಾನೆ ಎನ್ನುತ್ತಾಳೆ.

ಗೋಪಾಲ: ಅಮ್ಮ, ಅವನಿಗೆ ನನ್ನ ಗುರುತಿದೆಯಾ? ಎಂದು ಕೇಳುತ್ತಾನೆ (ಮಂತ್ರ ಮುಗ್ಧನಾಗಿ)

ನಂತರ ತಾಯಿಯ ಮಾತನ್ನು ನಂಬಿದ ಗೋಪಾಲನು, ಶಾಲೆಗೆ ಹೋಗಿ ಮರಳಿ ಬರುವಾಗ ದಟ್ಟವಾದ ಕಾಡಿನ ಮಧ್ಯೆ ಭಯವಾದಾಗ 'ಅಣ್ಣಾ, ಅಣ್ಣಾ! ಏ ಅಣ್ಣಾ! ಎಂದು ಕೂಗುವನು.

ಅವನ ಕೂಗು ಮತ್ತು ಅವನ ಭಕ್ತಿಶ್ರದ್ಧೆಯ ಫಲವಾಗಿ ಬಾಲಗೋಪಾಲನಿಗೆ ಅಣ್ಣನಾದ ಬನದ ಗೋಪಾಲನು ಸಿಕ್ಕು ಪ್ರತಿದಿನ ಕಾಡನ್ನು ದಾಟಿಸುತ್ತಾನೆ. ಮುಂದೆ ಬನದ ಗೋಪಾಲನಹತ್ತಿರ ತನ್ನ ಗುರುಗಳಿಗೆ ಏನಾದರೂ ಕಾಣಿಕೆ ಕೊಡು ಎಂದಾಗ ಆ ವೇಣುಗೋಪಾಲನು

"ತಮ್ಮ ನಾನೇನು ಐಶ್ವರ್ಯವಂತನಲ್ಲ, ದನಕಾಯುವ ಬಡ ಹುಡುಗ, ಸ್ವಲ್ಪ ಮೊಸರನ್ನು ಕೊಡುತ್ತೇನೆ ತೆಗೆದುಕೊಂಡು ಹೋಗು" ಎನ್ನುತ್ತಾನೆ. ಬಾಲಗೋಪಾಲನು ಆ ಮೊಸರಿನ ಕುಡಿಕೆಯನ್ನು ಗುರುಗಳಿಗೆ ಕೊಟ್ಟು ಆಶೀರ್ವಾದವನ್ನು ಪಡೆಯುತ್ತಾನೆ. ಗುರುಗಳು ಕುಡಿಕೆಯಲ್ಲಿದ್ದ ಮೊಸರನ್ನು ಸುರಿದುಕೊಂಡಾಗ ಕುಡಿಕೆ ತುಂಬ ಮೊಸರು ಅಕ್ಷಯವಾಗಿದ್ದನ್ನು ಕಂಡು ಆಶ್ಚರ್ಯರಾಗುತ್ತಾರೆ.

ಆಗ ಗುರುಗಳು 'ಗೋಪಾಲ ಇದನ್ನು ನಿನಗೆ ಯಾರು ಕೊಟ್ಟರು ಎಂದಾಗ' ಕಾಡಿನಲ್ಲಿರುವ ನನ್ನಣ್ಣ ಗೋಪಾಲ ಎಂದು ತಿಳಿಸಿದನು. ಆಗ ಗುರುಗಳಿಗೆ ತಿಳಿಯುತ್ತದೆ. ಇದು ಸಾಕ್ಷಾತ್ ದೇವರಾದ ವೇಣುಗೋಪಾಲ ಕೆಲಸವೆಂದು. ಮರುದಿನ ಗುರುಗಳು ಮತ್ತು ಬಾಲಗೋಪಾಲನ ಗೆಳೆಯರು ವೇಣುಗೋಪಾಲನ ದರ್ಶನವನ್ನು ತಮಗೂ ಮಾಡಿಸು ಎಂದು ಕಾಡಿಗೆ ಬರುತ್ತಾರೆ. ಆಗ ಗೋಪಾಲನು "ಅಣ್ಣಾ, ಗುರುಗಳು ನಿನ್ನನ್ನು ನೋಡಬೇಕೆಂತೆ, ಇಲ್ಲಿ ಬಾಣ್ಣ" ಎಂದು ಕರೆಯುತ್ತಾನೆ. ಅದಕ್ಕೆ ಬನದ ಗೋಪಾಲ ಕಾಣಿಸಿಕೊಳ್ಳುವುದಿಲ್ಲ. ಆದರೆ ಅಶರೀರವಾಣಿಯೊಂದು ನುಡಿಯುತ್ತದೆ.

"ತಮ್ಮಾ ಗೋಪಾಲ, ನಿನ್ನ ತಾಯಿಯ ಭಕ್ತಿ, ನಿನ್ನೊಲ್ಮೆ ಇವುಗಳಿಗೆ ಮೆಚ್ಚಿ ನಿನಗೆ ಕಾಣಿಸಿಕೊಂಡು ನಿನ್ನೊಡನೆ ಆಟವಾಡುತ್ತೇನೆ. ನಿಮ್ಮ ಗುರುಗಳಿಗೆ ಹೇಳು, ನನ್ನನ್ನು ನೋಡುವ ಕಾಲ ಅವರಿಗಿನ್ನು ಬಂದಿಲ್ಲ. ಅವರಿನ್ನು ಬಹುಕಾಲ ಕಾಯಬೇಕು" ಎಂದು ಉತ್ತರ ಬರುತ್ತದೆ.

ಆಗ ಗುರುಗಳು ಬೇಸರಪಡದೆ ನಿನ್ನನ್ನು ಪಡೆದ ತಾಯಿ ಪುಣ್ಯವಂತಳು ನಿನ್ನನ್ನು ನೋಡಿದರೆ ಸಾಕ್ಷಾತ್ ವೇಣುಗೋಪಾಲನನ್ನು ನೋಡಿದಾಗೆ ಅನಿಸುತ್ತದೆ ಎಂದು ಆಶೀರ್ವದಿಸುವರು.

ಹೀಗೆ ನಿಷ್ಕಲ್ಮಷವಾದ ಮನಸ್ಸು, ನಿರ್ಮಲವಾದ ಭಕ್ತಿಗೆ ದೇವರು ಮೆಚ್ಚಿ ಕಾಣಿಸಿಕೊಳ್ಳುತ್ತಾನೆ.

ಈ ಬನದ ಗೋಪಾಲನ ಮಾತಿನಿಂದಲೇ ಇಡೀ ನಾಟಕದ ತಿರುಳೆಲ್ಲ ಅಡಗಿದೆ. ಇಡೀ ನಾಟಕವು ಸಂಪೂರ್ಣವಾಗಿ ಮಲೆನಾಡಿನ ಹಳ್ಳಿಯಲ್ಲಿ ಚಿತ್ರಣವನ್ನು ಒಳಗೊಂಡಿದೆ. ಇದು ಭಕ್ತಿಪ್ರಧಾನವಾದ ನಾಟಕವಾದರಿಂದ ಮಕ್ಕಳ ಮನಸ್ಸಿಗೆ ಹಿತವೆನಿಸುತ್ತದೆ. ಹಾಗೂ ಇದು ಸರಳ ಸುಂದರ ಭಾಷೆಯಲ್ಲಿ ರಚನೆಯಾಗಿದೆ. ಈ ನಾಟಕವು ಮಕ್ಕಳ ಸಾಹಿತ್ಯಕ್ಕೊಂದು ಉತ್ತಮ ಉದಾಹರಣೆ ಎನ್ನಬಹುದು. ಇದು ಸದಾ ಮಕ್ಕಳ ಮನಸ್ಸಿನಲ್ಲಿ ಉಳಿಯುವಂತಾಗಿದೆ.

*** ವೈದೇಹಿ ಅವರ 'ನಾಯಿಮರಿ' ನಾಟಕ**

ಕನ್ನಡದ ಪ್ರಮುಖ ಲೇಖಕಿ ವೈದೇಹಿ ಅವರು ಬರೆದ ನಾಯಿಮರಿ ನಾಟಕವು ತುಂಬ ಜನಪ್ರಿಯವಾಗಿದೆ. ಈ ನಾಟಕದ ವಸ್ತುವೇ 'ನಾಯಿಮರಿಯನ್ನು ತರುವುದು.' ಇಲ್ಲಿಯ ಪ್ರಮುಖ ಪಾತ್ರಧಾರಿಗಳೆಂದರೆ ಸಣ್ಣಮ್ಮ, ಅಜ್ಜ, ಅಜ್ಜಿ, ಪಂಚರಂಗಿ (ಸಾಕುಗಿಳಿ), ಪಪ್ಪಿ (ಸಣ್ಣಮ್ಮಳ ನಾಯಿಮರಿ), ಕಳ್ಳರಾದ ಪಿಂಗಾಣಿ, ರಂಗಾಣಿ ಮತ್ತು ಮಂಗಾಣಿ (ತುಂಟ ಕೋತಿ) ಹಾಗೂ ಮುಸ್ತಫಾ ಮೊದಲಾದವರು.

ಈ ನಾಟಕದ ಆರಂಭವು ಒಂದು ಪ್ರವೇಶ ಪದ್ಯದಿಂದ ಆರಂಭವಾಗುತ್ತದೆ. ಒಂದು ಪುಟ್ಟ ಹಳ್ಳಿಯಲ್ಲಿ ಸಣ್ಣದೊಂದು ತೋಟದಲ್ಲಿ ಮನೆಯನ್ನು ಕಟ್ಟಿಕೊಂಡು ಅಜ್ಜ, ಅಜ್ಜಿ ಮತ್ತು ಮೊಮ್ಮಗಳಾದ ಸಣ್ಣಮ್ಮಳು ಜೀವನ ಮಾಡುತ್ತಿದ್ದರು. ಆ ತೋಟಕ್ಕೆ ಸದಾ ಕಳ್ಳರ ಕಾಟ, ಈ ಕಾಟವನ್ನು ತಾಳಲಾರದೆ ಕಾವಲಿಗಾಗಿ ನಾಯಿಯನ್ನು ತರಲು ಯೋಚಿಸುತ್ತಾರೆ. ಅಜ್ಜಿಯು ನಾಯಿಮರಿಯನ್ನು ತರಲು ಹೋಗುತ್ತಾಳೆ. ಮುಂದೆ ಸಣ್ಣಮ್ಮಳಿಗೂ ಮತ್ತು ನಾಯಿಮರಿಗೂ ಅಪಾರವಾದ ಸ್ನೇಹ ಬೆಳೆಯುತ್ತದೆ.

ತೋಟಕ್ಕೆ ನಾಯಿಮರಿ ಬಂದನಂತರ ಕಳ್ಳರಿಗೆ ತೊಂದರೆಯಾಗಿ ಅವರು ಉಪಾಯ ಮಾಡಿ ಆ ನಾಯಿ ಮರಿಯನ್ನು ಕದಿಯುತ್ತಾರೆ. ಆ ನಾಯಿಮರಿಯನ್ನು ಉಳಿಸಿಕೊಳ್ಳಲು ಅಜ್ಜ, ಅಜ್ಜಿ, ಸಣ್ಣಮ್ಮ, ಪಂಚರಂಗಿ, ಮೈನಾಹಕ್ಕಿ ಮೊದಲಾದವರು ಹರಸಾಹಸ ಮಾಡಬೇಕಾಯಿತು. ಜೊತೆಗೆ ಈ ನಾಟಕದಲ್ಲಿ ಮಕ್ಕಳ ಮನಸ್ಸಿಗೆ ಮುದವೆನಿಸುವ ಹಲವಾರು ಪದ್ಯಗಳು, ಉತ್ತಮ ಸಂಭಾಷಣೆಗಳು ಮತ್ತು ಹಾಸ್ಯಭರಿತವಾದ ಪ್ರಸಂಗಗಳು ಗಮನ ಸೆಳೆಯುತ್ತವೆ.

ಅಲ್ಲದೆ ಈ ನಾಟಕದಲ್ಲಿ ರಾಜರತ್ನಂ ಅವರ 'ನಾಯಿ ನಾಯಿ ಮರಿ ತಿಂಡಿಬೇಕೆ?' ಎನ್ನುವ ಕವನವನ್ನು ಬಳಸಿಕೊಳ್ಳಲಾಗಿದೆ. ಹಾಗೂ ಈ ತೋಟದಲ್ಲಿ ಬೆಳೆದ ಬದನೆ ಗಿಡ, ಮೆಣಸಿನಗಿಡ, ಅಬ್ಬಲಿಗೆ ಹೂ, ಸೇವಂತಿಗೆ, ಬಾಳೆಗಿಡ, ಮಂದಾರ, ಪೇರಲೆ ಮೊದಲಾದವು. ಕಳ್ಳರು ತೋಟಕ್ಕೆ ಬಂದಾಗ ತಮಗೆ ಏನೇನೂ ತೊಂದರೆ ಮಾಡುತ್ತವೆ ಎಂಬುದನ್ನು ಹೇಳಿಕೊಳ್ಳುವುದು. ಮಕ್ಕಳಿಗಂತೂ ತುಂಬಾ ಖುಷಿಯನ್ನು ತರುತ್ತವೆ. ಅವರಲ್ಲಿ ಗಿಡಗಳು ಮಾತನಾಡುತ್ತವಾ? ಎಂಬ ಪ್ರಶ್ನೆ ಮೂಡುತ್ತದೆ.

ಸಣ್ಣಮ್ಮ ಪಂಚರಂಗಿ (ಗಿಳಿ), ಪಪ್ಪಿ (ನಾಯಿಮರಿ) ಈ ಮೂವರೂ ಕೈ ಹಿಡಿದುಕೊಂಡು ಸಂಭ್ರಮದಿಂದ ಪೇಟೆಗೆ ಹೋಗುವಾಗ

"ವ್ಹಾ ವ್ಹಾರೆ ವ್ಹಾ
ಏನು ಗಮ್ಮತ್ತು
ಊರ ಪೇಟೆ
ಓಡಿ ಬಂತು
ಬಾಳ ಗಮ್ಮತ್ತು
ರಥದ ಬೀದಿಲೀ
ಲೈಟು ಜಗಝುಗ
ಪುಗ್ಗೆ ಪಿರಿಪಿರೀ
ಬೊಂಬೆಯಂಗಡಿ
ವ್ಹಾ ವ್ಹಾರೆ ವ್ಹಾ
ಏನು ಗಮ್ಮತ್ತು
ಊರ ಪೇಟೆ
ಓಡಿ ಬಂತು
ಬಾಳ ಗಮ್ಮತ್ತು"[೩೮]

ಎಂದು ಊರ ಪೇಟೆಯನ್ನು ಈ ಹಾಡಿನ ಮೂಲಕ ವರ್ಣಿಸಿರುವ ಕವನವಾಗಿದೆ. ಇಲ್ಲಿ ಎರಡೆರಡು ಅಕ್ಷರಗಳ ಪ್ರಾಸ ಪದ್ಯಗಳುಳ್ಳ ಹಾಡು ಮಕ್ಕಳಿಗೆ ಕೇಳಲು ತುಂಬಾ ಖುಷಿಯನ್ನು ನೀಡುತ್ತದೆ.

ಜೊತೆಗೆ ಇಲ್ಲಿಯ ಸಂಭಾಷಣೆಗಳು ಮಕ್ಕಳಿಗೆ ಪ್ರಿಯವೆನಿಸುವ ಸಂಭಾಷಣೆಗಳೇ ಇದ್ದು, ಅವು ಪ್ರಾದೇಶಿಕ ಭಾಷೆಯಲ್ಲಿರುವುದು ವಿಶೇಷವೆನಿಸಿವೆ.

ಕಳ್ಳರು ನಾಯಿಮರಿಯನ್ನು ಕದ್ದುತಂದು ಕಾಡುರಸ್ತೆಯಲ್ಲಿ ಕುಳಿತಿದ್ದಾರೆ. ಅವರನ್ನು ಪಂಚರಂಗಿ ಬೆನ್ನಟ್ಟಿ ಬಂದು ದೂರದಲ್ಲಿ ಅಡಗಿ ಕುಳಿತಿರುವಾಗ ಕಳ್ಳರಾದ ಪಿಂಗಾಣಿ, ರಂಗಾಣಿ ಮತ್ತು ಮಂಗಾಣಿ ಅವರ ಸಂಭಾಷಣೆ–

ಪಿಂಗಾಣಿ: "ಆಚೆ ಕಾಡಿನಲ್ಲಿ ಅದನ್ನು ಎಸೆದು ಬಿಡುವ

ರಂಗಾಣಿ: ಇನ್ನು ಈಚೆಗೆ ಮುಖ ಹಾಕಬಾರದು ಅದು

ಮಂಗಾಣಿ: ಸಾಯಲಿಕ್ಕೆ ಹೊರಟಿದ್ದೆ! ಮುಖಹಾಕುವ ಮಾತೆಲ್ಲಿ ಇನ್ನು

ಪಪ್ಪಿ: ಕುಂಯ್ಯೋ... ಮುಂಯ್ಯೋಂ...

ಪಿಂಗಾಣಿ: ಆಂ! ಮತ್ತೆ! ಮತ್ತೆ ಸೌಂಡ್ ಹೊರಡಿಸುತ್ತೀಯ! ಇನ್ನೊಂದು ಕೊಟ್ಟೆನೆಂದರೆ ಸೀದ ಮೇಲೆ ಹೋಗಬೇಕು, ಹಾಗೆ,

ರಂಗಾಣಿ: ಯೇಯ್, ಬಿಡೋ ಪಾಪ, ಸಾಯುವವರೆಗೂ ಪೆಟ್ಟು ತಿನ್ನುವ ಹಣೆಬರಹ ಬೇಡ ಅದಕ್ಕೆ.

ಪಂಚರಂಗಿ: ಹಂಯ್ಯೋ... ಎಂತಹಾ ದುಃಖ ಪ್ರಾಪ್ತವಾಗಿ ಬಿಟ್ಟಿತೂ... ಆ ದಾರಿಯಲ್ಲಿ ಹೋಗುತ್ತಿದ್ದ ಮುಸ್ತಫಾನನ್ನು ಕಂಡು ಮೆಲ್ಲ ಮುಸ್ತಫಾ ದರ್ಜಿಯವರೆ, ಮುಸ್ತಫಾ ದರ್ಜಿಯವರೇ?

ಮುಸ್ತಫಾ: ಯಾರದು?

ಪಂಚರಂಗಿ: ನಾನು ಪಂಚರಂಗಿ, ಕಾಣದೇ? ಮೆಲ್ಲ ಮಾತಾಡಿ, ಆಚೆಗೆ ಕೇಳಿಸೀತು.

ಮುಸ್ತಫಾ: ಅರೇ ಪಂಚರಂಗಿ! ಈಗಲೂ ಅದೇ ಅಂಗಿ!

ಪಂಚರಂಗಿ: ಅಂಗಿ ಕತೆ ಸಾಯಲಿ, ದರ್ಜಿಯವರೇ, ಏನು ಹೇಳಲಿ? ಬಹಳ ಕಷ್ಟದಲ್ಲಿದ್ದೇವೆ. ಮೊದಲು ಆ ಕಿಡಿಗೇಡಿಗಳಿಂದ ನಮ್ಮ ಪಪ್ಪಿಯನ್ನು ರಕ್ಷಿಸಿ”[೩೯] ಎಂದಿತು.

ಮುಂದೆ ಆ ಕಳ್ಳರಿಂದ ಮುಸ್ತಫಾ ದರ್ಜಿಯು ನಾಯಿಮರಿಯನ್ನು ರಕ್ಷಿಸುತ್ತಾನೆ. ಅರೇಜೀವವಾದ ನಾಯಿಮರಿಯನ್ನು ನೋಡಿದ ಡಾಕ್ಟರ್ ಅದು ಉಳಿಯುವುದು ಕಷ್ಟವೆನ್ನುತ್ತಾರೆ.

ಇಲ್ಲಿಂದ ಮುಂದೆ ಈ ನಾಟಕವು ಹೊಸ ತಿರುವಿನ ತಂತ್ರವನ್ನು ಪಡೆಯುತ್ತದೆ. ಅದು ಕಲ್ಪನಾತೀತವಾಗಿರುತ್ತದೆ. ನಿದ್ದೆ ಬಾರದ ಸಣ್ಣಮ್ಮಳಿಗೆ ಅಜ್ಜ ಹೇಳಿದ ಕಥೆಯಿಂದ ಪ್ರೇರಣೆಗೊಂಡು ಅವಳು ಹೊಸ ಸಾಹಸಕ್ಕೆ ಕೈ ಹಾಕುತ್ತಾಳೆ. ತನ್ನ ಸ್ನೇಹಿತೆಯಾದ ಪಂಚರಂಗಿ ಜೊತೆ ಆ ಹುಡುಗಿಯು ಕಾಡಿಗೆ ಹೋಗಿ ಯಕ್ಷಿಣಿ ದೇವಿಯನ್ನು ಕಂಡು ಅವಳಿಂದ ಸಂಜೀವಿನಿಯಾದ ಮಾಣಿಕ್ಯ ಮಣಿಯನ್ನು ಪಡೆದುಕೊಳ್ಳುತ್ತಾಳೆ. ಅಲ್ಲೂ ಅಡ್ಡಗಾಲು ಹಾಕುವ ಕಳ್ಳರಿಂದ ತಪ್ಪಿಸಿಕೊಂಡು ಹಿಂತಿರುಗಿ ಬಂದು ತನ್ನ ನಾಯಿಮರಿ ಪಪ್ಪಿಯನ್ನು ಬದುಕಿಸಿಕೊಳ್ಳುತ್ತಾಳೆ.

ಈ ನಾಟಕದ ವಿಶೇಷವಿರುವುದು ಕತೆಯಲ್ಲಿರುವುದಕ್ಕಿಂತ ಅದರ ತಿರುಳಿನಲ್ಲಿದೆ. ಇಲ್ಲಿನ ಕಥಾಸನ್ನಿವೇಶಗಳು ಸಹಜವಾಗಿ ಇದ್ದು, ಮಕ್ಕಳ ಕಲ್ಪನಾವಿಲಾಸಕ್ಕೆ ಒಪ್ಪುವಂತೆ ಬೆಳೆಯುತ್ತ ಸಾಗುತ್ತದೆ. ಮಾತುಗಳು ಸಹ ಮಕ್ಕಳ ಮುಗ್ಧ ತರ್ಕಕ್ಕೆ ಹೊಂದಿಕೊಳ್ಳುವಂತೆ ಜೋಡಣೆಯಾಗುತ್ತವೆ. ಹಾಡುಗಳಲ್ಲಿ, ಮಾತುಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಒಂದು ರೀತಿಯ ಸಾಮ್ಯತೆಯ ಮೂಲಕ ನಾಟಕವು ಸಾಗುತ್ತದೆ. ಅಲ್ಲದೆ ಉಡುಪಿ ಪ್ರದೇಶದ ಕುಂದಾಪುರ ಭಾಷಾ ಮಿಶ್ರಣ ಮಕ್ಕಳಿಗೆ ತುಂಬಾ ವಿಶೇಷವೆನಿಸುತ್ತದೆ. ಇದರಲ್ಲಿ ವೈದೇಹಿಯವರು ಭಾಷೆಯ ಜೊತೆಗೆ ಸಣ್ಣ ಸಣ್ಣ

ವಾಕ್ಯಗಳು ಅದಕ್ಕೆ ಒಪ್ಪುವಂತ ಪ್ರಾಸಗಳನ್ನು ಸೇರಿಸಿ ನಾಟಕವನ್ನು ಕಟ್ಟಿರುವುದು. ಇನ್ನು ನಾಟಕದ ಯಶಸ್ವಿಗೆ ಕಾರಣವಾಗಿದೆ.

*** ವೈದೇಹಿ ಅವರ 'ಮೂಕನ ಮಕ್ಕಳು'**

ವೈದೇಹಿ ಅವರು ಬಿ.ವಿ. ಕಾರಂತರ ಸಲಹೆಯ ಮೇರೆಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮೂಕನ ಮಕ್ಕಳು ಕಥನ ಕವನವನ್ನಾಧರಿಸಿ ರಂಗಸಂಸ್ಥೆಯಾದ ರಂಗಾಯಣಕ್ಕಾಗಿ ರಚಿಸಿರುವಂತ ನಾಟಕವಾಗಿದೆ.

ಈ ನಾಟಕವನ್ನು ಹಿರಿಯ ಮಕ್ಕಳಿಗೂ ಹಾಗೂ ಕಿರಿಯ ಮಕ್ಕಳಿಗೂ ಅನ್ವಯಿಸುವಂತೆ ಬರೆದಿದ್ದಾರೆ. ಈ ಮೂಕನ ಮಕ್ಕಳು ನಾಟಕದಲ್ಲಿ ಬರುವ ಪ್ರಮುಖ ಪಾತ್ರಧಾರಿಗಳೆಂದರೆ ಗೌಡರು, ಗೌಡತಿ, ಗೌಡನ ಮಗ, ಮೂಕ, ಜೊತೆಗಾರ, ಆಗಂತುಕ, ಅವಧೂತ, ಮಾಸ್ತರು, ಮಾಸ್ತರರ ಹೆಂಡತಿ, ಮಾಸ್ತರರ ಮಗಳು ಮತ್ತು ಗಂಡಾಳುಗಳು, ಹೆಣ್ಣಾಳುಗಳು ಇತ್ಯಾದಿ.

ಈ ನಾಟಕದ ಆರಂಭವು ಒಂದೇ ತರದ ಮೂರು ಮರಗಳು. ಅವುಗಳ ಸುತ್ತ ಕಟ್ಟೆ, ಅಲ್ಲಿ ಹಕ್ಕಿಗಳ ಇಂಚರ ಕೇಳುತ್ತಿದೆ. ಆ ಕಟ್ಟೆಯ ಮೇಲೆ ಊರ ಗೌಡರು ಮತ್ತು ಆಗಂತುಕ ಕುಳಿತಿದ್ದಾರೆ. ಊರಿನ ಹೆಣ್ಣುಮಕ್ಕಳು ಆ ಮರಕ್ಕೆ ಬಟ್ಟೆಯನ್ನು ಕಟ್ಟಿ ನಮಸ್ಕರಿಸುತ್ತಾರೆ. ಆ ಮೂರು ಮರಗಳ ತುಂಬ ಉಡುಗೆಗಳು, ಆಟಿಕೆಗಳು ತೂಗುತ್ತಿವೆ. ಆಗಂತುಕ ಬಹಳ ಆಶ್ಚರ್ಯದಿಂದ ನೋಡುತ್ತಾ ಇದ್ದಾನೆ. ಆಗ ಹಿನ್ನೆಲೆ ಹಾಡು

"ಗಾಳಿ ಹನುಮನ ಗಿರಿಯ ಮುಂಗಡೆ
ಮೇಡಿನಲಿ ಮರ ಮೂರಿವೆ
ಕಂಡುದುಂಟೇ ಒಡೆಯಾರವನು?
ಒಮ್ಮೆ ಬಂದರೆ ತೋರುವೆ!

ಗಿರಿಯ ಮುಂಗಡೆ ಮೇಡ ತತೆಯಲಿ
ನಿಂತು ಮೂರೂ ಒಟ್ಟಿಗೆ
ತಳಿರು ತುಂಬಿದ ದಿನಕೆ ತುಂಬಾ
ಚೆನ್ನ, ನೋಡುವ ದಿಟ್ಟಿಗೆ!,

ಮಲೆಗೆ ಬಯಲಿಗೆ ಸುತ್ತ ಹರಹಿದ
ನೆಲಕೆ ಭೂಷಣವಾಗಿವೆ
ಮೇಡಿಗೆಂತೋ ಸಾರಿ ನಾ ಇವ
ನೋಡಲೆಂದೇ ಹೋಗುವೆ

ಇವನು ಮೂಕನ ಮಕ್ಕಳೆಂಬರು
ಸುತ್ತಿನೆಲ್ಲಾ ಊರಲಿ
ಮೂಕ ಎನ್ನುವ ಹೆಸರು ನೆನೆವರು
ಯಾರೆ ನಿಮಗಿವ ತೋರಲಿ

ಮೂಕ ನಮ್ಮೂರವನೆ ಹೈದ
ನಟ್ಟು ಹೊರೆದವನು ಮರ, ಇವ
ಇದರ ಪರಿಯನು ಬಲ್ಲೆ ನಾನು
ಕೇಳುವಿರೆ ಮನ ಕರಗುವ..."[೪೦]

ಹೀಗೆ ಊರ ಗೌಡರು ಆ ಆಗಂತುಕರಿಗೆ ಈ ಮರಗಳನ್ನು ನಮ್ಮೂರಿನವನಾದ ಮೂಕನು ನೆಟ್ಟಿರುವವನು. ನಮ್ಮೂರಿನಲ್ಲಿ ಮೂಕ ಅಂತ ಇದ್ದ. ಸುಮಾರು ನಿಮ್ಮದೇ ವಯಸ್ಸಿನವ, ತಬ್ಬಲಿ, ಊರು ಬೆಳೆಸಿದ ಮಗ ನಮ್ಮ ಮನೆಯಲ್ಲೇ ಕೆಲಸ ಮಾಡಿಕೊಂಡು ಇದ್ದ ಎಂದು ಆ ಮೂಕನ ಪರಿಚಯವನ್ನು ಇಲ್ಲಿಂದ ಆರಂಭಿಸುತ್ತಾನೆ.

ಮೂಕನು ಗೌಡರ ತೋಟದಲ್ಲಿ ಕುಳಿಯನ್ನು ಅಗೆಯುತ್ತ ಇದ್ದಾನೆ.ಮೂಕ ಅವನ ಜೊತೆಗಾರ, ಸೋಮಾರಿ, ಬೀಡಿ ಸೇದುತ್ತ ಆರಾಮ ಹೊಡೆಯುತ್ತಿದ್ದಾನೆ.

ಜೊತೆಗಾರ: ಬೇಗ ಬೇಗ, ಅತೇನು ಮರಾಯ, ಬೆಳಗಿಂದ ಇನ್ನೂ ಒಂದು ಕುಳಿ ತೋಡಿ ಆಗಲಿಲ್ಲ ಅಂದ್ರೆ ಅದು ಯಂಥಾ ಕೆಲಸ ನಿಂದು? ಇಲ್ಲಿ ಪೂರೈಸಿ ನಾವು ಮೇಲಿನ ಹಿತ್ತಲಿಗೆ ಹೋಗಬೇಕು.

ಮೂಕ: ಮೈಮೇಲೆ ಆವೇಶ ಬಂದವನಂತೆ ಅಗೆಯತೊಡಗಿದನು.

ಹೆಂಗಸು: ಮೂಕಾ ಏ ಮೂಕಾ (ಮೂಕ ಅಗೆಯುತ್ತಲೇ ಇದ್ದಾನೆ) ಏ ಮೂಕಾ, ಎಷ್ಟು ಕರೆದರೂ ಹ್ಯೂಂ ಹ್ಯಾಂ ಅನ್ನುದಿಲ್ಲಪ್ಪ ನನ್ನ ಮಗನ್ನ ಸ್ವಲ್ಪ ಶಾಲೆಗೆ ಬಿಟ್ಟು ಬಾರೋ.

ಮೂಕ ಆಗುವುದಿಲ್ಲ (ಕೈಯತ್ತಿ), ರಾಶಿ ಕೆಲಸ ಇದೆ.

ಜೊತೆಗಾರ: ಇರಲಿ ಕಣೋ ಮೂಕ ಬೇಗ ಹೋಗಿ ಬಿಟ್ಟು ಬಾ

ಮೂಕ: ಹೋಗೋಣ ಬಾರೋ

ಹುಡುಗ: (ಮೂಕನನ್ನು ಅಲುಗಿಸಿ) ಮೂಕ ಮೂಕ ನೀನು ಮೂಕ ಯಾಕೆ?

ಮೂಕ: ಬಾಯಿ ಬರುವುದಿಲ್ಲ ಅದಕ್ಕೆ

ಹುಡುಗ: ನಿನಗೆ ಬಾಯಿ ಇದೆಯಲ್ಲ ಮತ್ತೆ

ಮೂಕ: ಬಾಯಿಯೊಳಗೆ ಮಾತಿಲ್ಲ

ಆ ಮಗುವನ್ನು ಶಾಲೆಗೆ ಬಿಡುವ ಹೊತ್ತಿಗಾಗಲೆ ಶಾಲೆಯಲ್ಲಿದ್ದ ಹುಡುಗರೆಲ್ಲರು ಮೂಕ ಬಂದ ಮೂಕ ಬಂದ ಎಂದು ಸಂತಸಗೊಂಡರು. ಈ ಹಾಡುಗಳಲ್ಲಿ ಒಬ್ಬ ಏ ಮೂಕ ನನ್ನನ್ನು ಎತ್ತಿಕೋ, ಅಂದರೆ ಇನ್ನೊಬ್ಬ ಹುಡುಗ ನನ್ನನ್ನು ಗರಗರ ತಿರುಗಿಸೋ ಎನ್ನುತ್ತಾನೆ. ಮತ್ತೊಬ್ಬ ಹುಡುಗ ನೋಡಿಲ್ಲಿ ನಿನ್ನೆ ಮಾಸ್ಟ್ರು ಹೊಡೆದದ್ದು ಎಂದು ತೋರಿಸಿದಾಗ, ಹೊಡೆದ ಭಾಗಕ್ಕೆ ಮೂಕ ಮುತ್ತಿಟ್ಟು ಹುಡುಗನನ್ನು ಮುದ್ದಿಸುತ್ತಾನೆ. ಇನ್ನೊಬ್ಬ ಬಾರೋ ದನ ಹುಲಿ ಆಡೋಣ ಎಂದು ಕರೆಯುತ್ತಾನೆ. ಹೀಗೆ ಶಾಲೆಯ ಹುಡುಗರಿಗೆ ಮೂಕನೆಂದರೆ ಅಚ್ಚುಮೆಚ್ಚು ಅಲ್ಲಿಂದ

ಮಾಸ್ಟರು: ಈಗ ಹೋಗು, ಸೆಟ್ಟರ ಅಂಗಡಿಯಲ್ಲಿ ಒಂದು ಮೂಟೆ ಅಕ್ಕಿ ತೆಗೆದಿಟ್ಟು ಬಂದಿದ್ದೀನಿ. ಅದನ್ನು ನಮ್ಮನೆಗೆ ತಗೊಂಡು ಹೋಗಿ ಹಾಕು ಎಂದಾಗ ಮೂಕ ಸಂದಿಗ್ಧದಲ್ಲಿರುವಂತೆ ಹೋದನು.

ಅಂಗಡಿ ಮಾಲಿಕ: ಮೂಕ ಸಾಮಾನಿನ ಲಾರಿ ಬಂದಿದೆ. ಮೂಟೆಗಳನ್ನು ಒಳಗೆ ತಂದು ಹಾಕು, ಆಮೇಲೆ ಮಾಸ್ಟರ ಮನೆ ಅಕ್ಕಿ ಚೀಲ ಹೊಯ್ಯುವಂತೆ. ಆ ಕೆಲಸ ಮಾಡುವಾಗ ಅಂಗಡಿ ಮಾಲಿಕನ ಮಗಳು ಆ ಕಾಗದವನ್ನು ಗೌಡರ ಮಗನಿಗೆ ಕೊಡು ಎಂದು ಕೊಡುತ್ತಾಳೆ. ಆಗ ಮೂಕ ಆಯಿತು ಅವರಿಗೇ ಕೊಡ್ತೀನಿ. ನೀವು ಹೆದರಬೇಡಿ ಎಂದನು. ಅಲ್ಲಿಗೆ ಸಾವಿತ್ರಿ ಬರುತ್ತಾಳೆ. ಈ ಸಾವಿತ್ರಿಯು ಮೂಕನನ್ನು ಪ್ರೀತಿಯಿಂದ ಕಾಣೋ ಹುಡುಗಿ. ಅವನನ್ನು ನೋಡಿ ಮುಗುಳ್ನಗುತ್ತಾಳೆ.

ಮುಂದೆ ಅಕ್ಕಿ ಮೂಟೆ ಹೊತ್ತು ಮಾಸ್ಟರ ಮನೆಗೆ ಬಂದಾಗ

ಮಾಸ್ಟರ ಹೆಂಡತಿ: ಮೂಕಾ, ಚೀಲವನ್ನು ಎತ್ತಿ ಒಳಗೆ ಹಾಕಿ ಇಲ್ಲಿ ಬಾ. ಬೆಳಗಿಂದ ನಿಂತಿದ್ದೀನಿ ಇಲ್ಲಿ ಈ ದನದೊಟ್ಟಿಗೆ ಏಕೋ ಒಂದು ಬಟ್ಟಲು ಹಾಲು ಕೊಟ್ಟಿಲ್ಲ ಒಂಚೂರು ಹಾಲು ಕರೆದುಕೊಡು.

ಮಾಸ್ಟರ ಮಗಳು: ಮೂಕನನ್ನು ಮಾತನಾಡಿಸುತ್ತಾ ಸ್ವಲ್ಪ ಈ ಮಗುವನ್ನು ತೂಗಿ ಮಲಗಿಸು.

ಹೀಗೆ ಈ ನಾಟಕದ ಉದ್ದಕ್ಕೂ ಊರಿನಲ್ಲಿರುವರೆಲ್ಲರು ಇವನನ್ನು ತಮ್ಮ ತಮ್ಮ ಕೆಲಸಗಳಿಗೆ ಬಳಸಿಕೊಳ್ಳುತ್ತಾರೆ. ಆದರೂ ಈ ಮೂಕ ಯಾರ ಕೆಲಸವನ್ನು ಇಲ್ಲ ಎನ್ನದೆ ಮುಗುಳ್ನಗುತ್ತ ಮಾಡುತ್ತಾ ಬರುತ್ತಾನೆ. ಮುಂದೆ ಗೌಡರ ಮಗನ ಮದುವೆಯಲ್ಲಿ ಮೂಕನ ಮದುವೆ ಮಾಡಿಕೊಳ್ಳಲು ನಿರ್ಧರಿಸಿ ಸದಾ ತನ್ನನ್ನು ಅಕ್ಕರೆಯಿಂದ ಕಾಣುವ ಸಾವಿತ್ರಿಯನ್ನು ಅಂದುಕೊಂಡಿದ್ದ,

ಸಾವಿತ್ರಿ: (ಗಾಬರಿ ದನಿಯಲ್ಲಿ) ಗೌಡ್ರೆ, ನಾನು ಹೇಳಿದ್ದು ಹೌದು... ಯಾಕೋ ಅವನ್ನು ಕಂಡು ಪಾಪ ಅನಿಸ್ತು, ಅವನಿಗೆ ಖುಶಿಯಾಗ್ಲಿಲ್ಲ. ಅಂತ ಹೇಳ್ದೆ. ಅವನ ದುಃಖ ಮರೆಸಲು ಹೇಳ್ದೆ ಈ ಮದುವೆಗೆ ನಾನೊಲ್ಲೆ ಎಂದಳು. ಮೂಕನು ಆಘಾತದಿಂದ ಕುಸಿದನು. ಆಗ ಹುಡುಗರು ಅವನಿಗೆ ಸಮಾಧಾನ ಪಡಿಸುತ್ತಾರೆ. ಮೂಕ ಮಕ್ಕಳೊಡನೆ ಬೆರೆಯುತ್ತಾನೆ. ಆಡುತ್ತಾನೆ.

ಮುಂದೆ ಈ ಮೂಕನಿಗೆ ಅವಧೂತರ ಪರಿಚಯವಾಗಿ, ತಾನು ಅವರೊಟ್ಟಿಗೆ ಹೋಗಿ ಅಲ್ಲಿ ಗಾಳಿ ಹನುಮನ ಗಿರಿಯ ಮುಂದೆ ಅವಧೂತರ ಸಲಹೆಯಂತೆ ಮೂರು ಕುಳಿ ತೋಡಿದನು, ಮೂರು ಗಿಡಗಳನ್ನು ನೆಟ್ಟನು.

"ಮೂಕನಿಂದಲೆ ಅವನು ನೆಡಿಸಿ
ನೀರೆರೆಸಿ ಅಣ್ಣಾ ಇವು
ನಿನ್ನ ಮಕ್ಕಳು ಇವನ್ನು ಮುದ್ದಿಸು
ಇನ್ನು ಇವನ್ನು ಕಾಯುವ
ಭಾರ ನಿನ್ನದು ನೋಡು ಎಂದರು
ಒಪ್ಪಿ ತಲೆಯನು ಆಡಿಸಿ
ಮೂಕ ಗುರುವಿಗೆ ಮಣಿದು ನಿಂದ
ಭಕ್ತಿಯಲಿ ಕೈ ಜೋಡಿಸಿ"[೪೧]

ಅವಧೂತರು ಅಲ್ಲಿಂದ ಹೊರಟರು, ಮೂಕ ಮಾತ್ರ ಉಳಿಯುತ್ತಾನೆ. ಮೂಕ ನೀರು ತಂದು ತಾನು ನೆಟ್ಟ ಆ ಮೂರು ಗಿಡಗಳನ್ನು ಪೋಷಿಸುತ್ತಾನೆ. ಮುಂದೆ ಆ ಮೂರು ಮರಗಳಿಗೂ ಕಟ್ಟೆ ಕಟ್ಟುತ್ತಾನೆ. ಆ ಮರಗಳು ಹುಲುಸಾಗಿ ಬೆಳೆದು ಹೆಮ್ಮರವಾಗಿರುತ್ತವೆ. ಮೂಕನು ಆ ಮರದ ನೆರಳಲ್ಲೇ ಕೊನೆಯುಸಿರೆಳೆಯುತ್ತಾನೆ. ನಂತರ ಮಕ್ಕಳಿಗೆ ಕಾಯಿಲೆ ಬಂದ್ರೆ ಈ ಮರಗಳಿಗೆ ಹರಕೆ ಕಟ್ಟುತ್ತಾರೆ. ಮಕ್ಕಳಿಲ್ಲದವರು ಇಲ್ಲಿ ಬಂದು ಹರಕೆ ಕಟ್ಟುತ್ತಾರೆ. ಹೀಗೆ ಈ ಮರಗಳು ಕೇವಲ ಮರಗಳಾಗದೆ ಮೂಕನ ಮಕ್ಕಳಾದವು.

ಒಟ್ಟಾರೆಯಾಗಿ ಈ ಕಥೆಯಲ್ಲಿ ಮೂಕನ ಬದುಕಿನ ಸಾರ್ಥಕತೆಯ ಅನಾವರಣವೇ ಸರಿ ಎನ್ನಬಹುದು. ಅವನು ಎಲ್ಲರ ಸೇವೆಯನ್ನು ಮಾಡುತ್ತಾ ಬಂದ. ಅವನನ್ನು ಎಲ್ಲರು ಉಪಯೋಗಿಸಿಕೊಂಡರೇ ವಿನಹ ಅವನ ಬಗ್ಗೆ ಯಾರೂ ಯೋಚಿಸಲೇ ಇಲ್ಲ. ಮುಂದೆ ಅವಧೂತರ ಸಲಹೆಯಂತೆ ಆ ಮೂರು ಮರಗಳನ್ನು ನೆಟ್ಟು ಅವುಗಳ ಪೋಷಣೆಯಲ್ಲಿಯೇ ತನ್ನ ಜೀವನವನ್ನು ಸಾಗಿಸುವುದು ಎಲ್ಲರಿಗೂ ಮಾದರಿಯಾಗುವಂತದು. ಇಲ್ಲಿ ಮೂಕನು ಇಡೀ ಬದುಕನ್ನೇ ನಿಸ್ವಾರ್ಥ ಸೇವೆಯಲ್ಲಿ ಕಳಿಯುವುದನ್ನೆ ಕಾಣುತ್ತೇವೆ. ಇಲ್ಲಿ ಮೂಕನ ಪಾತ್ರ

ಮಕ್ಕಳಿಗೂ ಹಾಗೂ ಹಿರಿಯರಿಗೂ ಮಾದರಿಯಾಗುವಂತದು. ಜೊತೆಗೆ ಇಲ್ಲಿ ಬಳಸಿರುವ ಭಾಷೆಯು ತುಂಬಾ ಸರಳವಾಗಿರುವುದನ್ನು ಕಾಣುತ್ತೇವೆ. ಇದೊಂದು ಮಕ್ಕಳಿಗೆ ತುಂಬಾ ಇಷ್ಟವಾಗುವಂತಹ ನಾಟಕವೆನ್ನಬಹುದು.

*** ಕೆ.ವಿ. ಸುಬ್ಬಣ್ಣ ಮತ್ತು ಕೆ.ವಿ. ಅಕ್ಷರ ಅವರ ಬೆಟ್ಟಕ್ಕೆ ಚಳಿಯಾದರೆ**

ಪಿ.ಎಸ್. ರಾಮಪ್ಪನವರು ವಿಜಯ ತೆಂಡೂಲ್ಕರ್ ಅವರ ಮಕ್ಕಳ ನಾಟಕವೊಂದನ್ನು ಅನುವಾದಿಸಿದ್ದರು. ಅದರಲ್ಲಿ ಬರುವ ಟಪಾಲು, ಡಬ್ಬಿ, ಟೆಲಿಫೋನ್ ಕಂಬ, ಪೋಸ್ಟರ್ ಮೊದಲಾದ ಪಾತ್ರಗಳಾದರದ ಮೇಲೆ ಬೇರೆ ನಾಟಕವೊಂದನ್ನು ಸೂಚಿಸಿದರು. ಹೀಗೆ ಅವರ ಪ್ರೇರಣೆಯಿಂದ ೧೯೭೭ರಲ್ಲಿ ನಿನಾಸಂ ವತಿಯಿಂದ ಈ ನಾಟಕವನ್ನು ರಚಿಸಲಾಯಿತು.

ಇನ್ನು ಈ ಬೆಟ್ಟಕ್ಕೆ ಚಳಿಯಾದರೆ... ನಾಟಕದಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಕಳ್ಳ, ಹುಡುಗಿ, ಮುದುಕ, ಮರ, ಟೆಲಿಫೋನ್ ಕಂಬ, ಪೋಸ್ಟ್ ಡಬ್ಬಿ, ಪೋಸ್ಟರ್ ನಾಚ್‌ವಾಲ, ನಾಗರಿಕರು ಮತ್ತು ಶಾಲಾ ಬಾಲಕ, ಬಾಲಕಿಯರು ಮೊದಲಾದ ಪಾತ್ರಗಳು.

ಈ ನಾಟಕದಲ್ಲಿ ಬರುವ ಕಳ್ಳನು ಮಗುವನ್ನು ಕದ್ದು, ಅವಳಪ್ಪನಿಂದ ಹಣ ವಸೂಲಿ ಮಾಡುವ ಉದ್ದೇಶವನ್ನು ಹೊಂದಿರುವುದೇ ಇಲ್ಲಿಯ ಕಥಾವಸ್ತುವಾಗಿದೆ.

ಕಳ್ಳ: "ನಾನು ಒಬ್ಬ ಕಳ್ಳ, ಡಾಕು! ಹ್ಹಹ್ಹಹ್ಹ ನಾನೂ ಖಲಂದರ್ ಹ್ಹ!... ಕಳ್ಳ ಅಂದ್ರೆ ದಿನಸಿ ಕದಿಯೋ ಚಿಲ್ರೆ ಕಳ್ಳ ಅಲ್ಲ, ಜೀವ ಕದಿಯೋ ರುಸ್ತುಂ ಡಾಕು. ಮಾಲು ಕದಿಯೋ ಕಳ್ಳ ಅಲ್ಲ. ಮಕ್ಕಳ ಕದಿಯೋ ಡಾಕು! ಹ್ಹಹ್ಹಹ್ಹಹ್ಹ!... ನಾಟಕ ಸಿನಿಮಾಗಳಲ್ಲಿ ಬರ್ತಾರಲ್ಲ ಅಂಥಾ ಡಾಕು ಅಂತ ತಿಳಿದು ಬಿಟ್ಟಿರಾ, ಅಲ್ಲ, ನಾಟಕ ನೋಡೋಕೆ ಬರ್ತೀರಲ್ಲ, ನಿಮ್ಮಂಥ ಹುಡುಗರನ್ನು ಮಾಯಕ ಮಾಡಿ ಫಟ್ ಅಂತ ಎತ್ತಿಕೊಂಡು ಹೋಗಿ ಬಿಡೋ ಡಾಕು!... ಇಲ್ನೋಡಿ, ಈ ಹುಡುಗಿನ ಹಾಗೇ ಕದ್ದುಕೊಂಡು ಬಂದಿದ್ದೇನೆ. ಅದೊಂದು ಭಾರೀ ಪಟ್ಟಣ, ಸಾಲು ಸಾಲು ಉಪ್ಪರಿಗೆ ಮನೆಗಳು, ನಡೂರಾತ್ರಿಯೂ ರಸ್ತೇಲಿ ಜನ ಘೋರಾಯಿಸ್ಕೊಂಡು ನಡೀತಿರ್ತಾರೆ. ಅಂಥ ಪಟ್ಟಣದಲ್ಲಿ, ಹನ್ನೆರಡು ಮಹಡಿ ಕಟ್ಟಡದಲ್ಲಿ ಆರನೇ ಮಹಡಿಲೀ ಇವರ ವಾಸ. ಎಲೆಕ್ಟ್ರಿಕ್ ಕಂಬ ಹತ್ತಿದೆ, ನೂಲೇಣಿ ಒಗೆದು ಆರನೇ ಮಹಡಿ ಹತ್ತಿ ಮಲಗಿದ್ದ ಈ ಹುಡುಗೀನ ಮಾಯಕ ಮಾಡಿ ಎತ್ತಿಕೊಂಡು ಬಂದು ಬಿಟ್ಟೆ... ಅಲ್ಲಿಂದ ೫೦ ಮೈಲಿ ಘೋರ ಕಾಡು, ಆಮೇಲೆ ೫೦ ಮೈಲಿ ಟಾರ್‌ರೋಡ್... ಇಷ್ಟು ದೂರ ಅವಳನ್ನು ಹೊತ್ತುಕೊಂಡು ಬಂದೆ...! ಒಳ್ಳೇ ಜಾಗ... ಇಲ್ಲೊಂದು ಪೋಸ್ಟ್ ಡಬ್ಬಿ... ಮರ... ಟೆಲಿಫೋನ್ ಕಂಬಿ... (ಮುದುಕನನ್ನು ನೋಡಿ) ಓ, ಈ ಪ್ರತಿಮೆಯನ್ನು ಎಷ್ಟು ಚೆನ್ನಾಗಿ ಕೆತ್ತಿದ್ದಾರೆ!... ನಿಜವಾಗಿ ಮನುಷ್ಯ ಇದ್ದ ಹಾಗೆ ಇದೆ!... ಅಕ್ಷರ ಗೊತ್ತಾಗಬಾದ್ದು, ಹಾಗೆ ಎಡಗೈಯಲ್ಲಿ ಕಾಗದ ಬರೆದು ಪೋಸ್ಟ್

ಮಾಡಿದರಾಯ್ತು, ಇವಳ ಅಪ್ಪನಿಗೆ, ಹೇಗೋ ಇಲ್ಲೆ ಪೋಸ್ಟ್ ಡಬ್ಬಿನೂ ಇದೆ... ಇಕೋ ಈ ಮರದ ಕೆಳಗೆ ೫೦ ಸಾವಿರ ರೂಪಾಯಿ ತಂದಿಡಬೇಕು, ಮರುದಿನ ಅಷ್ಟೇ ಹೊತ್ತಿಗೆ ಈ ಹುಡುಗಿ ಇದೇ ಮರದ ಕೆಳಗೆ ಸಿಕ್ಕುತ್ತಾಳೆ ಅಂತ ಬರೆದು ಹಾಕಿ ಬಿಟ್ಟರೆ ಮೂರು ದಿನಕ್ಕೆ ಐವತ್ತು ಸಾವಿರ ಸಂಪಾದನೆ! ಹೇಗಿದೆ ಉಪಾಯ, ಹಹ್ಹ ಹ್ಹ ಹ್ಹ ಹ್ಹ!..."[೪೨]

ಅಷ್ಟರಲ್ಲಿ ಹುಡುಗಿಗೆ ಎಚ್ಚರವಾಗಿ ಬಿಡ್ತು! ಈಗ್ಲೇ ಇವಳನ್ನು ಚೆನ್ನಾಗಿ ಹೆದರಿಸಿ ಹೇಳಿದ ಹಾಗೆ ಕೇಳೋ ಹಾಗೆ ಮಾಡ್ಕೋಬೇಕು!... ಏಯ್ ಚೋಕ್ರಿ ನಾನು ಯಾರು ಗೊತ್ತಾ? ಹುಡುಗಿ ಅವನನ್ನೆ ನೋಡಿ ಮಾಮ! ಎಂದಳು. ಆಗ ಕಳ್ಳನು ಎಲಾ ಹುಡುಗಿ! ಮೆಣಸಿನಕಾಯಿ ಉದ್ದದ ಪೋರಿ ಒಳ್ಳೇ ಜೋರಾಗಿ ಇರೋ ಹಾಗಿದೆ! ಇಲ್ಲಿ... ಈಗ್ಲೆ ಸ್ವಲ್ಪ ಹೆದರಿಸಬೇಕು ಅಂದುಕೊಂಡ. ಮುಂದುವರೆಸಿ ನಾನು ಮಕ್ಕಳನ್ನು ಕದಿಯೋ ಕಳ್ಳ, ಖಲಂದರ್ ಡಾಕು. ಆಗ ಹುಡುಗಿ ನೀನು ಕಳ್ಳನಲ್ಲ ಡಾಕು ಅಂದ್ರೆ ಉದ್ದಾನುದ್ದ ಕಪ್ಪು ಅಂಗಿ, ಕಣ್ಣಿಗೆ ಕಪ್ಪು ಪಟ್ಟಿ ಇರಬೇಕು. ಮತ್ತು ಕೈಯಲ್ಲಿ ಚೂಪಾದ ಚಾಕು ಇರಬೇಕು ಎಂದಳು. ಆಗ ಕಳ್ಳನು ಕೇಳು ಚೋಕ್ರಿ ನಾನು ಕತೇ ಪುಸ್ತಕದಲ್ಲಿರೋ ಕಳ್ಳನಲ್ಲ ನಿಜವಾದ ಡಾಕು. ಹುಡುಗರನ್ನು ಕದಿಯೋ ಡಾಕು!

ಆ ಹುಡುಗಿಯು ಕಳ್ಳನಿಗೆ ಹೆದರದೆ ಅವನ ಪ್ರಶ್ನೆಗೆಲ್ಲಾ ಉತ್ತರಿಸುವಳು. ನನ್ನ ಚೋಕ್ರಿ ಅಂತಲ್ಲ ಕರಿಬೇಡ. ನನ್ನ ಹೆಸರು 'ಚಲಾಕಿ' ಅಂತ, ಅಮ್ಮ ಚಾಕಿ ಅಂತಾಳೆ ಉಳಿದೋರೆಲ್ಲಾ ಚಲಾಕಿ ಅಂತ್ಲೇ ಕರೆಯೋದು. ನನ್ನ ಕಂಡ್ರೆ ನಿನಗೆ ಹೆದರಿಕೆ ಆಗೊಲ್ವ? ಎಂದು ಕಳ್ಳ ಕೇಳಿದಾಗ, ಹುಡುಗಿ ಹೆದರಿಕೆ? ಯಾಕೆ? ಎನ್ನುವಳು.

ಹುಡುಗಿಯನ್ನು ಬಿಟ್ಟು ಕಳ್ಳ ತಿಂಡಿ ತರಲು ಹೋದಾಗ ಮುಂದೇನೇ ಇದ್ದ ಪ್ರತಿಮೆಯಲ್ಲಿ ನಿಜವಾದ ಮನುಷ್ಯ ಇರುತ್ತಾನೆ ಸ್ತಬ್ಧನಾಗಿ ನಿಂತಿರುತ್ತಾನಷ್ಟೇ. ಆ ಮುದುಕನು ಈ ಕಳ್ಳನಿಂದ ಹುಡುಗಿಯನ್ನು ರಕ್ಷಿಸಬೇಕು ಎಂದುಕೊಳ್ಳುತ್ತಾನೆ. ಜೊತೆಗೆ ಅಲ್ಲಿದ್ದ ಪೋಸ್ಟ್ ಡಬ್ಬಿ, ಟೆಲಿಫೋನ್ ಕಂಬ, ಮರ, ನಾಚ್‌ವಾಲಿ ಎಲ್ಲರೂ ಇವಳನ್ನು ಕಳ್ಳನಿಂದ ಪಾರುಮಾಡಲು ಬಯಸುವರು.

ನಂತರ ಕಳ್ಳ ಬಂದಾಗ ಮರ, ಟೆಲಿಫೋನ್ ಕಂಬ, ಪೋಸ್ಟ್ ಡಬ್ಬಿ, ಹಾಡಲು ಪ್ರಾರಂಭಿಸಿದರು. ನಾಚ್‌ವಾಲಿ ಗೆಜ್ಜೆ ಸದ್ದು ಮಾಡುತ್ತಾಳೆ. ಕಳ್ಳ ಆಶ್ಚರ್ಯದಿಂದ ಆಚೀಚೆ ನೋಡುತ್ತಿದ್ದ ನಂತರ ಕಳ್ಳ ಹೆದರಿ ಓಡುವನು. ಎಷ್ಟೊತ್ತಾದ್ರು ಅಲ್ಲಿಗೆ ಕಳ್ಳ ಬರಲೇ ಇಲ್ಲ. ಮುದುಕ ಇಲ್ಲ ಮಗು ಅವನು ಬರುವುದಿಲ್ಲ. ನಮ್ಮ ಮನೆಗೆ ಹೋಗೋಣ ಬಾ ಎನ್ನುವರು. ನಂತರ ಈ ನಾಟಕದ ಕಥಾವಸ್ತುಗಳಲ್ಲಿ ಏನೇನೋ ಹೊಸ ಹೊಸ ತಿರುವುಗಳನ್ನು ಪಡೆಯಿತು.

ಕಳ್ಳ: ನಾನು ಕಳ್ಳ, ಡಾಕು

ಹುಡುಗಿ: ಅಲ್ಲ, ಅಲ್ಲ ಇವನು ಮಾವ

ಕಳ್ಳ: ಇಲ್ಲ ಸಾರ್, ನಾನು ಡಾಕು

ಹುಡುಗಿ: ಇಲ್ಲ ಅವನು ನನ್ನ ಮಾವ. ನಾನು ಅವನೊಟ್ಟಿಗೆ ಬಂದಿರುವೆ.

ನಂತರ ಕಳ್ಳನಿಗೆ ಮನಪರಿವರ್ತನೆಯಾಗಿ ಹುಡುಗಿಯನ್ನು ಕರೆದುಕೊಂಡು ಅವರ ಮನೆಗೆ ಬಿಡಲು ಹೊರಟನು.

ಕಳ್ಳ: "ಹುಡುಗಿ ಅಲ್ಲಿ ಸಾರ್, ನಂಗೆ ಬುದ್ಧಿ ಕಲಿಸಿದ ತಾಯಿ! ನನ್ನ ಬಚಾವ್ ಮಾಡಿದ ದೇವರು"[೪೩]

ಹೀಗೆ ಈ ನಾಟಕದಲ್ಲಿ ಕಳ್ಳನು ಆ ಹುಡುಗಿಯನ್ನು ಎತ್ತಿಕೊಂಡು ಹೋಗಿ ಮಾಡಿದ ಕೆಲಸಕ್ಕಾಗಿ, ಆ ಹುಡುಗಿಯನ್ನು ಕಳ್ಳನಿಂದ ರಕ್ಷಣೆ ಮಾಡಲು ಅಲ್ಲಿದ್ದ. ಮಲ್ಲಿಗೆ, ಮರ, ಪೋಸ್ಟ್‌ಡಬ್ಬಿ, ಟೆಲಿಫೋನ್ ಕಂಬ, ಕೆಂಪಣ್ಣ ಎಲ್ಲಾರು ಹುಡುಗಿಯನ್ನು ರಂಜಿಸಲು ಮಾಡಿದ ಹಾಡು, ಕುಣಿತದಿಂದ ಹೆದರಿದ ಜನರು ಅಲ್ಲಿಗೆ ಊರಿನ ಪೋಲೀಸರನ್ನು, ಮೇಯರನ್ನು ಮತ್ತು ವಿಜ್ಞಾನಿಗಳನ್ನು ಪರಿಶೀಲನೆಗಾಗಿ ಕರೆಸಿರುತ್ತಾರೆ. ಹೀಗೆ ಈ ನಾಟಕವು ಮಧ್ಯದಲ್ಲಿ ಹೊಸ ತಿರುವನ್ನು ಪಡೆದು, ಕೊನೆಯಲ್ಲಿ ಸುಖಾಂತ್ಯವನ್ನು ಪಡೆಯುತ್ತದೆ.

ಈ ನಾಟಕದಲ್ಲಿ ಹುಡುಗಿಯ ಜೊತೆಗೆ ಬಂದ ಶಾಲೆ ಮಕ್ಕಳು ಮರ, ಪೋಸ್ಟ್ ಡಬ್ಬಿ, ಟೆಲಿಫೋನ್ ಕಂಬ, ಮೊದಲಾದ ಪಾತ್ರಗಳು ಮಕ್ಕಳಿಗೆ ಕೇಳಲು ಮತ್ತು ಈ ನಾಟಕವು ಹಲವಾರು ಪ್ರದರ್ಶನಗಳನ್ನು ಕಂಡಿರುವುದರಿಂದ ಮಕ್ಕಳಿಗೆ ತುಂಬಾ ಇಷ್ಟವಾಗುತ್ತದೆ.

*** ಬಿ.ವಿ. ಕಾರಂತರ 'ಪಂಜರ ಶಾಲೆ'**

ಈ ನಾಟಕವನ್ನು ಬಿ.ವಿ. ಕಾರಂತರು ಮೂಲ ರವೀಂದ್ರನಾಥ ಠಾಗೂರರ ಇಂಗ್ಲೀಷ್ ನಾಟಕವನ್ನು ಆಧರಿಸಿ ರಚಿಸಿದ್ದಾಗಿದೆ. ರವೀಂದ್ರನಾಥ ಠಾಗೂರ್‌ರರ ಎರಡು ಮೂರು ಪುಟಗಳ ಚಿಕ್ಕ ಕಥೆಯೊಂದನ್ನು ಆಧರಿಸಿ ಬಿ.ವಿ. ಕಾರಂತರು ಇದನ್ನು ಹಿಂದಿಯಲ್ಲಿ ನಾಟಕವಾಗಿ ಬರೆದುಕೊಟ್ಟಿದ್ದಾರೆ. ಪುನಃ ಅವರೇ ಅದನ್ನು ಗುಜರಾತಿ ಭಾಷೆಗೆ ಪರಿವರ್ತಿಸಿ ಪ್ರದರ್ಶನಗೊಳಿಸಿದರು.

ಈ 'ಪಂಜರ ಶಾಲೆ' ನಾಟಕದ ಪ್ರಮುಖ ಪಾತ್ರದಾರಿಗಳೆಂದರೆ ಗಿಳಿಮರಿ, ರಕ್ಷಕ ೧,೨, ರಾಜ, ಮಂತ್ರಿ, ಅಳಿಯ, ಡಂಗುರದವರು, ಡುಂಗುರ ೧,೨, ಹಿಂಬಾಲಕರು, ಪ್ರಶಂಸಕ ೧,೨,೩,೪, ನಿಂದಕ ೧,೨,೩, ಸಂಶೋಧಕ ೧,೨,೩,೪, ಮುಖಂಡ ಮೊದಲಾದವರು.

ಈ ನಾಟಕದ ಕಥಾವಸ್ತು ರಾಜನ ತೋಟದಲ್ಲಿರುವ ಹಣ್ಣುಗಳನ್ನು ಗಿಳಿಯು ತಿಂದು ಹಾಳುಮಾಡುತ್ತಿದೆ ಎಂದು. ಅದನ್ನು ರಾಜನ ತೋಟದ ರಕ್ಷಕನಾದ ೧ ಮತ್ತು ೨ ಇಬ್ಬರು ಹೆದರಿಸಿ ಆ ಗಿಳಿಮರಿಯನ್ನು ಬಲೆ ಬೀಸಿ ಹಿಡಿಯುತ್ತಾರೆ. ನಂತರ ಅದನ್ನು ವಾಜಾಳಪುರದ ರಾಜನ ಬಳಿಗೆ ಕರೆತರುತ್ತಾರೆ. ಇದು ಈ ನಾಟಕದ ವಸ್ತುವಾಗಿದೆ.

ಗಿಳಿಮರಿ: "ಟೇಂ..... ಟೇಂ....

ರಾಜ: (ಆಶ್ಚರ್ಯದಿಂದ) ಇದೇನು ಒದರುತ್ತಿದೆ?

ಗಿಳಿಮರಿ: ಟೇಂ....

ರಾಜ: ಯಾವ ಭಾಷೆ ಮಾತಾಡ್ತಾ ಇದೆ? ಪ್ರಾಕೃತ ಭಾಷೆ? ಪೈಶಾಚಿ ಭಾಷೆ?

ಗಿಳಿಮರಿ: ಟೇಂ.....

ರಾಜ (ರೇಗಿ, ಮಂತ್ರಿಯ ಕಡೆ) ಏನಿದರ ಅರ್ಥ?

ಮಂತ್ರಿ: ರಾಜಾಧಿರಾಜ, ಇದೊಂದು ಗಿಳಿಮರಿ, ಕಾಡುಜಾತಿ, ಅನಾಗರಿಕ, ವಸಂತ ಕಾಲಕ್ಕೆ ಮರ ಹತ್ತಿ ರಾಜತೋಟಕ್ಕೆ ನುಗ್ಗಿ ಹಣ್ಣು ಹಂಪಲುಗಳನ್ನು ನಾಶಪಡಿಸಿದೆ.

ರಾಜ: ಇದಕ್ಕೆ ಮಾತು ಬರುತ್ತದೆಯೇ?

ಮಂತ್ರಿ: ಇಲ್ಲ

ರಾಜ: ಹಾಡು ಬರುತ್ತದೆಯೇ?

ಮಂತ್ರಿ: ಇಲ್ಲ

ರಾಜ: ಓದು ಬರುತ್ತದೆಯೇ?

ಮಂತ್ರಿ: ಇಲ್ಲ

ರಾಜ: ನೃತ್ಯ ಬರುತ್ತದೆಯೇ?

ಮಂತ್ರಿ: ಇಲ್ಲ

ರಾಜ: ಮತ್ತೇನು ಬರುತ್ತದೆ? ಜೀವನವೆಲ್ಲ ಏನು ಮಾಡುತ್ತದೆ?

ಗಿಳಿಮರಿ: ಟೇಂ.... ಟೇಂ...

ಮಂತ್ರಿ: ಮಹಾಪ್ರಭು, ಈ ಗಿಳಿ ಅರಣ್ಯವಾಸಿ, ನಿರಕ್ಷಕ ಪಕ್ಷಿ, ತೀರಾ ಅಸಂಸ್ಕೃತ, ಸಂಗೀತವಿಲ್ಲ, ನೃತ್ಯವಿಲ್ಲ, ಗದ್ಯಪದ್ಯದ ಭೇದ ಗೊತ್ತಿಲ್ಲ. ಒಂದು ಎರಡರ ಮಗ್ಗಿ ಕೂಡಾ ಬರೋದಿಲ್ಲ. ಇದಕ್ಕೆ ಬರೋದು ಒಂದೇ ಗಿಡಮರ ಹತ್ತಿ ಕೊಂಬೆ ಮುರಿದು ಹಣ್ಣು ತಿನ್ನೋದು, ಉದುರಿಸೋದು, ಆಮೇಲೆ....

ಗಿಳಿಮರಿ: ಟೇಂ....

ರಾಜ: ಪಾಪ ಪಾಪ!

ಗಿಳಿಮರಿ: ಟೇಂ.... ಟೇಂ...

ರಾಜ: ಥೀ ಥೀ ಥೀ! ಬರೇ ಹಣ್ಣು, ತಿನ್ನೋದೊಂದೇ ಗೊತ್ತೆ? ಮಹಾ ವಾಚಾಳ ನಗರೋದ್ಯಾನದಲ್ಲಿ ಒಂದು ಹಣ್ಣು ತಿನ್ನೋದು ಮಾತ್ರ ಗೊತ್ತೆ?

ವಂದಿಗಳು: ಮಹಾಕರುಣಾಳು ಖಗಮೃಗಕೃಪಾಳಂ ಗಿಡಮರ ದಯಾಳು ವಿದ್ಯವಸಂತ ಪ್ರಜ್ಞಾವಧಾನಿ ಕಣಕಣಕೂ ವಿದ್ಯವಾಗಿ ಮಹಾವಾಚಾಳಪುರ

ರಾಜ: ಮಹಾವಾಚಾಳಪುರದಲ್ಲಿ ಈ ಸಭ್ಯ ಸುಶಿಕ್ಷಿತ ನಾಗರಿಕ ರಾಜ್ಯದಲ್ಲಿ ಈ ಅನಾಗರಿಕ ಪಕ್ಷಿ! ರಾಜ ತೋಟದಲ್ಲಿ ನಿರಕ್ಷಕ ಪಕ್ಷಿ! ಮತ್ತೆ ಇದಕ್ಕೆ ನೀವೇ ಸಾಕ್ಷಿ!... ಮಂತ್ರಿ, ಈ ಅಸಭ್ಯ ಪಕ್ಷಿಯನ್ನು ರಾಜಶಾಲೆಗೆ ಸೇರಿಸತಕ್ಕದ್ದು, ರಾಜಾಧ್ಯಾಪಕರಿಂದ ಇದಕ್ಕೆ ಶಿಕ್ಷಣ ಕೊಡಿಸು, ಈ ಅನಾಗರಿಕ ಶುಪಕ್ಷಿಯ ಆದಿಮ ಪ್ರವೃತ್ತಿಗಳನ್ನು ಸುಧಾರಿಸಿ ಆಧುನಿಕ ಮಾಡತಕ್ಕದ್ದು!

ಮಂತ್ರಿ: ಅಪ್ಪಣೆ ಪ್ರಭು"

ಮುಂದೆ ರಾಜನು ಮಂತ್ರಿಯನ್ನು ಕುರಿತು ಈ ಗಿಳಿಮರಿಯನ್ನು ಶಾಲೆಗೆ ಸೇರಿಸುವ ಮೊದಲು ಇದರ ಅಸಭ್ಯತೆಗೆ ಮತ್ತು ಅವಿದ್ಯೆಗೆ ಮೂಲ ಕಾರಣವನ್ನು ಕಂಡುಹಿಡಿಯಬೇಕು. ಈ ಗಿಳಿಮರಿ ತಿನ್ನೋದೇನು, ಕುಡಿಯೋದೇನು, ಇದರ ಆವರಣ ಎಂಥದು, ಇದು ಇರೋದೆಲ್ಲಿ ಹಾರೋದೆಲ್ಲಿ ಇದರ ರೆಕ್ಕೆ ಪುಕ್ಕ ಕೊಕ್ಕುಗಳ ಉದ್ದಗಲವೆಷ್ಟು, ಭಾರವೆಷ್ಟು ಈ ಅಂಶಗಳ ಬಗ್ಗೆ ದೀರ್ಘ ಸಂಶೋಧನೆ ನಡೆಯಬೇಕು ಎಂದನು. ಆಗ ಮಂತ್ರಿಯು ಯುವರಾಜ ಅಳಿಯ ದೇವರು ಮಹಾ ಪ್ರತಿಭಾಶಾಲಿಗಳು, ದೇಶಕೋಶ ಸುತ್ತಿ ಬಂದವರು, ವಿದೇಶಗಳಿಂದ ಪದವಿಗಳನ್ನು ಹೊತ್ತು ತಂದವರು, ಕಾಂಭೋಜದೇಶದಲ್ಲಿ ಪ್ರಾಣಿಶಾಸ್ತ್ರ, ಪಕ್ಷಿಶಾಸ್ತ್ರ ಪಾರಂಗತರಾದವರು, ಅದಕ್ಕೆ ಈ ಕೆಲಸವನ್ನು ಅಳಿಯರಾಜರಿಗೆ ಶುಕ ಶಿಕ್ಷಣದ ಭಾರವನ್ನು ವಹಿಸಿಬಿಡಬಹುದು ಎಂದಾಗ ರಾಜನು ಆಯಿತೆಂದನು.

ಅಳಿಯ: "ಮಹಾರಾಜ, ಇನ್ನೊಂದು ವಸಂತ ಬರುವುದರೊಳಗಾಗಿ ಈ ಕಾಡುಗಿಳಿ ತನ್ನ ವನ್ಯ ವ್ಯವಹಾರಗಳನ್ನು ಮರೆತಿರಬೇಕು. ಸಭ್ಯ ಸುಶಿಕ್ಷಿತ ಸುಸಂಸ್ಕೃತವಾಗಬೇಕು. ಇದಕ್ಕಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ಶುಕ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕು.

ರಾಜ: ನಿನ್ನ ಕಾರ್ಯದಲ್ಲಿ ಜಯವಾಗಲಿ, ಮಂತ್ರಿ, ಡಂಗುರ ಹೊಡೆಯಿಸಿ ರಾಜ್ಯದ ಮೂಲೆ ಮೂಲೆಯ ಪ್ರತಿಯೊಬ್ಬ ಪ್ರಜೆಗೂ ಗೊತ್ತಾಗಲಿ, ಅಲ್ಪವಾದ ಒಂದು ಪಕ್ಷಿಯ ಶಿಕ್ಷಣದಲ್ಲೂ ರಾಜನ ಆಸಕ್ತಿ ಎಷ್ಟಿದೆ ಎನ್ನುವರು. ನಮ್ಮ ಪುತ್ರಿಯೂ ಸಂತುಷ್ಟಳಾಗಲಿ, ಅಳಿಯರಾಜ ಶುಕಶಿಕ್ಷಣ ಮಂತ್ರಿಯಾದನೆಂದು.

ಅಳಿಯ: ಉದ್ಯಾನ ರಕ್ಷಕರೆ, ತೆಗೆದುಕೊಂಡು ಹೋಗಿ ಈ ಅಸಭ್ಯ ಕಾಡುಗಿಳಿಯನ್ನು

ಇದಕ್ಕೆ ಸುಗಂಧ ತೈಲವನ್ನೆರೆದು ಸ್ನಾನ ಮಾಡಿಸಿ ಸುಗಂಧ ದ್ರವ್ಯಗಳನ್ನು ಸಿಂಪಡಿಸಿ, ಕಾಡಿನ ದುರ್ಗಂಧ ದೂರವಾಗಲಿ."[೪೪]

ಮುಂದೆ ಅಳಿಯನು ಸಂಶೋಧಕನ ಮಾತನ್ನು ಕೇಳಿ ಶಾಲೆಯೂ ಮತ್ತು ಸೆರೆಮನೆಯು ಆದ 'ಪಂಜರಶಾಲೆ'ಯಲ್ಲಿಟ್ಟರು.

ಮುಂದೆ ಸಂಶೋಧಕರೆಲ್ಲರೂ ಆ ಗಿಳಿಮರಿಗೊಂದು ಸಮಗ್ರ ಪಠ್ಯಕ್ರಮವನ್ನು ಯೋಚಿಸಿದರು. ಮತ್ತು ಅದಕ್ಕೆ ಪಂಜರಶಾಲೆಯನ್ನು ನಿರ್ಮಿಸಿದರು. ಆ ಪಂಜರಶಾಲೆಯು ಬಂಗಾರದ ಕಂಬ, ಬೆಳ್ಳಿ ಸಲಾಕೆ, ಹೂವಿನ ಮಂಚ, ರತ್ನದ ಛತ್ರಿ ಮೊದಲಾದವುಗಳಿಂದ ಕೂಡಿತ್ತು. ಒಂದು ದಿನ ಅದರ ಉದ್ಘಾಟನೆಯನ್ನು ಮಾಡಿ ಗಿಳಿಮರಿಯನ್ನು ಅದರಲ್ಲಿ ಕೂಡಿಸುವರು. ರಾಜ, ಮಂತ್ರಿ, ಅಳಿಯ ಮೊದಲಾದವರು ಸಮಾರಂಭವನ್ನು ನೆರವೇರಿಸಿದರು. ಅದರ ಮೆರವಣಿಗೆಯಲ್ಲಿ ಹಾಡು

"ಗಿಣಿರಾಜನಿಗೆ ಸ್ವಾಗತವ ನೀಡೆ
ಊರ ಜನರೆಲ್ಲ ಬನ್ನಿರೋ
ಸ್ವಾಗತದ ಉತ್ಸವಕ್ಕೆ ತನ್ನಿರೋ
ಹಾದೀಲಿ ಹೂಗಳ ಚೆಲ್ಲಿರೋ
ಚೆಂದದ ತೋರಣವ ಕಟ್ಟಿರೋ...

ಹೊಸ ಮನೆಗೆ ಬಾರೋ ಗಿಣಿರಾಮ
ಅರಮನೆಗೆ ಬಾರೋ ಗಿಣಿರಾಮ
ಭಾಗ್ಯವ ತಾರೋ ಗಿಣಿರಾಮ
ಗುಡ್ಡ ಬೆಟ್ಟ ಮರೆಯೋ ಗಿಣಿರಾಮ...!

ಗೂಡು ಪೊಟರೆ ಬಿಟ್‌ಬಿಡೋ ಗಿಣಿರಾಮ
ಕಾಡು ಹಣ್ಣು ಬಿಟ್‌ಬಿಡೋ ಗಿಣಿರಾಮ
ಹಳ್ಳನೀರು ಬಿಟ್‌ಬಿಡೋ ಗಿಣಿರಾಮ
ಭಕ್ಷ್ಯ ಭೋಜ್ಯ ತಿನ್ನೋ ಗಿಣಿರಾಮ!

ಅಕ್ಷರವ ಕಲಿಯೋ ಗಿಣಿರಾಮ
ವ್ಯಾಕರಣ ಓದೋ ಗಿಣಿರಾಮ
ವೇದಪಾಠ ಹೇಳೋ ಗಿಣಿರಾಮ
ಲೆಕ್ಕ ಮಗ್ಗಿ ಒದರೋ ಗಿಣಿರಾಮ....!

ತತ್ವವನ್ನೆ ಹೇಳೋ ಗಿಣಿರಾಮ
ಸರಿಗಮಪ ಹಾಡೋ ಗಿಣಿರಾಮ
ಥಕಥೈಥೈ ಹಾಡೋ ಗಿಣಿರಾಮ
ಟೇಂಟೇಂ ಕಿರಿಚ್ಚೇಡ್ವೋ ಗಿಣಿರಾಮ...!"[೪೬]

ಹೀಗೆ ಈ ಗಿಳಿಮರಿಯನ್ನು ಅರಮನೆಯ ವೈಭೋಗದಲ್ಲಿಟ್ಟು ಅದಕ್ಕೆ ಕಾಳು-ಕಡಿಗಳನ್ನು ಕೊಡುವುದು ಬಿಟ್ಟು ಭಕ್ಷಭೋಜನಗಳನ್ನಿಟ್ಟರು, ಅದು ನಿಲ್ಲಲ್ಲಿಲ್ಲ. ಅದು ಯಾವ ಪಂಡಿತ, ಪಾಮರರ ವೇದ, ಪುರಾಣ, ವ್ಯಾಕರಣ ಯಾವುದನ್ನು ಕಲಿಯಲಾಗಲಿಲ್ಲ. ಅದಕ್ಕೆ ಈ ಪಂಜರವೇ ಬಂಧನವಾಗಿತ್ತು. ಮುಕ್ತವಾಗಿ ಸದಾ ಆಕಾಶದ ತುಂಬಾ ಮರದಿಂದ ಮರಕ್ಕೆ ಗಿಡದಿಂದ ಗಿಡಕ್ಕೆ ಹಾರಿ ಕಾಳುಗಳನ್ನು ಹುಡುಕಿಕೊಂಡು ತಿನ್ನುತ್ತಿತ್ತು. ತುಂಬ ಸ್ವಾತಂತ್ರವಾದ ಪಕ್ಷಿಯನ್ನು ಅರಮನೆಗೆ ತಂದು ಪಂಜರ ಶಾಲೆಯಲ್ಲಿಟ್ಟರೆ ಅದು ಹೇಗೆ ಬದಲಾಗಲು ಸಾಧ್ಯ. ಸಾಧ್ಯವೇ ಇಲ್ಲ. ಇದು ರಾಜ, ಮಂತ್ರಿ ಮತ್ತು ಅಳಿಯ ಮಾಡುವ ವ್ಯರ್ಥ ಪ್ರಯತ್ನವಾಗಿತ್ತು.

ಗಿಣಿಯು ಸರ್ವಪಂಡಿತನಾಗಿ ಏನನ್ನು ಮಾತನಾಡುವುದಿಲ್ಲವೆಂದು ಬಾವಿಸಿದರು. ಅದು ನಿತ್ರಾಣವಾಗಿ ಆ ಸ್ಥಿತಿಯನ್ನು ತಲುಪಿ, ಪಂಜರದಿಂದ ಬಿಟ್ಟರೆ ಸಾಕು ಬದುಕಿತು ಬಡ ಜೀವ ಎಂದುಕೊಳ್ಳುತ್ತಿತ್ತು.

ಒಟ್ಟಾರೆಯಾಗಿ ಈ ನಾಟಕದಲ್ಲಿ ಗಿಳಿಯನ್ನು ತಂದು ಸರ್ವಪಂಡಿತನನ್ನಾಗಿ ಮಾಡುವಂತ ಹೊಸ ತಂತ್ರವನ್ನು ಬಳಸಲಾಗಿದೆ. ಆದರೆ ಈ ನಾಟಕವನ್ನು ನೋಡಿದ ಮಕ್ಕಳಿಗೆಲ್ಲಾ ಅಯ್ಯೋ ಪಾಪ ಗಿಳಿಯು ಎಂದೆನಿಸದೆ ಇರದು.

*** ಎಚ್.ಎಸ್. ವೆಂಕಟೇಶಮೂರ್ತಿ ಅವರ 'ಅಳಿಲು ರಾಮಾಯಣ'**

ಮೂಲದಲ್ಲಿ ರಾಮಾಯಣದಲ್ಲಿ ಅಳಿಲು ಮರಿಯೊಂದು ರಾಮನನ್ನು ಮೆಚ್ಚಿಸುವ ಹಳೆಯ ಕಥೆಯಾಗಿದೆ. ಆದರೆ ಈ ನಾಟಕದ ಕಥೆಯನ್ನು ಮಕ್ಕಳಿಗೆ ಬೇಕಾದ ಹಾಗೆ ಸ್ವಲ್ಪ ಭಿನ್ನವಾಗಿದೆ. ಈ ನಾಟಕದಲ್ಲಿ ಬರುವ ಪ್ರಮುಖ ಪಾತ್ರಧಾರಿಗಳೆಂದರೆ, ಅಳಿಲು ಮರಿ, ಅಳಿಲು ತಾಯಿ, ರಾಮ, ಲಕ್ಷ್ಮಣ, ಮಾರುತಿ, ಜಾಂಬವ, ಸುಗ್ರೀವ, ಅಂಗದ, ಅರ್ಕ, ನಳ, ನೀಲ, ರಾವಣ, ಕುಂಬಕರ್ಣ, ಅಕರ, ಮಕರ, ಸೀತೆ, ದಂತುಲಿ, ಶೃಂಗಲಿ, ಸರ್ಪಾಕ್ಷಿ, ಪರ್ಕ, ಮುಸಿಯ, ಅಲ್ಲದೆ ಕೋತಿಗಳು, ರಾಕ್ಷಸರು, ರಾಕ್ಷಸಿಯರು, ಅಲೆಗಳು ಮೊದಲಾದವರು.

ಈ ನಾಟಕದ ಆರಂಭದಲ್ಲಿ ರಾವಣನು ಮಲಗಿರುವಾಗ ಒಂದು ಅಳಿಲುಮರಿ ಅವನ ಎದೆಯ ಮೇಲೆ ಕಾಲಿಟ್ಟು ಹಾರಿ ಹೋಗುತ್ತದೆ. ಆಗ ರಾವಣ ವಿಕಾರವಾಗಿ ಕಿರುಚಿಕೊಂಡು ಗಟ್ಟಿಯಾಗಿ ಚೀರಿ, ಎಚ್ಚರಗೊಳ್ಳುತ್ತಾನೆ. ಆದರೆ ತಾನು ಕನಸನ್ನು ಕಂಡೆನೆಂದು ಭಾವಿಸಿ ಎದ್ದು ಬಡಬಡಿಸುತ್ತಾನೆ.

ರಾವಣ: "(ನೆಲವನ್ನು ಬಡಿದು, ತನ್ನ ಮೈ ಮುಟ್ಟಿ ವಾಸ್ತವವನ್ನು ಸ್ಥಿರಪಡಿಸಿಕೊಂಡು)

ಅಬ್ಬಬ್ಬ!

ಕನಸು ಅಂತ ನಂಬಕ್ಕೆ ಆಗ್ತಿಲ್ಲ...!

ಅದೆಷ್ಟು ಕೋತಿಗಳು... ಹೋ ಹೋ ಹೋ....!

ಕೊನೆಗೊಂದು ಚುಲ್ಟಾರಿ ಅಳಿಲು ಬೇರೆ....!

ಅಳಿಲು... ಚೋಟುದ್ದ ಅಳಿಲು!

ಈ ಮುಂಡೇವಲ್ಲ ಸೇರಿ ಸಮುದ್ರಕ್ಕೆ ಸೇತುವೆ ಕಟ್ಟಿ...

ಛೇ... ಛೇ... ಛೇ...!

ಏ ಅಕರಾ... ಏ ಮಕರಾ... ಎಲ್ರೋ ಹೋದ್ರಿ?

(ಅಕರ, ಮಕರ ಓಡಿ ಬರುತ್ತಾರೆ)"[೪೬]

ರಾವಣನು ಈ ಎಲ್ಲಾ ಕಥೆಯನ್ನು ಆಳುಗಳಾದ ಅಕರ–ಮಕರರಿಗೆ ಹೇಳಿದ, ಹೋಗಿ ಪೆಕರ ಮುಂಡೇವ... ಕುಂಭಕರ್ಣನನ್ನು ಎಬ್ಬಿಸಿಕೊಂಡು ಬನ್ನಿ... ಎಂದನು. ಲಂಕೆಯಲ್ಲಿ ಕುಂಭಕರ್ಣನನ್ನು ಎಬ್ಬಿಸಲು ಭೇರಿಯ ನಿನಾದ ಶುರುವಾದಾಗ ಇತ್ತ ತಾಯಿ ಜೊತೆಗೆ ಮಲಗಿದ ಮರಿ ಅಳಿಲಿಗೆ ಅದೇ ಸೇತುವೆಯ ಕನಸು ಬಿದ್ದು ಎಚ್ಚರವಾಗುತ್ತದೆ. ಮತ್ತೇ ತಾಯಿಯ ಸಲಹೆಯಂತೆ ರಾಮನಾಮವನ್ನು ಜಪಿಸುತ್ತ ಮಲಗುತ್ತದೆ.

ರಾಮ! ರಾಮ! ರಾಮ

ರಾಮಗೆ

ಎಲ್ಲರ ಮೇಲೂ ಪ್ರೇಮ ॥೧॥

ಹದ್ದು! ಕರಡಿ! ಕೋತಿ!

ರಾಮಗೆ

ಎಲ್ಲರ ಮೇಲೂ ಪ್ರೀತಿ ॥೨॥

ನಂತರ ಅಳಿಲು ಮರಿ ಪೊಟರೆಯಿಂದ ಹೊರಗೆ ಬರುತ್ತದೆ. ವಾನರ ಸೇನೆಯನ್ನು ಬೆರಗಿನಿಂದ ನೋಡುತ್ತದೆ. ಕೋತಿ ಹಿಂದೆ ಕೋತಿ, ಕೋತಿಯ ಹಿಂದೆ ಕೋತಿಗಳು ಅವರ ನಾಯಕ ಹೇಳಿಕೊಟ್ಟ ಸಾಲುಗಳನ್ನು ಹಾಡುತ್ತ

ಕಿಷ್ಕಿಂಧೆಯ ಹಮ್ಮೀರರು ನಾವು!

ಧೀರರು ನಾವು

ಬಂಡೆಗಳೆತ್ತಿ ತೂರಾಡುವೆವೆ!

ಹಾರಾಡುವೆವೆ!
ಸಾಮಾನ್ಯರ ನಾವು? ॥೧॥

ರಾಜಾರಾಮನ ಭಕ್ತರು ನಾವು!
ಶಕ್ತರು ನಾವು!
ತೋಳೆ ತೋಮರವು!
ಸೀತಾರಾಮನ ಭಂಟರು ನಾವು?
ನಂಟರು ನಾವು!
ಸಾಮಾನ್ಯರೆ ನಾವು? ॥೨॥

ವೀರ ಮಾರುತಿಯಮಣ್ಣಿನ ಮಕ್ಕಳು!
ಗರಡಿಯ ಒಕ್ಕಲು!
ಮಂಡೆಯ ಸಿಡಿಗುಂಡು!
ರಾಮನಾಮವನು ಹಾಡುವ ಭಕ್ತರು!
ಸಾಹಸಯುಕ್ತರು!
ನಾವಾತನ ದಂಡು ॥೩॥

ಅಲ್ಲಿಗೆ ಗೂಢಚಾರರಾದ ಅಕರ-ಮಕರರು ಕೋತಿಗಳ ಸಾಲಿನಲ್ಲಿ ತಾವೂ ಸೇರಿಕೊಳ್ಳುತ್ತಾರೆ. ಹಾಗೂ ಆ ಸೇನೆಯನ್ನು ನೋಡಲು ಅಳಿಲು ಮರಿ ಮತ್ತು ಅದರ ತಾಯಿ ಅಮ್ಮಾಚಿ ಅಳಿಲು ಬಂದಿರುತ್ತವೆ. ಸಮುದ್ರಕ್ಕೆ ಸೇತುವೆ ಕಟ್ಟೋ ಕೆಲಸದಲ್ಲಿ ಅಳಿಲು ಮರಿಯು ಸಹಾಯ ಮಾಡುತ್ತೇನೆ ಎನ್ನುತ್ತದೆ.

ಮುಂದೆ ಮಂಗಗಳು ಎದ್ದು, ವ್ಯಾಯಾಮ ಮಾಡುವಾಗ ಅಳಿಲೂ ದೂರದಲ್ಲಿದ್ದು ನೋಡುತ್ತಾ ಅವರನ್ನು ಅನುಕರಿಸುತ್ತಿರುತ್ತದೆ. ಆಗ ಅಂಗದನು ಹೇಳಿಕೊಡು ಹಾಡು ಬಹಳ ಸೊಗಸಾಗಿದೆ

ಅಂಗದ: ಕೈ ಎತ್ ಮೇಲಕ್ಕೋಗಿ
ಕಾಲೆತ್ತಿ ಮುಂದಕ್ ನೆಗಿ!
ಎರಡು ಕೈಯಿ ಮುಂದಕ್ ಝುಂಡ್ಸ್
ಹೆಜ್ಜೆ ಪಕ್ಕ ಹೆಜ್ಜೆ ಜೋಡ್ಸ್!

ಬಾಲ ಎತ್ತ್ ಮೇಲಕ್ ಬೀಸ್
ನೆಲದ ಮೇಲ್ ಚೌಕ ಹಾಸ್!
ಒಂದ್-ಎಲ್ಡ್-ಮೂರ್-ನಾಕ್

ಇನ್ನೂ ಸೊಂಟ ಬಗ್ಗಿಸ್ ಬೇಕ್!

ಮೂತಿ ತಂದ್ ನೆಲಕ್ ತಾಗ್ಸ್

ಮಂಡಿ ಎತ್ತ್ ಸೊಂಟ ಬಾಗ್ಸ್!

ಕೂಡು-ಏಳು-ಏಳುಕೂಡ್

ಇಪ್ಪತ್ ಸಲ ಹಿಂಗೇ ಮಾಡ್!"[೪೭]

ನಂತರ ರಾಮ, ಲಕ್ಷ್ಮಣ, ಸುಗ್ರೀವ, ಹನುಮಂತ ಎಲ್ಲರು ಹೋಗಿ ಸಮುದ್ರ ರಾಜನಿಂದ ತಾವು ಸಮುದ್ರಕ್ಕೆ ಸೇತುವೆ ಕಟ್ಟಲು ಒಪ್ಪಿಗೆ ಪಡೆದು ಬರುತ್ತಾರೆ.

ಇತ್ತ ಅಳಿಲು ಸೇತುವೆ ಕಟ್ಟಲು ಮರಳನ್ನು ತರುತ್ತಿರುತ್ತದೆ. ಅಲ್ಲಿದ್ದ ಎಲ್ಲಾ ಮಂಗಗಳು ಈ ಅಳಿಲು ಸೇತ್ವೆ ಕಟ್ಟತ್ತಂತೆ ಎಂದು ನಗುತ್ತಿದ್ದರು. ನಳನ ಮಾತಿನ ಮೇರೆಗೆ ತಾನು ಸೇತ್ವೆ ಕಟ್ಟಲು ಒಪ್ಪಿಗೆ ಕೊಡುವಂತೆ ರಾಮನಿಗೊಂದು ಅರ್ಜಿಯನ್ನು ಅಮ್ಮನಿಂದ ಬರೆಸಿಕೊಂಡ ಬಂದುರಾಮನ ಪಾದಕಮಲಕ್ಕೆ ಇಡುತ್ತದೆ.

ಮುಂದೆ ಶ್ರೀರಾಮಚಂದ್ರನೆ ಅಳಿಲನ್ನು ತನ್ನ ಎದೆಗವಚಿಕೊಂಡು

ಅಳಿಲಿಗೆ

ರಾಮ: "ನನ್ನ ಪುಟ್ಟ ಗೆಳೆಯಾ...!

ಇನ್ನೊಬ್ಬರಿಗೆ ಸಹಾಯ ಮಾಡೋಕೆ

ಯಾರ ಅನುಮತಿಯೂ ಬೇಕಾಗಿಲ್ಲ...!"[೪೮]

ನಳ: ಹ್ಹಿ...ಹ್ಹಿ... ಹ್ಹಿ... ಈ ಮರಳೆಲ್ಲಾ ಈ ಮರಿ ತಂದಿರೋದೆ ಪ್ರಭು...!

ರಾಮ: ಹೌದಾ...? ನನಗೋಸ್ಕರ ಎಷ್ಟು ಕಷ್ಟ ಪಟ್ಟದೀ ನೀನು...! (ಅಳಿಲನ್ನು ಮುದ್ದಾಡುತ್ತಾನೆ) (ಗಲ್ಲ ಹಿಡಿದೆತ್ತಿ) ನಿನಗೇನು ವರಬೇಕು ಕೇಳು ಕೊಡ್ತೀನಿ....

ಅಳಿಲು: ಮತ್ತೆ.... ಮತ್ತೆ.... ನನ್ನ ಜೊತೆ ನನ್ನ ಜೊತೆ... ನೀನು ಕಬಡ್ಡಿ ಆಡ್ತೀಯಾ...?

ರಾಮ: (ಗಟ್ಟಿಯಾಗಿ ನಕ್ಕು) ಅಷ್ಟೇನಾ...? ಇಗೋ... ನಾನು ತಯಾರ್ ಲಕ್ಷಣ ಈ ಕೋದಂಡ ತಗೋ... ಈ ಬತ್ತಳಿಕೆ ತಗೋ... ತಡಿ... ಅಂಗೀನು ಬಿಚ್ಚಿ ಬಿಡ್ತೀನಿ, ಆಹಾ...! ಈಗ ನಿಸೂರಾಯ್ತು ಬಾ...! ಬಾ! ಬಾ ನನ್ನ ಗೆಳೆಯ....!

ಅಳಿಲು: ನನ್ನ 'ಹಿಡಿ' ನೋಡೋಣ...!

ಇವರ ಜೊತೆ ಕಬಡ್ಡಿ ಆಡಲು ಲಕ್ಷ್ಮಣ ಹನುಮಂತ, ನಳ ಜಾಂಬವ ಎಲ್ಲರೂ ಸೇರುತ್ತಾರೆ.

ಈ ಕಬಡ್ಡಿ ಆಟದಲ್ಲಿ ಅಳಿಲು ರಾಮನನ್ನು ಸೋಲಿಸುತ್ತದೆ. ಅಲ್ಲಿರುವವರು ಇದು ಭಾಗ್ಯವೇ ಸರಿ ಎಂದರು, ಎಲ್ಲರೂ ಸೇರಿ ಸಮುದ್ರಕ್ಕೆ ಸೇತುವೆ ಕಟ್ಟಿ ಲಂಕೆಯನ್ನು ತಲುಪಿದರು. ಅನಂತರ ಅಶೋಕವನದಲ್ಲಿ ಸೀತೆಯನ್ನು ಕಾಣಲು ಬಂದ ಹನುಮಂತನಿಗೆ ಸೀತೆಯು ಆ ಅಳಿಲನ್ನು ನಾನು ನೋಡಬೇಕು ಕರ್ರೊಂಡ್ ಬಾ ಎಂದಾಗ, ಮಾರುತಿಯು ಅದನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಬರುತ್ತಾನೆ.

ಮಾರುತಿ: (ಅಳಿಲನ್ನು ಇಳಿಸುತ್ತಾ) ಅಮ್ಮಾ...! ಇದೇ ಆ ಅಳಿಲು...!

ಅಳಿಲು: ಓಡಿಬಂದು ಸೀತೆಯ ಬಳಿ ನಿಲ್ಲುತ್ತದೆ.

ಸೀತೆ: (ಅಳಿಲನ್ನು ಬಾಚಿ ತಬ್ಬಿಕೊಂಡು ತೊಡೆಯ ಮೇಲೆ ಕೂಡಿಸಿಕೊಂಡು) ನಿನ್ನ ವಿಷಯ ಎಲ್ಲ ನಂಗೆ ಗೊತ್ತಾಗಿದೆ. ಎಷ್ಟು ಒಳ್ಳೇ ಮನಸ್ಸಪ್ಪಾ ನಿಂದು...! ಹಗಲೂ ರಾತ್ರಿ ಸೇತುವೆ ಕಟ್ಟಿ ನಿಂಗೆ ಸುಸ್ತಾಗಿರಬೇಕು... ತಗೋ... ಹಣ್ಣು ತಿನ್ನು... (ತಿನ್ನಿಸುತ್ತಾಳೆ)

ಅಳಿಲು: ನೀವು... ಅಮ್ಮಾಜಿ ಥರಾನೆ ಥೇಟ್ ಅಮ್ಮಾಜಿ ಥರಾನೆ...

ಸೀತೆ: (ಅಳಿಲಿಗೆ ಮುತ್ತಿಟ್ಟು) ನಾನು ಅಮ್ಮಾಜಿನೆ ದೊಡ್ಡಮ್ಮಾಜಿ ಅಂತ ಕರಿ...

ಯುದ್ಧ ಮುಗಿಯೋವರೆಗು ಈ ಅಳಿಲು ನನ್ನ ಹತ್ರಾನೆ ಇಲ್ರಿ....

ಅಳಿಲು: ಓಹೋ...! ನಿಮ್ಮ ಹತ್ರಾನೆ ಇರ್ತೀನಿ... ಎನ್ನುತ್ತದೆ.

ಹೀಗೆ ಈ ನಾಟಕದಲ್ಲಿ ಅಳಿಲು ರಾಮನ ಮತ್ತು ಇತರೆ ಎಲ್ಲ ಪ್ರೀತಿಯನ್ನು ಗಳಿಸುತ್ತದೆ. ಇಲ್ಲಿ ಯಾವುದೇ ಕೆಲಸ ಮಾಡಲು ಮೂರ್ತಿ ಮುಖ್ಯವಲ್ಲ, ಮನಸ್ಸು ಮುಖ್ಯ ಎಂಬುದನ್ನು ಅಳಿಲು ಮರಿಯು ತೋರಿಸುತ್ತದೆ.

ಈ ನಾಟಕದಲ್ಲಿ ಬರುವ ಹಾಡುಗಳು, ಅಲ್ಲಲ್ಲಿ ಬರುವ ಸಂಭಾಷಣೆಗಳು ಮಕ್ಕಳಿಗೆ ತುಂಬ ಮನೋರಂಜನೆಯನ್ನು ನೀಡುತ್ತವೆ. ಎಲ್ಲಾ ಮಕ್ಕಳು ಈ ನಾಟಕವನ್ನು ಓದಲೇ ಬೇಕು. ಅಷ್ಟು ಖುಷಿ ಈ ನಾಟಕದಿಂದ ಸಿಗುತ್ತದೆ. ಇಡೀ ನಾಟಕವು ಹಾಸ್ಯಭರಿತ ಸರಳ ಸಂಭಾಷಣೆಯಿಂದಲೇ ಕೂಡಿರುವುದು ಈ ನಾಟಕದ ಮತ್ತೊಂದು ವಿಶೇಷವೆನಿಸಿದೆ. ಹೀಗಾಗಿ ಇಡೀ ನಾಟಕ ಮಕ್ಕಳನ್ನು ಪೂರ್ಣವಾಗಿ ತನ್ನತ್ತ ಸೆಳೆದುಕೊಳ್ಳುತ್ತದೆ.

*** ಎಚ್.ಎಸ್. ವೆಂಕಟೇಶಮೂರ್ತಿಯವರ 'ಹೂವಿ' ನಾಟಕ**

ವೆಂಕಟೇಶಮೂರ್ತಿಯವರ 'ಹೂವಿ' ಮತ್ತೊಂದು ಪ್ರಮುಖ ಮಕ್ಕಳ ನಾಟಕವಾಗಿದೆ. ಈ ನಾಟಕದಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಹೂವಿ (ಕಥಾನಾಯಕಿ), ಪುಟ್ಟಿ (ಹೂವಿನ ಅಕ್ಕ), ಬೆಳ್ಳಿ (ಹೊನ್ನನ ತಂಗಿ), ಹೊನ್ನ (ಗೌಡರ ಮಗ), ಕುದುರೆ (ಹೊನ್ನನ ಸಖ ಮತ್ತು ವಾಹನ) ಹೂವಮ್ಮನ ತಾಯಿ, ರೈತ ಮುದುಕ, ಮೇಳದವರು ಮತ್ತು ಸಖಿಯರು.

ಈ ನಾಟಕ ಆರಂಭವಾಗುವುದು ಹೊನ್ನೆ ತೋಪಿನಲ್ಲಿ ಗೌಡರ ಮಗಳು ಬೆಳ್ಳಿ ತನ್ನ ಗೆಳತಿಯರ ಜೋಡಿ ಹಗ್ಗದ ಆಟ ಆಡುತ್ತಿದ್ದಾಳೆ. ಆಡಿ ಆಡಿ ದಣಿದು ಎಲ್ಲರೂ ಹೊನ್ನೆಯ ಮರದಡಿ ಕುಳಿತು ಏದುಸಿರು ಬಿಡುತ್ತಿದ್ದಾರೆ. ಆಗ ಇದ್ದಕ್ಕಿದ್ದಂತೆ ತಂಗಾಳಿ ಬಿಡತೊಡಗುತ್ತದೆ. ಮಧುರವಾದ ಒಂದು ಆಲಾಪ ಪ್ರಾರಂಭವಾಗುತ್ತದೆ. ಕಾಲುಚಾಚಿ ಕೂತಿದ್ದ ಬೆಳ್ಳಿ ಧಡಕ್ಕನೆ ಕುಕ್ಕರುಗಾಲಲ್ಲಿ ಕುಳಿತು ಜೋರಾಗಿ ಉಸಿರಾಡುತ್ತಾಳೆ.

ಬೆಳ್ಳಿಯು ಆಹಾ! ಎಂಥ ಪರಿಮಳವೇ ಇದು! ಯಾವ ಹೂವೇ ಇದು? ಆದರೆ ಈ ಪರಿಮಳ ಮಲ್ಲಿಗೆದೂ ಅಲ್ಲ, ಜಾಜೀದೂ ಅಲ್ಲ, ಸಂಪಿಗೇದೂ ಅಲ್ಲ, ಈ ಪೂರ್ವದ ಕಡೆಯಿಂದಲೇ ಗಾಳಿ ಬೀಸುತ್ತಿರುವುದು. ಆ ಕಡೆಗೆ ಎಲ್ಲೋ ಇರಬೇಕು ಆ ಹೂವು.... ಇದು ಈ ಲೋಕದ ಹೂವೇ ಅಲ್ಲ! ನಂದನವನದ ನಂದಬಟ್ಟಲು ಇದು! ಇಂದ್ರಲೋಕದ ಮಂದಾರ ಪುಷ್ಪ ಇದು! ನಾಗಲೋಕದ ನಾಗಸಂಪಿಗೆ ಇದು. ಇದು ಯಾವ ಲೋಕದ್ದೇ ಆಗಿರ್ಲಿ ನಮ್ಮಣ್ಣನಿಗೆ ಹೇಳಿದರೆ ಇಂಥ ಹೂವು ಬಿಡೋ ಗಿಡಾ ಭೂಲೋಕಕ್ಕೆ ತಂದೇ ತರ್ತಾನೆ ಎಂದು ನಂತರ ಅಣ್ಣ ಹೊನ್ನ ಬಂದ ಮೇಲೆ

ಬೆಳ್ಳಿ: “ಅಣ್ಣಾ...! ಈ ಹೂವು ನೋಡಿದೆಯಾ ಹೇಗಿದೆ...?

ಹೊನ್ನ: (ಹಿಡಿದು ನೋಡಿ) ನನ್ನ ತಂಗಿಯ ಮುದ್ದು ಮುಖ ಇದ್ದ ಹಾಗಿದೆ.

ಬೆಳ್ಳಿ: ಇಂಥ ಪರಿಮಳ ಇರೋ ಹೂವು ಈ ಲೋಕದಲ್ಲೇ ಇಲ್ಲ...

ಹೊನ್ನ: (ಹೂ ತಂಗಿಯ ಮುಡಿಯಲ್ಲಿ ಇರಿಸಿ) ಇಡೀ ಜಗದಲ್ಲೇ ಇಲ್ಲದ ಹೂವು ಇರಬೇಕಾದ್ದು ನನ್ನ ತಂಗ್ಯಮ್ಮನ ಮುಡಿಯಲ್ಲಿ...!

ಬೆಳ್ಳಿ: ಇಂಥಾ ಹೂವ ದಿನಾ ದಿನಾ ನಾನು ಮುಡಿಬೇಕು.

ಹೊನ್ನ: ಈ ಹೂವಿನ ಮರವೆಲ್ಲಿದೆ ಹೇಳು... ಬುಡಸಮೇತ ಗಿಡಾನೇ ಎತ್ತು ತಂದೇನು...

ಬೆಳ್ಳಿ: ಗಿಡ ನಂಗೆ ಬೇಕು, ಆದ್ರೆ ಅದು ಎಲ್ಲಿದೆ ಅಂತ ನಂಗೆ ಗೊತ್ತಿಲ್ಲ...

ಹೊನ್ನ: ಗೊತ್ತಾಯ್ತು... ಗೊತ್ತಾಯ್ತು.... ಅತಳ, ವಿತಳ, ಪಾತಾಳ ಎಲ್ಲೇ ಇಲ್ರಿ ಇಂಥ ಹೂವು ಯಾರಾದರೂ ತಂದು ಕೊಟ್ಟಿದ್ದೇ ಆದ್ರೆ ಒಂದು ಹೂವಿಗೆ ಹತ್ತು ಹೊನ್ನು ಕೊಡ್ತೀನಿ ಅಂತ ಹೇಳ್ತೀನಿ...!

ಯಾರು ಹೂವು ತರ್ತಾರೋ ನೋಡಿ, ಅವರ ಮೂಲಕ ಈ ಹೂವಿನ ಮರ ಇರೋ ಜಾಗ ಪತ್ತೆ ಮಾಡ್ತೀನಿ...! ಎಂದನು”[೪೨]

ಹಾಗೇ ಇಡೀ ಊರಿಗೆ ಮೇಳದವರು ಡಂಗುರ ಸಾರುತ್ತಾರೆ. ಇತ್ತ ಹೂವಾಡಗಿತ್ತಿಯಾದ

ಹೂವಮ್ಮಳು ತನ್ನ ಗುಡಿಸಿಲಿನ ಮುಂದೆ ಕವಿತೆ ಆಡುತ್ತಾ ಕುಳಿತಿದ್ದಾಳೆ. ಹೂವಮ್ಮಳ ಅಕ್ಕ ಪುಟ್ಟಮ್ಮ ಓಡಿ ಬರುತ್ತಾ ಹೂವೀ... ಹೂವೀ... ಕೇಳಿದ್ಯಾ ವಿಷಯ...? ಗೌಡರ ಮಗ ಊರ ತುಂಬ ಡಂಗುರ ಹೊಡ್ಸಿದಾನೆ... ಯಾವುದೋ ಹೂವಂತೆ! ಆ ಹೂ ತಂದು ಕೊಟ್ಟೋರಿಗೆ ಹೂವಿಗೆ ಹತ್ತು ಹೊನ್ನು ಕೊಡ್ತಾನಂತೆ... ಹೋಗಮ್ಮ ಹೂವಮ್ಮ ಆ ಹೂ ನಿನಗೆ ಗೊತ್ತು...! ಅದು ಎಲ್ಲಿದೆ ಅಂತ ಹೇಳು. ನೀನು ಹೇಳಿದರೆ ನಮ್ಮ ಕಷ್ಟ ಎಲ್ಲ ತೀರುತ್ತದೆ.

ನಮಗಾಗಿ ಅವ್ವ ಹಣ್ಣು ಹಣ್ಣು ಮುದುಕಿ... ಅವಳಿಗೆ ಇಂದಿಗೂ ದುಡಿಯೋದು ತಪ್ಪಿಲ್ಲ ಮೂರು ಮಾರುದ್ದ ನೆಲ ಅಗಿದೂ ಅಗಿದೂ ಬೆವರು ಸುರಿಸಿ ಥರಥರಾ ಹೂ ಗಿಡ ಬೆಳೀತಾಳೆ. ಹೊಟ್ಟೆ ತುಂಬಾ ಅನ್ನ ಇಲ್ಲ, ಕಣ್ಣು ತುಂಬಾ ನಿದ್ರೆ ಇಲ್ಲ. ನಮಗೋಸ್ಕರ ಇನ್ನು ಎಷ್ಟು ದಿನ ಅವಳು ಜೀವ ತೇಯಬೇಕು? ಹೇಳು... ಈ ಹೂವಿನ ಗಿಡ ಆದ್ರೂ ಸಿಕ್ರೆ, ಆ ಗಿಡ ಬುಟ್ಟಿ ತುಂಬ ಹೂವು ಕೊಟ್ರೆ ನಾವು ಸರೀಕರ ಜೊತೆ ಸಮಾಸಮ ನಡೀಬಹುದು ಎಂದಳು.

ಹೂವಮ್ಮ: ಪುಟ್ಟಕ್ಕಾ... ನಿಲ್ಲು... ಆ ಹೂವಿನ ಮರ ಆ ಕಾನುಮಲೇಲಿ ಇಲ್ಲ....

ಪುಟ್ಟಮ್ಮ: ಕಾನುಮಲೇಲಿ ಇಲ್ಲ...! ಎಲ್ಲಿದೆ ಹಾಗಾದ್ರೆ...?

ಹೂವಮ್ಮ: (ವಿಲಕ್ಷಣವಾಗಿ ನಕ್ಕು) ಇಲ್ಲೇ... ಇಲ್ಲೇ... ನಿನ್ನ ಕಣ್ಣ ಎದುರಲ್ಲೇ ಇದೆ... (ಹಿಂದಿನಿಂದ ಸಂಗೀತದ ಆಲಾಪ ಪ್ರಾರಂಭವಾಗುತ್ತದೆ. ಹೂವಮ್ಮ ಮೈ ಮುರಿದು ಪರಿಭ್ರಮಿಸ ತೊಡಗುತ್ತಾಳೆ. ಹಾಡು ಪ್ರಾರಂಭವಾಗುತ್ತದೆ)

"ಓಡೀತಿದೆ ಚಿಗುರು ಒಡಲಲ್ಲಿ
ಕೊಡಪಾನ ನೀರು ಸುರಿಯೆ!
ಹೊರ ಚಾಚುತಾವೆ ಅಹಾ! ರೆಂಬೇ!
ಮೈತುಂಬ ಹಸಿರು ಮುರಿಯೆ!
ಹಾಹಾ! ಹೀಹೀ! ಹೂಹೂ!

ಹರಿತಾವೆ ಜೀವರಸ ಒಳಗೆ
ಎಲ್ಲೆಲ್ಲು ಅರೆಬಿರಿದ ಮೊಗ್ಗು!
ಗುಮ್ಮನ್ನುತಾನೆ ಮರೆದುಸಿರು
ಮೊಗ್ಗೊಡೆದು ಹೂವಿನಾ ಹಿಗ್ಗು!
ಹಾಹಾ! ಹೀಹೀ! ಹೂಹೂ!

ಮುರಿಬೇಡ ಕವಲೊಡೆದ ರೆಂಬೆ
ಹರಿಬೇಡ ಹಸಿರನೆಲೆಯ

ಹೂ ಎಷ್ಟು ಬೇಕೋ ನೀ ಬಿಡಿಸು
ಬಿಗಿಬೇಡ ಮೂಲ ನೆಲೆಯ!
ಹಾಹಾ! ಹೀಹೀ! ಹೂಹೂ!"

ಈ ಹಾಡು ಮುಗಿಯುವುದರೊಳಗೆ ಹೂವಿ, ಹೂವಿನ ಮರವಾಗಿದ್ದಾಳೆ. ಬಾ..ಬಾ.. ಪುಟ್ಟಕ್ಕ ಹೆದರ್ಕೋಬೇಡ...! ಹೂವಿನ ಮರ ಆಗಿದ್ರು ಹೂವಿ ಹೂವಿನೆ. ಬಾ ನಿನಗೆ ಬೇಕಾದಷ್ಟು ಹೂ ಬಿಡಿಸಿಕೋ... ಆಗ ಪುಟ್ಟಕ್ಕ ಹೂವಿ ಹತ್ತಿರ ಬಂದು ಮೂಸಿ, ಇಷ್ಟೊಂದು ಹೂವು ಎಲ್ಲಿತ್ತೇ ನಿನ್ನ ಮೈಯೊಳಗೆ ಅಯ್ಯೋ ಅಯ್ಯೋ ಎಂಥ ಚೆಲುವೆ ನಮ್ಮ ಹೂವಿ ಎಂದಳು.

ನಂತರ ಪುಟ್ಟಕ್ಕಳು ಹೂವು ಮಾರಲಿಕ್ಕೆ ಬಂದು ಬೆಳ್ಳಿಗೆ ಹೂವು ಕೊಟ್ಟು ಹೊನ್ನು ಪಡೆದಳು. ಆದರೆ ಅವಳಣ್ಣ ಹೊನ್ನ ನನಗೆ ಈ ಹೂವು ಬಿಡುವ ಗಿಡನೇ ಬೇಕು ಅದು ಕೊಟ್ಟರೆ ಸಾವಿರ ಹೊನ್ನು ಕೊಡುವೆ ಎನ್ನುವನು. ಮುಂದೆ ಪುಟ್ಟಕ್ಕಳ ಹಿತ್ತಲಲ್ಲಿ ಅವಿತು ಕೂತ ಹೊನ್ನನು, ಹೂವಮ್ಮ ಹೂವಿನ ಮರ ಆಗುವುದನ್ನು ಮರೆಯಿಂದ ನೋಡಿದನು. ಅಲ್ಲಿಂದ ಹೊನ್ನನ ತಂಗಿ, ಅವಳ ಗೆಳತಿಯರು ಮಂಗಳದ್ರವ್ಯಗಳ ಸಮೇತ ಹೂವಮ್ಮಳ ತಾಯಿಯನ್ನು ಹೊನ್ನನಿಗೆ ಹೂವಿಯನ್ನು ಮದುವೆ ಮಾಡಿಕೊಡಲು ಒಪ್ಪಿಸುತ್ತಾರೆ. ಮದುವೆ ಆಗುತ್ತದೆ.

ಹೊನ್ನನು ಹೂವಿಯನ್ನು ಒಂದು ಸಲ ನೀನು ಹೂವಿನ ಮರ ಆಗಿ ಹಾಸಿಗೆ ಮೇಲೆ ಬುಟ್ಟಿ ಬುಟ್ಟಿ ಹೂವು ಸುರಿಸು... ನಾವು ಹೂವಿನ ಹಾಸಿಗೆ ಮೇಲೆ ಮಲಗೋಣ, ಹೂವಿನ ಹೊದಿಕೆ ಹೊದಿಯೋಣ ಎಂದಾಗ ಹೂವಿ ಇದೇನು ಚೇಷ್ಟೆ ನಿಮ್ಮದು... ನಾನು ಮರಾ ಆಗೋದಾ... ಮನುಷ್ಯರು ಮರ ಆಗೋದು ಸಾಧ್ಯವೆ ಎನ್ನುವಳು. ನಂತರ ಹೊನ್ನನಿಗೆ ಎಲ್ಲ ವಿಚಾರ ತಿಳಿದಿದ್ದರಿಂದ ಒಮ್ಮೆ ಮಾತ್ರ ನಾನು ಮರವಾಗ್ತೀನಿ ಎಂದು ಹೊನ್ನನ ಮುಂದೆ ಹೂವಿ ಮರವಾದಳು. ಅದನ್ನು ಹೊನ್ನನ ತಂಗಿ ಬೆಳ್ಳಿ ಬಾಗಿಲಕಿಂಡಿಯಿಂದ ಕದ್ದು ನೋಡುತ್ತಾಳೆ.

ಮುಂದೆ ಉಪಾಯ ಮಾಡಿ ಹೊನ್ನಿನ ತೋಪಿಗೆ ಬೆಳ್ಳಿ ಹೂವಿಯನ್ನು ಕರೆದುಕೊಂಡು ಹೋಗಿ ಹೂವಿನ ಮರವಾಗುವಂತೆ ಕೇಳಿದಳು. ಹೂವಿಯು ಮರವಾದಳು. ಬೆಳ್ಳಿ ಟೊಂಗೆ ಟೊಂಗೆ ಮುರಿದು ನೀನು ತಗೋ, ನೀನು ತಗೋ ಎನ್ನುತ್ತಾ ಗೆಳತಿಯರಿಗೆ ಹೂಟೊಂಗೆ ಎಸೆಯುತ್ತಾಳೆ. ಕ್ಷಣ ಮಾತ್ರದಲ್ಲಿ ಹೂಮರ ಬೋಳಾಗುತ್ತದೆ. ಬೆಳ್ಳಿ ಇನ್ನೊಂದು ಬಿಂದಿಗೆ ನೀರನ್ನು ಗಿಡದ ಮೇಲೆ ಚೆಲ್ಲಿದಾಗ ಹೂವಿ ಮಾತ್ರ ಪೂರ್ತಿಯಾಗಿ ಹೂವಿ ಆಗದೆ ರುಂಡ ಮಾತ್ರ ಹೂವಿಯದು, ಮುಂಡವೆಲ್ಲಾ ಮರವಾಗಿಯೇ ಉಳಿದಿತ್ತು. ಹೊನ್ನನು ಹೂವಿಯನ್ನು ಹುಡುಕಿಕೊಂಡು ಹೋದನು. ಕೊನೆಗೆ ಹೂವಿಯು ಪೂರ್ತಿಯಾಗಿ ಹೂವಿ ಆದಳು ಹೊನ್ನ ಹೂವಿನ ಕಣ್ಣೀರು ಒರೆಸುತ್ತಾ ಇಬ್ಬರು ಅಳುತ್ತಾ ನಗುತ್ತಾ ಕೈಹಿಡಿದು ಅಪ್ಪಾಲೆ ತಿಪ್ಪಾಲೆ ತಿರುಗ ತೊಡಗಿದರು.

ಹೀಗೆ ಈ ನಾಟಕವು ಮಧ್ಯೆದಲ್ಲಿ ಒಂದು ರೋಚಕವಾದ ಬದಲಾವಣೆಯನ್ನು ಕಾಣುತ್ತದೆ. ಇಲ್ಲಿ ನಾಯಕಿಯಾದ ಹೂವಿ, ಹೂವಿನ ಮರವಾಗುವುದು, ಹೂವು ಕೊಡುವುದು ಮಕ್ಕಳ ಕಲ್ಪನೆಯಲ್ಲಿ ಇದು ತುಂಬಾ ಖುಷಿ ಕೊಡುವಂತದ್ದು, ಇದರಲ್ಲಿ ಬರುವ ಹಾಡುಗಳು ಕೇಳಲು ತುಂಬಾ ಸೊಗಸಾಗಿದೆ. ಮತ್ತು ಭಾಷೆಯು ಸರಳವಾಗಿದೆ.

*** ಬಿ.ಟಿ. ದೇಸಾಯಿ ಅವರ 'ಗಿಡ್ಡೂ ಟೇಲರ್‌ನ ಸಾಹಸಗಳು'**

ಈ ನಾಟಕದಲ್ಲಿ ಗಿಡ್ಡೂ ಟೇಲರ್‌ನ ಹೊಸ ಹೊಸ ಸಾಹಸಗಳು ಮಕ್ಕಳಗೆ ತುಂಬ ಖುಷಿಯನ್ನು ಕೊಡುತ್ತವೆ. ಇಲ್ಲಿ ಮಕ್ಕಳು ಗಿಡ್ಡೂವಿನ ಕಲ್ಪನೆಯಲ್ಲಿಯೇ ನಗೆಯನ್ನು ತಡೆಯಲಾರರು. ಈ ನಾಟಕದಲ್ಲಿ ವಸ್ತುವೇ ಗಿಡ್ಡುವಿನ ಸಾಹಸಗಳು ತುಲನೆಯನ್ನು ಮಾಡುವುದು. ಇಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಗಿಡ್ಡೂ ಮತ್ತು ರಾಕ್ಷಸ ಪಾತ್ರಗಳು.

ಇಲ್ಲಿ ಗಿಡ್ಡುವು ತಾನು ತುಂಬಾ ಬಲಶಾಲಿ ಎಂದು ಹೇಳಿಕೊಳ್ಳುತ್ತಿರುತ್ತಾನೆ. ತನ್ನನ್ನು ತಾನೇ ಪ್ರಶಂಸಿಕೊಳ್ಳುತ್ತಿರುತ್ತಾನೆ.

ರಾಕ್ಷಸ: ನೀನು ನಿಜವಾಗಿಯೂ ಅಷ್ಟು ಬಲವಾದವನೆ?

ಗಿಡ್ಡೂ: ಒಂದೇ ಮಾತು ಅಂದೂ ಅದ್ದಂಗ ಬ್ಯಾಸರ ಬರೋದಿಲ್ಲೋ ಮರಾಯ? ಇದಕ್ಕೆ ಸಾಕ್ಷಿ ಪುರಾವೆಗಳು ಬೇಕೇನು

ರಾಕ್ಷಸ: (ಒಂದು ಕಲ್ಲನ್ನೆತ್ತಿ) ಇಲ್ಲಿ ನೋಡು (ಆ ಕಲ್ಲನ್ನು ಕೈಯಿಂದ ಹಿಚುಕಿ ಪುಡಿ ಪುಡಿ ಮಾಡಿ ಒಗೆಯುತ್ತಾನೆ) ಹೀಗೆ ಮಾಡು

ಗಿಡ್ಡೂ: ಈಟ ಹೌದು? ಇಕಾ ತಗಾ (ತನ್ನ ಜೇಬಿನಲ್ಲಿದ್ದ ಬೋಂಡಾ ಪಟ್ಟಣವನ್ನು ಎಡಗೈಯಿಂದ ಹಿಚುಕಿ ಅದರ ಎಣ್ಣೆಯನ್ನು ಹಿಂಡುತ್ತಾನೆ) ಇದನ್ನು ನೀನು ಎರಡೂ ಕೈಲೆ ಮಾಡಿದರೆ ನಾ ಒಂದು ಕೈಲೇ ಕಿವುಚಿ ನೀರ ತರಿಸಿದೆ.

ರಾಕ್ಷಸ: (ಆಶ್ಚರ್ಯ ಚಕಿತನಾಗಿ- ಒಂದು ಕಲ್ಲನ್ನೆತ್ತಿ ಒಗೆಯುವನು) ಹೀಗೆ ಮಾಡು.

ಗಿಡ್ಡೂ: ಛೇ! ಇದೇಟರ ಕೆಲಸ! ನಿನ್ನ ಕಲ್ಲು ಇಕಾ, ನನ್ನ ಕರಾಮತ್ತ ನೋಡು (ತನ್ನ ಇನ್ನೊಂದು ಜೇಬಿನಲ್ಲಿದ್ದ ಗುಬ್ಬಿಯನ್ನು ತೆಗೆದು ಒಗೆಯುತ್ತಾನೆ. ಗುಬ್ಬಿಹಾರಿ ಹೋಗುವುದನ್ನು ರಾಕ್ಷಸ ಗೋಣು ಹೊರಳಿಸಿ ನೋಡುತ್ತಾನೆ) ಏ ಪ್ಯಾಲಿ, ಗೋಣ ಮರಕೊಂಡಿ ಜ್ವಾಕೆ!"

ಹೀಗೆ ಇಡೀ ನಾಟಕವು ಗಿಡ್ಡೂ ಟೇಲರ್‌ನ ಈ ರೀತಿಯ ವಿಶಿಷ್ಟ ಸಾಹಸಗಳು. ಅವನ ಜಾಣ್ಮೆ, ಚತುರತೆ, ಉಪಾಯಗಳಿಂದ ಅವನು ಯಶಸ್ವಿಯಾಗುವ ಪ್ರಸಂಗಗಳಿಂದ ಮಕ್ಕಳಾದಿಯಾಗಿ ಎಲ್ಲರಿಗೂ ರುಚಿಸುತ್ತದೆ.

ಇಲ್ಲಿ ಲೇಖಕರು ಭಾಷೆಯ ಗ್ರಂಥಸ್ಥವಾಗಿರುವುದಕ್ಕಿಂತ ಆಡುಮಾತಿನಲ್ಲಿದ್ದರೆ ಚನ್ನಾಗಿರುತ್ತೆ ಎನ್ನುವ ಕಾರಣಕ್ಕಾಗಿ ಆಡು ಮಾತಿನ ವಾಸ್ತವಿಕ ಜೀವನವನ್ನು ಪ್ರತಿಬಿಂಬಿಸಿರುವುದನ್ನು ಕಾಣುತ್ತೇವೆ. ಅಂದರೆ ಇಲ್ಲಿ ಧಾರವಾಡ ಭಾಷೆಯ ಗಟ್ಟಿತನದ ಪ್ರಾದೇಶಿಕ ಶೈಲಿಯನ್ನು ಬಳಸಿಕೊಂಡಿರುವುದು ವಿಶೇಷವೆನಿಸಿದೆ.

ಇಂಥ ನಾಟಕಗಳು ಆಯಾ ಪ್ರದೇಶದ ಆಡು ಭಾಷೆಯಲ್ಲಿರುವುದರಿಂದ ಇದಕ್ಕೆ ಇನ್ನು ಹೆಚ್ಚಿನ ಮಹತ್ವವಿರುತ್ತವೆ.

ಈ ನಾಟಕದಲ್ಲಿ ಅಲ್ಲಲ್ಲಿ ಆಕರ್ಷಕವಾಗಿರುವಂತಹ ಸಂಭಾಷಣೆಗಳಿರುವುದರಿಂದ ಈ ನಾಟಕವನ್ನು ನೋಡುವ ಅಥವಾ ಓದುವ ಮಕ್ಕಳಿಗೆ ಆಸಕ್ತಿ ಮೂಡಿಸುತ್ತದೆ. ಇದರಲ್ಲಿ ಬಳಕೆಯಾದ 'ಏ ಪ್ಯಾಲಿ, ಒಂದು ಮಾತು, ನನ್ನ ಕರಾಮತ್ತ ನೋಡು, ಹಾಗೂ ಗೋಣು ಮುರಕೊಂಡೀ' ಮೊದಲಾದ ಪ್ರಾದೇಶಿಕ ಪದಗಳು ಜನರಿಗಾಗಲಿ, ಮಕ್ಕಳಿಗಾಗಲಿ ತುಂಬಾ ಹತ್ತಿರವೆನಿಸುತ್ತವೆ.

ಇಂತಹ ಮಕ್ಕಳ ನಾಟಕಗಳಲ್ಲಿ ಕುತೂಹಲದಿಂದ ಕೂಡಿದ ಅಂಶಗಳು ಇರುತ್ತವೆ. ಈ ಅಂಶಗಳೇ ಒಂದು ನಾಟಕದ ಯಶಸ್ವಿಗೆ ಪ್ರಮುಖ ಪಾತ್ರವನ್ನು ವಹಿಸುತ್ತವೆ.

*** ಬಿ.ವಿ. ಕಾರಂತರ 'ಹೆಡ್ಡಾಯಣ' ನಾಟಕ**

ಈ ನಾಟಕವು ಮಕ್ಕಳಿಗೆ ತುಂಬಾ ಪ್ರಿಯವಾದ ನಾಟಕವೆನ್ನಬಹುದು. ಈ ನಾಟಕದ ಪ್ರಮುಖ ಪಾತ್ರದಾರಿಗಳೆಂದರೆ ಸೂತ್ರಧಾರ, ಹೆಡ್ಡಧೂಮ, ಅಜ್ಜಿ, ಮುದುಕ, ಅತ್ತೆ, ಸೊಸೆ, ಮನುಷ್ಯ, ಕೋತಿ, ಜ್ಯೋತಿಷ್ಯ ಮುದುಕ, ಗೌಡ, ಗೌಡನ ತಾಯಿ, ಕಳ್ಳರು, ಆಚಾರಿಗಳು, ಗಮ್ಮತ್ತುಲಾಲ್, ಅಡಿಗೆಯವಳು, ಕೆಲಸದವನು, ಭಾಗವತ, ಮದ್ದಳೆಯವನು, ತಾಳದವನು, ಪಂಡಿತ, ಹಜಾಮ ಮತ್ತು ಸಂಗೀತಗಾರರು.

ಈ ನಾಟಕದಲ್ಲಿ ಆರಂಭದಲ್ಲಿ ಸೂತ್ರಧಾರನು ಒಬ್ಬ ಹುಡುಗನನ್ನು ಓ ಮಗು ನೀನಾ? ಶಹಬ್ಬಾಸ್... ನಿನಗೊಬ್ಬನಿಗೆ ನನ್ನ ಗುರ್ತು ಸಿಕ್ತು ನೋಡು, ಇವರು ಯಾರೂ ನನ್ನನ್ನು ಗುರ್ತಿಸಲಿಲ್ಲ. ಆದ್ರೆ ನೀನು ಮಾತ್ರ ನನ್ನ ಗುರುತಿಸಿದೆ ನೋಡು. ನನ್ನತ್ತಿರ ಸುಮಾರು ನಿನ್ನ ಹಾಗೆ ಇರೋ ೪೦-೫೦ ಮಕ್ಕಳಿದ್ದಾರೆ. ಅವರು ಬಾರಿ ಘಟಿಂಗರಿದ್ದಾರೆ. ಈ ಘಟಿಂಗರೆಲ್ಲರನ್ನು ಸೇರಿಸಿ ಒಂದು ಕೋಡಂಗಿ ಮೇಳ ಅಂತ ಕಟ್ಟಿದ್ದೇನೆ. ಬೇಕಾದ್ರೆ ನೀನು ಬಂದು ಸೇರಬಹುದು. ಇವತ್ತು ಈ ಕೋತಿಗಳೆಲ್ಲರೂ ಸೇರಿ ಇಲ್ಲಿ 'ಹೆಡ್ಡಾಯಣ' ಅಂತ ಹಾಂ! ರಾಮಾಯಣ ಅಲ್ಲ ಹೆಡ್ಡಾಯಣ ಅಂತ ನಾಟಕ ಮಾಡ್ತಾರೆ. ಇದು ಒಂದು ಮಕ್ಕಳ ಕತೆ. ಹೆಡ್ಡ ಧೂಮನ ಕತೆ. ಅಜ್ಜಿ ಸಾಕಿದ ಮಗುವಿನ ಕತೆ. ಈ ನಾಟಕ ನೋಡಿ ನೀನು ಖಂಡಿತವಾಗಿ ನಗಬೇಕು. ಎಂದನು.

ಶಿಷ್ಯಂದಿರೆಲ್ಲ ಸೂತ್ರಧಾರರು ಹೇಳಿದ ಪಾತ್ರಗಳನ್ನು ಅಭ್ಯಾಸ ಮಾಡಿ ನಾಟಕಕ್ಕೆ ತಯಾರಾಗಿದ್ದರು. ಆಗ ಸೂತ್ರಧಾರನು ಸರಿ ನೀವೆಲ್ಲಾ ಇದ್ದೀರಿ ಆದ್ರೆ ಆ ಹೆಡ್ಡಧೂಮನ ಪಾರ್ಟು ಮಾಡೋ ಅಸಾಮಿ ಎಲ್ಲಿ? ಎಂದಾಗ ಅವನಿಗೆ ನಾಚಿಕೆಯಂತೆ ಎಂದರು. ಸೂತ್ರಧಾರನು ನಿಜವಾಗಿಯೂ ಅವನು ಹೆಡ್ಡ ಅಲ್ಲ, ಹೆಣ್ಣಿನ ಪಾರ್ಟು ಮಾಡೋದು ಬಹಳ ಬುದ್ಧಿವಂತನಾಗಿರ್ಬೇಕು ಅದಕ್ಕೇಕೆ ನಾಚಿಕೆ ಪಡಬೇಕು ಎಂದರು. ಆಗ ಉಳಿದ ಶಿಷ್ಯರೆಲ್ಲರೂ ನಾನು ಹೆಡ್ಡ ಆಗ್ತೀನಿ...ನಾನು ಹೆಡ್ಡ ಆಗ್ತೀನಿ ಎಂದು ಶುರುಮಾಡಿದರು.

ಆಗ ಹೆಡ್ಡನೇ ಅಲ್ಲಿಗೆ ಬಂದು ಇಲ್ಲಾ... ಇಲ್ಲಾ... ನಾನೇ ಆಗ್ತೀನಿ, ನಾನೇ ಹೆಡ್ಡ ಆಗ್ತೀನಿ. ಹಿಂದೇನೂ ನಾನೇ ಆಗಿದ್ದೆ... ಇವತ್ತೂ ನಾನೇ ಆಗ್ತೀನಿ. ನಾಳೇನೂ ನಾನೇ ಆಗ್ತೀನಿ. ನಾನೇ ಹೆಡ್ಡ ಆಗ್ತೀನಿ ಎಂದನು. ಸೂತ್ರಧಾರನು ಆಯಿತು ಎಂದು ಈಗ ಎಲ್ಲಾ ಹೋಗಿ ಶುರುವಾಗಲಿ ಹೆಡ್ಡಾಯಣ ಎಂದರು.

ಸಂಗೀತದವರು:

"ಒಂದಾನೊಂದು ಊರಿನಲ್ಲಿ
ಒಬ್ಬಾನೊಬ್ಬ ಹೆಡ್ಡನಿದ್ದ
ಹೆಡ್ಡನೆಂದರೆ ಹೆಡ್ಡರ ಹೆಡ್ಡ
ನಡೆ ನುಡಿಯೆಲ್ಲಾ ಅಡ್ಡ ತಿಡ್ಡ

ಹೇಗೇ ರಾಜರ ರಾಜಾ ಭೋಜ
ಹಾಗೇ ಹೆಡ್ಡರ ಹೆಡ್ಡ ಧೂಮ
ಅದಕ್ಕೆ ಹೆಡ್ಡ ಅನಂತ ನಾಮ
ಒಡ್ಡ ದಡ್ಡ ಮಡ್ಡ ರಾಮ...

ಅಂದರೆ ಹೆಡ್ಡ ಮಹಾತ್ಮನಲ್ಲ
ಯೋಗಿ ಭೋಗಿ ರೋಗಿಯಲ್ಲ
ಬಲು ಸೋಮಾರಿ ತಿಂಡಿಮಲ್ಲ
ಸೊಳ್ಳೆ ಹೊಡೆಯಲು ಯೋಗ್ಯನಲ್ಲ

ಓದು ಬರಹ ಬೇಕೇ ಇಲ್ಲ
ಊಟ ನಿದ್ರೆ ಮರೆಯೋದಿಲ್ಲ
ಬೈದರೂ ಬುದ್ಧಿಗೆ ಹತ್ತೋದಿಲ್ಲ
ಈ ಹೆಡ್ಡಂಗೆ ಒಬ್ಬ ಅಜ್ಜಿ

ಹೆಡ್ಡನ ಮೇಲೆ ತುಂಬಾ ಮರ್ಜಿ
ಹಣ್ಣು ಹಣ್ಣು ಮುದುಕಿಯಾದ್ರೂ
ಹಗಲೂ ರಾತ್ರಿ ಕೆಲಸ ಮಾಡಿ
ಹೆಡ್ಡನನ್ನು ಸಾಕಿ ಬೆಳಸಿ

ಪುಣ್ಯ ಕೆಲಸ ಮಾಡಿದಳಜ್ಜಿ
ಪ್ರೀತಿ ಉಕ್ಕಿದಾಗಲೆಲ್ಲಾ
ಮೊಮ್ಮಗನನ್ನು ಬೈತಾಳಜ್ಜಿ
ಸಾಯಿ ಸಾಯಿ ಹಾಳಾಗಿ ಹೋಗು

ಒಂದು ದಿವಸ ಮುಂಜಾನೆದ್ದು
ಬೆರಣಿ ತಟ್ಟುತ್ತಿದ್ದಾಳಜ್ಜಿ
ನಮ್ಮ ಹೀರೋ ಹೆಡ್ಡ ಧೂಮ
ಅಡ್ಡಾ ತಿಡ್ಡಿ ಮೈಯ್ಯಾಚಾಚಿ

ಮಂಚದ ಮೇಲೆ ಮಲಗಿಕೊಂಡೇ
ಭಾರಿ ಕುಸ್ತಿ ನಡೆಸುತ್ತಿದ್ದ
ನೀವೇ ಹೇಳಿ ಮತ್ತೆ
ಕುಸ್ತಿ ಯಾರ ಜೊತೆಗೆ
ಕುಸ್ತಿ ಯಾರ ಜೊತೆಗೆ..."[೫೧]

ಇಡೀ ಈ ನಾಟಕದಲ್ಲಿ ಹೆಡ್ಡ ಧೂಮನ ದಡ್ಡತನದ ಪ್ರದರ್ಶನವನ್ನೆ ಕಾಣುತ್ತೇವೆ. ಇಲ್ಲಿ ಹೆಡ್ಡನು ಆರಂಭದಲ್ಲಿಯೇ ಮಲಗಿಕೊಂಡೆ ಅಜ್ಜಿಯನ್ನು ಕೂಗುತ್ತಾ ಅಜ್ಜಿ ಬೇಗ ಬಾ... ನನ್ನ ಮೂಗಿನ ಮೇಲೆ ನೊಣ ಕೂತಿದೆ ಅದನ್ನು ಓಡಿಸಜ್ಜೀ... ಎಂದಾಗ ಅಜ್ಜಿಯು ಅಯ್ಯೋ ಸೋಮಾರಿ... ಸಾಯಿ ಹಾಳಾಗಿ ಹೋಗು... ತಾನೂ ಏನೂ ಕೆಲಸ ಮಾಡೋಲ್ಲ, ಮಾಡೋರಿಗೂ ಬಿಡೋಲ್ಲ ಎಂದೆಲ್ಲಾ ಅಜ್ಜಿ ಪ್ರೀತಿಯಿಂದ ಹೆಡ್ಡನಿಗೆ ಬೈಯುವಳು. ಮತ್ತೆ ಅವನನ್ನು ಕರೆದು ನೋಡು ಮಗು ಕೆಲಸ ಮಾಡಬೇಕು. ಕೆಲಸ ಎಲ್ಲಾ ಕಡೆಗೆ ಮಾಡಬೇಡ. ಯಾರು ಕಡಿಮೆ ಮಾತಾಡ್ತಾರೋ ಮತ್ತೆ ಹೆಚ್ಚು ಸಂಬಳ ಕೊಡ್ತಾರೋ ಅಲ್ಲಿ ಅವ್ರ ಹತ್ರ ಕೆಲಸ ಮಾಡು ಎಂದಾಗ ಹೆಡ್ಡನು ಯೋಚಿಸುತ್ತ ಆಯಿತು ಅಜ್ಜಿ, 'ಕಡಿಮೆ ಮಾತು ಹೆಚ್ಚು ಸಂಬಳ' ಹೊರಟನು. ಅಲ್ಲಿಂದ ಅವನೇ "ಬೇಕೇ ಬೇಕೆ... ಆಳು ಬೇಕೇ.... ಕೆಲಸಕ್ಕೆ ಪೂರಾ ಆಳು... ಬೇಕೇ... ಆಳು ಬೇಕೆ..." ಎಂದು ಕೂಗುತ್ತಾ ಹೊರಟನು. ಆಗ ಮುದುಕನ ಸೊಸೆ ಮತ್ತು ಅತ್ತೆ ಇವನನ್ನು ನನ್ನ ಅಡಿಗೆ ಮನೆಗೆ ಬೇಕು ಅಂತ ಸೊಸೆಯು, ಇಲ್ಲ ದೇವರ ಮನೆಗೆ ಬೇಕು ಎಂದು ಅತ್ತೆಯು ಜಗಳವಾಡಿದ್ದರು. ಅಲ್ಲಿಂದ ಹೆಡ್ಡನು ಓಡಿದನು.

ಮುಂದೆ ಕಟ್ಟಿಗೆ ತರಲು ಕಾಡಿಗೆ ಹೋದಾಗ, ಮರದ ಕೊಂಬೆಯ ತುದೀಲಿ ಕೂತು ಬುಡ ಕಡಿತಾ ಇದ್ದು, ಅದನ್ನು ದಾರಿಗ ನೋಡಿ ಬುದ್ಧಿ ಹೇಳಿದಾಗೂ ನಂಬದೆ ಅಲ್ಲಿಂದ ಬಿದ್ದನು. ಮತ್ತೆ ಈ ಹೆಡ್ಡನು ತಾನು ಸಾಯಬೇಕು ಎಂದು, ದಾರಿಗನು ಹೇಳಿದಂತೆ ಕೇಳಿ ತನ್ನ ಹಳ್ಳ ತಾನೇ ತೋಡಿಕೊಂಡು ತಾನೇ ಮಣ್ಣು ಸುರಿದುಕೊಳ್ಳುವಾಗ, ಊರಿನ ಗೌಡನಿಗೆ ಸಿಕ್ಕು ಅವನು ಹೆಡ್ಡನನ್ನು ತನ್ನ ತಾಯಿಯ ಸೇವೆಗಾಗಿ ಪುಕ್ಕಟೆ ಆಳು ಸಿಕ್ಕಿದ್ದಾನೆ ಎಂದು ಮನೆಗೆ ಕರೆ ತಂದಾಗ ಗೌಡನ ತಾಯಿಯ ಮೇಲೆ ನೊಣ ಕೂಡಬಾರದ ಹಾಗೆ ನೋಡಿಕೊಳ್ಳಲು ಹೋಗಿ ಆ ಗೌಡನ ತಾಯಿಯನ್ನೇ ಸಾಯಿಸಿ ಅಲ್ಲಿಂದ ಹೊರಬಂದನು.

ನಂತರ ಕಾಳಾಚಾರಿ, ಬೋಳಾಚಾರಿ, ತಮ್ಮಾಚಾರಿ, ಚಿನ್ನಾಚಾರಿ, ಸುಬ್ಬಾಚಾರಿಗಳು ಗಂಟು ಮೂಟೆ ಚಿನ್ನ, ಬೆಳ್ಳಿ, ದುಡ್ಡು, ಕಾಸು ತುಂಬಿಕೊಂಡು ದಾರಿಯಲ್ಲಿ ಹೊರಟಾಗ ಅವರ ಪರಿಚಯವಾಗಿ ಅವರನ್ನು ಕಳ್ಳರಿಗೆ ತನ್ನ ಮಡ್ಡುತನದಿಂದ ಹಿಡಿದುಕೊಟ್ಟು, ಅಲ್ಲಿಂದ ಹೊರಬಂದು, ಮತ್ತೆ ಆ ಕಳ್ಳರು ಮಾರವಾಡಿ ಮನೆಗೆ ಕನ್ನ ಹಾಕಿದಾಗ, ಏನಾದರೂ ಬಾರವಾದದನ್ನು ತರಲು ಹೋಗಿ ಅವರನ್ನೇ ಸಹಾಯಕ್ಕಾಗಿ ಹೆಬ್ಬಿಸಿ ಸಿಕ್ಕಿಬಿಟ್ಟಿದ್ದ. ನಂತರ ಆ ಮಾರವಾಡಿ ಗಮತ್ತುಲಾಲ್‌ನ ಮನೆ ಕಾವಲಾಗಿದ್ದನು. ಇಲ್ಲಿ ಕಾವಲಾಗಿದ್ದಾಗ ಮಾರವಾಡಿಯ ಮಾತಿನಂತೆ ಯಾರೇ ಬರಲಿ ಯಾರನ್ನು ಒಳಗೆ ಬಿಡಬೇಡ, ಅವನು ಯಾರೇ ಆಗಲಿ, ಬಂದ್ರೆ ಅಲ್ಲೇ ಖಲಾಸ್ ಮಾಡಿಬಿಡು ಎಂದಿದ್ದನು. ಮನಸ್ಸಿನಲ್ಲಿಟ್ಟುಕೊಂಡು ಆ ಮಾರವಾಡಿಯನ್ನೇ ಖಲಾಸ್ ಮಾಡಲು ಹೋಗಿ ಸಿಕ್ಕಿ ಬೀಳುತ್ತಾನೆ.

ಹೀಗೆ ಹೆಡ್ಡನು ಕಥೆಯ ಉದ್ದಕ್ಕು ತನ್ನ ಮಂಕು ಬುದ್ಧಿಯಿಂದಾಗಿ ಒಂದರ ಮೇಲೆ ಒಂದಂತೆ ತಪ್ಪುಗಳನ್ನು ಮಾಡುತ್ತಾ ಬರುತ್ತಾನೆ. ಇವನ ದಡ್ಡತನವನ್ನು ಕಥೆಯ ಉದ್ದಕ್ಕೂ ಬರುವವರೆಲ್ಲಾರು ಬಳಸಿಕೊಳ್ಳುತ್ತಾರೆ. ಕೊನೆಗೆ ತಾವೇ ಅನಾಹುತಕ್ಕೆ ಸಿಲುಕಿಕೊಳ್ಳುವುದನ್ನು ಕಾಣುತ್ತೇವೆ.

ಕೊನೆಗೆ ಈ ಹೆಡ್ಡನು ಅಜ್ಜಿ ಮನೆಗೆ ವಾಪಸು ಬಂದು ಅಜ್ಜಿ ನಾನು ಬಂದೆ!...

ಅಜ್ಜಿಯು ! ಅಯ್ಯೋ ಮಗನೇ! ಇಷ್ಟು ದಿವಸ ಎಲ್ಲಿದ್ದೀ ನನ್ನ ಕಂದ ನನ್ನ ರಾಜ... ಅಯ್ಯೋ ಹೆಡ್ಡರಾಮ...

ಹೆಡ್ಡ: ನಾನೀನ್ನು ಹೆಡ್ಡ ಅಲ್ಲಜ್ಜಿ... ಕುಂಬಳಕಾಯಿ ರಾಮ, ನೋಡು ನನ್ನ ಮೇಲಿರೋ ಕುಂಬಳಕಾಯಿಯನ್ನು.

ಅಜ್ಜಿ: ಅಯ್ಯೋ ನಿನ್ನ ತಲೆ ಯಾರು ಬೋಳಿಸಿದರಪ್ಪಾ?

ಹೆಡ್ಡ: ಅಯ್ಯೋ ಇದು ಬೋಳು ತಲೆ ಅಲ್ಲ, ಕುಂಬಳ ಕಾಯಿ ಅಜ್ಜೀ, ಕುಂಬಳಕಾಯಿ.

ಅಜ್ಜಿ: ಸರಿ ತುಂಬಾ ಚೆನ್ನಾಗಿದೆ. ಇನ್ನು ಮೇಲೆ ಎಲ್ಲಿಗೂ ಹೋಗ್ಬೇಡ, ಇಲ್ಲೇ ಮಂಚದ ಮೇಲೆ ಮಲಕ್ಕೋ, ಏನೂ ಕೆಲಸ ಮಾಡಬೇಡ, ನಾನು ಊಟ ತರ್‍ತೀನಿ ಎಂದು ಹೋಗುವಳು.

ಹೆಡ್ಡ: ಮಂಚದ ಮೇಲೆ ಮಲಗಿಕೊಂಡೆ ಅಜ್ಜಿ ನನ್ನ ಮೂಗಿನ ಮೇಲೆ ನೊಣ ಕೂತಿದೆ. ಓಡಿಸು ಬಾರಜ್ಜೀ... ಅಜ್ಜಿಯ ಸರಿ ನಾನೇ ಬಂದು ಓಡಿಸುತ್ತೇನೆ ಎಂದು ಹೇಳುತ್ತಾಳೆ.

ಇಲ್ಲಿಗೆ ಈ ನಾಟಕದ ಕಥೆಯು ಮುಗಿಯುತ್ತದೆ. ಈ ನಾಟಕದಲ್ಲಿ ಹೆಡ್ಡನ ದಡ್ಡತನದ ಪ್ರದರ್ಶನವು ಮಕ್ಕಳಿಗೆ ಮನೋರಂಜನೆಯನ್ನು ನೀಡುತ್ತದೆ ನಿಜ, ಆದರೂ ಈ ಹೆಡ್ಡನಂತೆ ಯಾರೂ ಬದುಕಲು ಬಯಸಲಾರರು, ತಾವು ಹೆಡ್ಡನಂತೆ ಆಗಬಾರದೆಂದು ಮಕ್ಕಳೆಲ್ಲರೂ ಯೋಚಿಸುತ್ತಾರೆ. ಏನೇಯಾದರೂ ಈ ನಾಟಕದಲ್ಲಿ ಮಕ್ಕಳಿಗೆ ಹೆಡ್ಡನ ಪಾತ್ರವಂತೂ ತುಂಬಾ ನಗೆಯನ್ನು ತರಿಸುತ್ತದೆ.

*** ಚಂದ್ರಶೇಖರ ಕಂಬಾರರ ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು**

ಈ ನಾಟಕದ ಮುನ್ನುಡಿಯಲ್ಲಿ ಕಂಬಾರರು ಈ ನಾಟಕವನ್ನು ಪ್ರೇಮಾ ಕಾರಂತರ ಒತ್ತಾಯಕ್ಕೆ ಮಣಿದು ಬರೆದುದೆನ್ನುತ್ತಾರೆ. ಇದೊಂದು ಜನಪದ ಕಥಾವಸ್ತುವನ್ನು ಹೊಂದಿರುವ ನಾಟಕವಾಗಿ ಇಲ್ಲಿ ನಾಟಕೀಯ ಸಂಘರ್ಷಕ್ಕೆ ಅವಕಾಶವೇ ಇಲ್ಲವೆನ್ನಬಹುದು.

ಈ ನಾಟಕವನ್ನು ಕನ್ನಡ ನಾಟಕ ಕ್ಷೇತ್ರಕ್ಕೆ ಅದರಲ್ಲಿಯೂ ಮಕ್ಕಳ ನಾಟಕ ಪ್ರಪಂಚಕ್ಕೆ ಒಂದು ಹೊಸ ಪ್ರಯತ್ನವೆನ್ನಬಹುದು. ಇದರಲ್ಲಿ ಬರುವ ಪಾತ್ರಗಳಾದ ಹುಡುಗ, ಮೇಳ, ಸೂತ್ರಧಾರ, ಹುಡುಗಿ, ಮರ್ಜಿನಾ, ನಾಲ್ಕು ಜನ ಕಳ್ಳರು, ಹಸನ್, ಗಣೇಶ್, ಅಲಿಬಾಬಾ, ಸಲೀಂ, ಬೇಗಂ, ಫಾತೀಮಾ, ಖಾಸಿಂ, ಮೇಳದ ನಾಯಕ, ಹಕೀಂ, ಐಜೀಕೆ ಮೊದಲಾದ ಪಾತ್ರಗಳೆಲ್ಲವೂ ತುಂಬಾ ಚುರುಕಾದ ಮಾತುಗಾರಿಕೆಯನ್ನು ಹೊಂದಿರುತ್ತಾರೆ. ಅಲ್ಲದೆ ಅಲ್ಲಲ್ಲಿ ಉತ್ಸಾಹ ತುಂಬಿದ ಹಾಡುಗಳು, ಘಟನೆಗಳ ಸರಮಾಲೆಯಂತೆ ಕಥೆಯನ್ನು ಕಟ್ಟುವ ತಂತ್ರದಿಂದ ಕೂಡಿದೆ. ಇಲ್ಲಿ ಅಲಿಬಾಬಾ ಮನರಂಜನೆಯನ್ನಷ್ಟೇ ಅಲ್ಲ ಅರ್ಥಪೂರ್ಣವಾಗಿಯೂ ಮೂಡಿಬಂದಿದೆ. ಅಲಿಬಾಬಾನು ಇಲ್ಲಿಯ ಕಥೆಯ ವಸ್ತುವಾದರೂ ಆ ಪಾತ್ರವು ನಾಟಕದಲ್ಲಿ ಪ್ರಸ್ತುತಪಡಿಸಿರುವ ವಿಧಾನ ತುಂಬಾ ವಿಶೇಷವಾಗಿದೆ.

ಪ್ರಸ್ತುತ ನಾಟಕದಲ್ಲಿ ಹುಡುಗನು ಗಣೇಶನ ಪಾತ್ರದಾರಿಯಾಗಿ ದೊಡ್ಡ ಹೊಟ್ಟೆಯೊಂದಿಗೆ ಹೊಟ್ಟೆಬಾಕನಾಗಿ, ನೈವೇಧ್ಯಕ್ಕೆ ಇಟ್ಟ ಲಾಡುಗಳನ್ನು ಕದ್ದು ತಿಂದಿರುತ್ತಾನೆ. ಇತ್ತ ಮೇಳದವರ ಹಾಡು ಮುಗಿದ ಮೇಲೆ ಸೂತ್ರಧಾರನು ಬಂದು

ಸೂತ್ರಧಾರ: "ಬಾಲಕ ಬಾಲಕಿಯರೇ, ಮತ್ತು ಪಾಲಕರೇ, ನಾವು ಓದ್ದೋ ಮಕ್ಕಳು ನಾಟಕ ಆಡತೀವಿ. ನಾಟಕದ ಹೆಸರು 'ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು' ಅಂತ. ನಾಟಕದ ಪ್ರಾರಂಭದಲ್ಲಿ ಗಣೇಶನ ಪೂಜೆ ಮಾಡಬೇಕು..."[೬೨]

ಎಲ್ಲರೂ ಕೈಮುಗಿದು ಕುಳಿತಿರುವಾಗ ಹುಡುಗಿಯೊಬ್ಬಳು 'ಕಳ್ಳ ಕಳ್ಳ' ಎಂದು ಹೆದರಿ ಓಡಿ ಬರುವಳು. ನನ್ನನ್ನು ಒಬ್ಬ ಕಳ್ಳ ನನ್ನ ಹಿಡಿಯಬೇಕೆಂದು ಬೆನ್ನತ್ತಿ ಬರುತ್ತಿದ್ದಾನೆ. ದಯಮಾಡಿ ಕಾಪಾಡಿ. ನನ್ನ ಹೆಸರು ಮರ್ಜಿನಾ, ಮುಲ್ಲಾಪುರದ ಮಂತ್ರಿ ಮಗಳು. ೬ ತಿಂಗಳ ಹಿಂದೆ ನಮ್ಮ ತಂದೆ ಜೊತೆ ಪ್ರವಾಸ ಹೊರಟಾಗ ದಾರಿಯಲ್ಲಿ ಕಳ್ಳರು ನಮ್ಮನ್ನು ನಿಲ್ಲಿಸಿ ನನ್ನ ತಂದೆಯನ್ನು ಕೊಂದರು. ನಾನು ತಪ್ಪಿಸಿಕೊಂಡು ಓಡಿಬಂದೆ. ಆವಾಗಿನಿಂದ ಆ ಕಳ್ಳರು ನನ್ನ ಹಿಂದೆ ಬಿದ್ದಿದ್ದಾರೆ.

ನಂತರ ಅಲ್ಲಿಗೆ ಬಂದು ಸೂತ್ರಧಾರನಿಗೆ ನಾನು ಕಳ್ಳರ ಕಳ್ಳ, ಸುಳ್ಳರ ಸುಳ್ಳನಾದ ಶ್ರೀಮನ್ಮ ಚೋರೇಂದ್ರನಾಥ ಚಾಲೀಸ್ ಚೋರೋಂಕಾ ರಾಜಾ, ಹಸನ್ ಎಂದು ಹೇಳಿಕೊಂಡ. ಆ ಹುಡುಗಿ ಮರ್ಜಿನಾಳನ್ನು ತಾನು ಹುಡುಕಿಕೊಂಡು ಬಂದಿರುವುದಾಗಿ ಹೇಳಿದನು. ತನ್ನಲ್ಲಿ ಈಗಾಗಲೇ ಮೂವತ್ತೊಂಭತ್ತು ಜನ ಕಳ್ಳರಿದ್ದಾರೆ. ಇನ್ನೊಬ್ಬ ಕಳ್ಳ ಸಿಕ್ಕರೆ ನಲವತ್ತು ಜನ ಕಳ್ಳರಾಗುತ್ತಾರೆ ಎಂದು ಮತ್ತು ಆ ಲಾಡು ಕದ್ದ ಕಳ್ಳನು ಗಣೇಶನೇ ಎಂದು ಪತ್ತೆ ಹಚ್ಚಿ ಆ ಗಣೇಶ ಕಳ್ಳನನ್ನು ಹಿಡಿದನು.

ಮೇಳ:

ಇಸ್ಲಾಂಪುರವೆಂಬ ಮುಸ್ಲೀಮರೂರು
ಅಲ್ಲಾನ ಭಕ್ತರು ಅಲ್ಲಿಯ ಜನರು
ಎದ್ದರೆ ಬಿದ್ದರೆ ಅಲ್ಲಾ ಎನ್ನುವರು
ಎದ್ದಾಗ ಶ್ರೀಮಂತರಾದರು ಕೆಲವರು
ಆ ಊರಿನಲ್ಲೊಬ್ಬ ಅಲೀಬಾಬಾ
ಅಂತಿದ್ದ ಅಲ್ಲಾಗೆ ತೋಬಾ ತೋಬಾ
ಆತನ ಕಂಡರೆ ಅಲ್ಲಾನಿಗಿಷ್ಟ
ಹಾಗಂತ ಕೊಟ್ಟಿದ್ದ ಬಡತನ ಕಷ್ಟ
ಬಡತನ ತೊಲಗಿಸೊ ದೇವರೆ ಅಲ್ಲಾ
ಅಲ್ಲಾನೆ ಖುದ್ದಾಗಿ ಅಂತಿದ್ದ ಇಲ್ಲಾ
ಪ್ರಾರ್ಥಿಸಿಕೊಂಡನು ದೌಲತ್ತು ಬೇಡಿ
ಅಲ್ಲಾ ಕೊಟ್ಟನು ಮಗನ, ಅವನೊಬ್ಬ ಖೋಡಿ
ದಿನ ದಿನ ಅಲೀಬಾಬಾ ಕಾಡಿಗೆ ಹೋಗಿ
ಒಣಸೌದೆ ಕಲೆಹಾಕಿ ಹೊರೆಗಳ ಕಟ್ಟಿ
ಅಲ್ಲಾ ಎನ್ನುತ್ತ ಕತ್ತೆ ಡುಬ್ಬಿಗೆ ಹೇರಿ

ಉಬ್ಬಿ ಮಾರುತಲಿದ್ದ ಊರೂರು ಕೇರಿ
ಕತ್ತೆಗಳೆಂದರೆ ಕತ್ತೆಗಳಣ್ಣ
ಸಂಗೀತವೆಂದರೆ ಅವುಗಳಿಗೆ ಪ್ರಾಣ
ಅವುಗಳ ಸಂಗೀತ ಸಭೆಗಳ ಮುಂದೆ
ನಾವೇನು ಹಾಡೇವು ಕುರಿಗಳ ಮುಂದೆ"[೫೩]

ಹೀಗೆ ಅಲಿಬಾಬಾನು ಕತ್ತೆಗಳ ಸಮೇತ ಕಾಡಿನ ಕಟ್ಟಿಗೆಗಳೊಟ್ಟಿಗೆ ಬರುತ್ತಾನೆ. ನಂತರ ಅಲಿಬಾಬಾನ ಬಳಿಗೆ ಕಳ್ಳರ ಅರಸನಾದ ಹಸನ್ ಬಂದು 'ಬಂದ್ ಹೋ ಜಾ ಸೇಸಮಿ' ಎನ್ನುತ್ತಾನೆ.

ಮುಂದೆ ಅಲಿಬಾಬಾನಿಗೆ ಬಂಗಾರದ ನಾಣ್ಯಗಳು ದೊರೆತಾಗ ಅವುಗಳನ್ನು ತನ್ನ ಕತ್ತೆಗಳ ಮೇಲೆ ಹೇರಿಕೊಂಡು ಮನೆಗೆ ಬಂದು, ಹೆಂಡತಿ ಬೇಗಂ ಮತ್ತು ಮಗನಾದ ಸಲೀಂನ ಹತ್ತಿರ ಇದನ್ನು ಅಲ್ಲಾನು ಕೊಟ್ಟನು ಎನ್ನುತ್ತಾನೆ. ಅದು ಊರ ಹೊರಗೆ ಕಾಡಿನಲ್ಲಿ ನದಿ ಹತ್ತಿರ ದೊಡ್ಡ ಬಂಡೆ ಬಳಿ ಸಿಕ್ಕಿದ್ದು ಎನ್ನುತ್ತಾನೆ. ಈ ವಿಚಾರ ಪಕ್ಕದ ಮನೆಯ ಖಾಸಿಂ-ಫಾತಿಮಾಳಿಗೂ ತಿಳಿದು ಖಾಸಿಮನು ಅಲಿಬಾಬಾನತ್ತಿರ ಬಂದು ರಾಶೀ ಚಿನ್ನದ ನಾಣ್ಯಗಳು ನಿನಗೆ ಹೇಗೆ ಸಿಕ್ಕವೆಂದು ಹೇಳದಿದ್ದರೆ ರಾಜನಿಗೆ ಹೇಳುತ್ತೇನೆಂದು, ತಾನು ಚಿನ್ನದ ನಾಣ್ಯಗಳನ್ನು ತರಲು ಕಾಡಿನ ಬಳಿಯ ಬಂಡೆಯತ್ತಿರ ಹೋದನು. ರಾಶಿಗಟ್ಟಲೆ ಚಿನ್ನದ ನಾಣ್ಯಗಳನ್ನು ತುಂಬಿಕೊಂಡು ಬರುವಾಗ ಬಂಡೆಯ ಬಾಗಿಲು ತೆಗೆಯದೇ ಪರಿತಾಪ ಪಡುತ್ತಾ ನಿಂತಿರುವಾಗ ಅಲ್ಲಿಗೆ ಖುದ್ದು ಕಳ್ಳರ ರಾಜನಾದ ಹಸನ್‌ನ ಕೈಗೆ ಸಿಕ್ಕಿಬಿದ್ದನು.

ಹಸನ್ ಕಡೆಯವರಾದ ಐಜೀಕೆ (ಇನ್ಸ್‌ಪೆಕ್ಟರ್ ಜನರಲ್ ಆಫ್ ಕಳ್ಳಾಸ್)ಯು ಖಾಸಿಂನನ್ನು ಇಲ್ಲಿಗೆ ಕಳಿಸಿದ ವ್ಯಕ್ತಿಯು ಯಾರೆಂದು ಹುಡುಕುತ್ತಿದ್ದರು. ನಂತರ ಅಲಿಬಾಬಾನ ಮನೆಯನ್ನು ಪತ್ತೆಹಚ್ಚಿ ಅವರ ಮನೆಗೆ ಬರುತ್ತಾರೆ. ಇವನು ಆದಿಲ್‌ಶಾ ಅಲ್ಲ, ಹಸನ್ ಕಳ್ಳನೆಂದು ಮರ್ಜಿನಾಳಗೆ ತಿಳಿಯುತ್ತದೆ. ಆಗ ಹುಡುಗ ಗಣೇಶನ ಸಹಾಯದಿಂದ ಕಳ್ಳರ ರಾಜನಾದ ಹಸನ್‌ನನ್ನು ಮರ್ಜೀನಾ ಅವನ ಚೂರಿಯನ್ನು ಕಿತ್ತುಕೊಂಡು ಅವನಿಗೆ ಇರಿಯುವಳು. ಅಲ್ಲಿಗೆ ಕಳ್ಳರ ರಾಜನಾದ ಹಸನ್‌ನು ಸತ್ತನು. ಇತ್ತ ಮರ್ಜೀನ ಅಲಿಬಾಬಾನ ಮಗ ಸಲೀಂನನ್ನು ಮದುವೆಯಾದಳು. ಮತ್ತೆ ಹುಡುಗ ಗಣೇಶನ ಪಾತ್ರಧಾರಿಯಾಗಿ ದುಷ್ಟರ ಶಿಕ್ಷಕನಾಗಿ ಶಿಷ್ಟರ ರಕ್ಷಣೆಯನ್ನು ಮಾಡಿದನೆಂದು ಎಲ್ಲರೂ ಗಣೇಶನನ್ನು ಪೂಜಿಸುವರು.

ಹೀಗೆ ಈ ನಾಟಕವು ಪ್ರತಿ ಹಂತದಲ್ಲಿಯು ಹೊಸ ಹೊಸ ತಿರುವುಗಳನ್ನು ಪಡೆಯುತ್ತ ಸಾಗುತ್ತದೆ. ಇಲ್ಲಿ ಕಥಾಸನ್ನಿವೇಶಗಳು ತುಂಬಾ ಸಹಜ ಎನ್ನುವಂತೆ ಒಣ ತಾರ್ಕಿಕತೆಯ ಎಲ್ಲೆ ಮೀರಿ, ಮಕ್ಕಳ ಕಲ್ಪನಾ ವಿಲಾಸಕ್ಕೆ ಒಗ್ಗುವಂತೆ ಎತ್ತದತ್ತ ಬೆಳೆಯುತ್ತ ಹೋಗುತ್ತದೆ. ಇಲ್ಲಿಯ

ಸಂಭಾಷಣೆಗಳು ಹಾಗೇ ಮಕ್ಕಳ ಮುಗ್ಧ ತರ್ಕಕ್ಕೆ ಹೊಂದಿಕೊಳ್ಳುವಂತೆ ಜೊತೆಯಾಗುತ್ತ ಹೋಗುತ್ತದೆ. ಇಲ್ಲಿ ಹಾಡು ಮಾತುಗಳು ಅತ್ಯಂತ ಪರಿಣಾಮಕಾರಿಯಾಗಿ ಸಾಗುತ್ತ ಹೋಗುವುದು ತುಂಬಾ ವಿಶೇಷವೆನಿಸಿದೆ. ಹೀಗೆ ಈ ನಾಟಕವು ಮಕ್ಕಳ ನಾಟಕಗಳಲ್ಲಿಯೇ ಅನನ್ಯವಾದುದು ಎನಿಸಿದೆ.

*** ಬಿ.ವಿ. ಕಾರಂತ ಮತ್ತು ಪಿ.ಎಸ್. ರಾಮಪ್ಪ ಅವರ 'ನೀಲಿ ಕುದುರೆ'**

ಈ ನಾಟಕದ ಇಡೀ ಕಥಾ ವಸ್ತುವೇ 'ನೀಲಿ ಕುದುರೆ' ಈ ಕುದುರೆಯ ಹುಡುಕಾಟದಲ್ಲಿಯೇ ಈ ಕಥೆಯು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಈ ನಾಟಕದಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಮುದುಕ ಬಾಬಾ, ಪೀಟರ್, ತಂದೆ-ತಾಯಿ, ಮುದಿಕುದುರೆ (ನೀಲಿ ಕುದುರೆ) ಲಂಬೂಸಿಂಗ್, ಜೋಕರ್, ಮಿನಿ ಜೋಕರ್, ಲಿಲಿ, ಧೋಬಿ, ಆಟದ ಸಾಮಾನು ಮಾರುವವನು, ಹುಚ್ಚು ಮುದುಕಿ, ಕಾಸ್ತಾರ (ಅಶ್ವಪಾಲಕ), ಸಿಪಾಯಿಗಳು, ದಾರಿಗರು, ಪೇಟೆಯವರು, ಸರ್ಕಸ್ ನೋಡುವ ಹುಡುಗರು, ಆನೆಗಳು, ಕುದುರೆಗಳು ಇತ್ಯಾದಿ.

ಈ ನಾಟಕದ ಕಥೆಯನ್ನು ಗಡ್ಡದಾರಿಯಾದ ಮುದುಕ ಬಾಬಾನು ಬಂದು 'ಪೀಟರ್ ಮತ್ತು ತಟ್ಟು' ಎನ್ನುವ ಕಥೆಯನ್ನು ಹೇಳುತ್ತಾ ಹೋಗುವನು. ಇಲ್ಲಿ ಪೀಟರ್ ಒಬ್ಬ ಹುಡುಗ, 'ತಟ್ಟೂ' ಒಂದು ಮುದಿ ಕುದುರೆಯ ಹೆಸರು. ಈ ಪೀಟರ್‌ನಿಗೆ ತಟ್ಟು (ನೀಲಿಕುದುರೆ) ಎಂದರೆ ಪಂಚಪ್ರಾಣ. ಆದರೆ ಪೀಟರ್ ತಂದೆ-ತಾಯಿಗಳು ಯಾವಾಗಲೂ ಕೆಲಸವನ್ನು ಮಾಡುತ್ತಲೇ ಇರುತ್ತಿದ್ದರು. ಈ ಪೀಟರ್ ತಂದೆಗೆ ಈ ವಯಸ್ಸಾದ ಕುದುರೆಯನ್ನು ಮಾರದೇ ಬೇರೆ ದಾರಿಯೇ ಇಲ್ಲವೆನಿಸಿ ಅದನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿ ಬಂದನು.

ಆದರೆ ಪೀಟರ್‌ನಿಗೆ ಆ ಕುದುರೆಯನ್ನು ಮಾರುವುದು ಇಷ್ಟವಿರುವುದಿಲ್ಲ. ತನ್ನ ಪ್ರೀತಿಯ ತಟ್ಟೂವಾದ ನೀಲಿ ಕುದುರೆಯನ್ನು ಮಾರಿದಕ್ಕೆ ತುಂಬಾ ದುಃಖಿತನಾಗಿ ಹಗಲೂ ರಾತ್ರಿ ತಟ್ಟುವನ್ನೆ ಕುರಿತು ಕನವರಿಸ್ತಾನೆ. ತನ್ನ ತಟ್ಟು ತನ್ನನ್ನು ಹುಡುಕಿಕೊಂಡು ಬಂದೇ ಬರುತ್ತದೆ ಎನ್ನುವ ನಂಬಿಕೆಯಲ್ಲಿದ್ದಾನೆ. ಆದರೆ ಕುದುರೆ ವಾಪಸು ಬಾರದಿದ್ದಾಗ ಅದನ್ನು ಹುಡುಕಿಕೊಂಡು ತಾನೇ ಹೊರಟನು. ಮಧ್ಯದಲ್ಲಿ ಬಾಂಬೆ ಸರ್ಕಸ್ ಕಂಪನಿಯವರ ಪರಿಚಯವಾಯಿತು. ಅವನಿಗೆ ಪೀಟರ್‌ನ ನೀಲಿ ಕುದುರೆ ಅದಕ್ಕೆ ಬೆಳ್ಳಿ ಬಾಲವಿರುವುದನ್ನು ಕೇಳಿ ಆ ಕುದುರೆಯನ್ನು ತಮ್ಮ ಸರ್ಕಸ್ ಕಂಪನಿಯಲ್ಲಿಟ್ಟುಕೊಂಡರೆ ಒಳ್ಳೆ ಹಣ ಸಂಪಾದಿಸಬಹುದೆನಿಸಿ ತಾನು ಅದರ ಹಿಂದೆ ಬಿದ್ದನು.

ಇತ್ತ ಸರ್ಕಸ್‌ನಲ್ಲಿ ಪೀಟರ್‌ನಿಗೆ ಲಲಿ ಹುಡುಗಿಯ ಪರಿಚಯವಾಗಿ ಲಲಿ ಮತ್ತು ಪೀಟರ್ ಇಬ್ಬರು ಸೇರಿ ಕುದುರೆಯನ್ನು ಹುಡುಕಲು ಹೊರಟರು. ಆ ಕುದುರೆ ಸಿಕ್ಕರೆ ಪೀಟರ್ ಒಂದು ಸ್ವಂತ ಸರ್ಕಸ್ ಕಂಪನಿಯನ್ನು ಶುರು ಮಾಡಬೇಕೆಂದು ಬಯಸಿದನು. ಇವರಿಬ್ಬರು ಆ

ಕುದುರೆಯನ್ನು ಹುಡುಕುತ್ತಾ ಕಾಬೂಲ್, ರಂಗೂ, ಪ್ಯಾರಿಸ್, ಲಂಡನ್ ಮತ್ತು ವಾಷಿಂಗ್ಟನ್ ಮೊದಲಾದ ಕಡೆಗಳೆಲ್ಲಾ ಹೋಗಿ ಹುಡುಕಿದರು. ಆದರೂ ಆ ಕುದುರೆ ಸಿಗಲಿಲ್ಲ.

ಮುಂದೆ ಪೀಟರ್‌ನು ಒಂದು ಪೇಟೆಗೆ ಹೋಗಿ ನನ್ನ ಕುದುರೆ ನೀಲಿ ಕುದುರೆಯನ್ನು ಯಾರಾದರೂ ನೋಡಿದಿರಾ? ಎಂದು ಕೂಗಿಕೊಳ್ಳುವನು. ಅಲ್ಲಿದ್ದವರನ್ನೆಲ್ಲಾ ವಿಚಾರಿಸುವನು. ಆಗ ಮುದುಕಿಯೊಬ್ಬಳು ನಾನು ನೋಡಿದ್ದೇನೆ ಎನ್ನುತ್ತಾಳೆ.

"ಮುದುಕಿ: ಹಾಂ! ನಾನು ನೋಡಿದೇನೆ... ನಾನು ನೋಡಿದೇನೆ...
ಪೀಟರ್: ಹೌದೇ... ನೀನು ನೋಡಿದಿಯೋ?
ಮುದುಕಿ: ನೋಡಿದೇನೆ... ನೋಡಿದೇನೆ....
ನೀಲಿ ಬೆಳಕು ಚೆಲ್ಲೋ ಕುದುರೆ
ಕುಣಿದು ಹಾಡೋ ಹಾರೋ ಕುದುರೆ
ನೀಲಿ ಕುದುರೆ! ನೀಲಿ ಕುದುರೆ
ಪೀಟರ್: ಹೌದು... ಹೌದು...
ಮುದುಕಿ: ರೆಕ್ಕೆ ಬಿಚ್ಚಿ ಹಾರೋ ಕುದುರೆ!
ಅಲೆಗಳ ಮೇಲೆ ತೇಲೋ ಕುದುರೆ!
ನೀಲಿ ಕುದುರೆ ! ನೀಲಿ ಕುದುರೆ!
ಪೀಟರ್: ಹಾಂ! ಹಾಂ!
ಮುದುಕಿ: ಬೆಂಕಿ ಕಾರೋ ಕಣ್ಣಿನ ಕುದುರೆ
ಕಿರೀಟ ತೊಟ್ಟ ಮುದ್ದಿನ ಕುದುರೆ
ನೀಲಿ ಕುದುರೆ! ನೀಲಿ ಕುದುರೆ!

ಪೀಟರ್: ನೀನು ನಿಜವಾಗಿಯೂ ನನ್ನ ನೀಲಿ ಕುದುರೆ ನೋಡಿದಿಯೋ? ನಿಲ್ಲು... ಲಲೀನ ಕರಿತೀನಿ. ಲಲಿ...ಲಲೀ.... ಬಾ ಇಲ್ಲಿ. ಈ ಅಜ್ಜಿ ನೋಡಿದಾಳಂತೆ. ನಮ್ಮ ನೀಲಿ ಕುದುರೇನ.

ಮುದುಕಿ: ಹೌದು... ಹೌದು... ನೋಡಿದೀನಿ... ನೀಲಿ ಕುದುರೆ ಎನ್ನುವಾಗಲೆ ಸರ್ಕಸಿನ ರೋಣಪನು ತನ್ನ ಸಹಾಯಕರೊಂದಿಗೆ ಆ ಮುದುಕಿಯನ್ನು ಎತ್ತಿಕೊಂಡು ಓಡಿದರು. ನಂತರ ಆಟದ ಸಾಮಾನು ಮಾರುವವನ ಸಲಹೆಯ ಮೇರೆಗೆ ನೀಲಿ ಕುದುರೆಯನ್ನು ಕುದುರೆ ಲಾಯದಲ್ಲಿ ಹುಡುಕಲು ಹೊರಟನು. ಆದರೆ ಕುದುರೆ ಲಾಯ ದೂರವಿದೆ. ಇವರು ದಾರಿ ತಪ್ಪಿದರು. ಲಾಯ ಬಿಟ್ಟು ಬೇರೆ ಕಡೆ ಹೊರಟರು. ನಂತರ ಕಾಸ್ತಾರನಾದ ಅಶ್ವಲಾಯದ ಪಾಲಕನ ಬಳಿ ಹೋಗಿ ಪೀಟರ್ ತನ್ನ ಕುದುರೆ ಬಗ್ಗೆ ವಿಚಾರಿಸಿದಾ.

ಕಾಸ್ತಾರನು: ನೀಲಿ? ಹಾಂ... ಹಾಂ... ಹ್ಯೆ...ಹ್ಯೆ... ಮೇರೆ ಸಾಥ್ ಆದ್ ಎನ್ನುತ್ತಿದ್ದಂತೆಯೇ ಸರ್ಕಸ್‌ನಿಂದ ಬಂದ ಕುಳ್ಳ ಮತ್ತು ಟೋಣಪನು ಪಿಸ್ತೂಲು ತೆಗೆಯುತ್ತಾ, ಆ ನೀಲಿ ಕುದುರೇನ ನಮಗೆ ಕೊಡು ಎಂದು ಹೆದರಿಸಿದರು. ಜೊತೆಗೆ ಪೀಟರ್‌ನನ್ನು ಬಂಧಿಸಿ ತನ್ನಗೆ ಕುದುರೆಯನ್ನು ಕೊಡುವಂತೆ ಹೇಳಿದರು. ಕೊನೆಗೆ ಪೀಟರ್‌ನಿಗೆ ಮುದುಕ ಬಾಬಾನ ಸಹಾಯದೊಂದಿಗೆ ಕುದುರೆ ದೊರೆಯುತ್ತದೆ.

ಪೀಟರ್: ಹಿಪ್, ಹಿಪ್, ಹಿಪ್ ನನ್ನ ಬಹದ್ದೂರ್ ತಟ್ಟು ನಡೆ, ನನ್ನ ನೀಲಿ ಕುದುರೆ ಒಂದೊಂದಾಗಿ ಹೆಜ್ಜೆ ಹಾಕ್ತಾ ನಡಿ, ಅಪ್ಪ, ಅಮ್ಮ, ಲಲೀ, ಜೋಕರ್, ಊರಿನ ಜನ ಎಲ್ಲರೂ ಊರಿನ ಹೆಬ್ಬಾಗಿಲಿನಲ್ಲಿ ನಿಂತು ನಮ್ಮನ್ನು ಕಾಯ್ತಾ ಇದ್ದಾರೆ. ಹುಷ್ ನಡೆ, ನನ್ನ ತಟ್ಟೂ ಜೋರಾಗೆ ಓಡು... ಓಡು... ಇನ್ನು ಜೋರಾಗಿ ಓಡು...

ಹೀಗೆ ಈ ನಾಟಕದಲ್ಲಿ ಪೀಟರನು ಈ ನೀಲಿ ಕುದುರೆ ಹಾದಿಯನ್ನು ಹುಡುಕಿಕೊಂಡು ಓಡುವುದೇ ಆಗಿ ಮಧ್ಯದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತ ಕೊನೆಗೂ ತನ್ನ ತಾಯಿಗೆ ಕೊಟ್ಟ ಮಾತಿನಂತೆಯೇ ಕುದುರೆ ಸಮೇತನೇ ಹಿಂತಿರುಗಿ ಮನೆಗೆ ಬರುತ್ತಾನೆ. ಇಲ್ಲಿ ಪೀಟರ್‌ನು ತಾನು ಹಿಡಿದ ಹಠವನ್ನು ಸಾಧಿಸುತ್ತಾನೆ. ಇದು ಮಕ್ಕಳಿಗೆ ಹಿಡಿದ ಕೆಲಸವನ್ನು ಬಿಡಬಾರದು ಅದನ್ನು ಸಾಧಿಸಲೇ ಬೇಕು ಎನ್ನುವಂತ ಸಂದೇಶವನ್ನು ಕೊಡುತ್ತದೆ. ಒಟ್ಟಾರೆಯಾಗಿ ಈ ನಾಟಕವು ಮಕ್ಕಳಿಗೆ ತುಂಬಾ ಪ್ರಿಯವೆನಿಸುತ್ತದೆ.

ಇತರೆ ಮಕ್ಕಳ ಪ್ರಮುಖ ನಾಟಕಗಳೆಂದರೆ

	ನಾಟಕಗಳು	ಲೇಖಕರು
*	ಹೊಟ್ಟೆಯ ಪಾಡು	ಶಿವರಾಮ ಕಾರಂತ
*	ನಾಲ್ಕನೆಯ ಪಿಶಾಚಿ	ಶಿವರಾಮ ಕಾರಂತ
*	ಜಯಂತ್ ಮಾಮಾ	ಕೆ.ವಿ. ಸುಬ್ಬಣ್ಣ
*	ಪುಷ್ಪರಾಣಿ	ಚಂದ್ರಶೇಖರ ಕಂಬಾರ
*	ಕಪ್ಪೆ ಕಾಗೆಯ ಹಾಡು	ಮೂರ್ತಿ ದೇರಾಜೆ
*	ಮತ್ತೆ ಬದುಕಿರಿ!	ಡಾ.ಎಚ್.ಕೆ. ರಾಮನಾಥ
*	ನಾಯಿತಿಪ್ಪ	ಕೋಟಿಗಾನಹಳ್ಳಿ ರಾಮಯ್ಯ
*	ಕಿತ್ತಾಳೆ ಬಳ್ಳಿ	ಕಿಕ್ಕೇರಿ ನಾರಾಯಣ
*	ವಿದ್ಯೆ ಉದ್ಯಮ	ಸಿ. ಬಸವಲಿಂಗಯ್ಯ
*	ಓ ನನ್ನ ಮರವೇ	ಎ.ಎಸ್. ಮೂರ್ತಿ

*	ಚಲ/ಒಲವು	ಬಸವರಾಜು ಕುಕ್ಕರೆಹಳ್ಳಿ
*	ಚಂದ್ರಹಾಸ, ಸೀತಾ ಸ್ವಯಂವರ	ಎಂ.ಎಸ್. ಕಾಮತ್
*	ಚಿತ್ರಾಂಗದ, ಅರ್ಜುನ	ಎಂ.ಎಸ್. ಕಾಮತ್
*	ಅಜ್ಜಿಮಾಣಿ, ಕಾಕ ಪರಿಣಯ, ಡೊಮಿಂಗೋ ಮತ್ತು ನರನೋ ವಾನರನೋ	ಶಿವರಾಮ ಕಾರಂತ
*	ಪೋಲಿ ಕಿಟ್ಟಿ	ಕೈಲಾಸಂ
*	ಹನ್ನೊಂದು ವರಿ	ಶ್ರೀರಂಗ
*	ಮಕ್ಕಳು ಅಡುಗೆ ಮನೆ ಹೊಕ್ಕರೆ	ಬೇಂದ್ರೆ
*	ಆ ಮನಿ	ಕೀರ್ತಿನಾಥ ಕುರ್ತಕೋಟಿ
*	ಮುರುಕು ತಟ್ಟೆ, ಚಿನ್ನದ ತಟ್ಟೆ ಬಂಗಾರದ ಗಿಣಿ, ಸೋಮಾರಿ ಕಾಗೆ, ಹುಲಿಬಂತು ಹುಲಿ	ಎನ್.ಎಸ್. ವೆಂಕಟರಾಂ
*	ಅಪ್ಪಿಕೋ, ನರಿಯ ಜಾಣ್ಮೆ, ಜಾಣಕೋಳಿ ಧ್ರುವ ಚರಿತ್ರೆ ಬೆಳಕಿನೆಡೆಗೆ	ಆರ್.ವಿ. ಭಂಡಾರಿ
*	ಬೆಳೆದವರು	ರಾಜರತ್ನ ಜಿ.ಪಿ.
*	ಮಕ್ಕಳ ರಾಜ್ಯ	ಎಸ್.ಕೆ. ಶರ್ಮ
*	ಮಂತ್ರವಾದಿ, ಹಾಡುಹಕ್ಕಿ	ಎ.ಎಸ್. ಮೂರ್ತಿ
*	ಧಾಂ ಧೂಂ ಸುಂಟರಗಾಳಿ, ಗೊಂಬೆ ಮ್ಯಾಕ್‌ಬೆತ್, ಸೂರ್ಯಬಂದ ಮತ್ತು ಹಕ್ಕಿ ಹಾಡು	ವೈದೇಹಿ
*	ಬಾಲತಪಸ್ವಿ	ಉಳುವೀಶ
*	ಭರತ	ಕೆ.ಆರ್. ಪದ್ಮಜ
*	ಉತ್ತರ ಕುಮಾರ	ಯಲ್ಲೂರು ಉಮೇಶ
*	ಕೋಳೂರು ಚೆನ್ನಕ್ಕ	ಬಿ. ಪಾಂಡುರಂಗ ರಾಯ
*	ಶಬರಿ	ಚಂದ್ರಶೇಖರ ಬಿ

* ಚಿನ್ನರ ಬಣ್ಣದ ಲೋಕ — ಎಸ್.ಎಮ್. ಹಿರೇಮಠ
* ಗುರುದಕ್ಷಿಣೆ — ಪಾರ್ವತಿ
* ಉಪಮನ್ಯು — ಶಶಿಧರ ನರೇಂದ್ರ
* ಇಸ್ಪೀಟ್‌ರಾಜ — ಎನ್.ಎಸ್. ಲಕ್ಷ್ಮೀನಾರಾಯಣ ಭಟ್
* ಒಂದಾನೊಂದು ಕಾಡಿನಲ್ಲಿ — ಎ.ಎಸ್. ಪ್ರಸನ್ನ

ಅಡಿಟಿಪ್ಪಣಿ

೧. ವರದರಾಜ ಹುಯಿಲಗೋಳ, 'ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯ ಸ್ಥಾನ', ಕನ್ನಡ ಸಾಹಿತ್ಯ ಪತ್ರಿಕೆ, ಸಂಪುಟ ೨೬, ಸಂಚಿಕೆ–೧, ಪು–೨೫.

೨. ಮೋಹನದಾಸ ಕರ್ಮಚಂದ್ರ ಗಾಂಧೀ, ಆತ್ಮಕಥೆ (ಸಂಕ್ಷಿಪ್ತ), ಸಿದ್ಧವನಹಳ್ಳಿ ಕೃಷ್ಣಶರ್ಮ (ಅನು), ಪು–೫–೬.

೩. ಕೃಷ್ಣಶಾಸ್ತ್ರಿ ಎ.ಆರ್., 'ರವೀಂದ್ರನಾಥ ಠಾಕೂರ್, ನಿಬಂಧ ಮಾಲಾ' (ಭಾಗ–೨), ಪು–೩೬೩.

೪. ಅದೇ ಪು–೩೧–೩೫.

೫. ಅದೇ ಪು–೩೬–೩೮.

೬. ಡಾ.ಹಾ.ಮಾ.ನಾಯಕ, 'ರವೀಂದ್ರನಾಥ ಠಾಕೂರ್' (ಜೀವನ ಚರಿತ್ರೆ), ಪು–೨೪–೨೫.

೭. ಕುವೆಂಪು 'ನೆನಪಿನ ದೋಣಿಯಲಿ' (ಆತ್ಮಕಥನ), ಪು–೧೧೫–೧೧೮.

೮. ಅಬ್ದುಲ್ ಕಲಾಂ ಎ.ಪಿ.ಜೆ., 'ಅಗ್ನಿಯ ರೆಕ್ಕೆಗಳು' (Wings of fire) (ಆತ್ಮಕಥನ), ಪು–೩೧–೩೨.

೯. ಪಂಜೆ ಮಂಗೇಶರಾಯ, 'ಪಂಜೆ ಮಂಗೇಶರಾಯರ ಮಕ್ಕಳ ಸಾಹಿತ್ಯ', ಪು–೧೯–೨೦.

೧೦. ಅದೇ ಪುಟ ೨೨.

೧೧. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ' (ಮಕ್ಕಳ ಕಥೆಗಳ ಭಾಗ), ಪು–೧೬೭.

೧೨. ಅದೇ ಪು–೧೬೭–೧೬೮.

೧೩. ಅದೇ ಪು–೧೭೭–೧೮೨.

೧೪. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ' ಪು–೨೦೫–೨೦೬.

೧೫. ಅದೇ ಪು–೨೧೦–೨೧೨.

೧೬. ಅದೇ ಪು–೩೪೭.

೧೭. ಅದೇ ಪುಟ ೩೪೮.

೧೮. ಪಂಜೆ ಮಂಗೇಶರಾಯ, 'ಪಂಜೆಯವರ ಮಕ್ಕಳ ಸಾಹಿತ್ಯ', (ಸಮಗ್ರ ಮಕ್ಕಳ ಸಾಹಿತ್ಯ ಸಂಗ್ರಹ), ಪು–೧೨೮.

೧೯. ಅದೇ ಪು–೧೨೬.

೨೦. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ (ಮಕ್ಕಳ ಕಾವ್ಯ ಭಾಗ), ಪು–೨೭.

೨೧. ಅದೇ ಪು–೨೮

೨೨. ಅದೇ ಪು–೩೦.

೨೩. ಅದೇ ಪು–೪೪–೪೫.

೨೪. ಅದೇ ಪು–೫೬.

೨೫. ಅದೇ ಪು–೭೪–೭೫.

೨೬. ವೆಂಕಟೇಶಮೂರ್ತಿ ಎಚ್.ಎಸ್., 'ಎಚ್ಚೆಸ್ಕೆ ಸಮಗ್ರ ಮಕ್ಕಳ ಸಾಹಿತ್ಯ', ಪು–೫.

೨೭. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ (ಮಕ್ಕಳ ಕಾವ್ಯ ಭಾಗ), ಪು–೮೧.

೨೮. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ (ಮಕ್ಕಳ ಕಾವ್ಯ ಭಾಗ), ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ–೮೮.

೨೯. ಅದೇ ಪು–೮೯.

೩೦. ಅದೇ ಪು–೯೬.

೩೧. ಅದೇ ಪು–೧೦೩.

೩೨. ಅದೇ ಪು–೧೧೨.

೩೩. ಎಮ್. ರಾಮಚಂದ್ರ, 'ಜಿ.ಪಿ. ರಾಜರತ್ನಂ' (ಭಾರತೀಯ ಸಾಹಿತ್ಯ ನಿರ್ಮಾಪಕರು), ಪು–೮೨.

೩೪. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ (ಮಕ್ಕಳ ಕಾವ್ಯ ಭಾಗ), ಪು-೧೫.

೩೫. ಕುವೆಂಪು 'ಮೋಡಣ್ಣನ ತಮ್ಮ', (ಮಕ್ಕಳ ಸಾಹಿತ್ಯ ನಾಟಕ ಮಾಲೆ), ಪು-೨.

೩೬. ಅದೇ ಪು-೭

೩೭. ಕುವೆಂಪು 'ಬಾಲಗೋಪಾಲ' (ಮಕ್ಕಳ ಸಾಹಿತ್ಯ ನಾಟಕ ಮಾಲೆ), ಪು-೫-೭.

೩೮. ವೈದೇಹಿ 'ಐದು ಮಕ್ಕಳ ನಾಟಕಗಳು', ಪು-೧೧.

೩೯. ಅದೇ ಪು-೨೨.

೪೦. ಅದೇ ಪು- ೯೯.

೪೧. ಅದೇ ಪು-೧೩೫.

೪೨. ಅದೇ ಪು-೪೫೩-೪೫೪.

೪೩. ಅದೇ ಪು-೪೭೩.

೪೪. ಅದೇ ಪು-೫೩೮-೩೯.

೪೫. ಅದೇ ಪು-೫೪೭.

೪೬. ವೆಂಕಟೇಶಮೂರ್ತಿ ಎಚ್.ಎಸ್., 'ಎಚ್ಚೆಸ್ಕೆ ಸಮಗ್ರ ಮಕ್ಕಳ ಸಾಹಿತ್ಯ', ಪು-೩೩೭.

೪೭. ಅದೇ ಪು-೩೫೩.

೪೮. ಅದೇ ಪು-೩೭೪.

೪೯. ವೆಂಕಟೇಶಮೂರ್ತಿ ಎಚ್.ಎಸ್., 'ಎಚ್ಚೆಸ್ಕೆ ಸಮಗ್ರ ಮಕ್ಕಳ ಸಾಹಿತ್ಯ', ಪು-೩೯೩.

೫೦. ದೇಸಾಯಿ ಬಿ.ಟಿ., 'ಗಿಡ್ಡೂ ಟೇಲರನ ಕಥೆ' (ಮಕ್ಕಳ ಸಾಹಿತ್ಯ ನಾಟಕ ಮಾಲೆ) ಪು-೯೪.

೫೧. ರಘುನಾಥ ಎನ್.ಎಸ್. 'ಶತಮಾನದ ಮಕ್ಕಳ ಸಾಹಿತ್ಯ', (ಮಕ್ಕಳ ನಾಟಕ ಭಾಗ) ಪು-೫೧೦-೫೧೧.

೫೨. ಅದೇ ಪು-೫೯೪.

೫೩. ಅದೇ ಪುಟ ೫೯೭.

೫೪. ಅದೇ ಪು-೫೭೯-೫೮೦.

❖❖❖

ಅಧ್ಯಾಯ: ಐದು

ಮಕ್ಕಳ ಸಾಹಿತ್ಯದ ಭಾಷಿಕ ಅಧ್ಯಯನ

೫.೧. ಮಕ್ಕಳ ಭಾಷೆ

೫.೨. ಮಕ್ಕಳ ಕಾವ್ಯಗಳ ಭಾಷಿಕ ವಿಶ್ಲೇಷಣೆ

೫.೩. ಮಕ್ಕಳ ಸಾಹಿತ್ಯದಲ್ಲಿ ಬಳಕೆಯಾದ ಪ್ರಾದೇಶಿಕ ಭಾಷೆ

೫.೪. ಪಠ್ಯಪುಸ್ತಕಗಳಲ್ಲಿ ಮಕ್ಕಳ ಸಾಹಿತ್ಯ

೫.೫. ಮಕ್ಕಳ ಭಾಷಾ ಪದಕೋಶ

ಅಧ್ಯಾಯ: ಐದು

ಮಕ್ಕಳ ಸಾಹಿತ್ಯದ ಭಾಷಿಕ ಅಧ್ಯಯನ

ಮಗುವು ಹುಟ್ಟಿನಿಂದ ಹಿಡಿದು ಪ್ರೌಢಾವಸ್ಥೆಯ ಕಾಲದವರೆಗೂ ಬರುವ ಮಕ್ಕಳನ್ನು ಮಕ್ಕಳು ಎಂದು ಕರೆಯಲಾಗುತ್ತದೆ. ಈ ಕಾಲದ ಅವಧಿಯಲ್ಲಿಯೇ ಮಕ್ಕಳಿಗಾಗಿ ಅನೇಕ ಚಟುವಟಿಕೆಗಳು ನಿರ್ಮಾಣಗೊಳ್ಳುತ್ತಾ ಹೋಗುತ್ತವೆ. ಅವುಗಳಲ್ಲಿ ಮಗುವಿಗೆ ಭಾಷೆಯನ್ನು ಕರಗತ ಮಾಡಿಸುವ ಪ್ರಕ್ರಿಯೆಯು ಒಂದಾಗಿದೆ. ಮಗು ಆಂಗಿಕ ಚಲನೆಗಳಿಂದಾಗಲಿ, ಅಳುವಿನ ಮೂಲಕವಾಗಲಿ ಹೊರಡಿಸುವ ಅಸ್ಪಷ್ಟ ಧ್ವನಿಗಳನ್ನು ಬಾಲಭಾಷೆಯೆಂದು ಕರೆಯಲಾಗುತ್ತದೆ.

ಈ "ಬಾಲಭಾಷೆ ಎನ್ನುವುದು ಒಂದು ರೀತಿಯ (ಫಿಡ್ಜನ್) ಮಿಶ್ರಭಾಷೆ ಇದ್ದಂತೆ"[೧] ಎಂದು ಜೇಕಬ್‌ಸನ್ ಎಂಬ ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಮತ್ತು "ಚಿಕ್ಕ ಮಕ್ಕಳೊಡನೆ ಮಾತನಾಡಲು ಬಳಸುವ ಭಾಷೆಯ ಒಂದು ವಿಶಿಷ್ಟ ರೂಪವೇ ಬಾಲಭಾಷೆಯೆಂದು"[೨] ಫರ್ಗ್ಯುಸನ್ ಅಭಿಪ್ರಾಯಪಟ್ಟಿದ್ದಾರೆ.

ಮಕ್ಕಳಿಗೊಂದು ಭಾಷೆಯಿದೆ ಎನ್ನುವುದೇ ಒಂದು ವಿಶಿಷ್ಟ ಕಲ್ಪನೆಯೆನಿಸಿದೆ. ಇಲ್ಲಿ ಮಕ್ಕಳೇ ತಮಗೆ ಒಂದು ಹೊಸ ಭಾಷೆಯನ್ನು ರೂಪಿಸಿಕೊಳ್ಳಲಾರರು. ಅಥವಾ ಮಕ್ಕಳಿಗಾಗಿ ಅವರ ಪೋಷಕರು ಒಂದು ಹೊಸ ಭಾಷೆಯನ್ನು ಕಟ್ಟಲಾರರು. ಆದರೆ ಒಂದು ಭಾಷಿಕ ಸಮುದಾಯ ತನ್ನ ಭಾಷಿಕ ಅಂಶಗಳಿಂದ ಕೆಲವು ಆಯ್ದ ಪದ್ಯಗಳನ್ನು ಕೆಲವು ಮಾರ್ಪಾಟಿನೊಂದಿಗೆ ಮಕ್ಕಳಿಗಾಗಿ ರೂಪಿಸಬಲ್ಲದು. ಹೆಚ್ಚೆಂದರೆ ಕೆಲವು ಹೊಸ ರೂಪಗಳನ್ನು ಸೃಷ್ಟಿಸಬಲ್ಲರು. ಇವುಗಳು ಕೂಡ ಆ ಪರಿಸರದ ಭಾಷೆಯ ನಿಯಮಕ್ಕನುಗುಣವಾಗಿಯೇ ಸೃಷ್ಟಿಗೊಂಡಿರುತ್ತವೆ.

ಅಂದರೆ ಒಂದು ಭಾಷೆಯಲ್ಲಿನ ಶಿಶುಭಾಷೆಯ ರೂಪಗಳೆಂದು ಕರೆದುಕೊಳ್ಳುವ ಪದಗಳು ಆ ಭಾಷೆಯ ಪದಕಟ್ಟುವ ಅಥವಾ ಪದಗಳ ರಚನೆಯಲ್ಲಾಗುವ ಮಾರ್ಪಾಟುಗಳ ನಿಯಮಕ್ಕನುಗುಣವಾಗಿಯೇ ರೂಪಗೊಂಡಿರುತ್ತವೆ. ಈ ರೂಪಗಳು ಆ ಮೂಲ ಭಾಷೆಯ

ಸರಳೀಕೃತ ರೂಪಗಳಾಗಿರುತ್ತವೆ. ಅಥವಾ ಭಾಷಿಕ ಪರಿಸರದಲ್ಲಿ ಉತ್ಪತ್ತಿಯಾಗುವ ಧ್ವನಿಗಳ ಪ್ರಾಣಿ, ವಸ್ತು, ವಾಹನಗಳು ಮೊದಲಾದವುಗಳನ್ನು ಅನುಕರಣವಾಗಿರುತ್ತದೆ.

ಈ ಎಲ್ಲಾ ಪ್ರಕ್ರಿಯೆಗಳ ಹಿಂದೆ ಆ ಹುಟ್ಟಿದ ಮಗುವಿಗೆ ನಿಧಾನವಾಗಿ ಅದು ಬಾಳಬೇಕಾಗಿರುವ ಪರಿಸರದ ಪರಿಚಯವನ್ನು ಮಾಡಿಕೊಡುವ ಅಗತ್ಯವಿದೆ. ಮತ್ತು ಮಕ್ಕಳಿಗೆ ಭಾಷೆ ಕಲಿಸುವ ಉದ್ದೇಶವನ್ನು ಹೊಂದಿರುತ್ತದೆ. ಹೀಗೆ ಇದನ್ನು ಒಂದು ಭಾಷೆ ಎಂದು ಗುರುತಿಸುವ ಬದಲು ಒಂದು ನಿರ್ದಿಷ್ಟ ವರ್ಗಕ್ಕಾಗಿ, ನಿರ್ದಿಷ್ಟ ಕಾಲಾವಧಿಗಾಗಿ ಬಳಸಲ್ಪಡುವ ಒಂದು ಭಾಷಿಕ ರೂಪವೆನ್ನುವುದೇ ಸೂಕ್ತವಾಗಿದೆ.

ಈ ನಿಟ್ಟಿನಲ್ಲಿ ಹೆಚ್ಚಿನ ಚರ್ಚೆಗಳು ಈ ವಾದವನ್ನು ಬಲಗೊಳಿಸಬಲ್ಲವು. ಮಕ್ಕಳಿಗಾಗಿ ರೂಪಗೊಳ್ಳುವ ಈ ಭಾಷಿಕ ರೂಪಗಳು ಮಕ್ಕಳಲ್ಲಿ ಕ್ರಮೇಣ ಭೌತಿಕ ಪ್ರಜ್ಞೆಯನ್ನು ಬೆಳೆಸಬಲ್ಲವುಗಳಾಗಿರುತ್ತವೆ. ಈ ರೂಪಗಳು ಮಕ್ಕಳ ಒಂದು ನಿರ್ದಿಷ್ಟ ವಯಸ್ಸಿನವರೆಗೆ ಮಾತ್ರ ಬಳಕೆಯಲ್ಲಿರುತ್ತವೆ. ಈ ರೂಪಗಳು ತಾಯಿ ಮತ್ತು ಮಗುವಿನ ನಡುವೆ ಒಂದು ಅನ್ಯೋನ್ಯ ಸಂಬಂಧವನ್ನು ಬೆಳೆಸುತ್ತವೆ. ಇಲ್ಲಿ ತಾಯಿಯ ಕೆಲಸ ಮಗುವಿನ ಜಾಗೃತಿ ಮೂಡಿಸುವುದಾಗಿರುತ್ತದೆ. ಮಗುವೂ ಕೂಡಾ ಹಂತ ಹಂತವಾಗಿ ಸ್ವ ಪ್ರಯತ್ನಪೂರಕ ಭಾಷೆಯನ್ನು ರೂಪಿಸಿಕೊಳ್ಳುವ ಪ್ರತಿಕ್ರಿಯೆ ತೋರಿಸುತ್ತದೆ.

೫.೧. ಮಕ್ಕಳ ಭಾಷೆ

ಮಗುವಿನ ಮಾತೆಂದರೆ ಯಾರಿಗೆ ತಾನೇ ಇಷ್ಟವಾಗದು. ಸಾಮಾನ್ಯವಾಗಿ ಮಕ್ಕಳ ಭಾಷೆ ಹೇಗಿರುತ್ತದೆ ಎಂದರೆ ಅದು ಸಂಗೀತದಂತೆ ಸುಶ್ರಾವ್ಯ ಕಲೆಯಂತೆ ಮೋಹಕ, ಮಕ್ಕಳ ಮಾತು ತೊದಲುತ್ತ, ತಪ್ಪುತ್ತ ಮಾತನಾಡುವ ಮಗುವಿನ ಮಾತನ್ನು ಕೇಳಿದರೆ ನೋವು ಕೂಡ ಮರೆಯಾಗುತ್ತದೆ. ಮಗುವಿನ ಸಿಹಿಯಾದ ಮಾತುಗಳನ್ನು ಕೇಳಲು ಎಲ್ಲರೂ ಇಷ್ಟಪಡುತ್ತಾರೆ. ಎಲ್ಲರಿಗೂ ಮಗುವಿನೊಂದಿಗೆ ಮಾತನಾಡುವುದು ಒಂದು ಇಷ್ಟವಾದ ಕೆಲಸವೆ. ತಾಯಿ ತಂದೆ ಮತ್ತು ಮಗುವಿನ ಆತ್ಮೀಯ ಪರಿಸರದ ವ್ಯಕ್ತಿಗಳು ಹೆಚ್ಚಾಗಿ ಮಗುವಿನೊಂದಿಗೆ ಮಾತನಾಡುತ್ತಿರುತ್ತಾರೆ.

ಮಗು ಹುಟ್ಟಿನಿಂದ ಚೆನ್ನಾಗಿ ಮಾತನಾಡುವರೆಗೆ ತಾಯಿ ನಿರಂತರವಾಗಿ ಮಾತನಾಡುತ್ತಿರುತ್ತಾಳೆ. ಆಟವಾಡುತ್ತಿರುತ್ತಾಳೆ, ಲಲ್ಲೆಗರೆಯುತ್ತಿರುತ್ತಾಳೆ. ಮಗು ತನ್ನ ಮಾತಿಗೆ ಸ್ಪಂದನೆಯನ್ನು ಕೊಡುತ್ತದೆಯೋ ಇಲ್ಲವೋ ಅದು ತಾಯಿಗೆ ಮುಖ್ಯವಲ್ಲ. ಆಕೆಗೆ ಅದು ಬೇಕಾಗಿಯೂ ಇಲ್ಲ. ಮಗು ಬೇಗ ಮಾತು ಕಲಿಯಲಿ ಎಂಬ ಉದ್ದೇಶ ಅದರ ಹಿಂದೆ ಇರುತ್ತದೆ. ಅಲ್ಲದೆ ಮಗುವಿನ ಪ್ರತಿಯೊಂದು ಧ್ವನಿಗಳಿಗೂ ಚಟುವಟಿಕೆಗಳಿಗೂ ಅರ್ಥ ಹಚ್ಚಿ ವಿವರಿಸುತ್ತಾಳೆ.

ಸಾಮಾನ್ಯವಾಗಿ ಮಕ್ಕಳು ೧೦-೧೨ ತಿಂಗಳ ವೇಳೆಗೆ ಮಾತನಾಡಲು ತೊಡಗುತ್ತವೆ. ಆದರೆ, ಇದು ಮಗುವಿನ ಭಾಷಾ ಗಳಿಕೆಯ ಮೊದಲ ಹಂತವೇನಲ್ಲ. ಮಗು ಹುಟ್ಟಿದ ತಕ್ಷಣ ಅಳುತ್ತದೆ. ಹುಟ್ಟಿದಾಗ ಮಗು ಮೊದಲ ಬಾರಿಗೆ ತನ್ನ ದೇಹಕ್ಕೆ ತಾನೇ ಗಾಳಿಯನ್ನು ಪೂರೈಸಿಕೊಳ್ಳುವ ಕ್ರಿಯೆಗೆ ತೊಡಗುತ್ತದೆ. ಆ ಮೂಲಕ ಈ ಜಗತ್ತಿಗೆ ಹೊಂದಿಕೊಳ್ಳಲು ಆರಂಭಿಸುತ್ತದೆ. ಆ ಸಂದರ್ಭದಲ್ಲಿ ಮಗು ಅಳುತ್ತದೆ. ಆ ಅಳು ಮಗುವಿನ ಮೊದಲ ಧ್ವನಿ. ತನ್ನ ಧ್ವನ್ಯಂಗಗಳಿಗೆ ಅಥವಾ ಧ್ವನಿ ಉತ್ಪಾದನಾ ಕ್ರಿಯೆಯಲ್ಲಿ ಭಾಗವಹಿಸುವ ಅಂಗಗಳಿಗೆ ಕೆಲಸ ನೀಡಿ ಅವುಗಳ ಮೂಲಕ ಹೊರಡಿಸಿದ ಮೊದಲ ಧ್ವನಿ ಅದಾಗಿರುತ್ತದೆ. ಹೀಗಾಗಿ ಆ ಅಳುವಿಗೆ ಭಾಷಾಗಳಿಕೆ ಪ್ರಕ್ರಿಯೆಯಲ್ಲಿ ಅತ್ಯಂತ ಮುಖ್ಯವಾದ ಸ್ಥಾನವಿದೆ.

ಮಗುವಿನ ಭಾಷಾ ಗಳಿಕೆಯು ಅದರ ಮೊದಲ ಅಳುವಿನಿಂದಲೇ ಆರಂಭವಾಗುತ್ತದೆ. ಮಗು ಹುಟ್ಟಿದ ಕೆಲವು ದಿನಗಳಿಗೆ ಅಳು, ನಗು, ಕೇಕೆ, ಕನಲಿಕೆ ಮೊದಲಾದವುಗಳ ಮೂಲಕ ತನ್ನ ಧ್ವನಿಯನ್ನು ಹೊರಡಿಸುತ್ತಿರುತ್ತದೆ. ಮಗುವಿಗೆ ಅತ್ಯಂತ ಚುರುಕಾದ ಗ್ರಹಣಶಕ್ತಿ ಇರುತ್ತದೆ. ಇದರಿಂದ ಮಗು ತಿಂಗಳೊಪ್ಪತ್ತಿನಲ್ಲಿಯೇ ತನ್ನ ತಾಯಿ, ಆಕೆಯ ಧ್ವನಿಯ ಚಹರೆಯನ್ನು ಗುರುತಿಸುತ್ತಿರುತ್ತದೆ. ಅನಂತರವೇ ಮಗುವಿನ ಕೇಕೆ ಕನಲಿಕೆ ಮೊದಲಾದವು ನಿಯತತೆಯನ್ನು ಪಡೆದುಕೊಳ್ಳತೊಡಗುತ್ತವೆ. ಮಗು ತನ್ನ ಸುತ್ತಲಿನ ತನ್ನ ಆತ್ಮೀಯ ಪರಿಸರದ ವ್ಯಕ್ತಿಗಳ, ವಿಶೇಷವಾಗಿ ತಾಯಿಯ ಧ್ವನಿ, ಭಾಷೆಯತ್ತ ಗಮನ ಕೇಂದ್ರೀಕರಿಸುತ್ತದೆ. ಅನಂತರ ಆ ಧ್ವನಿಯಲ್ಲಿನ ಭಾವನೆಗಳನ್ನು ಅರಿತುಕೊಳ್ಳಲು ಯಶಸ್ವಿಯಾಗುತ್ತದೆ.

ಮಗು ಕ್ರಮೇಣ ಭಾಷಾ ಆಟವನ್ನು ರೂಢಿಸಿಕೊಳ್ಳತೊಡಗುತ್ತದೆ. ಕ್ರಮೇಣ ಭಾಷಾ ಆಟದ ಮೂಲಕ ಮಗು ತನ್ನದೇ ಆದ ಭಾಷಿಕ ಪ್ರಪಂಚವನ್ನು ಸೃಷ್ಟಿಸಿಕೊಳ್ಳುತ್ತದೆ. ಕೆಲವು ಸ್ವರಧ್ವನಿಗಳ ಉಚ್ಚಾರ ಈ ವೇಳೆಗೆ ಸಾಧ್ಯವಾಗಿರುತ್ತದೆ. ಅರ್ಧ ವರ್ಷದ ಮಗು ಈ ಎಲ್ಲ ಅಂಶಗಳ ಮುಂದುವರಿಕೆಯನ್ನು ತೋರಿಸುತ್ತದೆ. ಈ ಪೂರ್ವದ ಪ್ರಯತ್ನಗಳು ಗಂಭೀರವಾಗಿ ಮುಂದುವರೆಯುತ್ತವೆ. ತಾಯಿಯ ಧ್ವನಿಗಳನ್ನು ಗ್ರಹಿಸಿಕೊಳ್ಳುತ್ತದೆ. ತಾಯಿ ಹೊರಡಿಸುವ ಧ್ವನಿ ಮತ್ತು ತುಟಿಯ ಚಲನೆ ಮತ್ತು ಆಕೆಯ ಆಗಿನ ಮುಖಚಹರೆ ಈ ಮೊದಲಾದವುಗಳ ಪರಸ್ಪರ ಹೊಂದಾಣಿಕೆಯ ತರ್ಕವನ್ನು ಅರಿತುಕೊಳ್ಳುವ ಪ್ರಯತ್ನ ಮಾಡುತ್ತದೆ.

ಮಗು ತನ್ನ ಆತ್ಮೀಯ ಪರಿಸರದಲ್ಲಿನ ನಿಕಟ ವಸ್ತು ವ್ಯಕ್ತಿಗಳನ್ನು ಗುರುತಿಸುವ ಸಾಮರ್ಥ್ಯವನ್ನು ಈ ವೇಳೆಗೆ ಮಗು ಪಡೆದುಕೊಂಡಿರುತ್ತದೆ. ಇದೇ ರೀತಿಯಲ್ಲಿ ಆ ಪರಿಸರದಲ್ಲಿನ ಮಗುವಿಗೆ ದೊರೆಯುವ ಅತ್ಯಂತ ನಿಕಟ ಭಾಷಿಕ ರೂಪಗಳನ್ನು ಗುರುತಿಸುವ ಸಾಮರ್ಥ್ಯವನ್ನು ಪಡೆಯುತ್ತಾ, ಭಾಷೇತರ ಧ್ವನಿಗಳನ್ನು ಮಗು ಹೊರಡಿಸುತ್ತಿರುತ್ತದೆ. ಹೆಚ್ಚಿನ ಸ್ವರ ಧ್ವನಿಗಳು ಮಗುವಿಗೆ ಉಚ್ಚಾರಣೆಗೆ ಸಾಧ್ಯವಾಗುತ್ತದೆ. ಅದರಲ್ಲಿ ಧ್ವನಿಗಳನ್ನು ಮೊದ ಮೊದಲಿಗೆ ರೂಢಿಸಿಕೊಂಡಿರುತ್ತದೆ.

ಕ್ರಮೇಣ ಇತರ ಧ್ವನಿಗಳನ್ನು ಉಚ್ಚರಿಸಲು ಸಾಧ್ಯಮಾಡಿಕೊಳ್ಳುತ್ತದೆ. ಈ ವೇಳೆಗೆ ಮಗುವಿನ ಶಬ್ದಕೋಶದಲ್ಲಿ ಮಕ್ಕಳ ಭಾಷೆಯ ಸಾಕಷ್ಟು ಶಬ್ದಗಳು ಸೇರಿಸುತ್ತವೆ. ಅವ್ವ, ಪಪ್ಪ, ಮಮ್ಮ, ಅಮ್ಮಿ, ಬುವ್ವ, ಜಿಜಿ ಈ ಮೊದಲಾದ ಶಬ್ದಗಳು ಮಕ್ಕಳ ಭಾಷೆಯ ಅತ್ಯಂತ ಬಳಕೆಯ ಶಬ್ದಗಳಾಗಿರುತ್ತವೆ. ಈ ಪ್ರಕ್ರಿಯೆಯೆ ನಿರಂತರ ಮುಂದುವರಿಕೆಯೇ ಭಾಷಾಗಳಿಕೆಯಾಗಿದ್ದು ಅದು ಕ್ರಮೇಣ 'ಭಾಷಾಸಿದ್ಧಿ'ಯತ್ತ ನಡೆಯುತ್ತದೆ.

'ಭಾಷಾಸಿದ್ಧಿ' ಎಂದರೆ ಭಾಷೆಯ ಮೇಲೆ ಅಧಿಕಾರವನ್ನು ಸಂಪಾದಿಸುವುದು. ಮಗುವಿನ ಭಾಷಾಗಳಿಕೆಯು ಹುಟ್ಟಿನಿಂದಲೇ ಆರಂಭವಾಗುತ್ತದೆ. ೬ ವರ್ಷದ ವೇಳೆಗೆ ಸಾಮಾನ್ಯವಾಗಿ ಭಾಷೆಯ ಹಲವು ಮಗ್ಗುಲುಗಳನ್ನು ಮಕ್ಕಳು ತಿಳಿದುಕೊಂಡಿರುತ್ತಾರೆ. ಆದರೆ ಕೆಲವು ವ್ಯಾಕರಣಾತ್ಮಕ ಅಂಶಗಳ ಗಳಿಕಾ ಪ್ರಕ್ರಿಯೆ ೧೦-೧೨ ವರ್ಷಗಳವರೆಗೆ ಹೋಗಬಹುದು ಎನ್ನಲಾಗಿದೆ.

ಇದು ಮಕ್ಕಳು ಪ್ರೌಢಾವಸ್ಥೆಗೆ ಬರುವವರೆಗೂ ನಡೆಯಬಹುದು. ಸಾಮಾನ್ಯವಾಗಿ ೧೨-೧೪ ವರ್ಷದ ವೇಳೆಗೆ ಮಕ್ಕಳು ಭಾಷಾಸಿದ್ಧಿಯನ್ನು ಕೈವಶ ಮಾಡಿಕೊಳ್ಳುತ್ತಾರೆ. ಆದರೆ ಎಲ್ಲ ಮಕ್ಕಳ ಭಾಷಾಗಳಿಕಾ ಪ್ರಕ್ರಿಯೆಯು ಒಂದೇ ತೆರನಾಗಿರುವುದಿಲ್ಲ. ಕೆಲವು ಮಕ್ಕಳು ಬೇಗನೆ ಭಾಷೆಯನ್ನು ಬಳಸಲು ತೊಡಗಿದರೆ ಇನ್ನೂ ಕೆಲಮಕ್ಕಳು ತಡವಾಗಿ ಭಾಷೆಯನ್ನು ಬಳಸಬಹುದು. ಈ ವ್ಯತ್ಯಾಸಕ್ಕೆ ಮುಖ್ಯವಾಗಿ ಭಾಷೆಗೆ ಸಂಬಂಧಿಸಿದ ದೈಹಿಕ ರಚನೆ, ಮಿದುಳಿನ ರಚನೆ, ಅದರ ಕಾರ್ಯಸಾಧುತ್ವಗಳಾಗಿರುತ್ತವೆ.

ಈ ಮಕ್ಕಳ ಭಾಷೆಯನ್ನು ವ್ಯಕ್ತಿ ಭಾಷೆಯ ಪ್ರಬೇಧವಾಗಿ ಪರಿಗಣಿಸುವಿಕೆಯನ್ನು ನೋಡಬಹುದು. ಅಂದರೆ ವ್ಯಕ್ತಿ ಭಾಷೆಯ ೩ ಪ್ರಬೇಧಗಳಲ್ಲಿ ಒಂದು. (ಮಕ್ಕಳ ಭಾಷೆ, ಪ್ರೌಢ ಭಾಷೆ, ವೃದ್ಧಭಾಷೆ) ವ್ಯಕ್ತಿ ಭಾಷೆಯ ವಿಕಾಸವನ್ನು ಅಧ್ಯಯನ ಮಾಡುವ 'ವ್ಯಕ್ತಿ ಭಾಷಾ ವಿಕಾಸ ವಿಜ್ಞಾನ'ದಲ್ಲಿ ಮಕ್ಕಳ ಭಾಷೆ ಅತ್ಯಂತ ಮುಖ್ಯವಾದುದು. ಈ ಮಕ್ಕಳ ಭಾಷೆಯನ್ನು ಅಧ್ಯಯನ ಮಾಡುವುದೆ 'ಮಕ್ಕಳ ಭಾಷಾ ವಿಜ್ಞಾನ' ಮಕ್ಕಳ ಭಾಷೆ ಮಗುವಿಗೆ ಹುಟ್ಟಿನಿಂದ ಕೆಲವು ವರ್ಷಗಳವರೆಗೆ ವಿಕಾಸಗೊಳ್ಳುತ್ತಾ ನಡೆಯುತ್ತದೆ.

ಮಕ್ಕಳ ಭಾಷೆಯ ವಿಶೇಷ ಅಂಶವೆಂದರೆ ಮಗು ಕೇವಲ ಒಂದೇ ಧ್ವನಿಯನ್ನು (ಆ.ಈ. ಮೊದಲಾದವು) ಕೆಲವೊಮ್ಮೆ ಒಂದಕ್ಕಿಂತ ಹೆಚ್ಚಿನ ಧ್ವನಿಗಳ ಜೋಡಣೆಯನ್ನು ಉಚ್ಚರಿಸುತ್ತಿರುತ್ತದೆ. ಅದು ಕೆಲವೊಮ್ಮೆ ಭಾಷೆಯ ಧ್ವನಿಗಳಂತಿರದೆ ಭಾಷೇತರ ಧ್ವನಿಗಳಂತೆಯೂ ಇರಬಹುದು. ಅದೇನೇ ಇದ್ದರೂ ಮಗು ಹೊರಡಿಸುವ ಆ ಧ್ವನಿ ಅಥವಾ ಧ್ವನಿಗುಚ್ಛವು ಕೇವಲ ಧ್ವನಿ ಮಾತ್ರ ಆಗಿರುವುದಿಲ್ಲ. ಸಂದರ್ಭಾನುಸಾರ ಅದು ಧ್ವನಿ, ಶಬ್ದ ಅಥವಾ ವಾಕ್ಯವೂ ಆಗಿರುತ್ತದೆ. ಆದರೆ ಇದರ ಸ್ಪಷ್ಟನೆ ಆಗಬೇಕಾದರೆ ಧ್ವನಿ ಹೊರಡಿಸಿದಾಗಿನ ಮಗುವಿನ ಪರಿಸ್ಥಿತಿ ಮತ್ತು ಸುತ್ತಲಿನ ವಾತಾವರಣ ಇವು ಅತ್ಯಂತ ಮುಖ್ಯವಾಗಿರುತ್ತದೆ. ಇವುಗಳ ಆಧಾರದಿಂದಲೇ ಆ ಧ್ವನಿಗಳನ್ನು ಸರಿಯಾಗಿ ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ.

ಒಂದು ವರ್ಷದ ನಂತರ ಮಗು ತನಗೆ ಗೊತ್ತಿರುವ ಶಬ್ದಗಳನ್ನು ಜೋಡಿಸುವ ಪ್ರಯತ್ನವನ್ನು ಮಾಡುತ್ತದೆ. ಮಗುವಿನ ತಾಯಿ ಮತ್ತು ಆತ್ಮೀಯ ಪರಿಸರದ ವ್ಯಕ್ತಿಗಳು ಮಗುವಿನೊಂದಿಗೆ ಮಾತನಾಡುವ ಆ ಮಾತುಗಳನ್ನು ಮಗು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಅವುಗಳನ್ನು ಗ್ರಹಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿರುತ್ತದೆ.

ಎರಡು ವರ್ಷ ತುಂಬಿದ ಮಗುವಿನ ಭಾಷೆಯಲ್ಲಿ ಸಾಕಷ್ಟು ಬೆಳವಣಿಗೆಗಳು ಗಮನಕ್ಕೆ ಬರುತ್ತವೆ. ಭಾಷೆಯಲ್ಲಿನ ಬಹುತೇಕ ಧ್ವನಿಗಳ ಉಚ್ಚಾರ ಮಗುವಿಗೆ ಸಾಧ್ಯವಾಗಿ ಮಗುವಿನ ಶಬ್ದಕೋಶದಲ್ಲಿ ಬಳಕೆ ಸಾಧ್ಯ ಶಬ್ದಗಳಿಗಿಂತ ಗ್ರಹಣ ಸಾಧ್ಯ ಶಬ್ದಗಳ ಸಂಖ್ಯೆ ಹೆಚ್ಚಾಗಿದ್ದು ಮಕ್ಕಳ ಭಾಷೆಯ ಅತ್ಯಂತ ಮುಖ್ಯವಾದ ಒಂದು ಅಂಶವೆಂದರೆ ಅದು ರಾಗಾತ್ಮಕತೆಯಿಂದ ಕೂಡಿರುತ್ತದೆ.

ಮಗುವಿಗೆ ಮೂರು ವರ್ಷ ತುಂಬಿದ ನಂತರ ಮಗು ಭಾಷೆಯ ಬಳಕೆಯಲ್ಲಿ ಸಾಕಷ್ಟು ಪಳಗಿರುತ್ತದೆ. ಈ ವೇಳೆಗೆ ಮಗುವಿನ ಭಾಷೇತರ ಧ್ವನಿಯ ಉಚ್ಚಾರಣೆ ಕಡಿಮೆಯಾಗಿರುತ್ತದೆ.

ಮಗುವಿಗೆ ನಾಲ್ಕು ವರ್ಷ ತುಂಬಿದಾಗ ಭಾಷೆಯು ಒಂದು ನಿಯತತೆಯನ್ನು ಕಂಡುಕೊಳ್ಳುತ್ತಿರುತ್ತದೆ. ಮಗುವಿನ ನಿತ್ಯ ವ್ಯವಹಾರ ಸಾಕಷ್ಟು ಸಹಜವಾಗಿ ನಡೆದಿರುತ್ತದೆ. ತನ್ನ ಸುತ್ತಲಿನ ಬಳಕೆ ಭಾಷೆಯನ್ನು ಆದಷ್ಟೂ ಅರ್ಥಮಾಡಿಕೊಳ್ಳುತ್ತದೆ. ಮತ್ತು ಸ್ಪಂದನೆಯೂ ನೀಡುತ್ತದೆ. ೫–೬ ವರ್ಷದಲ್ಲಿ ಮಗು ಭಾಷಿಕ ಪ್ರೌಢತೆಯನ್ನು ಪಡೆದುಕೊಂಡಿರುತ್ತದೆ. ವಿವಿಧ ಭಾಷಾ ಬಳಕೆಯನ್ನು ಮಗು ರೂಢಿಸಿಕೊಳ್ಳತೊಡಗುತ್ತದೆ. ಕೆಲವು ವ್ಯಾಕರಣಾತ್ಮಕ ಅಂಶಗಳ ಕಲಿಕೆಯು ೧೨–೧೪ ವರ್ಷ ವಯಸ್ಸಿನವರೆಗೂ ಮುಂದುವರೆಯುತ್ತದೆ ಎನ್ನಲಾಗುತ್ತದೆ. ಅದೇನೆ ಇದ್ದರೂ ಮಕ್ಕಳ ಭಾಷೆ ೫–೬ ವರ್ಷದ ನಂತರ ಕ್ರಮೇಣ ಪ್ರೌಢಭಾಷೆಯೊಂದಿಗೆ ನಿಕಟತೆಯನ್ನು ಸಾಧಿಸಿಕೊಳ್ಳುತ್ತದೆ. ಹೀಗೆ ಮಕ್ಕಳ ಭಾಷೆ ಲಯವಾಗಿ ಪ್ರೌಢಭಾಷೆಯಾಗಿ ಮುಂದುವರೆಯುತ್ತಾ ಸಾಗುತ್ತದೆ.

ಮಕ್ಕಳ ಭಾಷಾ ರೂಪಗಳನ್ನು ಪರಿಚಯ ಮಾಡಿಕೊಳ್ಳುವ ಮೊದಲು ಮಗುವಿನ ಭಾಷಾ ಕಲಿಕೆಯ ಹಂತಗಳನ್ನು ಗುರುತಿಸುವ ಅಗತ್ಯತೆಯಿದೆ. ಇದು ಮಗು ಭಾಷಿಕ ಅಂಶಗಳ ಕಲಿಕೆಯಲ್ಲಿ ಸಾಧಿಸುವ ಪ್ರಗತಿಯನ್ನು ಗುರುತಿಸುವುದಾಗಿದೆ.

ಒಂದು ಭಾಷೆಯನ್ನು ಮಗು ಹೇಗೆ ಕಲಿತುಕೊಳ್ಳುತ್ತದೆ. ಯಾವ ವಯಸ್ಸಿನ ಹಂತದಲ್ಲಿ ಪದಗಳನ್ನು ಉಚ್ಚರಿಸುತ್ತದೆ. ಯಾವ ಯಾವ ವಯಸ್ಸಿನಲ್ಲಿ ಎಷ್ಟೆಷ್ಟು ಪದಗಳನ್ನು ಉಚ್ಚರಿಸಬಲ್ಲದು. ಈ ಎಲ್ಲಾ ವಿಚಾರಗಳ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಮನೋವೈಜ್ಞಾನಿಕ ಅಧ್ಯಯನಗಳು ನಡೆದಿವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಅಧ್ಯಯನಗಳು ತೀರಾ ಕಡಿಮೆ. ಆದರೆ ಕನ್ನಡದಲ್ಲಿ ಮಕ್ಕಳು ಹಂತಹಂತವಾಗಿ ಭಾಷೆಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯನ್ನು ವಿವರಿಸುವ ಕೆಲಸಗಳು ನಡೆದಿವೆ.

೫.೨. ಮಕ್ಕಳ ಕಾವ್ಯಗಳಲ್ಲಿ ಭಾಷಿಕ ವಿಶ್ಲೇಷಣೆ

ಸಾಮಾನ್ಯವಾಗಿ ಮನೆಯಲ್ಲಿ ಮಕ್ಕಳ ಜೊತೆಯಲ್ಲಿ ಬಳಕೆ ಮಾಡುವ ಭಾಷೆಗೂ ಹಾಗೂ ಮಕ್ಕಳ ಸಾಹಿತ್ಯದ ರಚನೆಯ ಭಾಷೆಗೆ ನಾವು ವ್ಯತ್ಯಾಸವನ್ನು ಕಾಣಬಹುದಾಗಿದೆ. ಅಂದರೆ ನಾವೂ ಭಾಷಾ ದೃಷ್ಟಿಯಿಂದ ಯೋಚಿಸಿದಾಗ ಹಿರಿಯರು ಮಕ್ಕಳ ಒಡನಾಟದಲ್ಲಿ ಬಳಸುವ ಭಾಷೆಯು ಅತಿಯಾದ ಮುದ್ದಿನಿಂದ ಕೂಡಿದ್ದು ಅಲ್ಲಿ ಮಕ್ಕಳನ್ನು ಸಂಭೋಧಿಸುವಾಗ ಪುಟ್ಟು, ಚಿನ್ನು, ಬಂಗಾರ, ಕಂದ ಮೊದಲಾದ ಅಕ್ಕರೆಯ ಪದಗಳಿಂದ ಕೂಡಿರುತ್ತವೆ. ಉದಾ: ಊಟ ಮಾಡು ಎನ್ನಲು –ಮಮ್ಮು ತಿನ್ನು ಬಾ

ಸ್ನಾನ ಮಾಡು ಎನ್ನಲು –ಉಸ್ ಮಾಡು, ಜಿಯಾ ಮಾಡು

ನೀರು ಕುಡಿ ಎನ್ನಲು –ಬೂ ಕುಡಿ, ನೀ ಕುಡಿ, ಜಿಜ್ಜಿ ಕುಡಿ

ದೇವರಿಗೆ ನಮಸ್ಕರಿಸು ಎನ್ನುವಾಗ–ಜೇಜಿಮಾಡು, ಸಾ ಮಾಡು

ಹೀಗೆ ಮೊದಲಾದ ಪದಗಳನ್ನು ಗಮನಿಸಿದಾಗ ಮನೆಯ ವಾತಾವರಣದಲ್ಲಿ ಮಕ್ಕಳಿಗೆ ಅತಿ ಚಿಕ್ಕ ಚಿಕ್ಕ ಪದಗಳನ್ನು ಬಳಸಿಕೊಳ್ಳುವುದರ ಜೊತೆಗೆ ವಾಕ್ಯಗಳನ್ನು ಸಂಕ್ಷಿಪ್ತಗೊಳಿಸಿ ಹೇಳುವುದನ್ನು ಕಾಣಬಹುದು. ಆದರೆ ಅದೇ ಮಕ್ಕಳ ಸಾಹಿತ್ಯದ ರಚನೆಯಲ್ಲಿ ಈ ಮೇಲಿನ ಪದಗಳಲ್ಲಿ ಸ್ವಲ್ಪ ಬದಲಾವಣೆ ಆಗಿರುವುದನ್ನು ಕಾಣಬಹುದು. ಮಕ್ಕಳ ಸಾಹಿತ್ಯದಲ್ಲಿ ಸರಳ ಮಾತಿನ ಜೊತೆಗೆ ಅವರ ಮೂಲ ಭಾಷೆ ರಚನೆಗೆ ತಕ್ಕಂತೆ ಚಿಕ್ಕ ಚಿಕ್ಕ ಶಬ್ದ ಚಿಕ್ಕ ಚಿಕ್ಕ ವಾಕ್ಯ ಪದಪುಂಜಗಳನ್ನು ಮಕ್ಕಳಿಗೆ ಕ್ಲಿಷ್ಟಕರವಾಗಿರದಂತೆ ಸಹಜವಾಗಿ ಬಳಸಿರುವುದನ್ನು ಕಾಣಬಹುದು. ಇಲ್ಲಿ ಪದಗಳ ಆಯ್ಕೆಯು ಲಾಲಿತ್ಯಬರಿತವಾಗಿ, ಪ್ರಾಸಬದ್ಧವಾಗಿ ಚಿಕ್ಕದರಲ್ಲಿ ಹಲವಾರು ಅರ್ಥಗಳು ಬರುವಂತೆ ಬರೆದಿರುತ್ತಾರೆ ಎನ್ನಬಹುದು.

ಉದಾ: "ನಾಗರ ಹಾವೆ ಹಾವೊಳು ಹೂವೆ
ಬಾಗಿಲ ಬಿಲದೊಳು ನಿನ್ನಯ ಠಾವೇ
ಕೈಗಳ ಮುಗಿಯುವೆ ಹಾಲನ್ನೀವೆ!
ಬಾ ಬಾ ಬಾ ಬಾ ಬಾ ಬಾ ಬಾ ಬಾ"[೩]

ಈ ಮಕ್ಕಳ ಪದ್ಯದಲ್ಲಿ ಪ್ರಾಸ, ಒಳಪ್ರಾಸ, ಲಯ ಗತಿ, ಗೇಯತೆಯನ್ನು ತುಂಬ ಸೊಗಸಾಗಿ ಹಿಡಿದಿಟ್ಟಿರುವುದನ್ನು ಕಾಣಬಹುದು ಈ ಪದ್ಯದ ಸಾಲುಗಳಲ್ಲಿಯೇ ನಾಗರ ಹಾವಿನ ಇಡೀ ದೇಹ ಸ್ವರೂಪವನ್ನು ಪರಿಚಯಿಸಲಾಗಿದೆ. ಇಲ್ಲಿ ಬಳಕೆಯಾಗಿರುವ ಹೂವೆ, ಠಾವೆ, ಹಾಲನ್ನೀವೆ, ಬೇಗಾ, ರಾಗಾ, ನಾಗಾ ಮೊದಲಾದ ಪದಗಳು ಅಂತ್ಯಪ್ರಾಸದಿಂದ ಕೂಡಿರುವುದನ್ನು ಕಾಣಬಹುದು ಅಲ್ಲದೆ ಚರಣಗಳ ಕೊನೆಯಲ್ಲಿ ಬರುವ ಬಾ ಬಾ ಬಾ ಬಾ, ತಾ ತಾ ತಾ ತಾ, ಪೋ ಪೋ ಪೋ ಪೋ ಪದಗಳು ಪುನರುಚ್ಚರಿಸುವ ಪದಗಳಾಗಿವೆ. ಈ ಇಡೀ ಕವನದಲ್ಲಿ

ಒತ್ತಕ್ಷರಗಳ ಬಳಕೆಯನ್ನೆ ಮಾಡದೇ ಮಕ್ಕಳಿಗೆ ತುಂಬಾ ಸರಳ ಪದಗಳ ಮೂಲಕ ಪದ್ಯವನ್ನು ಕಟ್ಟಲಾಗಿದೆ. ಹಾಗೆಯೇ ಸಿದ್ಧಯ್ಯ ಪುರಾಣಿಕರ ನನ್ನ ಕುದುರೆ ಕವನದಲ್ಲಿ

"ಅಜ್ಜನ ಕೊಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ
ನಾಲನು ಬಡಿಸದ ಜೂಲವ ಹೊದಿಸದ ಕುದುರೆ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ"[೪]

ಈ ಪದ್ಯದಲ್ಲಿ ಕವಿಗಳು ಇಡೀ ಪದ್ಯವನ್ನು ತುಂಬಾ ಸರಳ ಸುಂದರ ಭಾಷೆಯಲ್ಲಿ ಹಿಡಿದಿಟ್ಟಿದ್ದಾರೆ. ಇದರಲ್ಲಿ ಹುಡುಗನು ತನ್ನಜ್ಜನ ಕೋಲನ್ನೆ ಕುದುರೆಯನ್ನಾಗಿ ಕಲ್ಪಿಸಿಕೊಂಡು ಈ ಕುದುರೆಯು ಹೆಜ್ಜೆ ಹೆಜ್ಜೆಗೆ ಕುಣಿಯುತ್ತದೆ ಎನ್ನುವುದರಲ್ಲಿ ಪುನರುಚ್ಚರಿಸುವ ಪದದ ಬಳಕೆಯನ್ನು ಮಾಡಿ, ಲಾಲನೆ, ಪಾಲನೆ, ನಾಲನು ಜೂಲನು ಎನ್ನುವ ದ್ವಿರುಕ್ತಿ ಪದಗಳನ್ನು ಕವನಕ್ಕೆ ಅನುಗುಣವಾಗಿ ಬಳಸಿಕೊಂಡು, ಪ್ರಾಸಯುಕ್ತವಾಗಿ ಮಕ್ಕಳಿಗೆ ಸರಳವಾಗಿ ಅರ್ಥವಾಗುವಂತೆ ಭಾಷೆಯಲ್ಲಿ ಬರೆದಿರುವುದನ್ನು ಕಾಣಬಹುದು ಈ ಪದ್ಯದಲ್ಲಿ ಎಲ್ಲಿಯೂ ಒತ್ತಕ್ಷರದ ಬಳಕೆಯನ್ನು ಮಾಡದೆಯಿರುವುದು ವಿಶೇಷವಾಗಿದೆ

ದಿನಕರ ದೇಸಾಯಿ ಅವರ ಗಡಿಯಾರ ಪದ್ಯ ಕವನ

"ಗಂಟೆಯ ನೆಂಟನೆ ಓ ಗಡಿಯಾರ,
ಬೆಳ್ಳಿಯ ಬಣ್ಣದ ಗೋಳಾಕಾರ,
ವೇಳೆಯ ತಿಳಿಯಲು ನಿನಾಧಾರ,
ಟಿಕ್, ಟಿಕ್, ಗೆಳೆಯಾ, ಟಿಕ್ ಟಿಕ್ ಟಿಕ್..."[೫]

ಈ ಪದ್ಯದಲ್ಲಿ ಗಡಿಯಾರದ ಕಾರ್ಯವನ್ನು ಮಕ್ಕಳಿಗೆ ಸುಲಭವಾಗಿ ಪರಿಚಯಿಸುತ್ತಾ, ಇಡೀ ಪದ್ಯ ಅಂತ್ಯ ಪ್ರಾಸದಿಂದ ಕೂಡಿ, ಲಾಲಿತ್ಯಭರಿತವಾಗಿದೆ. ಜೊತೆಗೆ ಚರಣದ ಕೊನೆಯ ಸಾಲಿನಲ್ಲಿ ಬರುವ ಟಿಕ್ ಟಿಕ್ ಟಿಕ್ ಎನ್ನುವ ಪದವಂತೂ ಮತ್ತೆ ಮತ್ತೆ ಬರುವುದು, ಕೇಳಲು ತುಂಬಾ ಸೊಗಸಾಗಿದೆ. ಜೊತೆಗೆ ಈ ಪದ್ಯದ ಮೂಲಕವೇ ಮಕ್ಕಳಿಗೆ ಸಮಯ ಮತ್ತು ಸಮಯ ಪ್ರಜ್ಞೆಯನ್ನು ಪರಿಚಯಿಸಲಾಗಿದೆ. ಅಲ್ಲದೆ ಸಮಯ ಯಾರನ್ನು ಕಾಯುವುದಿಲ್ಲ, ಅದು ಸದಾ ತನ್ನ ಕಾಯಕವನ್ನು ಮಾಡುತ್ತಿರುತ್ತದೆ. ಅದರೊಟ್ಟಿಗೆ ನಾವು ಸರಿಯಾದ ಹೆಜ್ಜೆ ಹಾಕಬೇಕು. ಆಗ ಮಾತ್ರ ನಮಗೂ ಉತ್ತಮ ಭವಿಷ್ಯವಿದೆ ಎನ್ನುವ ಸಂದೇಶವನ್ನು ಸಾರುತ್ತದೆ.

ಅಲ್ಲದೆ 'ಎಂಟು ಜೇಡರು' ಎನ್ನುವ ಪಂಜೆಯವರ ಕವಿತೆಯಲ್ಲಿ 'ಮಗುವೆ, ನಿನ್ನಯ

ಮೈಗೆ ಗುರಿಯಿಟ್ಟು ಹೊಡೆವಾ ಬಗೆ ಬಗೆಯ ಬೇಡರಿಂದಲಿ ದೂರವಾಗು' ಎಂದು ಪ್ರಾರಂಭವಾಗುವ ಇದರಲ್ಲಿ

"ಹೊತ್ತನು ತಿಂಬ ಸೋಮಾರಿತನ ಬೇಡ!
ಮತ್ತು ಹಿಡಿಸುತ ಮೈ ಕೊಡುವ ಕಳ್ಳು ಬೇಡ!
ಕತ್ತು ಕೊಯ್ಕರ ಕೊಡೆ ನಂಟುಬೇಡತನ!
ಉತ್ತಮೋತ್ತಮರಲ್ಲಿ ನಿನ್ನ ಹಗೆ ಬೇಡ!"[೬]

ಹೀಗೆ ಈ ಕವಿತೆಯಲ್ಲಿ ಆರಂಭದಿಂದ ಹಿಡಿದು ಸಾಲಿನ ಅಂತ್ಯಪದವು ಬೇಡ, ಬೇಡ ಎಂದು ಮುಕ್ತಾಯವಾಗುತ್ತಾ ಒಟ್ಟು ಎಂಟು ನೀತಿಗಳನ್ನು ಹೇಳಿದೆ. ಈ ಎಂಟು ಸೂತ್ರಗಳಲ್ಲಿಯೂ ಇಡೀ ನೀತಿಶಾಸ್ತ್ರವೇ ಅಡಗಿದೆ ಎನ್ನುವಂತಿವೆ. ಹೀಗೆ ನೀತಿಯ ಲಯದಲ್ಲಿ ಕವಿತೆಯನ್ನು ಕಟ್ಟಿಕೊಡಲಾಗಿದೆ.

ಶಂಗು ಬಿರಾದಾರ ಅವರ 'ನಮ್ಮ ಕನಸು' ಕವನ:

"ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೊ ಸುಂದರ"[೭]

ಎಂದು ಸಾಗುವ ಈ ಪದ್ಯವು ಮಕ್ಕಳ ಸಾಹಿತ್ಯದಲ್ಲಿಯೇ ಉತ್ಕೃಷ್ಟ ಕವಿತೆ ಎನ್ನಬಹುದು. ಇದರಲ್ಲಿ ಶಂಗು ಬಿರಾದಾರ ಅವರೇ ಮಕ್ಕಳಾಗಿ, ಮಕ್ಕಳಿಗೆ ಮಾರ್ಗದರ್ಶನವನ್ನು ನೀಡುವಂತ ಸಾಲುಗಳನ್ನು ಕಾಣುತ್ತೇವೆ. ಹೀಗೆ ಜನಪ್ರಿಯವಾಗಿರುವ ಈ ಕವಿತೆಯು ಮಕ್ಕಳ ರಾಷ್ಟ್ರಗೀತೆಯೆಂದು ಅನಿಸಿಕೊಂಡ ಸೊಗಸಾದ ಭಾವೈಕ್ಯತಾ ಗೀತೆಯಾಗಿದೆ.

ಈ ಪದ್ಯದಲ್ಲಿ ಬರುವ 'ನಾವು ಎಳೆಯರು, ನಾವು ಗೆಳೆಯರು ಹೃದಯ ಹೂವಿನ ಹಂದರ' ಎನ್ನುವ ಲಾಲಿತ್ಯವು ತುಂಬಾ ಆಕರ್ಷಕವಾಗಿದೆ. ಇದು ಮಕ್ಕಳಲ್ಲಿ ಆದರ್ಶಗುಣಗಳನ್ನು ಬೆಳೆಸಲು ರಚಿಸಿದಂತ ಕವನವೆನ್ನಬಹುದು. ಜೊತೆಗೆ ಇದರಲ್ಲಿರುವ 'ನಾಳೆ ನಾವೇ ನಾಡ ಹಿರಿಯರು, ನಮ್ಮ ಕನಸದೋ ಸುಂದರ' ಎನ್ನುವ ಸಾಲುಗಳಾಗಲಿ, 'ನಮ್ಮ ಶಕ್ತಿಗೆ ದಿವ್ಯ ಭಕ್ತಿಗೆ ದೇಶವಾಗಲಿ ನಂದನ' ಎನ್ನುವಂತ ನಾದಮಯತೆ, ಮತ್ತು ಆಕರ್ಷಕವಾದ ಸಾಲುಗಳ ಪದಜೋಡಣೆಯಿಂದ ಈ ಕವಿತೆಯು ಮಕ್ಕಳಿಗೆ ತುಂಬಾ ಪ್ರಿಯವೆನಿಸುತ್ತದೆ. ಹಾಗೇ ಇವರ ಇನ್ನೊಂದು ಕವನ,

"ಬಾ ಬಾ ಗಿಳಿಯೆ ಬಣ್ಣದ ಗಿಳಿಯೆ
ಹಣ್ಣನು ಕೊಡುವೆನು ಬಾ ಬಾ ಬಾ
ಕೆಂಪು ಮೂಗಿನ ಮುದ್ದಿನ ಗಿಳಿಯೆ
ನನ್ನೊಡನಾಡಲು ಬಾ ಬಾ ಬಾ.."[೮]

ಈ ಕವನದಲ್ಲಿ ಬರುವ ಬಣ್ಣದ ಗಿಳಿ, ಕೆಂಪು ಮೂಗು, ಚೆಂದದ ಗಿಳಿ, ಮುದ್ದಿನ ಗಿಳಿ, ಮೊದಲಾದ ಪದಗಳು ಮಕ್ಕಳಲ್ಲಿ ಗಿಳಿಯ ಬಗೆಗೆ ಕುತೂಹಲವನ್ನು ಮೂಡಿಸುತ್ತವೆ. ಅದರ ಕೆಂಪು ಮೂಗು, ಅದು ಹಾರುವ ಬಗೆಯನ್ನು ಸ್ವತಃ ಪ್ರತ್ಯಕ್ಷವಾಗಿ ಮಕ್ಕಳೇ ಕಾಣಲು ಬಯಸುತ್ತಾರೆ. ಇನ್ನು ಈ ಪದ್ಯವು ಭಾಷೆಯ ದೃಷ್ಟಿಯಿಂದಲಂತೂ ತುಂಬಾ ಸರಳವಾಗಿ ಲಾಲಿತ್ಯಪೂರ್ಣವಾಗಿವೆ. ಈ ಪದ್ಯವು ಮಕ್ಕಳ ಮನಸ್ಸನ್ನು ಅರಳಿಸಿ, ಉಲ್ಲಾಸಗೊಳಿಸಿ, ಸರಳವಾದ ಶಬ್ದಗಳ ಬಳಕೆಯಿಂದಾಗಿ ಮಕ್ಕಳು ಸ್ವಂತಿಕೆಯನ್ನು ಅನುಭವಿಸುತ್ತಾರೆ. ಈ ಪದ್ಯಗಳಲ್ಲಿ ಬಳಸಿರುವ ಪ್ರಾಸಗಳನ್ನು ಮಕ್ಕಳು ತ್ರಾಸಿಲ್ಲದೇ ಅರಗಿಸಿಕೊಳ್ಳಬಹುದು. ಹೀಗಾಗಿ ಈ ತರಹದ ಪದ್ಯಗಳು ಮಕ್ಕಳಿಗೆ ಪ್ರಿಯವೆನಿಸಿ ದೀರ್ಘಕಾಲ ಮನಸ್ಸಿನಲ್ಲಿ ಉಳಿದುಕೊಳ್ಳುತ್ತವೆ.

ಪರಶುರಾಮ ಚಿತ್ರಗಾರರ 'ಸಿದ್ಧಿಕಸಿದ್ಧಿ' ಕವನವು

'ಉದ್ದನ ಮೂಗು
ಜೊಂಡಿಗ ಮೀಸಿ
ಮೊಗದಲಿ ಬಂಣ
ಕಾಡಿಗೆ ಗಂಣ
ಮಕ್ಕಳಿಗೊಂದು ಮೋಜಿನ ಸಿದ್ದಿ
ಉಬ್ಬಿದ ತಿಗಗಳ
ಉಬ್ಬಿಸಿ ಹಾರಿಸಿ
ಮೈಕೈ ಹೊರಳಿಸಿ
ದನಿಯನು ಏರಿಸಿ
ಕುಣಿಕುಣಿದಾಡುವ ಸಿದ್ಧಿಕ ಸಿದ್ಧಿ'

ಈ ಕವನವು 'ಸಿದ್ಧಿ'ಗಳು ಹೇಳುತ್ತಾ ಹಾಡುತ್ತಾ ಬರುತ್ತಿದ್ದ ಧಾಟಿಯಲ್ಲಿಯೇ ರಚನೆಯಾಗಿರುವುದನ್ನು ಕಾಣುತ್ತೇವೆ. ಅಲ್ಲದೆ ಇದು ಗ್ರಾಮೀಣ ಪರಿಸರದ ಗಾಢತೆಯು ಮಕ್ಕಳ ಒಡನಾಟದ ಅನುಭವದಿಂದ ಬಂದಿರುವುದನ್ನು ಕಾಣುತ್ತೇವೆ. ಇದರಲ್ಲಿ ಸಿದ್ದಿಯ ರೂಪವನ್ನು ವರ್ಣಿಸುವುದರ ಜೊತೆಗೆ ಇಲ್ಲಿ ಬಳಸಿರುವ ಎರಡೆರಡು ಪದಗಳ ಚಿಕ್ಕ ಚಿಕ್ಕ ವಾಕ್ಯಗಳು ಮಕ್ಕಳಿಗೆ ಕೇಳಲು ತುಂಬಾ ವಿಶೇಷವೆನಿಸುತ್ತವೆ. ಅವು ಅದರ ಕಲ್ಪನೆಯನ್ನು ಮಾಡುತ್ತಲೇ ಸಂಭ್ರಮಿಸುತ್ತವೆ. ಉದ್ದನ ಮೂಗು, ಜೊಂಡಿಗ ಮೀಸಿ, ಮೊಗದಲಿ ಬಣ್ಣ, ಕಾಡಿಗೆ ಗಂಣ ಮೊದಲಾಗಿ ಈ ಪದ್ಯದಲ್ಲಿ ಪ್ರಾಸಗಳು ಬಳಕೆಯಲ್ಲಿ ಹಾಸ್ಯದ ಲೇಪನವಿರುವುದನ್ನು ಕಾಣಬಹುದು. ಇದರಲ್ಲಿ ಸರಳವಾದ ಭಾಷಾ ಬಳಕೆಯನ್ನು ಮಾಡಲಾಗಿದೆ.

ಇನ್ನು ಉಳವೀಶ ಹುಲೆಪ್ಪನವರ ಈ ಕವನವು

ಸಾಲೆಗೆ ಬಾರ ಮಲ್ಲಕ್ಕ
ಪಾಟಿ ಪುಸ್ತಕ ಇಲ್ಲಕ್ಕ

ಅಡಿಗೆ ಮಾಡ ಮಲ್ಲಕ್ಕ
ಗಡಿಗೆ ಮಡಿಕೆ ಇಲ್ಲಕ್ಕ
ಪೂಜಾ ಮಾಡ ಮಲ್ಲಕ್ಕ
ಹೂವು ಪತ್ರಿ ಇಲ್ಲಕ್ಕ
ಕಸೂತಿ ತೆಗೆಯೆ ಮಲ್ಲಕ್ಕ
ಸೂಜಿ ದಾರ ಇಲ್ಲಕ್ಕ
ಊಟಕ ಬಾರ ಮಲ್ಲಕ್ಕ
ಬಂದೆನು ಬೇಗನೆ ಬಡಿಸಕ್ಕ

ಈ ತರಹದ ಪದ್ಯಗಳು ತುಂಬಾ ಸರಳವಾದ ಭಾಷೆಯಲ್ಲಿ ರಚನೆಯಾಗಿರುತ್ತವೆ. ಅಲ್ಲದೆ ಇವು ಗೇಯವಾದ, ಸುಲಭವಾಗಿ ಮಕ್ಕಳಿಗೆ ಅರ್ಥವಾಗುತ್ತವೆ. ಜೊತೆಗೆ ಇಂಥ ರಚನೆಯ ಕವನಗಳು ಹಾಸ್ಯಲೇಪನದ ಜೊತೆಗೆ ಪ್ರಸ್ತುತ ಸಮಾಜದ ಚಿತ್ರಣವನ್ನು ಕುರಿತು ವ್ಯಂಗ್ಯೈಯುತ್ತವೆ ಎಂಬಂತಿರುತ್ತವೆ. ಅದೇನೆ ಇದ್ದರು ಈ ಮೇಲಿನ ಪದ್ಯಗಳಂತೂ ಮಕ್ಕಳಿಗೆ ತುಂಬಾ ಖುಷಿಯನ್ನು ತರುತ್ತವೆ. ಇಲ್ಲಿ ಮಲ್ಲಕ್ಕಳು ಏನೇ ಮಾಡಲು ಹೇಳಿದರೂ ಅದಕ್ಕೊಂದು ನೆಪವನ್ನು ಹೇಳಿ ಜಾರಿಕೊಳ್ಳುತ್ತಿರುವಾಗ, ಊಟಕೆ ಬಾ ಎಂದಾಗ ಯಾವುದೇ ನೆಪವನ್ನು ಹೇಳದೆ ಬಂದೆನು ಬೇಗನೆ ಬಡಿಸಕ್ಕ ಎನ್ನುವುದು ಹಾಸ್ಯಮಯವಾಗಿರುವಂತದ್ದು. ಪ್ರತಿ ಸಾಲಿನ ಕೊನೆಯಾಕ್ಷರವಂತೂ ಕ್ಕ, ಕ್ಕ ಅಕ್ಷರದ ಬಳಕೆಯಂತೂ ಒಂದು ರೀತಿಯ ಲಾಲಿತ್ಯಭರಿತವಾದ ಪ್ರಾಸ ಪದಗಳು ಎನಿಸಿವೆ. ಜೊತೆಗೆ ಈ ಪದ್ಯದಲ್ಲಿ ಮಕ್ಕಳಿಗೆ ಅರ್ಥವಾಗದಂತ ಯಾವುದೇ ಒತ್ತಕ್ಷರದ ಪದಗಳೇ ಇಲ್ಲವೆನ್ನುವುದು ಇದರ ವಿಶೇಷವೆನಿಸಿದೆ. ಹಾಗೂ ಈ ಕವನವು ಕೇಳಲು ಹಿತವೆನಿಸುವಂತಿದೆ.

ಪಂಜೆಯವರ ತೆಂಕಣ ಗಾಳಿಯಾಟ ಕವನವು

"ಬರಲಿದೆ! ಅಹಹಾ! ದೂರದಿ ಬರಲಿದೆ
ಬುಸುಗುಟ್ಟುವ ಪಾತಾಳದ ಹಾವೋ?
ಹಸಿವಿನ ಭೂತವು ಕೊಯುವ ಕೂವೋ?
ಹೊಸತಿದು, ಕಾಲನ ಕೋಣನ ಓವೋ!
ಉಸಿರಿನ ಸುಯ್ಯೋ? ಸೂಸೂಕರಿಸುತ"[೯]

ಈ ಪದ್ಯವು ರಗಳೆಯ ಪ್ರಬೇಧದಲ್ಲಿ ರಚಿಸಲಾಗಿದೆ. ಈ ಕವನ ಅತ್ಯಂತ ಧ್ವನಿಪೂರ್ಣವಾದ ಉನ್ನತ ಕಲ್ಪನೆಗಳಿಗೆ ಅವಕಾಶಕೊಡುವ ಪದ್ಯವಾಗಿದೆ. ಇದರಲ್ಲಿ ತೆಂಕಣ ದಿಕ್ಕಿನ ಗಾಳಿಯ ಆವೇಶಭರಿತವಾದ ಬೀಸುಗಾಳಿ, ಬಿರುಸಿನ ಗಾಳಿಗಳಿಂದ ಈ ಪದ್ಯವು ಆರಂಭವಾಗುತ್ತದೆ. ಇನ್ನು ಕರಾವಳಿ, ಮಲೆನಾಡಿನ ಪರಿಸರದ ಅಬ್ಬರದ ಮಳೆಯಿಂದಾಗಿ ನೆರೆಹಾವಳಿಯಂತ ಮಳೆಗಾಲದ ತೆಂಕಣ ಗಾಳಿಯಾಟದಲ್ಲಿ ಮಳೆ ಗಾಳಿಗೆ ಸಿಕ್ಕ ಪರಿಣಾಮವಾಗಿದೆ.

ಇಲ್ಲಿ ಕವಿಯ ಭಾಷೆಯು ಸಹಜವಾಗಿಯೇ ಸರಳವಾಗಿದೆ. ತೆಂಕಣ ಗಾಳಿಯ ಬೀಸುವಿಕೆಗೆ ಅನುಗುಣವಾದ ಅನುರಣನ ಪದಗಳನ್ನು ಬಳಕೆಮಾಡಲಾಗಿದೆ. ಸೂಸೂಕರಿಸುತ ಎನ್ನುವ ಹಾಗೆ ಈ ಭೀಕರ ಗಾಳಿಯು ಎಲ್ಲವನ್ನು ನುಂಗಿಹಾಕುವ ರೀತಿಯಲ್ಲಿದ್ದು ಅದು ಅಮೂರ್ತ ಕಲ್ಪನೆಯಿಂದ ಮೂರ್ತದ ಕಲ್ಪನೆಗೆ ಓದುಗರನ್ನು ಕೊಂಡೊಯ್ಯುತ್ತದೆ.

ಗಾಳಿಯ ಭೀಕರವಾದ ಬಿರುಸನ್ನು 'ರ' ಕಾರಗಳು ಮತ್ತು 'ವೋ' ಕಾರಗಳು ಮತ್ತೆ ಮತ್ತೆ ಪುನರುಚ್ಚಾರಣೆಯು ಕೇಳುಗರಲ್ಲಿ ಹಿತವೆನಿಸುತ್ತದೆ. ಜೊತೆಗೆ ಪದ್ಯದ ಚರಣಗಳ ಅಬ್ಬರದ ಶಬ್ದಗಳು ಸ್ವಾರಸ್ಯಭರಿತವಾದ ಪ್ರಾಸಗಳು ತುಂಬಾ ಸೊಗಸಾಗಿವೆ. ಭಾಷೆಯ ಬಳಕೆಯು ಅನನ್ಯವಾಗಿದೆ. ಮುಂದಿನ ಚರಣದಲ್ಲಿ

"ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ ಹೊಲದೆತ್ತಿಗೆ ದನ ಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದ ಕಿಚ್ಚನು ಊದಲು ಹಾರುತ"

ಇದರಲ್ಲಿ ತೆಂಕಣ ಗಾಳಿಯ ಹಕ್ಕಿಯ ಕಣ್ಣಿಗೆ, ಧೂಳಿನ ಕಾಡಿಗೆ ಇಕ್ಕುತ್ತ, ಹೊಲದೆತ್ತು, ದನ, ಆಡುಗಳನ್ನು ಹಟ್ಟಿಗೆ ಅಟ್ಟುತ್ತ, ಕಾಡಿಗೆ ಸಿಕ್ಕಿದ ಕಿಚ್ಚನ್ನು ಊದಲು ಬರುವ ವರ್ಣನೆಯು ಕವಿಯ ಚಮತ್ಕಾರವಾಗಿದೆ ಎನ್ನಬಹುದು. ಇಲ್ಲಿ ಬರುವ 'ಕಾಡಿಗೆ' ಎನ್ನುವ ಅಂತ್ಯಪ್ರಾಸವು ಬಹು ಸೊಗಸಾಗಿದೆ. ಈ ಕವಿಯ ಕೈಯಲ್ಲಿ ಸಾಮಾನ್ಯ ಪದಗಳು ಸಿಕ್ಕರೂ ಅವರು ಬಳಸುವ ಭಾಷಾ ಶೈಲಿಯಲ್ಲಿ ಅವು ಇನ್ನು ಹೆಚ್ಚಿನ ಅರ್ಥಪೂರ್ಣವಾಗಿ ಬರುತ್ತವೆ. ಅದರಲ್ಲಿ ಬರುವ, ಪುನರುಕ್ತಿ, ಪ್ರಾಸಪದಗಳು ಮತ್ತು ಶಬ್ದಗಳು ಕಿವಿಗಳಿಗೆ ಇಂಪನ್ನು ತರುತ್ತವೆ. ಇಡೀ ಕವನವು ಓದಿದಾಗ ಆ ತೆಂಕಣ ಗಾಳಿಯ ರುದ್ರನರ್ತನವೇ ಕಣ್ಣಿಗೆ ಕಟ್ಟಿದಂತಾಗುತ್ತದೆ.

ನೀ, ರೇ, ಹಿರೇಮಠರ ಚಂದಿರನೇತಕೆ ಓಡುವನಮ್ಮ...

"ಚಂದಿರನೇತಕೆ ಓಡುವನಮ್ಮ
ಮೋಡಕೆ ಹೆದರಿಹನೇ
ಬೆಳ್ಳಿಯ ಮೋಡದ ಅಲೆಗಳ ಕಂಡು
ಚಂದಿರ ಬೆದರಿಹನೇ
ಹಿಂಜಿದ ಅರಳೆಯು ಗಾಳಿಗೆ ಹಾರಿ
ಮೋಡಗಳಾಗಿಹವೇ"[೧೦]

ಮುದ್ದು ಮಕ್ಕಳ ತಲೆಯಲ್ಲಿ ಸದಾ ಯಾವುದಾದರೊಂದು ಪ್ರಶ್ನೆಯು ಕಾಡುತ್ತಿರುತ್ತದೆ. ಹೀಗೆ ಕಾಡುವ ಪ್ರಶ್ನೆಯ ಹಿಂದೆ ಅವರಲ್ಲಿ ಹಲವಾರು ರೀತಿಯ ಕುತೂಹಲವಿರುತ್ತದೆ. ಇಂತ ಪ್ರಶ್ನೆಯನ್ನೆ ಒಳಗೊಂಡಿರುವಂತಹ ಈ ಚಂದಿರನೇತಕೆ ಓಡುವನಮ್ಮ ಕವಿತೆಯದಾಗಿದೆ.

ಮಗು ತನ್ನ ಅಮ್ಮನನ್ನು ತನಗೆ ಪ್ರೀತಿಯ ಮಾಮನೆನಿಸಿದ ಚಂದಮಾಮನನ್ನು ಕುರಿತು ಚಂದಿರನೇತಕೆ ಓಡುವನಮ್ಮ? ಎಂದು ಪ್ರಶ್ನಿಸುತ್ತಾ ಚಂದಿರನು ಮೋಡಕೆ ಆ ಮೋಡಗಳ ಆರ್ಭಟವಾದ ಶಬ್ದಕ್ಕೆ ಹೆದರಿದನೆ? ಇಲ್ಲಿ ಆ ಬಿಳಿ ಮೋಡಗಳ ಅಲೆಗಳನ್ನು ಕಂಡು ಹೆದರಿ ಹೋಡುತ್ತಿರುವನೆನಮ್ಮ ಎಂದು ಪ್ರಶ್ನೆಯನ್ನು ಕೇಳುತ್ತದೆ. ಮುಂದುವರೆದು ಬಿಳಿಯರ ಹತ್ತಿಯ ಅರಳೆಯು ಗಾಳಿಗೇನಾದರೂ ಹಾರಿ ಮೋಡಗಳಾಗಿಹವೇ? ಈ ಅರಳೆ ಏನಾದರೂ ಚಂದ್ರನ ಮೈಯನು ಸುತ್ತಿಹನೇ? ಮತ್ತು ಮೋಡಗಳು ಮಂಜುಗಡ್ಡೆಯಂತೆ ಕರಗಿ ಹರಿಯುತ್ತಿರುವುದನ್ನು ಕಂಡು ಚಂದಿರನು ನಗುತಿಹನು ನೋಡಮ್ಮ, ಆಕಾಶದಲ್ಲಿ ಕರಗಿ ಮೋಡಗಳ ಹತ್ತಿರನೆ ಸುತ್ತುವರೆತಿಹನು, ಈ ಮುದ್ದಾದ ಚಂದಿರನು ನನ್ನ ಗೆಳೆಯನಮ್ಮ ನನ್ನೊಂದಿಗೆ ಸದಾ ಆಡುತಿಹನು ನೋಡಮ್ಮ ನಾನೂ ಓಡಿದರೆ ಅವನು ಓಡುವನಮ್ಮ. ಈ ಚಂದಿರನನ್ನು ಮಗು ಬಾ ಬಾ ಚಂದಿರ ಬೆಳ್ಳಿಯ ಚಂದಿರ ನಮ್ಮ ಮನೆಗೆ, ನಿನ್ನ ಬೆಳಕು ನಮ್ಮ ಮನಸ್ಸನ್ನೆ ಬೆಳಗಲಿ ಎನ್ನುವನು.

ಹೀಗೆ ಈ ಕವನದಲ್ಲಿ ಕವಿಗಳು ಮಗುವಿನ ಮೂಲಕ ಅದು ತನ್ನ ಅಮ್ಮನಿಗೆ ಚಂದಿರನನ್ನು ಕುರಿತು ಪ್ರಶ್ನೆಯನ್ನು ಹಾಕುತ್ತಾ ತಾನು ಚಂದಿರನ ಗೆಳೆಯ ಎನ್ನುತ್ತದೆ. ಈ ಕವಿತೆಯು ಕೇಳಲು ತುಂಬಾ ಸರಳವಾದ ವಸ್ತುವನ್ನು ಒಳಗೊಂಡಿದೆ ಎನಿಸಿದರೂ ಇದರಲ್ಲಿರುವ, ಅರ್ಥವು ಹಿರಿದು ಎಂದು ಹೇಳಬಹುದು. ಇದರಲ್ಲಿ ಬಳಸಿರುವ ಭಾಷೆ ತುಂಬಾ ಸರಳವಾದ ಭಾಷೆಯಾಗಿದೆ. ಈ ಪುಟ್ಟ ಕವನವು ಕೇಳಲು ಹಿತವೆನಿಸುವುದರ ಜೊತೆಗೆ ಲಾಲಿತ್ಯಪೂರ್ಣವಾಗಿದೆ. ಇದರಲ್ಲಿ ವ್ಯಾಕರಣಾಂಶಗಳಾಗಲಿ, ಒತ್ತಕ್ಷರಗಳ ಬಳಕೆಯಾಗಲಿ ಮಾಡದೆ ಮಕ್ಕಳಿಗೆ ಕೇಳಲು ಹಿತವೆನಿಸುವ ಭಾಷೆಯ ಬಳಕೆಯನ್ನು ಮಾಡಲಾಗಿದೆ. ಜೊತೆಗೆ ಈ ಕವನದ ಮೂಲಕ ಮಕ್ಕಳಲ್ಲಿ ವಿಮರ್ಶಾ ಗುಣ ಬೆಳೆಸುವುದು ಒಳ್ಳೆಯದು. ಅವು ಯಾವುದನ್ನು ಪ್ರಶ್ನಿಸದೇ ಒಪ್ಪಬಾರದು ಎನ್ನುವ ಅಭಿಲಾಷೆಯಿಂದ ಮಕ್ಕಳಲ್ಲಿ ಪ್ರಶ್ನಿಸುವ ಗುಣವನ್ನು ಬೆಳೆಸುವಲ್ಲಿ ಈ ಕವನವು ಸಹಕಾರಿಯಾಗಿದೆ.

ಇನ್ನು ಭಾಷಿಕವಾಗಿ ಮಕ್ಕಳ ಕಥೆಯನ್ನು ಗಮನಿಸುವುದಾದರೆ ಪಂಜೆಯ ಮಂಗೇಶರಾಯರ 'ಹೊಟ್ಟೆಯ ಅವಯವಗಳು' ಎಂಬ ಕಥೆಯು ಮಾನವನ ದೇಹದ ಪ್ರತಿಯೊಂದು ಅಂಗಾಂಗಗಳ ಕೆಲಸವನ್ನು ಹಾಗೂ ಅದರ ಪ್ರಾಮುಖ್ಯತೆಯನ್ನು ಪರಿಚಯಿಸುವ ಕಥಾಂಶವನ್ನು ಹೊಂದಿದೆ.

ಒಕ್ಕಲಿಗನೊಬ್ಬನು ತಾವು ದಿನವೆಲ್ಲ ಕೆಲಸ ಮಾಡಿ ದಣಿದು ಸಂಜೆ ಮನೆಗೆ ಬಂದು, ಊಟ ಮಾಡಿ ಚಾಪೆ ಮೇಲೆ ಮಲಗಿದನು. ಕೂಡಲೇ ಅವನಿಗೆ ಚೆನ್ನಾಗಿ ನಿದ್ದೆ ಬಂದಿತು. ಆತ ಗೊರಕೆಯನ್ನು ಹೊಡೆಯಲು ಪ್ರಾರಂಭಿಸಿದನು. ಆಗ ಅವನ ಕೈ-ಕಾಲುಗಳಿಗೆ ನಿದ್ದೆ ಬರಲಿಲ್ಲ. ಕಾಲುಗಳು, ಕೈಗಳನ್ನು ಮುಟ್ಟಿ ಎಚ್ಚರಿಸಿ, "ಅಣ್ಣಗಳಿರಾ! ನೋಡಿರಿ, ನಮ್ಮ ಧನಿ ಹೊತ್ತಾರೆ ಹಾಸಿಗೆಯಿಂದ ಎದ್ದನಂತರ ಈವರೆಗೆ ನಮಗೆ ಒಂದಿಷ್ಟು ಬಿಡುವು ದೊರೆತಿಲ್ಲ.

ಇಡೀ ದೇಹವನ್ನು ಹೊತ್ತು ಎಲ್ಲೆಲ್ಲಿ ಕಲ್ಲು ಮುಳ್ಳುಗಳಲ್ಲಿ ನಡೆದು ಸಾಕಾಯಿತು. ನಮ್ಮ ಗತಿ ಯಾವಾಗಲೂ ಹೀಗೆಯೇ"[೧೧] ಎಂದು ಗೊಣಗುಟ್ಟಿದವು.

ಆಗ ಕೈಗಳು "ನಾವು ಏನಾದರೂ ಸುಮ್ಮನೆ ಇದ್ದೇವೆಯೋ? ನೇಗಿಲು ಹಿಡಿಯುವುದು, ಕತ್ತಿಯಿಂದ ಸೊಪ್ಪು ಕಟ್ಟಿಗೆ ಕಡಿಯುವುದು, ಮಧ್ಯಾಹ್ನದ ನಂತರ ಬತ್ತ ಕುಟ್ಟುವುದು, ಹೀಗೆಲ್ಲ ಕೆಲಸದ ಬೆನ್ನಿಗೆ ಕೆಲಸ ಮಾಡಿ ದಣಿದೆವು ನಮಗೂ ವಿರಾಮವಿಲ್ಲ"[೧೨] ಎಂದು ಮರುಗಿದವು.

ನಂತರ ಕೈ ಮತ್ತು ಕಾಲುಗಳು ಎರಡು ಸೇರಿ ಹೊಟ್ಟೆಯನ್ನು ಬೈಯಲು ಆರಂಭಿಸಿದವು. ಆ ಶಬ್ದವನ್ನು ಕೇಳಿದ ಕಿವಿಗಳು, ಕಣ್ಣುಗಳು ಈ ಬಕಾಶೂರನಾದ ಹೊಟ್ಟೆಗೆ ಬುದ್ಧಿ ಕಲಿಸಬೇಕೆಂದು ಯೋಚಿಸಿ, ಬಾಯಿಯನ್ನು ತಮ್ಮ ಕಡೆಗೆ ಸೇರಿಸಿಕೊಂಡರು. ಮೂಗನ್ನು ತಮ್ಮ ವಶಕ್ಕೆ ತೆಗೆದುಕೊಂಡು ಎಲ್ಲರು ಸೇರಿ ಅಂದರೆ ಕೈಕಾಲು, ಮೂಗು, ಬಾಯಿ, ಕಿವಿ, ಕಣ್ಣುಗಳೆಲ್ಲ ಒಟ್ಟಿಗೆ ಸೇರಿಕೊಂಡು ಹೊಟ್ಟೆಗೆ ಬುದ್ದಿ ಕಲಿಸಲು ನಿರತರಾದರು. ಅದರಂತೆಯೇ ಎಲ್ಲ ಅಂಗಾಂಗಗಳು ಸೇರಿ, ಒಕ್ಕಲಿಗನ ಹೊಟ್ಟೆಗೆ ಬುದ್ಧಿಕಲಿಸಿ ಅವನಿಗೆ ಊಟವಿಲ್ಲದೆ ಸುಸ್ತಾಗಿ ಜ್ವರ ಬಾದೆಯು ಬಂದಿತು.

ಈ ಕಥೆಯಲ್ಲಿ ದೇಹದ ಅಂಗಾಂಗಗಳು ತಮ್ಮ ಕೋಪವನ್ನು ನಿರೂಪಿಸಬಲ್ಲವು. ಆಗ ದೇಹಕ್ಕೆ ಜ್ವರ ಬರುವುದು ವೈಜ್ಞಾನಿಕವಾದರೂ ಅದರಲ್ಲಿ ದೇಹದ ಅಂಗಾಂಗಗಳು ಮಾಡುವ ಮುಷ್ಕರ ಪ್ರಸಂಗವನ್ನು ಒಂದು ಸುಂದರ ಕಲ್ಪನೆಯಲ್ಲಿ ಕಟ್ಟಿರುವುದನ್ನು ಕಾಣಬಹುದು. ಇದರೊಟ್ಟಿಗೆ ಜ್ವರದ ಲಕ್ಷಣಗಳನ್ನು ಪರಿಚಯಿಸುವರು. ಕೈ-ಕಾಲುಗಳ ನೋವು, ಊಟವು ರುಚಿಸದೆ ವಾಂತಿ ಆಗುವುದು, ನಾಲಿಗೆಗೆ ರುಚಿಯೇ ಸಿಗದಂತಾಗುವುದು ಮೊದಲಾದವು ನಿಶ್ಶಕ್ತವಾಗುವವು. ಮುಂದೆ ಈ ದೇಹದ ಅವಯವಗಳಿಗೆ ಬುದ್ಧಿಯು, ನೀವು ಮಾಡುತ್ತಿರುವುದು ಸರಿಯಲ್ಲ ಎಂದು ತಿಳುವಳಿಕೆಯನ್ನು ಹೇಳುವುದು ಕಥೆಯ ವಿಶೇಷವೆನಿಸಿದೆ. ನಂತರ ತಮ್ಮ ತಪ್ಪಿನ ಅರಿವಾಗಿ ಬುದ್ಧಿಯು ಹೇಳಿದ ಮಾತುಗಳು ಸರಿಯೆಂದು ತಮ್ಮ ತಪ್ಪನ್ನು ಒಪ್ಪಿಕೊಂಡು ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಲು ಪ್ರಾರಂಭಿಸಿದವು. ಆಗ ಒಕ್ಕಲಿಗನಿಗೆ ಜ್ವರ ಬಿಟ್ಟು ಹೋಯಿತು.

ಈ ಕಥೆಯಲ್ಲಿ ಪಂಜೆಯವರು ದೇಹದ ಅಂಗಾಂಗಗಳ ಪ್ರಾಮುಖ್ಯತೆಯನ್ನು ಪರಿಚಯಿಸುತ್ತಾ ಅವುಗಳ ಕೆಲಸ ಕಾರ್ಯಗಳನ್ನು ವೈಜ್ಞಾನಿಕವಾಗಿ ಹೇಳುತ್ತಾರೆ. ಒಂದು ವೇಳೆ ಈ ಅಂಗಾಂಗಳು ಸರಿಯಾಗಿ ಕೆಲಸ ಮಾಡದೆ ಸೋಮಾರಿಗಳಾದರೆ ದೇಹವು ಸೋಮಾರಿಯಾಗುವುದರ ಜೊತೆಗೆ ಅನಾರೋಗ್ಯವೂ ಭಾದಿಸುತ್ತದೆ ಎಂಬುದನ್ನು ಈ ಕಥೆಯ ಮೂಲಕವೇ ಹೇಳುತ್ತಾರೆ.

ಈ ಕಥೆಯಲ್ಲಿ ಭಾಷೆಯು ತುಂಬಾ ಸರಳವಾಗಿದೆ. ಅಲ್ಲದೆ ಜರ್ಮದ ದಡ್ಡುಕಟ್ಟು, ಮುಳ್ಳುಕಂತು, ಕೆಲಸದ ಬೆನ್ನಿಗೆ ಕೆಲಸ ಮಾಡು, ಬಾತುಕೊಳ್ಳು, ಬೇನೆ, ಗಂಜಿ, ಕೈಸೆಳೆತ, ಉಪ್ಪಿನಕಾಯಿ ಇಕ್ಕು, ಅಕ್ಕಚ್ಚಿ ನೀರು, ಸುಸಿ, ಶ್ವಾಸ, ಪದಾರ್ಥ, ಗರ್ವ, ವಿಚಾರ, ಬಿಸಾಡು,

ಮೆಲ್ಲಮೆಲ್ಲ, ಅವಸ್ಥೆ, ಮದ್ದು, (ಔಷಧ) ಮೊದಲಾದ ಪದಗಳು ದಕ್ಷಿಣ ಕನ್ನಡ ಪರಿಸರದ ಪ್ರಾದೇಶಿಕ ಭಾಷಾ ಪದಗಳಾಗವೆ. ಜೊತೆಗೆ ಈ ಕಥೆಯು 'ಇನ್ನೊಬ್ಬರನ್ನು ದೂಸಿಸದೆ, ತನ್ನ ಕೆಲಸವನ್ನು ತಾನು ಸರಿಯಾಗಿ ಮಾಡುವುದನ್ನು ಕಲಿಯಬೇಕು' ಎನ್ನುವ ನೀತಿಯನ್ನು ಹೇಳುತ್ತದೆ.

೫.೩. ಮಕ್ಕಳ ಸಾಹಿತ್ಯದಲ್ಲಿ ಬಳಕೆಯಾದ ಪ್ರಾದೇಶಿಕ ಭಾಷೆ

ಕನ್ನಡದಲ್ಲಿ ಪ್ರಾದೇಶಿಕವಾಗಿ ಕಲಬುರ್ಗಿ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ, ಮೈಸೂರು ಕನ್ನಡ ಎಂಬ ಪ್ರಮುಖ ನಾಲ್ಕು ಪ್ರಾದೇಶಿಕ ಉಪಭಾಷೆಗಳಿವೆ. ಈ ನಾಲ್ಕು ಪ್ರಾದೇಶಿಕ ಉಪಭಾಷೆಗಳಿದ್ದರೂ ಒಂದೊಂದು ಜಿಲ್ಲೆಗೂ ಒಂದೊಂದು ಪ್ರಭೇದಾತ್ಮಕ ವ್ಯತ್ಯಾಸಗಳಿವೆ. ಇದೇ ರೀತಿ ಸಾಮಾಜಿಕ ಉಪಭಾಷೆಗಳನ್ನು, ಪ್ರಭೇದಗಳನ್ನು ನಾವು ಗುರುತಿಸಬಹುದು. ಈ ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆ ಹಾಗೂ ಪ್ರಭೇದ ಭಾಷೆಗಳಿಂದಾಗಿ ಮಕ್ಕಳ ಸಾಹಿತ್ಯದ ಭಾಷೆಯಲ್ಲಿಯೂ ಅದರಲ್ಲಿ ಪ್ರಾದೇಶಿಕ ಶೈಲಿಯಲ್ಲಿ ಮಕ್ಕಳ ಸಾಹಿತ್ಯದ ಭಾಷೆಯ ಬಳಕೆಯಲ್ಲಿ ಹಲವಾರು ಭಿನ್ನತೆಗಳನ್ನು ಗುರುತಿಸಬಹುದು.

ಉದಾಹರಣೆಯಾಗಿ ಹೇಳುವುದಾದರೆ 'ಅಪ್ಪ' ಎನ್ನುವ ಒಂದು ಪದಕ್ಕೆ ಸಂವಾದಿಯಾಗಿ ಪ್ರಾದೇಶಿಕ ಶೈಲಿಯ ಹಿನ್ನೆಲೆಯಲ್ಲಿ ಯಣ್ಣ, ಯಪ್ಪ, ಅಪ್ಪಯ್ಯ, ಅಯ್ಯಾ, ಅಣ್ಣಯ್ಯ, ಅಪ್ಪಾಜಿ, ಪಪ್ಪಾಜಿ, ಅಪ್ಪಪ್ಪ, ಅಪ್ಪ, ಅಣ್ಣಾ, ಡ್ಯಾಡಿ, ಪಪ್ಪಾ ಮೊದಲಾದವು. ಹೀಗೆ 'ಅಮ್ಮ' ಎನ್ನುವ ಪದಕ್ಕೆ ಅವ್ವ, ಅಕ್ಕ, ಅವ್ವಾಜಿ, ಯಮ್ಮ, ಮಮ್ಮಿ, ಮಮ್ಮ ಮೊದಲಾದವು. ಈ ರೀತಿಯ ವಿಶಿಷ್ಟ ಪದಗಳು ಮಕ್ಕಳ ಸಾಹಿತ್ಯದಲ್ಲಿ ಬಳಕೆಯಾದಾಗ ಆ ಪದಗಳು ಯಾವ ಭಾಷೆ, ಉಪಭಾಷೆ ಇಲ್ಲವೆ ಪ್ರಭೇದ ಭಾಷೆಯಲ್ಲಿ ಬಳಕೆಯಾಗಿವೆಯೋ ಅಲ್ಲಿರುವ ಮಕ್ಕಳಿಗೆ ಅವು ಸುಲಭವಾಗಿ ಅರ್ಥವಾಗುತ್ತವೆ. ಆದರೆ ಆ ಪದಗಳು ಆ ಪ್ರದೇಶವನ್ನು ಬಿಟ್ಟು ಇತರೇ ಪ್ರದೇಶಗಳ ಮಕ್ಕಳಿಗೆ ಅರ್ಥವಾಗಲಾರವೆನ್ನಬಹುದು.

ಹೀಗಾಗಿ ಮಕ್ಕಳ ಸಾಹಿತ್ಯದ ಭಾಷೆಯ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಸಾಹಿತ್ಯದ ಶಿಷ್ಟ ಭಾಷೆ ಮತ್ತು ಮಕ್ಕಳ ಸಾಹಿತ್ಯದ ಪ್ರಾದೇಶಿಕ ಭಾಷೆ ಎಂದು ವಿಭಾಗಿಸಿಕೊಳ್ಳುವುದು ಉತ್ತಮವೆನಿಸುತ್ತದೆ. ಇಲ್ಲಿ ಮಕ್ಕಳ ಶಿಷ್ಟ ಸಾಹಿತ್ಯದ ಭಾಷೆಯನ್ನು ಬರೆಯುವಾಗ ಸಾಹಿತ್ಯ ರಚನಕಾರರು ಮಕ್ಕಳ ವಯಸ್ಸು, ಲಿಂಗ, ಅವರ ಆಸಕ್ತಿ–ಅಭಿರುಚಿಗಳಿಗನುಸಾರವಾಗಿ ಪದಗಳ ಪ್ರಯೋಗವನ್ನು ಮಾಡಬೇಕಾಗುತ್ತದೆ.

ಒಂದು ಅರ್ಥಕ್ಕೆ ಹಲವಾರು ಅರ್ಥಗಳು ಬರುವ ಭಾಷೆಯ ರಚನೆ, ವ್ಯಾಕರಣ, ಛಂದಸ್ಸುಗಳನ್ನು ಬಳಸುವಾಗ ತುಂಬಾ ಎಚ್ಚರಿಕೆಯನ್ನು ವಹಿಸುವ ಅಗತ್ಯವಿರುತ್ತದೆ. ಇಲ್ಲಿ ಮಕ್ಕಳಿಗೆ ಅಹಿತಕರವೆನಿಸುವ ಯಾವ ಪದಗಳನ್ನು ತಮ್ಮ ಸಾಹಿತ್ಯದಲ್ಲಿ ರಚಿಸಬಾರದು. ಇದರಲ್ಲಿ ಮಕ್ಕಳಿಗೆ ಹಿತವೆನಿಸುವ ಸುಲಭವಾಗಿ ಅರ್ಥವಾಗುವ ಪ್ರಾಸಪದ, ಶಬ್ದಜೋಡಣೆ,

ವಾಕ್ಯರಚನೆಗಳಿರಬೇಕು. ಹಾಗೆಯೇ ಅವರಿಗೆ ಹಿಡಿಸುವ ಗೇಯತೆ, ಲಾಲಿತ್ಯತೆ, ಸಂಕ್ಷಿಪ್ತತೆ, ಕಷ್ಟವೆನಿಸುವ ಪದಗಳಿಲ್ಲದ ಕುತೂಹಲ ಕೆರಳಿಸುವಂತ ಪದಗಳ ಸಾಹಿತ್ಯವಿರಬೇಕು ಜೊತೆಗೆ ಭಾಷೆಯ ದೋಷಗಳು ಇರಬಾರದು. ಇಂತ ಸಂಪತ್‌ಭರಿತ ಸಾಹಿತ್ಯ ರಚನೆಯನ್ನು ಇದುವರೆಗಿನ ಅನೇಕ ನಮ್ಮ ಹಿರಿಯ ಮಕ್ಕಳ ಸಾಹಿತಿಗಳು ರಚನೆ ಮಾಡಿರುವುದನ್ನು ಕಾಣಬಹುದಾಗಿದೆ. ಉದಾಹರಣೆಯಾಗಿ ಕೆಲವು ಕವನಗಳನ್ನು ನೋಡುವುದಾದರೆ,

ಬೇಂದ್ರೆಯವರ ಕರಡೀ ಕುಣಿತ...

"ಕಬ್ಬಿಣ ಕೈಕಡಗ, ಕುಣಿಕೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ!
ಗುಣುಗುಣುಗುಟ್ಟುತ ಕಡಗವ ಕುಟ್ಟುತ
ಕರಡಿಯನಾಡಿಸುತ ನಿಂದಾನ!
ಯಾವ ಕಾಡಡವಿಯಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ?
ಧಣಿಯರ ಮನಿ ಮುಂದ ಕಾವಲು ಮಾಡಣ್ಣ
ಧಣಿ ದಾನ ಕೊಡುವನು ಅಂದಾನ..."[೧೩]

ಕನ್ನಡದಲ್ಲಿ ಪ್ರಾದೇಶಿಕವಾಗಿ ತುಂಗಭದ್ರಾ ನದಿಯ ಉತ್ತರ ಭಾಗದ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆಯನ್ನು ಉತ್ತರ ಕನ್ನಡ ಭಾಷೆಯೆಂದು ಕರೆಸಿಕೊಳ್ಳುವ, ಧಾರವಾಡ ಕನ್ನಡದ ಭಾಷೆಯು ಈ ಕವನದಲ್ಲಿ ಬಳಕೆಯನ್ನು ಮಾಡಿಕೊಳ್ಳಲಾಗಿದೆ.

"ಶಬ್ದದ ಅಂತ್ಯದಲ್ಲಿ ಇರುವ 'ಎ' ಸ್ವರ ಉತ್ತರ ಕರ್ನಾಟಕದ ಕನ್ನಡ ಭಾಷೆಯಲ್ಲಿ 'ಇ' ಕಾರವಾಗಿ ಉಚ್ಚರಿಸಲ್ಪಡುತ್ತದೆ."[೧೪]

ಅಂದರೆ ಧಾರವಾಡ ಕನ್ನಡದಲ್ಲಿ ಕೆರಿ, ಮನಿ, ಆನೆ, ಕುದುರಿ, ಕರಡಿ, ಒಂಟಿ, ಹಂತ್ಯಾನ, ಬ್ಯಾಂಡ, ಕೀಲಿ ಈ ತರಹದ ಬಳಕೆಯ ಪದಗಳನ್ನು ಕಾಣುತ್ತೇವೆ. ಈ ಪ್ರಾದೇಶಿಕ ಭಾಷೆಯ ಪ್ರಭಾವವನ್ನು ಈ ಪದ್ಯದಲ್ಲಿ ಕಾಣಬಹುದು. 'ಕಬ್ಬಿಣ ಕೈಗಡಗ, ಕುಣಿಕೋಲು ಕೂದಲು, ಕಂಬಳಿ ಹೊದ್ದಾಂವ ಬಂದಾನ' ಈ ಚರಣಗಳಲ್ಲಿ ಕಂಬಳಿ, ಬಂದಾನ, ನಿಂದಾನ, ತಂದಾನ, ಮನಿ, ಅಂದಾನ ಪದಗಳು ಪಕ್ಕಾ ಧಾರವಾಡ ಕನ್ನಡದ ಪದಗಳಾಗಿ ಪ್ರಾದೇಶಿಕ ಭಾಷೆಯನ್ನು ಎತ್ತಿ ಹಿಡಿದಿವೆ. ಜೊತೆಗೆ ಕವನದ ಉಳಿದ ಚರಣಗಳಲ್ಲಿಯು ಬರುವ ಪದಗಳು ಉಂಡಾನ, ಬರ್ರೆವ್ವ, ತರ್ರೆವ್ವ, ಅಂಜೀಕಿ, ಗಿಂಜೀಕಿ, ಹೊಟ್ಟಿ ಕುಣಿಸ್ಯಾನ, ನಡಿಸ್ಯಾನ ಮೊದಲಾದ ಪದಗಳು ಸಹ ಪ್ರಾದೇಶಿಕ ಶೈಲಿಯಲ್ಲಿಯೇ ಬಳಕೆಯಾಗಿರುವುದನ್ನು ಕಾಣುತ್ತೇವೆ. ಅಲ್ಲದೆ ಈ ಕವನವು ಕೇಳಲು ಸಹ ನಾದಮಯತೆಯಿಂದ ಕೂಡಿ, ಪ್ರಾದೇಶಿಕ ಶೈಲಿಯಲ್ಲಿ ಹಾಡಿದಾಗ ಮಕ್ಕಳಿಗೆ ಕುತೂಹಲವನ್ನು ಹುಟ್ಟಿಸುವಲ್ಲಿ ಈ ಕವಿತೆ ಯಶಸ್ವಿಯಾಗಿದೆ ಎನ್ನಬಹುದು.

ಇನ್ನು ದ.ರಾ. ಬೇಂದ್ರೆಯವರದೆ ಆದ ಇನ್ನೊಂದು ಕವನವನ್ನು ಗಮನಿಸಿದಾಗ

"ಕುಣಿಯೋಣು ಬಾರ
ಕುಣಿಯೋಣು ಬಾ
ಆಕಾಗಿ
ಯಾಕಾಗಿ
ಕುಣಿಯೋದು ಬೇಕಾಗಿ
ಇಲ್ಲ ಬಣ್ಣದ ಸೋಗಿ! ಕುಣಿ....
ಹಿಗ್ಗು ಹಾಕಿತು ಕ್ಯಾಕಿ
ಇರಲಾರೆನೇಕಾಗಿ
ಬಾ, ಬಾರ ನನ್ನಾಕಿ! ಕುಣಿ..."[೧೫]

ಈ ಕವನದಲ್ಲೂ ನಾವು ಧಾರವಾಡ ಕನ್ನಡದ ಪ್ರಾದೇಶಿಕ ಭಾಷಾ ಪ್ರಭೇದವನ್ನೆ ಕಾಣಬಹುದು. ಇದರಲ್ಲಿ ಬಾರುವ ಆಕಾಗಿ, ಯಾಕಾಗಿ, ಬೇಕಾಗಿ, ಸೋಗಿ, ಕ್ಯಾಕಿ, ನೇಕಾಗಿ, ನನ್ನಾಕಿ ಮೊದಲಾದ ಪದಗಳೆಲ್ಲವೂ ಶಬ್ದಾಂತ್ಯದಲ್ಲಿ ಬರುವಾಗ 'ಇ' ಕಾರವಾಗಿಯೇ ಬಂದಿರುವುದನ್ನು ವಿಶೇಷವಾಗಿ ಕಾಣಬಹುದು. ಹಾಗೆಯೇ ಕವನದ ಉದ್ದಕ್ಕೂ ಈ 'ಇ' ಕಾರಾಂತ್ಯ ಪದಗಳಿರುವುದನ್ನು ಗಮನಿಸಲಾಗಿದೆ.

ಇನ್ನೂ ಕರಾವಳಿ ಕನ್ನಡದ ಪ್ರದೇಶಗಳು ಭಾಷಾ ವ್ಯತ್ಯಾಸವನ್ನು ಒಂದು ಉದಾಹರಣೆಯನ್ನು ನೋಡುವುದಾದರೆ ಈ ಕರಾವಳಿ ಭಾಗದಲ್ಲಿ ಕೊಂಕಣಿ, ಹವ್ಯಕ, ತುಳು ಮತ್ತು ಕನ್ನಡ ಈ ನಾಲ್ಕು ಭಾಷೆಗಳು ಬಳಕೆಯಲ್ಲಿರುವುದನ್ನು ಕಾಣುತ್ತೇವೆ. ಇಲ್ಲಿ ಕನ್ನಡದ ಶಬ್ದಗಳಲ್ಲಿ ನಾಸಿಕ ಧ್ವನಿಯ ಬಳಕೆ ವಿಶಿಷ್ಟವಾಗಿದ್ದು ಈ ಬಳಕೆ ಬೇರ್ಯಾವ 'ಉ' ಸ್ವರಗಳು 'ಎ' ಮತ್ತು 'ಒ' ಸ್ವರಗಳಾಗಿ ಬಳಕೆಗೊಳ್ಳುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕರಾವಳಿ ಕನ್ನಡವು ಹವ್ಯಕ ಕನ್ನಡ, ಗೌಡಕನ್ನಡ, ಶಿವಳ್ಳಿ ಕನ್ನಡ, ತುಳು ಮತ್ತು ಕೊಂಕಣಿ ಭಾಷೆಗಳ ಮಿಶ್ರಣವಿದ್ದು ಈ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಅನೇಕ ವೈವಿಧ್ಯ ಭಾಷಾ ಬಳಕೆಯನ್ನು ಕಾಣಬಹುದು.

ವೈದೇಹಿಯವರ 'ನಾಯಿಮರಿ' ನಾಟಕದ ಕೆಲವು ಸಂಭಾಷಣೆಗಳನ್ನು ಗಮನಿಸಿದರೆ ಈ ಭಾಷಾ ಬಳಕೆಯನ್ನು ಕಾಣಬಹುದು.

ಕಳ್ಳರ ಕಾಟದ ನಿವಾರಣೆಗಾಗಿ ಅಜ್ಜಿ ತಮ್ಮ ತೋಟಕ್ಕೊಂದು ನಾಯಿಮರಿಯನ್ನು ತಂದ ಮೇಲೆ ನಾಯಿಮರಿಯನ್ನು ಮನೆಯ ಮುಂದೆ ಕಟ್ಟುವಾಗ ಪಂಚರಂಗಿ (ಗಿಳಿ)ಯು ತಾನಿದ್ದ ಪಂಜರದಿಂದಲೇ ಮಾತನಾಡುತ್ತಿರುವುದು, ನಾಯಿಮರಿಯನ್ನು ಕುರಿತು.

ಪಂಚರಂಗಿ: ನೀನು ಬಂದದ್ದು ನನಗೊಂದು ಜೊತೆ ಆಯಿತು. ಅಬ್ಬಾ! ಇದುವರೆಗೂ ಎಷ್ಟು ಬೇಸರವಾಗುತ್ತಿತ್ತು ಗೊತ್ತಾ? ಸಣ್ಣಮ್ಮ ಶಾಲೆಗೆ ಹೋದರೆ, ಅಜ್ಜ ಪೇಟೆಗೆ ಹೋದರೆ, ಅಜ್ಜಿ ಮನೆಯಲ್ಲಿದ್ದರೆ ನಾನೊಬ್ಬಳೇ, ಮತ್ತು ಆ ಕಳ್ಳರು!

ನಾಯಿಮರಿ: ಕುಂಯ್ ಕುಂಯ್... ಕಳ್ಳರು!

ಮೆಣಸಿನ ಗಿಡ: ಹ್ಞಾಂ, ನಾನಂತೂ ಖಾರ, ತಿನ್ನಲಂತೂ ಅಲ್ಲ, ಕೊಯ್ಯುವುದು, ಬಿಸಾಡುವುದು, ಬುದ್ದಿಗೇಡಿಗಳು.

ಬಾಳೆಗಿಡ: ದುಷ್ಟರಪ್ಪಾ, ಇಂಥಾ ದುಷ್ಟರು ಬೇರೆ ಇಲ್ಲ, ಆ ಮಂಗಾಣಿ ಉಂಟಲ್ಲ ಅಬ್ಬಾ, ಒಂದು ಗೊನೆ ಬಿಡಲಿಕ್ಕಿಲ್ಲ, ಬಾಯಲ್ಲಿ ನೀರು ಬಿಡುತ್ತದೆ ಬರೀ ಆಸೆಬುರುಕ.

ಹೀಗೆ ಈ ಮೇಲಿನ ಸಂಭಾಷಣೆಯಲ್ಲಿ ಪೇಟೆ, ಕೊಯ್ಯುವುದು, ಬಿಸಾಡುವುದು, ಬುದ್ಧಿಗೇಡಿಗಳು, ದುಷ್ಟರು, ಉಂಟಲ್ಲ, ಬಿಡಲಿಕ್ಕಿಲ್ಲ ಈ ಎಲ್ಲಾ ಪದಗಳು ಕರಾವಳಿ ಕನ್ನಡದ ಪ್ರಾದೇಶಿಕ ಪದಗಳೇ ಆಗಿವೆ.

ಮುಂದೆ ಕಳ್ಳರಾದ ರಂಗಾಣಿ, ಮಂಗಾಣಿ, ಪಿಂಗಾಣಿಯರು ನಾಯಿಮರಿಯನ್ನು ಕಾಡಿನ ಮಧ್ಯೆ ಅದಕ್ಕೆ ಹೊಡೆದು ಮಾತನಾಡುತ್ತಿದ್ದಾರೆ. ಅದನ್ನು ಪಂಚರಂಗಿ ಕದ್ದು ಕೇಳಿಸಿಕೊಳ್ಳುತ್ತದೆ.

ಪಿಂಗಾಣಿ: ಆಚೆ ಕಾಡಿನಲ್ಲಿ ಇದನ್ನು ಎಸೆದು ಬಿಡುವ

ರಂಗಾಣಿ: ಇನ್ನು ಈಚೆಗೆ ಮುಖ ಹಾಕಬಾರದು ಅದು.

ಮಂಗಾಣಿ: ಸಾಯಲಿಕ್ಕೆ ಹೊರಟಿದೆ! ಮುಖ ಹಾಕುವ ಮಾತೆಲ್ಲಿ ಇನ್ನು.

ಪಿಂಗಾಣಿ: ಆಂ! ಮತ್ತೆ! ಮತ್ತೆ ಸೌಂಡ್ ಹೊರಡಿಸುತ್ತೀಯ! ಇನ್ನೊಂದು ಕೊಟ್ಟೆನೆಂದರೆ ಸೀದ ಮೇಲೆ ಹೋಗಬೇಕು ಹಾಗೆ.

ರಂಗಾಣಿ: ಯೇಯ್, ಬಿಡೋ ಪಾಪ, ಸಾಯುವವರೆಗೂ ಪೆಟ್ಟು ತಿನ್ನುವ ಹಣೆಬರಹ ಬೇಡ ಅದಕ್ಕೆ.

ಪಂಚರಂಗಿಯು ದಾರಿಯಲ್ಲಿ ಬರುತ್ತಿದ್ದ ಮುಸ್ತಫಾ ದರ್ಜಿಯವರನ್ನು ಪಿಸುಮಾತಿನಲ್ಲಿ ಮಾತನಾಡಿಸಿದಾಗ

ಪಂಚರಂಗಿ: ಮುಸ್ತಫಾ ದರ್ಜಿಯವರೇ?

ಮುಸ್ತಫಾ: ಯಾರದು?

ಪಂಚರಂಗಿ: ನಾನು ಪಂಚರಂಗಿ ಕಾಣದೇ? ಮೆಲ್ಲ ಮಾತಾಡಿ ಆಚೆಗೆ ಕೇಳಿಸಿತು.

ಮುಸ್ತಫಾ: ಅದೇ ಪಂಚರಂಗಿ! ಈಗಲೂ ಅದೇ ಅಂಗಿ!

ಪಂಚರಂಗಿ: ಅಂಗಿ ಕತೆ ಸಾಯಲಿ,

ಹೀಗೆ ಈ ನಾಟಕದ ಉದ್ದಕ್ಕೂ ಕರಾವಳಿ ಕನ್ನಡದ ಪ್ರಾದೇಶಿಕ ಭಾಷಾ ಶೈಲಿಯನ್ನು ಸೊಗಸಾಗಿ ಬಳಕೆ ಮಾಡಿರುವುದನ್ನು ಕಾಣಬಹುದು.

೫.೪. ಪಠ್ಯಪುಸ್ತಕಗಳಲ್ಲಿ ಮಕ್ಕಳ ಸಾಹಿತ್ಯ

ಪ್ರಾಚೀನ ಕಾಲದಲ್ಲಿದ್ದ ಮೌಖಿಕ ಸಾಹಿತ್ಯದಲ್ಲಿ ಬರವಣಿಗೆಯಲ್ಲಿನ ಸಾಹಿತ್ಯವಾಗಿ ಪರಿಗಣಿಸಬೇಕಾದರೆ ಅದು ಆಂಗ್ಲರ ಆಗಮನದಿಂದಲೇ ಎನ್ನಬಹುದು. ಆಂಗ್ಲರ ಪ್ರಭಾವದಿಂದಾಗಿ ಅವರ ಹೊಸ ಶಿಕ್ಷಣ ವ್ಯವಸ್ಥೆ ಬಂದ ಮೇಲೆ ನಮ್ಮಲ್ಲಿ ಶಾಲೆಯೆಂಬ ಒಂದು ಸಾರ್ವಜನಿಕ ಸಂಸ್ಥೆಯ ಪರಿಚಯವಾಗಿ ಅವರುಗಳಿಗಾಗಿಯೇ ಪ್ರತ್ಯೇಕ ಪುಸ್ತಕಗಳು ರಚನೆಯಾಗತೊಡಗಿ, ಮಿಷನರಿಗಳು ಮತ್ತು ಆಗಿನ ಸರಕಾರಗಳಿಂದ ಆ ಪುಸ್ತಕಗಳು ಹಲವು ವಿಧಗಳಲ್ಲಿ ಕಾಣಿಸತೊಡಗಿದವು. ನಂತರದಲ್ಲಿ ಬರಹರೂಪದ ಸಾಹಿತ್ಯ ಕಾಣಿಸಿಕೊಂಡು ಮಕ್ಕಳಿಗಾಗಿಯೇ ಪ್ರತ್ಯೇಕ ಸಾಹಿತ್ಯದ ಅಗತ್ಯತೆಯು ಉಂಟಾಯಿತು. ಆ ನಂತರದ ದಿನಗಳಲ್ಲಿ ಮಕ್ಕಳಿಗಾಗಿಯೇ ಸಾಹಿತ್ಯದ ಜೊತೆಯಲ್ಲಿಯೇ ಅವರುಗಳಿಗಾಗಿಯೇ ಪ್ರತ್ಯೇಕ ಪಠ್ಯಪುಸ್ತಕಗಳು ಅಗತ್ಯತೆಯು ಉಂಟಾಗಿ ಪ್ರತ್ಯೇಕ ಪಠ್ಯಪುಸ್ತಕ ರಚನೆಯ ಸಮಿತಿಯ ಮೂಲಕ ಮಕ್ಕಳ ವಯಸ್ಸಿಗನುಗುಣವಾಗಿ, ಅವರ ತರಗತಿಗಳಿಗನುಗುಣವಾಗಿ ಪಠ್ಯಪುಸ್ತಕಗಳ ರಚನೆಯಾಗತೊಡಗಿದವು.

ಹೀಗೆ ಪಠ್ಯಪುಸ್ತಕಗಳ ರಚನೆಯ ಅಗತ್ಯತೆ ಕಂಡುಬಂದ ನಂತರ ಅವುಗಳ ರಚನೆಗಾಗಿ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಈ ಪಠ್ಯಪುಸ್ತಕ ರಚನೆಯಲ್ಲಿ ಪಠ್ಯವಸ್ತುವಿನ ಜೊತೆಯಲ್ಲಿಯೇ ಮಕ್ಕಳಲ್ಲಿ ಭಾಷಾಕೌಶಲ್ಯಗಳನ್ನು ಪರಿಚಯಿಸುವುದು ಮತ್ತು ಅವರಿಗೆ ವಿಷಯಗ್ರಹಣವನ್ನು ಮಾಡಿಸುವ ಉದ್ದೇಶವಿರುತ್ತದೆ. ಇದರಲ್ಲಿ ನಿರ್ದಿಷ್ಟವಾದ ಭಾಷೆಗೆ ಸೀಮಿತವಾಗಿರುವ ಗಾದೆಗಳು, ಒಗಟುಗಳು, ನುಡಿಗಟ್ಟು ಮತ್ತು ವ್ಯಾಕರಣಾಂಶಗಳನ್ನು ಸೇರಿಸಲಾಗುತ್ತದೆ.

ಇಲ್ಲಿ ಒಂದು ಭಾಷೆಯ ಹಿರಿಮೆಯನ್ನು ಅದರ ಪ್ರಾಚೀನತೆಯನ್ನು ಬೆಳೆಸುವಾಗ ಸಾಹಿತ್ಯದ ಕೆಲವು ಮಾದರಿಗಳ ಮೂಲಕ ಪರಿಚಯಿಸಬೇಕಾಗಿದ್ದು ಜೊತೆಗೆ ಐತಿಹಾಸಿಕ ಮತ್ತು ಸಮಕಾಲೀನ ಮಾಹಿತಿಗಳು, ಕವಿ–ಸಾಹಿತಿಗಳು, ವಿಜ್ಞಾನಿಗಳು, ಕ್ರೀಡಾಪಟುಗಳು, ಸಮಾಜಸುಧಾರಕರು ಮೊದಲಾದ ಕ್ಷೇತ್ರಗಳಲ್ಲಿ ಸಾಧನೆಗೈದ ಭಿನ್ನ ವ್ಯಕ್ತಿತ್ವವನ್ನು ಹೊಂದಿರುವ ಆದರ್ಶ ವ್ಯಕ್ತಿಗಳನ್ನು ಪರಿಚಯಿಸುವ ಅಗತ್ಯತೆಯು ಈ ಪಠ್ಯಪುಸ್ತಕಕ್ಕಿರುತ್ತದೆ. ಹೀಗಾಗಿ ಈ ಪುಸ್ತಕಗಳನ್ನು ಓದುವ ಮಕ್ಕಳ ವಯಸ್ಸು, ಅವರ ಮಾನಸಿಕ ಸಾಮರ್ಥ್ಯ, ಬೌದ್ಧಿಕಮಟ್ಟ ಮೊದಲಾದವುಗಳನ್ನು ಗಮನದಲ್ಲಿಟ್ಟುಕೊಂಡೆ ಪಠ್ಯಪುಸ್ತಕವನ್ನು ರಚಿಸುವ ಅಗತ್ಯತೆಯಿದೆ. ಆದುದರಿಂದಲೇ ಕನ್ನಡದಲ್ಲಿ ಪ್ರಾಥಮಿಕ ಮತ್ತು

ಪ್ರೌಢಶಾಲೆಗಳ ಸಲುವಾಗಿ ಭಾಷಾ ಪಠ್ಯಪುಸ್ತಕಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಕನ್ನಡದ ಮಕ್ಕಳ ಸಾಹಿತ್ಯದ ನೆರವನ್ನು ಪಡೆಯಲೇಬೇಕಾಗಿದೆ.

ಆರರಿಂದ ಹದಿನಾರು ವರ್ಷದವರೆಗಿನ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿರುವ ಸಾಹಿತ್ಯವೆಲ್ಲವನ್ನು ಮಕ್ಕಳ ಸಾಹಿತ್ಯವೆನ್ನಬಹುದು. ಇಂತಹ ಮಕ್ಕಳಿಗಾಗಿ ರಚನೆಯಾಗಿರುವ ಸಾಹಿತ್ಯವು ಮಕ್ಕಳಿಗೆ ಸುಲಭವಾಗಿ, ಸರಳವಾಗಿ ಗ್ರಹಿಸಿಕೊಳ್ಳುವಂತಿರಬೇಕು. ಹೀಗಾಗಿಯೇ ಪಠ್ಯಪುಸ್ತಕಗಳಲ್ಲಿ ಭಾಷೆಗೆ ಸಂಬಂಧಿಸಿದ ನುಡಿಗಟ್ಟುಗಳ ಬಳಕೆ, ರಾಜಕೀಯ, ಧಾರ್ಮಿಕ ಪಲ್ಲಟಗಳಿಂದಾದ ಜ್ಞಾನ, ವಿಜ್ಞಾನ, ಸಮಾಜ ಸುಧಾರಕರು, ಆದರ್ಶ ವ್ಯಕ್ತಿಗಳು ಇಂಥ ಬರವಣಿಗೆಗಳನ್ನು ಮಕ್ಕಳ ವಯೋಮಾನಕ್ಕನುಸಾರವಾಗಿ ಒಂದನೆ ತರಗತಿಯಿಂದ ಹಿಡಿದು ಹತ್ತನೇ ತರಗತಿಯವರೆಗೆ ಪಠ್ಯಪುಸ್ತಕಗಳಲ್ಲಿ ಮಕ್ಕಳ ಸಾಹಿತ್ಯದ ಬಳಕೆಯನ್ನು ಮಾಡಿರುವುದನ್ನು ಪ್ರಸ್ತುತ ಪಠ್ಯಗಳಲ್ಲಿ ಹೇಗೆ ತರಲಾಗಿದೆ ಮತ್ತು ಈ ಮಕ್ಕಳ ಸಾಹಿತ್ಯದ ಬಳಕೆಯನ್ನು ಕೆಲವು ಪ್ರಾತಿನಿಧಿಕ ಪಠ್ಯಗಳನ್ನು ಗಮನಿಸಿ ಪಟ್ಟಿಮಾಡಲಾಗಿದೆ.

ಈ ಪಠ್ಯಗಳಲ್ಲಿ ಬಂದಂತ ಪಾಠಗಳೆಲ್ಲವು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಸೇರಿದವು ಎನ್ನಲಾಗುವುದಿಲ್ಲ. ಇದರಲ್ಲಿ ಕೆಲವು ಪಾಠಗಳು ಈ ಪರಿಧಿಯಲ್ಲಿ ಸೇರುವಂತವುಗಳಾಗಿವೆ. ಇದರಲ್ಲಿ ಪ್ರಾಥಮಿಕ ಹಂತದ ತರಗತಿಗಳಿಗಾಗಿ ಪಂಜೆ ಮಂಗೇಶರಾಯರ 'ಹಾವಿನಹಾಡು', ಸುಬ್ರಹ್ಮಣ್ಯಶರ್ಮರ 'ಆನೆಬಂದಿತ್ತು', ಪಳಕಳ ಸೀತಾರಾಮ ಭಟ್ಟರ 'ಕೋಗಿಲೆ' ಮತ್ತು ಕಂಚ್ಯಾಣಿ ಶರಣಪ್ಪರ 'ಗುಡುಗುಡು ಮುತ್ಯಾ' ಮೊದಲಾದ ಕವನಗಳನ್ನು ಆಯ್ಕೆ ಮಾಡಿ ಇಡಲಾಗಿದೆ. ಇವು ಲಯ, ವೈವಿಧ್ಯ, ಭಾವ ವೈವಿಧ್ಯಗಳಿಂದ ಮಕ್ಕಳನ್ನು ತನ್ನ ಕಡೆ ಸೆಳೆಯುವ ಶುದ್ಧ ಕವನಗಳಾಗಿವೆ. ಇನ್ನು ಈ ಪುಸ್ತಕಗಳಲ್ಲಿ ಗದ್ಯವನ್ನು ಕುರಿತು ಹೇಳುವುದಾದರೆ ಐದನೇ ತರಗತಿಗೆ ಇಟ್ಟಿರುವ 'ನದಿಯ ಅಳಿಲು', 'ವಿಮಾನ ನಿರ್ಮಾಣ', 'ನಾನು ಮತ್ತು ಹುಂಚಿಮರ' ಮೊದಲಾದವು ಉತ್ತಮ ಗದ್ಯಗಳ ಆಯ್ಕೆಯೆನಿಸಿವೆ. ಮುಂದಿನ ತರಗತಿಯ ನಾಗೇಶ ಹೆಗಡೆಯವರ ಪರಿಸರಮಾಲಿನ್ಯದ ನಿಯಂತ್ರಣವನ್ನು ಕುರಿತಿರುವ 'ಘನತ್ಯಾಜ್ಯ ವಿಲೇವಾರಿ' ಪಾಠವು ಶೈಕ್ಷಣಿಕ ಮಕ್ಕಳ ಸಾಹಿತ್ಯವು ಹೇಗಿರಬೇಕು ಎಂಬುದನ್ನು ತುಂಬಾ ಸರಳವಾಗಿ ಬಳಸಿದೆ.

ಮುಂದುವರೆದು ಪ್ರೌಢಶಾಲಾ ಹಂತದಲ್ಲಿ ಕೃಷ್ಣಾನಂದ ಕಾಮತರ ವೈಜ್ಞಾನಿಕ ಬರಹವೆನಿಸಿದ 'ಪರಿಸರ ಸಮತೋಲನ' ಹಿರೇಮಲ್ಲೂರು ಈಶ್ವರನ್ ಅವರ 'ತಲಕಾಡಿನ ವೈಭವ' ಮತ್ತು 'ನಮ್ಮ ಹೃದಯ ನಮ್ಮ ಕೈಯಲ್ಲಿ' ಮೊದಲಾದ ಪಾಠಗಳು ಪ್ರೌಢಹಂತದ ಮಕ್ಕಳ ಬೌದ್ಧಿಕ ಮಟ್ಟಕ್ಕೆ ತಕ್ಕಂತಿವೆ.

ಒಟ್ಟಿನಲ್ಲಿ ಈ ಪಠ್ಯಪುಸ್ತಕಗಳನ್ನು ಗಮನಿಸಿದಾಗ ಮಕ್ಕಳಿಗೆ ಸಾಹಿತ್ಯದ ಸೂಕ್ಷ್ಮತೆಗಳನ್ನು ಕಲಿಸುವುದರ ಜೊತೆಗೆ ಮಕ್ಕಳ ಭಾವವಿಕಾಸಕ್ಕೂ ಅವಕಾಶವನ್ನು ಕಲ್ಪಿಸಿಕೊಡುವ ಉದ್ದೇಶ

ಉತ್ತಮವೆನಿಸುತ್ತದೆ. ಆದರೂ ಈ ಪಠ್ಯಪುಸ್ತಕಗಳಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸೇರಿಸುವುದು ಪಠ್ಯಪುಸ್ತಕಗಳಲ್ಲಿ ಎದ್ದುಕಾಣುತ್ತದೆ.

೫.೫. ಮಕ್ಕಳ ಭಾಷಾ ಪದಕೋಶ

ಮಗು ಕೇಳಿಸಿಕೊಳ್ಳುವ ಇಲ್ಲವೇ ಕಲಿತುಕೊಳ್ಳುವ ಭಾಷೆ ಸಾಮಾನ್ಯವಾಗಿ ದೊಡ್ಡವರು ಆಡುವ ಭಾಷೆಯ ರೀತಿಯಲ್ಲಿರುವುದಿಲ್ಲ. ತಂದೆ ತಾಯಿಯರು ಮಗುವಿಗೆ ಭಾಷೆಯನ್ನು ಕಲಿಸುವಂತಹ ಸಂದರ್ಭದಲ್ಲಿ ಮಗುವಿನೊಂದಿಗೆ ವಿಶೇಷ ರೂಪದ ಭಾಷೆಯನ್ನು ಬಳಸುತ್ತಾರೆ. ಹಿರಿಯರು ಮಗುವಿಗೆ ಭಾಷೆಯ ಕಲಿಕೆಗೆ ಅನುಕೂಲವಾಗಲೆಂದು ತಮ್ಮ ಭಾಷೆಯನ್ನು ಸರಳಗೊಳಿಸಿಕೊಂಡು ಮಾತನಾಡುತ್ತಾರೆ. ಕ್ಲಿಷ್ಟವಾದ ಧ್ವನಿಗಳನ್ನು ಬಿಟ್ಟು, ಪದಗಳ ರೂಪದಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾರೆ. ಉದಾ. ಆಯಿ-ಗಾಯ, ಮಮ್ಮು-ಅನ್ನ, ಊಟ, ಜಿಜ್ಜಿ-ನೀರು, ಉಸ್-ಸ್ನಾನ ಇತ್ಯಾದಿ.

ಮಗುವು ಹುಟ್ಟಿದ ತಕ್ಷಣ ಅಳುತ್ತದೆ. ಏಕೆಂದರೆ ಮಗು ಹುಟ್ಟಿದ ತಕ್ಷಣ ಅಳಲು, ಉಸಿರಾಡಲು ಉಪಯೋಗಿಸಿದ ಅಂಗಗಳನ್ನು ಅದು ಮುಂದೆ ತನ್ನ ವಾತಾವರಣಕ್ಕೆ ಹೊಂದಿಕೊಳ್ಳಲು ಮತ್ತು ಮಾತನಾಡಲು ಉಪಯೋಗಿಸಬೇಕಾಗುತ್ತದೆ. ಮಗು ಹುಟ್ಟಿದ ದಿನದಿಂದ ಹಿಡಿದು ಐದು ವರ್ಷದವರೆಗೂ ಅದನ್ನು ಶಿಶು ಎಂದು ಕರೆಯಲಾಗುತ್ತದೆ. ಮಗುವು ಎಳೆಯದಿರುವಾಗ ಅದು ಹೊರಡಿಸುವ ಅಸ್ಪಷ್ಟ ಧ್ವನಿಗಳು, ಅದರ ಅಳುವಿನ ಮೂಲಕವಾಗಲಿ ಅಥವಾ ಕ್ರಿಯೆಗಳ ಮೂಲಕ ಉಂಟುಮಾಡುವ ಶಬ್ದಗಳಾಗಿರುತ್ತವೆ. ಇದು ಮಗುವಿನ ಭಾಷೆ ಎನಿಸಿಕೊಳ್ಳುತ್ತದೆ. ಆದರೆ ಬಾಲ ಭಾಷೆ, ಶಿಶು ಭಾಷೆ ಎಂದು ಕರೆಸಿಕೊಳ್ಳುವುದಿಲ್ಲ. ಏಕೆಂದರೆ ಮಗುವಿಗಾಗಿ ಹೊಸದಾದ ಪ್ರತ್ಯೇಕ ಭಾಷೆ ಇಲ್ಲ.

ಯಾವುದೇ ಒಂದು ಭಾಷಿಕ ಸಮುದಾಯ ಆ ಪರಿಸರದ ಭಾಷೆಯ ನಿಯಮಕ್ಕನು ಗುಣವಾಗಿಯೇ ಕೆಲವು ಪದಗಳನ್ನು ಮಕ್ಕಳಿಗಾಗಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿರುತ್ತವೆ. ಈ ರೂಪಗಳು ಆ ಮೂಲ ಭಾಷೆಯಲ್ಲಿರುವ ಕೆಲವು ಪದಗಳ ಸರಳೀಕೃತ ರೂಪವಾಗಿರುತ್ತವೆ. ಅಥವಾ ಆ ಧ್ವನಿಗಳ ಅನುಕರಣವಾಗಿರುತ್ತವೆ.

ಹೀಗೆ ಈ ಎಲ್ಲಾ ಮಾರ್ಪಾಟುಗಳ ಹಿಂದೆ ಮಗುವಿಗೆ ಭಾಷೆ ಕಲಿಸುವ ಮತ್ತು ಅದರ ಸುತ್ತಮುತ್ತಲಿನ ಪರಿಸರವನ್ನು ಪರಿಚಯಿಸುವ ಉದ್ದೇಶವಿರುತ್ತದೆ. ಆದ್ದರಿಂದ ಇದನ್ನು ನಿರ್ದಿಷ್ಟ ಕಾಲಾವಧಿಯವರೆಗೆ ಬಳಸುವ ಭಾಷಿಕ ರೂಪವೆನ್ನಬಹುದು. ಈ ಭಾಷಿಕ ರೂಪವು ಮಕ್ಕಳು ಬೆಳೆಯುವಾಗ ಒಂದು ನಿರ್ದಿಷ್ಟ ವಯಸ್ಸಿನವರೆಗೆ ಮಾತ್ರ ಬಳಕೆಯಲ್ಲಿರುತ್ತದೆ.

ಈ ಮಕ್ಕಳ ಭಾಷೆಯು ಹಿರಿಯರ ಭಾಷೆಗಿಂತ ಭಿನ್ನವಾಗಿರುತ್ತದೆ. ಇಲ್ಲಿ ಕಠಿಣ ಧ್ವನಿಗಳ ಬದಲಿಗೆ ಸರಳವಾದ ಧ್ವನಿಗಳಿಂದ ಕೂಡಿರುತ್ತವೆ. ಹೀಗೆ ಈ ಮಕ್ಕಳ ಭಾಷಾ ರೂಪಗಳ

ಬರಹದ ಕನ್ನಡ ರೂಪಗಳಿಗೆ ಹೋಲಿಕೆ ಮಾಡಿದಾಗ, ಬರವಣಿಗೆಯ ಭಾಷೆಗಿಂತ ಭಿನ್ನವಾಗಿದೆ. ಈ ಪದಕೋಶದಲ್ಲಿ ತಂದೆ, ತಾಯಿ, ಪೋಷಕರು ಮತ್ತು ಇತರರು ಮಕ್ಕಳಿಗೆ ಬಳಸುವ ರೂಪಗಳನ್ನು ಗಮನಿಸಿಕೊಂಡು ಅವುಗಳಲ್ಲಿ ಶಿಶು ಭಾಷಾ ರೂಪಗಳಿಂದ ಹಿಡಿದು ಪ್ರೌಢ ಹಂತದ ಮಕ್ಕಳವರೆಗಿನ ಭಾಷಾರೂಪಗಳನ್ನು ಸಂಗ್ರಹಿಸಿ ಪಟ್ಟಿ ಮಾಡಲಾಗಿದೆ. ಜೊತೆಗೆ ಅವುಗಳನ್ನು ಬಳಕೆಯ ನೆಲೆಯಲ್ಲಿ ಆಧರಿಸಿ ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

* **ಅಚ್ಚಿ:** ಮಕ್ಕಳ ಭಾಷೆಯಲ್ಲಿ ಅಚ್ಚಿ ಎಂದು ಕರೆಯುವ ಪದವನ್ನು ಸಾಮಾನ್ಯ ಭಾಷಾ ರೂಪದಲ್ಲಿ 'ರೊಟ್ಟಿ' ಎಂದು ಕರೆಯಲಾಗುತ್ತದೆ. ರೊಟ್ಟಿ ಎಂದು ಕರೆಯಲು ಮಕ್ಕಳಿಗೆ ಆರಂಭದಲ್ಲಿ ಕಷ್ಟವಾಗುವ ಕಾರಣ ಈ ಮೇಲಿನ 'ಅಚ್ಚಿ' ಪದ ರೂಪವನ್ನು ಬಳಕೆ ಮಾಡಲಾಗಿದೆ. ಇನ್ನು ಉತ್ತರ ಕರ್ನಾಟಕದ ಭಾಗದಲ್ಲಿ ರೊಟ್ಟಿಗೆ 'ಬಕರಿ' ಎಂತಲೂ ಕರೆಯುವುದಿದೆ.

* **ಬೂ ಡುರ್, ಕೀಕೀ, ಪೋಂ ಪೋಂ:** ಹಿರಿಯರು ತಾವಿರುವ ಪರಿಸರದಲ್ಲಿ ಕೇಳಿಬರುವ ಧ್ವನಿಗಳನ್ನು ಮಕ್ಕಳಿಗೆ ಅನುಕರಿಸಿ ತೋರಿಸುತ್ತಾರೆ. ಸಾಮಾನ್ಯ ರೂಪದಲ್ಲಿ ವಾಹನಗಳನ್ನು ಮಕ್ಕಳಿಗೆ ಪರಿಚಯಿಸುವಾಗ ಈ ಮೇಲಿನ ಪದಗಳನ್ನು ಬಳಸಿ ಪರಿಚಯಿಸುವರು. ಅದೇ ವಾಹನದಲ್ಲಿ ಹೊರಗಡೆ ಹೋಗುವುದನ್ನು ಸೂಚಿಸಲು 'ಬೂರ್' ಹೋಗುವೆ ಎನ್ನುವರು.

* **ಕಾ,ಕಾ ಚೇಯಿ, ಮಿಯ್ಯಾ, ಬುಸ್ಸ್:** ಈ ತರದ ಪದಗಳನ್ನು ಸಾಮಾನ್ಯ ರೂಪದಲ್ಲಿ ಪಕ್ಷಿ ಪ್ರಾಣಿಗಳಾದ ಕಾಗೆ, ಬೆಕ್ಕು, ಹಾವು ಮೊದಲಾದವುಗಳನ್ನು ಪರಿಚಯಿಸುವಾಗ ಅವುಗಳ ಹೆಸರುಗಳ ಬದಲು ಈ ಮೇಲಿನ ರೂಪಗಳ ಬಳಕೆ ಮಾಡುವರು. ಇವು ಅನುಕರಣವಾಚಕಗಳಾಗಿವೆ.

* **ಆಬೂ, ಬುವ್ವ:** ಸಾಮಾನ್ಯ ಕನ್ನಡ ಭಾಷೆಯ ಬಳಕೆಯಲ್ಲಿ ನೀರು ಎನ್ನುವ ಪದಗಳಿಗೆ ಸಂವಾದಿಯಾಗಿ ಈ ಅಬೂ, ಬುವ್ವ, ನೀ ಮೊದಲಾದ ಪದಗಳ ರೂಪಗಳನ್ನು ಮಕ್ಕಳಿಗಾಗಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಬಳಕೆ ಮಾಡುವವರು.

* **ಕಕ್ಕ ಮಾಡು:** ಈ ಪದವನ್ನು ಮಕ್ಕಳ ಭಾಷೆಯಲ್ಲಿ ಗಲೀಜು, ಹೊಲಸು ಎನ್ನುವರ್ಥದಲ್ಲಿ ಬಳಸುತ್ತಾರೆ. ಸಾಮಾನ್ಯ ಕನ್ನಡ ರೂಪದಲ್ಲಿ ಇದಕ್ಕೆ ಕೆಲವು ಕಡೆ ಕಕ್ಕಸ್ಸು ಮಾಡು ಎಂದರೆ ಇನ್ನು ಕೆಲವು ಕಡೆಗಳಲ್ಲಿ ಪಾಯಿಖಾನೆ ಎಂಬ ಅರ್ಥದಲ್ಲಿಯು ಬಳಸುವುದನ್ನು ಕಾಣುತ್ತೇವೆ. ಇನ್ನು ಇತ್ತೀಚಿನ ಮಕ್ಕಳು ಇದಕ್ಕೆ 'ಟಾಯಿ' ಎಂತಲೂ ಕರೆಯುತ್ತಿದ್ದಾರೆ.

* **ಚಾಕಿ:** ಚಾಕ್ಲೇಟು ಇಲ್ಲವೆ ಪೆಪ್ಪರಮೆಂಟ್ ಪದಗಳಿಗೆ ಸಂವಾದಿಯಾದ ಪದವಾಗಿ ಇಂದಿನ ಮಕ್ಕಳಿಗೆ ಇನ್ನು ಸಂಕ್ಷಿಪ್ತಗೊಳಿಸಿ ಈ ಚಾಕಿ ಪದರೂಪವನ್ನು ಬಳಸುತ್ತಿದ್ದಾರೆ. ಅಲ್ಲದೆ ಕೆಲವು ಪ್ರದೇಶಗಳಲ್ಲಿ 'ಪೆಪ್ಪಿ' ಎಂತಲೂ ಬಳಸುತ್ತಿದ್ದಾರೆ.

* **ಪೆಟ್ಟು:** ಈ ಪದರೂಪವನ್ನು ಮಕ್ಕಳಿಗಾಗಿ ಬಳಸುವಾಗ, ಕರಾವಳಿ ಪ್ರದೇಶದ ಜನರು

'ಏಟು' ಕೊಡುವುದಕ್ಕೆ ಈ ಪದವನ್ನು ಬಳಸಿದರೆ, ಉತ್ತರ ಕರ್ನಾಟಕದ ಭಾಗದಲ್ಲಿ 'ಪೆಟ್ಟು' ಪದಕ್ಕೆ ಯಾವುದೋ ಕೆಲಸ ಮಾಡಲು ಹೋಗಿ ಕೈಸುಟ್ಟುಕೊಂಡಿರುವವರನ್ನು ಕುರಿತು ಬಳಕೆ ಮಾಡಿರುವುದನ್ನು ಕಾಣುತ್ತೇವೆ.

* **ಪಪ್ಪಿ:** 'ಮುತ್ತು' ಕೊಡು ಎಂಬ ಪದಕ್ಕೆ ಸಂವಾದಿಯಾಗಿ ಬಳಕೆ ಮಾಡಲಾಗುತ್ತದೆ. ಮುದ್ದಿಸುವುದನ್ನು ಮಕ್ಕಳು 'ಪಪ್ಪಿ', 'ಉಮ್ಮ' ಎಂದು ಸೂಚಿಸುತ್ತದೆ.

* **ಜೇಜಿ:** ಈ ಪದವನ್ನು ಹಿರಿಯರು ಮಕ್ಕಳಿಗಾಗಿ ಬಳಕೆ ಮಾಡುವುದನ್ನು ಕಾಣುತ್ತೇವೆ. ಇಲ್ಲಿ ಜೇಜಿ ಎಂದರೆ 'ದೇವರು' ಎನ್ನುವ ಅರ್ಥ. ದೇವರನ್ನು ಕಂಡಾಗ ನಮಸ್ಕಾರ ಮಾಡು ಎನ್ನುವುದಕ್ಕೂ ಜೇಜಿ ಮಾಡು ಎನ್ನುವರು. ಇನ್ನು ಕೆಲವು ಪ್ರದೇಶಗಳಲ್ಲಿ ದೇವರು ಎಂದು ಹೇಳುವಾಗ 'ಚಾಮಿ' 'ಸಾಮಿ' ಎಂದು ಬಳಕೆಯಲ್ಲಿದೆ.

* **ಗುಮ್ಮ:** ಎಂದರೆ ದೆವ್ವ ಅಥವಾ ಬೂತ ಎನ್ನುವ ಅರ್ಥವಿದೆ. ಇದನ್ನು ಮಕ್ಕಳು ಹಠ ಮಾಡುವಾಗ ಅವರಿಗೆ 'ಗುಮ್ಮ' ಬಂದ ಎಂದು ಹೆದರಿ ಸುಮ್ಮನಿರಿಸುವುದು ಇದೆ.

ಮಕ್ಕಳ ಭಾಷಾ ರೂಪಗಳು	ಸಾಮಾನ್ಯ ರೂಪ
* ಅಂಗಿ	ಶರ್ಟ್
* ಅಂಬಾ	ದನ
* ಅಂದು	ಒಂದು
* ಅಚ್ಚಿ	ರೊಟ್ಟಿ
* ಅಮ್ಮಾ	ಎದೆಹಾಲು
* ಅಲ್ಲಿ	ಎಲ್ಲಿ
* ಅಪ್ಪಚ್ಚಿ ಮರಿ	ಮುದ್ದುಮರಿ
* ಆಕ	ಯಾಕೆ
* ಆತು	ಆಯಿತು
* ಆಬೂ	ನೀರು
* ಆವಿ	ಹುಳು
* ಉಮ್ಮ	ಮುತ್ತು
* ಉಪ್ಪಕೊಡು	ಮುದ್ದುಕೊಡು
* ಉಹ್	ಗಾಳಿ ಊದು/ತಣ್ಣಗಾಗಿಸು

* ಉಸ್‌ಮಾಡು — ಸ್ನಾನ ಮಾಡು
* ಐತಿ — ಇದೆ
* ಓನು — ಏನು
* ಕಕ್ಕ — ಗಲೀಜು
* ಕಡ್ಡಿ — ಬಳಪ
* ಕೂಸು — ಮಗು
* ಕೊಕ್ಕ — ಕೋಳಿ
* ಕಂದ — ಮಗು
* ಗುಕ್ಕ — ಕಳ್ಳ
* ಗುಮ್ಮ — ದೆವ್ವ
* ಚಂದ — ಅಲಂಕಾರ/ಸುಂದರ
* ಚಾಕಿ — ಚಾಕ್ಲೇಟು
* ಚಾಚು — ಮಲಗು
* ಚಾಮಿ — ದೇವರು
* ಚಾರು — ಸಾರು
* ಚಿಚ್ಚಿ — ಮಾಂಸ
* ಚಿಯಾ/ಚೀಚೀ — ಮಾಂಸ
* ಚುಂಯಿ — ಚುಚ್ಚು ಮದ್ದು
* ಜೇಜಿ — ದೇವರು
* ಜೋ ಜೋ — ಲಾಲಿ ಹಾಡು/ತೂಗು
* ಢುರ್ರ/ಡಿರ್ — ವಾಹನ
* ಪಾಚುಮಾಡು — ಮಲಗು
* ಪಾಂಟು — ಪ್ಯಾಂಟು
* ಪಾಪು — ಮಗು
* ಪುಗ್ಗಾ — ಬಲೂನ್
* ಪುಸ್ಸಿ — ಬೆಕ್ಕು

* ಪೈಸಾ	ಹಣ
* ಬಲ್ಲ	ಮುತ್ತು
* ಬಾಡ	ಬೇಡ
* ಬಾವು	ಹಾವು
* ಬಿಕ್ಕೆ	ಬಿಸ್ಕೆಟ್
* ಬೂರ್	ಊರಿಗೆ ಹೋಗ್ತೀನಿ
* ಬೌ	ನಾಯಿ
* ಬೊಬ್ಬ	ದನ
* ಮಮ್ಮಾ	ಅಮ್ಮಾ
* ಮಮ್ಮು	ಊಟ
* ಮಿಯಾವ್	ಬೆಕ್ಕು
* ರೊಕ್ಕ	ಹಣ
* ಲಾಲಿ	ಮಲಗು
* ಸಾ ಮಾಡು	ನಮಸ್ಕಾರ ಮಾಡು
* ಸಾಲಿ	ಶಾಲೆ
* ಹಣಿ	ಹಣ್ಣು
* ಹಾ	ಕಾರವಾದ ಪದಾರ್ಥ
* ಹಾಕ	ಕಾಕ
* ಹಾತ	ತಾತ

ಅನುಕರಣ ರೂಪದ ಪದಗಳು

* ಅಂಬಾ	ಆಕಳು/ದನ
* ಕಾಕಾ	ಕಾಗೆ
* ಕೊಕ್ಕೊಕ್ಕೋ	ಕೋಳಿ
* ಚಿಂವ್ ಚಿಂವ್	ಗುಬ್ಬಿ
* ಮ್ಯಾಂವ್ ಮ್ಯಾಂವ್	ಬೆಕ್ಕು
* ಬುಸ್ ಬುಸ್	ಹಾವು

* ಬೌ ಬೌ	ನಾಯಿ

ಸಂಯುಕ್ತ ರೂಪಗಳು

* ಆ ಮಾಡು	ಬಾಯಿ ತೆಗೆ
* ಆಯಿ ಆಗಿದೆ	ನೋವು ಆಗಿದೆ
* ಓಂ ಮಾಡು	ದೇವರಿಗೆ ನಮಸ್ಕಾರ ಮಾಡು
* ಥೂ ಮಾಡು	ಉಗುಳು
* ಸೂಮಾಡು	ಉಚ್ಚೆ ಮಾಡು
* ಸುಸ್ಸು ಮಾಡು	ಉಚ್ಚೆ ಮಾಡು

ಸಂಕ್ಷಿಪ್ತ ಗೊಳಿಸಿದ ರೂಪಗಳು

* ಚಾಕಿ	ಚಾಕ್ಲೇಟು
* ಬಿಕ್ಕಿ	ಬಿಸ್ಕೇಟು
* ಚುಚ್ಚಿ	ಸೂಜಿ
* ಮಮ್ಮು	ಊಟ ಮಾಡು

ಒಟ್ಟಾರೆ ಮಕ್ಕಳ ಭಾಷಾ ರೂಪಗಳು

* ಅಂಬಾ	ಆಕಳು/ದನ
* ಅಲ್ಲಿ	ಎಲ್ಲಿ
* ಅಡ್ಡು	ಎರಡು
* ಅಮ್ಮಾ	ಎದೆಹಾಲು
* ಅಂದು	ಒಂದು
* ಅಮ್ಮಿ	ಎಮ್ಮಿ
* ಅಂಗ	ಹೆಂಗ
* ಅಂತರಗಾಡಿ	ವಿಮಾನ
* ಆರು	ಯಾರು
* ಆತು	ಆಯಿತು
* ಆಕಾಶಗಾಡಿ	ವಿಮಾನ
* ಉಂಮ್ಮಾ	ಊಟ

* ಉಮ್ಮ	ಮುತ್ತು
* ಉಫ್	ಊದು
* ಊಸ್	ಸ್ನಾನ
* ಐಲುಗ್ಯೆಡಿ	ರೈಲುಗಾಡಿ
* ಐನಾ	ಚೈನಾ
* ಓನು	ಏನು
* ಕಂದ	ಮಗು
* ಕೂಸು	ಮಗು
* ಗೂಕು	ಮಂಗ
* ಚಾಕು	ಸಾಕು
* ಚಾಲಿ	ಸಾಲಿ
* ಚುಪ್	ಸುಮ್ಮನೆ ಆಗು
* ಚೋಪು	ಸೋಪು
* ಚೈಕಲ್	ಸೈಕಲ್
* ಜೋಜೋ	ತೂಗುವುದು/ಲಾಲಿ ಹಾಡುವುದು
* ಟಾಯಿ	ಟಾಯ್ಲೆಟ್
* ಡೀರ್	ವಾನ್
* ಡಿಸಮ್ಮಾಡು	ಫೈಟಿಂಗ್ ಮಾಡು
* ತಪ್ಪಿ	ಸಪ್ಪೆ ಬೇಳೆ
* ತಾಟ	ಟಾಟಾ
* ತೀತೀ	ಕೋಳಿ
* ತೊವೆ	ಬೇಳೆ
* ಪಪ್ಪ	ಮುತ್ತು
* ಪಚಕೋ	ಮಲಗು
* ಪಾಯಿ ಪಾಯಿ	ನಡೆದಾಡುವುದು
* ಬಲ್ಲ	ಮುತ್ತು

* ಬಾವು	ಹಾವು
* ಬಾನಿ	ಬ್ಯಾನಿ
* ಬಾವ್ವ	ದೆವ್ವ
* ಬುಸ್ಸಿ	ಸ್ನಾನ
* ಬುರುಬುರಿ	ಮಿರ್ಚಿ ಬಜ್ಜಿ
* ಬುಯಿ	ಊರಿಗೆ
* ಬಾಡ	ಬ್ಯಾಡ
* ಬೂತು	ಬೂಟು
* ಚಾಚಾ	ನಾಯಿ
* ಮುಲ್ಲ	ಮುಳ್ಳು
* ಮ್ಯಾಂವ್	ಬೆಕ್ಕು
* ಹಣ್ಣಿ	ಹಣ್ಣು
* ರಿಂದನಕಟ್ಟಿ	ತುಳಸಿಕಟ್ಟೆ
* ಶಂಬೊ ಮಾಡು	ನಮಸ್ಕಾರ ಮಾಡು

ಅಡಿಟಿಪ್ಪಣಿ

೧. ರಾಮಕೃಷ್ಣ ಆರ್. 'ಭಾಷಾವಿಜ್ಞಾನ ವಿಹಾರ', ಪು–೨೬.

೨. ಅದೇ ಪು–೨೬–೨೭.

೩. ಪಂಜೆ ಮಂಗೇಶರಾಯರ 'ಮಕ್ಕಳ ಸಾಹಿತ್ಯ' (ಸಮಗ್ರ ಮಕ್ಕಳ ಸಾಹಿತ್ಯ ಸಂಗ್ರಹ) ಪು–೧೨೮.

೪. ರಘುನಾಥ ಎನ್.ಎಸ್., 'ಶತಮಾನದ ಮಕ್ಕಳ ಸಾಹಿತ್ಯ', ಪು–೬೪.

೫. ಅದೇ ಪು–೫೫.

೬. ಪಂಜೆ ಮಂಗೇಶರಾಯರ 'ಮಕ್ಕಳ ಸಾಹಿತ್ಯ' (ಸಮಗ್ರ ಮಕ್ಕಳ ಸಾಹಿತ್ಯ ಸಂಗ್ರಹ) ಪು–೮೪.

೭. ರಘುನಾಥ ಎನ್.ಎಸ್., ಶತಮಾನದ ಮಕ್ಕಳ ಸಾಹಿತ್ಯ, ಪು–೧೭೦.

೮. ಅದೇ ಪು–೧೭೨.

೯. ರಘುನಾಥ ಎನ್.ಎಸ್., ಶತಮಾನದ ಮಕ್ಕಳ ಸಾಹಿತ್ಯ, ಪು–೪.

೧೦. ಅದೇ ಪು–೬೮.

೧೧. ಪಂಜೆ ಮಂಗೇಶರಾಯರ, ಮಕ್ಕಳ ಸಾಹಿತ್ಯ, ಪು–೨೭೫.

೧೨. ಅದೇ ಪು–೨೭೬.

೧೩. ರಘುನಾಥ ಎನ್.ಎಸ್., ಶತಮಾನದ ಮಕ್ಕಳ ಸಾಹಿತ್ಯ, ಪು–೧೮.

೧೪. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ವ್ಯಾಸಂಗ, ಪು–೪೯.

❖❖❖

ಅಧ್ಯಾಯ: ಆರು

ಸಮಾರೋಪ

ಅಧ್ಯಯನದ ಫಲಿತಗಳು

ಅನುಬಂಧ (ಮಾದರಿಗಾಗಿ)

ಪರಾಮರ್ಶನ ಗ್ರಂಥಗಳು

ಅಧ್ಯಾಯ: ಆರು

ಸಮಾರೋಪ

ಮಕ್ಕಳು ಜಗತ್ತಿನ ಭವಿಷ್ಯವನ್ನು ರೂಪಿಸುವರು. ಅವರ ಇಡೀ ಜೀವನದ ಭವಿಷ್ಯವು ಅವರ ಬಾಲ್ಯದ ಬುನಾದಿಯ ಮೇಲೆ ನಿಂತಿರುತ್ತದೆ ಎಂದು ಪ್ರಸಿದ್ಧ ಮನೋವಿಜ್ಞಾನಿಗಳಾದ ಸಿಗ್ಮಂಡ್ ಪ್ರಾಯ್ಡ್, ಆ್ಯಡ್ಲರ್ ಮತ್ತು ಜಾರ್ಜ್‌ನೊಮನ್‌ಗಳಂತಹವರು ಒತ್ತಿ ಹೇಳಿದ್ದಾರೆ.

ಮಗುವು ಹುಟ್ಟಿದ ಕೆಲವು ತಿಂಗಳ ನಂತರ ಮಗುವಿನ ಮುದ್ದಾದ ತೊದಲ್ನುಡಿಗಳನ್ನು ಕೇಳಲು ಎಲ್ಲರೂ ಉತ್ಸಾಹಿಗಳಾಗಿರುತ್ತಾರೆ. ಮಗು ಹುಟ್ಟಿದ ತಕ್ಷಣ ಭಾಷೆಯನ್ನು ಅರಿತಿರಲಾರದು. ಹೀಗಾಗಿ ಅದು ಮೊದಲು ತನ್ನ ಸುತ್ತಮುತ್ತಲಿನ ಪರಿಸರದ ಜನರ ವರ್ತನೆಯನ್ನು ಅವರ ಮುಖಚರ್ಯೆಗಳನ್ನು, ಅವರ ಚಹರೆಗಳನ್ನು ಅವಲೋಕಿಸುವುದು ಹಾಗೂ ಮನೆಯಲ್ಲಿರುವ ಇತರೆ ಸದಸ್ಯರು ಮೊದಲಾದವರು ಮಾತನಾಡುವ ಧ್ವನಿಗಳನ್ನು ಅವಲೋಕಿಸುತ್ತ ಅವರುಗಳನ್ನು ಅನುಕರಣೆ ಮಾಡುತ್ತದೆ.

ಮಗುವು ತಾಯಿಯ ಚಹರೆಯನ್ನು ಗಮನಿಸುತ್ತ ಸತತ ಪ್ರಯತ್ನದಿಂದ ಭಾಷೆಯನ್ನು ಕಲಿಯುತ್ತದೆ. ಮತ್ತು ಮಗು ಆರಂಭದಲ್ಲಿ ಬರಿ ಧ್ವನಿಗುಚ್ಚವನ್ನು ಎಚ್ಚರಿಸಲು ಪ್ರಾರಂಭಿಸುತ್ತದೆ.

ಮಕ್ಕಳ ಸಾಹಿತ್ಯದ ರಚನೆಯ ಹಿಂದಿರುವ ಉದ್ದೇಶವು ಬಹುಮುಖಿಯಾದುದು. ಯಾವುದೋ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಮಾತ್ರ ರಚನೆಯಾಗಿರದೆ ಅದು ಪ್ರತಿಪಾದಿಸಲ್ಪಟ್ಟ ವಿಷಯವನ್ನು ಮಕ್ಕಳಿಗೆ ಸುಲಭವಾಗಿ, ಖಚಿತವಾಗಿ ಗ್ರಹಿಸಿಕೊಳ್ಳಬೇಕೆಂಬುದಷ್ಟೇ ಸಾಹಿತ್ಯ ರಚನೆಕಾರ ಉದ್ದೇಶವಾಗಿರುತ್ತದೆ. ಮಕ್ಕಳ ಸಾಹಿತ್ಯದ ರಚನೆಯು ಅಷ್ಟು ಸುಲಭವಾದುದೇನು ಅಲ್ಲ, ಇಲ್ಲಿ ಈ ಸಾಹಿತ್ಯ ರಚನೆಕಾರರಿಗೆ ಮಕ್ಕಳ ಮನಸ್ಸಿನ ಭಾವವೇನು ಎಂಬುದು ಸಂಪೂರ್ಣವಾಗಿ ತಿಳಿದಿರಬೇಕಾಗುತ್ತದೆ. ಅಲ್ಲದೆ ಮಕ್ಕಳ ಸಾಹಿತ್ಯ ಹೇಗೆ ಇರಬೇಕು ಹಾಗೂ ಅವರ ಭಾಷೆಯ ರಚನೆ ಹೇಗೆ ಇರಬೇಕು ಎಂಬುದರ ಬಗ್ಗೆ ಅದರ ಬರವಣಿಗೆಯ ಬಗ್ಗೆ ಹಿಡಿತವಿರಬೇಕಾಗುತ್ತದೆ.

ಮಕ್ಕಳ ಸಾಹಿತ್ಯದ ರಚನೆಕಾರರಲ್ಲಿ ಮಕ್ಕಳ ವಯಸ್ಸು, ಅವರ ಮಾನಸಿಕ, ಬೌದ್ಧಿಕಮಟ್ಟ ಮೊದಲಾದವುಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಮೌಲ್ಯಪ್ರಜ್ಞೆ, ಸುಸಂಸ್ಕೃತ, ನಡವಳಿಕೆ, ಜೀವನೋತ್ಸಾಹ, ಆತ್ಮವಿಶ್ವಾಸ ಮೊದಲಾದ ಋಣಾತ್ಮಕ ಗುಣಗಳನ್ನು ಪ್ರಚೋದಿಸುವ ಬರಹಗಳನ್ನು ಇವರ ಸಾಹಿತ್ಯದಲ್ಲಿ ಆಯ್ಕೆಮಾಡಿಕೊಳ್ಳಬೇಕಾಗುತ್ತದೆ.

ಭಾರತದ ರಾಜ್ಯಾಂಗಗಳಲ್ಲಿ ಹದಿನಾಲ್ಕು ವರ್ಷದ ಒಳಗಿರುವವರನ್ನೆಲ್ಲಾ ಮಕ್ಕಳೆಂದು ಪರಿಗಣಿಸಬಹುದು ಎನ್ನಲಾಗಿದೆ. ಇವರೆಲ್ಲರಿಗೂ ಅನ್ವಯಿಸುವ ಸಾಹಿತ್ಯವನ್ನೇ ಮಕ್ಕಳ ಸಾಹಿತ್ಯವೆಂದು ಹೇಳಬಹುದು. ಈ ಮಕ್ಕಳ ಸಾಹಿತ್ಯದಲ್ಲಿ ಮನರಂಜನೆಯ ಜೊತೆ ಜೊತೆಗೆ, ವ್ಯಕ್ತಿತ್ವವಿಕಸನದ ಅಂಶಗಳೂ ಸೇರಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದಲೂ ಮಕ್ಕಳ ಸಾಹಿತ್ಯವನ್ನು ಮನರಂಜನಾ ಸಾಹಿತ್ಯ, ಆದರ್ಶಸಾಹಿತ್ಯ, ಶೈಕ್ಷಣಿಕ ಸಾಹಿತ್ಯ ಎಂದು ವರ್ಗೀಕರಿಸಲಾಗಿದೆ. ಈ ಮನರಂಜನಾ ಸಾಹಿತ್ಯದಲ್ಲಿ ಮಕ್ಕಳನ್ನು ನಗಿಸುವ, ಅವರ ಕಲ್ಪನಾಶಕ್ತಿಯನ್ನು ಪ್ರಚೋದಿಸುವ, ಕುತೂಹಲವನ್ನು ಕೆರಳಿಸುವ ಕಥೆ, ಕವಿತೆ, ನಾಟಕ, ಕಾದಂಬರಿ ಮತ್ತು ಜೀವನ ಚರಿತ್ರೆಗಳು ಮೊದಲಾದವುಗಳಾಗಿರುತ್ತವೆ.

ಇನ್ನು ಆದರ್ಶ ಸಾಹಿತ್ಯದಲ್ಲಿ ಮೌಲ್ಯಪ್ರಜ್ಞೆ ನೈತಿಕ ಎಚ್ಚರ ಮಹತ್ವವಾದುದೇನನ್ನೋ ಸಾಧಿಸಬೇಕೆಂಬ ಕನಸುಗಾರಿಕೆ, ಆತ್ಮವಿಶ್ವಾಸ ಮೊದಲಾದವುಗಳನ್ನು ಬಿಂಬಿಸುತ್ತದೆ. ಅಲ್ಲದೆ ಆದರ್ಶ ವ್ಯಕ್ತಿಗಳ ಬದುಕು, ಸಾಧನೆಗಳನ್ನು ಪರಿಚಯಿಸುವ ಕೆಲಸವನ್ನು ಮಾಡುತ್ತದೆ. ಮತ್ತು ಶೈಕ್ಷಣಿಕ ಸಾಹಿತ್ಯದಲ್ಲಿ ಸರಳವಾದ ರೀತಿಯಲ್ಲಿ ಪರಿಸರ, ಸಮಾಜ, ರಾಷ್ಟ್ರ, ಅಂತರಾಷ್ಟ್ರೀಯ, ವಿಜ್ಞಾನ ಮೊದಲಾದ ಮಾನವಿಕ ವಿಚಾರಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗಿರುತ್ತದೆ.

ಈ ಎಲ್ಲ ಲಕ್ಷಣಗಳಿರುವ ಮಕ್ಕಳ ಸಾಹಿತ್ಯದ ಪರಿಕ್ಷೇತ್ರದಲ್ಲಿ ಸಾಮಾನ್ಯವಾಗಿ ಮಕ್ಕಳ ಸಾಹಿತ್ಯವೆಂದೊಡನೇ ಮಕ್ಕಳಿಗಾಗಿ ಬರೆಯಲಾಗಿರುವ ವಿವಿಧ ರೀತಿಯಲ್ಲಿ ರಚನೆಯಾದ ಕಥೆಗಳನ್ನು, ಕಾವ್ಯಗಳನ್ನು, ಕಾದಂಬರಿಗಳು ಮತ್ತು ನಾಟಕಗಳನ್ನು ಮಾತ್ರ ಹೆಚ್ಚಾಗಿ ರೂಪಿಸಲಾಗಿರುತ್ತದೆ. ಮಕ್ಕಳ ಜ್ಞಾನದ ಪರಿಧಿಯನ್ನು ವಿಸ್ತರಿಸುವ ವಿಜ್ಞಾನ, ಇತಿಹಾಸ, ಆಕಾಶಕಾಯ ಮೊದಲಾದ ವಿವಿಧ ಕ್ಷೇತ್ರಗಳ ಕುರಿತ ವಾಙ್ಮಯ ಕೂಡಾ ಮಕ್ಕಳ ಸಾಹಿತ್ಯದ ವಲಯಕ್ಕೆ ಸೇರಿಸಿರುವುದು ಕಡಿಮೆಯೇ ಎನ್ನಬಹುದು.

ಇನ್ನು ಮಕ್ಕಳಿಗಾಗಿ ಸಾಹಿತ್ಯವನ್ನು ರಚಿಸಿದವರು ಅಪಾರ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಕೆಲವರು ಬಾಲಸಾಹಿತಿಗಳಾಗಿಯೇ ಬೆಳೆದು, ಸಾಹಿತ್ಯ ರಚನಾಕಾರರಾಗಿರುತ್ತಾರೆ. ಇವರಲ್ಲಿ ರಚಿಸುವಂತ ಮಕ್ಕಳ ಸಾಹಿತ್ಯ ರಚನೆಯ ಕೆಲಸವೇನೂ ಸರಳವಲ್ಲ. ಇವರು ಬರೆದ ಕೃತಿಗಳು ಮಕ್ಕಳನ್ನು ಎಷ್ಟರಮಟ್ಟಿಗೆ ತಲುಪುವಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಈ ಆಧುನಿಕ ಓಟದ ಪ್ರಪಂಚದಲ್ಲಿ ಮಕ್ಕಳಿಗೆ ಪುಸ್ತಕವನ್ನು ಓದುವ ವಾತಾವರಣವನ್ನು

ಕಲ್ಪಿಸಿದ್ದೇವೆ. ಮತ್ತು ಅವರ ಈ ಓದು ಅವರ ಭವಿಷ್ಯದ ಬದುಕಿಗೆ ಉಪಯುಕ್ತವಾಗಿದೆಯೇ ಎಂಬುದನ್ನೆಲ್ಲ ಅರಿಯುವ ಅಗತ್ಯವಿದೆ.

'ಮಾನವ ಸಮಾಜ ಜೀವಿ' ಎನ್ನುವ ಮಾತಿನಂತೆ ಸಮಾಜದ ಜೀವಿಗಳಾಗಿ ಬದುಕಿ ಬೆಳೆಯಬೇಕಾದ ಮಕ್ಕಳಲ್ಲಿ ಮೊದಲು ಆತ್ಮವಿಶ್ವಾಸವನ್ನು ತುಂಬುವ ಕಾರ್ಯವನ್ನು ಪಾಲಕರು, ಪೋಷಕರು, ಶಾಲಾ ಶಿಕ್ಷಕರು, ಸಹಪಾಠಿಗಳು, ಸಮಾಜದ ಚಿಂತಕರು ಮಾಡುವ ಅಗತ್ಯ ತುಂಬಾ ಇದೆ. ಅದು ಎಲ್ಲರ ಕರ್ತವ್ಯ ಕೂಡ ಆಗಿರುತ್ತದೆ.

ಜೊತೆಗೆ ಮಕ್ಕಳಿಗೆ ಒಂದು ಒಳ್ಳೆಯ ಓದಿನ ವಾತಾವರಣ, ಉತ್ತಮ ಅಭಿರುಚಿ, ಧ್ಯಾನ, ಯೋಗ, ಸಂಸ್ಕೃತಿ, ಸಂಸ್ಕಾರ, ಸಮಸ್ಯೆಗಳ ನಿವಾರಣೆ, ತಾಳ್ಮೆ ಮತ್ತು ಸಂವಹನ ಕೌಶಲ್ಯಗಳನ್ನು ಮೊದಲಾದ ಮಾನವೀಯ ಮೌಲ್ಯಗಳನ್ನು ಕಲಿಸಬೇಕಾಗುತ್ತದೆ. ಅಲ್ಲದೆ ಉತ್ತಮವಾದ ಮಕ್ಕಳ ಸಾಹಿತ್ಯವನ್ನು ಪರಿಚಯಿಸುವ ಮೂಲಕವು ಮಕ್ಕಳಲ್ಲಿ ಮಾನವೀಯ ನೆಲೆಗಳನ್ನು ಕಾಣಬಹುದಾಗಿದೆ.

ಮಕ್ಕಳಿಗೆ ತಮ್ಮ ಬಾಲ್ಯದಲ್ಲಿ ಮುಕ್ತವಾತಾವರಣವಿರಬೇಕು. ಇಲ್ಲಿ ಅವರಿಗೆ ಯಾವುದು ಶಿಕ್ಷೆ ಅನಿಸುವ ಹಾಗೆ ಅದೊಂದು ಪ್ರೀತಿಯ ಕಲಿಕೆ ಎನ್ನುವಂತ ವಾತಾವರಣವನ್ನು ಪೋಷಕರು ಸೃಷ್ಟಿಸಬೇಕಾಗುತ್ತದೆ. ಅವರಿಗೆ ಪ್ರೀತಿಯ ಮಾತು, ಹಿತವಾದ ನುಡಿಗಳಿಂದ, ಅವರಲ್ಲಿ ಒಳ್ಳೆಯ ಮೌಲ್ಯಗಳನ್ನು ತುಂಬಬೇಕು.

ಇಲ್ಲಿ ಸುಮಾರು ಹತ್ತು ವಯಸ್ಸಿನ ಮಕ್ಕಳಲ್ಲಿ ಅವರಿಗೆ ಕಥೆಗಳು, ಬಹಳ ಪ್ರಿಯವೆನಿಸುತ್ತವೆ. ಹಾಗಾಗಿ ಆ ಅವಧಿಯಲ್ಲಿ ಮಕ್ಕಳಿಗೆ ಕಥೆಗಳನ್ನು ಹೆಚ್ಚು ಹೇಳುವುದರ ಮೂಲಕ ಅವರಿಗೆ ಉತ್ತಮ ಮೌಲ್ಯಗಳನ್ನು ತುಂಬಬೇಕು. ಇನ್ನು ಸ್ವಲ್ಪ ದೊಡ್ಡವರಾದ ಮಕ್ಕಳಿಗೆ ಸ್ವಲ್ಪ ವಿಚಾರ ಮಾಡುವಂತಹ, ತರ್ಕಬದ್ಧವಾದ, ಸಾಹಿತ್ಯವನ್ನು ವಾಸ್ತವತೆಗೆ ಹತ್ತಿರದಲ್ಲಿರುವಂತಹ ಸಾಹಿತ್ಯವನ್ನು ಕೊಟ್ಟರೆ ಉಪಯುಕ್ತವಾಗುವುದು.

ಅಧ್ಯಯನದ ಫಲಿತಗಳು

ಯಾವುದೇ ಅಧ್ಯಯನವು ತನ್ನ ವ್ಯಾಪ್ತಿ, ಉದ್ದೇಶಗಳಿಗೆ ಅನುಗುಣವಾಗಿ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲ ಫಲಿತಗಳನ್ನು ಒಳಗೊಂಡಿದ್ದು ಇದು ಒಟ್ಟು ಅಧ್ಯಯನದ ಮಹತ್ವವನ್ನು ತಿಳಿಸುವುದು ಸಂಶೋಧನೆಯ ಪ್ರಮುಖ ಘಟ್ಟವೂ ಆಗಿದೆ.

* ಮಕ್ಕಳ ಸಾಹಿತ್ಯ ಎಂದರೆ ಸಾಮಾನ್ಯವಾಗಿ ಅದೊಂದು ಮಕ್ಕಳ ಮನೋರಂಜನೆಗೆಂದೇ ರಚಿತವಾದ ಸಾಹಿತ್ಯ ಎಂಬ ಸಂಕುಚಿತ ತಿಳುವಳಿಕೆ ಚಾಲ್ತಿಯಲ್ಲಿದ್ದುದೇ ಹೆಚ್ಚು. ಆದರೆ ಆದರಾಚೆಗೆ ಮಕ್ಕಳ ಸಾಹಿತ್ಯವು ವ್ಯಕ್ತಿತ್ವ ವಿಕಸನದ ಕ್ರಿಯೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ಈ ಅಧ್ಯಯನದಿಂದ ಕಂಡುಕೊಂಡ ಫಲಿತವಾಗಿದೆ.

* ಮಕ್ಕಳ ಸಾಹಿತ್ಯವನ್ನು ಮಕ್ಕಳಿಗಾಗಿ ರಚಿಸಿರುವುದರಿಂದ ಹಿರಿಯರು ಓದುವ ಅಗತ್ಯವೇನಿಲ್ಲ ಎಂಬ ಧೋರಣೆಯುಳ್ಳವರಿಗೆ ಮಕ್ಕಳ ಸಾಹಿತ್ಯ ಪ್ರಕಾರಗಳಿಂದ ಮಕ್ಕಳ ಜೊತೆಗೆ ಹಿರಿಯರು ಸಹ ತಿಳಿದುಕೊಳ್ಳಬಹುದಾದ ಸಂಗತಿಗಳು ಸಾಕಷ್ಟಿವೆ ಎಂಬ ಅಂಶವನ್ನು ಪ್ರಸ್ತುತ ಪ್ರಬಂಧವು ಸಾಬೀತುಪಡಿಸುತ್ತಿದೆ. ಅದರಲ್ಲೂ ವಿಶೇಷವಾಗಿ ಮೌಖಿಕ ಕನ್ನಡ ಮಕ್ಕಳ ಸಾಹಿತ್ಯವು ಇತಿಹಾಸದ ರಾಯಭಾರಿಯಂತೆಯೂ ಕೆಲಸ ಮಾಡಿರುವುದನ್ನು ಈ ಅಧ್ಯಯನದ ಹಿನ್ನೆಲೆಯಲ್ಲಿ ಗುರುತಿಸಬಹುದು.

* ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿರುವ ಸ್ಥಾನಮಾನಗಳೇನು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವುದರ ಜೊತೆಯಲ್ಲಿಯೇ ಅದಕ್ಕೊಂದು ನೆಲೆಬೆಲೆಯನ್ನು ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಪ್ರತ್ಯೇಕ ಸಾಹಿತ್ಯ ಚರಿತ್ರೆಯ ಅಗತ್ಯತೆಯ ಫಲಿತವನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಮಕ್ಕಳ ಸಾಹಿತ್ಯ ಅಧ್ಯಯನದಲ್ಲಿ ಮಕ್ಕಳ ಕಥೆ, ಕವನ, ನಾಟಕ, ಕಾದಂಬರಿ ಮತ್ತು ಜೀವನ ಚರಿತ್ರೆ ಮೊದಲಾದ ಪ್ರಕಾರಗಳಿರುವುದನ್ನು ಗಮನಿಸಲಾಗಿ, ಇವುಗಳ ಮೂಲಕ ಅಧ್ಯಯನಕ್ಕೆ ಹೊಸ ಮಾದರಿಯೊಂದನ್ನು ರೂಪಿಸಲಾಗಿದೆ. ಬದಲಾವಣೆಗೊಂಡ ಸಾಹಿತ್ಯ ಪ್ರಕಾರಗಳ ಮೂಲರೂಪವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಇದಕ್ಕೊಂದು ಹೊಸ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

* ಮಕ್ಕಳ ಸಾಹಿತ್ಯ ರಚನೆಯ ಸ್ವರೂಪ ಮತ್ತು ಅದರ ಬಳಕೆಯನ್ನು ಸಮಾಜದಲ್ಲಿ ಮಕ್ಕಳಿಗಿರುವ ಸ್ಥಾನಮಾನಗಳನ್ನು ಗುರುತಿಸಲಾಗಿದೆ. ಜೊತೆಗೆ ಸಾಮಾಜಿಕ ಪರಿಸರದಲ್ಲಿ ಮಕ್ಕಳ ಸಾಹಿತ್ಯ ಮತ್ತು ಅದರ ಭಾಷೆಯು ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ.

* ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರವು ತುಂಬಾ ವಿಸ್ತಾರವಾದುದು. ಪ್ರಸ್ತುತ ಅಧ್ಯಯನದಲ್ಲಿ ಸಂದರ್ಭಾನುಸಾರವಾಗಿ ಮಕ್ಕಳ ಕಥೆ, ಕವನ ಮತ್ತು ನಾಟಕಗಳ ಉಲ್ಲೇಖ ಹಾಗೂ ವಿಶ್ಲೇಷಣೆ ಆಗಿದ್ದರೂ ಸಹ ಪ್ರತ್ಯೇಕವಾಗಿ ಈ ಕ್ಷೇತ್ರದಲ್ಲಿ ಇನ್ನು ಹೆಚ್ಚಿನ ಅಧ್ಯಯನದ ಅಗತ್ಯತೆ ಎದ್ದು ಕಾಣುತ್ತದೆ. ಜೊತೆಗೆ ಈ ಅಧ್ಯಯನವು ಮಕ್ಕಳ ಸಾಹಿತ್ಯವು ಕಥೆ, ಕವನ ಮತ್ತು ನಾಟಕ ಪ್ರಕಾರಗಳನ್ನು ಪ್ರಾತಿನಿಧಿಕವಾಗಿ ಗಮನಿಸಿ ಅಧ್ಯಯನ ಮಾಡಲಾಗಿದ್ದು, ಇದರಾಚೆಗೆ ಇಡೀ ಮಕ್ಕಳ ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳನ್ನು ಪ್ರತ್ಯೇಕವಾಗಿ ಅಧ್ಯಯನಗಳು ಆಗಬೇಕಾಗಿರುವ ಸಾಧ್ಯತೆಯನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

* ಮಕ್ಕಳ ಸಾಹಿತ್ಯದ ಭಾಷೆ ಸಾಹಿತ್ಯಿಕ ಭಾಷೆಯೊಂದಿಗೆ ಆಗಿದೆ. ಅದನ್ನು ಪ್ರಸ್ತುತ ಅಧ್ಯಯನದಲ್ಲಿ ಸಾಹಿತ್ಯದ ಜೊತೆಗೆ ಭಾಷೆಯನ್ನು ಪೂರಕವಾಗಿ ಮಾತ್ರ ಗಮನಿಸಲಾಗಿದೆ. ಹೀಗಾಗಿ ಮಕ್ಕಳ ಸಾಹಿತ್ಯವನ್ನೇ ಕೇವಲ ಭಾಷಿಕ ದೃಷ್ಟಿಯ ನೆಲೆಯಲ್ಲಿಯೂ ಒಂದು ಪ್ರತ್ಯೇಕ ಅಧ್ಯಯನ ಮಾಡುವ ಸಾಧ್ಯತೆಯನ್ನಿಲ್ಲಿ ಕಾಣಬಹುದು.

❖❖❖

ಪ್ರಾತಿನಿಧಿಕ ಮಕ್ಕಳ ಕವನಗಳು ಮತ್ತು ಕಥೆಗಳು ಮಾದರಿಗಾಗಿ

ಮಕ್ಕಳ ಕವಿತೆಗಳು

* **ಪಂಜೆಯವರ ಇನ್ನೊಂದು ಪ್ರಮುಖ ಪದ್ಯವಾದ 'ಉದಯರಾಗ'**

"ಮೂಡುವನು ರವಿ ಮೂಡುವನು
ಕತ್ತಲೊಡನೆ ಜಗಳಾಡುವನು;
ಮೂಡಣ ರಂಗಸ್ಥಳದಲಿ ನೆತ್ತರು
ಮಾಡುವನು, ಕುಣಿದಾಡುವನು.

ಬೆಳಕಿನ ಕಣ್ಣುಗಳಿಂದಾ ಸೂರ್ಯನು
ನೋಡುವನು, ಬಿಸಿಲೂಡುವನು;
ಚಿಳಿಪಿಳಿ ಹಾಡುನು ಹಾಡಿಸಿ, ಹಕ್ಕಿಯ
ಗೂಡಿನ ಹೊರ ಹೊರದೂಡುವನು.

ಬಂಗಾರದ ಚೆಲು ಬಿಸಿಲ ಕಿರೀಟದ
ಶೃಂಗಾರದ ತಲೆ ಎತ್ತುವನು;
ತೆಂಗಿನ, ಕಂಗಿನ, ತಾಳೆಯ, ಬಾಳೆಯ
ಅಂಗಕೆ ರಂಗನು ಮೆತ್ತುವನು.

ಮಾಡಿನ ಹುಲ್ಲಲಿ ಚಿನ್ನದ ಗೆರೆಯನು
ಎಳೆಯುವನು ರವಿ ಹೊಳೆಯುವನು;
ಕೂಡಲೇ ಕೋಣೆಯ ಕತ್ತಲೆ ಕೊಳೆಯನು
ತೊಳೆಯುವನು, ರವಿ ಹೊಳೆಯುವನು.

ಮಲಗಿದ ಕೂಸಿನ ನಿದ್ದೆಯ ಕಸವನು
ಗುಡಿಸುವನು, ಕಣ್ ಬಿಡಿಸುವನು;
ಹಾಲು, ಗಿಡ, ಹೂವಿಗೆ ಪರಿಪರಿ ಬಣ್ಣವ
ಉಡಿಸುವನು, ಹನಿ ತೊಡಿಸುವನು.

ಏರುವನು, ರವಿ ಏರುವನು,
ಬಾನೊಳು ಸಣ್ಣಗೆ ತೋರುವನು;
ಏರಿದವನು ಚಿಕ್ಕವನಿರಬೇಕೆಲೆ
ಎಂಬಾ ಮಾತನು ಸಾರುವನು"

–ಪಂಜೆ ಮಂಗೇಶರಾವ್

* ಕುವೆಂಪುರವರ 'ಅರ್ಧಚಂದ್ರ'

" ದೇವರ ಪೆಪ್ಪರಮೆಂಟೇನಮ್ಮಾ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟಮ್ಮಾ!

ದಿನದಿನ ನೋಡುವೆ, ದಿನವೂ ಕರಗುತ
ಎರಡೇ ವಾರದೊಳಳಿಯುವುದು!
ಮತ್ತದು ದಿನದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು!

ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ?
ನೀನು ದೇವರ ಬಾಲಕನಾಗಲು
ನಿನಗೂ ಕೊಡುವನು, ಕಂದಯ್ಯಾ!

ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮಾ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ!

–ಕುವೆಂಪು

ನರಿಗಳಿಗೇಕೆ ಕೋಡಿಲ್ಲ?

ಕುವೆಂಪು

ತೀರ್ಥಹಳ್ಳಿಗೆ ನಾಲ್ಕೈದು ಮೈಲಿಗಳ ದೂರದಲ್ಲಿ ಒಂದು ಬೆಟ್ಟವಿದೆ. ಅದರ ಹೆಸರು ನವಿಲುಕಲ್ಲು. ಬೆಟ್ಟಕ್ಕೆ ಹಸುರಂಗಿ ತೊಡಿಸಿದಂತೆ ಕಾಡು ದಟ್ಟವಾಗಿ ಬೆಳೆದುಕೊಂಡಿದೆ. ಅದರ ನೆತ್ತಿಯಲ್ಲಿ ನಿಂತು ನೋಡಿದರೆ ಸುತ್ತಲೂ ಮೂವತ್ತು ನಾಲ್ವತ್ತು ಮೈಲಿಗಳ ಚೆಲುವಾದ ಮಲೆನಾಡಿನ ಕಾಡುಗಳ ನೋಟವು ಕಂಗೊಳಿಸುತ್ತದೆ. ಕಾಡು ಹಬ್ಬಿಕೊಂಡ ಆ ಬೆಟ್ಟದ ಸಾಲುಗಳು ಅಲೆಅಲೆಯಾಗಿ, ಬಾನಿನ ಕೆರೆಯಲ್ಲಿ ಮುಸುಕಾಗಿ ಮೋಡಗಳನ್ನು ಒಂದರ ಮೇಲೊಂದು ಹೇರಿ ಗುಡ್ಡೆ ಹಾಕಿದಂತೆ ಕಾಣಿಸುತ್ತವೆ. ನಡುವೆ ಕಣಿವೆಗಳಲ್ಲಿ ಗದ್ದೆಗಳೂ ಅಡಕೆ ತೋಟಗಳೂ ಕಣ್ಣಿಗೆ ಮುತ್ತು ಕೊಡುವಂತೆ ಹಬ್ಬಿರುವುವು. ಮರಳಿ ಹೇಳುತ್ತೇನೆ: ಆ ಬೆಟ್ಟದ ಹೆಸರು ನವಿಲುಕಲ್ಲು!

ಇಂದಿಗೆ ಸುಮಾರು ಐವತ್ತೆರಡು ವರ್ಷಗಳ ಹಿಂದೆ ಆ ನವಿಲುಕಲ್ಲಿನಲ್ಲಿ ಒಂದು ಗುಬ್ಬಚ್ಚಿಯ ಸಂಸಾರವಿತ್ತು. ಹೆಣ್ಣು ಗುಬ್ಬಚ್ಚಿಯ ಹೆಸರು ಗುಬ್ಬಕ್ಕ. ಗಂಡು ಗುಬ್ಬಚ್ಚಿಯ ಹೆಸರು ಗುಬ್ಬಣ್ಣ. ಅವರಿಗಿದ್ದ ಮನೆ ಸವಿಯಾದ ಮನೆ. ಅದು ಒಂದು ಹೆಮ್ಮರದ ನೆತ್ತಿಯ ಕೊಂಬೆಯ ತುದಿಯಲ್ಲಿತ್ತು. ಗಾಳಿ ಬಂದಾಗ ಆ ಕೊಂಬೆ ತೊಟ್ಟಿಲಂತೆ ತೂಗುತ್ತಿತ್ತು. ಆಗ ಆ ಗಂಡು ಹೆಣ್ಣು ಹಕ್ಕಿಗಳೆರಡೂ ಹಾಡಿ ನಲಿಯುತ್ತಿದ್ದವು. ಅವರ ಮನೆಗೆ ಬೆಲ್ಲದ ಗೋಡೆ, ಸಕ್ಕರೆ ಬಾಗಿಲು, ಕಬ್ಬಿನ ಮುಚ್ಚಿಗೆ ಮನೆಯ ಅಂಗಳದಲ್ಲಿ ಒಂದು ಪುಟ್ಟ ಸರೋವರ, ಅದರಲ್ಲಿ ನೀರಿರಲಿಲ್ಲ, ಜೇನುತುಪ್ಪವಿತ್ತು.

ಇಷ್ಟು ಸುಖಗಳಿದ್ದರೂ ಆ ಪಕ್ಷಿ ದಂಪತಿಗಳಿಗೆ ಮಕ್ಕಳಿರಲಿಲ್ಲ. ಗುಬ್ಬಣ್ಣನು ದೇವರಿಗೆ ಮೊರೆಯಿಟ್ಟು, ಹರಕೆ ಹೊತ್ತ ಮೇಲೆ ಮೂರು ಮಕ್ಕಳಾದರು. ಹರಕೆ ಸಲ್ಲಿಸುವುದಕ್ಕಾಗಿ ಅವನು ಕಾಶಿಗೆ ಯಾತ್ರೆ ಹೋದನು. ಗುಬ್ಬಕ್ಕನೊಬ್ಬಳೆ ಮಕ್ಕಳನ್ನು ನೋಡಿಕೊಂಡು ಸಂಸಾರವನ್ನು ಸಾಂಗವಾಗಿ ನಡೆಸಿಕೊಂಡು ಬರುತ್ತಿದ್ದಳು.

ಹೀಗಿರುತ್ತಿರಲು ಒಂದು ದಿನ ರಾತ್ರಿ ದೊಡ್ಡ ಮಳೆ ಬಂತು. ಮಳೆ ಎಂದರೆ ಮಲೆನಾಡಿನ ಮಳೆ! ಸೋನೆ ಮಳೆಯಲ್ಲ, ಆನೆ ಮಳೆ! ಅದರ ಜೊತೆಗೆ ಗುಡುಗು, ಮಿಂಚು, ಸಿಡಿಲು, ಬಿರುಗಾಳಿ, ಆಲಿಕಲ್ಲು, ಮೇಲೆ ಕಗ್ಗತ್ತಲು, ಪಾಪ, ಗುಬ್ಬಕ್ಕ ಮನೆಯ ಸಕ್ಕರೆ ಬಾಗಿಲು ಬಲವಾಗಿ ಮುಚ್ಚಿ, ಸಿಹಿಮುತ್ತಿನ ಅಗಣಿ ಹಾಕಿ, ಎಲ್ಲಿ ಬೆಲ್ಲದ ಗೋಡೆ ಕರಗಿ ಹೋಗುವುದೋ ಎಂದು ಚಿಂತಿಸುತ್ತಾ, ಮಕ್ಕಳನ್ನು ತೊಟ್ಟಿಲಲ್ಲಿ ತೂಗುತ್ತಿದ್ದಳು. ಅಯ್ಯೋ ಪಾಪ, ಅವರ ಮನೆಯ ಜೇನುತುಪ್ಪದ ಕೊಳವಂತೂ ತುಂಬಿತ್ತು!

ಅದೇ ಸಮಯದಲ್ಲಿ ಆ ಬೆಟ್ಟದ ಕಿಬ್ಬಿಯಲ್ಲಿ ಆ ಬಾರಿ ಮಳೆಗೆ ಸಿಕ್ಕಿಬಿದ್ದ ಮೂವರು ಪ್ರಯಾಣಿಕರು ಬಹಳ ನರಳುತ್ತ ಬರುತ್ತಿದ್ದರು. ಒಬ್ಬನ ಹೆಸರು ಹುಲಿಯಣ್ಣ, ಒಬ್ಬನ ಹೆಸರು ಕರಡ್ಯಣ್ಣ, ಒಬ್ಬನ ಹೆಸರು ನರಿಯಣ್ಣ. ಆ ಜಡಿಯಲ್ಲಿ ಮೂವರೂ ನಡುಗುತ್ತಿದ್ದರು. ಎಲ್ಲಿಯಾದರೂ ಒಂದು ಆಶ್ರಯ ಸಿಕ್ಕರೆ ಸಾಕಲ್ಲಾ ಎಂದು ಭಗವಂತನನ್ನು ಬೇಡಿದರು. ಹೇಗೆಂದರೆ, ಹುಲಿಯಣ್ಣ ಕಾಡು ಕಂಪಿಸುವಂತೆ ಕೂಗಿದನು; ಕರಡ್ಯಣ್ಣ ಗರ್ಜಿಸಿದನು; ನರಿಯಣ್ಣ ಬಳ್ಳಿಕ್ಕಿದನು. ಅಂತೂ ಬಹಳ ಕಷ್ಟಪಟ್ಟು ಬೆಟ್ಟ ಹತ್ತಿದರು. ಅವರ ಕಣ್ಣಿಗೆ ಗುಬ್ಬಕ್ಕನ ಮನೆಯ ದೀಪ ಕಾಣಿಸಿತು. ಗುಬ್ಬಕ್ಕನು ತೊಟ್ಟಿಲು ತೂಗುತ್ತ ಹೇಳುತ್ತಿದ್ದ ಜೋಗುಳದ ಹಾಡೂ ಕೇಳಿಸಿತಂತೆ, ನರಿಯಣ್ಣನಿಗೆ. ಮನೆಯನ್ನು ಕಂಡಕೂಡಲೇ ಅವರಿಗೆಲ್ಲಾ ಬಹಳ ಸಂತೋಷವಾಯಿತು. ಪರಿಚಯವಿಲ್ಲದಿದ್ದರೂ ಕೂಡ ಕಷ್ಟಕಾಲವಾದ್ದರಿಂದ ಗುಬ್ಬಕ್ಕನ ಮನೆಗೆ ಹೋಗಲು ನಿಶ್ಚಯಿಸಿ ಮೂವರೂ ಓಡಿದರು. ಓಡಿ ಮನೆಯ ಚಾವಡಿಗೆ ಬಂದರು. ಮಳೆ ಹೋ ಎಂದು ಸುರಿಯುತ್ತಿತ್ತು. ಮಿಂಚು ಮಿಂಚುತ್ತಿತ್ತು.

ನರಿಯಣ್ಣ, ಬಾಗಿಲು ತಟ್ಟಿದನು. ಒಳಗೆ ಬೆದರಿ ಕುಳಿತಿದ್ದ ಗುಬ್ಬಕ್ಕ ಹೆದರಿ ನಡುಗಿದಳು, ಯಾರೋ ಏನೋ ಎಂದು. ನರಿಯಣ್ಣ ಬಲವಾಗಿ ಬಾಗಿಲು ತಟ್ಟಿದನು.

ಗುಬ್ಬಕ್ಕ "ಯಾರಪ್ಪಾ ಅದು?" ಎಂದಳು.

ನರಿಯಣ್ಣ "ನಾನವ್ವಾ!" ಎಂದನು.

"ನಾನು ಎಂದರೆ?"

"ನಾನು! ನರಿಯಣ್ಣ!"

ಗುಬ್ಬಕ್ಕ ಬೆಚ್ಚಿದಳು. ನರಿಯಣ್ಣನ ದುಷ್ಕೀರ್ತಿ ಗುಬ್ಬಕ್ಕನ ಕಿವಿಗೂ ಕೂಡ ಮುಟ್ಟಿದ್ದಿತು. ಸ್ವಲ್ಪ ಧೈರ್ಯ ತಂದುಕೊಂಡು "ಅಪ್ಪಾ, ಬಡವರ ಮನೆ! ಬಾಗಿಲನ್ನೇಕೆ ಹಾಗೆ ಬಡಿಯುತ್ತೀಯಾ?" ಎಂದಳು.

"ಅಕ್ಕಾ, ಮಳೆಯಲ್ಲಿ ಸಿಕ್ಕಿ ಸಾಕಾಗಿದೆ. ಬೆಳಗಾಗುವ ತನಕ ಸ್ವಲ್ಪ ಜಾಗ ಕೊಟ್ಟರೆ ಸಾಕು" ಎಂದನು ನರಿಯಣ್ಣ.

"ಅಪ್ಪಾ, ಇಲ್ಲಿ ಜಾಗವಿಲ್ಲ. ಮೂವರು ಮಕ್ಕಳು ಬೇರೆ ಇದ್ದಾರೆ. ನಮಗೇ ಕಾಲು ಚಾಚಿ ಮಲಗಲು ತಾವಿಲ್ಲ. ನೀನು ಹೀಗೆ ದೊಂಬಿ ಮಾಡಬೇಡ ಮಾರಾಯಾ! ಮಕ್ಕಳೆದ್ದಾರು!"

ನರಿಯಣ್ಣನಿಗೆ ಯಾರೂ ಬಾಗಿಲು ತೆಗೆಯುವುದಿಲ್ಲ ಎಂದುಕೊಂಡು ಹುಲಿಯಣ್ಣ "ಅಕ್ಕಾ ಗುಬ್ಬಕ್ಕ! ನಾನು ಹುಲಿಯಣ್ಣ ಇದ್ದೇನೆ. ದಯವಿಟ್ಟು ಬಾಗಿಲು ತೆರೆ. ನಿನಗೇನೂ ಅಪಾಯ ಬರದಂತೆ ನೋಡಿಕೊಳ್ಳುತ್ತೇನೆ. ಹೆದರಬೇಡ. ನಮ್ಮ ಸಂಗಡ ಸಾಧು ಸಜ್ಜನನಾದ ಕರಡ್ಯಣ್ಣನೂ

ಇದ್ದಾನೆ" ಎಂದು ಹೇಳಿ ಬಾಗಿಲನ್ನು ದಡಬಡ ಬಡಿಯುತ್ತಿದ್ದ ನರಿಯಣ್ಣನಿಗೆ "ಲೋ ನರಿಯಾ, ಯಾಕೋ ದೊಂಬಿ? ಸುಮ್ಮನಿರೋ" ಎಂದು ಒಂದು ಗುದ್ದು ಕೊಟ್ಟನು.

ಗುಬ್ಬಕ್ಕನಿಗೆ ಸ್ವಲ್ಪ ಧೈರ್ಯ ಬಂದು ಬಾಗಿಲು ತೆರೆದಳು. ಮೂವರು ಅತಿಥಿಗಳೂ ಒಳಗೆ ಬಂದರು. ಕಾಲೆಲ್ಲಾ ಕೆಸರಾಗಿತ್ತು. ತೊಳೆದುಕೊಳ್ಳಲು ಬಿಸಿನೀರು ಕೊಟ್ಟಳು. ಮೈಯೆಲ್ಲ ಒದ್ದೆಯಾಗಿತ್ತು ಒರೆಸಿಕೊಳ್ಳಲು ಮೈವಸ್ತ್ರ ಕೊಟ್ಟಳು. ಹೊಟ್ಟೆ ತುಂಬಾ ಹಸಿವೆಯಿತ್ತು. ಹೊಸ ಪೈರಿನ ಹಸನಾದ ಕಾಳನ್ನು ಬೇಯಿಸಿ ಮಾಡಿದ ಕೂಳನ್ನು ಬಡಿಸಿದಳು. ಮೂವರೂ ತಿಂದು ತೇಗಿದರು. ತರುವಾಯ ಮುರುವಿನ ಒಲೆಯ ಬಳಿ ಬೆಂಕಿಯ ಕಾವಿನಲ್ಲಿ ಒರಗಲು ಹುಲ್ಲಿನ ಹಾಸಿಗೆಗಳನ್ನೂ ಕೊಟ್ಟಳು.

ಮೂವರೂ ಅತಿಥಿಗಳೂ ಚಳಿ ಕಾಯಿಸಿಕೊಳ್ಳುತ್ತಿದ್ದರು. ಕರಡ್ಯಣ್ಣನು ಬೆಲ್ಲದ ಗೋಡೆಯ ಮೇಲೆ ತಗುಲಿ ಹಾಕಿದ್ದ ಮಹಾತ್ಮಾ ಗಾಂಧಿಯ ಪಟವನ್ನೂ, ಶ್ರೀರಾಮಕೃಷ್ಣ, ವಿವೇಕಾನಂದ ಪಟವನ್ನೂ ನೋಡಿ, "ಇವೇಕೆ ಈ ಪಟಗಳು" ಎಂದು ಕೇಳಿದನು.

"ಮಕ್ಕಳು ಈ ಮಹಾಪುರುಷರ ಸನ್ನಿಧಿಯಲ್ಲಿಯೇ ಬೆಳೆದರೆ ಅವರೂ ಮಹಾತ್ಮರಾಗುತ್ತಾರೆ. ಭರತ ಮಾತೆಯ ಉದ್ಧಾರ ಮಾಡುತ್ತಾರೆ. ಅದಕ್ಕೋಸ್ಕರ ಈ ಪಟಗಳನ್ನು ಇಟ್ಟಿದ್ದೇನೆ. ಅವರಿಗೆ ದಿನವೂ ಅವರ ಕಥೆಗಳನ್ನು ಜೋಗುಳದಂತೆ ಹೇಳುತ್ತೇನೆ. ಹಾಲು ಬೆಣ್ಣೆಗಳಲ್ಲಿ ಅವರ ಮಹಿಮೆಯನ್ನು ಊಡುತ್ತೇನೆ" ಎಂದಳು ಗುಬ್ಬಕ್ಕ.

"ಎಲ್ಲಿ? ನಿನ್ನ ಮಕ್ಕಳನ್ನು ನೋಡೋಣ!" ಎಂದನು ನರಿಯಣ್ಣ.

"ತೊಟ್ಟಿಲಲ್ಲಿ ಮಲಗಿ ನಿದ್ದೆ ಹೋಗಿದ್ದಾರೆ, ಬನ್ನಿ ನೋಡಿ" ಎಂದು ಗುಬ್ಬಕ್ಕನು ಅವರನ್ನು ಕರೆದುಕೊಂಡು ಹೋಗಿ ತೋರಿಸಿದಳು. ಮೂವರೂ ಮಕ್ಕಳೂ ಮಿಂಚಿನುಂಡೆಗಳಂತೆ ಹೊಳೆಯುತ್ತಿದ್ದರು. ಹುಲಿಯಣ್ಣ, ಕರಡ್ಯಣ್ಣ ಇಬ್ಬರೂ ಸಂತೋಷಪಟ್ಟರು. ನರಿಯಣ್ಣನೂ ಬಹಳ ಸಂತೋಷಪಟ್ಟ!

ಎಲ್ಲರೂ ಮಲಗಿಕೊಂಡರು. ಕರಡ್ಯಣ್ಣ ಗೊರಕೆ ಹೊಡೆದದ್ದೂ ಹೊಡೆದದ್ದು! ಆದರೆ ಮಳೆ, ಗಾಳಿ, ಗುಡುಗು ಜೋರಾಗಿದ್ದುದರಿಂದ ಅದು ಯಾರಿಗೂ ತೊಂದರೆ ಮಾಡಲಿಲ್ಲ.

ನಸುಕು ಹರಿಯಿತು. ಮಳೆ ನಿಂತಿತು. ಗುಬ್ಬಕ್ಕ ಎದ್ದು ಮನೆಯನ್ನು ಗುಡಿಸಿ, ರಂಗೋಲಿ ಹಾಕಿ, ಹಾಲು ಕರೆಯಲು ಕೊಟ್ಟಿಗೆಗೆ ಹೋದಳು. ಹುಲಿಯಣ್ಣ, ಕರಡ್ಯಣ್ಣ ಎದ್ದು ಹೋಗಲನುವಾದರು. ನರಿಯಣ್ಣನನ್ನು ಕರೆದರೆ, "ಆ! ಹೂ! ಊಹೂ!" ಎಂದು ಮಲಗಿಯೆ ಇದ್ದನು. ಪಾಪ, ನರಿಯಣ್ಣನಿಗೆ ಬಹಳ ನಿದ್ದೆ ಎಂದು ತಿಳಿದು ಹುಲಿಯಣ್ಣ, ಕರಡ್ಯಣ್ಣ ಹೊರಟು ಹೋದರು. ಯಜಮಾನಿ ಸಿಕ್ಕಲಿಲ್ಲವಾದುದರಿಂದ ನಮಸ್ಕಾರ ಹೇಳಲಿಲ್ಲ.

ಅವರು ಹೊರಟುಹೋದ ಮೇಲೆ ನರಿಯಣ್ಣನು ಮೆಲ್ಲಗೆ ಎದ್ದನು. ಮನೆಯಲ್ಲಿ ಯಾರೂ ಇರಲಿಲ್ಲ. ಗುಬ್ಬಕ್ಕನ ಮಕ್ಕಳು ಆಗತಾನೆ ಎದ್ದು ಅಳುತ್ತಿದ್ದವು. ನರಿಯಣ್ಣ ಮೂರು ಮಕ್ಕಳನ್ನೂ ನುಂಗಿ ಬೇಗ ಬೇಗನೆ ಸಕ್ಕರೆಯ ಬಾಗಿಲನ್ನು ಮುರಿದುಕೊಂಡು ಓಡಿಹೋದನು!

ಸ್ವಲ್ಪ ಹೊತ್ತಾದ ಮೇಲೆ ಗುಬ್ಬಕ್ಕ ಹಾಲು ಕರೆದುಕೊಂಡು ಬಂದು ನೋಡುತ್ತಾಳೆ, ಮಕ್ಕಳಿಲ್ಲ! ಅತಿಥಿಗಳೂ ಇಲ್ಲ! ಗುಬ್ಬಕ್ಕ ಗೊಳೋ ಎಂದು ರೋದಿಸತೊಡಗಿದಳು. ಕಾಡಿನಲ್ಲಿ ಕೇಳುವವರಾರು? ಬಿಕ್ಕಿ ಬಿಕ್ಕಿ ಅತ್ತು ಕಡೆಗೆ ಕಳ್ಳರನ್ನು ಹುಡುಕಿಕೊಂಡು ಹೊರಟಳು. ಎಲ್ಲೆಲ್ಲಿಯೋ ಹುಡುಕಿದಳು. ಯಾರ್ಯಾರನ್ನೋ ಕೇಳಿದಳು. ಕಡೆಗೆ ಹಾರುತ್ತಿರುವಾಗ ಒಂದು ಪರ್ವತದ ತಪ್ಪಲಿನಲ್ಲಿ ಹುಲಿಯಣ್ಣ, ಕರಡ್ಯಣ್ಣ ಹೋಗುತ್ತಿದ್ದುದನ್ನು ಕಂಡಳು. ಬೇಗ ಓಡಿ ಹೋಗಿ ತಡೆದಳು! ಅವರಿಗೆ ಆಶ್ಚರ್ಯವಾಯಿತು. "ಗುಬ್ಬಕ್ಕ, ಏಕೆ ಅಳುತ್ತೀಯಾ?" ಎಂದರು.

"ನೀವೆಲ್ಲ ಕಳ್ಳರು! ನನ್ನ ಮಕ್ಕಳನ್ನು ತಿಂದು ಬಂದಿದ್ದೀರಿ! ನಿಮಗೆ ಮಾಡಿದ ಉಪಕಾರಕ್ಕೆ ಇದೇನೆ ಪ್ರತ್ಯುಪಕಾರ? ಅಯ್ಯೋ!" ಎಂದು ಅತ್ತಳು.

ಹುಲಿಯಣ್ಣನಿಗೆ ಎದೆ ಕರಗಿಹೋಯಿತು. ಕರಡ್ಯಣ್ಣನಿಗೆ ಕಳವಳ ಹೆಚ್ಚಾಯಿತು. ಆಗ ಹೇಳಿದರು: ತಾವು ಬರುವಾಗ ನರಿಯಣ್ಣ ಅಲ್ಲಿಯೇ ಇದ್ದನೆಂದೂ, ಮಕ್ಕಳು ನಿದ್ದೆ ಮಾಡುತ್ತಿದ್ದವೆಂದೂ! ಕಡೆಗೆ ನರಿಯಣ್ಣನೆ ಈ ಘೋರಕೃತ್ಯವನ್ನು ಮಾಡಿರಬೇಕೆಂದು ನಿರ್ಧರಿಸಿ, ಗುಬ್ಬಕ್ಕನನ್ನೂ ಜೊತೆಯಲ್ಲಿ ಕರೆದುಕೊಂಡು ನರಿಯಣ್ಣನ ಪತ್ತೆಗೆ ಹೊರಟರು. ಹೊರಟು ಹುಡುಕಿದರು. ಎಲ್ಲಿಯೂ ಸಿಕ್ಕಲಿಲ್ಲ. ಕಡೆಗೆ ಎದುರಿಗೆ ಬರುತ್ತಿದ್ದ ಗೂಬಮ್ಮನನ್ನು ಕೇಳಿದರು. "ನರಿಯಣ್ಣ ಎರಡು ಮೈಲಿ ಆಚೆ ಓಡುತ್ತಿದ್ದ!" ಎಂದು ಗೂಬಮ್ಮ ಹೇಳಲು ಎಲ್ಲರೂ ಓಡಿದರು. ದೂರದಲ್ಲಿ ನರಿಯಣ್ಣ ಹೋಗುತ್ತಿದ್ದ. ಅವನು ಹುಲಿಯಣ್ಣ ಕರಡ್ಯಣ್ಣನ ಜೊತೆಯಲ್ಲಿ ಗುಬ್ಬಕ್ಕನನ್ನು ಕಾಣಲು ತನಗೆ ಕೇಡು ಬಂತೆಂದು ತಿಳಿದು ಓಟಕಿತ್ತನು. ಆದರೆ ಹುಲಿಯಣ್ಣನು ಮಿಂಚಿನಂತೆ ಹಾರಿಹೋಗಿ ಹಿಡಿದನು. ಕರಡ್ಯಣ್ಣನು "ಕಳ್ಳಾ! ಒಳ್ಳೇ ಮಾತಿನಿಂದ ಗುಬ್ಬಕ್ಕನ ಮಕ್ಕಳನ್ನು ಕೊಡುತ್ತಿಯೋ ಇಲ್ಲವೋ?" ಎಂದನು. ನರಿಯಣ್ಣನು ಏನೂ ತಿಳಿಯದವನಂತೆ ನಟಿಸಿ, ತಾನು ನಿರಪರಾಧಿ ಎಂದು ವಾದಿಸಿದನು. ಗುಬ್ಬಕ್ಕನು ಗೊಳೋ ಎಂದು ಅಳುತ್ತಲೇ ಇದ್ದಳು. ಹುಲಿಯಣ್ಣನು ಅಳುವುದನ್ನು ಸ್ವಲ್ಪ ನಿಲ್ಲಿಸುವಂತೆ ಹೇಳಿ, ನರಿಯಣ್ಣನ ಹೊಟ್ಟೆಯ ಹತ್ತಿರ ಕಿವಿಯನ್ನು ಚಾಚಿ ಆಲೈಸಿದನು. ಒಳಗೆ ಚೀ! ಪೀ! ಸದ್ದು!! ಕಳ್ಳ ಸಿಕ್ಕಿದ ಎಂದು ಹುಲಿಯಣ್ಣ ನರಿಯಣ್ಣನನ್ನು ಹಿಡಿದುಕೊಂಡ! ನರಿಯಣ್ಣ ತಾನು ಕೆಟ್ಟೆನೆಂದು ತಿಳಿದು ಹಲ್ಲು ಹಲ್ಲು ಕಿರಿಯುತ್ತ ದಮ್ಮಯ್ಯ ಎಂದನು. ಕರಡ್ಯಣ್ಣನು ಹುಲಿಯಣ್ಣನನ್ನು ಕುರಿತು "ಅವನ ಹೊಟ್ಟೆಯನ್ನು ಸೀಳು ಮರಿಗಳನ್ನು ಈಚೆಗೆ ತೆಗೆ!" ಎಂದನು. ಹುಲಿಯಣ್ಣನು ನರಿಯಣ್ಣನನ್ನು ಕೆಳಗೆ ಹಾಕಿಕೊಂಡು ಮೇಲೆ ಕುಳಿತುಕೊಂಡನು: ನರಸಿಂಹನು ಹಿರಣ್ಯಕಶಿಪುವಿನ ಮೇಲೆ

ಕುಳಿತಂತೆ. ಇನ್ನೇನು! ಹುಲಿಯಣ್ಣನು ತನ್ನ ಕ್ರೂರ ವ್ಯಾಘ್ರನಖಗಳಿಂದ ನರಿಯಣ್ಣನ ಹೊಟ್ಟೆ ಬಗೆಯಬೇಕು. ಅಷ್ಟರಲ್ಲಿ ನರಿಯಣ್ಣ ಗುಬ್ಬಕ್ಕನನ್ನು ಕುರಿತು "ಅಕ್ಕಾ, ಗುಬ್ಬಕ್ಕಾ! ನಿನ್ನ ದಮ್ಮಯ್ಯ! ನನ್ನನ್ನು ಕಾಪಾಡು. ನನಗೂ ಮಕ್ಕಳಿದ್ದಾರೆ!" ಎಂದನು. ಗುಬ್ಬಕ್ಕನ ಕರಳು ಕರಗಿತು. ಎಷ್ಟಾದರೂ ಹೆತ್ತ ಹೆಣ್ಣಲ್ಲವೇ?

"ಹುಲಿಯಣ್ಣಾ, ಬೇಡ! ಬೇಡ! ಬಿಡು" ಎಂದಳು.

"ಹಾಗಾದರೆ ನಿನ್ನ ಮಕ್ಕಳು ಉಳಿಯುವುದು ಹೇಗೆ?" ಎಂದನು ಹುಲಿಯಣ್ಣ.

"ನಾನೊಂದು ಉಪಾಯ ಹೇಳುತ್ತೇನೆ" ಎಂದಳು ಗುಬ್ಬಕ್ಕ.

"ಏನದು?" ಎಂದನು ಕರಡ್ಯಣ್ಣ.

"ಹುಲಿಯಣ್ಣ ನರಿಯಣ್ಣನನ್ನು ಹಿಡಿದುಕೊಳ್ಳಲಿ. ಕರಡ್ಯಣ್ಣ ಅವನ ಬೆನ್ನಿನ ಮೇಲೆ ಬಲವಾಗಿ ಒಂದು ಗುದ್ದು ಹೇರಲಿ. ಆಗ ನನ್ನ ಮಕ್ಕಳು ನರಿಯಣ್ಣನ ಬಾಯಿಂದ ಈಚೆಗೆ ಬೀಳುತ್ತಾರೆ!" ಎಂದಳು ಗುಬ್ಬಕ್ಕ.

ಸರಿ, ಹುಲಿಯಣ್ಣ ಹಿಡಿದುಕೊಂಡ. ಕರಡ್ಯಣ್ಣ ಹೇರಿದ! ಬಂದರು ಈಚೆಗೆ ಗುಬ್ಬಕ್ಕನ ಮೂರು ಮಕ್ಕಳು, ಚೀ, ಪೀ, ಚೀ, ಪೀ ಎನ್ನುತ್ತ!

ಆದರೆ ಮಕ್ಕಳ ಮೈತುಂಬ ನರಿಯಣ್ಣನ ಜೊಲ್ಲು ತುಂಬಿಹೋಗಿತ್ತು!

ಗುಬ್ಬಕ್ಕ ಮರಿಗಳನ್ನು ಎತ್ತಿಕೊಂಡು ಹರ್ಷದಿಂದ ಹೋದಳು. ತನ್ನ ಸವಿಯಾದ ಮನೆಗೆ, ಸ್ನಾನ ಮಾಡಿಸಿ, ಉಣ್ಣಲಿಕ್ಕಿ, ಮಲಗಿಸಲು! ಹುಲಿಯಣ್ಣನು ನರಿಯಣ್ಣನಿಗಿದ್ದ ಎರಡು ಕೋಡುಗಳನ್ನೂ ಶಿಕ್ಷೆಗಾಗಿ ಮುರಿದನು. ಕರಡ್ಯಣ್ಣನು "ಇನ್ನು ಮೇಲೆ ನಿನ್ನ ಜಾತಿಗೆ ಕೋಡುಗಳಿರದೆ ಹೋಗಲಿ" ಎಂದು ಶಾಪ ಕೊಟ್ಟನು.

ಅಂದಿನಿಂದ ನರಿಯ ಜಾತಿಗೆ ಕೋಡುಗಳಿಲ್ಲ!

ಬ್ರಾಂಟಿ

ರಾಜಶೇಖರ ಭೂಸನೂರುಮಠ

ಉತ್ತರ ಧ್ರುವ ಪ್ರದೇಶದ ಹತ್ತಿರ ವಿಜ್ಞಾನಿಗಳಿಗೆ ಒಂದು ದೊಡ್ಡ ತತ್ತಿ ಸಿಕ್ಕಿತು. ಹಿಮದಲ್ಲಿ ಹುಗಿದುಹೋಗಿದ್ದ ಆ ಭಾರೀ ತತ್ತಿ ಎಷ್ಟೂ ಕೆಟ್ಟಿರಲಿಲ್ಲ. ಎಕ್ಸರೇ ತೆಗೆದು ಪರೀಕ್ಷಿಸಿದಾಗ ಅದು ಬ್ರಾಂಟಾಸಾರಸ್ ಎಂಬ ಪೆಡಂಭೂತದ್ದೆಂದು ತಿಳಿಯಿತು. ಲಕ್ಷಾಂತರ ವರ್ಷಗಳ ಹಿಂದೆ ನಾಶವಾಗಿದ್ದ ಆ ಪ್ರಾಣಿ ಪಕ್ಷಿಗಳ ಒಂದು ಜೀವಂತ ತತ್ತಿ (ಮೊಟ್ಟೆ) ಸಿಕ್ಕಿದ್ದು ವಿಜ್ಞಾನಿಗಳಿಗೆ ಸಂತೋಷದ ವಿಷಯವಾಯಿತು.

ಆ ತತ್ತಿಯನ್ನು ಮರಿ ಮಾಡಲು ಕಾವು ಪೆಟ್ಟಿಗೆಯಲ್ಲಿ ಇಟ್ಟರು. ಪಿಂಕಿಯ ತಂದೆ ವಿಜ್ಞಾನಿಯಷ್ಟೇ. ಈ ಕಾವು ಪೆಟ್ಟಿಗೆಯ ಜವಾಬದಾರಿ ಅವರ ಕೊರಳಿಗೆ ಬಿದ್ದಿತು. ಬ್ರಾಂಟಾಸಾರಸ್ಸಿನ ಸುದ್ದಿ ಎಲ್ಲೆಡೆ ಹಬ್ಬಲು ತಡವಾಗಲಿಲ್ಲ. ಈ ಕೌತುಕ ನೋಡಲು ವಿಜ್ಞಾನಿಗಳು, ಪತ್ರಿಕೆಯವರು, ಪ್ರವಾಸಿಗರು ತಂಡ ತಂಡಗಳಲ್ಲಿ ಬರತೊಡಗಿದರು.

ಆ ಭಾರೀ ತತ್ತಿಯ ಸುದ್ದಿ ಟಿ.ವಿ., ರೇಡಿಯೋ, ಪತ್ರಿಕೆಗಳಲ್ಲಿ ಒಂದೇ ಸಮನೆ ಬರತೊಡಗಿತು. ಇಡೀ ಜಗತ್ತೆಲ್ಲ ಬ್ರಾಂಟಾಸಾರಸ್ಸಿನ ಮೊಟ್ಟೆ ಒಡೆದು, ಅದರೊಳಗಿಂದ ಮರಿ ಬರುವ ಹಾದಿಯನ್ನೇ ನೋಡತೊಡಗಿತು!

ಪ್ರಾಣಿ ಸಂಗ್ರಹಾಲಯದಲ್ಲಿ (ಜೂ) ಕಾವು ಪೆಟ್ಟಿಗೆಯ ಸುತ್ತ ಬೇಲಿ ಹಾಕಿದ್ದರು. ಬಲವಾದ ಕಾವಲಿಟ್ಟರು. ಅನುಮತಿ ಇಲ್ಲದೆ ಯಾರನ್ನೂ ಬಿಡುತ್ತಿರಲಿಲ್ಲ.

ತತ್ತಿ ತಂದು ನಲವತ್ತಾರು ದಿನಗಳಾದರೂ ಒಡೆಯುವ ಲಕ್ಷಣವೇ ಕಾಣಲಿಲ್ಲ. ಪಿಂಕಿಯ ತಂದೆ ತಮ್ಮ ಗೆಳೆಯ ಪ್ರೊ. ಯಾಕಟ್ಟಿಯವರೊಡನೆ ಮಾತನಾಡುತ್ತ ಕುಳಿತಿದ್ದರು. ಕಾವು ಪೆಟ್ಟಿಗೆಯ ಕೋಣೆಯ ಹೊರಗೆ ಕೆಂಪು ದೀಪ ಹತ್ತಿತು. ಇಬ್ಬರೂ ಒಳಗೆ ಓಡಿದರು.

ತತ್ತಿ ಒಡೆದು ಮರಿ ಬ್ರಾಂಟಾಸಾರಸ್ ಹೊರಗೆ ಬಂದಿತು! ಸುದ್ದಿ ತಿಳಿದು ಹೊರಗೆ ಜನಸಂದಣಿಯಾಯಿತು.

“ಅದರ ಹೆಸರೇನು ಡ್ಯಾಡಿ?” ಪಿಂಕಿ ಕೇಳಿದಳು.

ತಂದೆ ಗೊಂದಲದಲ್ಲಿ ಬಿದ್ದರು. ಮಕ್ಕಳಿಗೆ ಪ್ರವೇಶವಿಲ್ಲ. ಆದರೂ ಪಿಂಕಿ ಏಕೆ ಮತ್ತು ಹೇಗೆ ಬಂದಿದ್ದಾಳೆ!

“ಪಿಂಕೀ ಹೋಗು ನೋಡೋಣ. ಹೇಗೆ ಒಳಗೆ ಬಂದೆ?” ತಂದೆ ಸಿಟ್ಟಿನಿಂದ ಕೇಳಿದರು.

“ಪತ್ರಿಕೆಯವರೊಡನೆ ಡ್ಯಾಡೀ, ನಿಮ್ಮ ಮಗಳೆಂದು ತಿಳಿದೊಡನೆ ಸುಮ್ಮನೆ ಒಳಗೆ ಬಿಟ್ಟರು ನೋಡು.”

"ಇನ್ನೊಮ್ಮೆ ಇಲ್ಲಿ ಬಂದರೆ ನಿನ್ನ ಕಾಲು ಮುರಿಯುತ್ತೇನೆ" ಎಂದು ಬೆದರಿಸಿ ಪಿಂಕಿಯನ್ನು ಹೊರಗೆ ಕಳಿಸಿದರು.

ಆದರೆ ಪಿಂಕಿ ಬ್ರಾಂಟಿಯ ಹತ್ತಿರ ಹೋಗುವುದನ್ನು ನಿಲ್ಲಿಸಲಿಲ್ಲ! (ಬ್ರಾಂಟಾಸಾರಸ್ಸಿಗೆ ಆಕೆ 'ಬ್ರಾಂಟಿ' ಎಂದು ಮುದ್ದಿನಿಂದ ಕರೆಯತೊಡಗಿದ್ದಳು). ಬೇರೆ ಬೇರೆ ದೊಡ್ಡ ಸಂದರ್ಶಕರು ಬಂದಾಗಲೆಲ್ಲ ಅವರನ್ನು ಮರಳುಮಾಡಿ ಒಳಗೆ ಬಂದುಬಿಡುವಳು. ಬ್ರಾಂಟಿ ಕೂಡ ಪಿಂಕಿಯನ್ನು ಗುರುತು ಹಿಡಿಯತೊಡಗಿತು!

ಪಿಂಕಿಯ ಮನೆ ಪ್ರಾಣಿ ಸಂಗ್ರಹಾಲಯದ ಪಕ್ಕಕ್ಕೆ ಇದ್ದದ್ದರಿಂದ ಹೆಚ್ಚೂಕಡಿಮೆ ಆಕೆ ಬ್ರಾಂಟಿಯೊಡನೆ ಹೊತ್ತು ಕಳೆಯತೊಡಗಿದಳು.

ಒಂದೇ ತಿಂಗಳಲ್ಲಿ ಬ್ರಾಂಟಿ ಬಹಳ ಬೆಳೆಯಿತು. ತಲೆಯಿಂದ ಬಾಲದವರೆಗೆ ಸುಮಾರು ಮೂರು ಮೀಟರ್ ಉದ್ದವಾಗಿತ್ತು. ಪ್ರಾಣಿ ಸಂಗ್ರಹಾಲಯದಲ್ಲಿ ಅದಕ್ಕಾಗಿ ಬೇರೆ ಮನೆಯನ್ನೇ ಮಾಡಿದರು. ಸಾರ್ವಜನಿಕರು ಒಳಗೆ ಬರಬಾರದೆಂದು ಹಳಿಗಳನ್ನು ಅಡ್ಡವಿಟ್ಟರು. ಅದಕ್ಕೆ ತಿನ್ನಲು ಎಳೆಯ ಬಿದಿರು ಮತ್ತು ಬಾಳೆಹಣ್ಣು ಕೊಡುತ್ತಿದ್ದರು. ಬ್ರಾಂಟಿಗೆ ತಿನ್ನಲು ಏನು ಇಷ್ಟ ಎಂದು ಅವರಿಗೇನು ಗೊತ್ತು?

ಒಮ್ಮೆ ಬ್ರಾಂಟಿ ತನ್ನ ಮುಂದಿಟ್ಟ ಆಹಾರವನ್ನು ಮುಟ್ಟಲೇ ಇಲ್ಲ! ವಿಶ್ರಾಂತಿಗಾಗಿ ಮಾಡಿದ ಕೊಳದಲ್ಲಿ ಸುಮ್ಮನೆ ಬಿದ್ದುಕೊಂಡಿತು. ಬಿದಿರು, ಬಾಳೆಹಣ್ಣು, ಹಾಗೇ ಉಳಿದವು. ನೀರನ್ನೂ ಮುಟ್ಟಲಿಲ್ಲ.

ಮೂರು ದಿನ ಹೀಗೇ ಉಪವಾಸದಲ್ಲಿ ಕಳೆದವು. ವಿಜ್ಞಾನಿಗಳಿಗೆ ಬಹಳ ಚಿಂತೆಯಾಯಿತು. ಎಲ್ಲ ರೀತಿ ಪ್ರಯೋಗ ಮಾಡಿದರು; ಪರೀಕ್ಷೆ ಮಾಡದರು ಪ್ರಯತ್ನ ಮಾಡಿದರು.

ಊಹುಂ! ಬ್ರಾಂಟಿ ಸತ್ಯಾಗ್ರಹಿಗಳಂತೆ ಉಪವಾಸವಿದ್ದು ಬಿಟ್ಟಿತು. ಹೀಗೆ ಬಿಟ್ಟರೆ ಅದು ಸತ್ತೇಹೋಗುವುದೆಂದು ಎಲ್ಲರಿಗೂ ಗೊತ್ತಾಯಿತು. ಏನು ಉಪಾಯ ಮಾಡಬೇಕು?

ಈ ಮರಿ ಸತ್ತರೆ ಇಡೀ ಜಗತ್ತಿನಲ್ಲಿ ಇಂಥ ಇನ್ನೊಂದು ಬ್ರಾಂಟಾಸಾರಸ್ ಇಲ್ಲವೇ ಇಲ್ಲ. ವಿಜ್ಞಾನಿಗಳಿಗೆ ಇದೊಂದು ದೊಡ್ಡ ಸವಾಲಾಯಿತು.

ಹೀಗೆ ಬ್ರಾಂಟಿ ಉಪವಾಸ ಪ್ರಾರಂಭಿಸಿದಾಗ ಪಿಂಕಿ ಅಜ್ಜಿಯ ಊರಿಗೆ ಹೋಗಿದ್ದಳು. ಹಾಗಾಗಿ ಆಕೆಗೆ ಈ ಸುದ್ದಿ ಗೊತ್ತೆ ಆಗಿರಲಿಲ್ಲ. ಆದರೆ ಬ್ರಾಂಟಿಯ ಈ ವಿಚಿತ್ರ ವರ್ತನೆಯ ಸುದ್ದಿ ಟೀವಿಯಲ್ಲಿ ಬಂದೊಡನೆ ಪಿಂಕಿ ಒಂದು ದಿನ ಕೂಡ ನಿಲ್ಲಲಿಲ್ಲ. ಹೇಗೋ ಅಜ್ಜಿಯನ್ನು ರಮಿಸಿ ತಿರುಗಿ ಬಂದಳು.

"ಡ್ಯಾಡೀ! ಎಷ್ಟು ಕೆಟ್ಟವರಿದ್ದೀರಿ, ಪಾಪ! ಬ್ರಾಂಟಿ ಸಾಯುತ್ತಿದೆ. ನನಗೆ ತಿಳಿಸೇ ಇಲ್ಲ..." ಎಂದು ತಂದೆಯವರೊಡನೆ ಜಗಳ ತೆಗೆದಳು.

ಆದರೆ ಮೂರು ದಿನಗಳಿಂದ ಬ್ರಾಂಟಿಯ ಬಗ್ಗೆ ವಿಜ್ಞಾನಿಗಳು ಮೀಟಿಂಗು ನಡೆಸಿ ತಲೆ ಕೆಡಿಸಿಕೊಂಡಿದ್ದರು. "ಹೋಗು, ಹೋಗು ಪಿಂಕಿ! ನಮ್ಮ ತಲೆನೋವು ನಿನಗೇನು ಗೊತ್ತು?" ಎಂದು ರೇಗಿ ಕಳಿಸಿದರು.

ಪಿಂಕಿ ಏನು ಉತ್ತರಿಸದಲೆ ನೆಟ್ಟಗೆ ಬ್ರಾಂಟಿಯ ಪೆವಿಲಿಯನ್ನಿಗೆ ಹೋದಳು. ಸಳಿ ಹತ್ತಿ ಒಳಗೆ ಹೋಗಿ ಬ್ರಾಂಟಿಯನ್ನು ರಮಿಸತೊಡಗಿದಳು.

"ಬ್ರಾಂಟಿ ಅವರೆಲ್ಲಾ ಬಹಳ ಕೆಟ್ಟವರಿದ್ದಾರೆ. ದಿನಾ ಬಾಳೆಹಣ್ಣು ಕೊಟ್ಟರೆ ನಾನೂ ನಿನ್ನಂತೇ ಉಪವಾಸ ಮಾಡುತ್ತಿದ್ದೆ. ತಗೋ ತಿನ್ನು" ಎಂದು ತಾನು ತಂದಿದ್ದ ಬ್ರೆಡ್ಡು, ಬನ್ನು ತಿನ್ನಿಸತೊಡಗಿದಳು.

ಅದ್ಭುತವೆಂದರೆ ಬ್ರಾಂಟಿ ತಿನ್ನತೊಡಗಿತು!

ಅದು ಪಿಂಕಿಯನ್ನು ಕಚ್ಚುವುದೇನೋ ಎಂದು ಹೆದರಿ ಬಂದ ತಂದೆ ಈ ದೃಶ್ಯ ನೋಡಿ ಕಂಗಾಲಾದರು! ಎಲ್ಲ ವಿಜ್ಞಾನಿಗಳಿಗೂ ಸಂತೋಷವಾಯಿತು.

ಪಿಂಕಿ ಬ್ರಾಂಟಿಗೆ ಆಹಾರ ಕೊಡುತ್ತಿದ್ದ ಸುದ್ದಿ ಚಿತ್ರ ಜಗತ್ತಿನ ತುಂಬ ಪ್ರಸಾರವಾದವು!

ಬ್ರಾಂಟಿಗೆ ಬರೀ ಬಾಳೆಹಣ್ಣು ಬಿದಿರಿನ ಕಳಲೆ ತಿಂದು ಬೇಸರವಾಗಿತ್ತೋ, ಅಥವಾ ಅದು ಪಿಂಕಿಯ ಮೇಲಿನ ಪ್ರೀತಿಗೆ ಬ್ರೆಡ್ಡು ತಿಂದಿತೋ, ಯಾರಿಗೂ ಗೊತ್ತಾಗಿಲ್ಲ.

ಈಗಂತೂ ಬ್ರಾಂಟಿ ಬಹಳ ಸಾಧು ಪ್ರಾಣಿಯಾಗಿದೆ. ಒಂದು ದೊಡ್ಡ ಮನೆಯಷ್ಟು ಬೆಳೆದಿದ್ದರೂ (ಆನೆಗಿಂತ ಎಷ್ಟೋ ಪಟ್ಟು ದೊಡ್ಡದು!) ಯಾರನ್ನೂ ಹೆದರಿಸುವುದಿಲ್ಲ. ಅದನ್ನು ಹತ್ತಿ ಅಡ್ಡಾಡಲು ಪಿಂಕಿ ಒಂದು ನಿಚ್ಚಣಿಕೆಯನ್ನೇ ಮಾಡಿದ್ದಾಳೆ.

ಆಕೆಯನ್ನು ಬೆನ್ನಮೇಲೆ ಕೂಡಿಸಿಕೊಂಡು ಅಡ್ಡಾಡುತ್ತ ಇಲ್ಲವೆ ಕೊಳದಲ್ಲಿ ಈಜುತ್ತ ಅದು ಮೋಜು ಮಾಡುತ್ತಿದೆ.

❖❖❖

ಪರಾಮರ್ಶನ ಗ್ರಂಥಗಳು

* ಅಂಗಡಿ ಎಸ್.ಎಸ್., ೨೦೦೭, 'ಚಂಪಾ ನಾಟಕಗಳ ಭಾಷೆ', ಸಂವಹನ ಪ್ರಕಾಶನ, ಮೈಸೂರು
* ಅಮೂರ ಜಿ.ಎಸ್., ೨೦೦೩, 'ಕನ್ನಡ ಕಥನ ಸಾಹಿತ್ಯ ಮತ್ತು ಸಣ್ಣಕತೆ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
* ಅರವಿಂದ ಮಾಲಗತ್ತಿ, ೨೦೦೬, 'ಕುವೆಂಪು ಕೃತಿ ವಿಮರ್ಶೆ', ಕುವೆಂಪು ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
* ಅಶೋಕಕುಮಾರ ರಂಜೇರೆ, ೧೯೯೯, 'ಮೂಕನಾಟಕ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಅಶೋಕಕುಮಾರ ರಂಜೇರೆ, ೨೦೦೨, 'ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು', ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.
* ಅಶೋಕಕುಮಾರ ರಂಜೇರೆ, ೨೦೦೫, 'ಭಾಷೆ ಮತ್ತು ಶಿಕ್ಷಣ', ನಿಧಿ ಪ್ರಕಾಶನ, ಹೊಸಪೇಟೆ.
* ಅಶೋಕ ಟಿ.ಸಿ., ೧೯೯೧, 'ಸಾಹಿತ್ಯ ಸಂದರ್ಭ', ಅಕ್ಷರ ಪ್ರಕಾಶನ, ಸಾಗರ
* ಆದ್ಯರಂಗಾಚಾರ್ಯ, ೧೯೮೬, 'ಭಾರತೀಯ ರಂಗಭೂಮಿ ಪರಂಪರೆ', ಸಹ್ಯಾದ್ರಿ ಪ್ರಕಾಶನ, ಮೈಸೂರು.
* ಆನಂದ ಪಾಟೀಲ್, ೧೯೯೪, 'ಮಕ್ಕಳ ಸಾಹಿತ್ಯದ ಇತ್ತೀಚಿನ ಒಲವುಗಳು', ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಆನಂದ ವಿ. ಪಾಟೀಲ್ ಹಾಗೂ ರವಿಕುಮಾರ ನ. (ಸಂ), ೨೦೦೧, 'ಮಕ್ಕಳ ಸಾಹಿತ್ಯ ಶತಮಾನ', ಅಭಿನವ ಪ್ರಕಾಶನ, ಬೆಂಗಳೂರು.

* ಆರ್ಯಾಂಬ ಪಟ್ಟಾಭಿ, ೨೦೦೪, 'ಮಹಿಳಾ ಸಾಹಿತ್ಯ ಸಮೀಕ್ಷೆ', ಶ್ರೀ ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್, ಮೈಸೂರು.

* ಇಂದಿರಾ ಶಿವಣ್ಣ, ೨೦೧೩, 'ಮಕ್ಕಳ ಸಾಹಿತ್ಯಕ್ಕೆ ಮಹಿಳಾ ಕೊಡುಗೆ' (ಮಂತಣಿ) ಕನ್ನಡ ಮಂತಣಿ ಪ್ರಕಾಶನ, ಮೈಸೂರು.

* ಈಶ್ವರ ಕಮ್ಮಾರ, ೧೯೯೦, 'ಮಕ್ಕಳ ಕವನ ಸಾಹಿತ್ಯ: ಮಕ್ಕಳ ಕವನ ನಡೆದು ಬಂದ ದಾರಿ', ಮಕ್ಕಳ ಮನೆ ಪ್ರಕಟಣೆ, ಧಾರವಾಡ.

* ಕಂಚ್ಯಾಣಿ ಶರಣಪ್ಪ, ೧೯೬೮, 'ಹೂವಿನ ಹಂದರ', ಶಂ.ಗು. ಬಿರಾದಾರ ಸನ್ಮಾನ ಸಮಿತಿ, ಬಿಜಾಪುರ.

* ಕರೀಗೌಡ ಬೀಚನಹಳ್ಳಿ, ೨೦೦೩, 'ಶತಮಾನಗಳ ಸಣ್ಣಕಥೆಗಳ ಸಮೀಕ್ಷೆ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ಕಾಡದೇವರ ಮಠ ಎಲ್.ಎಸ್., ೧೯೯೬, 'ಕನ್ನಡ ಭಾಷಾ ಅಧ್ಯಯನ', ವಿದ್ಯಾನಿಧಿ ಪ್ರಕಾಶನ, ಗದಗ.

* ಕಾರಂತ ಬಿ.ವಿ., ೨೦೦೬, 'ಪಂಜರದ ಶಾಲೆ', ಮಕ್ಕಳ ಸಾಹಿತ್ಯ ಮಾಲೆ, ನಾಟಕಗಳು (ಭಾಗ-೨) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

* ಕೀರ್ತಿನಾಥ ಕುರ್ತಕೋಟಿ, ೨೦೦೬, 'ಭಾಷೆ ಮತ್ತು ಸಂಸ್ಕೃತಿ', ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.

* ಕುಲಕರ್ಣಿ ಎಸ್.ಜಿ. (ಅನು), ೧೯೬೫, 'ರವೀಂದ್ರನಾಥ ಠಾಕೋರ್ ಬಾಲ ಸಾಹಿತ್ಯ' ಸಾಹಿತ್ಯ ಅಕಾಡೆಮಿ, ನವದೆಹಲಿ.

* ಕುವೆಂಪು, ೨೦೦೪, 'ಕುವೆಂಪು ಸಮಗ್ರ ನಾಟಕ' ಸಂ: ಕೆ.ಸಿ. ಶಿವಾರೆಡ್ಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಕುವೆಂಪು, ೨೦೦೭, 'ನನ್ನ ಗೋಪಾಲ' (ಮಕ್ಕಳ ನಾಟಕ), ಮಕ್ಕಳ ಸಾಹಿತ್ಯ ಮಾಲೆ ನಾಟಕ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

* ಕೃಷ್ಣಮೂರ್ತಿ ವೈ.ಎಸ್., ೧೯೯೫, 'ಭಾವೈಕ್ಯತಾ ಗೀತೆಗಳು', ಮಕ್ಕಳ ಕವನ ಸಂಕಲನ, ಪ್ರಕೃತಿ ಪ್ರಕಾಶನ, ವಿಜಯನಗರ, ಬೆಂಗಳೂರು.

* ಕೃಷ್ಣಯ್ಯ ಎಂ.ಎಚ್., ೧೯೯೨, 'ಕನ್ನಡ ಭಾಷೆ ಮತ್ತು ಸಾಹಿತ್ಯ', ವಿದ್ಯಾನಿಧಿ ಪ್ರಕಾಶನ, ಗದಗ.

* ಕೃಷ್ಣಯ್ಯ ಎಂ.ಎಚ್., ೧೯೯೩, 'ಕಾವ್ಯ ಭಾಷೆ', ಅಂಕಿತ ಪ್ರಕಾಶನ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
* ಕೆಂಪೇಗೌಡ ಕೆ., ೧೯೯೩, 'ಸಾಮಾನ್ಯರ ಭಾಷಾ ವಿಜ್ಞಾನ', ಭಾರತೀಯ ಪ್ರಕಾಶನ, ಮೈಸೂರು.
* ಗುರುರಾಜ ಬೆಣಕಲ್, ೨೦೦೮, 'ಹಾಡುಹಕ್ಕಿ, ಓಡಿ ಬಾರೆ' (ಮಕ್ಕಳ ಕವಿತೆಗಳು), ಸ್ವಪ್ನ ಬುಕ್‌ಹೌಸ್, ಗಾಂಧಿನಗರ, ಬೆಂಗಳೂರು.
* ಗುರುಲಿಂಗ ಕಾಪಸೆ (ಸಂ), ೨೦೦೨, 'ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಸಿಸು ಸಂಗಮೇಶ ಸ್ಮರಣೆ', ರಿಜಿಸ್ಟ್ರಾರ್, ಕರ್ನಾಟಕ ಅಕಾಡೆಮಿ, ಬೆಂಗಳೂರು.
* ಗೋಪಾಲಾಚಾರ್ಯ ಎಂ., ೧೯೯೮, 'ಸಂಸ್ಕೃತ ನಾಟಕಗಳ ತಂತ್ರ ಮತ್ತು ಪ್ರಯೋಗ', ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಗೋವಿಂದರಾಜ ಗಿರಡ್ಡಿ, ೧೯೮೯, 'ನಾಟಕ ಸಾಹಿತ್ಯ ಮತ್ತು ರಂಗಭೂಮಿ', ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
* ಚನ್ನಪ್ಪ ಎಸ್., ೧೯೯೪, 'ಹತ್ತು ಸಮೀಕ್ಷೆಗಳು' (ಮಕ್ಕಳ ಸಾಹಿತ್ಯದ ಸಮೀಕ್ಷಾ ಸಂಕಲನ), ಅರ್ಕಾವತಿ ಪ್ರಕಾಶನ, ಮೈಸೂರು.
* ಚನ್ನಪ್ಪ ಎಸ್., ೧೯೯೭, 'ಮಕ್ಕಳ ಸಾಹಿತ್ಯ ನಿರ್ಮಾಪಕರು', ಅರ್ಕಾವತಿ ಪ್ರಕಾಶನ, ಮೈಸೂರು.
* ಚನ್ನಪ್ಪ ಎಸ್., ೨೦೦೭, 'ಗಾಂಧೀಜಿ ಕಥೆಗಳು' (ಮಕ್ಕಳಿಗಾಗಿ), ಅರ್ಕಾವತಿ ಪ್ರಕಾಶನ, ಟಿ.ಕೆ. ಬಡಾವಣೆ, ಮೈಸೂರು.
* ಜವರೇಗೌಡ ದೇ., ೧೯೬೯, 'ಕನ್ನಡ ವಿಶ್ವಕೋಶ' (ಸಂಪುಟ-೧), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
* ಜವರೇಗೌಡ ದೇ., ೧೯೭೧, 'ಕನ್ನಡ ವಿಶ್ವಕೋಶ' (ಸಂಪುಟ-೨), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
* ಜೋಶಿ ಡಿ.ಕೆ., ೧೯೮೯, 'ದುರ್ಗಸಿಂಹನ ಪಂಚತಂತ್ರ ಕಥೆಗಳು', ಕೃಷ್ಣ ಜೋಶಿ ಪ್ರಕಾಶನಾಲಯ, ಧಾರವಾಡ.
* ನಾಗರಾಜಶೆಟ್ಟಿ ಟಿ.ಎಸ್., ೧೯೮೧, 'ಸಕ್ಕರೆ ಬೊಂಬೆ' (ಮಕ್ಕಳ ಕವನ ಸಂಕಲನ) ನಿರ್ಮಲ ಪ್ರಕಾಶನ, ತಿಪಟೂರು

* ನಾಗರಾಜಶೆಟ್ಟಿ ಟಿ.ಎಸ್., ೧೯೮೭, 'ಆಮೆ ಮತ್ತು ಹಂಸಗಳು' (ಮಕ್ಕಳ ಕವನ ಸಂಕಲನ), ನಿರ್ಮಲ ಪ್ರಕಾಶನ, ತಿಪಟೂರು.

* ನಾಗರಾಜಶೆಟ್ಟಿ ಟಿ.ಎಸ್., ೧೯೯೧, 'ಮಕ್ಕಳ ನೆಹರು', (ಮಕ್ಕಳ ಕವನ ಸಂಕಲನ), ನಿರ್ಮಲ ಪ್ರಕಾಶನ, ತಿಪಟೂರು.

* ನಾಗರಾಜಶೆಟ್ಟಿ ಟಿ.ಎಸ್., ೧೯೯೫, 'ಸ್ವಾತಂತ್ರ್ಯೋತ್ತರ ಮಕ್ಕಳ ನಾಟಕ', ನಿರ್ಮಲ ಪ್ರಕಾಶನ, ತಿಪಟೂರು.

* ನಾಗರಾಜಶೆಟ್ಟಿ ಟಿ.ಎಸ್., ೧೯೯೬, 'ಸಮಗ್ರ ಮಕ್ಕಳ ಕವಿತೆಗಳು', ನಿರ್ಮಲ ಪ್ರಕಾಶನ, ತಿಪಟೂರು.

* ನಾಗರಾಜಶೆಟ್ಟಿ ಟಿ.ಎಸ್., ೨೦೦೫, 'ಮಕ್ಕಳ ಸಾಹಿತ್ಯ: ಕೆಲವು ಅಧ್ಯಯನಗಳು', ನಿರ್ಮಲ ಪ್ರಕಾಶನ, ತಿಪಟೂರು.

* ನಾಗರಾಜಶೆಟ್ಟಿ ಟಿ.ಎಸ್. ಮತ್ತು ಗೋವಿಂದರಾಯ ಎಂ.ಸಿ., ೨೦೦೫, 'ಮಕ್ಕಳ ಸಾಹಿತ್ಯ ಅಂದು–ಇಂದು', ನಿರ್ಮಲ ಪ್ರಕಾಶನ, ತಿಪಟೂರು.

* ನಾರಾಯಣ ಕೆ.ವಿ., ೨೦೦೧, 'ಭಾಷೆಯ ಸುತ್ತ–ಮುತ್ತ', ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

* ನಾರಾಯಣ ಕೆ.ವಿ., ೨೦೦೯, 'ಭಾಷಾವಿಶ್ವಕೋಶ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

* ನಾಯಕ ಜಿ.ಎಚ್., ೨೦೦೯, 'ಶತಮಾನದ ಕನ್ನಡ ಸಾಹಿತ್ಯ' (ಭಾಗ–೨) ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ, ಉತ್ತರ ಕನ್ನಡ.

* ನಿರುಪಮಾ, ೧೯೮೮, 'ನಿಮ್ಮ ಮಕ್ಕಳಿಗೆಂತಹ ಸಾಹಿತ್ಯ ಬೇಕು?', ಆರತಿ ಪಬ್ಲಿಕೇಷನ್ಸ್, ಬೆಂಗಳೂರು.

* ನಿರುಪಮಾ, ೨೦೦೪, 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ನೀಲತ್ತಹಳ್ಳಿ ಕಸ್ತೂರಿ (ಸಂ), ೨೦೧೦, ಡಾ. ರಾಜರತ್ನಂ ಜಿ.ಪಿ., 'ಸಮಗ್ರ ಮಕ್ಕಳ ಸಾಹಿತ್ಯ' (ಸಂಪುಟ–೨, ಭಾಗ–೧), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ನೀಲತ್ತಹಳ್ಳಿ ಕಸ್ತೂರಿ (ಸಂ), ೨೦೧೩, ಡಾ. ರಾಜರತ್ನಂ ಜಿ.ಪಿ., 'ಸಮಗ್ರ ಮಕ್ಕಳ ಸಾಹಿತ್ಯ' (ಸಂಪುಟ–೨, ಭಾಗ–೨), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ನೀಲತ್ತಹಳ್ಳಿ ಕಸ್ತೂರಿ (ಸಂ), ೨೦೧೩, ಡಾ. ರಾಜರತ್ನಂ ಜಿ.ಪಿ., 'ಸಮಗ್ರ ಮಕ್ಕಳ ಸಾಹಿತ್ಯ' (ಸಂಪುಟ–೩, ಭಾಗ–೧ ದೇಶ ವಿದೇಶಿ ಕಥೆಗಳು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ಪಂಜೆ ಮಂಗೇಶರಾಯ, ೨೦೦೬, 'ಪಂಜೆ ಮಂಗೇಶರಾಯರ ಮಕ್ಕಳ ಸಾಹಿತ್ಯ' (ಸಮಗ್ರ ಮಕ್ಕಳ ಸಾಹಿತ್ಯ ಸಂಗ್ರಹ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

* ಪಳಕಳ ಸೀತಾರಾಮ ಭಟ್ಟ, ೧೯೯೭, 'ಪ್ರೀತಿಯ ಧರ್ಮ' (ಮಕ್ಕಳ ನಾಟಕ), ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದಕ್ಷಿಣ ಕನ್ನಡ.

* ಪುಟ್ಟಪ್ಪ ಕೆ.ವಿ., ೧೯೩೬, 'ಕಿಂದರಿ ಜೋಗಿ ಮತ್ತು ಇತರೆ ಕಥನ ಕವನಗಳು', ಕಾವ್ಯಾಲಯ ಪ್ರಕಾಶನ, ಶಿವಮೊಗ್ಗ.

* ಪ್ರಸನ್ನ, ೧೯೮೫, 'ನಾಟಕ ರಂಗಕೃತಿ', ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

* ಪೂಜಾರ ವ್ಹಿ.ಜಿ., ೧೯೯೫, 'ಕನ್ನಡ ಸಾಹಿತ್ಯ ಸಂಬಂಧ', ಚೇತನ ಪ್ರಕಾಶನ, ಗುಲಬರ್ಗಾ.

* ಪೂರ್ಣಿಮಾ ಟಿ.ಸಿ., ೧೯೯೪, 'ಆಲೋಚನೆ: ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಮಂಡನೆಯಾದ ಪ್ರಬಂಧಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

* ಬರಗೂರು ರಾಮಚಂದ್ರಪ್ಪ, ೧೯೯೨, 'ಸಮಕಾಲೀನ ಸಾಹಿತ್ಯ ಸಂಸ್ಕೃತಿ ಮತ್ತು ಅನುಪಮಾ ನಿರಂಜನರ ಸಾಹಿತ್ಯ' (ವಿಚಾರ ಸಂಕಿರಣದ ಲೇಖನಗಳ ಮಾಲೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ಬಸವರಾಜ ಕೋಡಗುಂಟಿ, ೨೦೦೭, 'ಮಕ್ಕಳ ಭಾಷಾವಿಜ್ಞಾನ ಮತ್ತು ಇತರ ಲೇಖನಗಳು', ಬಂಡಾರ ಪ್ರಕಾಶನ, ಮಸ್ಕಿ, ರಾಯಚೂರು.

* ಬಸವರಾಜ ಕೋಡಗುಂಟಿ (ಸಂ), ೨೦೧೦, 'ಭಾಷಾವಿಶ್ಲೇಷಣೆ' ಎಚ್.ಎಸ್. ಅನಂತನಾರಾಯಣರ ಭಾಷಾವಿಜ್ಞಾನ ಲೇಖನಗಳ ಸಂಗ್ರಹ, ಬಂಡಾರ ಪ್ರಕಾಶನ, ಮಸ್ಕಿ, ರಾಯಚೂರು.

* ಬಸವರಾಜ ಪೋಲೀಸ ಪಾಟೀಲ, ೨೦೦೩, 'ಭಾಷಾಸಂಗಮ', (ಡಾ. ಸಂಗಮೇಶ ಸವದತ್ತಿಮಠದ ಷಷ್ಟ್ಯಬ್ದಿ ಅಭಿನಂದನ ಸಂಪುಟ), ಸಂಗಮೇಶ ಸವದತ್ತಿಮಠ ಅಭಿನಂದನ ಸಮಿತಿ, ಪ್ರಕಾಶನ, ಗುಲಬರ್ಗಾ.

* ಬಸವರಾಜ ಸಾದರ (ಸಂ), ೨೦೦೨, 'ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು', ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

* ಬಸವರಾಜ ಡಬ್ಲ್ಯೂ., ೨೦೦೪, 'ಶಿಶು ಸಾಹಿತ್ಯ ಪರಂಪರೆ ಮತ್ತು ಕುವೆಂಪು', ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

* ಬಸು ಬೇವಿನಗಡ (ಸಂ), ೨೦೧೫, 'ಮಕ್ಕಳ ಸಾಹಿತ್ಯ', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

* ಬಿರಾದಾರ ಶಂ.ಗು., ೧೯೯೨, 'ಬೆಳ್ಳಿ ಬೆಳಕು', ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘ, ವಿಜಾಪುರ.

* ಬೆಳವಾಡಿ ಮಂಜುನಾಥ, ೨೦೧೦, 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ', ದಿ ಪ್ಯಾರಾ ಮೌಂಟ್ ಪ್ರಿಂಟರ್ಸ್, ಗಂಗಾವತಿ.

* ಬೇಂದ್ರೆ ಎನ್. ಮಂಜುನಾಥ, ೨೦೦೬, 'ಭಾಷಾಪ್ರಯೋಗ ಶಾಲೆ', ದಿಕ್ಸೂಚಿ ಡಿಜಿಟಲ್ ಮೀಡಿಯಾ ಪ್ರೈ ಲಿ. ರಾಜಾಜಿನಗರ, ಬೆಂಗಳೂರು.

* ಬೋಳುವಾರು ಮಹಮ್ಮದ್ ಕುಂಞ, ೧೯೯೧, 'ತಟ್ಟು ಚಪ್ಪಾಳೆ ಪುಟ್ಟಮಗು', ದಿವ್ಯ ಪ್ರಕಾಶನ, ಬೆಂಗಳೂರು.

* ಬೋಳುವಾರು ಪಿ.ಕೆ., ೨೦೦೧, 'ಭಾರತೀಯ ಸಂದರ್ಭದಲ್ಲಿ ಮಕ್ಕಳ ರಂಗಭೂಮಿ' ಮಕ್ಕಳ ನಾಟಕೋತ್ಸವ ಸಮಿತಿ, ಹೊನ್ನಾವರ.

* ಬೋಳಂತಕೋಡಿ ಈಶ್ವರ ಭಟ್ (ಸಂ), ೧೯೮೮, 'ಅನುಪಮಾ ಅಭಿನಂದ' (ಅಭಿನಂದನ ಗ್ರಂಥ), ರಾಜೇಶ್ ಪವರ್ ಪ್ರೆಸ್, ಪುತ್ತೂರು, ದಕ್ಷಿಣ ಕನ್ನಡ.

* ಬ್ರಹ್ಮಾಣಿ ಪಿ.ರಾವ್., ೨೦೦೧, 'ಪುಟ್ಟಪುಟ್ಟಿ ಮತ್ತು ಇತರೆ ಕಥೆಗಳು', ಬನಶಂಕರಿ, ಬೆಂಗಳೂರು.

* ಮರುಳುಸಿದ್ದಪ್ಪ ಕೆ., ೧೯೮೦, 'ಕುವೆಂಪು ನಾಟಕಗಳ ವಸ್ತುರೂಪ', ಕರ್ನಾಟಕ ಭಾರತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

* ಮರುಳಸಿದ್ದಪ್ಪ ಕೆ., ೧೯೮೩, 'ಆಧುನಿಕ ಕನ್ನಡ ನಾಟಕ', ಅಂಕಿತಾ ಪುಸ್ತಕ ಪ್ರಕಾಶನ, ಮೈಸೂರು.

* ಮಲಶೆಟ್ಟಿ ಬಸವರಾಜ, ೨೦೦೮, 'ಕರ್ನಾಟಕ ಜನಪದ ರಂಗಭೂಮಿ', ಸ್ನೇಹಾ ಪ್ರಿಂಟರ್ಸ್, ಬೆಂಗಳೂರು.

* ಮಹೇಶ್ವರಯ್ಯ ಎಚ್.ಎಂ., ೧೯೯೦, 'ಜಾನಪದ ಸಂವಹನ' ಸಹಿತಾ ಪ್ರಕಾಶನ, ಧಾರವಾಡ.

* ರಹಮತ್ ತರಿಕೇರಿ, ೨೦೧೧, 'ಕನ್ನಡ ಸಾಹಿತ್ಯ ವಾಗ್ವಾದಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ರಾಜೇಂದ್ರ ಡಿ.ಕೆ., ೧೯೮೫, 'ಕುವೆಂಪು ಸಾಹಿತ್ಯಾವಲೋಕನ', ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾಪರಿಷತ್, ಜಯಲಕ್ಷ್ಮೀಪುರಂ, ಮೈಸೂರು.

* ರಾಮಕೃಷ್ಣ ಆರ್, ೧೯೯೯, 'ಭಾಷಾ ವಿಜ್ಞಾನ ವಿಹಾರ', ತೇಜಸ್ವಿ ಪ್ರಕಾಶನ, ಮೈಸೂರು.

* ರಾಮಚಂದ್ರ ಎನ್, ತಿರುಮಲೇಶ್ವರ ಭಟ್ ಎನ್., ವಿಷ್ಣುಭಟ್ಟ ಪಾದೇಕಲ್ಲು, ೨೦೦೫, 'ಕಾಲಪುರುಷ' (ಕಾರಂತರ ಶತಮಾನ ಲೇಖನ ಸಂಕಲನ), ಕಾರಂತರ ಶತಮಾನೋತ್ಸವ ಸಮಿತಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

* ರಾಮಚಂದ್ರ ಸಿ.ಎನ್., ೧೯೯೯, 'ಕನ್ನಡ ಭಾಷಾಲೋಚನ', ಮಾಂಗಿರ ಪ್ರಕಾಶನ, ಮೈಸೂರು.

* ರಾಮರಾಯ ಪಂಜೆ (ಸಂ), ೧೯೭೩, 'ಪಂಜೆಯವರ ಕೃತಿಗಳ ಪದ್ಯಗಳು' (ಸಂಪುಟ–೧), ಓರಿಯಂಟ್ ಲಾಂಗ್‌ಮನ್ ಲಿಮಿಟೆಡ್.

* ರಾಮರಾಯ ಪಂಜೆ (ಸಂ), ೧೯೭೩, 'ಪಂಜೆಯವರ ಕೃತಿಗಳಲ್ಲಿ ಮಕ್ಕಳ ಕಥೆಗಳು', (ಸಂಪುಟ–೨), ಓರಿಯಂಟ್ ಲಾಂಗಮನ್ ಲಿಮಿಟೆಡ್.

* ರಾಮೇಶ್ವರ ಎಂ.ಕೆ., ೧೯೮೯, 'ಮಕ್ಕಳ ನಾಟಕ ನಡೆದು ಬಂದ ದಾರಿ' ಮಕ್ಕಳ ಸಾಹಿತ್ಯ ಚಿಂತನೆ, ಮಕ್ಕಳ ಮನೆ ಪ್ರಕಾಶನ, ಧಾರವಾಡ.

* ಲಕ್ಷ್ಮೀನಾರಾಯಣ ಭಟ್ ಎನ್.ಎಸ್., ಶಂಗು ಬಿರಾದಾರ ಮತ್ತು ನಾಗರಾಜಶೆಟ್ಟಿ ಟಿ.ಎಸ್., ೧೯೯೬, 'ಕನ್ನಡ ಸಾಹಿತ್ಯ: ಕಾಲು ಶತಮಾನ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ಲಕ್ಷ್ಮೀನಾರಾಯಣ ಭಟ್ ಎನ್.ಎಸ್., ೨೦೦೪, 'ಸಮಗ್ರ ಮಕ್ಕಳ ಕಾವ್ಯ', (ಸಂಪುಟ-೨), ಕ್ಷಮಾ ಪ್ರಕಾಶನ, ಬನಶಂಕರಿ, ಬೆಂಗಳೂರು.

* ಲಕ್ಷ್ಮೀನಾರಾಯಣ ಭಟ್ ಎನ್.ಎಸ್., ೨೦೦೫, 'ಮಕ್ಕಳ ಹಾಡುಗಳು', ಚಾಮರಾಜಪೇಟೆ, ಬೆಂಗಳೂರು.

* ಲಕ್ಷ್ಮೀನಾರಾಯಣ ಭಟ್ ಎನ್.ಎಸ್., ೨೦೦೫, 'ಮಕ್ಕಳ ಕಥೆಗಳು', ಲಕ್ಷ್ಮೀಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು.

* ಲೋಕೇಶ್, ೨೦೦೬, 'ಮಕ್ಕಳ ನೀತಿ ಕಥೆಗಳು', ಕೃಷಿ ವಿಕಾಶ ಪ್ರಕಾಶನ, ಬೆಂಗಳೂರು.

* ವರದರಾಜ ಹುಯಿಲಗೋಳ, ೧೯೮೯, 'ಮನೆಯ ದೀಪ' (ಮಕ್ಕಳ ಕಥಾಸಂಕಲನ), ಮಕ್ಕಳ ಮನೆ ಪ್ರಕಾಶನ, ಧಾರವಾಡ.

* ವಿಠಲರಾವ್ ಗಾಯಕ್ವಾಡ್, ೨೦೦೩, 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ', ಚೇತನ ಬುಕ್ ಹೌಸ್, ಮೈಸೂರು.

* ವಿವಿಧ ಲೇಖಕರು, ೧೯೯೩, 'ಆಧುನಿಕ ಕನ್ನಡ ಸಾಹಿತ್ಯ ರೂಪಗಳು', ಕರ್ನಾಟಕ ಭಾರತಿ ಬೆಳ್ಳಿ ಹಬ್ಬ ಸಂಪುಟ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

* ವೃಷಭೇಂದ್ರಸ್ವಾಮಿ, ೧೯೮೫, 'ಮಿಡಿಮಾವು' (ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ), ಮಕ್ಕಳ ಮನೆ ಪ್ರಕಾಶನ, ಧಾರವಾಡ.

* ವೆಂಕಟೇಶಮೂರ್ತಿ ಎಚ್.ಎಸ್., ೨೦೦೧, 'ಶತಮಾನದ ಕಾವ್ಯ', ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

* ವೆಂಕಟೇಶಮೂರ್ತಿ ಎಚ್.ಎಸ್., ೨೦೦೯, 'ಎಚ್ಚೆಸ್ವಿ ಸಮಗ್ರ ಮಕ್ಕಳ ನಾಟಕ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು.

* ವೆಂಕಟೇಶಮೂರ್ತಿ ಎಚ್.ಎಸ್., ೨೦೧೩, 'ಎಚ್ಚೆಸ್ವಿ ಸಮಗ್ರ ಮಕ್ಕಳ ಸಾಹಿತ್ಯ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು.

* ವೈಕುಂಠರಾಜು ಬಿ.ವಿ., ೧೯೯೭, 'ಕನ್ನಡ ರಂಗಭೂಮಿ', ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ವೈದೇಹಿ, ೧೯೯೨, 'ಐದು ಮಕ್ಕಳ ನಾಟಕಗಳು', ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

* ವೈದೇಹಿ, ೧೯೯೭, ‘ಮೂರು ಮಕ್ಕಳ ನಾಟಕಗಳು’, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
* ವೈದೇಹಿ, ೨೦೦೨, ‘ಎರಡು ಮಕ್ಕಳ ನಾಟಕಗಳು’, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
* ಶಾಂತಿನಾಥ ದೇಸಾಯಿ, ೧೯೭೨, ‘ಕನ್ನಡ ನಾಟಕ ಪರಂಪರೆ ಪ್ರಯೋಗ’, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ಶಾಂತಿನಾಥ ದೇಸಾಯಿ, ೧೯೮೦, ‘ಸಾಹಿತ್ಯ ಮತ್ತು ಭಾಷೆ’, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ಶಾನಭೋಗ ಆರ್.ಕೆ., ೨೦೧೧, ‘ಮಕ್ಕಳ ಸಾಹಿತ್ಯ’, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
* ಶಿವರುದ್ರಪ್ಪ ಜಿ.ಎಸ್., ೧೯೭೨, ‘ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ’, ಬೆಂಗಳೂರು.
* ಶಿವರುದ್ರಪ್ಪ ಜಿ.ಎಸ್., ೧೯೮೧, ‘ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು’, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
* ಶಿವರುದ್ರಪ್ಪ ಜಿ.ಎಸ್., ೧೯೮೨, ‘ದಶವಾರ್ಷಿಕ ಸಾಹಿತ್ಯ ಸಮೀಕ್ಷೆ’, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* ಶಿವಲಿಂಗಪ್ಪ ಕೆ. ಹಂದಿಹಾಳು, ೨೦೧೨, ‘ಮಕ್ಕಳ ಸಾಹಿತ್ಯ’ (ಸಂಯುಕ್ತ ಸಂಚಿಕೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
* ಶಿವಾನಂದ ಬೆನಕಲ್, ೨೦೦೫, ‘ಸಾಹಿತ್ಯ ಸಮೀಕ್ಷೆ’, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
* ಶಿವಾರೆಡ್ಡಿ ಕೆ.ಸಿ., ೨೦೦೪, ‘ಕುವೆಂಪು ಸಮಗ್ರ ನಾಟಕ’, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಶೇಖರಪೂಜಾರ, ೧೯೮೯, ‘ಮಕ್ಕಳ ಸಾಹಿತ್ಯ: ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆ, ಮಕ್ಕಳ ಸಾಹಿತ್ಯ ಚಿಂತನೆ’, ಮಕ್ಕಳ ಮನೆ ಪ್ರಕಾಶನ, ಧಾರವಾಡ.
* ಶೇಷಗಿರಿರಾವ್ ಎಲ್.ಎಸ್., ೧೯೯೩, ‘ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ’, ಉದಯ ಭಾನು ಕಲಾಸಂಘ, ಬೆಂಗಳೂರು.

* ಶ್ರೀಧರ್ ಎಸ್.ಎನ್., ೧೯೯೫, 'ಇಂದಿನ ಕನ್ನಡ: ರಚನೆ ಮತ್ತು ಬಳಕೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಶ್ರೀನಿವಾಸರಾಜು ಚಿ., ೨೦೦೦, 'ನಮ್ಮ ಕೈಲಾಸಂ' (ನೆನಪಿನ ಸಂಪುಟ), ಪ್ರಿಸಮ್ ಬುಕ್ ಪ್ರೈ.ಲಿ., ಬೆಂಗಳೂರು.
* ಶ್ರೀನಿವಾಸರಾವ್ ಎಸ್.ವಿ., ೨೦೦೬, 'ಮಕ್ಕಳ ಸಾಹಿತ್ಯದ ನೆಲೆಬೆಲೆ', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
* ಸಂಗಮೇಶ ಸವದತ್ತಿಮಠ, ೧೯೯೨, 'ಕನ್ನಡ ನಾಟಕಗಳಲ್ಲಿ ಭಾಷೆ', ಶ್ರೀನಿವಾಸ್ ಪ್ರಕಾಶನ, ಗದಗ.
* ಸಂಗಮೇಶ ಸವದತ್ತಿಮಠ, ೧೯೯೯, 'ಭಾಷಾಲೋಕ', ರೂಪದರ್ಶಿ ಪ್ರಕಾಶನ, ಕಲಬುರ್ಗಿ.
* ಸಂಗಮೇಶ ಸವದತ್ತಿಮಠ, ೧೯೯೯, 'ಮಕ್ಕಳ ಭಾಷೆ', ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
* ಸಬಿಹಾ ಭೂಮಿಗೌಡ, ೨೦೦೯, 'ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ', ಡಾ.ಕೆ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
* ಸಾಂಬಮೂರ್ತಿ, ೨೦೧೨, 'ನುಡಿನಡೆ', ಪಲ್ಲವಿ ಪ್ರಕಾಶನ, ಚೆನ್ನಪಟ್ಟಣ.
* ಸಿದ್ದಣ್ಣ ಬಿ. ಉತ್ನಾಳ್, ೨೦೦೩, 'ಸಿಸು ಸಂಗಮೇಶ ಆಯ್ದ ಮಕ್ಕಳ ಸಾಹಿತ್ಯ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
* ಸಿಸು ಸಂಗಮೇಶ, ೧೯೮೫, 'ಮಕ್ಕಳ ಸಾಹಿತ್ಯ (ಕಲಬುರ್ಗಿಯ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನ ಸಂಪುಟ), ಮಕ್ಕಳ ಸಾಹಿತ್ಯ ಅಕಾಡೆಮಿ, ಬೆಂಗಳೂರು.
* ಸಿಸು ಸಂಗಮೇಶ, ೧೯೯೨, 'ಹೇಗಿದ್ದರು, ಹೇಗಾದರು?' (ಮಕ್ಕಳ ಕಥಾ ಸಂಕಲನ), ಭಾರತ ಸರಕಾರ ಪ್ರಕಟಣೆ, ನವದೆಹಲಿ.
* ಸಿಸು ಸಂಗಮೇಶ, ೧೯೯೫, 'ಆಯ್ದ ಮಕ್ಕಳ ಕಥೆಗಳು', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
* ಸಿಸು ಸಂಗಮೇಶ,, ೧೯೯೬, 'ಮಕ್ಕಳ ಸಾಹಿತ್ಯ ನಾನು ಕಂಡಂತೆ', ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ, ಬಾಲಭಾರತಿ ಸಾಹಿತ್ಯ ಪ್ರಕಾಶನ, ಬಿಜಾಪುರ.
* ಸುಧಾಮೂರ್ತಿ, ೨೦೦೬, 'ನನ್ನ ನೆಚ್ಚಿನ ಕಥೆಗಳು' (ಮಕ್ಕಳಿಗಾಗಿ), ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

* ಹಳ್ಳಿಕೇರಿ ಎಫ್.ಟಿ. ಮತ್ತು ರವೀಂದ್ರನಾಥ ಕೆ., ೧೯೯೮, 'ದಶಕದ ಕನ್ನಡ ಸಾಹಿತ್ಯ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಹಿರೇಮಠ ಎಚ್.ಎಂ., ೧೯೯೬, 'ಕನ್ನಡ ನಾಟಕಗಳ ಭಾಷೆ', ವಿದ್ಯಾನಿಧಿ ಪ್ರಕಾಶನ, ಗದಗ.

ಎಂ.ಫಿಲ್. ಸಂಪ್ರಬಂಧಗಳು

೧. ಅಜಪ್ಪ ಬಾಬು, ೨೦೧೦, 'ಬೆಳ್ಳಕಾದಂಬರಿ: ಭಾಷಿಕ ಅಧ್ಯಯನ', ಮಾರ್ಗದರ್ಶಕರು: ಡಾ. ಅಶೋಕಕುಮಾರ ರಂಜೇರೆ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨ ಗುರುರಾಜ ಜಿ. ಮೇಡಿದಾರ, ೨೦೦೯, 'ಕಂಚ್ಯಾಣಿಯವರ ಶಿಶು ಕಾವ್ಯ', ಮಾರ್ಗದರ್ಶಕರು: ಡಾ. ವಿವೇಕಾನಂದ ಸಾಲಿಮಠ, ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ನಾಗರಾಜ, ೨೦೧೩, 'ಯಾದಗಿರಿ ಜಿಲ್ಲೆಯ ಶಿಶು ಭಾಷಾ ರೂಪಗಳು', ಮಾರ್ಗದರ್ಶಕರು: ಡಾ. ಸಾಂಬಮೂರ್ತಿ, ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಬಸವರಾಜ ಕೋಡಗುಂಟಿ, ೨೦೦೩, 'ಮಕ್ಕಳ ಭಾಷೆ ಒಂದು ಅಧ್ಯಯನ', ಮಾರ್ಗದರ್ಶಕರು: ಡಾ. ಸಂಗಮೇಶ ಸವದತ್ತಿಮಠ, ಎಂ.ಫಿಲ್. ಸಂಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೫. ಸಂಗೀತಾ ಪಿ., ೨೦೦೭, 'ಕುವೆಂಪು ಮಕ್ಕಳ ಕೃತಿಗಳಲ್ಲಿ ಮಾನವೀಯ ಮೌಲ್ಯಗಳ ಶೋಧ', ಮಾರ್ಗದರ್ಶಕರು: ಡಾ. ಶಿವಾರೆಡ್ಡಿ ಕೆ.ಸಿ., ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಸತೀಶ್ ಜೆ.ಸಿ., ೨೦೧೨, 'ಕುವೆಂಪು ಕಾದಂಬರಿಗಳಲ್ಲಿ ಬಾಲಪ್ರಪಂಚ' ಮಾರ್ಗದರ್ಶಕರು: ಡಾ. ಚಂದ್ರಣ್ಣಗೌಡ, ಎಂ.ಫಿಲ್. ಸಂಪ್ರಬಂಧ, ಕಾವ್ಯಮಂಡಲ, ಬೆಂಗಳೂರು.

೭. ಸೌಮ್ಯ ಸಿ.ಆರ್., ೨೦೦೮, 'ಭಾಷೆ: ಸ್ವರೂಪ–ವ್ಯಾಪ್ತಿ', ಎಂ.ಫಿಲ್. ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧಗಳು

೧. ಗಜಾನನ ಶರ್ಮಾ, ೨೦೦೨, 'ಕನ್ನಡ ಮಕ್ಕಳ ನಾಟಕ ಮತ್ತು ರಂಗಭೂಮಿ', ಮಾರ್ಗದರ್ಶಕರು: ಗುರುರಾವ್ ಬಾಪಟ್, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಗಿರಿಜಮ್ಮ ಎಚ್. ೨೦೦೩, 'ಮಕ್ಕಳ ಮಾನಸ ಲೋಕ: ಒಂದು ಅಧ್ಯಯನ', ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಜಯಲಲಿತಾ, 'ಮಕ್ಕಳ ಜನಪದ ಕತೆಗಳಲ್ಲಿ ಕ್ರಿಯೆ, ಮತ್ತು ಸ್ವರೂಪ', ಮಾರ್ಗದರ್ಶಕರು: ಡಾ. ಕಾರ್ಲೋಸ್, ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪. ದೇವಕಿ ಎಲ್., ೧೯೯೧, 'ಡೆವಲಪ್‌ಮೆಂಟ್ ಆಫ್ ಮಾರ್ಫೋಲಜಿಕಲ್ ರೂಲ್ಸ್ ಇನ್ ಚಿಲ್ಡ್ರನ್', ಮಾರ್ಗದರ್ಶಕರು: ಡಾ. ಶ್ರೀವತ್ಸವ ಎ.ಕೆ. ಭಾರತೀಯ ಭಾಷಾ ಸಂಸ್ಥಾನ, ಮಾನಸ ಗಂಗೋತ್ರಿ, ಮೈಸೂರು.

೫. ನಿಂಗಪ್ಪ ಗು. ಸೊಲಗಿ, ೨೦೧೧, 'ಮಕ್ಕಳ ರಂಗಭೂಮಿ: ಒಂದು ಅಧ್ಯಯನ', ಮಾರ್ಗದರ್ಶಕರು: ಡಾ. ಅರ್ಜುನ್ ಗೊಳಸಂಗಿ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಮೂರ್ತಿ ಎಂ.ಎಸ್., 'ಮಕ್ಕಳ ಮನಸ್ಸಿನ ಚಿತ್ರಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಲಾವಣ್ಯ ಸಿ.ಪಿ., ೨೦೧೫, 'ಕೊಡಗಿನ ಗೌಡ ಕನ್ನಡದ ಭಾಷೆ', ಮಾರ್ಗದರ್ಶಕರು: ಡಾ. ಸಾಂಬಮೂರ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ವರದಾ ಪಿ.ಎನ್., ೧೯೯೭, 'ಪಂಜೆ ಮಂಗೇಶರಾಯರ ಕೃತಿಗಳು: ಒಂದು ಅಧ್ಯಯನ', ಮಾರ್ಗದರ್ಶಕರು: ಹಂಪಾ ನಾಗರಾಜಯ್ಯಾ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೯. ವಿಠಲರಾವ್ ಗಾಯಕ್ವಾಡ್, ೧೯೯೫, 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ', ಪಿಎಚ್.ಡಿ. ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

೧೦. ಶಶಿಧರ ನರೇಂದ್ರ, ೨೦೧೧, 'ಕನ್ನಡ ನಾಟಕಗಳ ಭಾಷೆ', ಮಾರ್ಗದರ್ಶಕರು: ಡಾ. ಸಾಂಬಮೂರ್ತಿ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಿಯತಕಾಲಿಕೆಗಳು

೧. ತುಷಾರ ಮಾಸಪತ್ರಿಕೆ, ನವೆಂಬರ್ ೨೦೧೧

೨. ಪ್ರಜಾವಾಣಿ ದಿನಪತ್ರಿಕೆ

೩. ನಮ್ಮ ಕನ್ನಡ ಪತ್ರಿಕೆ

೪. ಗುಬ್ಬಚ್ಚಿ ಗೂಡು

೫. ಸಂಧ್ಯಾ ಮಕ್ಕಳ ಸಾಹಿತ್ಯ ಪತ್ರಿಕೆ, ೧೯೯೭

❖❖❖